

ಒಡೆದ ಕನ್ನಡಿ



ಡಾ. ಕೇಶವ ಶರ್ಮ. ಕೆ.

ಒಡೆದ ಕನ್ನಡಿ

ಕಾದಂಬರಿ

ಡಾ. ಕೇಶವಶರ್ಮ ಕೆ.

ಪ್ರಾಧ್ಯಾಪಕರು

ಕನ್ನಡ ಭಾರತಿ

ಕುವೆಂಪು ವಿಶ್ವವಿದ್ಯಾನಿಲಯ

ಪ್ರಕಾಶಕರು

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ

ಶಿವಮೊಗ್ಗ - 577 201

ODEDA KANNADI
A novel written by
Dr. Keshavasharma K.

Published by
GEETHANJALI PUSTAKA PRAKASHANA
Revenue Building, 100ft Road
Rajendra Nagar
Shimoga - 577201,
Karnataka.
Mobile: 9449886390 / 9916197291
Email: gbtmohan@yahoo.in

ISBN: 978-93-81876-13-8

First Impression: 2011

Pages: iv + 276 = 280

Price : Rs. 190/-

Paper Used: 70 GSM. Maplitho

Size: Demy 1/8

ಮೊದಲನೆಯ ಮುದ್ರಣ: 2011

ಪುಟಗಳು: iv + 276 = 280

ಬೆಲೆ: ರೂ. ೧೯೦/-

ಮುಖಪುಟ ವಿನ್ಯಾಸ: ಪ.ಸ. ಕುಮಾರ್

ಪುಟ ವಿನ್ಯಾಸ: ಶ್ರೀಧರ್

ಪ್ರಕಾಶಕರು
ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ
ರಾಜೇಂದ್ರ ನಗರ
ಶಿವಮೊಗ್ಗ - 577 201
ದೂರವಾಣಿ: 9449886390

ಮುದ್ರಣ
ಶ್ರೀ ವಿದ್ಯಮಾನ್ ಪ್ರಿಂಟೆಕ್ಸ್
ಬೆಂಗಳೂರು

ಲೇಖಕರ ಮಾತು

ಈ ಕಾದಂಬರಿಯನ್ನು ಬರೆದಿದ್ದು ತುಂಬಾ ಆಕಸ್ಮಿಕವಾಗಿ. ಇದರ ಒಂದೆರಡು ಅಧ್ಯಾಯಗಳು 'ಆಕೃತಿ' ವಾರ ಪತ್ರಿಕೆಯಲ್ಲಿ ಪ್ರಕಟವಾಯಿತು. ಅನಂತರ ಪತ್ರಿಕೆ ನಿಂತು ಹೋಯಿತು– ನನ್ನ ಕಾದಂಬರಿಯೂ ಕೂಡಾ. ಡಾ.ವೆಂಕಟರಾಯ ಭಂಡಾರಿಯವರು ಮತ್ತೆ ಕಾದಂಬರಿಯನ್ನು ಮುಂದುವರಿಸುವಂತೆ ಹೇಳಿದರು. ಅವರ ಸಲಹೆ ಇಲ್ಲವಾಗಿದ್ದಲ್ಲಿ ಇದು ಮುಂದುವರಿಯುತ್ತಿರಲಿಲ್ಲ. ಆದರೆ ಪರ್ರನೆ ಹಾರಿ ಬರುವ ಹಕ್ಕಿಗಳಂತೆ ಇಲ್ಲಿಯ ಪಾತ್ರಗಳು; ಇಲ್ಲಿಯ ಅನುಭವಗಳು ಬಂದು ಅಕ್ಷರಗಳ ಹೆಗಲ ಮೇಲೆ ಕುಳಿತಿಲ್ಲ. ಪ್ರತಿಯೊಂದು ಘಟನೆಗಳು; ಅನುಭವಗಳು ಸರಪಳಿಯಂತೆ ಒಂದಕ್ಕೊಂದು ಬಿಗಿಯುತ್ತಾ ಹೋದವು. ಕೆಲವು ಅನುಭವಗಳು ಮಾತ್ರ ಕಲ್ಪನೆಯ ಕುದುರೆಯನ್ನು ಏರಿದವು.

ಈ ಕಾದಂಬರಿ ಬರೆದು ಹೆಚ್ಚು ಕಡಿಮೆ ೧೦ ವರ್ಷಗಳು ಸಂದವು. ಪ್ರಕಟಿಸಲು ಹಿಂಜರಿಕೆಯಾಗಿ ಸುಮ್ಮನುಳಿದೆ.

ತುಂಬಾ ಮಾಹಿತಿಗಳನ್ನು ಕೊಟ್ಟ ಡಾ. ಭಂಡಾರಿಯವರಿಗೆ;

ಪ್ರಕಟಿಸುತ್ತಿರುವ ಮೋಹನ ಕುಮಾರ್, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ ಇವರಿಗೆ–

ಮುಖಚಿತ್ರ ಬರೆದುಕೊಟ್ಟ ಪ.ಸ. ಕುಮಾರ ಅವರಿಗೆ–

ಬೆರಳಚ್ಚು ಮಾಡಿಕೊಟ್ಟ ಎಸ್.ಜಿ.ಎಸ್. ಶಂಕರಘಟ್ಟದ ಸುಧಾ, ದಿನೇಶ್ ಹಾಗೂ ಸುಮ.ಎಸ್, ಮೇರಿ, ರಾಮು ಅವರಿಗೆ–

ತಿದ್ದುಪಡಿ ಮಾಡಿದ ರಮೇಶ್ ಆಚಾರ್, ರವಿ ತಳವಾರ್, ಕಾವ್ಯಶ್ರೀ ಇವರಿಗೆ–

ಸಂಗಾತಿ ಸಬಿತಾ, ಮಗಳು ನಿಯತಿ–

ಪ್ರೀತಿಯಿಂದ ಓದುವ ನಿಮಗೆ–

ವಂದನೆಗಳನ್ನು ಹೇಳುವುದು ಕೇವಲ ಬಾಯಿ ಮಾತಿನ ಉಪಚಾರವಲ್ಲ. ಬರಹಗಳ ಹಿಂದಿರುವವರು; ಬರಹಗಳನ್ನು ಮುಂದಿರುವವರು ಯಾವಾಗಲೂ ದೊಡ್ಡವರು.

ಡಾ. ಕೇಶವ ಶರ್ಮ ಕೆ.

ಪ್ರಕಾಶಕರ ನುಡಿ

ನಾಡಿನ ಹೆಸರಾಂತ ಪ್ರಾಧ್ಯಾಪಕರಾದ ಡಾ. ಕೇಶವ ಶರ್ಮ ಅವರ 'ಒಡೆದ ಕನ್ನಡಿ' ಕಾದಂಬರಿಯನ್ನು ಕನ್ನಡಿಗರಿಗೆ ಅರ್ಪಿಸುತ್ತಿರುವುದು ನಮಗೆ ಸಂತೋಷವನ್ನು ತಂದಿದೆ. ಹೆಸರಾಂತ ಲೇಖಕರಾದ ಕೇಶವ ಶರ್ಮ ಅವರಿಗೆ ಅಪಾರ ಅಭಿಮಾನಿ ಓದುಗ ಬಳಗವಿದ್ದು, ಇದನ್ನು ಉತ್ಸಾಹದಿಂದ ಸ್ವಾಗತಿಸುವರೆಂಬ ನಂಬಿಕೆ ನಮಗಿದೆ. ಇಂಥದೊಂದು ಅವಕಾಶ ಕಲ್ಪಿಸಿದ್ದಕ್ಕಾಗಿ ನಾವು ಲೇಖಕರಿಗೆ ಕೃತಜ್ಞರಾಗಿದ್ದೇವೆ.

ನಾಡಿನ ಪ್ರಬುದ್ಧ ಓದುಗರ ಬದ್ಧ ಸೇವೆಗೆ ಅತ್ಯಂತ ಹಂಬಲದಿಂದ ಸ್ಪಂದಿಸುತ್ತಿರುವ ನಮ್ಮ ಪ್ರಕಾಶನ ನಾಡಿಗೆ ಉತ್ತಮವಾದ ಸಾಹಿತ್ಯ ಕೃತಿಗಳನ್ನು ಸಮರ್ಪಿಸುವ ನಿಟ್ಟಿನಲ್ಲಿ ಅಳಿಲುಸೇವೆ ಸಲ್ಲಿಸುತ್ತಿದೆ. ಈ ಸೇವೆಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿರುವ ಸಮಸ್ತ ಓದುಗ ಬಂಧುಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಜಿಬಿಟಿ ಮೋಹನ
ಗೀತಾಂಜಲಿ ಪುಸ್ತಕ ಪ್ರಕಾಶನ

ಕೆನ್ನೆಯ ಮೇಲೆ ಸಣ್ಣ ಕೆಂಪು

– ೧ –

"ಇದು ಯಾಕೆ ಅಂತ ಖಂಡಿತಾ ಕೇಳಬೇಡ. ನನ್ನ ಜೀವನದಲ್ಲಿ ಸಾಧ್ಯವಾಗುವುದು ಇಷ್ಟು. ನಿನಗೆ ಹತ್ತು ಹಲವು ಕನಸುಗಳಿದ್ದರೆ ಯಾವತ್ತೂ ಅದನ್ನು ಪೂರೈಸಲು ಬೇಕಾದಷ್ಟು ಸಿರಿವಂತಿಕೆ ನನ್ನಲ್ಲಿಲ್ಲ. ತುತ್ತುಗಂಜಿಯನ್ನೇ ಹಾಕಿಕೊಂಡು ಒಂದೇ ತಟ್ಟೆಯಲ್ಲಿ ಊಟ ಮಾಡಬಹುದು. ಉರಿಬೇಸಿಗೆಯಲ್ಲಿ ಅದು ನಮ್ಮ ಹೊಟ್ಟೆಯನ್ನು ತಂಪಾಗಿಸುತ್ತದೆ. ಈ ಪತ್ರದಲ್ಲಿ ನನ್ನ ಭಾವನೆಗಳನ್ನು ರವಾನೆ ಮಾಡುತ್ತಿದ್ದೇನೆ" ಎಂದು ಮೊದಲು ಪ್ರೇಮ ಪ್ರಸ್ತಾವನೆಯಿಟ್ಟ ದಿನ ಮೈಥಿಲಿಯನ್ನು ಕರೆದುಕೊಂಡು ಮೇ ಫ್ಲವರಿನ ಗಿಡದ ಕೆಳಗೆ ಸಂಜೆ ಆರು ಗಂಟೆಯ ಹೊತ್ತಿಗೆ ಶನಿವಾರ ಹೇಳಿದ್ದ. ಆಗ ಬೇರಾವುದೋ ಜಗತ್ತಿನಲ್ಲಿ ಮೈಥಿಲಿಯಿದ್ದಳು. ಚಾರುವೆಂದರೆ ಅವಳಿಗೆ ಕನಸಿನ ಹುಡುಗನಂತಿದ್ದ. ತಕ್ಷಣವೇ ಯಾಕೋ ಏನೋ–ಯಾರಾದರೂ ಇದ್ದಾರೋ ಇಲ್ಲವೋ ಎಂಬುದನ್ನು ಅತ್ತಿತ್ತ ನೋಡಿಕೊಂಡು ತಕ್ಷಣವೇ ಅವನ ಗಲ್ಲಕ್ಕೆ ಮುತ್ತನ್ನು ಕೊಟ್ಟಳು. ಅದು ಹಗಲೂ ಅಲ್ಲ–ರಾತ್ರಿಯೂ ಅಲ್ಲ. ಬೆಳಕೂ ಅಲ್ಲ–ಕತ್ತಲೆಯೂ

ಅಲ್ಲ. ಚಾರು ಸಣ್ಣ ಕಿರುನಗೆಯನ್ನು ಬೀರಿದ ಅಷ್ಟೆ! ಯಾವಾಗಲೋ ಬರುವ ಸಣ್ಣ ಮಳೆಯಂತೆ ನಗುವೆಂದರೆ ಅಪರಿಚಿತವಾದ ಒಂದು ಸಂಗತಿಯೆಂದು ಭಾವಿಸಿದ್ದ. ಪ್ರೇಮವೆಂದರೂ ಅಷ್ಟೆ: ಅದೊಂದು ಅಸಾಧ್ಯವಾದ ಜೀವನವೆಂತಲೇ ಆತ ಭಾವಿಸಿದ್ದ. ಆದರೆ ಮೈಥಿಲಿಯನ್ನು ನೋಡಿ ಒಂದೆರಡು ದಿನ ಮಾತಾಡಿದ ಮೇಲೆ ಇದ್ಯಾವುದೂ ಅವನ ಹತ್ತಿರವಾಗಲೇ ಇಲ್ಲ. ಪ್ರೇಮ ನಿವೇದನೆಗೆ ಅವಳು ಸ್ಪಂದಿಸಿದ್ದಳು.

ಸರಳ ಮದುವೆಯ ದಿನ ರಾತ್ರಿಯೂ ಚಾರು ಹೇಳಿದ 'ನನಗಿನ್ನೂ ದೊಡ್ಡ ಕನಸುಗಳೇನೂ ಇಲ್ಲ. ಪುಟ್ಟ ಮನೆ ಮತ್ತು ಹೊಟ್ಟೆ ತುಂಬಿಸುವಷ್ಟು ಬರುವ ಸಂಬಳ, ಇದರಾಚೆಗೆ ಯಾವುದನ್ನೂ ಯೋಚಿಸಲಾರೆ.' ಕತ್ತಲಲ್ಲಿ ಮೈಥಿಲಿಯು "ಹ್ಞೂಂ" ಅಂದಳು. ಆದರೆ ಅದೊಂದು ಹೂಂಗುಟ್ಟುವಿಕೆ ಅಲ್ಲಿಯೇ ನಿಲ್ಲುವುದಿಲ್ಲವೆಂದು ಚಾರುಗೆ ಅರ್ಥವಾಗಿರಲಿಲ್ಲ – ಮತ್ತೆ ಮತ್ತೆ ಎದುರಾದ ಆಸೆಗಳು ಮೈಥಿಲಿಯನ್ನು ಮುಂದೆ ಮುಂದೆ ಕೊಂಡೊಯ್ದವು. ಆದರೆ, ಚಾರು ಹಾದಿ ಬದಲಾಯಿಸುತ್ತಲೇ ಬಂದ. ಚದುರಂಗದ ಆಟದಲ್ಲಿ ತನ್ನ ಆನೆ ಕುದುರೆಗಳ ಜಾಗವನ್ನು ಕೂಡಾ ಬದಲಾಯಿಸಿದ. ಬದಲಾಯಿಸಲೇಬೇಕಾಗಿತ್ತು.

*

ಇತ್ತ ಜೋಗೇನ ಹಳ್ಳಿಯಲ್ಲಿ ಮೂಲೆ ಮನೆಯಲ್ಲಿ ಅದ್ದೂರಿಯಾದ ಮದುವೆ, ವರೋಪಚಾರ ಇತ್ಯಾದಿಗಳೆಲ್ಲವೂ ಮುಗಿದ ಮೇಲೆ ಪ್ರಸ್ತದ ದಿನ ರಾತ್ರಿ ದೇವವ್ರತ ಸುಜಾತಳನ್ನು ಹತ್ತಿರ ಕೂಡಿಸಿಕೊಂಡು, "ನನಗೆ ತುಂಬಾ ಹಸಿವೆ. ಹೊತ್ತು ಹೊತ್ತಿಗೆ ಸರಿಯಾದ ಊಟ ತಿಂಡಿ ಮಾಡಿಕೊಡು, ಇದರಿಂದಾಚೆಗೆ ನಾನು ನಿನ್ನಲ್ಲಿ ಯಾವುದನ್ನೂ ನಿರೀಕ್ಷಿಸಲಾರೆ, ಹೆಂಡತಿಯೆಂದರೆ ಹೆಂಡತಿಯಾಗಿರಬೇಕು. ಸುಜೀ, ಅಂತ ನಿನ್ನನ್ನು ಕರೀತೇನೆ. ನೋಡು ಸುಜೀ, ನಿನ್ನಪ್ಪ ಕೊಟ್ಟ ಉಂಗುರವೇನೋ ಚೆನ್ನಾಗಿದೆ. ಆದರೆ, ಈ ಉಂಗುರದಲ್ಲಿ ಒಂದು ಹರಳು ಇಟ್ಟಿದ್ದರೆ ನನ್ನ ಕೈ ಬೆರಳಿಗೆ ಚೆನ್ನಾಗಿ ಒಪ್ಪುತ್ತಿತ್ತು" ಎಂದ ದೇವವ್ರತನಿಗೆ ಹೆಚ್ಚು ಮಾತಾಡುವ ತಾಳ್ಮೆಯಂತೂ ಇದ್ದಿರಲಿಲ್ಲ. ಅದನ್ನು ಕೇಳುವ ಮತ್ತು ಹೇಳುವ ಯಾವುದೇ ರೀತಿಯ ಅಗತ್ಯ ಅವನಿಗೆ ಇರಲಿಲ್ಲ.

ಇದೇ ದೇವವ್ರತ ಮತ್ತು ಸುಜಾತ; ಇದೇ ಚಾರು ಮತ್ತು ಮೈಥಿಲಿ ಒಂದು ನಗರದ ಒಂದು ರಸ್ತೆಯಲ್ಲಿ ವಾಸವಾದರು. ಆದರೆ ಉಂಟಾದ ಚಕ್ರತೀರ್ಥದಲ್ಲಿ ಎಷ್ಟೊಂದು ರೀತಿಯ ಸೆಳೆತವಿತ್ತು? ಆಸೆ ಮತ್ತು ನೆಮ್ಮದಿಯೆರಡೂ ಜೊತೆಗೂಡುವುದಿಲ್ಲ ವೆಂದು ಚಾರುಗೆ ಗೊತ್ತು. ಆದರೆ ಮೈಥಿಲಿಗೆ ಗೊತ್ತಿಲ್ಲ. ಹೆಣ್ಣಿನ ದೇಹದಲ್ಲಿ ಎದೆ

ಮಾತ್ರವಿದೆ ಹೃದಯವಿಲ್ಲ ಎಂದು ದೇವವ್ರತ ಭಾವಿಸಿದ್ದ. ಆದರೆ ಸುಜಾತಳಿಗೆ ಹೃದಯ ಕೂಡಾ ಇತ್ತು.

ಕತೆಯು ಸಾಗುವುದೇ ಹೀಗೆ. ಮುಂದೆ ಕತೆಯು ನಡೆಯುತ್ತದೆ ಎಂದು ಗೊತ್ತಿಲ್ಲದವರು ವರ್ತಮಾನದಲ್ಲಿ ಸಂಭ್ರಮಿಸುತ್ತಾರೆ. ಅದೇ ವರ್ತಮಾನ ಮುಂದೊಂದು ದಿನ ಕತೆಯಾಗುತ್ತದೆ! ಅಷ್ಟೆ: ದೇವವ್ರತ ಮತ್ತು ಚಾರು ಮುಖಾಮುಖಿಯಾಗಿದ್ದೇ ಅನಿಷ್ಟವಾದ ಗಳಿಗೆಯಲ್ಲಿ: ತೀರಾ ಅನಿಷ್ಟವೆಂದು ಕಾಣುವ ಮೂರನೆಯ ತಿರುವಿನಲ್ಲಿ! ಈ ಮೂರನೆಯ ತಿರುವಿನ ಸಂದಿಯೆನ್ನುವುದು ಅವರಿಬ್ಬರ ಜೀವನದಲ್ಲಿ ಗಟಾರದ ನೀರಿನಂತೆ ಹರಿದಾಡುತ್ತದೆಯೆಂದು ಅವರಿಗೇನು ಗೊತ್ತಿತ್ತು? ನಿರಂತರವಾಗಿ ಒಂದೇ ರೀತಿಯಲ್ಲಿ ಧ್ಯಾನ ಮಗ್ನನಂತೆ ಬದುಕುವ ಚಾರು ಮತ್ತು ನಿತ್ಯ ಹೊಸತನದ ಚಂಚಲತೆಯಲ್ಲಿಯೇ ಬದುಕುವ ದೇವವ್ರತರಿಬ್ಬರೂ ಮುಖಾಮುಖಿಯಾದಾಗ ಮೊದಲು ಮಾತಾಡಿದ್ದೇ ಬೇರೆ. ಅದೂ ರಸ್ತೆಯ ತಿರುವಿನಲ್ಲಿ ಸಂಜೆಯ ಹೊತ್ತಿಗೆ ಪರಸ್ಪರ ಢಿಕ್ಕಿ ಹೊಡೆದಾಗ ಇಬ್ಬರ ಬಾಯಲ್ಲೂ ಬಂದಿದ್ದು "ಸಾರಿ", ಎಂಬ ಸಣ್ಣ ಪದ. ಈ ಸಣ್ಣ ಪದವೇ ಅನಂತರದಲ್ಲಿ ಅವರಿಬ್ಬರ ಜೀವನದ ಉದ್ದಗಲಕ್ಕೂ ವ್ಯಾಪ್ತಿಯನ್ನು ಪಡೆದುಕೊಂಡಿತು. "ಸಾರಿ" ಎಂಬ ಯಾಂತ್ರಿಕ ಮತ್ತು ಜಡವಾದ ಒಂದು ಪದವನ್ನು ಅವರಿಬ್ಬರೂ ಬಳಸಿಕೊಂಡಿದ್ದರು, ಎಲ್ಲರೂ ಮಾತಾಡುವುದೇ ಹೀಗೆ: "ಸಾರಿ" "ಥ್ಯಾಂಕ್ಸ್" ಇತ್ಯಾದಿ. ದಿನನಿತ್ಯದಲ್ಲಿ ಅನೇಕ ಬಾರಿ ಬಳಕೆಯಾಗುವ ಈ ಪದವು ಜಡವಾದುದಲ್ಲ ಮತ್ತೆ ಕ್ಷಣಕ್ಷಣಕ್ಕೂ ಆಕಸ್ಮಿಕವಾಗಿ ಮುಖಾಮುಖಿಯಾಗುವ ಪದವಾಗಿಯೇ ಪರಿಣಮಿಸಿತು. ಇದರ ಪರಿಣಾಮಗಳು ಮತ್ತೆ ದೇವವ್ರತನ ಪಾಲಿಗೆ ಶಾಪವಾಯಿತು. ಆ ಸಂಜೆ ಚಾರು ಉದ್ಗರಿಸಿದ "ಸಾರಿ" ಎನ್ನುವ ಪದವು ಅವನ ಜೀವನದ ಕೊನೆಯ ಹಂತದ ತನಕ ಉಳಿಯಿತು.

ಸಂಜೆಯಲ್ಲಿ ಬಂದ ಆಕಸ್ಮಿಕವಾದ ಪದವೊಂದು ಅವರಿಬ್ಬರ ಜೀವನದಲ್ಲಿ ಅನವಶ್ಯಕವಾಗಿ ಹಣಿಕಿದ್ದಕ್ಕೆ ಕಾರಣವು ಬೇಕಿರಲಿಲ್ಲ. ಮತ್ತು ಕಾರಣವೂ ಕೂಡ ದೇವವ್ರತ ಮತ್ತು ಚಾರು ಅವರ ಜೀವನದಲ್ಲಿ ಪ್ರವೇಶಿಸಿದ್ದೇ ಆ ಮುಖಾಮುಖಿಯಲ್ಲಿ ಅಲ್ಲ, ಅದು ಬೇರೆ ಪ್ರಶ್ನೆ. ಅಂತೂ ಒಮ್ಮೊಮ್ಮೆ ಒಂದೊಂದು ಪದವೂ ಜೀವನದ ಉದ್ದಗಲಕ್ಕೂ ಕಾಡ್ಗಿಚ್ಚಿನಂತೆ ವ್ಯಾಪಿಸಿಕೊಳ್ಳುತ್ತದೆ. ಕಾಡ್ಗಿಚ್ಚು, ಅದಕೊಂದಿಷ್ಟು ಬೆಂಬಲವಾಗಿ ಬರುವ ಗಾಳಿ ಯಾವತ್ತೂ ಕಾರಣಕ್ಕೆ ಕಾಯುತ್ತಾ ಕೂರುವುದಿಲ್ಲ. ಕಾಯುತ್ತಾ ಕೂತಿದ್ದು ಚಾರು: ಕಾರಣ ಮತ್ತು ಅದಕ್ಕೊಂದು ಪ್ರತಿಯಾದ ಕಾರ್ಯ. ಈ ಎರಡೂ ಚಾರುಗೆ ಕೆಲವೇ ವರ್ಷಗಳಲ್ಲಿ ಜೀವನದ ಅಭ್ಯಾಸಗಳಲ್ಲಿ ಒಂದಾಯಿತು. ಈ ಅಭ್ಯಾಸ ಅವನ ಜೀವನದ ಭಾಗವಾಗಿ ಹೋದಮೇಲೆ. ಆ ತಂತ್ರ ಕ್ರಮಗಳಿಗೆ ಹೊಂದಿಕೊಂಡ ಅವನ ಬದುಕು ಬಿಡಿಸಿಕೊಳ್ಳಲು ಕೆಲವು ಸಮಯವನ್ನು ತೆಗೆದುಕೊಂಡಿತು.

*

ಸರಿಯಾಗಿ ಗೋಧೂಳಿಯ ಲಗ್ನವದು. ಉರಿಬಿಸಿಲಿನಲ್ಲಿ ಒಡ್ಡಿಕೊಂಡಿದ್ದ ಮೈಯನ್ನು ತಂಪಾಗಿಸಲು ಹೊಯ್ದುಕೊಂಡ ತಣ್ಣೀರು ಕೂಡಾ ಬಿಸಿಯಾದಂತೆ ಅನಿಸತೊಡಗಿದ ಹೊತ್ತು. ಬಚ್ಚಲು ಮನೆಯಲ್ಲಿ ಮೂಡಿಬಂದದ್ದು ಅವನ ನಾಭಿ ಮೂಲದ ಒಂದೆಳೆಯ ಸ್ವರ ಮಾತ್ರ. ಬಾಲ್ಯದಿಂದಲೇ ರೂಢಿ ಮಾಡಿಕೊಂಡು ಬಂದ ಈ ಒಂದೆಳೆಯ ಹಾಡು ಯಾವತ್ತೂ ಜೊತೆಗಾತಿಯಾಗಿಯೇ ಉಳಿದುಬಂದದ್ದರ ಬಗ್ಗೆ ತನಗೆ ಆಶ್ಚರ್ಯವೆನಿಸಿದರೂ ಚಾರುವಿಗೆ ಅದೊಂದು ಅಭ್ಯಾಸ ಮಾತ್ರ. ಬಚ್ಚಲು ಮನೆಯಲ್ಲಿ ತಂದಿರಿಸಿದ ಹಳೆಯ ಮಾರ್ಗೋ ಸೋಪನ್ನು ಮೈ ಮೇಲೆ ಅನಗತ್ಯವೆಂಬಂತೆ ತಿಕ್ಕತೊಡಗಿದ. ಕುಡಿತದ ಪೂರ್ತಿಯಾದ ಅಮಲು ಇಳಿಯುವ ಮೊದಲೇ ಸ್ನಾನ ಮುಗಿಸಬೇಕೆಂದುಕೊಂಡವನಿಗೆ ಅದು ಸಾಧ್ಯವಾಗಲೂ ಇಲ್ಲ. ಸಾಧ್ಯವಾಗುವಂತೆ ಕಾಣಿಸಲೂ ಇಲ್ಲ. ಸೋಪು ಹಚ್ಚಿದವನೇ ಮತ್ತೆ ಅಗತ್ಯವಿಲ್ಲದಿದ್ದರೂ "ಗುರು ಬ್ರಹ್ಮ" ಎಂದು ಪಠಿಸತೊಡಗಿ ಮೈಗೆ ಮತ್ತೆ ತಣ್ಣೀರು ಹೊಯ್ದುಕೊಂಡ. ತಣ್ಣೀರು ಹೊಯ್ದುಕೊಳ್ಳುವಾಗ ತಂಪೆನಿಸಿತು. ಒದ್ದೆ ಮೈಯಲ್ಲೇ ಮತ್ತೆ ಪಕ್ಕದಲ್ಲಿರಿಸಿಕೊಂಡಿದ್ದ ಜಿನ್ ಬಾಟಲಿಯ ತಲೆಯನ್ನು ತೆಗೆದು ಬಾಯಿಗಿಟ್ಟು ಸ್ವಲ್ಪ ಮೆಲ್ಲನೆ ಹೀರಿದ.

ಚಾರು ಜಿನ್ ಬಾಟಲಿಯನ್ನು ಬಾಯಿಗಿಟ್ಟ ಹೊತ್ತು ವಿಷಮ ವೇಳೆಯೆಂದು ಅನಿಸಿತ್ತು. ಯಾಕೆಂದರೆ ಅದೇ ಹೊತ್ತು ಮೈಥಿಲಿಯ ಕೈ ಬೆರಳುಗಳ ಮೇಲೆ ಆಟವಾಡಿದ್ದು ದೇವವ್ರತನ ಕೈಬೆರಳುಗಳು. ಹೊತ್ತಲ್ಲದ ಹೊತ್ತಿನಲ್ಲಿ ಯಮ ತನ್ನ ಕೋಣನ ಮೇಲೆ ಸವಾರಿ ಹೂಡಿ, ಯಾರ ಮನೆಯಲ್ಲಿ ಸಾವು ಹುಟ್ಟುತ್ತದೆಯೆಂದು ಹುಡುಕುವ ಸಮಯ! ಚಾರುವಿನ ಕಣ್ಣು ರಪ ರಪನೆ ಹೊಡೆಯತೊಡಗಿತು. ದೇವವ್ರತನ ಕೈಬೆರಳುಗಳು ಮೈಥಿಲಿಯ ಕೈಬೆರಳುಗಳ ಮೇಲೆ ಆಟವಾಡಿರುವುದು ಮುಂದೊಂದು ಮಹತ್ವದ ಗಳಿಗೆಯ ಮುಹೂರ್ತವೋ, ಅಥವಾ ಕಾರ್ಯ ಕಾರಣಗಳ ನಡುವಣ ಸಂಬಂಧಕ್ಕೆ ಯಾವ ಬೆಲೆಯೇ ಇಲ್ಲವೋ ತಿಳಿಯದೆ, ಬಚ್ಚಲ ಮನೆಯ ಪಾತ್ರೆ ಕಣ ಕಣ ಸದ್ದು ಮಾಡಿತು. ಮತ್ತು ಗೋಡೆಯ ಮೇಲಿನ ಹಲ್ಲಿ ಅನವಶ್ಯಕವಾಗಿ ಮೂರನೆಯ ಬಾರಿಯೂ ಲೊಚಗುಟ್ಟಿತು.

ಚಾರು ಅವಸರದಲ್ಲಿಯೇ ಬಾಟಲಿಯನ್ನು ಬಚ್ಚಲ ಮನೆಯ ತೊಟ್ಟಿಯ ಮೇಲಿಟ್ಟವನೇ ಮತ್ತೆ ದುಳು ದುಳನೆ ಮೈಗೆ ನೀರನ್ನು ಹೊಯ್ದುಕೊಂಡು ಹಳೆಯ ಬಾತ್ ಟವೆಲನ್ನು ಸುತ್ತಿಕೊಂಡು ಹೊರಗೆ ಬಂದೇ ಬಿಟ್ಟ. ಅವನೀಗ ಅತಿ ತುರ್ತಾಗಿ ಮಾಡಬೇಕಾದ ಕೆಲಸವೊಂದಿತ್ತು. ಆ ಕೆಲಸದ ಕಡೆಗೆ ಸಂಪೂರ್ಣವಾಗಿ ಗಮನವನ್ನು ಕೊಡದೇ ಹೋದರೆ ಮುಂದೊಂದು ದಿನ ಬದುಕಿನ ಒಂದೊಂದು ಜಂತಿಯನ್ನು ಕೂಡಾ ಹಿರಿದು ಒಲೆಯೊಳಗೆ ಹಾಕಿ ಎಲ್ಲರೂ ಮೈಕಾಯಿಸಿಕೊಳ್ಳುತ್ತಾರೆ ಎಂಬರಿವು ಚಾರುವಿಗೆ. ಇದನ್ನು ಅವನಿಗೆ ಮತ್ಯಾರೂ ಹೇಳಿಕೊಡಬೇಕಾಗಿರಲಿಲ್ಲ. ಗಡಿಬಿಡಿಯಿಂದ ಪೈಜಾಮ ಮತ್ತು ಅದಕ್ಕೆ ಯಾವುದೇ ರೀತಿಯಿಂದ ಒಪ್ಪದೇ ಇರುವ ಕಪ್ಪು ಶರಟನ್ನು

ಸಿಕ್ಕಿಸಿಕೊಂಡು ಹವಾಯಿ ಚಪ್ಪಲಿಯನ್ನು ಹಾಕಿಕೊಂಡು, ಬಾಗಿಲಿಗೆ ಚಿಲಕವನ್ನು ಸಿಕ್ಕಿಸಿಕೊಂಡು ಹೊರಟೇ ಬಿಟ್ಟ. ಹೊರಡುವ ಅವನ ಅವಸರದಲ್ಲಿ ಪಕ್ಕದ ಮನೆಯ ಹೆಂಗಸು ಮಾತಾಡಲು ಯತ್ನಿಸಿದ್ದನ್ನು ಕೂಡಾ ಲೆಕ್ಕಿಸಲೇ ಇಲ್ಲ. ಚಾರು ಮನೆಯಿಂದ ಹೊರಗೆ ಹೊರಟ ಸಮಯಕ್ಕೆ ಸರಿಯಾಗಿಯೇ ಮೈಥಿಲಿಯ ಜೀವನದ ಮತ್ತೊಂದು ಪುಟಕ್ಕೆ ಅವಕಾಶವಾಯಿತು ಅನ್ನುವುದಂತೂ ನಿಜ.

ದೇವವ್ರತನು ಹೇಳಿದ್ದೇನು? ಮೈಥಿಲಿಯ ಬೆರಳುಗಳ ಮೇಲೆ ಕೈಯಾಡಿಸುತ್ತಾ: "ಮೈಥಿಲಿಯವರೇ ನಿಜವಾಗಿಯೂ ಜಗತ್ತಿನ ಎಲ್ಲಾ ಸುಂದರವಾದ ವಸ್ತುಗಳನ್ನು ಒಂದೆಡೆಗೆ ತಂದು ರಾಶಿ ಹಾಕಿದರೆ ಹೇಗಿರುತ್ತೆ – ಹಾಗಿದ್ದೀರಿ."

ಮುಸ್ಸಂಜೆಯಲ್ಲಿ ಕೂತುಕೊಂಡು ಅದೂ ತನ್ನ ಪಕ್ಕದಲ್ಲಿ ಯಾರ ಅರಿವಿಗೂ ಬಾರದ ರೀತಿಯಲ್ಲಿ ಮೈಥಿಲಿಯ ಕೆನ್ನೆಯ ಮೇಲೆ ಸಣ್ಣ ಕೆಂಪು ಮೂಡಿದ್ದು ಆಕಸ್ಮಿಕವಲ್ಲ. ದೇವವ್ರತನ ಬದುಕಿನಲ್ಲಿ ಬಂದ ಅನೇಕ ಹೆಣ್ಣುಗಳಿಗೆ ಈ ಮಾತು ಮತ್ತೆ ಮತ್ತೆ ಹೇಳಿ ರೂಢಿಯಾಗಿದೆಯೆಂಬ ಅರಿವು ಯಾವತ್ತೂ ಮೈಥಿಲಿಗೆ ಬಂದಿಲ್ಲವೋ ಅಥವಾ ಮೈಥಿಲಿಗೆ ಕೂಡಾ ತಾನು ಅಪ್ರತಿಮ ಸುಂದರಿಯೆಂದು ಪ್ರತಿಬಾರಿಯೂ ನಗ್ನವಾಗಿ ಕನ್ನಡಿಯೆದುರು ನಿಂತು ನೋಡಿದಾಗ ಅನಿಸಿದ್ದ ಕಾರಣವೋ ಒಂದೂ ಗೊತ್ತಾಗದಿದ್ದರೂ ಮೈಥಿಲಿಯು ನಸುಕೆಂಪಿನ ತನ್ನ ಕೆನ್ನೆಯನ್ನು ಮತ್ತೊಂದು ಕೈಯಿಂದ ಸವರಿಕೊಂಡಳು. ಜೀವನದ ಮೊದಲಬಾರಿಗೆ ಹೀಗೆ ಒಬ್ಬ ಪುರುಷ ತನ್ನ ಕೈಬೆರಳುಗಳನ್ನು ಅತ್ಯಂತ ನಿಧಾನವಾಗಿ, ಮಲ್ಲಿಗೆಯ ಹೂಗಳನ್ನು ಸವರಿದಂತೆ ಸವರಿದಾಗ ಮೈಥಿಲಿಯ ಮೈ ಕೊಂಚ ನಡುಗಿತು ಕೂಡಾ. ಆ ನಡುಕವನ್ನು ಹತ್ತಿಕ್ಕಲು ಅಸಾಧ್ಯವೆಂದೆನಿಸಿ ಮೈಥಿಲಿ "ಹೌದೆ, ನಿಜವಾಗಿಯೂ? ನೀವು ಸುಳ್ಳು ಹೇಳ್ತಾ ಇದ್ದೀರಾ?" ಅಂತ ಗಂಟಲ ಮೇಲಿಂದ ಬಂದ ಮಾತನ್ನು ಆಡತೊಡಗಿದಳು.

ದೇವವ್ರತನಂತೂ ಈ ಮಾತು ಖಂಡಿತಾ ಅವಳಿಂದ ಬರುತ್ತದೆಯೆಂದು ನಿರೀಕ್ಷಿಸಿದ್ದ, ಯಾಕೆಂದರೆ ಮೈಥಿಲಿಯ ಕೈ ಬೆರಳೆಂಬುದು ಅವನಿಗೆ ಹೊಚ್ಚ ಹೊಸ ಹುಡುಗಿಯ ಮೈಯೆಲ್ಲಾ ವಿದ್ಯುತ್ತಾಗುವ ಕೈ ಬೆರಳಲ್ಲ ಎಂಬುದು ಗೊತ್ತು. ಎಲ್ಲಕ್ಕಿಂತ ಹೆಚ್ಚಾಗಿ ಹುಡುಗಿಯ ಕೈ ಬೆರಳನ್ನು ನಿಧಾನವಾಗಿ ಸವರುವುದು ಮತ್ತು ಹೊಗಳುವುದು ಎಷ್ಟೊಂದು ಅದ್ಭುತವಾದ ಕಸುಬೆಂದರೆ, ಹುಡುಗಿಯರನ್ನು ವಶಮಾಡಿಕೊಳ್ಳುವ ಮೊದಲಿನ ಹೆಜ್ಜೆಯೇ ಇದೆಂದೂ ಪಾರಂಗತನಾದ ದೇವವ್ರತನಿಗೆ ಗೊತ್ತು.

ಕಡ್ಲೆಕಾಯಿ ಹುಡುಗನ ಅನುಮಾನ

–೨–

ಮೈಥಿಲಿಯ ಬೆರಳಲ್ಲಿ ಆಟವಾಡತೊಡಗಿದ್ದ ದೇವವ್ರತ ಮೆಲ್ಲನೆ ಹೇಳಬೇಕಾದ ವಿಷಯವೊಂದಿದೆಯೆಂಬಂತೆ "ಸೌಂದರ್ಯವನ್ನು ಅನುಭವಿಸುವ ತಾಕತ್ತು ನಿಜವಾಗಿಯೂ ಚಾರುವಿಗೆ ಇದೆಯೆಂದು ಅನಿಸುತ್ತದೆಯೇ?" ಧುತ್ತನೆ ಕೇಳಿದ ಪ್ರಶ್ನೆಗೆ ಮೈಥಿಲಿಯು ತಬ್ಬಿಬ್ಬಾದರೂ ಕೈ ಬೆರಳನ್ನು ಹಿಂದಕ್ಕೆ ಸೆಳೆದುಕೊಳ್ಳುವ ಯಾವ ಪ್ರಯತ್ನವೂ ಅವಳಿಂದ ಸಾಧ್ಯವಾಗಲಿಲ್ಲ. ಗಿಡದ ಮರೆಯಿಂದ ಹನಿ ಹನಿಯಾಗಿ ಬೀಳಲು ಶುರುವಾಗಿದ್ದ ಮತ್ತು ಬಿದ್ದು ಹೊರಳಲು ತೊಡಗಿದ ಚಂದ್ರನ ಬೆಳಕು ದೇವವ್ರತನ ತನ್ನದೇ ಪಚ್ಚೆಹರಳಿನ ಉಂಗುರದಲ್ಲಿ ಪ್ರತಿಫಲಿಸಿ ಹೊರಟು ಹೋಗಿರುವುದು ಕೂಡಾ ಆ ಸಂದರ್ಭದಲ್ಲಿ ಅಸಂಗತವೆನಿಸತೊಡಗಿತು. ಮೈಥಿಲಿಯು ಮಾತ್ರ ತುಂಬಾ ಉದ್ವೇಗಕ್ಕೆ ಒಳಗಾದವಳಂತೆ ಮತ್ತು ಯಾವ ನೈತಿಕವಾದ ಲಕ್ಷ್ಮಣ ರೇಖೆಯೂ ತನಗೆ ಒಂದಿಷ್ಟೂ ಮುಚ್ಚಲಾರದು ಎನ್ನುವಂತೆ "ಹೌದು, ಚಾರುವಿಗೆ ಈ ಸಂಗತಿಗಳು ಯಾವುದೂ ಮನಸ್ಸಿಗೆ ನಾಟಿದಂತೆ ಕಾಣುವುದಿಲ್ಲ" ಎಂದಳು.

ದೇವವ್ರತನ ಕೈ ಬೆರಳುಗಳನ್ನು ಬಿಟ್ಟು ಸಖೇದಾಶ್ಚರ್ಯದಿಂದ ನಿಜವೇ, ಇದೊಂದು ಸಂಗತಿಯು ಸತ್ಯವೇ ಎಂಬುದನ್ನು ಅರ್ಥವಿಸಿಕೊಳ್ಳಲಾಗದಂತೆ ಮೈಥಿಲಿಯನ್ನು ಕಾಡಿದ್ದು; ಚಾರುವಿನ ಸಿಗರೇಟಿನ ನೆನಪು ಮತ್ತು ಅದರ ವಾಸನೆ! "ಮೈಥಿಲಿ, ನಿಜವಾಗಿಯೂ ನೀನು ಬಹಳ ಚನ್ನಾಗಿದ್ದೀಯಾ" ಎಂದು ದೇವವ್ರತ ಗುನುಗುನಿಸಿದ. ತಾನೊಂದು ದಿನ ಈ ದೇವವ್ರತನಿಂದಲೇ ಪಡಬಾರದ ಹಿಂಸೆಯನ್ನು ಪಡೆಯಲಿದ್ದೇನೆ ಎಂಬುದನ್ನು ತಿಳಿಯದ ಮೈಥಿಲಿ ಕೂಡಾ ಅಷ್ಟೇ ಸಹಜವೆಂಬಂತೆ ಮತ್ತು ಹೌದೆಂಬಂತೆ ಗೋಣಾಡಿಸಿದಳು.

ಚಾರು ಕೂಡಾ ಇದೇ ಸಮಯಕ್ಕೆ ಸರಿಯಾಗಿ ಮನೆಯಿಂದ ಹೊರಟವನು ಮಾಂಡವಿ ಬಾರಿನೊಳಗೆ ಹೊಕ್ಕ. ಯಾವುದೋ ಒಂದು ವಿಚಿತ್ರ ಚಡಪಡಿಕೆಯನ್ನು ನಿಯಂತ್ರಿಸುವುದು ಅಸಾಧ್ಯವೆಂಬಂತೆ ಮೂಲೆಯ ಟೇಬಲಿನ ಕಡೆಗೆ ದೃಷ್ಟಿಹರಿಸಿದ. ಅವನ ಎಣಿಕೆಯಂತೆ ಮೂಲೆ ಟೇಬಲಲ್ಲಿ ಯಾರೋ ಕೂತಿದ್ದರಿಂದ ಆ ಕಡೆಗೆ ಈ ಕಡೆಗೆ ದೃಷ್ಟಿಯನ್ನು ಹರಿಸಿದ. ತನಗೆ ಬೇಕಾದ ಮೂಲೆ ಮೇಜು ಸಿಕ್ಕಿಲ್ಲವೆಂಬ ಒಂದೇ ಕಾರಣಕ್ಕೆ ವಾಪಾಸು ಹೊರಟವನು ಮತ್ತೆ ನಿಂತ. ಹಾಕಿದ ಜಿನ್ ಪೂರ್ತಿಯಾಗಿ ಇಳಿಯಲು ಬೇಕಾದ ಕಾಲಾವಕಾಶಕ್ಕಿಂತ ಕೊಂಚ ಮೊದಲೇ ಮತ್ತೊಂದು ಪೆಗ್ ಹಾಕಿಲ್ಲವಾದರೆ ಉಳಿಯುವುದೇ ಇಲ್ಲವೆಂದು ಅನಿಸಿತು. ವೈಟರ್‌ನನ್ನು ಕರೆದು ಫ್ಯಾಮಿಲಿ ರೂಮು ಖಾಲಿಯಿದೆಯೇ ಅಂತ ಕೇಳಿದ ಮತ್ತು ಖಾಲಿ ರೂಮುಗಳ ಕಡೆಗೆ ದೃಷ್ಟಿಯನ್ನು ಹರಿಸಿದ. ದೃಷ್ಟಿಯನ್ನು ಹರಿಸುವಷ್ಟರಲ್ಲಿ ವೈಟರ್ ಅವನನ್ನು ಕರೆದೊಯ್ದು ಮತ್ತೊಂದು ಮೂಲೆಯ ಖಾಲಿ ಕೊಠಡಿಯನ್ನು ತೋರಿಸಿದ. ಖಾಲಿ ಕೊಠಡಿಯಲ್ಲಿ ಕೂತು ಚಾರು ಹೇಳಿದ್ದು: ಮತ್ತೊಂದು ಬಾಟಲ್ ಜಿನ್. ಈ ಜಿನ್ ಹಾಕಿದಾಗಲೇ ಅವನು ಸರಿಯಾದದ್ದು ಕೂಡಾ. ಚಾರುವಿನ ಗಂಟಲೊಳಗೆ ಬಿದ್ದ ಜಿನ್ ಕರುಳಿಗೆ ಇಳಿಯುತ್ತಿದ್ದಂತೆಯೇ ಕಣ್ಣು ಭಗ್ಗನೇ ಉರಿಯತೊಡಗಿತು. ಆ ಉರಿಯು ಎಲ್ಲಾದರೂ ಸೋಕಿದ್ದರೆ ಮೈಥಿಲಿ ಮತ್ತು ದೇವವ್ರತ ಇಬ್ಬರೂ ಕಂಗಾಲು ಆಗುತ್ತಿದ್ದರು.

ಚಾರು ಯಾವತ್ತೂ ಜಿನ್ನನ್ನು ಗಟಗಟನೆ ಕುಡಿದವನೇ ಅಲ್ಲ. ಜೀವನದಲ್ಲಿ ಮುಂದೆ ಕುಡಿಯುವುದನ್ನೇ ರೂಢಿ ಮಾಡಿಕೊಳ್ಳಲಿರುವ ಮತ್ತು ಕುಡಿತದಿಂದ ಮಹಾಪ್ರಯಾಸ ಪಡಲಿರುವೆನೆಂಬ ಅರಿವೂ ಆತನಿಗಿಲ್ಲ. ಆದರೆ, ಕುಡಿತವೊಂದು ಅವನಿಗೆ ಅನಿವಾರ್ಯವಾದ ಚಟವಾಗಲಿ ಎಂದು ಹಂಬಲಿಸಿದ ಮೈಥಿಲಿಯಾಗಲಿ; ದೇವವ್ರತನಾಗಲಿ ಮತ್ತೆ ಅವನು ಚೇತರಿಸಿಕೊಂಡರೆ ಎದುರಾಗಬಹುದಾದ ಪ್ರಳಯ ವಿಪರೀತದ ಅರಿವು ಉಳ್ಳವರಾಗಿರಲಿಲ್ಲ. ಜಿನ್ ಕುಡಿದು ನಿರುಮ್ಮಳವಾಗಿ ಬಾರ್‌ನ ಹುಡುಗನಿಗೆ ಲೆಕ್ಕಕ್ಕಿಂತ ಹೆಚ್ಚು ದುಡ್ಡು ಕೊಟ್ಟು ಹೊರಟವನು ನೇರವಾಗಿ ಹೊಕ್ಕಿದ್ದು ಮತ್ತೆ ಮನೆಗೆ. ಮನೆಯೊಳಗೆ ಬಂದು ದೊಪ್ಪನೆ ಬಿದ್ದವನು ಎರಡೆರಡು ಜಿನ್‌ಗಳ

ಖುಷಿಯನ್ನು ಅನುಭವಿಸಿಕೊಂಡು ತನ್ನ ಹಾಸಿಗೆಯಲ್ಲಿಯೇ ಮಲಗಿಕೊಂಡು ಸಿಗರೇಟು ಹಚ್ಚತೊಡಗಿದ. ಮಲಗಿದ್ದಲ್ಲಿಯೇ ಸಿಗರೇಟು ಸೇದುತ್ತಲೇ ಅಪರಿಮಿತವಾದ ಖುಶಿಯನ್ನು ಚಾರು ಅನುಭವಿಸುತ್ತ ಇರುವಾಗಲೇ ಅಲ್ಲಿ ನಡೆದದ್ದು ಬೇರೆ ಸಂಗತಿಯೇ ಆಗಿತ್ತು.

ಮೈಥಿಲಿಗೆ ಜೀವನದಲ್ಲಿ ಮೊದಲ ಬಾರಿಗೆ ಕಟ್ಟು ಕಟ್ಟಳೆಯನ್ನು ಮುರಿದು ಹಾಕುವ ತಾಕತ್ತು ಬಂದಿದೆಯೆಂದು ಅವಳೇ ಭಾವಿಸಿಕೊಂಡಳು. ದೇವವ್ರತನೂ ಅಷ್ಟೇ; ಕಳೆದ ನಾಲ್ಕೈದು ವರ್ಷಗಳಿಂದ ನೋಡುತ್ತಲೇ ಬಂದಿರುವ ಮೈಥಿಲಿಯ ಅಂಗಾಂಗಗಳನ್ನು ಒಮ್ಮೆಯಾದರೂ ಸವಿಯುವ ಹೊತ್ತು ಬಂತು ಅಂತ ಭಾವಿಸಿಕೊಡನು. ಆದರೆ ವಿಪರೀತ ಪ್ರಣಯಿಗಳ ವಿಪರೀತ ವಿಕೃತಿಯೇ ಮುಂದೊಂದು ದಿನ ಜೀವನದಲ್ಲಿ ಮುಳುವಾಗಲಿದೆಯೆಂದು ಮೈಥಿಲಿಗಾಗಲೀ, ಮೈಯ ಒಳಗಿನ ರೋಮ ರೋಮಗಳಲ್ಲಿ ಕಾಮ ವಾಂಛೆಯನ್ನು ತುಂಬಿಕೊಂಡ ದೇವವ್ರತನಿಗಾಗಲೀ ಗೊತ್ತೇ ಇರಲಿಲ್ಲ."

ಮೆಲ್ಲನೆ ಮಾತು ಶುರುಮಾಡಿದ ದೇವವ್ರತ ಮೊದಲಿಗೆ ಹೇಳಿದ ಮಾತನ್ನೇ ಮತ್ತೆ ಹೇಳತೊಡಗಿದ: "ಮೈಥಿಲಿಯವರೇ, ನೀವೆಷ್ಟು ಚೆಂದ ಇದ್ದೀರಿ? ನಿಮ್ಮ ರೂಪಕ್ಕೆ ನಿಮ್ಮ ಗಂಡ ಚಾರು ಯಾವ ರೀತಿಯಲ್ಲಿಯೂ ಸರಿಯಾದವರಲ್ಲ.

ಮೈಥಿಲಿಯ ಮನದೊಳಗೆ ಒಂದು ಸಣ್ಣ ಅತೃಪ್ತಿಯ ಎಳೆಯ ಕೊಕ್ಕೆ ಸಿಕ್ಕಿಕೊಂಡಿತು. ದೇವವ್ರತ ಮೆಲ್ಲನೆ ತನ್ನ ಸುತ್ತ ಮುಂದೆಂದೂ ಬಿಡಿಸಲಾಗದ ಆಮಿಷದ ಬಲೆಯನ್ನು ಒಡ್ಡುತ್ತಿದ್ದಾನೆನ್ನುವ ಅರಿವು ಮೈಥಿಲಿಗೆ ಬರಲಿಲ್ಲವೊ ಅಥವಾ ಮೂಲಭೂತವಾಗಿ ತನ್ನ ರೂಪಕ್ಕೆ ತಾನೇ ಮರುಳಾಗಿ ಗಂಡನ ಬಗೆಗೆ ತಾಳಿದ ಹೇವರಿಕೆ ಕಾರಣವೋ ಒಂದೂ ಆ ಹೊತ್ತಿಗೆ ಅವಳಿಗೆ ತಿಳಿಯಲಿಲ್ಲ. ಮೈಥಿಲಿಯ ಬಗಲ ಮೇಲಿನ ಶಾಲನ್ನು ಸರಿಸಿದ ದೇವವ್ರತ ಮತ್ತೊಮ್ಮೆ "ನೀವು ಸುಂದರಿ" ಎಂದು ಪಿಸುಗುಟ್ಟಿದ. ಮದುವೆಯಾಗಿ ನಾಲ್ಕೈದು ವರ್ಷವಾದರೂ ಗಂಡಿನ ಈ ಹೊಗಳಿಕೆಗೆ ಮೈಯೆಲ್ಲಾ ಕಣ್ಣಾದ ಮೈಥಿಲಿಯು ದೇವವ್ರತನ ಮಾತಿಗೆ ಪ್ರತಿಕ್ರಿಯಿಸುತ್ತಾ ಮತ್ತೊಮ್ಮೆ ಅದೇ ಮಾತು ಕೇಳಲು "ಹೌದೇ" ಎಂದಳು. ಅವಳ ಪ್ರತಿಕ್ರಿಯೆಯು ಯಾವ ಬಗೆಯದಿತ್ತೆಂದರೆ ತನ್ನ ಮಾತಿಗೆ ಇಷ್ಟೊಂದು ಬೇಗ ಪ್ರತಿಕ್ರಿಯಿಸುವಳು ಎಂಬ ಅರಿವು ತಕ್ಷಣವೇ ದೇವವ್ರನ ತಲೆಗೆ ಹೋಯಿತು. ಈಗ ಮುಂದಿನ ಮಾತು ಶುರುಮಾಡಬೇಕೆನ್ನುವಷ್ಟರಲ್ಲಿ ಕೂತ ಗಾರ್ಡನಿನ ಕಲ್ಲ ಬೆಂಚಿನ ಹತ್ತಿರ ಕಡ್ಲೆಕಾಯಿ ಮಾರುವ ಹುಡುಗ, 'ಕಡ್ಲೆ ಕಾಯಿ, ಬಿಸಿ ಬಿಸಿ ಕಡ್ಲೆಕಾಯಿ' ಅಂತ ಕಿರುಚಿದ. ಆ ಕಿರುಚಾಟವು ಹೇಗಿತ್ತೆಂದರೆ ಮೈಥಿಲಿಯ ಕರುಳಿಗೆ ಯಾವುದೋ ಒಂದು ಬಾಲ್ಯದ ಘಟನೆಯು ಬಂದು ಇರಿದಂತಾಯಿತು. ಮುಂದಿನ ಮಾತುಗಳಿಗೆ ಅನುಕೂಲವಾಗಲೆಂದೇ ದೇವವ್ರತ ಅರೆಗತ್ತಲಲ್ಲಿಯೂ ಸರಿಯಾಗಿ ಎಣಿಸಿ ಎರಡು ರೂಪಾಯಿಯ

ನಾಣ್ಯವನ್ನು ತೆಗೆದು ಅವನ ಕೈಯಲ್ಲಿಟ್ಟು, ಕಡ್ಲೆಕಾಯಿಯನ್ನು ತನ್ನ ಕರ್ಚೀಪಿಗೆ ಸುರಿದು ಇಟ್ಟುಕೊಂಡ. ಕರ್ಚೀಪಿಗೆ ಸಿಡಿಸಿಕೊಂಡು ಬಂದಿದ್ದ ಪೌಡರ್ ಮತ್ತೆ ಕಡ್ಲೆಕಾಯಿ ಬೀಜದೊಂದಿಗೆ ಬಾಯ್ದೆರೆಯಿತು. ಮೈಥಿಲಿಯು ಕಡ್ಲೆಕಾಯಿ ಹುಡುಗ ಬಂದ ಹೊತ್ತಿಗೆ ದೂರ ಮೆಲ್ಲಗೆ ಸರಿದು ಕೂತಿದ್ದನ್ನು ಕಡ್ಲೆಕಾಯಿ ಹುಡುಗ ಗಮನಿಸಿದ್ದಾನೆನ್ನುವ ಅರಿವು ಮೈಥಿಲಿಗಾಗಲೀ, ದೇವವ್ರತನಿಗಾಗಲೀ ಗೊತ್ತಾಗಲಿಲ್ಲ. ಮುಂದೆ ಇದೇ ಕಡ್ಲೆಕಾಯಿ ಹುಡುಗ ಚಾರುವಿಗೆ ಈ ಸಂಗತಿಗಳನ್ನು ಸವಿವರವಾಗಿ ಹೇಳಲಿದ್ದಾನೆ ಎಂದು ಗೊತ್ತಿದ್ದರೆ ವಾಸ್ತವವಾಗಿ ಆ ಇಬ್ಬರೂ ಆ ತಂಟೆಗೆ ಹೋಗುತ್ತಿರಲಿಲ್ಲ.

ಬೇರೆಯವರ ಕರ್ಚೀಫಿಗೆ ಅಸಹ್ಯಪಡುವ ಮೈಥಿಲಿ ದೇವವ್ರತನ ಕರ್ಚೀಫಿನಲ್ಲಿದ್ದ ಕಡ್ಲೆಕಾಯಿಗೆ ಕೈ ಹಚ್ಚಿದ್ದು ಮಾತ್ರ ಅವಳ ಜೀವನದ ಮಹತ್ವದ ತಿರುವು ಆಗಿತ್ತು ಎಂಬುದಂತೂ ನಿಜ. ದೇವವ್ರತ ಕಡ್ಲೆಕಾಯಿಯನ್ನು ಕರ್ಚೀಫಿನಲ್ಲಿ ಸುರಿದವನು ಮತ್ತೊಮ್ಮೆ ಕಡ್ಲೆಕಾಯಿ ಹುಡುಗನಿಗೆ "ಆಯ್ತು ಹೋಗಪ್ಪ" ಎಂದು ಹೇಳಿದ್ದು ಕಡ್ಲೆಕಾಯಿ ಹುಡುಗನಿಗೆ ಒಂದು ವಿಚಿತ್ರ ಧ್ವನಿಯಂತೆ ಕೇಳಿಸಿತು. ಕಡ್ಲೆಕಾಯಿ ಮಾರುವ ಹುಡುಗ ಜೀವನದಲ್ಲಿ ಈ ಮೊದಲೂ ಅನೇಕ ಜೋಡಿಗಳನ್ನು ಗಾರ್ಡನಿನಲ್ಲಿ ನೋಡಿದ್ದಾನೆ. ಮೈಗೆ ಮೈಗೆ ಅಂಟಿಸಿಕೊಂಡು ಕೂತವರು, ಮೈಯಲ್ಲೆಲ್ಲಾ ಬೆರಳಾಡಿಸಿಕೊಳ್ಳುವವರು, ಪರಸ್ಪರ ತುಟಿಯೊರಸಿಕೊಳ್ಳುವವರು, ಸಂಜೆಯ ಏಕಾಂತದ ದುಃಖಿತರು ಹೀಗೆ. ಆದರೆ, ದೇವವ್ರತ ಮತ್ತು ಮೈಥಿಲಿಯರ ನಡುವಣ ಸಂಬಂಧದ ಸ್ವರೂಪವು ಅವನಿಗೆ ಬೇರೆ ಬಗೆಯದಾಗಿ ಕಾಣಿಸಿತು. ಮೂವತ್ತೆಂಟರ ಅಂಚಿನಲ್ಲಿರುವ ದೇವವ್ರತ. ಮೂವತ್ತರ ಅಂಚಿನಲ್ಲಿರುವ ಮೈಥಿಲಿಯರು ಗಂಡ ಹೆಂಡತಿ ಇರಲಾರರು ಮತ್ತು ಅವರಿಬ್ಬರೂ ಬಂದ ಉದ್ದೇಶವು ಬೇರಾವುದೋ ಇರಬೇಕೆಂಬ ತರ್ಕವೂ ಕಡ್ಲೆಕಾಯಿ ಹುಡುಗನ ಮನೋಭಿತ್ತಿಯಲ್ಲಿ ಸುಳಿದು ಹೋಯಿತು. ಆದರೆ, ಲೋಕ ಜೀವನದ ಅನೇಕ ಹಂಗುಗಳನ್ನು ತೊರೆದ ಸಂತನಂತೆ ಗಾರ್ಡನ್‌ನಲ್ಲಿ ನಡೆಯುವ ಯಾವುದೇ ವಿಷಯಗಳಿಗೂ – ತನ್ನ ಕಡ್ಲೆಕಾಯಿ ವ್ಯಾಪಾರಕ್ಕೂ ಯಾವುದೇ ತಾಳಮೇಳಗಳಿಲ್ಲವೆಂಬುದನ್ನು ಅರಿತಿದ್ದ ಹುಡುಗ ಮತ್ತೆ ಅದೇ ಕೀರಲು ಸ್ವರದಲ್ಲಿ "ಕಡ್ಲೆಕ್ಕಾ, ಕಡ್ಲೆಕ್ಕಾ" ಎಂದು ಕಿರುಚಾಡುತ್ತಾ ಹೊರಟು ಹೋದ. ದೇವವ್ರತ ಮಾತ್ರ ಈ ವಿಷಯಕ್ಕೆ ಸಂಬಂಧಿಸಿದಂತೆ ಚಿಂತೆಯನ್ನೇ ಹಚ್ಚಿಕೊಳ್ಳದೆ 'ಶೇಂಗಾ ಭಾಳ ಚೆನ್ನಾಗಿರುತ್ತೆ, ಸಂಜೆ ಹೊತ್ತಿಗೆ ಶೇಂಗಾ ತಿಂದ್ಕೊಂಡು ಮಾತಾಡುವುದೆಂದರೆ ತುಂಬಾ ಇಷ್ಟವಾಗುತ್ತೆ"ಅಂದ. ಮೈಥಿಲಿಯೂ ಅಯಾಚಿತವಾಗಿ ಕಡ್ಲೆಕಾಯಿಗೆ ಕೈ ಹಚ್ಚಿದವಳು 'ನಿಮ್ಮದು ತುಂಬಾ ಲವಲವಿಕೆಯ ಜೀವನ, ನೀವು ಯಾವುದನ್ನೂ ಹಚ್ಚಿಕೊಳ್ಳದೇ ಆರಾಮಾಗಿ ಇರ್ತೀರಲ್ಲಾ?" ಅಂದಳು. ಕರ್ಚೀಪಿನಲ್ಲಿದ್ದ ಕಡ್ಲೆಕಾಯಿಗೆ ಕೈಹಚ್ಚಿದ ಮೈಥಿಲಿಯ ಕೈಯನ್ನು ಕಡ್ಲೆಕಾಯಿ ತಿನ್ನುವ ನೆಪದಲ್ಲಿ ಮತ್ತೊಮ್ಮೆ ದೇವವ್ರತ ಮುಟ್ಟಿದಾಗಲೇ ಮೈಥಿಲಿಯ ಕೈಯಲ್ಲಿ ಒಡಮೂಡಿದ ಕಂಪನ ದೇವವ್ರತನಿಗೆ

ಸ್ವಯಂವೇದ್ಯವಾಯಿತು ಮಾತ್ರವಲ್ಲ, ಇದರಿಂದ ಮೈಥಿಲಿಯು ಬಲೆಗೆ ಬೀಳುವ ಸಂದರ್ಭವೊಂದು ಸನ್ನಿಹಿತವಾಯಿತು ಎಂಬುದೂ ಅರ್ಥವಾದಂತೆ ಆಯಿತು.

ಮೈಥಿಲಿಯ ಮನಸ್ಸಿನಲ್ಲಿನ ಭಾವನೆಗಳು ಥಟ್ಟನೆ ಹೊರಗೆ ಬಂದವು ಅನ್ನುವುದು ನಿಜ. ಆದರೆ, ದೇವವ್ರತನ ಕಣ್ಣು ಬಿದ್ದಿರುವುದು ಮೈಥಿಲಿಯ ದೇಹದ ಮೇಲೆಯೇ ಹೊರತು ಮತ್ಯಾವುದರಲ್ಲಿಯೂ ಅಲ್ಲವೆಂಬುದು ಖಚಿತವಾದದ್ದೂ ಅವನಿಗೆ ಮಾತ್ರವೇ ಹೊರತು ಜಗದ ಇನ್ನಿತರ ಯಾರಿಗೂ ಅಲ್ಲ. ದೇವವ್ರತ ತನ್ನ ಚಿರತೆಯ ಹೊಂಚನ್ನು ಇರಿಸಿಕೊಂಡೇ ಹೇಳಿದ "ಮೈಥಿಲಿಯವರೇ, ಚಾರು ಅವರಿಂದ ಯಾವ ಸುಖವನ್ನು ಪಡೆಯುತ್ತಿದ್ದೀರಿ ಎಂದು ಅವರ ಜೊತೆಗೆ ಇದ್ದೀರೋ ನನಗಂತು ಅರ್ಥವಾಗುತ್ತಿಲ್ಲ." ಈ ಮಾತು ತಾನು ಮುಂದಡಿಯಿಡಬೇಕಾದ ಹೆಜ್ಜೆಗಳಿಗೆ ಒಂದು ಪೂರ್ವಪೀಠಿಕೆಯೆಂದು ಆತನಿಗೆ ಅನಿಸಿತು. ಆದರೆ, ಮೈಥಿಲಿಯ ಮನಸ್ಸಿನ ಹತ್ತು ಹಲವು ತುಮುಲಗಳಿಗೆ ಒಂದು ರೂಪವನ್ನು ದೇವವ್ರತನೇ ಕೊಡುತ್ತಿದ್ದಾನೆಂದು ಅವಳಿಗೆ ಅನಿಸಿದ್ದರಿಂದಲೋ ಏನೋ ಥಟ್ಟನೇ ಅವಳು ಕೂಡಾ "ಏನ್ಮಾಡೋಕಾಗುತ್ತೆ?" ಅಂದಳು. ಈ ಮಾತು ದೇವವ್ರತನಿಗೆ ಮುಂದಿನ ಅವಕಾಶವನ್ನು ಅನಂತವಾಗಿಯೇ ಕಲ್ಪಿಸಿಕೊಟ್ಟಿತು.

"ಸುಂದರವಾದ ದೇಹ. ಸುಂದರವಾದ ನಗೆಯನ್ನು; ಸುಂದರವಾದ ಬದುಕನ್ನು ನೀವು ಅನವಶ್ಯಕವಾಗಿ ಹಾಳು ಮಾಡಿಕೊಳ್ಳುತ್ತಿದ್ದೀರಿ ಎಂದು ನನಗನ್ನಿಸುತ್ತದೆ." ದೇವವ್ರತ ಒಂದೊಂದೇ ಮಾತನ್ನು ಲೆಕ್ಕವಿಟ್ಟುಕೊಂಡು ಮಾತಾಡಿದ. ಅವನು ಮಾತಾಡುವಾಗ ಮಾತಿನಲ್ಲಿ ತನ್ನ ಮಾತುಗಳು ತುಂಬಾ ಪ್ರಭಾವ ಬೀರಬಹುದೆಂಬ ನಿರೀಕ್ಷೆಯಿತ್ತು, ಮೈಥಿಲಿ ಮತ್ತೆ ಕೆಂಪಾದಳು. ಆ ಕೆಂಪು ಮತ್ತು ತನ್ನ ದೇಹವನ್ನು ಪರ ಪುರುಷನೊಬ್ಬ ಬಣ್ಣಿಸುತ್ತಿದ್ದಾನೆ ಎಂಬ ಖುಶಿಯ ಸೂಚನೆಯಾಗಿತ್ತು ಮಾತ್ರವಲ್ಲ ಅದರ ಮುಖಾಂತರ ಪ್ರಪಾತಕ್ಕೆ ಬೀಳುವುದರ ಮೊದಲ ಕಲ್ಲು ಬಿದ್ದಂತಾಯಿತು.

ಕೈಯಲ್ಲಿ ಸಿಗರೇಟು ಮತ್ತು ಗುಂಡು ಎರಡಿದ್ದರೆ ಎಲ್ಲವೂ ಸಾಧ್ಯ

-೩ -

ನಿಧಾನವಾಗಿ ದೇವವ್ರತನ ಕೈಯೂ ಕೂಡಾ ಮೈಥಿಲಿಯ ಬೆನ್ನ ಮೇಲೆ ಸಾಂತ್ವನ ಹೇಳುವ ರೀತಿಯಲ್ಲಿ ಚಲಿಸಿತು ಅಷ್ಟೆ! ಅದರಿಂದ ಮುಂದಕ್ಕೆ ಕೈಚಲಿಸಲಿಲ್ಲ. ಚಲಿಸಲಾಗದಂತೆ ಕೈಯನ್ನು ಯಾರೋ ಹಿಡಿದೆಳೆಯುತ್ತಿದ್ದಾರೆಂಬ ಭಾವನೆ ರಾಕ್ಷಸ ಮನೋಭಾವದ ದೇವವ್ರತನಿಗಾದರೆ, ಬೆನ್ನ ಹಿಂದಿನ ಬ್ರಾದ ಅಚ್ಚಿನ ಮೇಲೆ ಕೈಯಾಡಿಸಿದ ದೇವವ್ರತನ ಕೈಯು ಯಾಕೆ ನಿಂತಿತು ಎಂದು ಅರ್ಥವಾಗದ ಮೈಥಿಲಿಯು ಕೊಂಚ ತಡಬಡಿಸಿ 'ಮನೆಗೆ ಹೋಗೋಣ' ಎಂದಳು. ಅಷ್ಟೆ! ಸಂಪೂರ್ಣವಾದ ನಿಶೆಯಲ್ಲಿ ಮುಳುಗಿದ ಚಾರು ಮತ್ತೆ ಕೆಲವೇ ಕ್ಷಣದಲ್ಲಿ ಚೇತರಿಸಿಕೊಂಡ. ಹೆಂಡತಿಯಾದವಳು ಪರ ಪುರುಷನ ಸಾಂಗತ್ಯಕ್ಕೆ ಹಾತೊರೆಯತ್ತಿದ್ದಾಳೆ ಎಂದಾಗ ಉಂಟಾದ ಆತಂಕಕ್ಕೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸ ಬೇಕೆಂಬುದು ಮಾತ್ರ ಅವನ ಮುಂದಿನ ಪಂಥಾಹ್ವಾನಗಳಲ್ಲಿ ಒಂದಾಗಿತ್ತು. ಸಂಜೆ ಐದೂವರೆಗೆ ಆಫೀಸಿಂದ ಬರುವಾಗಲೇ

ಮನೆಯನ್ನು ಲಾಕ್ ಮಾಡಿ ಹೊರಗೆ ಹೋಗಿದ್ದಾಳೆಂದು ತಿಳಿದ ಅವನಿಗೆ ಏನೋ ಒಂದು ಸಂಭವಿಸಲಿದೆಯೆಂದು ಮನಸ್ಸಿಗೆ ಅನಿಸಿತ್ತು. ಮತ್ತು ಅದಕ್ಕಾಗಿಯೇ ಗಡಿಬಿಡಿಯಲ್ಲಿಯೇ ಚಾರು ಸ್ನಾನ, ಜಿನ್ ಎಲ್ಲಾ ಜೊತೆಜೊತೆಗೆ ಮುಗಿಸಿದ್ದು. ಆದರೆ, ಚಾರುಗೇನುಗೊತ್ತು – ದೇವವ್ರತ ಮೈಥಿಲಿಯರ ಕತೆ? ಆದರೂ ಅವನ ಮನಸ್ಸಿನಲ್ಲಿ ನೆಗ್ಗಿಲಮುಳ್ಳು ಚುಚ್ಚಿದ ಅನುಭವ.

ಇದೆಲ್ಲಾ ಸುಲಭವಾಗಿ ಬಗೆಹರಿಯುವ ಗಂಟಲ್ಲ, ಈ ಗಂಟನ್ನು ಬಿಚ್ಚುವುದಕ್ಕೆ ಮುಂದೊಂದು ದಿನ ಅದೇ ಗಾರ್ಡನಿನಲ್ಲಿ ಇರುವ ಕಡ್ಲೆಕಾಯಿ ಹುಡುಗ ಕೊಡುವ ಸುಳಿವುಗಳೇ ಆಧಾರವಾಗಿರುತ್ತದೆಯೆಂದು ತಿಳಿದಿದ್ದರೆ ಬಹುಶಃ ಸ್ನಾನ ಮುಗಿಸಿದವನೇ ಚಾರು ನೇರವಾಗಿ ಅದೇ ಗಾರ್ಡನಿನ ಬಲೆಯೊಳಗೆ ಮೆಲ್ಲಗೆ ನುಸುಳುತ್ತಿದ್ದನೋ ಏನೋ?

ದೇವವ್ರತ ಮತ್ತು ಮೈಥಿಲಿಯರ ನಡುವೆ ಯಾವುದೋ ಒಂದು ಹಕೀಕತ್ತು ನಡೆಯುತ್ತಿದೆಯೆಂಬುದರ ಅರಿವು ಯಾವತ್ತು ತನ್ನ ತಲೆಯೊಳಗೆ ಬಂತು ಎಂದು ಜ್ಞಾಪಿಸಿಕೊಂಡ. ಸರಿಯಾಗಿ ನೆನಪುಗಳು ಮೂಡುವುದಿಲ್ಲ, ಮೂಡಿದರೂ ಆ ನೆನಪುಗಳನ್ನು ಹೊರಚೆಲ್ಲಲು ಒಂದು ರಾಜಬೀದಿಯೇ ಇಲ್ಲ ಎಂದು ದೇವವ್ರತನಿಗೆ ಅನಿಸಿತು.

ದೇವವ್ರತ ಮತ್ತು ಮೈಥಿಲಿಯರ ನಡುವೆ ನಡೆಯುತ್ತಿರುವ ಸಂಬಂಧಗಳು ಕೇವಲ ಮನಸ್ಸಿನ ವ್ಯಭಿಚಾರಕ್ಕೆ ಸಂಬಂಧಿಸಿದ್ದೇ? ಅಥವಾ ದೇಹದ ವ್ಯಭಿಚಾರಕ್ಕೆ ಸಂಬಂಧಿಸಿದ್ದೇ ಎಂದು ತಿಳಿಯದ ಚಾರು ಕ್ಷಣಕಾಲ ಚಿಂತಿತನಾದವನು ಮತ್ತೆ ಯಾವುದೇ ರೀತಿಯ ಆತಂಕಕ್ಕೆ ಗುರಿಯಾಗದಿರಲು ಜೇಬನ್ನು ತಡಕಾಡಿ ಎಲ್ಲೋ ಇಟ್ಟ ಸಿಗರೇಟಿಗಾಗಿ ಹುಡುಕಿದ. ಸಿಗರೇಟು ಪಕ್ಕನೇ ದೊರೆಯದೆ ಮತ್ತೆ ಅಸ್ತವ್ಯಸ್ತನಾದ. ಟಿ.ವಿ.ಯ ಮೇಲಿಟ್ಟ ಸಿಗರೇಟು ಸಿಗುವಷ್ಟರಲ್ಲಿ ಮತ್ತೊಮ್ಮೆ ಹಲ್ಲಿ ಲೊಚಗುಟ್ಟಿತು. ಈ ಹಲ್ಲಿ ಯಾಕೆ ಅಷ್ಟೊಂದು ಲೊಚಗುಟ್ಟುತ್ತಿದೆಯೆಂದು ತಿಳಿಯದವನಂತೆ ಅದಕ್ಕೊಂದು ಹಿಡಿ ಶಾಪವನ್ನು ಹಾಕಿ, ಮನೆಯೊಳಗೆ ಉರಿಯುವ ಟ್ಯೂಬ್‌ಲೈಟನ್ನು ಆರಿಸಿ, ಈ ಮಂಕಾದ ಬಲ್ಬು ಮಾತ್ರ ಉರಿಯುವುದಕ್ಕೆ ಅವಕಾಶವನ್ನು ಕಲ್ಪಿಸಿದ. ಹಾಗೆಯೇ ದೊಪ್ಪನೇ ಬಂದು ತನ್ನ ಚೆಯರಲ್ಲಿ ಕೂತು ಸಿಗರೇಟನ್ನು ಹಚ್ಚಿದ. ಸಿಗರೇಟಿನ ಎರಡು ದಮ್ಮು ಸೇದಿದ ಮೇಲೆ ಚಾರು ನಿಜವಾಗಿಯೂ ತನ್ನ ಆತಂಕಕ್ಕೆ ಒಂದು ನಿರ್ದಿಷ್ಟ ರೂಪವನ್ನು ತಂದಿರಿಸಿಕೊಂಡದ್ದು. ಯಾವುದೇ ಕಾರಣದಿಂದಲೂ ತಾನು ಕಳೆದ ಕೆಲವು ದಿನಗಳಿಂದ ಮೈಥಿಲಿಯನ್ನು ಮತ್ತು ದೇವವ್ರತರನ್ನು ತುಂಬಾ ಗಂಭೀರವಾಗಿ ತನ್ನ ಸಣ್ಣ ಕಣ್ಣುಗಳಿಂದ ಗಮನಿಸುತ್ತಿದ್ದೇನೆ ಎಂಬ ಅರಿವು ಬಾರದಂತೆ ಎಚ್ಚರವಹಿಸಿಕೊಳ್ಳಬೇಕೆಂದು ಚಾರು ಭಾವಿಸುವಷ್ಟರಲ್ಲಿ ಬಾಗಿಲಿನ ಕಟ ಕಟ ಸದ್ದು ಕೇಳಿಸಿತು. ಚಾರು ಬಾಗಿಲನ್ನು

ತೆಗೆಯಬೇಕೇ ಬೇಡವೇ ಎಂದು ಎರಡು ಕ್ಷಣ ಯೋಚಿಸಿ ಅನಂತರ ಬಾಗಿಲನ್ನು ತೆರೆದ.

ಮೈಥಿಲಿಯು ತನ್ನ ಪಾಡಿಗೆ ತಾನೇ ಏನೋ ಒಂದನ್ನು ಯೋಚಿಸುವವಳಂತೆ, 'ಮನೆಯ ಪಾಡೆಂದರೆ ಅದೊಂದು ನರಕ'ವೆಂದಳು. ಆದರೆ, ಅವಳ ಲೆಕ್ಕದಲ್ಲಿ ತನ್ನ ಸಣ್ಣನೆಯ ಸ್ವರದ ಈ ಮಾತು ಚಾರುವಿನ ಕಿವಿಯ ಮೇಲೆ ಬಿತ್ತಾದರೂ ಇದಕ್ಕೆ ಉತ್ತರಿಸುವ ಕಾಲವಲ್ಲ ಎಂದು ಮತ್ತೆ ಅದೇ ಚೆಯರ್ ಮೇಲೆ ಕೂತುಕೊಂಡ.

ಈಗಷ್ಟೆ ದೇವವ್ರತನೊಂದಿಗೆ ತಾನು ಕಳೆದ ಕೆಲವು ಕ್ಷಣಗಳು ಅವಳಿಗೆ ಮನೆಯನ್ನು ನರಕವಾಗಿಸಿತೋ ಏನೋ ಎಂಬುದು ಅವಳಿಗೇ ತಿಳಿಯಲಿಲ್ಲ. ದೇವವ್ರತನ ಮೈಯ ತುಂಬಾ ಹರಡಿಕೊಂಡಿದ್ದ ಪೌಡರಿನ ಪರಿಮಳ ಅವಳ ಮೈ ತುಂಬಾ ಹರಡಿಕೊಂಡಿದ್ದು, ಮನೆಯೊಳಗಿನ ಸಿಗರೇಟಿನ ಕಮಟು ವಾಸನೆಗೆ ಕಾರಣವಾಯಿತೇನೊ? ಚಾರುವಿನದು ಮಾತ್ರ ತನ್ನ ಮೂಡಿನಿಂದ ಕೆಳಗಿಳಿಯುವ ಪ್ರಯತ್ನವಲ್ಲ, ಅದಕ್ಕಾಗಿಯೇ ತನ್ನ ಮೌನದ ಹುತ್ತವನ್ನು ಒಡೆದು ಮೇಲೆ ಬರುವ ಯಾವ ಇಷ್ಟವನ್ನು ಅವನು ವ್ಯಕ್ತಪಡಿಸಲಿಲ್ಲ. ಚಾರುವಿನ ಮನೋಭಿತ್ತಿಯ ಮೇಲೆ ಈ ಹಿಂದೆ ಕೆಲವು ಗಂಟೆಗಳ ಮೊದಲು ಜರುಗಿರಬಹುದಾದ ಸಂಗತಿಗಳ ಸೂಕ್ಷ್ಮ ಅರಿವು ಇತ್ತು. ದೇವವ್ರತನು ಹೇಳಿರುವ ಮಾತುಗಳು ರಕ್ತನಾಳಗಳಲ್ಲಿ ಪ್ರವಹಿಸುತ್ತಿರುವ ಅನುಭವದಿಂದ ಹೊರಗಡೆ ಬರಲು ಯತ್ನಿಸುವುದಕ್ಕಾಗಿ ಚಾರುವಿನ ಮುಖವನ್ನೊಮ್ಮೆ ನೋಡಿದಳು. ಚಾರುವಿನ ಮುಖವನ್ನು ಮೈಥಿಲಿ ನೋಡಿದ ತಕ್ಷಣ ಅವಳ ಮನಸ್ಸಿನಲ್ಲಿ ಬರಿಯ ಹೇವರಿಕೆಯು ಉಂಟಾಯಿತೇ ವಿನಃ ಬೇರಾವುದೂ ಅಲ್ಲ!

ಚಾರುವಿನ ಕಣ್ಣು ಒಮ್ಮೆ ಮೆತ್ತಗೆ ಮೈಥಿಲಿಯ ದೇಹದ ಮೇಲೆಲ್ಲಾ ಅಲೆದಾಡಿ ಕೊನೆಗೆ ಅವಳ ಹಣೆಯ ಮೇಲೇ ನಿಂತಿತು. ಅವನು ತನ್ನನ್ನೇ ದಿಟ್ಟಿಸುತ್ತಿದ್ದಾನೆ ಎಂಬ ಅರಿವು ಮೈಮೇಲೆ ಮೂಡುತ್ತಿದ್ದಂತೆ "ಏನು ಮತ್ತೆ ಗುಂಡು?" ಎಂದಳು. ಅವಳು ಈ ಪ್ರಶ್ನೆಯನ್ನು ಕೇಳುತ್ತಿರುವುದು ತನ್ನನ್ನು ತಾನೇ ರಕ್ಷಿಸಿಕೊಳ್ಳುವುದಕ್ಕಾಗಿ ಮತ್ತು ಹೊಸ ಧಾಳಿಯನ್ನು ಮಾಡುವ ಮುಖಾಂತರವೇ ಚಾರುವನ್ನು ಒಂದು ಹಿಡಿತಕ್ಕೆ ತರಲೆತ್ನಿಸುವುದಕ್ಕಾಗಿ. ಚಾರು ವಾಸ್ತವವಾಗಿ ಯಾತನೆಯ ಮುಖಚಹರೆ ಮಾಡಿ "ಹೌದು" ಅಂದ. ಹೌದು ಅಂದಾಗ ಅವನಲ್ಲಿ ಮೈಥಿಲಿಯ ಬಗೆಗಿನ ಎಲ್ಲಾ ಸಂಗತಿಗಳು ಅರಿವಿತ್ತು ಅನ್ನುವುದರ ಬಗ್ಗೆ ಯಾವ ಸೂಚನೆಯೂ ಬಾರದಂತೆ ಎಚ್ಚರವಹಿಸಿದ. ಮೈಥಿಲಿಯ ಮನದಲ್ಲಿ ಮೂಡಿರುವ ಭಾವನೆಗಳನ್ನು ಓದಲಾಗದಷ್ಟು ದಡ್ಡ ಬುದ್ಧಿ ಚಾರುವಿನದಾಗಿದ್ದರೆ ಯಾವಾಗಲೋ ಮೈಥಿಲಿಯ ಕತೆಯು ಬೇರೆಯಾಗಿರುತ್ತಿತ್ತು ಮತ್ತು ಅದರಿಂದ ಚಾರುವಿಗೆ ಬೇರೆ ಅನುಕೂಲಗಳು ಆಗುತ್ತಿತ್ತೋ ಏನೋ? ಒಟ್ಟಿನಲ್ಲಿ ಆ ಸಂದರ್ಭದಲ್ಲಿ ಮಾತ್ರ ಮೈಥಿಲಿಯ ಹೊಸವರಸೆಯನ್ನು ಯುದ್ಧ ಹೂಡುವ ತಂತ್ರವೆಂದು ಬಗೆದ ಚಾರು ಸುಮ್ಮನುಳಿದ.

ಮೌನದಲ್ಲಿ ಉಳಿದ ಚಾರುವಿನ ಪ್ರತಿಕ್ರಿಯೆಯನ್ನು ಕಂಡು ಮೈಥಿಲಿ ಕೆರಳಿದಳು. ತನ್ನ ಸಾಮ್ರಾಜ್ಯ ಮತ್ತು ಅಧಿಪತ್ಯದ ಒಂದೊಂದು ಕಲ್ಲನ್ನು ತೆಗೆದಾಗ ಉರುಳುತ್ತಿರುವ ಕೋಟೆಯನ್ನು ಉಳಿಸಲಾಗದ ಅಸಹಾಯಕತೆ ಮತ್ತು ವಿಷಣ್ಣತೆಯೇ ವಾಸ್ತವವಾಗಿ ಮೈಥಿಲಿಯ ಕೆರಳುವಿಕೆಗೆ ಕಾರಣವಾಯಿತು. ಆದರೆ, ಚಾರು ತಣ್ಣನೆಯ ರೀತಿಯಲ್ಲಿ "ಹೌದು" ಎಂದು ತುಂಬಾ ತಡವಾಗಿಯೇ ಹೇಳಿದ. "ಕೈಯಲ್ಲಿ ಸಿಗರೇಟು ಮತ್ತು ಗುಂಡು ಎರಡಿದ್ದರೆ ಯಾವುದನ್ನಾದರೂ ಸಾಧಿಸಬಹುದು" ಎಂದು ಹೇಳುತ್ತಲೇ ಮೈಥಿಲಿಯ ಕಡೆಗೂ ನೋಡದೆ ಗುಂಡು ಹಾಕಲು ಮುಂದುವರಿದ. ಹೀಗೆ ಮುಂದುವರಿದ ಜೀವನದ ಆತಂಕವನ್ನು ಮರೆಯುವ ಕ್ರಮವು ಮತ್ತೊಂದಿನ ಅಯಾಚಿತವಾಗಿ ಬಿಡುವುದರ ಮೂಲಕವೇ ಗೆಲ್ಲಬಹುದು ಎಂದು ಚಾರುವಿಗೂ ತಿಳಿದಿರಲಿಲ್ಲ. ಮೈಥಿಲಿಗೆ ತನ್ನ ಗಂಡನ ಕುಡಿತ ಮತ್ತು ಸಿಗರೇಟು ಇನ್ನಷ್ಟು ಅವನಿಂದ ದೂರಾಗಲು ಪ್ರೇರೇಪಿಸಿದಂತಿತ್ತು. ದೇವವ್ರತನ ಜೊತೆಯಲ್ಲಿ ತಿಂದು ಬಂದ ಕಡ್ಲೆಕಾಯಿ, ಅವನು ತನ್ನ ಬೆನ್ನು ಸವರಿದ್ದು ಮತ್ತು ತನ್ನ ಬೆರಳುಗಳ ಮೇಲೆ ಅವನು ಕೈಯಾಡಿಸಿದ್ದು ಇತ್ಯಾದಿಯೆಲ್ಲವು ಅವಳ ಕಿರುಚಾಟದ ಮೊದಲಹಂತವೆಂಬಂತೆ ರೂಪುಗೊಂಡಿದ್ದವು. ಚಾರುವಿನ ಅತಿಯೆನ್ನಿಸುವಷ್ಟರ ಮಟ್ಟಿಗಿನ ತಣ್ಣಗಿನ ಸ್ವರವು ನಿಜವಾಗಿಯೂ ಮೈಥಿಲಿಯನ್ನು ಮತ್ತಷ್ಟು ಹಣ್ಣು ಮಾಡಿದ್ದಂತೂ ನಿಜ.

"ಯಾವಾಗ ನೋಡಿದರೂ ಕುಡಿದು ಬಿದ್ದಿರುವವರಿಗೆ ಯಾವತ್ತು ಸಂಸಾರದಲ್ಲಿ ಏನಾಗುತ್ತಿದೆಯೆಂಬುದರ ಅರಿವಿರೋಲ್ಲ" ಎಂದವಳೇ ಮೈಥಿಲಿ ಅನವಶ್ಯಕವೆಂಬಂತೆ ಅಡುಗೆ ಮನೆಯೊಳಗೆ ದುಡುದುಡನೆ ಓಡಿದಳು. ಆದರೆ, ಚಾರು ಮಾತ್ರ ತನ್ನ ಮೌನ ಮುರಿಯದೇ ಹಾಗೇ ಕೂತಿದ್ದ. ಮುಂದಿನ ಚದುರಂಗದಾಟದಲ್ಲಿ ಹೆಜ್ಜೆ ಯಾವುದು ಎಂದು ಲೆಕ್ಕ ಹಾಕುತ್ತಾ!

ಆದರೆ, ಒಳಗಡೆಯಲ್ಲಿ ಸೀರೆ ಬದಲಾಯಿಸಿ ನೈಟಿ ಹಾಕಿಕೊಳ್ಳುವಾಗ ಮೈಥಿಲಿಯ ಮನದಲ್ಲಿಯೂ ಒಂದು ಲೆಕ್ಕಾಚಾರ ನೆಡಯುತ್ತಿತ್ತು.

ಚದುರಂಗದಲ್ಲಿ ಮುಂದಿನ ಹೆಜ್ಜೆ ಯಾವುದು? ದೇವವ್ರತನ ಸಣ್ಣ ವಿವರ ತಿಳಿದದ್ದು ಮೊದಲಿಗೆ ಚಾರುವಿಗೆ. ಆದರೂ ಅದರಲ್ಲಿ ವಿಶೇಷ ಕುತೂಹಲವನ್ನೇನೂ ಇಟ್ಟುಕೊಂಡಿರಲಿಲ್ಲ. ವಿಶೇಷ ಕುತೂಹಲವನ್ನು ಇಟ್ಟುಕೊಳ್ಳಬೇಕೆಂಬ ಆಸೆಯು ಯಾವತ್ತೂ ಚಾರುವಿಗೆ ಬಂದಿರಲಿಲ್ಲ. ಬಾಲ್ಯದಲ್ಲಿ ಅಪ್ಪ ಹೇಳಿಕೊಟ್ಟ ದೊಡ್ಡ ಮಂತ್ರ ಶಕ್ತಿಯೆಂದರೆ ಅದೇ. "ಅನಗತ್ಯವಾಗಿ ಇನ್ನೊಬ್ಬರ ಬಗೆಗೆ ನಾವಿಟ್ಟುಕೊಳ್ಳುವ ಕುತೂಹಲವು ನಮ್ಮನ್ನು ಮತ್ತೆ ಮತ್ತೆ ಕುಗ್ಗುವಂತೆ ಮಾಡುತ್ತದೆ. ನಮ್ಮ ಮಿತಿಯೊಳಗೆ ನಾವು ಬದುಕುವಂತಿದ್ದರೆ ಸಾಕು." ಈ ಮಾತನ್ನು ದೊಡ್ಡವನಾದ ಮೇಲೂ ಜತನವಾಗಿ ಕಾಪಾಡಿಕೊಂಡು ಬಂದ ಚಾರುವಿನ ಮನದ ಮೂಲೆಯಲ್ಲಿ ಅಂಟಿಕೊಂಟೇ ಇದ್ದ ದೇವವ್ರತನ ಬಗೆಗಿನ ಕುತೂಹಲ ಅಲ್ಲಿಗೆ ಆರಿಹೋಗಿ ಎರಡು

ವರ್ಷಗಳಾಗುತ್ತಾ ಬಂತು. ಆದರೆ, ಮೈಥಿಲಿಯ ದೈನಂದಿನ ವರ್ತನೆಗಳು ಬದಲಾಗುತ್ತಾ ಬಂದಂತೆ ಚಾರುಗೆ ಮೈಥಿಲಿ ಮತ್ತು ದೇವವ್ರತರ ನಡುವಣ ಸಂಬಂಧದ ಸ್ವರೂಪ ಯಾವ ಬಗೆಯದು ಎಂದು ಅರ್ಥವಾಗತೊಡಗಿತು.

ಈ ಘಟನೆ ನಡೆಯಬೇಕಾದ್ದಕ್ಕಿಂತ ಸರಿಯಾಗಿ ಎರಡು ವರ್ಷ ಮೊದಲು ಮನೆ ಸಿಕ್ಕಿತು ಎಂದಾಗಲೇ ಆತ್ಮೀಯ ಮಿತ್ರ ಹೇಳಿದ ಮಾತು ಚಾರು ಯಾವತ್ತೂ ಮರೆಯೋಲ್ಲ. "ಅಲ್ಲಿಗೆ ಹೋದರೆ ನಿನ್ನ ಕತೆ ಮುಗಿಯಿತು. ಇಲ್ಲಿ ನಾನಿದ್ದೇನೆ ಜೊತೆಗೆ ಮತ್ತೆ ನೀನು ಚೇತರಿಸಿಕೊಳ್ಳೊಲ್ಲ." ಆಗಲೂ ಇದೇ ತರಹ ಎಡಗಣ್ಣು ಅದುರಿತ್ತು ಮತ್ತು ಹಲ್ಲಿ ಲೊಚಗುಟ್ಟಿತ್ತು. ಮೈಥಿಲಿಯ ಸಂಭ್ರಮದಲ್ಲಿ ಪ್ಯಾಕ್ ಮಾಡುವ ಗಡಿಬಿಡಿಯಲ್ಲಿ ದೊಡ್ಡ ಮಣ್ಣಿನ ಹಣತೆಯೂ ಪುಡಿ ಪುಡಿಯಾಗಿ ನೆಲಕ್ಕೆ ಬಿದ್ದಿತ್ತು. ಮೈಥಿಲಿಯು ಅದಕ್ಕೆ ಅವಸರಿಸದೆ "ಹಣತೆ ಹೋದರೆ ಹೋಗಲಿ, ಅದಕ್ಕೇನು ಹೆಚ್ಚು ರೇಟಿಲ್ಲ" ಎಂದಿದ್ದಳು. ಆದರೆ, ಚಾರು ಮಾತ್ರ ಆ ಕ್ಷಣಕ್ಕೆ ಅನಿಸಿದ್ದನ್ನು ಬಾಯಿಯಲ್ಲಿ ಮುಚ್ಚಿಟ್ಟುಕೊಂಡ. ಹಣತೆ ಬಿದ್ದು ಪುಡಿಯಾದರೆ ಸರಿ ಮಾಡಬಹುದು. ಆದರೆ, ದೀಪಾವಳಿಯಲ್ಲಿ ಮನೆಗೆ ಕತ್ತಲು ತುಂಬಿಕೋಬಾರದು. ಮೈಥಿಲಿಯು ಒಡೆದು ಹಾಕಿದ ಮಣ್ಣಿನ ಹಣತೆ ಮತ್ತೆ ಅವಳ ಬದುಕಲ್ಲಿ ಕತ್ತಲನ್ನು ಬರಮಾಡಿಕೊಳ್ಳುತ್ತದೆಯೆಂದು ಯಾರಿಗೆ ಗೊತ್ತಿತ್ತು?

ಮನೆಯನ್ನು ಶಿಫ್ಟ್ ಮಾಡುವ ಗಡಿಬಿಡಿಯಲ್ಲಿ ಈ ಸಣ್ಣ ಘಟನೆಯನ್ನು ನೆನಪಿಟ್ಟುಕೊಂಡು ಕೂರುವ ವ್ಯವಧಾನ ಮೈಥಿಲಿಗೆ ಇದ್ದಿರಲಿಲ್ಲ ಮತ್ತು ಮನೆಯಿಂದ ಹೊರಡುವಾಗಲೂ ಅಷ್ಟೇ; ಹೊಸಿಲು ದಾಟುವ ಮುಂಚೆಯೇ ದಾಸಯ್ಯ ಬಂದು ಅಡ್ಡನಿಂತು "ಗಳಿಗೆ ಸರಿಯಿಲ್ಲ ತಾಯಿ" ಎಂದು ಹೇಳುತ್ತಾ ಅಯ್ಯೋ ಪಾಪ ಅನ್ನುವಂತೆ ಚಾರುವನ್ನು ನೋಡಿದ ಮೈಥಿಲಿಯು ಉತ್ಸಾಹದಲ್ಲಿ ಇದ್ಯಾವುದನ್ನೂ ಗಮನಿಸಿರಲಿಲ್ಲ. ಮತ್ತು ಮೈಥಿಲಿಯು ಮನೆ ಬಿಟ್ಟು ಹೊಸ ಮನೆಗೆ ಹೊರಡುವ ತರಾತುರಿಯಲ್ಲಿ ದಾಸಯ್ಯನಿಗೆ "ಹೋಗಯ್ಯ ಆಚೆ; ಮನೆ ಖಾಲಿ ಮಾಡಿ; ಹೊರಡ್ತಿದ್ದೀವಿ" ಅಂದಿದ್ದು ಯಾಕೋ ಚಾರುಗೆ ಶಕುನ ಸರಿಯಿಲ್ಲವೆಂದೆನ್ನಿಸಿತ್ತು. ಆದರೆ, ದಾಸಯ್ಯ ಮಾತ್ರ ತುಂಬಾ ಖಚಿತತೆಯಿಂದ ಮೈಥಿಲಿಯ ಮುಖವನ್ನು ನೋಡಿ "ಯಾವತ್ತೂ ನಿಮ್ಮ ಹಣೇ ಬರಹ ಇದೇ ತಾಯಿ" ಅಂದ. ಆ ಗಳಿಗೆಯಲ್ಲಿ ಮೈಥಿಲಿ ಮತ್ತು ಚಾರುವಿಗೆ ದಾಸಯ್ಯನ ಈ ಮಾತು ಯಾವತ್ತಾದರೂ ಒಂದು ದಿನ ಖಚಿತ ಭಾಷ್ಯವಾಗುತ್ತದೆ ಎಂದೆನ್ನಿಸಿರಲಿಲ್ಲ. ಹಳೆಯ ಬಾಡಿಗೆಯ ಮನೆಯಿಂದ ಹೊಸದೊಂದು ಮನೆಗೆ ಬದಲಾಯಿಸಹೊರಟಾಗ ಎದುರಾದ ಆಕಸ್ಮಿಕ ಘಟನೆಗಳೇ ಜೀವನದಲ್ಲಿನ ಮಹತ್ವದ ತೀರ್ಮಾನವಾಗಿದೆಯೆಂದು ಮೈಥಿಲಿಯ ಅರಿವಿಗೆ ಬಂದಿದ್ದರೆ ಅದು ಬೇರೆ ತರಾನೇ ಆಗಿರುತ್ತಿತ್ತು.

ಬಾಗಿಲ ಚೌಕಟ್ಟಿಗೆ ತಲೆ ಬಡಿಯಿತು

– ೪–

ಚಾರು ನೆನಪಿಸಿಕೊಂಡಿದ್ದನ್ನು ಮತ್ತೆ ಮತ್ತೆ ಕೆದಕಿ ನೋಡಿಕೊಂಡ. ಸರಿಯಾಗಿ ಇಂದಿನ ಶನಿವಾರಕ್ಕೂ ಮನೆ ಬದಲಾಯಿಸಿದ ದಿನ ಶನಿವಾರಕ್ಕೂ ಪರಸ್ಪರ ಯಾವುದೋ ಒಂದು ರೀತಿಯ ಸಂಬಂಧವಿರುವಂತೆ ಅನಿಸತೊಡಗಿತು. ಶನಿವಾರ ಸಂಜೆಯೆನ್ನುವುದು ಯಾವತ್ತೂ ಕಪ್ಪಾಗಿಯೇ ಉಳಿಯುವುದೇಕೆಂದು ತಿಳಿಯದೆ ಚಾರು ಮನಸ್ಸಿನಲ್ಲಿಯೇ ಮತ್ತೆ ಆ ದಾಸಯ್ಯನನ್ನು ಧ್ಯಾನಿಸತೊಡಗಿದ. ಅದೊಂದು ಆತಂಕದ ಮತ್ತು ಭಯಾನಕ ಘಳಿಗೆಯೆನ್ನುವುದು ನಿಜವೆನಿಸಿತು. ತನ್ನ ಅದ್ಭುತವಾದ ಕ್ರಿಯಾಶೀಲತೆ ಮತ್ತು ಚಟುವಟಿಕೆಯನ್ನು ನಿಧಾನವಾಗಿ ಹತ್ತಿಕ್ಕಿಕೊಳ್ಳಲು ಮೈಥಿಲಿ ನಡೆಸಿದ ಅನೂಹ್ಯವಾದ ಚಟುವಟಿಕೆಗಳು ಯಾವುವು ಎಂಬುದು ತಿಳಿದರೂ ಅದರ ಬಗೆಗೆ ಅಮಾಯಕನಂತೆ ನಟಿಸುವುದು ಕಷ್ಟದ ಕೆಲಸವೆಂದು ಅನಿಸಿತು.

ಮತ್ತೊಂದು ಪೆಗ್ ಹಾಕಿದ ಮೇಲೆ ಚಾರು ಯಾವುದಾದರೂ ಒಂದು ರೀತಿಯ ನಿಶ್ಚಯಕ್ಕೆ ಬರಲೇಬೇಕೆಂದು ನಿರ್ಧರಿಸಿದ.

ಮೈಥಿಲಿಯ ಮನಸ್ಸಿನ ಮೂಲೆಯಲ್ಲಿ ಚಿಗುರಿದ ಪುಟ್ಟ ಬಯಕೆಯ ಸಸಿಯು ಶನಿವಾರದ ಸಂಜೆ ಗಾರ್ಡನಿನಲ್ಲಿ ದೇವವ್ರತ ಮಾತಾಡದೇ ಹೋಗಿದ್ದಿದ್ದರೆ ಅಲ್ಲೆ ಕಮರಿ ಹೋಗುತ್ತಿತ್ತೊ ಏನೋ? ದೇವವ್ರತ ಕೈಬೆರಳಲ್ಲಿ ಕೈಬೆರಳುಗಳನ್ನು ಒಂದೊಂದಾಗಿ ಜೋಡಿಸುತ್ತಾ ಹೆಣೆದಿರುವುದರ ಹಿನ್ನೆಲೆಯು ನಿಜವಾಗಿ ಚಾರುವಿಗೆ ಗೊತ್ತಿಲ್ಲವೆಂದೇ ಭಾವಿಸಿದ್ದಳು. ಹಾಗೆಯೇ ಭಾವಿಸಿಕೊಳ್ಳುವುದು ಅವಳಿಗೆ ತುಂಬಾ ಅನುಕೂಲಕರವಾಗಿತ್ತು ಕೂಡಾ. ಆದರೆ, ಹೀಗೆ ಭಾವಿಸಿಕೊಂಡದ್ದು ತಾನು ಮಾಡಿದ ಒಂದು ದೊಡ್ಡ ತಪ್ಪು ಎಂದು ತಿಳಿಯುವಷ್ಟರಲ್ಲಿ ಬೆಳಕು ಹರಿದಾಗಿತ್ತು. ಅಲ್ಲದೆ ಮೈಥಿಲಿಯ ಜೀವ ಮತ್ತು ಮನಸ್ಸು ಎರಡೂ ಒಣಬಿಸಿಲಲ್ಲಿ ಹರಾಜಿಗೆ ಬಿದ್ದಿತ್ತು.

ಮನೆಗೆ ಬಂದ ಹೊಸದರಲ್ಲಿಯೇ ನಿಜವಾಗಿಯೂ ಮೈಥಿಲಿಯು ಮನೆಯೊಳಗೆ ಕಾಲಿಡುವ ಸಂಭ್ರಮದಲ್ಲಿ ಹೊಸ್ತಿಲನ್ನು ಎಡವಿಕೊಂಡಿದ್ದಳು ಮತ್ತು ಬಾಗಿಲ ಚೌಕಟ್ಟಿಗೆ ತಲೆಯನ್ನು ಹೊಡೆದುಕೊಂಡಿದ್ದಳು. ಈ ಎರಡೂ ಸಂಗತಿಗಳನ್ನು ತೀರಾ ಸಾಮಾನ್ಯವಾದ ಸಂಗತಿಯೆಂದು ಭಾವಿಸಿದ ಮೈಥಿಲಿಗೂ ಈ ಸಂಗತಿಗಳು ಸಾಮಾನ್ಯವಾದುದಲ್ಲ ಎಂದು ಭಾವಿಸಿದ ಚಾರುವಿಗೂ ಇರುವ ವ್ಯತ್ಯಾಸವೇ ಅಲ್ಲಿ. ಬದುಕನ್ನು ಒಂದು ರಂಗೋಲಿಯೆಂದು ಭಾವಿಸಲು ಶುರುಮಾಡಿದ್ದು ಕೂಡಾ ಅಲ್ಲಿಯೇ. ಬದುಕೆಂದರೆ ಒಂದು ಆಟದ ಬಯಲು ಎಂದು ಭಾವಿಸಿದ ಮೈಥಿಲಿ ಈ ಆಟಕ್ಕೆ ಮೊದಲಡಿಯಿಟ್ಟದ್ದು–ಹೊಸ್ತಿಲಲ್ಲಿ ಎಡವುದರ ಮೂಲಕವೇ. ಆದರೆ, ಎಡವಿದ ಮೈಥಿಲಿಯನ್ನು ನೋಡಿದ ಚಾರು ತನ್ನ ಮನಸ್ಸಿನಲ್ಲಿಯೇ ಅಂದುಕೊಂಡ– "ಇದು – ಈ ಮನೆ ಸುಲಭವಲ್ಲ, ದುಃಸ್ವಪ್ನಗಳ ಮೊದಲ ಕಂತು ಪ್ರಾರಂಭವಾಗಿದೆ."

ಮನೆಯೊಳಗೆ ಮತ್ತು ಹೊರಗಡೆ ಓಡಾಡಿದವಳು "ಇಷ್ಟು ದೊಡ್ಡ ಮನೆಯಲ್ಲಿ ನಮ್ಮ ಹಳೆಯ ಚೆಯರ್‌ಗಳು ಸಾಕಾಗೊಲ್ಲ" ಎಂದು ಮೊದಲ ಅಪಸ್ವರವನ್ನು ಎತ್ತಿದ್ದಕ್ಕೂ, ಮನೆಯಲ್ಲಿ ಮುಂದೆಯೂ ನಡೆಯಲಿರುವ ಅಪಸ್ವರಕ್ಕೂ ಸಂಬಂಧವಿರಬಹುದು ಎಂದು ಆಗ ಚಾರು ಭಾವಿಸಿಕೊಂಡಿರಲಿಲ್ಲ. "ಪಕ್ಕದ ಮನೆಯಿಂದ ಕಸಬರಿಕೆಯನ್ನು ತಗೊಂಡು ಬಂದು ಮೊದಲು ಗುಡಿಸುತ್ತೇನೆ. ಆಮೇಲೆ ಉಳಿದೆಲ್ಲಾ ಸಾಮಾನುಗಳ ಕಟ್ಟು ಬಿಚ್ಚೋಣ" ಎಂದು ಹೇಳಿದ ಮೈಥಿಲಿಯು ಕಸಬರಿಕೆಯ ಜೊತೆಗೆ ದೇವವ್ರತನನ್ನು ಕರೆದು ತಂದಿದ್ದಳು. ಮತ್ತು ಇಬ್ಬರೂ ಸೇರಿ ಮುಂದೊಂದು ದಿನ ತನ್ನನ್ನು ಗುಡಿಸಿ ಮೂಲೆ ಸೇರಿಸಬಹುದು ಎಂಬ ಕಲ್ಪನೆಯು ಕೂಡಾ ಚಾರುವಿಗೆ ಇದ್ದಿರಲಿಲ್ಲ. ಶನಿವಾರದ ಸಂಜೆಯೇ ಶುರುವಾದ ಹಗಲು ಕತ್ತಲೆಯಾಟ ಇಲ್ಲಿಯತನಕ ಮುಂದುವರಿದೀತು ಎಂಬ ಕೊಂಚ ಸುಳಿವು ಸಿಕ್ಕಿದ್ದರೆ ಕೂಡಾ ಅವನು ಹೀಗಿರುತ್ತಿರಲಿಲ್ಲ. ಚಾರು ಎಡವಿದ್ದೋ, ಮೈಥಿಲಿ ಎಡವಿದ್ದೋ ಅಥವಾ ಮೈಯ ಅಂಗಾಂಗವಿಡೀ ಬಯಕೆ ಇಟ್ಟುಕೊಂಡು ದೇವೇಂದ್ರನೆಂದು ಭಾವಿಸಿಕೊಂಡಿರುವ ದೇವವ್ರತ ಎಡವಿದ್ದೋ ಅಂತೂ ಎಡವಿದ್ದು

ನಿಜವೆಂದು ಭಾವಿಸಿದ್ದ ಚಾರು ಜಿನ್ ಕುಡಿದವನು ಮತ್ತೆ ಮತ್ತೆ ಕುಡಿಯುತ್ತಲೇ ಹೋದ. ಜಿನ್‌ನ ಕುಡಿತ – ಅದು ದೇವವ್ರತನ ಮೇಲಿನ ಸಿಟ್ಟು; ಮೈಥಿಲಿಯ ಒಡನಾಟದ ಬಗೆಗಿನ ಕೆಚ್ಚು ಎರಡನ್ನೂ ಹೆಚ್ಚು ಜ್ವಲಂತಗೊಳಿಸಲು ಅನುಕೂಲವನ್ನು ಕಲ್ಪಿಸಿದವು. ನೀರು; ಅದಕ್ಕೊಂದಿಷ್ಟು ಜಿನ್ ಮತ್ತು ಪಕ್ಕದ ತಟ್ಟೆಯಲ್ಲಿ ಒಂದಿಷ್ಟು ಈರುಳ್ಳಿ ತುಂಡುಗಳು ಇವೇ ಸಾಮಗ್ರಿಗಳ ಜೊತೆಗೆ ಪೂರ್ಣವಾಗಿ ದಿನಕಳೆಯ ಬಲ್ಲೆನೆಂಬ ವಿಶ್ವಾಸವು ಚಾರುವಿನ ಒಡಲಾಳದಿಂದ ಮೂಡಿದ್ದು ಬೇರೆ ಬೇರೆ ಕಾರಣಕ್ಕೆ. ತಾನು ಕುಡಿದಂತೆಲ್ಲಾ ಮೈಥಿಲಿಯ ಸಿಟ್ಟು ಕಾಲ ಬುಡದಿಂದ ನೆತ್ತಿಯವರೆಗೆ ಏರುವುದನ್ನು ನೋಡಿಯೂ ಚಾರು ಸುಮ್ಮನಿದ್ದ. ಮೈಥಿಲಿಯ ಆಸೆ ಮತ್ತು ಸಂಭ್ರಮದ ದೊಡ್ಡ ಪ್ರಪಂಚಕ್ಕೂ – ಚಾರುವಿನ ದಿನನಿತ್ಯದ ಸಣ್ಣಪುಟ್ಟ ಕರ್ಮಗಳಿಗೂ ಯಾವ ಸಂಬಂಧವೂ ಇಲ್ಲದೇ ಹೋಗಿದ್ದು ಮೈಥಿಲಿಗಂತೂ ತಿಳಿಯಲಿಲ್ಲ. ಅದು ತಿಳಿಯುವ ಸಾಧ್ಯತೆಯೂ ಇರಲಿಲ್ಲ. ಮೈಥಿಲಿಯ ಮೈಯ ತುಂಬಾ ಕನಸುಗಳನ್ನು ಬೇಕು ಬೇಕಾದಂತೆ ತುಂಬಿದ ದೇವವ್ರತ ತನ್ನ ಹಾದಿಯನ್ನು ಸುಲಭಗೊಳಿಸುವ ದಾರಿಯನ್ನು ಹುಡುಕಿದ. ಆದರೆ, ಚಾರುವಿನ ಒಡಲಲ್ಲಿ ತುಂಬಿರುವ ಸಿಟ್ಟು ಮಾತ್ರ ಮುಂದೊಂದು ದಿನದ ಭೂಕಂಪವೆಂದು ತಿಳಿದಿದ್ದರೆ ಅಷ್ಟೊಂದು ಸುಲಭವಾಗಿ ಮೈಥಿಲಿಯು ಕೂಡಾ ತನ್ನ ಮೈ ಮೇಲಿನ ಆಸೆಗಳಿಗೆ ಇದ್ದ ಕಡಿವಾಣ ಕಳಚುತ್ತಿರಲಿಲ್ಲ. ಲಂಗುಲಗಾಮು ಇಲ್ಲದ ಆಸೆಗಳ ಕುದುರೆಯನ್ನು ಬೇಕು ಬೇಕಾದಂತೆ ಹರಿಯಬಿಡುತ್ತಿರಲಿಲ್ಲ.

ಹೊಸದಾಗಿ ತಂದ ನೈಟಿಯನ್ನು ತೋರಿಸಲು ದೇವವ್ರತನ ಮನೆಗೋಡುವ ಮೂಲಕ ಮೈಥಿಲಿಯು ಅವನ ಬಗೆಗೆ ತುಂಬಾ ಕಾಳಜಿಯನ್ನು ವಹಿಸತೊಡಗಿದ್ದರ ಸೂಚನೆಗಳು ಚಾರುವಿಗೆ ಬಹಳ ಬೇಗನೆ ಅರ್ಥವಾಗತೊಡಗಿದವು. ಹೊಸದಾಗಿ ಮಾಡಿಸಿದ ಕರಿಮಣಿ ಸರವನ್ನು ನೋಡುವ ನೆಪದಲ್ಲಿ ಮೈಥಿಲಿಯ ಎದೆಯ ಮೇಲೆ ಮೆತ್ತಗೆ ಕೈಯಾಡಿಸಿದ ದೇವವ್ರತನ ವಾಂಛೆಗಳು ಅರ್ಥವಾಗದಷ್ಟು ಎಳೆಯ ಬಾಲೆ ಮೈಥಿಲಿಯೂ ಅಲ್ಲ. ಮೂರನೆಯವರ ಕಣ್ಣಿಗೆ ಬೀಳದಂತೆ ಆದರೆ, ತಮ್ಮಿಬ್ಬರಿಗೆ ಯಾವುದೇ ರೀತಿಯಲ್ಲೂ ಅಡ್ಡಿಯಾಗದಂತೆ ನೋಡಿಕೊಳ್ಳುವುದೇ ದೇವವ್ರತನ ಮತ್ತು ಮೈಥಿಲಿಯರ ಹೋರಾಟವಾಗಿತ್ತು. ಅರಿವಿಗೆ ಬಂದುದನ್ನು ಮೊದಲೇ ಸೂಚಿಸಿಬಿಟ್ಟರೆ ಬಲುಬೇಗ ಮೈಥಿಲಿ ಮತ್ತು ದೇವವ್ರತರು ಎಚ್ಚರಗೊಂಡು ಬಿಡುತ್ತಾರೆಂಬುದು ತಿಳಿಯದಷ್ಟು ಮೂರ್ಖನಲ್ಲ – ಚಾರು.

ಚಾರು ತನ್ನ ಮತ್ತು ಮೈಥಿಲಿಯ ಮದುವೆಯ ಸಂದರ್ಭವನ್ನು ನೆನೆಪಿಸಿಕೊಂಡಃ ಮೈಥಿಲಿಯನ್ನು ಮೊತ್ತ ಮೊದಲು ಭೇಟಿಯಾದುದೇ ರೋಸಿಚಿಕ್ಕಮ್ಮನ ಬರ್ತ್‌ಡೇ ಪಾರ್ಟಿಯಲ್ಲಿ . ರೋಸಿ ಚಿಕ್ಕಮ್ಮನೇ ಮೈಥಿಲಿಯನ್ನು ಪರಿಚಯಿಸಿದ್ದು. ಆಗಷ್ಟೇ ಕೆಲಸಕ್ಕೆ ಸೇರಿದ್ದ ಮೈಥಿಲಿಯ ಬಾಯಿ ತುಂಬಾ ನಗೆ! ತುಂಬಾ ಧೈರ್ಯವಂತೆ ಎಂದು

ತೋರಿಸಿಕೊಳ್ಳುವ ಸ್ವಭಾವ. ತುಮಕೂರಿನ ಲೋಕೋಪಯೋಗಿ ಇಲಾಖೆಯ ಶಂಕರ ನಾರಾಯಣಯ್ಯನ ಒಬ್ಬಳೇ ಮಗಳು. ಉಳಿದವರೆಲ್ಲಾ ಗಂಡುಮಕ್ಕಳು. ತಂದೆ–ತಾಯಿಯರ ಮುದ್ದು ಅವಳ ಕೆನ್ನೆಯಲ್ಲಿ ಅರಳಿದಂತಿತ್ತು. ಚಿಕ್ಕಮ್ಮ ಪರಿಚಯಿಸಿದಾಗ ಮೈಥಿಲಿಯು ಅಪ್ರತಿಮ ಸುಂದರಿಯೆಂದು ಅನಿಸದಿದ್ದರೂ ತನಗೆ ಆಗಬಹುದಾದ ಹುಡುಗಿಯೆಂದು ಅನಿಸಿತ್ತು. ಅವಳ ನಡೆನುಡಿ ಹಿಡಿಸಿತ್ತು. ರೋಸಿಚಿಕ್ಕಮ್ಮನ ಮಧ್ಯಸ್ಥಿಕೆಯಿಂದ ಮದುವೆಯಾಯಿತು. ಮದುವೆಯ ನಿಶ್ಚಿತಾರ್ಥದ ದಿನ ಅವಳ ತಂದೆ ವರದಕ್ಷಿಣೆಯ ಮಾತು ಎತ್ತಿದಾಗ ತಾನೇ ಅಲ್ಲವೇ ಖಡಾಖಂಡಿತವಾಗಿ ನಿರಾಕರಿಸಿದ್ದು. ತನ್ನ ಎಣ್ಣೆಗಪ್ಪು ಮೈಬಣ್ಣ : ಕೊಂಚ ಉಬ್ಬು ಹಲ್ಲು: ಚಪ್ಪಟೆಯೆನಿಸಬಹುದಾದ ಮೂಗು – ಎಲ್ಲವನ್ನು ಮೈಥಿಲಿಯೇ ಒಪ್ಪಿಕೊಂಡದ್ದು ತನಗೆ ಆಶ್ಚರ್ಯವೆನಿಸಿತ್ತು. ಎರಡನೆಯ ಭೇಟಿಯಲ್ಲಿಯೇ ಚಾರು ಹೇಳಿದ್ದನ್ನು ಮತ್ತೊಮ್ಮೆ ನೆನಪಿಸಿಕೊಂಡ: " ನನಗೆ ಹೆಚ್ಚು ವರಮಾನವಿಲ್ಲ. ವಾರಕ್ಕೊಮ್ಮೆ ಕುಡೀತೇನೆ. ಒಂದು ಕಡೆಯೇ ಇರಲಾರೆ. ಎಲ್ಲಕ್ಕಿಂತ ಹೆಚ್ಚು ನಾನು ನನ್ನ ಪಾಡಿಗೆ ಇರುತ್ತೇನೆ." ಮೈಥಿಲಿ "ಅದಕ್ಕೇ ನಾನು ನಿಮ್ಮನ್ನು ಇಷ್ಟಪಟ್ಟೆ" ಅಂದಿದ್ದಳು. ಮದುವೆಯಾದ ಕೆಲವುತಿಂಗಳಲ್ಲಿಯೇ ಮೈಥಿಲಿಯು ತನ್ನ ವರಸೆ ತೋರಿಸತೊಡಗಿದಳು.

ಒಂದು ದಿನ ವಾಕಿಂಗ್: ಮತ್ತೊಂದುದಿನ ಮಹಿಳಾ ಕ್ಲಬ್. ಬೇರೊಂದು ದಿನ ಸಿನಿಮಾ, ಹೊಟೇಲ್–ಹೀಗೆ ಅಸಂಖ್ಯವಾದ ಹವ್ಯಾಸಗಳನ್ನು ಇಟ್ಟುಕೊಂಡವಳಿಗೆ ಚಾರು ದಿನೇ ದಿನೇ ಅಸಹನೀಯ ಎನಿಸತೊಡಗಿದ. ಅತೃಪ್ತಿ. ಮಹತ್ವಾಕಾಂಕ್ಷೆ: ತಂದೆ–ತಾಯಿಯರ ವಿಪರೀತವಾದ ಮುದ್ದು: ತಂದೆಯ ಲಂಚದ ದುಡ್ಡು: ಕಾಲೇಜುದಿನಗಳಲ್ಲಿಯೇ ರೂಢಿಸಿಕೊಂಡುಬಂದ ಚೆಲ್ಲಾಟ: ಅದಕ್ಕಿಂತ ಮಿಗಿಲಾಗಿ ಒಂದು ಬಗೆಯ ಸ್ವೇಚ್ಛಾಚಾರವೇ ಮೈಥಿಲಿಯನ್ನು ಮುಳುಗಿಸುತ್ತಿದೆಯೇ?ಅವಳು ದೇವವ್ರತನನ್ನು ಭೇಟಿಯಾದುದೆಲ್ಲಿ? ಚಾರು ಯೋಚಿಸುತ್ತಿರುವಾಗಲೇ ಅವನ ಕೈಯಲ್ಲಿನ ಸಿಗರೇಟು ಆರಿ ಹೋಯಿತು. ಅದನ್ನು ಮತ್ತೊಮ್ಮೆ ಉರಿಸಿಕೊಂಡ. ಮೈಥಿಲಿ ದೇವವ್ರತನನ್ನು ಮೊದಲು ಭೇಟಿಯಾದುದು ಕ್ಲಬ್‌ನಲ್ಲಿಯೇ. ಸುಜಾತನನ್ನು ಕರೆದುಕೊಂಡೊಯ್ಯಲು ಬಂದಿದ್ದ ದೇವವ್ರತನನ್ನು ಸುಜಾತ ಪರಿಚಯಿಸಿದ್ದಳು. ಪರಿಚಯದ ಸಸಿ ಬೆಳೆದಿದೆ. ಈಗ ಅದರ ಬೇರು ಕತ್ತರಿಸುವುದು ಬಹಳ ಕಷ್ಟವೆಂದು ಚಾರುಗೆ ಅನಿಸತೊಡಗಿತು. ನಿಧಾನವಾಗಿಯೋ ಅಥವಾ ಬಲುವೇಗವಾಗಿಯೋ ಬೆಳಯ ತೊಡಗಿದ ಮೈತ್ರಿಗೆ ಬೇರೆ ಬೇರೆ ರೂಪಗಳು ಬರತೊಡಗಿದವು. ದೇವವ್ರತ–ಸುಜಾತ ಮನೆಗೆ ಬರ ತೊಡಗಿದರು. ಮೈಥಿಲಿಯು ದೇವ ವ್ರತನ ಮನೆಗೆ ಹೋಗಿಬರತೊಡಗಿದಳು. ಮೈಥಿಲಿಯ ಅಂತರಾಳದಲ್ಲಿ ನೂರೊಂದು ಅಲೆಗಳಿವೆಯೆಂದು ಚಾರುಗೆ ಅನಿಸತೊಡಗಿತು.

ಗಾರ್ಡನಿಗೆ ಹೋದ ದಿನ ಸಂಜೆಯೂ ಆಗಿದ್ದು ಅದೇ; ದೇವವ್ರತ ಬಂದವನೇ

ಮೈಥಿಲಿಯ ಜೊತೆ ವಾಕಿಂಗ್ ಹೋದವನು ನಿಧಾನವಾಗಿ ಬೆರಳಾಟವಾಡಿದ ಅಷ್ಟೆ; ಅದು ಅನಂತರದ ಮುಂದಿನ ದಿನಗಳ ಮೈಥಿಲಿಯ ಹೆಜ್ಜೆಗಳಿಗೆ ಒಂದು ಪೀಠಿಕೆಯಾಯಿತು.

ಮೈಥಿಲಿಯೇನೂ ಹೊಸ ಅನುಭವದ ಎಳಸು ಹುಡುಗಿಯಲ್ಲ. ಪ್ರಬುದ್ಧೆ, ಶ್ರುತಿ ಮಾಡಿಟ್ಟ ವೀಣೆಯಂತೆ! ದೇಹದ ನಾಡಿ ಮಿಡಿತ ಬಲ್ಲವಳು. ಗಂಡನೆನ್ನುವ ಪ್ರಾಣಿ ತನ್ನ ತುಂಬು ಹರೆಯಕ್ಕೆ ಅನ್ಯಾಯ ಮಾಡುತ್ತಿದ್ದಾನೆ ಮತ್ತು ಗಂಡನಿಂದ ಯಾವ ಸುಖವೂ ಇಲ್ಲವೆಂದು ಅರಿತವಳು. ದೇವವ್ರತನಿಗೆ ಕೂಡಾ ಎಳೆಯ, ಹೊಸ ಅನುಭವದ ಹುಡುಗಿಯರನ್ನು ಒಲಿಸುವುದಕ್ಕಿಂತ ಮಾಗಿದ ಮತ್ತು ಬೇಗನೆ ಎಲ್ಲಾ ಅರ್ಥಮಾಡಿಕೊಳ್ಳುವ ಹೆಂಗಸರೆಂದರೆ ಇಷ್ಟ. ದೇವವ್ರತನ ಚಿರತೆಯಂಥಾ ಹೊಂಚು ಸುಲಭವೂ ಅಲ್ಲ. ಮದುವೆಯಾದ ಹೆಂಗಸರ ಅತೃಪ್ತಿಗಳಿಗೆ ಸಾವಿರ ರೇಖೆಗಳಿವೆ. ಮತ್ತು ಅದರಲ್ಲಿ ರಿಸ್ಕೂ ಕಡಿಮೆ. ಮೈಥಿಲಿಯ ರೂಪ ಕಣ್ಣಿಗೆ ಕಟ್ಟಿತು: ಕೇದಿಗೆಯ ಮೈಬಣ್ಣ; ನಗಾಡಿದರೆ ಅವಳ ಗಲ್ಲದಲ್ಲಿ ಗುಳಿ ಬೀಳುತ್ತದೆ. ತಿದ್ದಿದ ಹುಬ್ಬು: ಕೊಂಚ ಬಿಳಿಯ ಕೆನ್ನೆ: ಉದ್ದನೆಯ ಜಡೆ: ಎತ್ತರವಿದ್ದಾಳೆ. ನಡು ಸಪೂರವಿದೆ. ಆದರೆ ಚಾರುವನ್ನು ಮದುವೆಯಾಗುವ ಅವಳಿಗೆ ಅಬಾರ್ಷನ್ ಆಗಿತ್ತು ಎಂಬುದು ಅವಳಿಗೆ ಮಾತ್ರ ಗೊತ್ತು.

ಅವನು ಮೈ- ಮನಗಳನ್ನು ಅರಳಿಸಲು ತಾಕತ್ತಿಲ್ಲದವನು

– ೫ –

"ಸ್ವಲ್ಪ ದೂರ ವಾಕಿಂಗ್ ಹೋಗೋಣ" ದೇವವ್ರತನ ಎಲ್ಲಾ ಶಕ್ತಿಯೂ ಕಣ್ಣಲ್ಲಿ ತುಂಬಿಕೊಂಡಂತೆ ಹೇಳಿದಾಗ ಒಲ್ಲೆನೆನ್ನುವ ಯಾವ ಸೀಮಾರೇಖೆಯು ಮೈಥಿಲಿಯ ಎದುರುಗಡೆ ಇದ್ದಿರಲಿಲ್ಲ. ಅದೇ ಕ್ಷಣಕ್ಕೆ ಸರಿಯಾಗಿ ಚಾರು ಬಯಲು ರಂಗಮಂಟಪದ ಹಿಂದಿನ ಮರದ ಕೆಳಗೆ ಕುಳಿತ ಜಿನ್ ಹೀರುತ್ತಿದ್ದ. ಮತ್ತದೇ ಮಾದರಿಯ ದಿನಗಳು. ಇನ್ನು ಮುಂದೆ ಹೆಚ್ಚು ಕಾಲ ನಡಿಗೆಯನ್ನು ಇಡೋಲ್ಲ ಎಂಬ ಖಚಿತ ಅರಿವಿತ್ತು. ಕೆಲದಿನಗಳ ಹಿಂದೆ, "ದೇವವ್ರತ ನೊಡನೆ ಹೆಚ್ಚು ಓಡಾಟ ಸರಿಯಾಗೊಲ್ಲ" ಎಂದಿದ್ದಕ್ಕೆ ಮೈಥಿಲಿಯು ಕೊಟ್ಟ ಉತ್ತರವು ಸಮಂಜಸವಾಗಿದ್ದಿಲ್ಲ ಮತ್ತು ಶ್ರುತಿಬದ್ಧವಾಗಿರಲಿಲ್ಲ ಎಂದೆನ್ನಿಸತೊಡಗಿತ್ತು. ಅದಕ್ಕಿಂತ ಹೆಚ್ಚಾಗಿ, "ನಾನೇನೂ ಎಳೆಯ ಮಗುವಲ್ಲ, ದೇವವ್ರತ ಒಳ್ಳೆಯವರು' ಅಂದಿದ್ದು ಮನಸ್ಸಿಗೆ ಒಂಥರಾ ಕಿರಿಕಿರಿಯೆಂದೆನ್ನಿಸತೊಡಗಿತ್ತು. ಆ ರೀತಿಯ ಮಾತು ಹೃದಯದ ಆಳದಿಂದ ಹೊರಟಿದ್ದು

ಚಾರುವಿನ ಬದುಕಿನ ಮೇಲಾಗಲೀ, ತನ್ನ ಜೀವನದ ಮೇಲಾಗಲೀ ಮಹತ್ವದ ಪರಿಣಾಮ ಬೀರಬಲ್ಲುದು ಎಂದು ತಿಳಿದಿದ್ದರೆ ಖಂಡಿತಕ್ಕೂ ಮೈಥಿಲಿಯು ಆ ಮಾತನ್ನು ನಾಲಿಗೆಯಿಂದ ಉರುಳಲು ಬಿಡುತ್ತಿರಲಿಲ್ಲ ಮತ್ತು ಮಾತಾಡಿದ ಮೇಲೆ ತುಟಿಯನ್ನು ತಕ್ಷಣವೇ ಕಚ್ಚಿಕೊಳ್ಳುತ್ತಿರಲಿಲ್ಲ.

ಉದುರಿ ಬಿದ್ದು ಧೂಳಲ್ಲಿ ಹೊರಳಾಡುತ್ತಿರುವ ಮಾತಿನ ಸೂಜಿಯನ್ನು ಮತ್ತೆ ವಾಪಾಸು ಹೆಕ್ಕಿಕೊಳ್ಳುವ ಸ್ಥಿತಿಯಲ್ಲಿ ಮೈಥಿಲಿಯಿರಲಿಲ್ಲ ಮತ್ತು ಊರಿದ ಮೊನೆಯಂಥಾ ಮಾತು ತನ್ನೆದೆಯನ್ನು ಚುಚ್ಚಿದ್ದಕ್ಕೆ ಯಾವ ಸಾಕ್ಷಿ ಮತ್ತು ಆಧಾರಗಳನ್ನು ಕೊಡುವ ಸ್ಥಿತಿಯಲ್ಲಿ ಚಾರುವೂ ಇರಲಿಲ್ಲ. ಬಯಲು ರಂಗಮಂದಿರದ ಹಿಂದಿನ ಮರದ ಕೆಳಗೆ ಕುಳಿತು ಜಿನ್ ಹೀರುವಾಗ ತಕ್ಷಣವೇ ಕಾಣಿಸಿಕೊಂಡ ನೆನಪುಗಳನ್ನು ಮರೆಮಾಚಿಕೊಳ್ಳಲು ಮತ್ತೆ ಗುಟುಕರಿಸಿದ. ಚಾರು ಕುಡಿಯುತ್ತಿರುವ ಗುಟುಕು ಮತ್ತು ವಾಕಿಂಗ್ ಹೋಗಿ ಬಂದು ಕಲ್ಲು ಬೆಂಚಿನ ಮೇಲೆ ಕೂತ ದೇವವ್ರತ ಹಾಗೂ ಮೈಥಿಲಿಯರ ನಡುವಣ ಸಂಭಾಷಣೆಯೂ ಸಮನಾಯಿತು. ಆದೆಷ್ಟು ಸಮನಾಯಿತೆಂದರೆ ಚಾರುವಿನ ಮನದಾಳದಲ್ಲಿ ಬೇರುಬಿಡಲು ತೊಡಗಿದ ಅಮಲಿಗೂ. ದೇವವ್ರತನ ಮಾತಿನಿಂದ ಅಮಲಿನ ತುದಿಗೇರಲು ಹವಣಿಸುತ್ತಿದ್ದ ಮೈಥಿಲಿಗೂ ಇದರಿಂದಲೇ ಒಂದು ಇಕ್ಕಟ್ಟು ಸಾಧ್ಯವಾಗುತ್ತದೆಯೆಂದು ತಿಳಿದಿರಲಿಲ್ಲ.

ದೇವವ್ರತ ಕಲ್ಲುಬೆಂಚಿನ ಮೂಲೆಯಲ್ಲಿ ಕುಳಿತವನು ನಿಧಾನವಾಗಿ ಮೈಥಿಲಿಯ ಸಮೀಪ ಬಂದು ಕೆಲವು ಮಾತುಗಳನ್ನು ಅಷ್ಟೇ ನಿಧಾನವಾಗಿ ಗುಟುಕಾಗಿ ಹೇಳತೊಡಗಿದ. "ಈವತ್ತು ನಿಜವಾಗಿಯೂ ಒಳ್ಳೆಯ ದಿನವೊಂದು ಬಂದಿದೆ. ನಮ್ಮೊಳಗೆ ಗುಟ್ಟಾಗಿ ಕೆಲವು ವಿಷಯ ಮಾತಾಡಬೇಕು. ಯಾರಿಗೂ ತಿಳಿಯದ ಹಾಗೆ ನಾನು ನೋಡಿಕೊಳ್ತೇನೆ." ಮೆಥಿಲಿಯ ಕಣ್ಣರಳಿಸಿ ಒಮ್ಮೆ ದೇವವ್ರತನನ್ನು ನೋಡಿದಳು. ಪ್ರಾಯಶಃ ಮುಂದಿನ ಮಾತು ಯಾವುದಿರಬಹುದು ಎಂದು ತಿಳಿಯದಷ್ಟು ದಡ್ಡಿಯೇನಲ್ಲ. ತನ್ನದೇ ಶೈಲಿಯಲ್ಲಿ ಅವನು ಮಾತು ಮುಂದುವರಿಸಲು ಅನುಕೂಲವಾಗುವಂತೆ "ಹ್ಞೂಂ" ಅಂದಳು. ದೇವವ್ರತನಿಗೆ ಮೈಥಿಲಿಯ "ಹ್ಞೂಂ" ಅನ್ನುವ ಧ್ವನಿಯು ನಿಜವಾಗಿಯೂ ಮುಂದಿನ ಮಾತುಗಳಿಗೆ ಪೂರಕವಾದ ಸಂಗೀತದಂತೆ ಕೇಳಿಸಿತು. ದೇವವ್ರತ ಇನ್ನಷ್ಟು ಹತ್ತಿರ ಸರಿದು, "ಮೈಥಿಲಿಯವರೇ ನಿಜವಾಗಿಯೂ ಹೇಳ್ತಾ ಇದ್ದೇನೆ. ನಿಮ್ಮ ಗಂಡನಿಂದ ನಿಮಗೆ ಯಾವ ಸುಖ ಸಿಗುತ್ತೆ ಹೇಳಿ? ಹಗಲೂ ರಾತ್ರಿ ಕುಡ್ದು ಬಿದ್ದಿರುತ್ತಾನೆ. ಅದಕ್ಕೆ, ನಾನು" ಉಗುಳ ನುಂಗಿ ತನ್ನ ಮಾತಿನ ಪರಿಣಾಮ ಮೈಥಿಲಿಯ ಮೇಲೆ ಯಾವ ರೀತಿಯಲ್ಲಾಗುತ್ತೆ ಎಂದು ಗಮನಿಸತೊಡಗಿದ. ಮೈಥಿಲಿ ಕೆಲನಿಮಿಷ ಸುಮ್ಮನಿದ್ದು, ಮತ್ತೊಮ್ಮೆ ಅವನನ್ನೇ ನೋಡತೊಡಗಿದಳು. ನಾನು ನಿಮಗೆ ಸುಖ ಕೊಡ್ತೇನೆ. ಏಕೆ ಸುಮ್ಮನೇ ಕಷ್ಟಪಡ್ತೀರಾ? ಈಗಂತೂ ಇದನ್ನು ಎಲ್ಲರೂ ಸಹಜವೆಂದು ಒಪ್ಪಿಕೊಂಡು ಬಿಟ್ಟಿದ್ದಾರೆ, ಏನಂತೀರಿ?

ನೀವೇನೂ ಬೇಜಾರು ಮಾಡ್ಬೇಡಿ. ನಿಮ್ಮ ಗಂಡ ಹೆಸರಿಗೆ ಅಂತ ಇರಲಿ, ಇರುವಷ್ಟು ದಿನ ಸುಖಪಡ್ಬೇಕು ಈ ಮಾತು ಅವನು ಮೈಥಿಲಿಯ ಕಿವಿಯಲ್ಲಿ ಸುರಿದಾಗ ಮೈಥಿಲಿಯು ಒಂದೆರಡು ಕ್ಷಣ ತಬ್ಬಿಬ್ಬಾದಳು.

ಚಾರು ಇದೇ ಹೊತ್ತಿಗೆ ಸರಿಯಾಗಿ ಎರಡನೆಯ ಬಾಟಲಿಯ ಮುಚ್ಚಳ ತೆರೆದಾಗಿತ್ತು. ಜಿನ್ ಬಾಟಲಿಯು ಚೆಲ್ಲತೊಡಗಿದ್ದರಿಂದ ತಕ್ಷಣವೇ ಅದನ್ನು ಹಾಗೆಯೇ ಬಾಯಿಗಿಟ್ಟ. ಕುಡಿತವನ್ನು ಬಿಡುವ ಕಾಲವು ಸನ್ನಿಹಿತವಾಯಿತು ಎಂಬುದರ ಅರಿವಿಲ್ಲದೆಯೇ ಗಟಗಟನೆ ಕುಡಿಯತೊಡಗಿದ. ಮೈಯೆಲ್ಲ ಕಾವೇರಿದಂತೆ ಮತ್ತು ಊಹಿಸಿದ ಒಂದೇ ಒಂದು ಸಾಧ್ಯತೆಯು ಧುತ್ತನೇ ಎದುರಾದರೆ ಏನಾಗುವುದೋ ಅದೇ ರೀತಿಯ ಅನುಭವ ಮೈಥಿಲಿಗೂ ಆಯಿತು. ತಾನು ಕಂಡ ಅತಿಯಾದ ಸುಖೀ ಪುರುಷನೆಂದರೆ ದೇವವ್ರತ ಮತ್ತು ನಿರ್ಬಲ ವ್ಯಕ್ತಿತ್ವದವನೆಂದರೆ ಚಾರು. ಆದರೆ, ಚಾರು ಇಷ್ಟಪಟ್ಟು ಮದುವೆಯಾದ ಗಂಡ. ಅಂತರ್ಮುಖಿ, ಸ್ವಯಂ ದುಃಖಿತ ಮತ್ತು ರಾತ್ರಿಯೆಲ್ಲ ಯಾವುದೇ ಕಾರಣದಿಂದ ಮೈ-ಮನಗಳನ್ನು ಅರಳಿಸಬಲ್ಲ ತಾಕತ್ತು ಇಲ್ಲದವನು. ದೇವವ್ರತ ಬಾಯಿತುಂಬಾ ಮಾತಾಡುತ್ತಾನೆ. ತನ್ನ ಸೌಂದರ್ಯವನ್ನು ಇನ್ನಿಲ್ಲದಂತೆ ಹೊಗಳುತ್ತಾನೆ. ಮತ್ತು ರಾತ್ರಿಯೆಲ್ಲ ಸುಖ ಕೊಡಬಲ್ಲ ತಾಕತ್ತು ಇರಬಹುದಾದವನು. ಮೈಥಿಲಿಯ ಮನಸ್ಸು ಆ ಕಡೆಗೊಮ್ಮೆ ಈ ಕಡೆಗೊಮ್ಮೆ ತೊಯ್ದಾಡಿತು. ತೂಕದ ಸೂಚನೆ ಕೊಡಬೇಕಾದ ಮುಳ್ಳು ಒಂದೆಡೆಗೆಂದು ನಿಲ್ಲುತ್ತಿಲ್ಲ. ಮತ್ತು ನಿಲ್ಲುವ ಲಕ್ಷಣವೂ ಕಾಣುತ್ತಿಲ್ಲ. ದೇವವ್ರತ ಸ್ವಲ್ಪಹೊತ್ತು ಮೌನವಹಿಸಿ ಮೆಲ್ಲನೆ ಮೈಥಿಲಿಯ ಬೆನ್ನುತಟ್ಟಿ, ನಿಧಾನವಾಗಿ ಅವಳ ಕೈಬೆರಳಲ್ಲಿ ತನ್ನ ಕೈಬೆರಳನ್ನು ಹೊಲಿಗೆ ಹಾಕಿದಂತೆ ಹಾಕಿದನು ಮತ್ತು ಮುಂದಿನ ತನ್ನ ಮಾತುಗಳಿಗೆ ಪೂರಕವಾಗುವಂತೆ. ಮೈಥಿಲಿಯು ಸಹಕರಿಸಲಿ ಎಂಬಂತೆ, "ಮೈಥಿಲಿಯವರೇ ಕಳೆದ ಒಂದೆರಡು ವರ್ಷಗಳಿಂದ ನಾನು ನಿಮಗಾಗಿ ಕಾಯುತ್ತಿದ್ದೇನೆ ಮತ್ತು ಈ ವಿಷಯ ಯಾರಿಗೂ ತಿಳಿಯದಂತೆ ನಾನು ನೋಡಿಕೊಳ್ಳುವೆ. ದೇಹದ ಪಾವಿತ್ರ್ಯವೆನ್ನುವುದು ಒಂದು ರೀತಿಯ ಗೊಡ್ಡು ವಿಷಯ. ಒಂದೆರಡು ದಿನಗಳಲ್ಲಿ ತಿಳಿಸಿ, ಈ ವಿಷಯ ಇಷ್ಟವಿದ್ದರೆ ತಿಳಿಸಿ, ಇಲ್ಲವಾದರೆ ಇಲ್ಲಿಯೇ ಬಿಟ್ಟು ಬಿಡಿ. ನಿಮ್ಮ ಗಂಡನಿಗಾಗಲೀ, ಬೇರೆಯವರಿಗಾಗಲೇ ತಿಳಿಯದಂತೆ ನಾನು ನೋಡ್ಕೋತೀನಿ, ಸುಮ್ಮನೇ ಇದನ್ನು ಲಘುವಾಗಿ ತಗೊಳ್ಳಿ, ಇಬ್ಬರ ಸುಖ ಮುಖ್ಯ." ಮೈಥಿಲಿಯ ಮನಸ್ಸು ಲಘುವಾಗಿ ಕಂಪಿಸಿತು. ದೇಹವೇ? – ಮನಸ್ಸೇ? ಈ ತುಮುಲದಲ್ಲಿ ಮೈಥಿಲಿಯು ಒದ್ದಾಡಿದಳು. ಕೀಲುಕುದುರೆಯ ಬೆನ್ನು ಹತ್ತಿ ಜಗವನ್ನು ಸುತ್ತುವ ವ್ಯವಹಾರವಾಯಿತು ಮೈಥಿಲಿಗೆ. ದೇವವ್ರತನಿಗೆ ಮುಂದುವರಿಯಲು ಕೊಂಚ ಅವಕಾಶ ಸಿಕ್ಕಿದ್ದರೆ ಸಾಕಾಗಿತ್ತು ಮತ್ತು ಮೈಥಿಲಿಗೆ ಕಾಲಾವಕಾಶ ಬೇಕಿತ್ತು. ಎರಡನೆಯ ಬಾರಿ ಎದುರಾದ ಮಾತುಗಳು! ಇದೀಗ ಎರಡನೆಯ ಬಾರಿ ಮತ್ತೆ ಮನದ ಒಟ್ಟು ಉದ್ದಗಲಕ್ಕೆ ಬೆರಳಾಡತೊಡಗಿಸಿದ

ಮೈಥಿಲಿಯ ಮನಸ್ಸು ಹೊಯ್ದಾಡಿತು. ಹಾಗೆ – ಹೀಗೆ ಅಂತೆಲ್ಲ ಮತ್ತೆ ಮತ್ತೆ ಮೈಥಿಲಿಯ ಮನದಾಳಕ್ಕೆ ಇಳಿಯತೊಡಗಿತು. ಸಂಜೆಯು ಕತ್ತಲಿಗೆ ಇಳಿದಂತೆ ಮತ್ತು ಚಾರು ಮರದ ಕೆಳಗೆ ಕುಳಿತವನು ನಿಧಾನವಾಗಿ ಅಮಲಿನ ಮೇಲಕ್ಕೆ ಏರತೊಡಗಿದ– ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು.

ಆಲದ ಮರದ ಕೆಳಗೆ ಕುಳಿತ ಬುದ್ಧ ಜ್ಞಾನೋದಯ ಪಡೆಯುವುದಾದರೂ ಕೊಂಚ ತಡವಾಗಿರಬಹುದು. ಆದರೆ, ಚಾರುವಿಗೆ ಅಮಲಿನ ಮೆಟ್ಟಿಲನ್ನು ಕೊಂಚ ಕೊಂಚವೇ ಏರುತ್ತಿದ್ದವನಿಗೆ ತಕ್ಷಣವೇ ಮನೆಗೆ ಹೋಗುವುದು ಬೇಡವೆಂದು ಅನ್ನಿಸಿತು. ಇವೇನು ಮೊದಲಬಾರಿಯಲ್ಲ ಹತ್ತು – ಹಲವು ಬಾರಿ. ಯಾವಾಗ ಮನೆಯ ಶಿಫ್ಟ್ ಆಯಿತೋ ಅಲ್ಲಿಗೆ ಬಂದ ಕೆಲವು ದಿನಗಳಲ್ಲಿಯೇ ಈ ರೀತಿ ಅನಿಸತೊಡಗಿತು. ಮೈಥಿಲಿಗೆ ದೇವವ್ರತನ ಧ್ಯಾನ ಮತ್ತು ದೇವವ್ರತನಿಗೆ ಮೈಥಿಲಿಯ ಸ್ನೇಹದ ಮಾತುಕತೆಗಳು; ಟ್ಯೂಬ್‌ಲೈಟಿನ ಬೆಳಕಿಗೆ ಸುತ್ತು ಹಾಕುವ ಕೀಟಗಳಂತೆ ಕಾಣಿಸತೊಡಗಿದ ಮೇಲೆಯೇ ಚಾರು ಮನೆಯೆಂಬ ಕತ್ತಲೆಯ ಪ್ರಪಂಚಕ್ಕೆ ತಡವಾಗಿ ಆಗಮಿಸಲು ಶುರುಹಚ್ಚಿದ. ಯಾವಾಗ ದೇವವ್ರತ ಮೈಥಿಲಿಯ ಮನಸ್ಸನ್ನು ನಿಧಾನವಾಗಿ ಆಳಲು ಶುರು ಮಾಡಿದನೋ ಆವತ್ತಿಗೆ ಚಾರು ತಾನು ಪರಕೀಯನಾಗಿಯೇ ಉಳಿಯುವ ಪ್ರಯತ್ನವನ್ನು ಮಾಡತೊಡಗಿದ. ಅಮೃತಮತಿಯ ಗಂಡ ಯಶೋಧರನಂತೆ!

ಮದುವೆಯಾದ ಹೊಸದರಲ್ಲಿ ಕಟ್ಟಿಕೊಂಡ ಕನಸ ಹಕ್ಕಿಯ ರೆಕ್ಕೆಯಿಂದ ಒಂದೊಂದೇ ಪುಕ್ಕವನ್ನು ಮೈಥಿಲಿಯು ಕಿತ್ತೆಸೆಯಲು ಶುರುಮಾಡಿದಾಗ; ನಿಧಾನವಾಗಿ ಚಾರು ತನ್ನ ಮಾನಸಿಕವಾದ ಅಂತರವನ್ನು ಬೇರೊಂದರಲ್ಲಿ ಸ್ಥಾಪಿಸಲು ಶುರುಮಾಡಿದ. ಅವನೇ ಎದುರಿಗೆ ಜಿನ್; ಸಿಗರೇಟ್‌ಗಳಲ್ಲಿ ತನ್ನ ಮಾನಸಿಕ ಸ್ಥಿಮಿತತೆಯನ್ನು ಕಾಪಾಡಿಕೊಳ್ಳುವ ಹುಚ್ಚು ಪ್ರಯತ್ನವನ್ನು ಮಾಡಿದ. ಆದರೆ, ದೇವವ್ರತನ ಸಾಂಗತ್ಯದಲ್ಲಿ ಮೈಥಿಲಿಗೆ ಸುಖದ ಹುಚ್ಚು; ಐಷಾರಾಮದ ಜೀವನ ಎಲ್ಲವೂ ಶುರುವಾಯಿತು. "ಸುಖ ಬೇಕು, ಖುಷಿ ಬೇಕು" "ದೇವವ್ರತ ಹೇಗಿದೆ ಹೊಸ ಚೂಡಿದಾರ್ ಎಂದು ಕನಸಿನಲ್ಲಿಯೂ ಕನವರಿಸತೊಡಗಿದ ಮೈಥಿಲಿಯ ಜೀವನದ ಮಹತ್ವದ ತಿರುವುಗಳು ಪ್ರಾರಂಭವಾದವು ಎಂದು ಅರ್ಥವಾಗದಷ್ಟು ಚಾರು ದಡ್ಡನಲ್ಲ. ದೇವವ್ರತ ಯಾವಾಗ ತನ್ನ ಪಕ್ಕದಲ್ಲಿ ಕುಳಿತ ಮೈಥಿಲಿಯಲ್ಲಿ "ನಾವಿಬ್ಬರು ಅಡ್ಜಸ್ಟ್ ಮಾಡಿಕೊಳ್ಳೋಣ" ಎಂದು ಪ್ರಸ್ತಾವನೆಯ ಕೊನೆಯ ಮಾತು ಹೇಳಿದನೋ ಅದೇ ಕ್ಷಣದಲ್ಲಿ ಆ ಹೊತ್ತಿಗೆ ಸರಿಯಾಗಿ ಎಲ್ಲೋ ಇದ್ದ ಚಾರು ಕೂಡಾ ತನ್ನ ಜಿನ್‌ನ ಬಾಟಲಿಯನ್ನು ಅಲ್ಲಿಯೇ ಬಿಸಾಕಿ ಎದ್ದು ನಿಂತ – ತಲೆಯ ಮೇಲಿನ ಮರದ ಟೊಂಗೆಯಿಂದ ಕತ್ತಲು ಇಣುಕಿದ್ದಕ್ಕೆ ಸಾಕ್ಷಿಯಾಗಿ. ಫಕ್ಕನೇ ಬಾವಲಿಯು ಚಡಬಡಿಸಿತು. ಎಲ್ಲಿಂದಲೋ ನಾಯಿ ಅಪಶಕುನದಂತೆ ಊಳಿಡತೊಡಗಿತು.

ಚಾರುವಿನ ಒಂದೆರಡು ಮಾರು ದೂರ ಅನಗತ್ಯವಾಗಿ ನಾಯಿ ಊಳಿಡತೊಡಗಿದ್ದು

ಮತ್ತು ಇತ್ತ ಮೈಥಿಲಿಯು ಯಾವ ನಿರ್ಧಾರಕ್ಕೆ ಬಾರದೆ ಚಡಪಡಿಸಿದ್ದು ಸರಿಯಾಯಿತು. ಚಾರುವಿಗೆ ಈ ಅಪಶಕುನದ ನಾಯಿ ಹೊತ್ತಲ್ಲದ ಹೊತ್ತಿಗೆ ಯಾಕೆ ರಾಗವೆಳೆಯುತ್ತಿದೆಂದು ತಿಳಿಯದಿದ್ದಾಗಲೇ. ಮೈಥಿಲಿಯು ಯಾವುದಾದರೂ ಒಂದು ನಿರ್ಧಾರಕ್ಕೆ ಬರಬೇಕೆಂದು ಮನಸ್ಸನ್ನು ಒಂದು ಕಡೆಗೆ ತರಲು ಪ್ರಯತ್ನಿಸಿದಳು. ಅವಳ ಪ್ರಯತ್ನವು ಒಂದು ಬೊಗಸೆಯೊಳಗಡೆಗೆ ಸಿಗುವಂತಿರಲಿಲ್ಲ. ಗಂಡನನ್ನು ಬಿಟ್ಟು ತನ್ನ ದೇಹಕ್ಕೆ ಕಣ್ಣಿಟ್ಟ ದೇವವ್ರತನಿಗೆ ಮೈಯೊಪ್ಪಿಸಿದರೆ ತನ್ನ ಮುಂದಿನ ಗತಿಯೇನು ಎಂದರಿಯದೆ ವಿಚಿತ್ರ ಗಲಿಬಿಲಿಗೆ ಗುರಿಯಾದಳು. ಇದ್ದಕ್ಕಿದ್ದಂತೆ ಗಲಿಬಿಲಿಗೆ ಮತ್ತು ಚಂಚಲತೆಗೆ ಗುರಿಯಾದ ಮೈಥಿಲಿಯೆದುರಿಗೆ ದೇವವ್ರತ ಬೇಕೆ? ಅವನ ಮೈಕಟ್ಟು ಬೇಕೆ? ಚಿರತೆಯ ಹಸಿವಿನ ಕಂಗಳು ಬೇಕೆ? ಯಾವುದು ಬೇಕು? ಮದುವೆಯಾದ ಇಷ್ಟು ವರ್ಷಗಳಲ್ಲಿ ಒಂದಿನವೂ ಅತಿರೇಕವಾಗಿ ವರ್ತಿಸದ ಗಂಡ ಮತ್ತು ದೈಹಿಕ ವಾಂಛೆಯನ್ನೇ ಕೇಂದ್ರವಾಗಿರಿಸಿಕೊಂಡ ದೇವವ್ರತರ ನಡುವಣ ತುಲನೆಯಲ್ಲಿ ಯಾರನ್ನು ಆಯ್ಕೆ ಮಾಡಿಕೊಳ್ಳಲಿ? ಈ ಸಂದೇಹವು ಏಕಕಾಲಕ್ಕೆ ಜೇನುನೊಣಗಳಂತೆ ತಲೆ ತುಂಬಾ ತುಂಬಿಕೊಂಡದ್ದರಿಂದ ಮೈಥಿಲಿ ಅಯೋಮಯವಾಗಿ ದೂರದ ಅಸ್ಪಷ್ಟವಾದ ಕಟ್ಟಡಗಳ ನೆತ್ತಿಯನ್ನು ನೋಡತೊಡಗಿದಳು. "ಯಾವುದಾದರೂ ಒಂದು ಸಲ ಒಳ್ಳೆಯ ನಿರ್ಧಾರಕ್ಕೆ ಬನ್ನಿ ಮತ್ತು ಅದು ಯಾವತ್ತೂ ನನ್ನ ಪರವಾಗಿಯೇ ಇರಲಿ" ಮೈಥಿಲಿಯ ದೇಹ ಮತ್ತು ಮನಸ್ಸುಗಳ ಕೋಟೆಯನ್ನು ಒಡೆಯಲು ಕೊನೆಯ ಅಸ್ತ್ರವೆಂಬಂತೆ ತನ್ನ ಮಾತಿನ ಬಾಣವನ್ನೆಸೆದ. ಮೈಥಿಲಿಯಲ್ಲಿ ಉಂಟಾದ ಭಾವ ಸಂಚಾರಗಳು ಯಾವ ಬಗೆಯದು ಎಂಬುದು ಅರ್ಥವಾಗದೇ ದೇವವ್ರತನಿಟ್ಟ ಮಾತುಗಳವು, ಮೈಥಿಲಿಯ ಸಂದೇಹಗಳು ಮಾತ್ರ ಬೇರೆ ಬಗೆಯವು: ನಾನು ದೇವವ್ರತನಿಗೆ ತನ್ನ ಸಂಪೂರ್ಣವಾದ ದೇಹವನ್ನು ಒಪ್ಪಿಸಬಹುದು. ಆದರೆ, ಇದೆಲ್ಲಾ ಚಾರುಗೆ ಒಂದಲ್ಲ ಒಂದು ದಿನ ಗೊತ್ತಾಗುತ್ತೆ. ಗೊತ್ತಾದಾಗ ಮಾತ್ರ ಏನಾಗುವುದೋ ಅದನ್ನು ಊಹಿಸಲು ಬರುವುದಿಲ್ಲ. ದೇವವ್ರತ ಚಿರತೆಯಂತೆ ಅರ್ಧ ತಿಂದು ಮತ್ತೆ ಮಾಂಸ ಕೊಳೆಯಿತು ಅಂದಾದರೆ ಹತ್ತಿರವೂ ಸುಳಿಯಲಾರ. ಎಂಥದ್ದೋ ತಹಬಂದಿಗೆ ಸಿಕ್ಕಂತೆ ಮೈಥಿಲಿಯು ಆಯ್ಕೆಯ ನಡುವೆ ನಿಂತುಕೊಂಡವಳು ಥಟ್ಟನೇ ಬೇರಾವುದನ್ನು ಆಲೋಚಿಸದೆ ಯಾವ ರೀತಿಯಲ್ಲಿಯೂ ಅಭಿವಕ್ತಿ ಸಾಧ್ಯವಾಗದೆ ಮತ್ತೆ ಒಂದೆರಡು ಮೂರು ದಿನದ ಮೇಲೆ ತಿಳಿಸಿದರೆ ಆಯಿತು ಎಂದುಕೊಂಡಳು. ಹಾಗೆಂದುಕೊಂಡವಳೇ, "ಚಾರು ಮನೆಗೆ ಬರುವ ಹೊತ್ತಾಯಿತು" ಎಂದು ಹೊರಟಳು. ಅವನೂ ಮೈಥಿಲಿಯ ಜೊತೆ ಹೊರಟ. ಆದರೆ, ಅಪ್ಪಿತಪ್ಪಿಯೂ ಯಾವುದೇ ಕಾರಣಕ್ಕೆ ಮತ್ತೆ ಆ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಆ ವಿಷಯವನ್ನು ಪ್ರಸ್ತಾಪಿಸದೇ ಇರುವುದೇ ಹೆಚ್ಚು ಸೂಕ್ತವೆಂದು ದೇವವ್ರತ ಭಾವಿಸಿಕೊಂಡ.

ಹಗಲು ಹೊತ್ತಿನ ಕತ್ತಲೆಯ ಆಟದಲ್ಲಿ ಕತ್ತಲೆಯೇ ಗೆಲ್ಲುವುದಾದರೆ....

– ೬ –

ಆದರೆ, ಅದೇ ಹೊತ್ತಿಗೆ ಸರಿಯಾಗಿ ಚಾರು ಮನೆಯೊಳಗೆ ಬಂದು ತಲುಪಿದ್ದ ಎಂಬ ವಿಷಯವು ಸರಿಯಾಗಿ ಇಬ್ಬರಿಗೂ ತಿಳಿದಿರಲಿಲ್ಲ. ಮನೆಗೆ ಬಂದು ಮನೆಯ ಬೋಲ್ಟ್ ಹಾಕಿಕೊಂಡು ಕೂತ ಚಾರು ಕೂಡಾ ಇಬ್ಬರೂ ಹರಟೆ ಹೊಡಕೊಂಡು ಬರುತ್ತಿರುವುದನ್ನು ಸರಿಯಾಗಿಯೇ ಗಮನಿಸಿದ. ಕಿಟಕಿಯಲ್ಲಿ ಇಣುಕಿ ಅವರಿಬ್ಬರನ್ನು ನೋಡಿದವನೇ, ಮೈಥಿಲಿ ಬಂದು ಬಾಗಿಲು ಹೊಡೆಯುತ್ತಾಳೆ ಎಂದು ತಿಳಿದು, ತಕ್ಷಣವೇ ಬಾತ್ ರೂಮಿಗೆ ಹೋಗಿ ತಣ್ಣೀರನ್ನು ತಲೆಗೆ ಹೊಯ್ಯಲು ಶುರುಮಾಡಿಕೊಂಡ. ಬಚ್ಚಲ ಮನೆಯಲ್ಲಿ ತಣ್ಣೀರನ್ನು ತಲೆಗೆ ಹೊಯ್ದುಕೊಳ್ಳುತ್ತಿರುವಾಗ ಹೊರಗಡೆಯಿಂದ ಮೈಥಿಲಿ ಮತ್ತು ದೇವವ್ರತರ ಜೋರಾದ ಮಾತು ಮತ್ತು ಕಿಲಕಿಲನೆಯ ನಗು ಚಾರುವಿನ ಕಿವಿಗೆ ಅಪ್ಪಳಿಸಿತು.

ಅವರಿಬ್ಬರ ನಗು ತನ್ನ ಕಿವಿ ತಮ್ಮಟೆಯನ್ನು ಹರಿದು ಬಿಸಾಕುತ್ತದೆ ಎಂಬ ಭಯವು ಚಾರುವಿಗೆ ಮತ್ತೆ ಜೋರಾಗಿ ತಲೆಯ ಮೇಲ್ಗಡೆಗೆ ನೀರನ್ನು ಸುರುವಿಕೊಂಡ. ವಿಪರೀತವಾಗಿ ಸುರುವಿಕೊಳ್ಳುತ್ತಿರುವ ತಣ್ಣೀರು ಅವನಿಗೆ ಮೈಥಿಲಿಯ ಮೇಲೆ ಉಂಟಾದ ಸಿಟ್ಟು ಮತ್ತು ಅಸಹನೆಯ ಪ್ರತೀಕವೆಂದಾಗಲೀ, ದೇವವ್ರತನ ಬಗ್ಗೆ ಉಕ್ಕಿಬಂದ ಅಸಹನೆಯೆಂದು ಬಾಗಿಲಿಂದ ಹೊರಗೆ ನಿಂತಿರುವ ಅವರಿಬ್ಬರಿಗೂ ಅರ್ಥವಾಗುವುದು ಸಾಧ್ಯವಿರಲಿಲ್ಲ. ಚಾರುವಿಗೆ ಸಿಟ್ಟು ಬಂದಿರುವುದರಿಂದಲೇ ಅಷ್ಟೊಂದು ತೀವ್ರವಾದ ತಣ್ಣೀರ ಹನಿಗಳನ್ನು ಮೈಮೇಲೆ ಸುರುವಿಕೊಂಡ ಎಂದು ಅರ್ಥವಿಸಿಕೊಳ್ಳಲು ಹೇಗೆ ಸಾಧ್ಯ? ದೇವವ್ರತ ಮತ್ತು ಮೈಥಿಲಿಯರು ಅವರದೇ ಆದ ಗುಂಗಿನಲ್ಲಿದ್ದರು. ಬಚ್ಚಲು ಮನೆಯಲ್ಲಿ ತಣ್ಣೀರು ಹೊಯ್ದುಕೊಂಡ ಚಾರು ಮಾತ್ರ "ನಮಸ್ತೇಸು ಮಹಾಮಾಯೆ" ಎಂದು ಅಮ್ಮನಿಂದ ಕಲಿತ ವಾಕ್ಯವನ್ನು ಉಚ್ಚರಿಸಲು ಪ್ರಯತ್ನ ಪಟ್ಟು ಮತ್ತೆ ಸೋತುಹೋದ. ಈ ರೀತಿಯ ಹಾಡುಗಳನ್ನು ನೆನಪಿಸಿಕೊಳ್ಳುವಾಗ ಉಂಟಾಗಿರುವ ಸೋಲು ಈ ಸಲದ ತನ್ನ ಮತ್ತು ಮೈಥಿಲಿಯ ಕುಟುಂಬದ ಒಳಗಣ ಸಣ್ಣ ಹಾಗೂ ಯಾರಿಗೂ ಗೊತ್ತಾಗದ ರಾಜಕಾರಣದ ಸೋಲಾಗಿ ಪರಿಣಮಿಸಬಹುದೆ? ಎಂದು ಯೋಚಿಸಿದವನೇ ಉದ್ದೇಶಪೂರ್ವಕ ಒದ್ದೆ ಮೈಗೆ ಟವೆಲ್ಲೊಂದನ್ನು ಮಾತ್ರ ಉಟ್ಟುಕೊಂಡು ಬಚ್ಚಲು ಮನೆಯಿಂದ ಬಂದವನೇ ಬಾಗಿಲ ಬೋಲ್ಟ್ ತೆಗೆದ. ಮೈಮೇಲೆ ಚೆಲ್ಲಾಡಿಕೊಂಡಿರುವ ಹನಿ; ಒದ್ದೆಯಾದ ತಲೆಗೂದಲು ಮತ್ತು ಸೊಂಟಕ್ಕೆ ಸುತ್ತಿಕೊಂಡಿರುವ ಟವೆಲನ್ನು ನೋಡಿದ ಮೈಥಿಲಿ ಮತ್ತು ದೇವವ್ರತರು ಒಂದು ಕ್ಷಣಕ್ಕೆ ದಿಗ್ಭ್ರಾಂತರಾದರು. ಅವರ ದಿಗ್ಭ್ರಾಂತಿಗೆ ಯಾವ ಕಾರಣವೂ ಬೇಕಿರಲಿಲ್ಲ. ಯಾಕೆಂದರೆ ಚಾರುವಿನ ಭಂಗಿಯೇ ಆ ತರಹ ಇತ್ತು – ಒಬ್ಬ ಕಾಪಾಲಿಕನ ತರಹ.

ದೇವವ್ರತ ತಟ್ಟನೇ ಮೈಥಿಲಿ ಮತ್ತು ಚಾರುವಿನ ಮುಖವನ್ನು ನೋಡಿ 'ಬರ್ತೀನಿ' ಅಂದ. ಅದೇ ಕ್ಷಣಕ್ಕೆ ಸರಿಯಾಗಿ ಚಾರು 'ಸರಿ' ಅಂದವನೇ ದೇವವ್ರತನಿಗೆ ಬೆನ್ನು ಹಾಕಿದ. ಬೆನ್ನು ಹಾಕಿದ ಕ್ರಮ ಮತ್ತು ದೇವವ್ರತ "ಬರ್ತೀನಿ" ಅಂದ ಕ್ರಮ ಎರಡೂ ಏಕಕಾಲಕ್ಕೆ ಸಂಭವಿಸಿದ್ದು – ದೇವವ್ರತ ಮತ್ತು ಮೈಥಿಲಿಯರ ಪಾಲಿಗೆ ದೊಡ್ಡದೊಂದು ಆತಂಕದ ಕ್ಷಣವಾಗಿ ಪರಿಣಮಿಸುತ್ತದೆಯೆಂದು ಅವರಿಬ್ಬರ ತಿಳಿವಿಗೆ ಬಂದಿರಲಿಲ್ಲ ಅಷ್ಟೇ.

*

ದೇವವ್ರತ ಹೋದ ತಕ್ಷಣ ಬಾಗಿಲಿನ ಚಿಲಕ ಹಾಕಿಕೊಂಡ ಮೈಥಿಲಿಯು ಮಾಡಿದ ಮೊದಲ ಕೆಲಸವೆಂದರೆ ಚಾರುವಿಗೆ ಪೂರ್ಣ ಪ್ರಮಾಣದ ಕಾಳಜಿಯನ್ನು ತೋರುತ್ತಾ ಹೋಗಿ, 'ಮೈಯೊರಸಿಕೊಂಡು ಬನ್ನಿ, ಬೇಕಿದ್ದರೆ ಆಮೇಲೆ ಒಂಚೂರು ಹಾಯಾಗಿ ಕೂತ್ಕೊಳ್ಳಿ.' ಚಾರುವಿಗೆ ಮೈಥಿಲಿಯ ಹೊಸ ರೀತಿಯ ಭಾಷಿಕ ಕ್ರಮವು

ಅರ್ಥವಾಗದೇ ಹೋಗಿರಬಹುದಾದ ಸಂಗತಿಯೇನಲ್ಲ. ಅವನು ಮರು ಮಾತಾಡದೆ ಮುದ್ದೆಯಾಗಿ ಮೂಲೆಯಲ್ಲಿ ಬಿಸಾಕಿದ್ದ ಲುಂಗಿಯನ್ನು ಉಟ್ಟುಕೊಂಡು, ನಿಷ್ಕಾಳಜಿಯಿಂದ ಬಿಸಾಕಿದ್ದ ಟೀಶರಟನ್ನು ಹಾಕಿಕೊಂಡ. ಅದೆಲ್ಲವೂ ಮುಗಿಯುವುದಕ್ಕೆ ಕ್ಷಣಗಳ ಲೆಕ್ಕಗಳು ಎಂದು ಇಬ್ಬರಿಗೂ ಗೊತ್ತು. ಲುಂಗಿ ಮತ್ತು ಟೀಶರಟು ಹಾಕಿಕೊಂಡು ಕೂತ ಚಾರು. ಮತ್ತೊಮ್ಮೆ ಮಾಮೂಲಿಯೆಂಬಂತೆ ಸಿಗರೇಟು ಹಚ್ಚಿದ. ಅವನು ಸಿಗರೇಟಿಗೆ ಬೆಂಕಿಯಿಡುವಾಗ, ಅದಕ್ಕಾಗಿ ಕಾತರದಿಂದ ಕಾಯುತ್ತಿದ್ದ ಮೈಥಿಲಿಯು ಥಟ್ಟನೆ ಬಾಯ್ದೆರೆದಳು. "ನಿಮಗೆ ಊಟಕ್ಕೇನು ಮಾಡಲಿ? ಬಿಸಿಬಿಸಿಯಾಗಿ ಬೀನ್ಸ್ ಪಲ್ಯ ಮತ್ತು ರೊಟ್ಟಿ ಮಾಡಿಕೊಡಲೆ? ಏನೇ ಕುಡಿದರೂ ಹೊಟ್ಟೆ ತುಂಬುವಷ್ಟು ಊಟ ಮಾಡಿ. ಅದರಿಂದ ಹೊಟ್ಟೆ ತುಂಬುವುದು, ಹೊಟ್ಟೆ ತಂಪಾಗುವುದು ಮಾತ್ರವಲ್ಲ, ಅದರಿಂದ ದೇಹದ ಮನಸ್ಸು ತಂಪಾಗುತ್ತದೆ. ಮತ್ತೆ, ಈಚೆಗಂತೂ ನೀವು ತುಂಬಾನೇ ತೆಳ್ಳಗಾಗಿದ್ದೀರಿ" ಹೊಟ್ಟೆಯಲ್ಲಿ ತುಂಬಿಕೊಂಡಿರುವ ನಂಜನ್ನು ಯಾವ ರೀತಿಯಲ್ಲಿಯೂ ಹೊರಗೆ ತಾರದೆ ಮೈಥಿಲಿಯು ಆಡಿರುವ ಮಾತುಗಳಲ್ಲಿ ನಾಗರಹಾವು ಹೆಡೆಯಾಡಿಸುವ ಚೆಂದವಿತ್ತು ಮತ್ತು ಅದರ ಜೊತೆಗಿನ ಆ ಥರದ ಅಪರೂಪದ ಮಾತುಗಳಲ್ಲಿ ತಣ್ಣನೆಯ ಮಂಜುಗಡ್ಡೆ ಹೊರಳಾಡುತ್ತಿರುವ ಸೂಚನೆಯೂ ಇತ್ತು. ಮೈಥಿಲಿಯ ಹೊಸ ವರಸೆಯ ಮಾತುಗಳಲ್ಲಿ ತುಂಬಿರುವ ನುಣುಪು ಅರ್ಥವಾಗದೆ ಇರುವಷ್ಟು ದಡ್ಡ ಚಾರುವಲ್ಲ. ಅವನು ಕೂಡಾ ಅದೇ ಜಾಣತನ ಮತ್ತು ನಯ ತುಂಬಿರುವ ಮಾತುಗಳಲ್ಲಿಯೇ 'ಸರಿ'ಯೆಂದ. ಚಾರು ಯಾವ ಮುಲಾಜು ಮತ್ತು ಹಂಗಿಗೆ ಒಳಗಾಗದಂತೆ ಎಚ್ಚರ ವಹಿಸಿಕೊಂಡು ಬಳಸಿರುವ 'ಸರಿ'ಯೆಂಬ ಪದದ ಹಿಂದಿರುವ ಸೂಚನೆಯು ತಕ್ಷಣವೇ ಮೈಥಿಲಿಗೆ ತಿಳಿಯಲಿಲ್ಲ. ಆ ಕ್ಷಣಕ್ಕೆ ಅವಳು ಚಾರುವನ್ನು ನೋಡಿದ ಪರಿಯು ಮಾತ್ರ ಕೆಲವೇ ನಿಮಿಷಗಳ ಹಿಂದಿನ ಗುಂಗು ಅವಳಿಂದ ಇಳಿದಿಲ್ಲವೆಂಬುದರ ಸೂಚನೆಯಾಗಿತ್ತು. ಚಾರು ಯಾವ ಕಾರಣಕ್ಕೂ ತಾನು ಮೆಚ್ಚಬಹುದಾದ ಗಂಡಸಲ್ಲ ಮತ್ತು ದೇಹದ ಪೂರ್ಣತೆಯಲ್ಲಿ ಸರಿಯಾದ ಗಂಡಸೆಂದರೆ ನಿಜವಾಗಿಯೂ ದೇವವ್ರತನೇ ಎಂದು ಅವಳಿಗೆ ಆ ಕ್ಷಣಕ್ಕೆ ಅನಿಸಿದ್ದು ನಿಜ. ಇನ್ನೊಂದೆರಡು ದಿನಗಳಲ್ಲಿ ಈ ಕುರಿತು ಪೂರ್ಣವಾಗಿ ನಿರ್ಧಾರಕ್ಕೆ ಬರಲೇಬೇಕೆಂದು ತಿಳಿದುಕೊಂಡಳು. ಆದರೆ, ಅವಳು ಊಹಿಸಿದ್ದಕ್ಕಿಂತ ಬೇರೆ ಯಾವ ನಿಲುವನ್ನು ತೆಗೆದುಕೊಳ್ಳಲೇ ಬೇಕಾದ ಪರಿಸ್ಥಿತಿಯು ಎದುರಾಗುತ್ತದೆಯೆಂದು ಅವಳಿಗೆ ಆ ಕ್ಷಣಕ್ಕೆ ಅನಿಸಿರಲಿಲ್ಲ. ಅವಳು ತನ್ನನ್ನು ನೋಡುತ್ತಿರುವ ಕ್ರಮದ ಅರಿವು ಓರೆಗಣ್ಣಿಂದ ನೋಡುತ್ತಿದ್ದ ಚಾರುವಿಗೆ ಗೊತ್ತಾದರೂ ಈ ಯಾವ ಚಟುವಟಿಕೆಗೂ ಸಂಬಂಧವಿಲ್ಲದಂತೆ ಕುಳಿತುಕೊಂಡು, ಸಿಗರೇಟನ್ನು ಸರಿಯಾಗಿಯೇ ಆ್ಯಶ್‌ಟ್ರೈಗೆ ತುರುಕಿ ಹೊಸಕಿದ. ಅವನು ಹೊಸಕಿದ್ದು ಸಿಗರೇಟನ್ನೇ ಆದರೂ, ಪಕ್ಕದ ಮನೆಯ ದೇವವ್ರತನ ಒಂದು ಸುಂದರವಾದ ಕನಸು ಮತ್ತು ಮೈಥಿಲಿಯನ್ನು ಪಡೆಯಬೇಕೆಂಬ

ಪ್ರಬಲ ಆಕಾಂಕ್ಷೆಯನ್ನು ಹೊಸಕಿಹಾಕಿದ ಅನುಭವ ದೇವವ್ರತ ಮತ್ತು ಮೈಥಿಲಿಯರಿಗೆ ಆಗಬೇಕಾದರೆ ಮಾತ್ರ ಕೆಲವು ದಿನಗಳೇ ಸರಿದುಹೋದವು ಎನ್ನುವ ಮಾತು ಬೇರೆ.

ಸಿಗರೇಟನ್ನು ಚಾರು ಹೊಸಕಿದ ಹೊತ್ತು; ದೇವವ್ರತ ಅಡುಗೆ ಮನೆಯಲ್ಲಿ ಮೌನವಾಗಿ ಅಡುಗೆಯ ಕೆಲಸದಲ್ಲಿ ತೊಡಗಿದ ಸುಜಾತನ್ನ ಹಿಂದಿನಿಂದ ಬಂದು ಅಪ್ಪಿದ. ಹೀಗೆ ಹಿಂದಿನಿಂದ ಬಂದು ಅಪ್ಪಿದ್ದಕ್ಕೆ ಸುಜಾತಳ ಮೇಲಿನ ವ್ಯಾಮೋಹವೇ ಕಾರಣವೆಂದಲ್ಲ. ಹಗಲು ಹೊತ್ತು ಕತ್ತಲೆಯ ಆಟದಲ್ಲಿ ಕತ್ತಲೆಯು ಗೆಲ್ಲುವುದಾದರೆ ಹಗಲಿಗೆ ಯಾವ ಅರ್ಥವೂ ಉಳಿಯುವುದಿಲ್ಲ. ಸುಜಾತ ರಪ್ಪನೇ ತಿರುಗಿ ನಿಂತು "ಇದೇನ್ರಿ ಗಲೀಜು" ಅಂದಳು. ಗಲೀಜು ಅನ್ನುವ ಪದವೇ ದೇವವ್ರತನ ಉತ್ಸಾಹಕ್ಕೆ ಮತ್ತು ಉದ್ದೇಶವಾಗಿದ್ದುಕೊಂಡಿರುವ ನಾಟಕಕ್ಕೆ ಯಾವುದೋ ಒಂದು ರೀತಿಯ ಮೊಳೆಯನ್ನು ಚುಚ್ಚಿದಂತಾಯಿತು. ಸಂಜೆ ಮೈಥಿಲಿಯು ಪಕ್ಕ ಕೂತಾಗ ಈ ರೀತಿಯಲ್ಲಿ ಹೇಳಿದ್ದಳೆ? ನೆನಪು ಮಾಡಿಕೊಂಡ. ಮೈಥಿಲಿಯ ಹಿಂಭಾಗ, ನಡು ಕಣ್ಣಿಲ್ಲಿ ಮತ್ತೆ ಕುಣಿಯಿತು. ಸುಜ್ಜೀ ಎಂದು ಉದ್ರೇಕಕ್ಕೆ ಒಳಗಾದವನಂತೆ ಮೆಲ್ಲಗೆ ಅಂದ. ದೇವವ್ರತನ ಆ ಧ್ವನಿಯಲ್ಲಿರುವ ಸಣ್ಣ ಕಿರಿಗುಟ್ಟುವ ಧ್ವನಿಯ ಅರ್ಥವಾಗದವಳೇನೂ ಅಲ್ಲ. ಮಹಾನ್ ಯುದ್ಧಕ್ಕೆ ತಯಾರಾಗಿ ನಿಂತಿರುವ ದೇವವ್ರತನಿಂದ ಉಂಟಾಗುವ ಈ ಕಿರಿಕಿರಿಯ ಧ್ವನಿ ಮುಂದಿನ ಕೆಲವೇ ನಿಮಿಷಗಳಲ್ಲಿ ಹಾಸಿಗೆಯಲ್ಲಿನ ಹಿಂಸೆಗೆ ತಯಾರಾಗುವ ಮಹಾನ್ ಕಹಳೆಯ ಸ್ವರದಂತೆ ಭಾಸವಾಗತೊಡಗಿತು. ಅದಕ್ಕಾಗಿಯೇ ಅವಳು, "ಇದೇನ್ರಿ ಗಲೀಜು" ಅಂದಿದ್ದು. ಈ ರೀತಿಯ ಪದವನ್ನು ಕೇಳಿದಾಗ ಒಂಚೂರು ಅಸಹನೆಯನ್ನು ಮಾಮೂಲಿಯಾಗಿ ವ್ಯಕ್ತಪಡಿಸುವ ದೇವವ್ರತನೂ ಕೂಡಾ ಸುಜಾತಳನ್ನು ಒಂದು ರೀತಿಯಲ್ಲಿ ಎಲ್ಲದಕ್ಕೂ ಸಿದ್ಧಳಾಗುವಂತೆ ಮಾಡುವ ತಯಾರಿಯನ್ನು ನಡೆಸಿದ. ಸುಜಾತಳಿಗೆ ಈಗ ಉಂಟಾದದ್ದು ಗಾಬರಿಯೇ ಹೊರತು ಪ್ರತಿಕ್ರಿಯಿಸುವ ಉತ್ಸಾಹವಲ್ಲ. ಈಗ ಮೊದಲು ಗ್ಯಾಸ್‌ಸ್ಟವ್ ಅನ್ನು ಆಫ್ ಮಾಡಬೇಕು ಮತ್ತು ಹೊತ್ತಲ್ಲದ ಹೊತ್ತಿನಲ್ಲಿ ಇವನ ಜೊತೆ ಹಾಸಿಗೆಯಲ್ಲಿ ಬಿದ್ದುಕೋಬೇಕು. ಅಪರೂಪಕ್ಕೊಮ್ಮೆ ಮೈಮೇಲೆ ಬಿದ್ದುಬಿಡುವ ದೇವವ್ರತ ಜೀವವನ್ನೇ ಹಿಂಡಿ ತೆಗೆಯುತ್ತಾನೆ. ಅದರಿಂದ ಚೇತರಿಸಿಕೊಳ್ಳಲು ಕೆಲವಾರು ದಿನಗಳು ಬೇಕು. ಸೆಕ್ಸ್‌ಗೆ ಸಂಬಂಧಿಸಿದ ಪತ್ರಿಕೆಗಳನ್ನು ತಂದು ಅದರಲ್ಲಿ ಯಾವ್ಯಾವ ಭಂಗಿಗಳಿವೆ ಅದನ್ನು ಪೂರೈಸಲು ಬಿಡಬೇಕು. ಎಲ್ಲಾ ಮುಗಿದ ಮೇಲೆ ಅವನಿಗೆ ತಕ್ಷಣವೇ ಊಟವನ್ನು ಮಾಡಿ ಹಾಕಬೇಕು. ಹಾಸಿಗೆಯೆಂದರೆ, ಅದನ್ನು ದೇವವ್ರತನೊಂದಿಗೆ ಹಂಚಿಕೊಳ್ಳುವುದೆಂದರೆ ಒಂಥರಾ ಗಲೀಜು ಅಂತನ್ನಿಸಿದರೂ, ಮದುವೆಯಾದ ಕರ್ಮಕ್ಕೆ ಅವನ ಜೊತೆ ಏಗಲೇಬೇಕೆಂದು ಸುಜಾತ ಕೆಲಕ್ಷಣ ಮೌನವಹಿಸಿದಳು. ಅನೇಕ ಸಲ ಹೇಳಿಯೂ ಆಗಿದೆ; 'ಯಾರ ಜೊತೆಗಾದರೂ ನಿಮಗೆ ಬೇಕಾದ ಸುಖ ಪಡೆಯಿರಿ. ನನಗೆ ಮಾತ್ರ ಈ ಹಿಂಸೆ ಬೇಡ.' ಆದರೆ, ಅನಾಮತ್ತಾಗಿ ಮೈಥಿಲಿಯ

ನೆನಪಲ್ಲಿ ಸುಜಾತಳನ್ನು ಹಿಡಿದುಕೊಂಡ ದೇವವ್ರತ ಬಿಡಲೊಲ್ಲ. ಅದೊಂದು ಉಡದ ಹಿಡಿತದ ಹಾಗೆ; ಅನುಭವಿಸಲೇಬೇಕು. ಕಣ್ಣಂಚಿನಲ್ಲಿ ಹನಿಹನಿಯಾಗಿ ಉರುಳುತ್ತಿರುವ ನೀರ ಹನಿಗಳನ್ನು ನೋಡುವ ವ್ಯವಧಾನವೂ ದೇವವ್ರತನಗಿರಲಿಲ್ಲ – ಅಷ್ಟೆ. ಸುಜಾತಳನ್ನು ಹಾಸಿಗೆಯೆಡೆಗೆ ಎಳದೊಯ್ದು.

ಅದೇ ಕ್ಷಣದಲ್ಲಿ ಚಾರುವಿಗೆ ಬಿಸಿಬಿಸಿಯಾದ ಪಲ್ಯವನ್ನು ತಯಾರಿಸುತ್ತಲೇ, 'ಒಂದು ಕ್ಷಣ ಇಲ್ಲಿ ಬರ್ತೀರಾ?' ಎಂದು ಮೈಥಿಲಿ ಕೇಳಿದಳು. ಮಾತಿನಲ್ಲಿಯೇ ಸಾಧ್ಯವಾದಷ್ಟು ನಯ, ನಾಜೂಕು ತುಂಬಿಕೊಂಡು "ಒಂದು ಕ್ಷಣ ಬರ್ತೀರಾ" ಅಂತ ಮೈಥಿಲಿ ಕೇಳಿದಾಗ 'ಹ್ಞಾಂ' ಅಂದ ಚಾರು. ಅವನು ತಾನು ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಂಡಿಲ್ಲವೆಂದು ಅರ್ಥವಿಸಿಕೊಂಡ ಮೈಥಿಲಿ ಮತ್ತೊಮ್ಮೆ ಅದನ್ನು ಉಚ್ಚರಿಸಿ ಹೊರಗೆ ಬಂದಳು. ಚಾರು ಗುಂಡಿನ ಅಮಲಿನಲ್ಲಿ ತೂಕಡಿಸುತ್ತಿದ್ದನೋ – ತೂಕಡಿಸುತ್ತಿರುವಂತೆ ನಟಿಸುತ್ತಿದ್ದನೋ – ಅಂತೂ ಮೈಥಿಲಿ ಒಮ್ಮೆ ಸರಿಯಾಗಿ ನೋಡಿ ದೊಡ್ಡದಾಗಿ ನಿಟ್ಟುಸಿರಿಟ್ಟು ಮತ್ತೆ ಒಳಗಡೆ ಹೋದಳು. ಅವಳು ಒಳಗಡೆ ಹೋಗುವಾಗ ಅವಳ ಮನಸ್ಸಿನಲ್ಲಿ ತಕ್ಷಣವೇ ಮತ್ತೆ ದೇವವ್ರತನ ನೆನಪು ಅಯಾಚಿತವಾಗಿ ಬಂತು. ಈ ನೆನಪು ಸಂಜೆಯದು. ಸಂಜೆಯಲ್ಲಿ ಅವನ ಮೈಯ ಬೆವರಿನ ವಾಸನೆ. ಇದರೊಂದಿಗೆ ಕೂಡಿದ್ದ ಪೌಡರಿನ ಪರಿಮಳ ಮನದಲ್ಲಿ ಮೂಡಿತು. ಹತ್ತಿರ ಬಂದರೆ ಸಿಗರೇಟು ಮತ್ತು ಗುಂಡಿನ ಗಬ್ಬು ವಾಸನೆ ಹೊಡೆಯುತ್ತಿರುವ ಕಡ್ಡಿಪೊರಕೆಯಂಥ ಚಾರುವೆಲ್ಲಿ? ಮತ್ತೆ ಮತ್ತೆ ನಿಟ್ಟುಸಿರು ಉಕ್ಕಿ ಉಕ್ಕಿ ಬರತೊಡಗಿತು. ಕಟ್ಟೆಯ ಮೇಲೆ ಚಪಾತಿಯಲ್ಲಿ ಲಟ್ಟಿಸಲು ಹೊರಟವಳ ಕೈಯಿಂದ ಅಯಾಚಿತವಾಗಿ ಲಟ್ಟಣಿಗೆಯು ಮೈಥಿಲಿಯ ಕಾಲಿಗೆ; ಅದೂ ಸರಿಯಾಗಿ ಕಾಲಿನ ನಡುಬೆರಳಿನ ಮೇಲೆ ಬಿತ್ತು. ಕಾಲುಂಗರದ ಮೇಲೆ ಬಿದ್ದ ಲಟ್ಟಣಿಗೆಯ ದೆಸೆಯಿಂದ "ಅಯ್ಯೋ" ಅಂದಳು. ಮುತ್ತೈದೆಯ ಕಾಲುಂಗುರದ ಮೇಲೆ ಲಟ್ಟಣಿಗೆ ಬಿದ್ದುದು ಮತ್ತು ಮೈಥಿಲಿಯಂಥ ಇಪ್ಪತ್ತೈದರ ಗಡಿದಾಟದ ಗೃಹಿಣಿಯ ಬಾಯಿಯಿಂದ ಬಿದ್ದ "ಅಯ್ಯೋ " ಅನ್ನೋ ಉದ್ಗಾರವೆರಡೂ ಜರುಗಿದ್ದು ಸರಿಯಾಗಿ ಎಂಟೂವರೆ ರಾತ್ರಿಗೆ. ಈ ಎಂಟೂವರೆಯ ರಾತ್ರಿಯಲ್ಲಿ ಮೈಥಿಲಿಯ ಮನಸ್ಸಿನಲ್ಲಿ ದೇವವ್ರತನೆಂಬ ಮನುಷ್ಯ ಹೊರಳಾಡುತ್ತಿದ್ದ. ವಾಸ್ತವವಾಗಿ ಮನಸ್ಸಿನಲ್ಲಿ ಹೊರಳಾಡುತ್ತಿರುವ ದೇವವ್ರತನ ಕಸುವು ಮತ್ತು ಅವನ ಶುದ್ಧ ಪರಿಪೂರ್ಣ ದೇಹದ ಕಲ್ಪನೆಯು ಮೈಥಿಲಿಯಲ್ಲಿ ಒಂಥರದ ಭಾವನೆಗಳಿಗೆ ಕಾರಣವಾಗಿದ್ದರೆ; ಲಟ್ಟಣಿಗೆ ಬಿದ್ದಾಗ ಯಾವುದೋ ಒಂದು ಸುಖದ ಯಾತನೆಯಲ್ಲಿ ಹೊರಡುವ ಅಯ್ಯೋ ಎಂಬಂಥ ಧ್ವನಿ ಬಂದುದು ಅವಳ ಬಾಯಲ್ಲಿ. ಆದರೆ, ಅದೇ ಸಮಯಕ್ಕೆ ಅಪರಿಚಿತವಾದ ಪ್ರಾಣಿಯೊಂದು ಏಕಾಏಕಿ ಮೈಮೇಲೆ ಬಿದ್ದಂತೆ ಮೈಯ ಮೂಲೆ ಮೂಲೆಯಲ್ಲಿ ಗಾಯ ಮಾಡಿರುತ್ತಿರುವಂತೆ ದೇವವ್ರತನ ಹಿಂಸೆ ತಡೆಯಲಾಗದೆ ಸುಜಾತ ಕೂಡಾ

"ಅಯ್ಯೋ" ಅಂದಳು. ಸುಜಾತಳ "ಅಯ್ಯೋ" ಅನ್ನುವ ಶಬ್ದ ಮತ್ತು ಸಡನ್ನಾಗಿ ಅವಳು ದೇವವ್ರತನನ್ನು ನೂಕಿದ ಸಮಯ ಕೂಡಾ ಸರಿಯಾಗಿಯೇ ಕೂಡಿಬಂತು. ಅದೇ ಸಂದರ್ಭದಲ್ಲಿ ಇಬ್ಬರು ಹೆಂಗಸರು ಉಚ್ಚರಿಸಿದ ಒಂದೇ ಒಂದು ಪದ "ಅಯ್ಯೋ."

ಮೈಥಿಲಿಯ 'ಅಯ್ಯೋ' ಅನ್ನುವ ಪದವನ್ನು ಕೇಳಿ ತೂಕಡಿಕೆಗೆ ಒಳಗಾಗಿದ್ದ ಚಾರು ಎಚ್ಚರವಾದ. ತಟ್ಟೆಯಲ್ಲಿ ಚಪಾತಿ ಮತ್ತು ಪಲ್ಯವನ್ನು ತಂದ ಮೈಥಿಲಿಯು, "ನಾನು ನಿಮ್ಮೊಂದಿಗೆ ನಾಳೆ ಮಾತಾಡಬೇಕು. ಸಮಯ ಕೊಡ್ತೀರಾ" ಅಂದಳು. ಈ ಮಾತಿನಲ್ಲಿ ಅವಳಿಟ್ಟುಕೊಂಡಿದ್ದ ನಯವಿನಯ ವಿಚಿತ್ರವಾಗಿದೆಯೆಂದನ್ನಿಸಿ "ನಾಳೆ ನಾಲ್ಕೂವರೆಗೆ ಸಮಯ ಕೊಡ್ತೇನೆ ಮಾತಾಡೋಣ, ಐದೂವರೆಯ ಮೇಲೆ ಸಮಯದ ಅವಕಾಶವಿಲ್ಲ" ಎಂದ ಚಾರು ತನ್ನ ಮತ್ತು ಮೈಥಿಲಿಯ ನಡುವಣ ನಾಟಕೀಯ ಅಭಿವಕ್ತಿಗೆ ಆಶ್ಚರ್ಯಪಟ್ಟ!

ಎದುರಿಗೆ ಬಂದ ಕಡಲೆಕಾಯಿ ಹುಡುಗ

– ೭ –

ಸರಿಯಾಗಿ ನಾಕೂವರೆಗೆ ಚಾರು ಮತ್ತು ಮೈಥಿಲಿಯರು ಯಾವ ಮಾತುಗಳನ್ನೂ ಪರಸ್ಪರ ಉದುರಿಸದೆ ನಿಧಾನವಾಗಿ ಹೆಜ್ಜೆಹಾಕಿದರು. ಇಬ್ಬರಿಗೂ ಮಾತಾಡುವಂಥ ಯಾವ ಉತ್ಸಾಹವೂ ಇದ್ದಿರಲಿಲ್ಲ. ಮೈಥಿಲಿಯ ಗುಂಗು ಒಂದು ಬಗೆಯದಾದರೆ, ಚಾರುವಿನ ಮನಸ್ಸಿನಲ್ಲಿ ಅವಳು ಆಡಬಹುದಾದ ಮಾತಿನ ವರಸೆಯ ಬಗ್ಗೆಯೇ ಯೋಚನೆಯಿತ್ತು. ಮುಂದಿನ ಅವಳ ಮಾತು ಯಾವುದಿರಬಹುದು ಎಂಬ ಕಲ್ಪನೆಯೇ ಚಾರುವಿನ ಮನಸ್ಸಿನ ಮುಂದಿದ್ದರೆ, ನಾನೀಗ ಮಾತನ್ನು ಹೇಗೆ ಹೇಳಬೇಕೆಂಬುದು ಅರ್ಥವಾಗದೆ ತೊಳಲಾಡುತ್ತಿರುವ ಮೈಥಿಲಿಯ ಮುಂದೆ ತಕ್ಷಣವೇ ದೇವವ್ರತನು ಆಡಿರುವ ಮಾತುಗಳು ಹಾಜರಾದವು.

ಇಬ್ಬರೂ ನಿಧಾನವಾಗಿ ಆದರೆ ಪರಸ್ಪರ ಅಪರಿಚಿತರಂತೆ ನಡೆಯುತ್ತಲೇ ಯಥಾಪ್ರಕಾರ ಎಲ್ಲಿ ದೇವವ್ರತ ಮೈಥಿಲಿಯಲ್ಲಿ ತನ್ನೆಲ್ಲಾ ಮಾತುಗಳ ವರಸೆಯನ್ನು ಪ್ರಾರಂಭಿಸಿದ್ದನೋ, ಅದೇ ಜಾಗಕ್ಕೆ

ಬಂದು ಕೂತರು. ಆದರೆ ನಿನ್ನೆ ದೇವವ್ರತನು ಎಲ್ಲಿ ಕೂತಿದ್ದನೋ ಅದೇ ಜಾಗದಲ್ಲಿಂದು ಮೈಥಿಲಿ ಕೂತರೆ, ನಿನ್ನೆ ಮೈಥಿಲಿಯು ಕುಳಿತ ಜಾಗದಲ್ಲಿ ಇಂದು ಚಾರು ಕುಳಿತುಕೊಂಡ. ಜಾಗವು ಬದಲಾಗಿದೆಯೆಂಬ ಅರಿವು ಮತ್ತು ಅದರ ತಿಳಿವು ಮೈಥಿಲಿಗೆ ಇದ್ದರೂ, ಜಾಗವು ಬದಲಾಗಿದೆಯೆಂಬ ಯಾವ ಸೂಚನೆಯಾಗಲೀ, ಕಲ್ಪನೆಯಾಗಲೀ ಚಾರುವಿನ ಮನದ ಒಂದಿಷ್ಟೂ ಜಾಗದೊಳಗೂ ಪ್ರವೇಶಿಸುವ ಯಾವ ಸಾಧ್ಯತೆಯೂ ಇರಲಿಲ್ಲ. ಮೈಥಿಲಿಯೇ ಮಾತನ್ನು ಶುರು ಮಾಡಲಿಯೆಂದು ಚಾರು ಕುಳಿತಿದ್ದರೆ, ಮೊದಲು ಮಾತನ್ನು ಚಾರು ಶುರುಮಾಡಲಿ ಎಂದು ಮೈಥಿಲಿಯು ಕುಳಿತಿದ್ದಳು. ಯಾರು ಯಾವ ಮಾತು ಮೊದಲು ಶುರುಮಾಡಬೇಕೆಂದು ತಿಳಿಯದೆ ಕೂತ ಹೊತ್ತಿನಲ್ಲಿಯೇ ಅದೇ ಗಾರ್ಡನಿನ, ಅದೇ ಕಡ್ಲೆಕಾಯಿ ಹುಡುಗ 'ಕಡ್ಲೆ ಕ್ಯಾ' ಎಂದು ಕಿರುಚುತ್ತಾ ಬಂದ. ಅವನು ಕಿರುಚುತ್ತಾ ಬಂದವನೇ "ಅಮ್ಮೋರೇ ಕಡ್ಲೇಕ್ಯಾ" ಅಂದ. ಮೈಥಿಲಿ ಸುಮ್ಮನಿದ್ದಳಾದರೂ ಅವನನ್ನು ನೋಡಿದ ತಕ್ಷಣ ನಾವು ಬಂದು ಕೂತ ಜಾಗ ಸರಿಯಾಗಿಲ್ಲವೆಂದು ಅನಿಸಿತು. ಚಾರು ಅನ್ಯಮನಸ್ಕನಾಗಿ ಬೇಡಪ್ಪಾ ಅಂದ. ಆದರೆ, ಕಡ್ಲೆ ಮಾರುವ ಹುಡುಗ "ಅಮ್ಮೋರೆ, ಮೊನ್ನೆ ಕಡ್ಲೆಕ್ಯಾ ತಗೊಂಡ್ರಿ; ಈವತ್ತು..." ಅರ್ಧ ವಾಕ್ಯದಲ್ಲಿಯೇ ತನ್ನ ಮಾತನ್ನು ನಿಲ್ಲಿಸಿದ. ಕಡ್ಲೆಕ್ಯಾ ಹುಡುಗನ ಕಣ್ಣಲ್ಲಿ ಒಂದು ಮಾದರಿಯ ನೋಟವಿದೆ ಎಂದು ವಾಸ್ತವವಾಗಿ ಮೈಥಿಲಿಗೆ ಅರ್ಥವಾಗಿತ್ತು. ಆದರೆ, ಈ ಕುರಿತು ಹೆಚ್ಚು ಮಾತಾಡುವುದಕ್ಕೆ ಅವನಿಗೆ ಅವಕಾಶಕೊಟ್ಟರೆ ಕಷ್ಟವೆಂದು ಅವಳಿಗೆ ಅನ್ನಿಸಿ ಅವಳು ಬಾಯ್ದೆರೆಯ ಬೇಕೆನ್ನುವಷ್ಟರಲ್ಲಿ ಅದೇ ಹುಡುಗ "ನಿಮ್ಮ ಮನೆಯವ್ರು ಮೊನ್ನೆ ಎಷ್ಟೊಂದು ಕಡ್ಲೆಕ್ಯಾ ತಗೊಂಡ್ರು. ಈವತ್ತು ಯಾಕೆ ಬೇಡ ಅಮ್ಮಾವ್ರೆ" ಎಂದ. ಚಾರುವಿನ ಹುಬ್ಬು ಒಮ್ಮೆ ಮೇಲೇರಿ ಮತ್ತೆ ಕೆಳಗಿಳಿಯಿತು. ಅವನ ಹುಬ್ಬು ಮೇಲೇರಿ ಮತ್ತೆ ಕೆಳಗಿಳಿದುದನ್ನು ನೋಡಿದ ಮೈಥಿಲಿಯು ಯಾವುದಾದರೂ ಒಂದು ಮಾತನ್ನು ಹೇಳಬೇಕಲ್ಲ ಎನ್ನುವ ಕಾರಣಕ್ಕೆ 'ಕಡ್ಲೆಕಾಯಿ ತಿಂತೀರಾ?' ಅಂದಳು. ಚಾರು ಅದಕ್ಕೆ ಸಿಡಿಮಿಡಿಗೊಂಡೆ 'ಕಡ್ಲೆಕಾಯಿ ತಿನ್ನೋಕೆ ನಾವಿಲ್ಲಿ ಬಂದಿಲ್ಲ'ಅಂದ. ಆ ಮಾತುಗಳಲ್ಲಿದ್ದ ಏರು ಧ್ವನಿಯನ್ನು ಗಮನಿಸಿದ ಕಡ್ಲೆಕಾಯಿ ಹುಡುಗ 'ಇವರಿಗೂ, ಇವ್ರ ಮನೆಯವರಿಗೂ ಕಡ್ಲೆಕಾಯಿ ತಿನ್ನೋದೆಂದರೆ ಬಲು ಆಸೆ ಸಾಹೇಬ್ರೆ' ಅಂದ. ಕಡ್ಲೆಕಾಯಿ ಹುಡುಗ ಹೇಳಿದ್ದಕ್ಕೆ ತಕ್ಷಣವೇ ಮೈಥಿಲಿಗೆ ಯಾವರೂಪದ ಸಿಟ್ಟು ಬಂತೆಂದರೆ, 'ಹೋಗೋ ಆಚೆಗೆ' ಅಂದುಬಿಟ್ಟಳು. ಈ ಮಾತಿನಲ್ಲಿದ್ದ ಸಿಟ್ಟು ನೋಡಿ ಕಡ್ಲೆಕಾಯಿ ಹುಡುಗ ಆ ಕಡೆಗೆ ಹೊರಟುಹೋದರೂ ಅವನ ಮಾತು ಮಾತ್ರ ಹಾಗೆಯೇ ಉಳಿಯಿತು, ಮನಸ್ಸಿನಲ್ಲಿ ತಕ್ಷಣವೇ ಚಾರು ವಾಚನ್ನು ನೋಡಿಕೊಂಡ, ನೋಡಿಕೊಂಡವನೇ – 'ಅದೇನೋ ಹೇಳಬೇಕೆಂದಿದ್ದೆಯಲ್ಲಾ? ಅದನ್ನು ಹೇಳು, ಸುಮ್ಮನೇ ಕಾಲಕಳೆಯುವುದು ಬೇಡ' ಅಂದ. ಈ ಮಾತು ಅತ್ಯಂತ ಶುಷ್ಕವಾಗಿಯೂ: ಒಣ ವೇದಾಂತಿಯ ಮಾತಿನಂತೆಯೂ

ಇದ್ದುದರ ಪರಿಣಾಮವೋ ಅಥವಾ ತಾನು ಹೇಳಬೇಕೆಂಬ ಮಾತಿನ್ನೂ ಹೇಗೆ ಶುರುವಾಗಿಡಬೇಕು ಎಂದು ತಿಳಿಯದ್ದರ ಪರಿಣಾಮವೋ – ಅಂತು ಕೊಂಚ ಸಮಯವನ್ನು ತೆಗೆದುಕೊಂಡೇ ಮೈಥಿಲಿ ತನ್ನ ಮಾತನ್ನು ಪ್ರಾರಂಭಿಸಿದಳು. ಅವಳು ಮಾತಾಡಿದ ಕ್ರಮವು ಯಾವ ರೀತಿಯದಾಗಿತ್ತೆಂದರೆ ಮುಂದೆ ಅದು ಚಾರುವಿನ ಮನಸ್ಸಿನಲ್ಲಿ ಯಾವತ್ತೂ ಉಳಿಯಬಹುದಾದ ಒಂದು ಮಾತಾಗಿ ಪರಿಣಮಿಸಬಹುದೆಂದು ಅವಳೇ ಊಹಿಸಿರಲಿಲ್ಲ ಮತ್ತು ಮುಂದೆ ಜೀವನದುದ್ದಕ್ಕೂ ಈ ಮಾತು ತನಗೆ ತಿರುಗಬಾಣವಾಗಬಹುದು; ಅನೂಹ್ಯವಾದ ಜೀವನದ ತಿರುವುಗಳನ್ನು ಕಾಣಬಹುದು ಎಂದು ಕೂಡಾ ಅವಳು ಭಾವಿಸಿಕೊಂಡಿರಲಿಲ್ಲ. ಭಾವಿಸಿಕೊಂಡಿದ್ದರೆ ಅವಳು ತನ್ನ ಮಾತುಗಳನ್ನು ಬೇರೆ ರೀತಿಯಲ್ಲಿ ಪೋಣಿಸಿಕೊಂಡು ಬಿಡುತ್ತಿದ್ದಳೋ ಏನೋ? ಆದರೂ ಅವಳ ಬಾಯಿಂದ ಅನಾಯಾಸವಾಗಿ ಆ ಮಾತು ತನ್ನ ಹೆಮ್ಮೆಯ ಮಾತಾಗಿ ಉದುರಿಬಿತ್ತು "ನನಗೆ ಯಾರೋ ಒಂದು ಪ್ರಪೋಸಲ್ ಇಟ್ಟಿದ್ದಾರೆ. ಒಂದೆರಡು ದಿನ ಸಮಯಾನು ಕೊಟ್ಟಿದ್ದಾರೆ." ಯಾರೋ ಒಂದು ಪ್ರಪೋಸಲ್ ಇಟ್ಟಿದ್ದಾರೆ ಅಂದಾಗ ಅದನ್ನು ಅರ್ಥಮಾಡಿಕೊಳ್ಳಲು ಕಿಂಚಿತ್ತೂ ಅವಕಾಶ ಬೇಕಾಗಿಲ್ಲವೇನೋ ಎಂಬಂತೆ "ಸರಿ" ಎಂದು ಹೇಳಿದ. "ಯಾರೂಂತ ಕೇಳೋಲ್ವ?" ಮೈಥಿಲಿ ಕುತೂಹಲಭರಿತವಾಗಿ ಕೇಳಿದಳು. ಆದರೆ, ಸಿಗರೇಟು ಹಚ್ಚಿ ನಿಧಾನವಾಗಿ ಮತ್ತು ಉದ್ವೇಗವನ್ನು ಒಂಚೂರು ತೋರಿಸದೆ ತುಂಬಾ ಶೀತಲವಾಗಿ, 'ದೇವವ್ರತ' ಎಂದ. ಅದರ ಹಿಂದಿರುವ ನಿರುದ್ವೇಗವನ್ನು ಗಮನಿಸಿದ ಮೈಥಿಲಿ "ಅದು ಹೇಗೆ ಗೊತ್ತಾಯ್ತು?" ಎಂದು ಕೇಳಿದಳು. ಅವಳಿಗೆ ಉಂಟಾದ ಕುತೂಹಲ– ಚಾರುವಿನಂಥ ಬಡಪಾಯಿ ಫಕೀರನಿಗೆ ಇದೆಲ್ಲಾ ಹೇಗೆ ಗೊತ್ತಾಗಿಬಿಡ್ತು ಅನ್ನುವುದೇ ಹೊರತು ಬೇರೇನೂ ಅಲ್ಲ. ಆದರೆ, ಅವಳ ಕುತೂಹಲದ ಮಾತಿಗೆ ಮಾತ್ರ 'ಕಣ್ಣು, ಕಿವಿ, ಮೂಗು ಈ ಮೂರು ನನಗೆ ಸರಿಯಾಗಿಯೇ ಇದೆ. ಆದ್ರೆ, ಅವನು ಏನೂಂತ ಹೇಳಿದ?'– ಅಷ್ಟೇ ಖಚಿತವಾಗಿ ಮತ್ತು ದೃಢವಾಗಿ ಕಣ್ಣನ್ನು ಕಿರಿದು ಮಾಡಿಕೊಂಡು ಚಾರು ಕೇಳಿದಾಗ, ಅಷ್ಟೇ ಇನ್ನೇನು ಇಲ್ಲ ಎಂದಳು. ತಕ್ಷಣ ಅವಳ ಮಾತಿಗೆ ಚಾರು ಬೆನ್ನು ಹಾಕಿ ಹೊರಟುಹೋದನಲ್ಲ ಆಗಲೇ ಅವಳಿಗೆ ಅರಿವಾದ್ದು ತನ್ನ ಯಾವ ಚಲ್ಲಾಟಗಳೂ ಚಾರುವನ್ನು ಒಂದಿಷ್ಟೂ ಕದಲಿಸಲಾರವು.

ಹಾಗೆಯೇ ಧಿಡೀರನೇ ಏನೂ ಮಾಡಲಾರದೆ ಕೂತವಳು ಹೊತ್ತು ಮುಳುಗುವ ಸನ್ನಿಧಿಯಲ್ಲಿ, ಕತ್ತಲಾವರಿಸುತ್ತಾ ಬಂದಂತೆ ಒತ್ತರಿಸಿ ಬಂದ ಕಣ್ಣೀರನ್ನು ಅದೇ ಪುಟ್ಟ ಕರ್ಚೀಪಿನಲ್ಲಿ ಒರೆಸಿಕೊಂಡಳು. ತನ್ನ ನಗು; ಚೆಲ್ಲಾಟ; ದೇವವ್ರತನು ಹೇಳಿಕೊಟ್ಟ ಸುಖ, ನೆಮ್ಮದಿಯೆಂಬ ಮಂತ್ರ ನಿಧಾನವಾಗಿ ಕರಗಿದವು ಎನ್ನುವುದು ಅವಳಿಗೆ ಆಗ ತಿಳಿಯಲಿಲ್ಲ. ಅದು ಬೇರೆ ಮಾತು. "ಗಂಡಸಿಗಿಂತಲೂ ಹೆಂಗಸು ಯಾವತ್ತೂ ಸುಂದರಿ, ಗಂಡಸಿಗೆ ಏನಿದೆ ಮಣ್ಣು? ಗಂಡೆಂದರೆ ಹೆಣ್ಣಿನ ಹತ್ತಿರ ಸುಳಿದು ಕೊನೆಗೆ

ಹತಾಶನಾಗುವ ಪ್ರಾಣಿ." ಕನ್ನಡಿಯೆದುರು ಒಬ್ಬಂಟಿಯಾಗಿ ತನ್ನ ಮೈಯ ಸೌಂದರ್ಯವನ್ನು ತಾನೇ ಮೋಹಿಸಿಕೊಂಡು ಭ್ರಮಿಸಿಕೊಂಡ ಮೈಥಿಲಿಗೆ ಚಾರು ತಾನು ತಿಳಿದುಕೊಂಡಂತಿಲ್ಲ ಎಂಬುದರ ಅರಿವಾದದ್ದೇ ಆಘಾತ. ಅಷ್ಟೇ ಅಲ್ಲ "ಇಲ್ಲ ಪ್ರಿಯತಮೆ, ನಾನು ನಿನ್ನನ್ನು ತುಂಬ ಪ್ರೀತಿಸುತ್ತೇನೆ. ಆಕಾಶದಷ್ಟು, ಸಮುದ್ರದ ಆಳದಷ್ಟು; ನಿನ್ನಂಥ ಬುದ್ಧಿವಂತೆ, ಸುಂದರಿ ಹೆಣ್ಣು ಖಂಡಿತಕ್ಕೂ ನನ್ನ ಜೀವನದಲ್ಲಿ ಯಾವತ್ತೂ ಸಿಕ್ಕಿರಲಿಲ್ಲ, ಮತ್ತು ನೀನು ಒಂದು ವೇಳೆ ದೇವವ್ರತನೊಂದಿಗೆ ಹೋದೆಯಾದರೆ ನನ್ನ ಪ್ರಾಣ ಪಕ್ಷಿಯು ಹಾರಿಹೋಗುತ್ತದೆ" ಎಂಬಿತ್ಯಾದಿ ಮಾತುಗಳನ್ನು ಹೇಳಿ, ಮೈಥಿಲಿಯನ್ನು ತಬ್ಬಿಕೊಂಡು ಸಮಾಧಾನಿಸಬಹುದು ಎಂದು ಭಾವಿಸಿಕೊಂಡಿದ್ದಳು. ಆದರೆ, ಚಾರು ಇಷ್ಟೊಂದು ಗಟ್ಟಿಯಾಗಿ ನಿಂತು ಉಲ್ಟಾ ಹೊಡೆಯಬಹುದು ಎಂಬ ಯಾವ ಊಹೆಯೂ ಅವಳಲ್ಲಿ ಇರಲಿಲ್ಲ. ಅದರಿಂದಲೇ ಬೆನ್ನು ಹಾಕಿ ಹೊರಟುಹೋದ ಚಾರು ಅವಳ ಯಾವ ತರ್ಕಕ್ಕೂ ಸಿಗಲಿಲ್ಲ.

ಶವದ ಮೇಲೆ ಭೋಗಿಯಂತೆ ಬಿದ್ದವ...

– ೮ –

ಆದರೆ ಸರಿಯಾಗಿ ಅವಳಿಗೆ ಬೆನ್ನು ಹಾಕಿ ಹೊರಟ ಚಾರು ಯಾವ ಹಂಗುಗಳು ಕೂಡಾ ತನ್ನ ಬಾಧಿಸಲಾರವು ಎಂಬಂತೆ ನಡೆದು ಹೋದ ಅವನ ಮನಸ್ಸಿನಲ್ಲಿ ಸಾವಿರಾರು ರೀತಿಯ ದುಗುಡಗಳು ಕಟ್ಟಿರುವೆಯಂತೆ ಕಡಿಯ ತೊಡಗಿದವು. ಅವನು ಮೊದಲು ಮನಸ್ಸಿನಲ್ಲಿ ನೆನಸಿಕೊಂಡದ್ದು ದಿನವನ್ನು, ಸರಿಯಾಗಿ ಶನಿವಾರ, ಮುಹೂರ್ತ – ಅದೇ ಗೋಧೂಳಿ ಮತ್ತು ಮೈಥಿಲಿಯ ಜೊತೆ ಮಾತಾಡಿ ಹೊರಟಿದ್ದು ಪೂರ್ವ ದಿಕ್ಕಿಗೆ. ಮೈಥಿಲಿಯು ಹಾದಿಯನ್ನು ಹಿಡಿದದ್ದು ಉತ್ತರದ ದಿಕ್ಕಿಗೆ. ಮುಂದಿನ ದಿನಗಳಲ್ಲಿ ಯಾರು ಯಾವ ದಿಕ್ಕಿಗೆ ಪಯಣಿಸುತ್ತಾರೆಂಬುದು ಸ್ಪಷ್ಟವಿಲ್ಲ. ಆದರೆ ಚಾರುವಿನ ನೆನಪಿಗೆ ಬಂದಿದ್ದು ಈ ಗೋಧೂಳಿ, ಶನಿವಾರ ಮತ್ತು ಪೂರ್ವದ ದಿಕ್ಕು ಅಷ್ಟೆ. ನೆಟ್ಟಗೆ ನಡೆದವನು ಯಾವುದಕ್ಕೂ ಯೋಚಿಸಿದವನಂತೆ ಹೆಗಲಿಗೆ ಹಾಕಿಕೊಂಡ ಬ್ಯಾಗನ್ನು ನೇತಾಡಿಸಿಕೊಂಡು ನಡೆದದ್ದು ಮಾತ್ರ ವೈನ್ ಶಾಪಿಗೆ. ಯಾವತ್ತಿನಂತೆ ಎರಡು ಬಾಟಲ್

ಜಿನ್‌ನ್ನು ಎತ್ತಿಟ್ಟುಕೊಂಡಿದ್ದ ವೈನ್ ಶಾಪಿನವನಿಗೆ ಮಾತ್ರ ಮೆತ್ತಗೆ "ನಾಕು ಕ್ವಾಟರ್ ರಮ್ ಕೊಡ್ರಿ" ಅಂದ. ಅವನ ಧ್ವನಿಯಲ್ಲಿ ತುಂಬಿಕೊಂಡಿದ್ದ ವಿಚಿತ್ರ ತಲ್ಲಣ ಮಾತ್ರ ತಕ್ಷಣವೇ ವೈನ್ ಶಾಪಿನವನಿಗೆ ತಿಳಿಯಿತು.

ವೈನ್ ಶಾಪಿನವನು, "ಯಾಕೆ ಸಾರೂ, ಬ್ರಾಂಡು ಬದಲಾಯಿಸಿಬಿಟ್ಟಿದ್ದೀರಾ?" ಅಂದ. ಚಾರೂ ಮಾತ್ರ ಅದಕ್ಕೆ ತಲೆಕೆಡಿಸಿಕೊಳ್ಳದವನಂತೆ "ಅದೆಲ್ಲಾ ನಿಮಗೇಕೆ? " ಎಂದವನೇ "ಎಷ್ಟಾಯ್ತು? " ಅಂತಲೆ ಜೇಬಿಂದ ನೂರರ ನೋಟನ್ನು ತೆಗೆದುಕೊಟ್ಟ. ಈ ಕ್ಷಣ ಕುಡಿದಿಲ್ಲವೆಂದಾದರೆ ಬದುಕಿ ಉಳಿಯುವುದಿಲ್ಲವೇನೋ ಎಂಬಷ್ಟು ತೀವ್ರತೆಯಲ್ಲಿದ್ದ ಚಾರು ಮತ್ತೆ ಅಲ್ಲಿಂದ ಕಾಲಿಟ್ಟ ದಿಕ್ಕು ಮಾತ್ರ ಪಶ್ಚಿಮ. ಪೂರ್ವ ಮತ್ತು ಪಶ್ಚಿಮವೆನ್ನುವುದು ಚಾರುವಿನ ದೃಷ್ಟಿಯಲ್ಲಿ ಕೇವಲ ದಿಕ್ಕುಗಳಲ್ಲ. ಹಾಗೆಯೇ ಸೂರ್ಯೋದಯ ಮತ್ತು ಸೂರ್ಯಾಸ್ತವೆನ್ನುವುದು ಕೂಡಾ. "ಉದಯ" ಮತ್ತು "ಅಸ್ತ" ಅನ್ನುವುದು ಜೀವನದ ಮಹಾನ್ ಸಂಕೇತವೇನೋ ಎಂಬಂತೆ ಚಾರು ಹೆಜ್ಜೆಯನ್ನು ಎಷ್ಟೊಂದು ಅವಸರವಾಗಿ ಇಟ್ಟಿದ್ದನೆಂದರೆ ಇನ್ನು ಕೆಲವು ಕ್ಷಣಗಳಲ್ಲಿ ಅವನು ಬೇರಾವುದೋ ಗಮ್ಯ ಸ್ಥಾನವನ್ನು ತಲುಪುವ ಹಂಬಲದಲ್ಲಿದ್ದಾನೆಂಬುದು ಅವನ ನಡಿಗೆಯಲ್ಲಿ ಉಳಿದವರಿಗೆ ತಿಳಿಯುತ್ತಿತ್ತು. ನೆಟ್ಟಗೆ ನಡೆದವನು ಬಂದು ಕುಳಿತದ್ದು ಜನಸಂಚಾರ ಮತ್ತು ಕಾಲುಹಾದಿಗೂ ನಿಲುಕದ ಪೊದೆಯ ಹತ್ತಿರ.

ಕತ್ತಲಾದರೂ ಸರಿಯೇ ಈಗಲೇ ಬಾಟಲಿಯ ಬಾಯಿಯನ್ನು ಅವಸರದಲ್ಲಿ ತೆರೆಯಬೇಕೆಂದು ಮುಚ್ಚಳ ತೆರೆದು ಬಾಯಿಗಿಟ್ಟ ದೇವವ್ರತನ ಬಗೆಗಿನ ಅಸಹನೆ; ಮೈಥಿಲಿಯ ಬಗೆಗಿನ ಸಿಟ್ಟು ಎರಡನ್ನು ಜೊತೆ ಸೇರಿಸಿಕೊಂಡಂತೆ ರಮ್‌ನ್ನು ಗಂಟಲಾಳಕ್ಕೆ ಸುರುವಿಕೊಂಡ. ಆ ಸಮಯಕ್ಕೆ ಸರಿಯಾಗಿಯೇ ಅವನಿಗೆ ಬಂದ ಮೊದಲ ಆಲೋಚನೆಯೆಂದರೆ, ಇನ್ನು ಒಂದು ತಿರ್ಮಾನಕ್ಕೆ ತಂದಿಡಬೇಕು, ಉಳಿದುದು ಆಮೇಲೆ. ಸುಳಿಸುಳಿದು ಬಂದ ಆಲೋಚನೆಗೆ ಒಂದು ಇತ್ಯಾತ್ಮಕವಾದ ನಿರೂಪವನ್ನು ಒದಗಿಸಲು ಚಾರು ಸನ್ನದ್ಧನಾದ. ಮುಂದಿನ ಗಳಿಗೆಗಳು ಯಾವ ರೀತಿಯಲ್ಲಿ ಅವಕಾಶಗಳನ್ನು ಪಡೆದುಕೊಳ್ಳಬಹುದು ಎಂಬುದರ ಬಗ್ಗೆ ಚಾರುವಿಗೆ ಯಾವ ಚಿಂತೆಗಳೂ ಇರಲಿಲ್ಲವೆಂದಲ್ಲ. ಯಾಕೆಂದರೆ ಆಯ್ಕೆಯನ್ನು ಪೂರ್ತಿಯಾಗಿ ಮೈಥಿಲಿಗೆ ಬಿಟ್ಟವನಿಗೆ ಆ ಬಗೆಯ ಚಿಂತೆ ಸಹಜ. ಹೆಚ್ಚೆಂದರೆ, ಮೈಥಿಲಿಯು ದೇವವ್ರತನೊಂದಿಗೆ ಹೊರಟು ಹೋಗಬಹುದು, ಇಲ್ಲವೇ ದೇವವ್ರತನನ್ನು ಮನದಲ್ಲಿ ಇಟ್ಟುಕೊಂಡರೂ ತನ್ನ ಜೊತೆಗೆ ಇರಬೇಕಾದ ಅನಿವಾರ್ಯತೆಯನ್ನು ರೂಢಿಸಿಕೊಳ್ಳಬಹುದು. ಆದರೆ ಸಮಸ್ಯೆ ಎಲ್ಲಿದೆ ಎಂದರೆ, ವಿದಾಯವು ಯಾವುದಿರಬೇಕು? ಮತ್ತು ಮೈಥಿಲಿಯ ಇಡಿಯ ಜೀವನದ ಗತಿ ವಿಧಾನಗಳನ್ನೇ ಬದಲಾಯಿಸಬಲ್ಲಷ್ಟು ಶಕ್ತಿಯುಳ್ಳ ದೇವವ್ರತನ ಪ್ರಪೋಸಲ್‌ನ್ನು ಹೇಗೆ ನಿರಾಯಾಸವಾಗಿ ನನ್ನೆದುರು ಬಿಚ್ಚಿಟ್ಟಳು? ಕೊನೆಗೂ ನಿಮ್ಮನ್ನು ಬಿಡಲಾರೆನೆಂದು ಮೈಥಿಲಿಯು ಯಾತಕ್ಕೆ

ಹೇಳಿದಳು? ಈ ಪ್ರಶ್ನೆಯು ಬೃಹದಾಕಾರವಾಗಿ ಚಾರುವಿನ ಮನವನ್ನು ಕೊರೆಯತೊಡಗಿತು. ಮುಂದಿನ ಗತಿಯಲ್ಲಿ ತನ್ನ ಹೆಜ್ಜೆಯು ಯಾವ ಕಡೆಗಿದೆ ಎಂದು ಚದುರಂಗದಾಟವಾಡುತ್ತಿರುವ ಮೈಥಿಲಿಗೆ ತಿಳಿದಿರಬಾರದೆಂದು ದೃಢವಾಗಿ ನಿಶ್ಚಯಿಸಿಕೊಂಡವನೇ ಚದುರಂಗದಾಟದ ಕುದುರೆಯನ್ನು ಮುಂದಕ್ಕಿಡುವ ದೃಢ ನಿಲುವನ್ನು ತಳೆದ. ಈಗ ದೇವವ್ರತ ಮತ್ತು ಮೈಥಿಲಿಯರಿಗೆ 'ಚೆಕ್' ಅಂತ ಹೇಳುವುದೇ ಉಳಿದಿರುವ ದಾರಿ. ನೋಡೋಣ ಅಂತ ಭಾವಿಸಿಕೊಂಡ. ಯಾವ ರೀತಿಯ ಚಿತ್ತ ಚಾಂಚಲ್ಯಕ್ಕೆ ಅವಕಾಶ ಕಲ್ಪಿಸಬಾರದು ಎಂದು ಚಾರು ನಿರ್ಧರಿಸಿಕೊಂಡು ರಮ್‌ನ ಮತ್ತೊಂದು ಪೆಗ್ ಬಾಯಿಗಿಟ್ಟ ಹೊತ್ತಿಗೆ ಸರಿಯಾಗಿಯೇ ಸುಜಾತ ಮನೆಯಲ್ಲಿ ದೇವವ್ರತನ ಪಕ್ಕದಲ್ಲಿ ಕೂತು ಹರಟೆ ಹೊಡೆಯುತ್ತಿದ್ದಳು. ಆ ಹರಟೆಯಲ್ಲಿ ತಲೆಯೂ ಮತ್ತು ಬಾಲವೂ ಇಲ್ಲ ಎಂಬುದು ದೇವವ್ರತನಿಗೂ ಗೊತ್ತು ಹಾಗೆಯೇ ಸುಜಾತಳಿಗೂ. ನಿನ್ನೆ ರಾತ್ರಿಯಲ್ಲಿ ಹಿಂಸಿಸಿದ, ಮೈಯ ಇಂಚು – ಇಂಚೂ ಬಿಡದೆ ಹಸಿದವನಂತೆ ಹಿಂಡಿ ಹಿಪ್ಪೆ ಮಾಡಿದ ದೇವವ್ರತನೊಂದಿಗೆ ಈಗ ಸುಖವಾಗಿ ತಲೆಬುಡವಿಲ್ಲದೆ ಮಾತುಗಳನ್ನು ಆಡಲು ಮಾತ್ರ ಸಾಧ್ಯವಿಲ್ಲ. ಸುಜಾತ ಹಗಲಿಡೀ ಚಿಂತಿಸಿದ್ದಳೆಂಬುದರ ಅರಿವು ದೇವವ್ರತನಿಗೆ ಬಂದಿರಲಿಲ್ಲ. ಆದರೆ, ತಾನು ನಿನ್ನೆ ಆ ಬಗೆಯಲ್ಲಿ ಸುಜಾತಳನ್ನು ಹಿಂಸಿಸಿದ್ದೆ ಎಂಬುದರ ಅರಿವು ದೇವವ್ರತನಿಗೆ ಬರುವುದೂ ಸಾಧ್ಯವೂ ಇರಲಿಲ್ಲ. ಮೃಗೀಯವಾದ ತೃಷೆ ಹಿಂಗಿದ ಮೇಲೆ ಹೊರಳಿ ಮಲಗಿದವನ ಕನಸುಗಳಲ್ಲಿ ನಿನ್ನೆ ರಾತ್ರಿ ತುಂಬಿ ಬಂದಿರುವುದು ಮೈಥಿಲಿಯೇ ಹೊರತು ತೃಷೆಯನ್ನು ಹಿಂಗಿಸಿದ ಸುಜಾತ ಅಲ್ಲ. ಎದೆಯ ಮೂಲೆಯಲ್ಲಿ ಬಿದ್ದ ದೇವವ್ರತನ ಹಲ್ಲಿನ ಗುರುತು, ಕೆನ್ನೆಯಲ್ಲಿ ಒಡಮೂಡಿದ ರಕ್ತಗಟ್ಟಿದ ಕಪ್ಪುಕಲೆ; ಮೈಯೆಲ್ಲ ಪೂರ್ತಿಯಾಗಿ ತುಂಬಿಕೊಂಡ ಹಿಂಸೆಯ ಹೆಜ್ಜೆಗುರುತುಗಳು – ಅವಳ ಮೈಮೇಲಿದ್ದವು. ಸುಜಾತಳಿಗೆ ಆ ಕ್ಷಣದಲ್ಲಿ ಯಾವುದೋ ಒಂದು ಪ್ರಾಣಿ ನನ್ನಿಡಿಯ ದೇಹವನ್ನು ಆವರಿಸಿಕೊಂಡಿದೆಯೆಂದು ಭಾವಿಸಿಕೊಂಡಳೇ ಹೊರತು ಬೇರಾವ ಸುಖದ ಹಿಂಸೆಯ ಅನುಭವವಾಗಿರಲಿಲ್ಲ. ಶವದ ಮೇಲಿನ ಭೋಗಿಯಂತೆ ಮೇಲೆ ಬಿದ್ದವನನ್ನು ತಳ್ಳುವುದಂತೂ ಸುಜಾತಳಿಗೆ ಸಾಧ್ಯವಿರಲಿಲ್ಲ. ತೆಪ್ಪಗೆ ಹಲ್ಲು ಕಚ್ಚಿಕೊಂಡು ಸಹಿಸಿದ್ದಳು. ದೇವವ್ರತನ ಮೇಲೆ ಆಗ ಉಂಟಾದ ಅಸಹ್ಯ ಮತ್ತು ವಾಕರಿಕೆಯನ್ನು ಅವಳಂತೂ ಬೇರಾವ ವಿಧದಲ್ಲಿಯೂ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. ಸುಜಾತಳ ಮೇಲೆ ಬಿದ್ದ ದೇವವ್ರತನಂತೂ ಆ ದಿನ ಮೈಥಿಲಿಯ ನೆನಪಿನಲ್ಲಿ, ಸುಜಾತಳನ್ನು ಭೋಗಿಸಿದ ಪರಿ ಯಾವುದಿತ್ತೆಂದರೆ ತಾನೀಗ ಮೈಥಿಲಿಯನ್ನು ಕೆಲವೆ ಕ್ಷಣಕ್ಕಾದರೂ ತೋಟಕ್ಕೆ ನುಗ್ಗಿದ ಹಂದಿಯಂತೆ ನುಗ್ಗಿಬಿಟ್ಟಿದ್ದೇನೆ. ಜನ್ಮ ಸಾರ್ಥಕವಾಯಿತು ಎಂಬಂತಿದ್ದ. ಆದರೆ, ಯಾಕೋ ಏನೋ ಕೆಲವೇ ಕ್ಷಣದಲ್ಲಿ ಎಲ್ಲವೂ ಮುಗಿದ ಮೇಲೆ ಅರಿವಾದದ್ದು ತಾನೀಗ ಹಿಡಿದು ಕೊಂಡದ್ದು ತನ್ನ ಹೆಂಡತಿಯನ್ನೇ ಅಂತ. ಅದೂ

ಸುಜಾತ ಇವನ ಹಿಂಸೆಯನ್ನು ತಡೆಯಲಾಗದೆ "ಅಯ್ಯೋ" ಅಂದಾಗ. ಸುಜಾತ "ಅಯ್ಯೋ" ಅಂದಿದ್ದು ಆ ಕ್ಷಣದಲ್ಲಿ ಕೇವಲ ದೇವವ್ರತನ ಹಿಂಸೆಯನ್ನು ತಡೆಯಲಾಗದೇ ಅತ್ತಿದ್ದು ಕೂಡಾ ಅವನ ಪಶುವಾಂಛೆಗೆ. ಆದರೆ, ಅವಳು ಹೇಳಿದ 'ಅಯ್ಯೋ' ಅನ್ನುವುದು ಅವಳ ಜೀವಮಾನವಿಡೀ ಜೊತೆಗೆ ಬರಬಹುದಾದ ಸಂಗಾತಿ ಪದವೆಂದು ಅವಳ ಅರಿವಿಗೆ ಬರುವುದು ಸಾಧ್ಯವಿರಲಿಲ್ಲ ಮತ್ತು ಅವಳೂ "ಅಯ್ಯೋ" ಅಂದು ಹೇಳಿದ ಪದವು ಜೀವಮಾನದ ಜೊತೆಗೆ ನೆರಳಾಗಿ ಬಂದು ಕಾಡುತ್ತೆ ಎಂದು ದೇವವ್ರತನಿಗೂ ಗೊತ್ತಿರಲಿಲ್ಲ. ಗೊತ್ತಿದ್ದರೆ ಸ್ವಲ್ಪ ಮೆತ್ತಗಾಗಿ ವೀಣೆಯನ್ನು ಶೃತಿ ಮಾಡಿದಂತೆ ವರ್ತಿಸುತ್ತಿದ್ದನೋ ಏನೋ ಗೊತ್ತಿಲ್ಲ. ದೇವವ್ರತ ಸುಜಾತಳನ್ನು ಹಾಸಿಗೆಯ ಮೇಲೆ ಎಳೆದುಕೊಂಡು ವರ್ತಿಸಿದ ಕ್ರಮ ಮಾತ್ರ ಗಂಡ–ಹೆಂಡತಿಯರ ನಡುವಣ ಅನುರಾಗದಿಂದ ಒಲಿಸುವ ಕ್ರಮದಂತಿರಲಿಲ್ಲ. ಹಿಂದಿನ ದಿನ ಪಶುವಾಂಛೆಯನ್ನು ಮುಗಿಸಿದವನೇ ಹಾಸುಗೆಯಿಂದ ಎದ್ದುಹೋಗಿ, ಅಡುಗೆ ಮನೆಯಲ್ಲಿ ಮಂಡಕ್ಕಿಯನ್ನು ಒಂದು ಮುಷ್ಟಿಯಲ್ಲಿಟ್ಟು ಬಂದು ಸೋಫಾದಲ್ಲಿ ಕುಳಿತವನೇ 'ಸುಜೀ, ಏಳು, ಊಟ ಮಾಡೋಣ' ಅಂದ. ಆದರೆ, ಹಿಂದಿನ ದಿನದ ಹಿಂಸೆಯನ್ನು ತಡೆದುಕೊಂಡು ಅಂತೂ ಊಟ ಮಾಡಿ ಮಲಗಿದರೆ, ಯಾವ ರೀತಿಯಲ್ಲೂ ಒಂದು ಹಿಂಸಾತ್ಮಕ ಘಟನೆಯು ಜರುಗಿದೆಯೆಂದು ತೋರ್ಪಡಿಸಿಕೊಳ್ಳದೇ ತಿರುಗಿ ಮಲಗಿಬಿಟ್ಟಿದ್ದಳು. ದೇವವ್ರತನ ಗೊರಕೆಯನ್ನು ಮೀರಿಸುವಂತೆ ಸುಜಾತಳನ ಕಣ್ಣೀರು ರಾತ್ರಿಯಿಡೀ ತಲೆದಿಂಬನ್ನು ತೊಯಿಸಿತ್ತು ಅಂತ ಸಾಕ್ಷಿ ಹೇಳುವುದಕ್ಕೆ ಯಾರೂ ಇರಲಿಲ್ಲ.

ಮರುದಿನ ದೇವವ್ರತ ಆಫೀಸಿಗೆ ಹೋದ ತಕ್ಷಣ ಸುಜಾತ ಮಾಡಿದ ಒಂದೇ ಮುಖ್ಯ ಕೆಲಸವೆಂದರೆ–ಹಾಸಿಗೆಯಲ್ಲಿ ಮಲಗಿ ನಿದ್ದೆಹೊಡೆದದ್ದು. ಹನ್ನೊಂದು ಗಂಟೆಯ ತನಕ ನಿದ್ದೆ ಹೊಡೆದ ಮೇಲೆ ಜೀವಕ್ಕೆ ಹಾಯೆನಿಸಿತು. ಎದ್ದವಳೇ ಒಂದಿಷ್ಟು ಮೈಮೇಲಿನ ಗಾಯಗಳಿಗೆ ಕೊಬ್ಬರಿ ಎಣ್ಣೆ ಅರಶಿನ ಪುಡಿಯನ್ನು ಮಿಶ್ರಣ ಮಾಡಿ ಹಚ್ಚಿಕೊಂಡಳು. ಒಂದಿಷ್ಟು ಹೊತ್ತು ದೇವವ್ರತನ ಹಿಂಸೆಯ್ನು ನೆನೆದುಕೊಂಡಳು. ಕಣ್ಣ ಸಂದಿಯಲ್ಲಿ ಉರುಳಿದ ನೀರನ್ನು ನೈಟಿಯಲ್ಲಿ ಒರಸಿಕೊಂಡಳು. ದುಃಖ ಉಮ್ಮಳಿಸಿಬಂದುದನ್ನು ತಡೆಯಲು ಅವಳ ಹತ್ತಿರ ಯಾವ ಉಪಕರಣವಿತ್ತು? ಆತಂಕ ಮತ್ತು ಉದ್ವೇಗದ ನಡುವೆಯೂ ದೇವವ್ರತನ ಹಿಂಸೆಯ ಬಗ್ಗೆ ಪ್ರತಿರೋಧ ವ್ಯಕ್ತಪಡಿಸಲು ಅವಳ ಹತ್ತಿರವಿದ್ದ ಸಾಧನವಾದರೂ ಏನು?

ಪ್ರಸ್ತದ ದಿನ ರಾತ್ರಿ ಮೆತ್ತಗೆ ಅಡುಗೆ ಮನೆಗೆ ಕರೆದು, 'ಯಾವುದಕ್ಕೂ ಹೆದರಬೇಡ ಮಗಳೇ, ಎಂದು ಗುಟ್ಟಾಗಿ ಹೇಳಿ, ಗಂಡನ ಆಸೆಗೆ ಯಾವತ್ತೂ ಪ್ರತಿರೋಧವೊಡ್ಡಬೇಡ, ಗಂಡನಿಗೆ ಬೇಕಾದ ಹಾಗೆ ಇರು ಮಗು. ಗಂಡನೆಂದರೆ ದೇವರೆಂದು ಭಾವಿಸಿಕೋ, ಕೊರಳಿಗೆ ಬಿದ್ದಿರುವ ತಾಳಿ ನಿನಗೆ ಗಟ್ಟಿಯಾಗಿರಲಿ.

ಗಂಡನನ್ನು ನಿನ್ನ ಜೊತೆಯೇ ಇರಿಸಿಕೋ, ಸಂಸಾರವೆಂದರೆ ಹೆಣ್ಣಿನ ಸಹನೆಯಲ್ಲಿ ಉಳಿಯುವ ಆಸ್ತಿ, ಗಂಡನ ಬಗ್ಗೆ ಹಲವರಲ್ಲಿ ಚಾಡಿ ಹೇಳಬೇಡ ಮತ್ತು ಹೆಣ್ಣಿನ ಸರ್ವಸಂಪತ್ತು ಗಂಡ' ಎಂದು ಅಮ್ಮ ಆಗ ಅಂದಿದ್ದಳು. ಅಮ್ಮ ಹೇಳಿದ ಆ ಮಾತು ಕರುಳಿಗೆ ಹಾಗೆಯೇ ಅಂಟಿಕೊಳ್ಳುತ್ತದೆಯೆಂದು ಯಾರಿಗೆ ತಿಳಿದಿತ್ತು. ಮೊದಲ ದಿನದ ನೋವು ಮತ್ತು ಹಿಂಸೆ ಜೀವನದಲ್ಲಿ ಆಗಾಗ ಮತ್ತೆ ಮತ್ತೆ ಕಾಣಿಸಿಕೊಳ್ಳಲಿದೆಯೆಂದಾದರೂ ಸುಜಾತಳಿಗೆ ತಿಳಿದಿತ್ತೆ? ಅಮ್ಮ ಹೇಳಿದ ಮಾತನ್ನು ಮಾತ್ರ ಅಕ್ಷರಶಃ ಪರಿಪಾಲಿಸಿಕೊಂಡೇ ಬಂದವಳು ಸುಜಾತ. ಕಟ್ಟೆಯೊಡೆದು ಬಂದಿದ್ದ ಹನಿಯನ್ನು ಒರೆಸಿ ಸ್ನಾನಕ್ಕಿಳಿದವಳಿಗೆ ರಾತ್ರಿಯ ಹಿಂಸೆ; ಗಾಯಗಳ ಉರಿಯು ಎದೆಯಾಳದಿಂದ ಹೊರಹೊಮ್ಮಿದ್ದನ್ನು ಕಣ್ಣೀರಲ್ಲಿ ವ್ಯಕ್ತಪಡಿಸುತ್ತಲೇ ಸ್ನಾನವನ್ನು ಪೂರೈಸಿದಳು.

ಅದೇ ರಾತ್ರಿ ಏನೂ ಆಗಿಲ್ಲವೆಂಬಂತೆ: ಗಂಡನತ್ತ ಯಾವುದೂ ಜರುಗಿಯೇ ಇಲ್ಲವೆಂಬಂತೆ ತಲೆ ಬುಡವಿಲ್ಲದ ಮಾತನ್ನು ಆಡಿದ್ದು. ಈ ಮಾತು ಅಮ್ಮ ಪ್ರಸ್ತದ ದಿನ ರಾತ್ರಿ ಅಡುಗೆ ಮನೆಯಲ್ಲಿ ಉಸುರಿದ ಪುಟ್ಟಗುಟ್ಟನ್ನು ಉಳಿಸಿಕೊಳ್ಳುವ ಪ್ರಯತ್ನ ಮಾತ್ರ! ಹಗಲಿಡೀ ಚಿಂತಿಸಿದ್ದರ ಫಲವಿದು. ಈ ಕೃತಕವಾದ ಮಾತು ಮತ್ತು ಕಿಲಕಿಲದ ನಗು ನಿಧಾನವಾಗಿ ಮನೆಯ ಗೋಡೆಗಳನ್ನು ದಾಟಿ, ಕದವನ್ನು ದಾಟಿ ಹೊರಗಡೆ ಕೇಳುವಂಥ ಧ್ವನಿಯನ್ನು ಪಡೆಯಿತು.

ಏನಾಯಿತು ಮೈಥಿಲಿ?

– ೯ –

ಉತ್ತರ ದಿಕ್ಕಿನ ಕಾಲು ಹಾದಿಯಲ್ಲಿ ಕಾಲಿಟ್ಟು ನಡೆಯತೊಡಗಿದ ಮೈಥಿಲಿಯ ತಲೆಯಲ್ಲಿ ಮಾತ್ರ ಸಾವಿರಾರು ಯೋಚನೆಗಳು. ಯಾವುದರ ಕಡೆಗೆ ತನ್ನ ಜೀವನವನ್ನು ರೂಢಿಸಿಕೊಳ್ಳಬೇಕೆಂಬ ಹಂಬಲವೇ ಹೊರತು ಬೇರಾವುದೂ ಅವಳ ಮನಸ್ಸಿನಲ್ಲಿ ಉದ್ಭವಿಸಲಿಲ್ಲ. ಹತ್ತಾರು ಜನರು ನಡೆದ ರಸ್ತೆಯ ಜಾಡನ್ನು ಬಿಟ್ಟು ಕಾಲುಹಾದಿಯನ್ನು ಹಿಡಿದವಳ ತಲೆಯಲ್ಲಿ ತುಂಬಿಕೊಂಡದ್ದು ದೇವವ್ರತನೇ? ಚಾರುವೇ? ಇವರಿಬ್ಬರ ಗುಣಾವಗುಣಗಳ ಪಟ್ಟಿಯನ್ನೇ ತಲೆಯಲ್ಲಿ ತಯಾರಿಸಿಕೊಂಡಳು. ದೇವವ್ರತ ಮತ್ತು ಚಾರು ಇವರಿಬ್ಬರಲ್ಲಿ ಮುಂದೆ ನನಗೆ ಯಾರು ಹೆಚ್ಚು ಉಪಯೋಗ? ದೇವವ್ರತ ಗಟ್ಟಿಮುಟ್ಟಾಗಿದ್ದಾನೆ ಅನ್ನುವುದು ನಿಜ. ಆದರೆ ಮುಖದ ಮೇಲೆ ಪೆದ್ದುಕಳೆ. ಸಪ್ತಪದಿ ತುಳಿದು ಅವನ ಹಿಂದೆಯೇ ಬಂದ ಹೆಂಡತಿಯಿದ್ದಾಳೆ. ಹೇರಳ ವರದಕ್ಷಿಣೆಯನ್ನು ಪಡೆದುಕೊಂಡು ತನ್ನನ್ನು ಮಾರಿಕೊಂಡ ದೇವವ್ರತ ನಿಜವಾಗಿಯೂ ನನಗೆ ಯಾವ ಕಾರಣಕ್ಕಾಗಿ ನನ್ನ ಸಂಗ ಬಯಸಿದ್ದಾನೆ? ತುಂಬಿರುವ ನನ್ನ ದೇಹದ ಆಸೆಯಿಂದಲೇ

ಎಂದಾಗಿದ್ದರೆ ಯಾವ ಕಾರಣಕ್ಕೂ ಅದರಾಚೆಗೆ ನಮ್ಮಿಬ್ಬರ ಸಂಬಂಧವು ಒಂದಿಂಚು ಮುಂದಕ್ಕೆ ಸರಿಯಲಾರದು. ನನ್ನ ದೇಹ ಮತ್ತು ಅವನ ದೇಹ – ಅದರಾಚೆಗೆ ಬೇರಾವುದೂ ಇಲ್ಲವಾದರೆ ಮುಂದಿನ ನನ್ನ ಕತೆಯೇನು? ದೇವವ್ರತನ ಮೈಯಲ್ಲಿ ಪೌಡರಿನ ಪುಡಿ ಅಂಟಿಕೊಂಡಿರುತ್ತದೆ. ಅವನ ಹತ್ತಿರ ಮತ್ತೇರಿಸುವ ಗುಣವಿದೆ. ಎಲ್ಲವೂ ಸರಿ, ಪಕ್ಕದ ಮನೆಯ ಸುಜಾತ ಮಧ್ಯಾಹ್ನ ನೆನೆಸಿಕೊಂಡ ಸಂಗತಿಯ ತರಹವೇ ಕಾಲುಹಾದಿಯಲ್ಲಿ ನಡೆಯುವಾಗ ಮೈಥಿಲಿಯೂ ನೆನಪಿಸಿಕೊಂಡಳು ,

ಒಂದು ಕಡೆ ಚಾರು ಮತ್ತೊಂದು ಕಡೆ ದೇವವ್ರತ. ಚಾರುವಿನ ಎಣ್ಣೆ ಕಪ್ಪು ಮುಖ, ದಪ್ಪನೆಯ ತುಟಿ, ಕೊಂಚ ಉಬ್ಬು ಹಲ್ಲು, ಸಣ್ಣನೆಯ ಮೂಗು, ಅವನ ಮೌನ ಎಲ್ಲವನ್ನು ಒಂದು ಕ್ಷಣ ನೆನಪಿಸಿಕೊಂಡಳು. ತನಗಿರುವುದು ನೀತಿ–ಅನೀತಿಯ ಪ್ರಶ್ನೆಯಲ್ಲ! ಜೊತೆಗೆ ಮಲಗಿದ ಚಾರುವಿನ ದೇಹ; ಅವನ ಮೈಯ್ಯವಾಸನೆ ತುಂಬಾ ಪರಿಚಿತವಾದ ಹಳಸಲು ದೇಹವೆಂದು ಅನಿಸಿತು. ತನ್ನ ಮನಸ್ಸೀಗ ಹಾರುವ ಹಕ್ಕಿ. ಕೂತುಕೊಳ್ಳಲು ಒಂದು ಗಂಡಿನ ದೇಹಬೇಕು. ಅಷ್ಟೇ! ಮದುವೆಯ ಮುಂಚಿನ ದಿನಗಳು ಎಷ್ಟೊಂದು ಸುಖವಿತ್ತು? ಅದು ಕಾಲೇಜುದಿನಗಳು ಅದಕ್ಕಿಂತಲೂ ಹಿಂದಿನ ದಿನಗಳು. ಮೈನೆರೆದು ಒಂದು ವರ್ಷವಾಗುವಷ್ಟರಲ್ಲಿಯೇ ಮನೆಯ ನಂಟರ ಹುಡುಗ ರಾತ್ರಿ ಅಪ್ಪಿಕೊಂಡು ಮುತ್ತಿಟ್ಟಿದ್ದ. ಅಲ್ಲಿಗೆ ಮುಗಿಯಿತು. ಕಾಲೇಜಿಲ್ಲಿ ತನ್ನ ಕ್ಲಾಸಿನ ಹುಡುಗಿಯರು ಬೇರೆ ಬೇರೆ ಅನುಭವ ಹೇಳುತ್ತಿದ್ದರು. ಮದುವೆ – ಗಂಡ– ಮಕ್ಕಳು– ಇದ್ಯಾವುದೂ ಮುಖ್ಯವಲ್ಲ ಎಂದು ಹೇಳುತ್ತಿದ್ದ ತನ್ನ ಖಾಸಾ ಗೆಳತಿ ವರ್ಷಕ್ಕೆ ಮೂರು ಹುಡುಗರನ್ನು ಆಟವಾಡಿಸುತ್ತಿದ್ದಳು. ಗಂಡಸಿನೊಂದಿಗಿನ ಸುಖಕ್ಕೆ ಯಾವ ಅಡ್ಡಿಯೂ ಇರಬಾರದು ಎಂದು ತಿಳಿಯುತ್ತಿದ್ದ ಗೆಳತಿಯ ಪ್ರಭಾವ ಕಾರಣವಾಗಿದೆಯೇ? ದೇವ ವ್ರತನ ಬಗೆಗಿನ ದಾಹವೆ? ಚಾರುವಿನ ಬಗೆಗಿನ ದ್ವೇಷವೆ? ನಡೆಯುತ್ತಿರುವಾಗಲೇ ಒತ್ತಿ ಒತ್ತಿ ಬಂದ ಅನೇಕ ನೆನೆಪುಗಳು ಅವಳನ್ನು ಚಲಿಸದಂತೆ ಮಾಡಿದವು. ಮೆಲ್ಲನೆ ಇಳಿಯುತ್ತಿರುವ ಸಂಜೆಯಲ್ಲಿ ಮತ್ತೆ ಮನೆಯೊಳಗೆ ಹೋಗಿ ಕುಳಿತುಕೊಳ್ಳುವುದರ ಪ್ರಯೋಜನವೇನು ಎಂದನ್ನಿಸಿತು. ಮನೆಯೊಳಗಿನ ಏಕಾಂತ: ಗುಂಯ್‌ಗುಡುವ ಸೊಳ್ಳೆ ಮೌನ ಯಾವುದಕ್ಕೂ ಅರ್ಥವಿಲ್ಲವೆಂದು ಅನಿಸಿತು.

ಅರ್ಧದೂರದ ತನಕ ಬಂದ ಮೈಥಿಲಿಯು ಮತ್ತೆ ತಿರುಗಿ ಕಾಲು ಹಾದಿಯಲ್ಲಿಯೇ ವಾಪಾಸು ನಡೆದಳು. ಅದೇ ತಾನು ಮತ್ತು ಚಾರು ಕುಳಿತ ಜಾಗಕ್ಕೆ ಬಂದವಳು ಅಲ್ಲಿಯೂ ಕೂರುವುದು ಬೇಡವೆಂದು ಅನಿಸಿ ಮೇ ಫ್ಲವರಿನ ಗಿಡದ ಕೆಳಗೆ ಕುಳಿತು ಕೊಂಡಳು. ಚಿಂತೆಯೇ ಬಹಳ ಆಯಾಸ ಮಾಡುತ್ತಿದೆಯೆಂದನಿಸಿತು. ಆದರೆ ಯೋಚಿಸದೆ ಬೇರೆ ದಾರಿಯಿಲ್ಲ. ಸ್ವಚ್ಛಂದವಾಗಿದ್ದ ತಾನು ಚಾರುವನ್ನು ಯಾಕೆ ಆಯ್ಕೆ ಮಾಡಿಕೊಂಡೆ? ಕೈ ತುಂಬಾ ಸಂಬಳವಿರುವ ಕಾರಣಕ್ಕೆ? ಫಕ್ಕನೆ ಒಂದು

ಕಡೆಯಿಂದ ನೋಡುವಾಗ ತಂದೆಯ ಹಣೆಯಂತೆ: ಗಲ್ಲದಂತೆ ಭಾಸವಾಗುವ ದೇವವ್ರತನಲ್ಲಿರುವ ಆಕರ್ಷಣೆಯಾದರೂ ಏನು? ಮೈಥಿಲಿ ಹುಲ್ಲು ಕಡ್ಡಿಯನ್ನೇ ಬಾಯಿಗೆ ಸಿಕ್ಕಿಸಿಕೊಂಡು ಚಿಂತಿಸತೊಡಗಿದಳು. ಜೀವನದಲ್ಲಿ ಒಂದು ಮಜಾ ಇರಬೇಕು. ಅತಿ ಭಾವುಕತೆಯಿರಬಾರದು. ತನ್ನದೇ ಆದ ಸ್ವತಂತ್ರ ಲೋಕವಿರಬೇಕು. ಗಂಡಿನ ಅಡಿಯಾಳಾಗಿ ಇರಬಾರದು; ಏನೇನೋ ಕನಸು ಕಂಡ ತನ್ನ ವ್ಯಕ್ತಿತ್ವವನ್ನು ಚಾರು ಯಾವತ್ತೂ ಅರ್ಥ ಮಾಡದೇ ಹೋದ. ಚಾರುವಿಗೆ ಅವನದೇ ಆದ ಜಗತ್ತಿದೆ. ಅದರಲ್ಲಿ ತನಗೆ ಯಾವ ಸ್ಥಾನವೂ ಇಲ್ಲ. ಮಿತಿಮೀರಿ ಕುಡಿದು ಮಲಗುವ ಚಾರುವಿನಲ್ಲಿ ಯಾವ ಸುಖವಿದೆ? ಆದರೆ ದೇವವ್ರತನನ್ನು ನಂಬುವುದು ಹೇಗೆ? ಅವನದೂ ಲಂಚದ ದುಡ್ಡು. ಮಾವನ ಆಶ್ರಯ. ಹೆಂಡತಿಯ ಸೆರಗು ಬಿಟ್ಟು ಸರಿಯಲಾರ. ಮತ್ತೆ ಎದ್ದು ಮನೆಯತ್ತ ನಡೆಯುತ್ತಾ ಯೋಚಿಸತೊಡಗಿದಳು.

ಫಕ್ಕನೇ ಮದುವೆಯ ದಿನಗಳು ನೆನಪಿಗೆ ಬಂದಾಗ ಮಾತ್ರ ಮೈಥಿಲಿಯು ಹಪಾಹಪಿಗೆ ಗುರಿಯಾದಳು. ಚಾರು ಕುಡುಕ; ದುರ್ಬಲ; ಕನಸುಗಾರ ಎಲ್ಲವೂ ಸರಿ, ಆದರೆ, ಲೋಕಕ್ಕೆ ಈ ವಿಷಯವನ್ನು ಸಾರಿ ಸಾರಿ ಹೇಳಬಹುದು. ಒಂದುವೇಳೆ ದೇವವ್ರತನ ಜೊತೆ ಹೊಂದಾಣಿಕೆ ಮಾಡಿಕೊಂಡರೆ ಮಾತ್ರ ಚಾರು ನನ್ನನ್ನು ಬಿಡುವುದು ಖಚಿತ. ಈ ವಿಷಯದಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಲಿ ಎಂಬುದು ತಿಳಿಯದೆ ಆತಂಕಕ್ಕೆ ಒಳಗಾದ ಮೈಥಿಲಿಯು ಮನೆಯ ಬೀಗವನ್ನು ತೆರೆದಳು. ಆಯ್ಕೆಯ ಬಗೆಗಿನ ಗೊಂದಲ ಮತ್ತು ಅಸ್ಪಷ್ಟ ಚಿಂತೆಯಲ್ಲಿ ಕತ್ತಲಾವರಿಸಿದೆ. ಮನೆಯೊಳಗೆ ಸೊಳ್ಳೆ ಗುಂಯ್‌ಗುಡುತಿವೆ ಎಂದೆನ್ನಿಸಿ, ಲೈಟು ಉರಿಸಿ ಮೈಥಿಲಿಯು ಮನೆಯ ಬಾಗಿಲು ಹಾಕಿಕೊಂಡಳು ಅಷ್ಟೆ! ಆದರೆ, ಅವಳು ಬಾಗಿಲು ಹಾಕಿದ್ದು ಯೋಚನೆಗಳಲ್ಲಿ ಎಂಬುದರ ಅರಿವಾದ್ದು ಒಂದೆರಡು ಗಂಟೆ ಬಿಟ್ಟು, ಯಾಕೆಂದರೆ ಚಾರು ಬಂದು ಬಾಗಿಲ ಕದವನ್ನು ಕಟಕಟವೆಂದು ಉದ್ದೇಶಪೂರ್ವಕವಾಗಿ ಧ್ವನಿ ಮಾಡಿದ್ದ. ಜಿನ್ ಹಾಕಿಕೊಂಡು, ಕೈಯಲ್ಲಿ ಸಿಗರೇಟು ಹಿಡಿದುಕೊಂಡು ಬಂದ ಚಾರುವಿನ ಕಣ್ಣು ಮಾತ್ರ ಬಾಗಿಲು ತೆರೆವಾಗ ಮೈಥಿಲಿಯು ಹೇಗಿದ್ದಾಳೆ ಎಂದು ಪರೀಕ್ಷಿಸುವಂತಿತ್ತು. ಕುಡಿತದ ಪುಟ್ಟ ಅಮಲಿನಲ್ಲಿಯೂ ಯಾವುದೇ ಕಾರಣದಿಂದ ಕಣ್ಣಿನ ತೀವ್ರತೆಯನ್ನು, ಇರಿಯುವ ನೋಟವನ್ನು ಮಾತ್ರ ಬಿಡಲಾರನೇನೋ ಎನ್ನಿಸಿ ಮೈಥಿಲಿಯೇ ತನ್ನ ನೋಟವನ್ನು ಬೇರೆಕಡೆಗೆ ತಿರುಗಿಸಿದಳು. ಅವಳು ಬೇರೆ ಕಡೆಗೆ ನೋಟವನ್ನು ಬೀರಿದ್ದು ಯಾಕೆಂಬುದು ಅರ್ಥವಾಗದಷ್ಟು ಮೂರ್ಖನಲ್ಲ ಚಾರು. ಅಸ್ತವ್ಯಸ್ತಗೊಂಡ ತಲೆಗೂದಲು ಅರೆಕೆಂಪಿನ ಕಣ್ಣು, ಕೊಂಚ ಉಬ್ಬುಹಲ್ಲು, ಕಂದು ಮೈಬಣ್ಣ, ಅರ್ಧ ತೋಳಿನ ಶರಟು–ಎಲ್ಲವೂ ಒಮ್ಮೆ ಮಿಂಚಿನಂತೆ ಮೈಥಿಲಿಯ ಕಣ್ಣುಗಳಲ್ಲಿ ಸುಳಿದು ಹೋಯಿತು. ಈ ತನಕವೂ ನಾನು ಚಾರುವನ್ನು ಗಮನಿಸಿಯೇ ಇಲ್ಲವೇನೋ ಎಂಬಂತೆ ನೋಡಿಯೇ ಅವಳು ಮುಖ ತಿರುವಿದಳು. ಮುಖ

ತಿರುವಿದ ಕಾರಣವೇನೆಂಬುದು ಸರಿಯಾಗಿ ಚಾರುವಿಗೆ ಅರ್ಥವಾಗಲಿಲ್ಲ. ಅರ್ಥವಿಸಿಕೊಳ್ಳಬೇಕೆಂಬ ಯಾವ ಆಸೆಯ ನಕ್ಷತ್ರವೂ ಅವನ ಕಣ್ಣುಗಳಲ್ಲಿ ಮಿನುಗಲಿಲ್ಲ. ಮೈಥಿಲಿಯದು ಸ್ವಾರ್ಥ ಕೇಂದ್ರಿತ ವ್ಯಕ್ತಿತ್ವವೇ? ಅವಳಿಗೆ ಅವಳೇ ಪ್ರಶ್ನೆ ಮಾಡಿಕೊಳ್ಳುತ್ತಿರುವಾಗಲೇ ತನ್ನ ಮಾಮೂಲಿ ಶೈಲಿಯಲ್ಲಿ ಚಾರು ತನ್ನ ಚೆಯರಿಗೆ ತನ್ನ ಹೆಗಲ ಚೀಲವನ್ನು ನೇತುಹಾಕಿ ಯಾವ ಮಾತುಗಳನ್ನು ಆಡದೆ ಸುಮ್ಮನೇ ಡ್ರೆಸ್ ಬದಲಾಯಿಸಿ ನೆಟ್ಟಗೆ ಸ್ನಾನಕ್ಕೆ ಹೊರಟ. ಅವನ ವರ್ತನೆ ಮತ್ತು ಅಸಹನೀಯವಾದ ಮೌನ ಮಾತ್ರ ಮೈಥಿಲಿಗೆ ಹಿಂಸೆಯೆಂದನ್ನಿಸಿತು. ಮೈಥಿಲಿಯ ಕಡೆಗೆ ಒಂಚೂರೂ ನೋಡದೆ ಬಚ್ಚಲು ಮನೆಯತ್ತ ಹೋದ. ತಣ್ಣೀರನ್ನು ತಲೆಗೆ ಹೊಯ್ದುಕೊಂಡ. ಅದೇ 'ನಮಸ್ತೇಸು ಮಹಾಮಾಯೆ' ಅಯಾಚಿತವಾಗಿ ಬಾಯಿಂದ ಬಂತಾದರೂ ಸ್ವರ ಮಾತ್ರ ದೊಡ್ಡದಾಗಿತ್ತು. ಅವನು ಹೇಳುತ್ತಿರುವ 'ನಮಸ್ತೇಸು ಮಹಾಮಾಯೆ' ಮಾತ್ರ ಮೈಥಿಲಿಯಲ್ಲಿ ಯಾವುದೋ ಒಂದು ಸಣ್ಣ ನಡುಕವನ್ನು ಹುಟ್ಟಿಸಿತ್ತು. ಸ್ನಾನ ಮಾಡಿ ಬಂದವನೇ ಚಾರು ಬೇರಾವುದನ್ನೋ, ಪ್ರಸ್ತಾಪಿಸಲಿದ್ದಾನೆ ಎಂಬುದರ ಸೂಚನೆಯಾಗಿತ್ತು ಅಷ್ಟೆ, ಬೆನ್ನ ಹುರಿಯಲ್ಲಿಯೇ ಒಂದು ರೀತಿಯ ಚಳಿಯು ಅಂಟಿಕೊಂಡಿದೆಯೆಂದು ಅವಳಿಗೆ ಅನಿಸಿತು. ಆದರೆ, ಬಚ್ಚಲಲ್ಲಿ ತಣ್ಣೀರನ್ನು ತಲೆಗೆ ಹೊಯ್ದುಕೊಂಡ ಚಾರೂ ಮಾತ್ರ ಮೈಯನ್ನು ಒದ್ದೆಮಾಡಿಕೊಂಡು ಬಂದನೇ ಹೊರತು ಮೈಗೆ ಒಂಚೂರು ಸೋಪ್ ತಾಗಿಸಲಿಲ್ಲ, ಸೋಪನ್ನು ಮೈಗೆ ಹಚ್ಚಿಕೊಳ್ಳಬೇಕೆಂದು ಚಾರುವಿಗೂ ಅನಿಸಲಿಲ್ಲ, ಹಾಗೆಯೇ ನೀರ ಹನಿಗಳು ಮೈಮೇಲೆ ಇರುವಂತೆಯೇ ಸಹಜವಾಗಿ ಲುಂಗಿಯುಟ್ಟುಕೊಂಡು ತಲೆಯಾಡಿಸುತ್ತಾ ಬಂದಾಗ ಮೈಥಿಲಿ ಅಡುಗೆ ಮನೆ ಸೇರಿಕೊಂಡು ಬಿಟ್ಟಿದ್ದಳು. ಯಾಕೆಂದರೆ ಪರಸ್ಪರ ಮುಖಾಮುಖಿಯಾಗುವುದಂತೂ ಅವಳಿಗೆ ಸಾಧ್ಯವಿರಲಿಲ್ಲ. ಒಂದು ರೀತಿಯ ಮೌನದ ಆಪ್ತತೆ ಮಾತ್ರ ಸುರುಳಿ ಸುತ್ತಿಕೊಂಡು ಮನೆಯಲ್ಲಿತ್ತು ಎಂಬುದನ್ನು ಆ ದಂಪತಿಗಳು ಅರ್ಥಮಾಡಿಕೊಂಡರು ಅಷ್ಟೆ! ಚಾರು ಮಾತ್ರ ಧ್ಯಾನಾಮಗ್ನಸ್ಥಿತಿಯಲ್ಲೇನೋ ಎಂಬಂತೆ ನೆಟ್ಟಗೆ ಬೆಡ್‌ರೂಮಿಗೆ ಹೋಗಿ ತೋಳಿಲ್ಲದ ಬನಿಯನ್ ಹಾಕಿಕೊಂಡ. ಬಂದು ಮಾಮೂಲಿನಂತೆ ಅಡುಗೆ ಮನೆಗೆ ಹೋಗಿ ಒಂದರ್ಧ ಲೋಟ ನೀರು ತೆಗೆದುಕೊಂಡ. ಆದರೂ ಮೈಥಿಲಿ ಮೌನವಾಗಿದ್ದಳು. ಮೌನದಲ್ಲಿ ಏನೇನು ತುಂಬಿಕೊಂಡಿತ್ತೋ ಅದಂತೂ ಯಾರಿಗೂ ಗೊತ್ತಿರಲೂ ಸಾಧ್ಯವಿಲ್ಲ. ಸ್ವತಃ ಮೈಥಿಲಿಯನ್ನು ಹೆತ್ತ ಅಮ್ಮನಿಗೂ ಕೂಡಾ. ಲೋಟದಲ್ಲಿ ನೀರು ತೆಗೆದುಕೊಂಡು ಬಂದು ಅದಕ್ಕೆ ಅರ್ಧ ಜಿನ್‌ಬೆರೆಸಿ, ಮತ್ತೆ ಅದೇ ಲೋಟವನ್ನು ಅಡುಗೆ ಮನೆಗೆ ತೆಗೆದುಕೊಂಡು ಹೋದ ಚಾರು, ಮೈಥಿಲಿಯತ್ರ "ಲಿಂಬೆ ಹಣ್ಣು ಎಲ್ಲಿ?" ಎಂದು ಕೇಳಿದ. ಮೈಥಿಲಿಯು ಮರು ಮಾತಾಡದೆ ತೆಗೆದುಕೊಟ್ಟಳು. ಅದನ್ನೇ ತುಂಡು ಮಾಡಿ ಜಿನ್‌ಗೆ ರಸವನ್ನು ಹಾಕಿಕೊಂಡ. ಜಿನ್ ಹೆಚ್ಚು ಅಮಲೇರಿಸದೇ ಇರಲು ಇದೊಂದೇ ಉಪಾಯವೆಂದು ಅವನು ಯಾವತ್ತೋ

ತಿಳಿದುಕೊಂಡ ಸತ್ಯ. ಈ ರೀತಿಯ ಅನೇಕ ಸಣ್ಣ ಪುಟ್ಟ ಶೈಲಿಗಳು ಚಾರುವಿಗೆ ಅವನದೇ ರೀತಿಯ ಮಾದರಿಯನ್ನು ಕಟ್ಟಿಕೊಟ್ಟಿವೆ. ಗಂಡ ಹೆಂಡಿರಿಬ್ಬರೂ ಅಂದೇ ಕೊಠಡಿಯಲ್ಲಿ ಅದೂ ಯಾವುದೇ ರೀತಿಯ ಶಬ್ದವನ್ನು ಹೊರಡಿಸದೆ ನಿಂತಿರುವುದು ಮುಂದೆ ಆಗಾಗ ಈಮೌನಗಳೇ ಶಬ್ದಗಳನ್ನು ಹೊರಡಿಸಲಿವೆಯೆಂಬುದರ ಮುನ್ನುಡಿಯಾಗಲಿದೆ ಎಂದು ಮೈಥಿಲಿಗಾಗಲೀ, ಚಾರುಗಾಗಲೀ ಗೊತ್ತಿರಲಿಲ್ಲ. ಮತ್ತೆ ಚಾರು ಮಾಡಿದ ಕೆಲಸವೆಂದರೆ ಒಂದು ಲೋಟ ಜಿನ್‌ನ್ನು ಹಾಗೆಯೇ ಗಟಗಟ ಕುಡಿದಿರುವುದು. ಅವನು ಸಶಬ್ದವಾಗಿ ಜಿನ್ ಕುಡಿಯುತ್ತಿರುವಾಗ ಮಾತ್ರ ಮೈಥಿಲಿಯು ಮುಖವನ್ನು ಹುಳಿ ಹುಳಿ ಮಾಡಿಕೊಂಡಳು. ಆದರೆ ಅದನ್ನು ಲಕ್ಷಿಸದಂತೆ ಚಾರು ತಕ್ಷಣವೇ ಲೋಟವನ್ನು ಅಡುಗೆ ಮನೆಯಲ್ಲಿಟ್ಟು ಹೊರಮನೆಗೆ ಬಂದ ಮತ್ತು ಮಾಮೂಲಿ ಶೈಲಿಯಲ್ಲಿ ಸಿಗರೇಟು ಹಚ್ಚಿಕೊಂಡು ಎರಡು ದಮ್ ಸೇದಿದ. ಎರಡು ದಮ್ ಸಿಗರೇಟು ಸೇದಿದ ಮೇಲೆಯೇ ಅವನಿಂದ ಮಾತು ಹೊರಟಿದ್ದು- "ಮೈಥಿಲಿ" ಅಂತ ಕರೆದ. ಅವನಿಂದ "ಮೈಥಿಲಿ"ಯೆಂಬ ಮಾತು ಬಂದ ತಕ್ಷಣ ಅವನ ಕರೆಗೆ ಕಾಯುತ್ತಿರುವವಳಂತೆ ಮೈಥಿಲಿಯೂ ಬಂದಳು. ಆಗಲೇ ಅವರಿಬ್ಬರ ನಡುವೆ ಮಾತುಕತೆ ಶುರುವಾಗಿದ್ದು. ಮೈಥಿಲಿಯು ಬಂದು ಅವನ ಎದುರುಗಡೆ ನಿಂತವಳು "ಏನು?" ಅಂದಳು. ಏನು ಅನ್ನುವಾಗ ಮಾತ್ರ ಯಾಕೋ ಅವಳ ಸ್ವರದಲ್ಲಿ ಸಣ್ಣ ಕಂಪನವಿತ್ತು, ಆತಂಕವಿತ್ತು. ಚಾರು ಅವಳನ್ನು ದಿಟ್ಟಿಸಿ ನೋಡಿ ಮತ್ತೆ 'ಏನಾಯಿತು? ಸತ್ಯಹೇಳು?' ಅಂದು ಅವಳು ಮತ್ತೆ ಮಾತುಗಳನ್ನು ಪುನರಾವರ್ತಿಸಲಿ ಎಂಬಂಥ ಆಸೆಯಿತ್ತು. ಆದರೆ, ಮೈಥಿಲಿಯು 'ಆಗಲೇ ಹೇಳಿದೆನಲ್ಲಾ?' ಅಂದಳು. ಮತ್ತೆ ಮಾತನ್ನು ಯಾವುದೇ ಕಾರಣಕ್ಕೆ ಹೇಳಲಾರೆ, ಅಲ್ಲದೆ ನಡೆದ ಸಂಗತಿಗಳನ್ನು ವಿವರಿಸುವಷ್ಟು ತಾಳ್ಮೆಯಿಲ್ಲ ಎಂಬ ಧ್ವನಿಯಲ್ಲಿ ಮೈಥಿಲಿಯು ಹೇಳಿದಾಗ ಮಾತ್ರ ಕಾಲ ಹೆಬ್ಬೆರಳಿಂದ ಶುರುವಾದ ಸಿಟ್ಟು ನೆತ್ತಿ ಮೂಲದ ತನಕ ಚಾರುವಿನಲ್ಲಿ ಹರಿದಾಡಿತು. ಮುಖವು ಕೆಂಪಾಯಿತು, ಕೈಗಳು, ಅದರಲ್ಲಿಯೂ ಬಲಗೈ ಜೋರಾಗಿ ನಡುಗಿತು. ಕೈನಡುಕವನ್ನು ಹಿಡಿದುನಿಲ್ಲಿಸಲು ಚಾರು ಮುಷ್ಟಿಯನ್ನು ಬಿಗಿದ ಮತ್ತು ಒಂದು ಕ್ಷಣ ಹಲ್ಲು ಕಡಿದ.

ನನ್ನ ಜಗತ್ತಿನಲ್ಲಿ ನಾನು ಮತ್ತು ನೀವು ಮಾತ್ರ

-೧೦-

ವಿಪರೀತವಾದ ಉದ್ವೇಗ ಮತ್ತು ಆತಂಕದಲ್ಲಿ ಕ್ಷಣವನ್ನು ಪ್ರಯಾಸದಿಂದ ತಳ್ಳಲು ಯತ್ನಿಸಿದ ಚಾರುವಿನ ಮನಸ್ಸಿನಲ್ಲಿ ನೂರೊಂದು ಇರುವೆಗಳು ಗೂಡು ಕಟ್ಟಿದ ಅನುಭವ ಮತ್ತು ವಿಪರೀತವಾದ ಯಾತನೆ. ಮೈಥಿಲಿಯು ಯಾಕೆ ಹೀಗಾದಳು? ಮೈಥಿಲಿಯ ಅಪರಿಮಿತವಾದ ದಾಹಕ್ಕೆ ತಾನು ಬಲಿಯಾದೆನೆ? ಯಾವ ಮಾತುಗಳೂ ಬೇಡವೆಂದನ್ನಿಸಿ ಮನೆಯ ಹೊರಗೆ ಬಂದು ಕುಳಿತ. ಕತ್ತಲೆಯ ನೀರವತೆಯೊಂದನ್ನು ಹೊರತು ಪಡಿಸಿದರೆ ಮತ್ತೆ ಯಾವುದೂ ಉಳಿದಿರಲಿಲ್ಲ. ಮೈಥಿಲಿ ಬೆಡ್‌ರೂಂನಲ್ಲಿ ಅಳುತ್ತಾ ಮಲಗಿರಬೇಕು. ಹೊರಗೆಬಂದು ಹೊಸ್ತಿಲ ಮೇಲೆ ಕುಳಿತ. ಆಕಾಶದ ಕಡೆಗೊಮ್ಮೆ ನೋಡಿದ:

ಚಾರುವಿನ ಮನೆಯಿಂದ ಸರಿಯಾಗಿ ಇಪ್ಪತ್ತು ಹೆಜ್ಜೆ ನಡೆದರೆ ಸಿಕ್ಕುವ ಹಿಮಾನಿ ಮತ್ತು ಅವನಿಗಿಂತ ಹೆಚ್ಚು ಕಡಿಮೆ ಇಪ್ಪತ್ತೆರಡು ವರ್ಷದ ಹಿರಿಯ ಅವಳ ಗಂಡ ಕಿರಣರ ನಡುವೆ ಒಂದು ಅಸಹನೀಯವಾದ ಹೊಗೆ ಕಾಣಿಸಿಕೊಂಡಿತು.

ಅದನ್ನು ಆರಿಸಲು ಆಗ ಚಾರುವೇ ಹೋಗಬೇಕಾಯಿತು. ಅದು ನಡೆದದ್ದು ಆಕಸ್ಮಿಕವಲ್ಲ. ಅದು ಉದ್ದೇಶಿತ. ಹಿಮಾನಿಯ ಗಂಡ ಕಿರಣ ಅವಳನ್ನು ಮದುವೆಯಾಗಬೇಕಾದ ಪ್ರಮೇಯವೂ ಬರುತ್ತಿರಲಿಲ್ಲ. ಅವರ ನಡುವೆ ಹೊಗೆಯೇಳ ಬೇಕಾದ ಅಗತ್ಯವಿರಲಿಲ್ಲ. ಯಾರದೋ ಮನೆಯಲ್ಲಿ ದೇವರ ನಂದಾದೀಪವನ್ನು ಉರಿಸಬೇಕಿದ್ದ ಹಿಮಾನಿ ಒಂದು ರೀತಿಯಿಂದ ತನಗೆ ತಾನೇ ಈ ಅನಾಹುತಕ್ಕೆ ಕೈ ಹಾಕಿದ್ದಳು. ಚಾರುವಿನ ಆಪ್ತ ಸ್ನೇಹಿತರಲ್ಲಿ ಕಿರಣನೂ ಒಬ್ಬ. ಕಿರಣನದು ನಿಷ್ಠುರವಾದ ವ್ಯಕ್ತಿತ್ವ. ಆದರೆ ಮನಸ್ಸು ಮಾತ್ರ ಕೋಮಲ. ಹೆಚ್ಚು ಕಡಿಮೆ ಹದಿನೈದು ವರ್ಷಗಳಿಂದ ಒಬ್ಬಂಟಿಯಾಗಿಯೇ ಬದುಕಿದವನು. ಮದುವೆಯ ಆಸಕ್ತಿಯೇ ತನಗಿಲ್ಲವೆಂದೂ, ಬ್ರಹ್ಮಚರ್ಯವೇ ನಿಜವಾದ ಜೀವನವೆಂದು ನಂಬಿದವನು. ಆದರೆ ಮಹಾನ್ ಸ್ತ್ರೀದ್ವೇಷಿ. ಸ್ತ್ರೀಯರನ್ನು ನಂಬ ಬಾರದು; ಸ್ತ್ರೀಯರ ಬುದ್ಧಿ ಮೊಣಕಾಲ ಕೆಳಗೆ; ಸ್ತ್ರೀಯರು ಬಣ್ಣದ ಚಿಟ್ಟೆಗಳು– ಇತ್ಯಾದಿ ಮಾತುಗಳು ಕಿರಣ ಮಟ್ಟಿಗಿನ ದೇವವಾಕ್ಯಗಳು. ಹೆಣ್ಣಿನ ಅಗತ್ಯವಿಲ್ಲದೆ ತಾನು ಜೀವಿಸಬಲ್ಲೆ ಎಂಬುದು ಅವನ ಮಟ್ಟಿಗಿನ ದೊಡ್ಡ ಆದರ್ಶ. ಚಾರುವಿನ ಬಗೆಗೆ ಮಾತ್ರ ಮಹಾನ್ ವ್ಯಾಮೋಹಿ. ಹೆಣ್ಣು ಮಕ್ಕಳಲ್ಲಿ ಮಾತಾಡಬೇಕಿದ್ದರೆ– ಒಂದು ದೂರದ ಕಡೆಗೆ ದೃಷ್ಟಿನೆಟ್ಟೋ ಇಲ್ಲವೇ ಅವರ ಪಾದ ಮೂಲವನ್ನು ನೋಡುವುದೋ ಕ್ರಮ. ಚಾರು ಕೇಳಿದ್ದ: "ಯಾಕೆ ಹೀಗೆ? ಹೆಂಗಸರು ಎತ್ತಿಕೊಂಡು ಹೋಗ್ತಾರಾ?" ಕಿರಣ ಹೇಳಿದ್ದ: "ಹೆಂಗಸರ ಬುದ್ಧಿ ಮೊಣಕಾಲಕೆಳಗೆ ಆಗಿರುವುದರಿಂದ ಅವರು ಮಾತಾಡುವಾಗ ಅವರ ಕಾಲ್ಬೆರಳು ನೋಡುತ್ತೇನೆ. ಬುದ್ಧಿ ಇದೆಯೋ– ಇಲ್ಲವೋ ಅಂತ ತಿಳಿಯಲು." ಚಾರು ನಗಾಡಿದ್ದ. ಮತ್ತೊಂದು ದಿನ ಚಾರು ಸಂಜೆ ಕಿರಣನ ಮನೆಯಲ್ಲಿ ಕೇಳಿದ್ದ: "ನೀನು ಯಾಕೆ ಮದುವೆಯಾಗಿಲ್ಲ?" ಕಿರಣ ಸ್ವಲ್ಪಹೊತ್ತು ಮೌನವಹಿಸಿದ್ದ. ಆ ಮೇಲೆಯೇ ಅವನು ಹೇಳಿದ್ದು: "ನಿಜ ಹೇಳಬೇಕೆಂದರೆ ಜೀವನದಲ್ಲಿ ನನಗೆ ಏನೇನೋ ಅನುಭವಗಳಾದವು. ಈ ತನಕ ಸುಮ್ಮನಿದ್ದೆ. ಆದರೆ ಕೆಲವು ಅನುಭವಗಳು ಮೈ ಮೇಲೆ ಒಂಚೂರು ಗಾಯ ಮಾಡೋಲ್ಲ. ಅವು ಉಳುಕಿದಂತೆ ನೋವು ಕೊಡುತ್ತಲೇ ಇರುತ್ತವೆ. ಗಾಯಗಳಿಂದ ತಪ್ಪಿಸಿಕೊಳ್ಳಲೆಂದೇ ಬಹಳ ಒದ್ದಾಡಿದೆ. ಜೀವ ಸಂಕಟಗಳನ್ನು ನುಂಗಿದ ಯಾವ ನೆನೆಪುಗಳೂ ಬೇಡವೆಂದೆ ಗುರ್ತುಪರಿಚಯವಿಲ್ಲದ ಪೂರ್ವ ಪಶ್ಚಿಮ; ಉದ್ದ–ಅಡ್ಡ ರಸ್ತೆಗಳ ಪಕ್ಕದಲ್ಲಿಯೇ ಒಂದೇ ಮಾದರಿಯ ಮನೆಗಳಿರುವ ಈ ನಗರಕ್ಕೆ ಬಂದೆ. ಇಲ್ಲಿ ಈ ಬೀದಿಗಳಲ್ಲಿ ಹೋಗುವಾಗ ಯಾರೂ ನಮ್ಮನ್ನು ವಿಚಾರಿಸುವುದೇ ಇಲ್ಲ. ಬರಿಯ ಅಡ್ಡ ರಸ್ತೆಗಳು– ಮನೆಗೆ ಸಂಖ್ಯೆಗಳು. ಇದರ ನಡುವೆ ಬೆಳಕು ಮತ್ತು ಕತ್ತಲೆ. ತಡವಾಗಿ ಬೆಳಗಾಗುತ್ತದೆ. ತಡವಾಗಿ ಕತ್ತಲೆಯು ಬರುತ್ತದೆ ಆದರೆ ಬೀದಿ– ದೀಪಗಳು ಕತ್ತಲೆಯನ್ನು ಅಣಕಿಸುತ್ತವೆ. ಇವುಗಳ ನಡುವೆ ನಿಜವಾಗಿಯೂ ನಾವು ಯಾರು?" ದೂರಕ್ಕೆ ಕಣ್ಣು ನೆಟ್ಟು ತನ್ನ ಪಾಡಿಗೆ ಕಿರಣ ಹೇಳಿದ್ದ. ಕಿರಣ ಮತ್ತೆ ಮಾತು

ಮುಂದುವರಿಸುತ್ತಾನೆಂದೇ ಚಾರು ಅವನ ಮುಖ ನೋಡುತ್ತಾ ಕುಳಿತಿದ್ದ. ಒಮ್ಮೊಮ್ಮೆ ಈ ಒಂಟಿ ಜೀವನ ಸಾಕು ಅಂತ ಅನಿಸುತ್ತದೆ. ಬೆಳಿಗ್ಗೆ ಮಾಡಿಟ್ಟ ಅನ್ನ; ಸಾರು-ರಾತ್ರಿ ತಿನ್ನುವಾಗ ಮನಸ್ಸು ಮುದುಡಿಕೊಳ್ಳುತ್ತದೆ. ಒಂದೊಂದು ದಿನ ಸಂಜೆಯ ಒಂಟಿತನ ಸಹಿಸಲಾಗದೆ ಯೋಗ ಮಾಡೋಕೆ ಶುರು ಮಾಡ್ತೀನಿ. ಆದ್ರೆ ಮನಸ್ಸು ಅಳುತ್ತಿರುತ್ತದೆ. ಹೃದಯದ ಮೇಲೆ ಯಾರೋ ಗೆರೆಯೆಳೆದು ಹೋಗಿದ್ದಾರೆ. ಅವರೆಲ್ಲಾ ಸೇರಿಕೊಂಡು ಮನಸ್ಸಿನ ಮೇಲೆ ಕಪ್ಪು ರಂಗೋಲಿ ಬಿಡಿಸಿದ್ದಾರೆ. ಅದರಿಂದ ದಾಟಲು ಈ ವರೆಗೆ ಸಾಧ್ಯವಾಗಲಿಲ್ಲ . ಶ್ರೀಮಂತ ಹುಡುಗಿಯರಿಗೆ ಬಹಳ ಸೊಕ್ಕು ಇರುತ್ತದೆ. ಅವರು ದುಡ್ಡಿನಲ್ಲಿ ನಮ್ಮನ್ನು ಅಳೆಯುತ್ತಾರೆ. ಮದುವೆಯಾದರೆ ಅತಿ ಬಡತನದಲ್ಲಿರುವ ಹುಡುಗಿಯನ್ನು ಮದುವೆಯಾಗುವಾಗ ಬೇಕೆಂದು ಬಯಸಿದ್ದೆ. ಯಾಕೆ ಆ ತರಹ ಯೋಚನೆ ಮಾಡಿದೆನೋ ನನಗೆ ಗೊತ್ತಾಗ್ತಾ ಇಲ್ಲ-ಚಾರು-ನಿಜ ಹೇಳ್ತೇನೆ-ನಂಗೊಂದು ಆದರ್ಶವಿತ್ತು. ಬಡತನದಲ್ಲಿರುವ ಹುಡುಗಿಯೊಬ್ಬಳನ್ನು ಮದುವೆಯಾದೆ. ಮದುವೆಯಾದ ವರ್ಷವೇ ಪ್ರೈಮರಿ ಸ್ಕೂಲೊಂದರಲ್ಲಿ ಟೀಚರ್ ಆಗಿ ಕೆಲಸಕ್ಕೆ ಸೇರಿದಳು. ಕೆಲಸಕ್ಕೆ ಸೇರಿದವಳು ಮತ್ತೆ ಬರಲಿಲ್ಲ. ಕರೆಯಲು ಹೋದರೆ ಅಪಮಾನವೇ ಉಡುಗೊರೆಯಾಗಿ ಸಿಕ್ಕಿತು. ಒಂದು ದಿನ ಮನೆಗೆ ಬರಲೇ ಬೇಕು ಎಂದು ಸಿಟ್ಟಿನಿಂದ ಕೂಗಾಡಿದೆ. ಅವಳೂ ಕೂಗಾಡಿದಳು. ತಡೆಯೋಕೆ ಸಾಧ್ಯವಾಗದೆ ಹೊಡೆದೆ. ಹೊಡೆದುದಕ್ಕೆ ಪೊಲೀಸ್ ಕಂಪ್ಲೆಂಟು ಕೊಟ್ಟಳು. ಅವಳು ಸುಳ್ಳು ಕೇಸು ಹಾಕಿದಳು-ವರದಕ್ಷಿಣೆಗಾಗಿ ಹೊಡೆದರು ಅಂತ. ಒಂದು ದಿನ ಸ್ಟೇಶನಿನಲ್ಲಿಯೂ ಇರಬೇಕಾಯಿತು. ಕೊನೆಗೆ ಗತ್ಯಂತರವಿಲ್ಲದೆ ಡೈವೋರ್ಸ್ ಕೊಡೋಣವೆಂದು ಹೋದೆ- ಅವಳು, "ವರದಕ್ಷಿಣೆ ಕೊಟ್ಟಿದ್ದೇವೆ. ಅದನ್ನು ಕೊಡಬೇಕೆಂದು ಹಟ ಹಿಡಿದಳು. ಊರಿನ ಜಮೀನು ಮಾರಿ ಅವಳ ಕೈಗೆ ಕೊಟ್ಟು ಬಂದೆ. ನಿಜವಾಗಿಯು ಸಾಕಾಗಿ ಹೋಯಿತು". ಇಷ್ಟು ಹೇಳಿದ ಕಿರಣ ದಳದಳನೆ ಕಣ್ಣೀರು ಸುರಿಸಿದ್ದ. ಮೇಲುನೋಟಕ್ಕೆ ಮಹಾನ್ ನಿಷ್ಠುರವಾದಿಯಾಗಿ ಕಾಣಿಸುವ ಕಿರಣ ಅಂತರಾಳದಲ್ಲಿ ನೊಂದ ನಗೆಯೊಂದು ಚಾರುವಿಗೆ ಆ ವೇಳೆಯಲ್ಲಿ ಅಚ್ಚರಿ ಮೂಡಿಸಿದ್ದು ನಿಜ. ಒಂದು ತೆಳುವಾದ ನಗೆ: ಕೆಲಸದಲ್ಲಿನ ಏಕಾಗ್ರತೆ; ಯಾವುದೇ ದ್ವಂದ್ವವಿಲ್ಲದ ಕಿರಣನ ನಿಲುವುಗಳು ಚಾರುವಿಗೆ ಆತ್ಮೀಯ ಸಂಗಾತಿತನವನ್ನು ತೋರಿಸಿದ್ದವು, ಮೇಲು ನೋಟಕ್ಕೆ ಯಾವುದೇ ದುಃಖವಿಲ್ಲದ ಸ್ತ್ರೀ ದ್ವೇಷಿಯಾಗಿ ಕಾಣಿಸುವ ಕಿರಣನಲ್ಲಿ ಒಂದು ರೀತಿಯ ಆತ್ಮೀಯತೆಯು ಚಾರುವಿಗೆ ಮೂಡಿದರೂ ಅವನನ್ನು ಕಂಡರೆ ಮೈಥಿಲಿಗೆ ಅಷ್ಟಕಷ್ಟೆ! ಚಾರುವಿನ ಯಾವ ಸ್ನೇಹಿತರನ್ನು ಕಂಡರೂ ಅವಳಿಗೆ ಕೊಂಚ ಸಿಟ್ಟು; ಅನಾಗರಿಕರು ಎಂಬ ಕಲ್ಪನೆ. ಯಾರಾದರೂ ಮನೆಗೆ ಬಂದರೆ ತನ್ನ ಸಿಟ್ಟು; ಅಸಹನೆಯನ್ನು ಯಾವುದಾದರೂ ಒಂದು ರೀತಿಯಲ್ಲಿ ವ್ಯಕ್ತಪಡಿಸುವ ಅವಳ ಧೋರಣೆಯನ್ನು ಕಂಡು ಚಾರು ಕೂಡ ತನ್ನ ಗೆಳೆಯರನ್ನು ಮನೆಗೆ ಕರೆತರುವುದನ್ನು

ನಿಲ್ಲಿಸಿದ. ಕಿರಣನಿಗೆ ಮೈಥಿಲಿಯು ಇರಿಸಿದ ಅಡ್ಡ ಹೆಸರು–ಶುಕಮುನಿ. ತನ್ನ ಸ್ನೇಹಿತರನ್ನು ಯಾವುದೇ ಕಾರಣಕ್ಕೆ ಮನೆಗೆ ಕರೆದು ತಾರದ ಚಾರು ಅವರಿಗೆ ಹೊಟೇಲಲ್ಲಿಯೇ ಕಾಫಿ ಕುಡಿಸಿ ಅಲ್ಲಿಯೇ ಮಾತಾಡಿ ಕಳಿಸುವುದನ್ನು ರೂಢಿಸಿಕೊಂಡ. ಇಲ್ಲವೇ ತಾನೆ ಅವರ ಮನೆಗೆ ಹೋಗುತ್ತಿದ್ದ. ಒಂದು ಸಾರಿ ಕಿರಣನ ಮನೆಗೆ ಮೈಥಿಲಿಯನ್ನು ಕರೆದೊಯ್ದಿದ್ದ. ಅಲ್ಲಿಂದ ಹೊರಗೆ ಬಂದ ತಕ್ಷಣ ಮೈಥಿಲಿ ತಡೆಯಲಾಗದೆ ಅಂದಿದ್ದಳು: "ಏನ್ರೀ ಅದು– ಆ ಶುಕಮುನಿಯ ಮನೆ ಒಳ್ಳೇ ಗೂಡಿನ ಥರ ಇದೆ. ಗಲೀಜು ಮನುಷ್ಯರಪ್ಪ! ನೆಟ್ಟಗೆ ಮನೇನು ಒರಸೊಲ್ಲ ಅಂತ ಅನಿಸುತ್ತೆ. ಆ ಮನುಷ್ಯನಿಗೆ ಒಂದು ಕಾಮನ್ ಸೆನ್ಸು ಇರುವ ಹಾಗೆ ಕಾಣ್ಸೋಲ್ಲ. ಹಂದಿಗಳ ಥರಾ ಬದುಕ್ತಾ ಇದ್ದಾರೆ." ಅದೇ ಕೊನೆ ಅಲ್ಲಿಂದ ಯಾವತ್ತು ಚಾರು ಮೈಥಿಲಿಯನ್ನು ತನ್ನ ಸ್ನೇಹಿತರ ಮನೆಗೆ ಕರೆದುಕೊಂಡು ಹೋಗಿರಲಿಲ್ಲ. ಕಿರಣ ಸಮರ್ಥ ಮತ್ತು ನಿಶಿತಮತಿ. ಅದಕ್ಕೇ ಅವನು ಆರಿಸಿಕೊಂಡದ್ದು ಪತ್ರಿಕೆಯ ಕೆಲಸ. ಪತ್ರಿಕೆಯಲ್ಲಿ ಈಚೆಗೆ ಅಂದರೆ ಸರಿಯಾಗಿ ಎರಡು–ಮೂರು ವರ್ಷದ ಹಿಂದೆ ಸೇರಿಕೊಂಡವಳು ಹಿಮಾನಿ. ಪತ್ರಿಕೆಗೆ ಸೇರಿದ ಹೊಸದರಲ್ಲಿ ಕಿರಣ ಹಿಮಾನಿಯನ್ನು ದೂರವೇ ಇಟ್ಟಿದ್ದ. ಒಂದೇ ಪತ್ರಿಕೆ–ಒಂದೇ ಬೆಂಚುಗಳಲ್ಲಿ ಕೆಲಸ ಮಾಡುವಾಗ ಮೂಡಿಬಂದ ಸ್ನೇಹವದು. ಎಲ್ಲೋ ನೋಡಿಕೊಂಡು ಮಾತಾಡುವ ಕಿರಣನ ಸ್ತ್ರೀ ದ್ವೇಷವು ಸಕಾರಣವಾದುದು ಎಂದು ಊಹಿಸಲು ಹಿಮಾನಿಗೆ ಪಾಠ ಪುಸ್ತಕ ಬೇಕಿರಲಿಲ್ಲ. ಪತ್ರಿಕೆಯು ಅಚ್ಚಿಗೆ ಹೋಗುವ ಮೊದಲಿನ ಗಡಿ ಬಿಡಿ. ಅವನ ಸಿಟ್ಟು ಅವಳಿಗೂ ಅಭ್ಯಾಸವಾಯಿತು. ಪತ್ರಿಕೆಯಲ್ಲಿ ಕೆಲಸ ಮಾಡುವವರು ದುಶ್ಚಟದ ದಾಸರು ಅನ್ನುವ ಕಲ್ಪನೆಯು ಅವಳಿಗೆ ಇಲ್ಲವಾಗ ತೊಡಗಿತು. ಕಿರಣನಿಗೂ ಅವಳಲ್ಲಿ ಸಲುಗೆ ಬಂತು. ಅವರಿಬ್ಬರೇ ಪತ್ರಿಕೆಯ ಕಚೇರಿಯಿಂದ ಹೊರಟ ಕ್ಷಣವದು; ಆಗ ಹಿಮಾನಿಯೇ ಮಾತಿನ ಅಕ್ಷತೆ ಚೆಲ್ಲಿದಳು;

"ನಿನ್ನೆ ರಾತ್ರಿ ಕನಸು ಬಿದ್ದಿತ್ತು. ಅದರಲ್ಲಿ ನಾವಿಬ್ಬರು ರೆಕ್ಕೆ ಕಟ್ಟಿಕೊಂಡು ಆಕಾಶದಲ್ಲಿ ಹಾರಾಡುತ್ತಿದ್ದೆವು ಮುಂಜಾವದ ಕನಸು ಸಾರ್ ಅದು."

ಕಿರಣ ಪ್ರತಿಕ್ರಿಯೆ ಕೊಡಲಿಲ್ಲ. ಮತ್ತೆ ಹಿಮಾನಿ ಹೇಳಿದಳು: "ಒಬ್ರೇ ಇರೋಕೆ ಬೇಜಾರಾಗೋಲ್ವಾ?" ಕಿರಣ ಥಟ್ಟನೇ ಅಂದ: "ಬೇಜಾರು ಯಾಕೊ."

"ನನ್ನ ದಿನಚರಿಯ ತುಂಬಾ ನಿಮ್ಮ ಬಗ್ಗೆ ಬರೆದಿದ್ದೇನೆ. ರಜೆ ಬಂದ್ರೆ ಯಾಕೆ ರಜಾ ಬಂತೋ ಅಂತ ಅನ್ಸುತ್ತೆ. ನನ್ನ ಜಗತ್ತಿನಲ್ಲಿ ನಾನು ಮತ್ತು ನೀವು –ಇಬ್ರೇ ಇರೋದು. ನಿಮ್ಮನ್ನು ಬಿಟ್ಟಿರೋಕೆ ಸಾಧ್ಯಾನೇ ಇಲ್ಲಾಂತ ಅನ್ಸುತ್ತೆ. ನೀವು ತುಂಬಾನೇ ನೋವು ತಿಂದಿದ್ದೀರಾ ಅಂತ ಗೊತ್ತು. ಆದ್ರೆ ಎಲ್ಲಾ ಹೆಂಗಸರು ಹಾಗೆ ಇರೋಲ್ಲ. ನನಗೆ ನೀವಂದ್ರೆ ಅಭಿಮಾನ. ನನ್ನ ಮನಸ್ಸಿನಿಂದ ನಿಮ್ಮನ್ನು ಎಷ್ಟು ಹೊರ ಹಾಕಲು ಯೋಚನೆ ಮಾಡ್ತೀನಿ. ಆದ್ರೆ ಆಗೊಲ್ಲ. ಸದಾ ನಿಮ್ಮ ಜೊತೆ ಇರ್ಬೇಕೂಂತ ತುಂಬಾ ಆಸೆ. ಸದಾ ನಿಮ್ಮದೇ ಧ್ಯಾನವಾಗಿಬಿಟ್ಟಿದೆ. ಒಂದೇ ಒಂದು ದಿನ ಸುಮ್ಮನೆ –ಯೋಚನೆ

ಮಾಡಿದೆ. ನಿಮ್ಮನ್ನು ಮದುವೆಯಾದರೆ ಹೇಗಿರಬಹುದು ಅಂತ. ಆ ದಿನ ಬಾಳಾ ಖುಶಿಯಾಗಿದ್ದೆ. ನಾನು ನಿಮ್ಮನ್ನ ತುಂಬಾ ಹಚ್ಕೊಂಡು ಬಿಟ್ಟಿದ್ದೀನಿ. ಎಲ್ಲಾ ಗಂಡಸರು ಇಷ್ಟೇ ಅಂತ ತಿಳ್ಕೊಂಡುಬಿಟ್ಟಿದ್ದೆ. ಆದ್ರೆ, ಗಂಡಸರ ಬಗ್ಗೆ ಇರುವ ನನ್ನ ಅಭಿಪ್ರಾಯ ನಿಮ್ಮಿಂದ ಬದಲಾಯಿತು. ನಿಮ್ಮೆದೆಯ ಮೇಲೆ ತಲೆಯಿಟ್ಟು ಜಗತ್ತು ಮರೀಬೇಕಂತ ಆಸೆಯಾಗುತ್ತೆ. ಕಳೆದು ಹೋದ ದಿನಗಳ ನೆರಳುಗಳನ್ನು ಮತ್ತೆ ಹುಡುಕಬಾರದು ಸಾರ್, ನೆನಪುಗಳನ್ನೇ ಅಂಗೈಯಲ್ಲಿ ಹಿಡಿದುಕೊಂಡು ಅದು ಸುಡುತ್ತೆ ಅಂತ ಮುಖ ಕಿವುಚಿಕೊಳ್ಳುವುದರಲ್ಲಿ ಅರ್ಥವಿಲ್ಲ. ಹಾದಿಯಲ್ಲಿ ನಡೆದವನಿಗೆ ಹಿಂದಿನ ಹಾದಿಗಿಂತ ಮುಂದಿರುವ ಹಾದಿ ಮುಖ್ಯವಲ್ಲವೆ? ಸತ್ಯ ಹೇಳ್ಲಾ ಸರ್– ನನಗೆ ನೀವಂದ್ರೆ ಆಸೆ. ಅದನ್ನು ಬಿಟ್ಟಿರಲಾರೆ." ಹಿಮಾನಿಯ ಸುರಿಯುತ್ತಿರುವಂಥ ಮಳೆಯ ರೀತಿಯ ಮಾತನ್ನು ಕಿರಣ ಉದ್ದೇಶ ಪೂರ್ವಕ ತುಂಡರಿಸಿ ಆ ದಿನ ಮುಂದೆ ನಡೆದಿದ್ದ. ತನ್ನ ವಯಸ್ಸು ಅವಳ ವಯಸ್ಸು ಎಲ್ಲವನ್ನು ಬಿಡಿಸಿ ಹೇಳಿದ್ದ. ಆದರೆ ಹಿಮಾನಿಯ ಒತ್ತಡ–ಬೆದರಿಕೆ ತಾನು ಸಾಯ್ತೇನೆ ಎನ್ನುವ ಒತ್ತಾಯ ಮಣಿದು ಕೊನೆಗೆ ಅವಳನ್ನೇ ಒಂದು ದೇವಸ್ಥಾನದಲ್ಲೆ ಮದುವೆಯಾಗಿದ್ದ. ಕಿರಣ ಮತ್ತು ಹಿಮಾನಿ ದಂಪತಿಗಳಾದ ದಿನ ಸಂಜೆ ಚಾರುವೇ ಅವರನ್ನು ಹೋಟಲಿಗೆ ಕರೆದು ಕೊಂಡೊಯ್ದು ಸ್ವೀಟ್ ಕೊಡಿಸಿದ. ಸಂತೋಷವನ್ನು ಮನೆಗೂ ಹಂಚಬೇಕೆಂದು ಮನೆಗೂ ಸ್ವೀಟ್ ತಂದು ಮೈಥಿಲಿಗೆ ಕೊಟ್ಟು ಹೇಳಿದ್ದ "ಕಿರಣ ಹಿಮಾನಿಯನ್ನು ಮದುವೆಯಾದ." ಮೈಥಿಲಿ ತುಟಿಯನ್ನು ವಕ್ರಗೊಳಿಸಿ "ಹಿಮಾನಿಗೆ ಕಿರಣನ ಮಗಳ ಪ್ರಾಯ. ಆ ಮುದಿಗೂಬೆಯಿಂದ ಅವಳಿಗೇನು ಸುಖ ಸಿಗುತ್ತೆ ಮಣ್ಣು. ಒಂದೇ ವರ್ಷದಲ್ಲಿ ಅವನಿಗೆ ಕೈ ಕೊಟ್ಟು ಓಡಿ ಹೋಗ್ತಾಳೆ ಅಷ್ಟೆ! ಅವಳಿಗೂ ಹೆಸರಿಗೊಬ್ಬ ಗಂಡ ಬೇಕು" ಅಂದಿದ್ದಳು. ಗಂಡ–ಹೆಂಡತಿಯೆಂದರೆ ಸುಖವೆಂಬ ಸರಳ ಲೆಕ್ಕಚಾರವನ್ನು ಹಿಡಿಯುವ ಮೈಥಿಲಿಯೊಂದಿಗೆ ವಾದಿಸಿ ಪ್ರಯೋಜನವಿಲ್ಲವೆಂದು ಚಾರು ಸುಮ್ಮನುಳಿದಿದ್ದ. ಇಂಥ ಕಿರಣನೇ ಆಗ–ಆ ಹೊತ್ತು–ಚಾರು ಮನೆಯ ಹೊರಗೆ ಕತ್ತಲೆಯಲ್ಲಿ ಹೊಸ್ತಿಲಲ್ಲಿ ಕುಳಿತವನಿಗೆ ಪೋನು ಮಾಡಿದ. ಯಾವುದೋ ಚಿಂತೆಯಲ್ಲಿ ಮುಳುಗಿದವನಿಗೆ ಮೊದಲು ಪೋನು ಹೇಳಿದ ರಿಂಗಣ ಕೇಳಲಿಲ್ಲ, ಮತ್ತೊಮ್ಮೆ ರಿಂಗ್ ಆದಾಗ ಮನೆಯೊಳಗೆ ಬಂದ: ಅದೇ ಮೈಯ ಕೊಂಚ ನಡುಕದಲ್ಲಿ ಪೋನು ಎತ್ತಿಕೊಂಡ–"ಅರ್ಜೆಂಟ್ ಮನೆಗೆ ಬನ್ನಿ" ಅಷ್ಟೆ ಹೇಳಿ ಕಿರಣ ಪೋನು ಇಟ್ಟ. ಮೈಥಿಲಿಗೂ ಯಾವುದೇ ಮಾತನ್ನು ಹೇಳದೆ ಚಾರು ಕಿರಣನ ಮನೆಯತ್ತ ಹೆಜ್ಜೆ ಹಾಕಿದ.

ಹಿಮಾನಿ ಅಳುತ್ತಾ ಕೂತಿದ್ದಳು. ಅವಳ ತಲೆಗೂದಲು ಕೆದರಿಕೊಂಡಿತ್ತು. ಕಿರಣ ತನ್ನದೇ ಕ್ರಮದಲ್ಲಿ ಗೋಡೆಯನ್ನು ನೋಡುತ್ತಾ ಕುಳಿತಿದ್ದ. ಚಾರು ಬಂದಾಗ ಹಿಮಾನಿ ತನ್ನ ನೈಟಿಯಲ್ಲಿಯೇ ಕಣ್ಣೀರು ಒರೆಸಿಕೊಂಡಳು. ಚಾರು ಏನು? ಎಂಬಂತೆ ಕಿರಣನ ಕಡೆ ನೋಡಿದ. ಕಿರಣ ಹೇಳಿದ: ಸಂಜೆಯಿಂದಲೂ ಇವಳದು ಒಂದೇ ವರಾತ.

ಮಗುವನ್ನು ದತ್ತು ತಗೋತೇನೆ ಅಂತ. ನಾನು ಸಾಧ್ಯ ವಿಲ್ಲ ಅಂದೆ. ಅದಕ್ಕೆ ಸಾಯೋಕೆ ಅಂತ ಹೊರಟಳು. ಎರಡು ಬಿಗಿದೆ. ಈ ಹೆಂಗಸರ ಹಣೆಬರಹವೇ ಇಷ್ಟು! ಇವರನ್ನು ನಂಬಬಾರದು. ಬೇಕಾದಾಗ ಬಳಸಿಕೊಂಡುಬಿಡ್ತಾರೆ. ಆ ಮೇಲೆ ಕಸ ಪೊರಕೆಯಂತೆ ಮೂಲೆಯಲ್ಲಿ ಇಟ್ಟುಬಿಡ್ತಾರೆ. ಹೆಂಗಸರ ಬುದ್ದಿ ಇರುವುದೇ ಕಾಲಿನ ಉಂಗುಷ್ಟದಲ್ಲಿ. ಹಿಮಾನಿ ಅಳುತ್ತಾ "ನಾನೇನು ಮಾಡ್ಲಿ ? ನಂಗೆ ಮಗು ಬೇಕು ಅಂತ ಆಸೆ. ಇವರಿಗೆ ಹೆಂಗಸರ ಕಷ್ಟ ಅರ್ಥ ಆಗೋಲ್ಲ. ಈ ಗಂಡಸರೇ ಇಷ್ಟು; ಇವರಿಗೆ... " ಮಧ್ಯೆ ಚಾರು ಬಾಯಿ ಹಾಕಿದ. "ಸುಮ್ಮನೆ ಯಾಕೆ ಕಿರಿಕಿರಿ? ಈಗ ಆದುದ್ದು ಆಗಿ ಹೋಯಿತು. ಕಿರಣನಿಗೆ ಮಗು ಬೇಡ, ನಿಮಗೆ ಮಗು ಬೇಕು. ಅದಕ್ಕೆ–ಹಗಲು ಹೊತ್ತು ಮಗುವನ್ನು ತಂದು ಇಟ್ಟುಕೊಳ್ಳುವುದು, ರಾತ್ರಿ ಮಗುವನ್ನು ಕಳಿಸಿಬಿಡುವುದು. ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ" ಚಾರುವಿನ ಮಾತು ಕೇಳಿ ಇಬ್ಬರಿಗೂ ನಗೆ ಬಂತು. ಅವರಿಬ್ಬರಿಗೆ ಸಮಧಾನ ಹೇಳಿ ಚಾರು ಮನೆಗೆ ಬಂದಾಗ ಮೈಥಿಲಿಯು ಗೊರಕೆಯಲ್ಲಿದ್ದಳು. ಚಾರು–ಮತ್ತೆ ಅಮಲನ್ನು ಏರಿಸಲು ತೊಡಗಿದ. "ಏನಾಗಿದೆ ಇವಳಿಗೆ?"

ಬೆಡ್ ರೂಮು ಅನ್ನೋದೆ ಒಂಥರಾ ಹಿಂಸೆ

– ೧೧ –

ಚಾರು ತಟ್ಟನೆ ಎಚ್ಚೆತ್ತುಕೊಂಡ. ರಾತ್ರಿಯೆಂಬ ರಾತ್ರಿಯ ಹೊತ್ತು ಕೂಡಾ ಅವನನ್ನು ಬಡಿದೆಬ್ಬಿಸಿದಂಥ ಅನುಭವವಾಯಿತು. ರಪ್ಪನೆ ಎದ್ದು ಕುಳಿತ. ಎದ್ದು ಕುಳಿತ ಕ್ರಮವೂ ಯಾವ ಬಗೆಯದಿತ್ತೆಂದರೆ ತಕ್ಷಣವೇ ಯಾವುದೇ ಒಂದು ನಿರ್ಣಾಯಕವಾದ ನಿರ್ಧಾರವನ್ನು ಮಾಡ ಬೇಕೆಂದು ಯೋಚಿಸಿದ. ಶತ್ರು ಯಾರು? ಅವನು ಯಾಕೆ ಶತ್ರುವಾದ ಎಂಬುದು ಖಚಿತವಾದ ಮೇಲೂ ಪ್ರತಿ ದಾಳವನ್ನು ಉರುಳಿಸಲೇಬೇಕು. ಶತ್ರುವನ್ನು ಗೆಲ್ಲುವ ದಾರಿಗಳು ಹೇಗೆ? ಕೌಟಿಲ್ಯನ ದಾರಿಯಲ್ಲಿ ಹೋದರೆ ಶತ್ರುವನ್ನು ಗೆಲ್ಲಲು ಹತ್ತು ಹಲವು ಬಗೆಗಳಿವೆ. ಶತ್ರುವಿನ ಕೋಟೆಯನ್ನು ಯಾವ ಬಗೆಯಲ್ಲಾದರೂ ಭೇದಿಸಬಹುದು. ಸೇನೆಯ ಕ್ರೋಢೀಕರಣವೇ ಮುಖ್ಯ. ಶತ್ರುವಿನ ಮೂಲಬೇರನ್ನು ಕಿತ್ತೆಸೆಯಬೇಕು. ಯಾಕೋ ಅವನಿಗೆ ನಟ್ಟನೆಡು ರಾತ್ರಿಯಲ್ಲಿ ನೆನಪಿಗೆ ಬಂದಿರುವುದು ಮಾತ್ರ ಚಾಣಕ್ಯನೆ. ತಕ್ಷಣವೇ ಆಕ್ರಮಿಸಬೇಕು. ಆದರೆ ಆಕ್ರಮಣವೆನ್ನುವುದು

ದೇವವ್ರತನ ಮನಸ್ಸಿನ ತುಂಬಾ ಗಾಯಗಳನ್ನು ಉಂಟು ಮಾಡಬೇಕು ಅಷ್ಟೇ. ಈ ದಾರಿಯೇ ಹೆಚ್ಚು ಸುಗಮ. ಮೈಥಿಲಿಯ ಯೋಚನೆಯು ಯಾವ ಕ್ರಮದಲ್ಲಿಯಾದರೂ ಇರಬಹುದು. ಅವಳ ಆಲೋಚನೆಯನ್ನು ಕಟ್ಟಿಕೊಂಡು ವ್ಯವಹರಿಸಿದರೆ ನನ್ನ ಬದುಕು ಹೈರಾಣಾಗಿ ಹೋಗುತ್ತದೆ. ಮೈ ತುಂಬಾ ಪೌಡರಿನ ವಾಸನೆ, ಅತ್ತರಿನ ಗಮಗಮದ ಹಿಂದೆ ಓಡುವ ಅವಳ ಮನಸ್ಸಿನ ಗತಿ ನಂಬಿದರೆ ನಾನಂತೂ ಉರುಳಿ ಬೀಳುವುದು ಖಂಡಿತ. ಖಡಾಖಂಡಿತವಾದ ರಾತ್ರಿಯಲ್ಲಿ ಎದ್ದು ಕುಳಿತ ಚಾರು ಸಣ್ಣನೆಯ ಲೈಟಿನ ಸ್ವಿಚ್ ಅದುಮಿದ. ಸೀಳಿ ಬರುತ್ತಿರುವ ಮೈಥಿಲಿಯ ಗೊರಕೆ ಮಧ್ಯರಾತ್ರಿಯ ಮೌನವನ್ನು ಕಲಕುತ್ತಿತ್ತು ಅಷ್ಟೆ. ಚಾರುವಿಗೆ ಬೆಡ್ ರೂಮು ಅನ್ನೋದೆ ಒಂಥರಾ ಹಿಂಸೆಯೆಂದೆನಿಸತೊಡಗಿತು. ಹೊರಗಡೆಗೆ ಬಂದವನೆ ಸಿಗರೇಟು ಹಚ್ಚಿದ, ಸಿಗರೇಟು ಯಾವುದೇ ರೀತಿಯ ಆಲೋಚನೆಯನ್ನು ಕೊಡದೇ ಇದ್ದರೂ ಕೂಡಾ ಆ ಕ್ಷಣಕ್ಕೆ ಅದುಬೇಕಿತ್ತು. ಸಿಗರೇಟು ಎರಡು ದಮ್ಮು ಸೇದಿದರೂ ಯಾಕೋ ತೃಪ್ತಿಯೆನಿಸಲಿಲ್ಲ. ಚಾರು ತನ್ನ ಬ್ಯಾಗ್ ತೆಗೆದ. ಇನ್ನೂ ಎರಡು ಬಾಟಲ್ ಹಾಗೆಯೇ ಉಳಿದಿವೆ. ಕುಡಿಯೋನಿಗೆ ಹಗಲಾದರೇನು, ರಾತ್ರಿಯಾದರೇನು? ಎಲ್ಲಾ ನಿಯಮಗಳನ್ನೂ ಒಂದೇ ಚೌಕಟ್ಟಿಗೆ ಹೊಂದಿಸಲಾಗುವುದಿಲ್ಲ. ಜಿನ್ ಎಂಬ ಮಾಂತ್ರಿಕ ಲೋಕಕ್ಕೇ ಮತ್ತೆ ಮೊರೆ ಹೋಗಬೇಕು. ಚಾರು ಮತ್ತೊಮ್ಮೆ ಜಿನ್ ಕುಡಿದು ಕೂತ. ಸರಿಯಾಗಿ ಅದೇ ವೇಳೆಗೆ ಗೋಡೆಯ ಮೇಲಿನ ಹಲ್ಲಿ ನಿಧಾನವಾಗಿ ಬಂದು ಪುಟ್ಟ ಹುಳವೊಂದನ್ನು ಬಾಯಿಗೆ ಹಾಕಿತು. ಬಾಯಿಗೆ ಹಾಕಿದ ಹುಳವನ್ನು ಹಾಗೆಯೇ ನುಂಗಿದ ಹಲ್ಲಿಯನ್ನು ನೋಡಿ ಚಾರು ಕೂಡಾ ಸಮಸ್ಯೆಯನ್ನು ಹೇಗೆ ಬಗೆಹರಿಸಿಕೊಳ್ಳಬೇಕೆಂದು ಯೋಚಿಸತೊಡಗಿದ. ಚಾರು ಮುಂದಿನ ದಿಕ್ಕುಗಳನ್ನು ಕುರಿತು ಲೆಕ್ಕ ಹಾಕಬೇಕೆಂದುಕೊಂಡ. 'ನಾನು ಯುದ್ಧ ಸನ್ನದ್ಧನಾಗಬೇಕು. ಹೊಸ್ತಿಲಿನ ಹೊರಗಿನ ಶತ್ರು. ಹೊಸ್ತಿಲಿನ ಒಳಗಿನ ಚಂಚಲತೆಯೇ ಮೈತುಂಬಾ ತುಂಬಿಕೊಂಡಿರುವ ಮೈಥಿಲಿ ಇವರಿಬ್ಬರ ಎದುರು ಕೇವಲ ಮಾತುಗಳಿಂದಲೇ ಯುದ್ಧ ಗೆಲ್ಲುತ್ತೇನೆ. ಈ ಯುದ್ಧದ ಆಟದಲ್ಲಿ ಕೊನೆಗೂ ನನಗೆ ವಿಜಯದ ಮಾಲೆ ದೊರೆಯಬೇಕು. ಮೈಥಿಲಿಯ ಅಪಹಾಸ್ಯಕ್ಕೆ ಗುರಿಯಾದ ನನ್ನ ಕಣ್ಣುಗಳಲ್ಲಿ ಉರಿಯುವ ಕೊಳ್ಳಿಯಿದೆ. ನಾನು ಯಾವ ಸಂಧಿಸ್ಥಳವೆಂದು ಭಾವಿಸಿದ್ದೇನೋ ಅಲ್ಲಿ ನಾನಾಡಲಿರುವ ಮಾತುಗಳಿಂದಲೇ ದೇವವ್ರತ ನಿಧಾನವಾಗಿ ಕೊಳೆಯಲಿದ್ದಾನೆ ಮತ್ತು ಮೈಥಿಲಿಯ ಅನಗತ್ಯ ನನ್ನ ಬಗೆಗಿನ ಅಸಹ್ಯ ಭಾವನೆ ಅವಳಿಗೆ ಕೀಳರಿಮೆಯನ್ನು ಸೃಷ್ಟಿಸುವ ನರಕವಾಗಲಿದೆ.' ಚಾರುವಿನ ಕೈ ಬೆರಳಿಗೆ ಸಿಗರೇಟಿನ ಬೆಂಕಿ ತಗುಲಿತು. ಯೋಚನೆಯ ದಿಕ್ಕುಗಳನ್ನೆಲ್ಲಾ ಬಂದ್ ಮಾಡಲು ಯೋಚಿಸಿದ. ಆಗಲೇ ಸರಿಯಾಗಿ ಎರಡೂವರೆ ಗಂಟೆ. ಗಡಿಯಾರದ ಮುಳ್ಳು ಹೇಳಿದ್ದನ್ನು ಅವನು ಕೇಳಿಸಿಕೊಂಡ. ಯಾವುದನ್ನು ಚಾರು ರಾತ್ರಿಯ ಎರಡೂವರೆಗೆ ಯೋಚನೆ ಮಾಡಲು ಶುರುಮಾಡಿದನೋ ಅದುವೇ ಅವನಿಗೆ ನಿರಂತರ

ಶಾಪವಾಗತೊಡಗಿತು – ಅದೂ ಅನೇಕ ವರ್ಷಗಳ ಕಾಲ ನಿದ್ದೆಯೇ ಇಲ್ಲದ ಅಂತರ್ ಪಿಶಾಚಿ ರಾತ್ರಿಗಳು ಅವನ ಬೆನ್ನ ಹಿಂದೆಯೇ ಬಂದವು. ಮತ್ತು ಮೈಥಿಲಿಯ ಬಗ್ಗೆ ಆ ದಿನ ರಾತ್ರಿ ಅವನು ಯೋಚಿಸಿದ ಕ್ರಮಗಳು ಅವಳ ಬೆನ್ನನ್ನು ಹಿಡಿದುಕೊಂಡೇ ಬಂದವು ಮತ್ತು ದೇವವ್ರತ ಮುಂದಿನ ಕೆಲವು ವರ್ಷಗಳಲ್ಲಿಯೆ ಕೊಳೆಯತೊಡಗಿದ. ಸರಿಯಾಗಿ ಗಡಿಯಾರ ಹೇಳಿತು. "ಮೂರು ಗಂಟೆ."

*

ಮೈಥಿಲಿ ಆಫೀಸಿಗೆ ಹೊರಡುವುದನ್ನೇ ಕಾಯುತ್ತಾ ಕುಳಿತಿದ್ದ ಚಾರು 'ಸಂಜೆ ಬೇಗ ಬಾ, ನಾನೂ ಬಂದಿರ್ತೀನಿ. ಉಳಿದುದನ್ನು ಆಮೇಲೆ ನೋಡೋಣ' ಎಂದ. ಮೈಥಿಲಿಯ ಮುಖ ಕಳಾಹೀನವಾಗಿದ್ದರೂ ಅದರ ಬಗ್ಗೆ ಯೋಚಿಸದೆ ಅವಳು ಹೊರಟಳು. ಅವಳು ಹೊರಡುವ ತನಕ ಸುಮ್ಮನಿದ್ದ ಚಾರು ಹೊರಗಿನ ಬಾಗಿಲಿನ ಬೋಲ್ಟ್ ಹಾಕಿಕೊಂಡು ಸ್ನಾನ ಮಾಡಿದ. ಇವೊತ್ತು ನಿಜವಾಗಿಯೂ ಯಾವುದಾದರೂ ಒಂದು ತಿರುವು ಪಡೆದುಕೊಳ್ಳಬಹುದಾದ ದಿನ. ಯಾಕೋ ಸ್ನಾನ ಮಾಡುವಾಗ ಅವನಿಗೆ ನೆನಪಿಗೆ ಬಂದಿರುವುದು: ಅವನಪ್ಪ. ದಿಕ್ಕುದೆಸೆಯೇ ಇಲ್ಲದ ಒಬ್ಬ ಪರದೇಸಿಯೊಬ್ಬನ ಶ್ರಮ, ದುಡಿಮೆ ಮತ್ತು ತಾಕತ್ತುಗಳು ಈ ಹೊತ್ತಿನವರೆಗೂ ನನ್ನ ಬೆನ್ನ ಹಿಂದೆಯೇ ಉಳಿದುಕೊಂಡು ಬಂದಿವೆ. ಅವಮಾನಗಳನ್ನು ಸಹಿಸುವ ಮತ್ತು ಅದನ್ನು ಯಾವುದೇ ಕಾರಣಕ್ಕೆ ವ್ಯಕ್ತಪಡಿಸದಂತೆ ಎಚ್ಚರ ಪೂರ್ಣವಾಗಿ ಕಾಪಾಡಿಕೊಂಡು ಬರುವ ಗುಣವನ್ನು ಕಲಿಸಿಕೊಟ್ಟಿದ್ದೇ ಅಪ್ಪ ಗಣಪತಿ. ಅಕಳಂಕಿತವಾದ ಅಪ್ಪನ ಮುಖ ಚಾರುವಿನೆದರು ಬಂದಂತಾಯಿತು. ಸ್ವಂತ ಎಂಬುದನ್ನೇ ಅಪ್ಪ ಕುಟುಂಬದೊಳಗೆ ಕಳೆದುಕೊಂಡಿದ್ದ, ಸ್ವಂತ ಸುಖ; ಸ್ವಂತ ಡ್ರೆಸ್; ಸ್ವಂತ ಮೋಜು; ಸ್ವಂತ ವಿರಾಮ ಇತ್ಯಾದಿ ಯಾವ ಪದಗಳೂ ಅಪ್ಪನ ನಿಘಂಟಿನಲ್ಲೇ ಸುಳಿದಿರಲಿಲ್ಲವಲ್ಲಾ? ಬಚ್ಚಲ ಮನೆಯಲ್ಲಿ ಕುಳಿತುಕೊಂಡು ಬರುತ್ತಿದ್ದ ನಲ್ಲಿಯ ನೀರಲ್ಲೇ ತಲೆಯನ್ನು ನೆನೆಸಿಕೊಂಡು ಚಾರು ಅವನ ಅಪ್ಪನನ್ನು ನೆನೆಸಿಕೊಂಡ. ಯಾಕೆಂದರೆ ಚಾರುವಿನ ಅಂತರಾತ್ಮಕ್ಕೆ ಕೊಡುತ್ತಿದ್ದ ಒಂದೇ ಒಂದು ಶಕ್ತಿಯೆಂದರೆ ಅವನಪ್ಪ. ಬಡತನವೆನ್ನುವುದು ಅವಮರ್ಯಾದೆಯಲ್ಲ. ಆದರೆ, ಗಂಜಿಯುಂಡರೂ ಖುಶಿಯಾಗಿರಬೇಕು. ಸಾಧ್ಯವಾದಷ್ಟು ಓದು, ಕಲಿಕೆ ಅಷ್ಟೇ ಸಾಕು. ಒಂದು ದಿನ ಅಪ್ಪನೊಂದಿಗೆ ಹೊರಟಾಗ ನನ್ನ ಚಡ್ಡಿ ಹರಿದುಹೋಗಿತ್ತು. ಅಪ್ಪ ಅದಕ್ಕೇ ಹೇಳಿದ್ದು "ಬಡತನ ಅವಮಾನವಲ್ಲ, ಇನ್ನೊಬ್ಬರ ಎದುರು ಒಳ್ಳೆಯ ಚಡ್ಡಿ, ಅಂಗಿ ಹಾಕಿಕೊಂಡು ಹೋದರೆ ನಿನಗೆ ಬಹಳ ಮರ್ಯಾದೆಯೇನೂ ಸಿಗುವುದಿಲ್ಲ. ಲೋಕ ಹೀಗಿರಬಹುದು. ಬಣ್ಣಕ್ಕೆ, ಬಟ್ಟೆಗೆ ಮರ್ಯಾದೆ ಕೊಡಬಹುದು. ಅದರಿಂದ ಉಪಯೋಗವಿಲ್ಲ ಮಗನೇ, ಮನಸ್ಸು ಶುದ್ಧವಾಗಿರಲಿ, ಪ್ರಾಮಾಣಿಕವಾಗಿರಲಿ, ಅದರಿಂದ ನೆಮ್ಮದಿ ಸಿಗುತ್ತೆ" ಎಂದವರೇ ಅಪ್ಪ ಗಳಗಳನೇ

ಅತ್ತುಬಿಟ್ಟಿದ್ದರು. ಅಪ್ಪನದು ತಾಯಿಕರುಳು ಮತ್ತು ಅವರು ಹೇಳಿಕೊಟ್ಟ ವಾಕ್ಯವೇ ಈ ತನಕ ಹೃದಯದಲ್ಲಿ ಹಾಗೆಯೇ ಜಿಗುಟು ಕಲೆಯಂತೆ ಉಳಿದುಕೊಂಡುಬಿಟ್ಟಿದೆ. ತಂದೆಯೊಂದಿಗೆ ತನ್ನ ಬಾಲ್ಯಕಾಲದ ಅನುಭವ; ಸಾಕು ತಂದೆಯಾದ ಶ್ರೀಧರ ಚಿಕ್ಕಪ್ಪ ಅವರೊಂದಿಗಿನ ಅನುಭವ ಮನಸ್ಸಿನಲ್ಲಿ ಅಂಟಿಕೊಂಡಿರುವುದು ಹೇಗೆ? ಎಷ್ಟು ತೊಳೆಯಬೇಕೆಂದರೂ ತೊಳೆಯಲಾಗುತ್ತಿಲ್ಲ. ಸ್ನಾನ ಮಾಡುತ್ತಿದ್ದ ಚಾರುವಿನ ತಲೆಯ ಮೇಲಿನ ತಣ್ಣೀರ ಹನಿಗಳು, ಕಣ್ಣಂಚಿನಲ್ಲಿ ಮೂಡಿಬಂದ ಕಣ್ಣೀರೂ ಎರಡೂ ಒಂದಕ್ಕೊಂದು ಸೇರಿಕೊಂಡವು. ನನ್ನ ಹೆಂಡತಿಯನ್ನು ದೇವವ್ರತ ಕೇಳಿದ. ಕೇಳಿದ್ದು ಕೇಳಿದ್ದರಲ್ಲಿ ತಪ್ಪು ಎಲ್ಲಿ ನಡೆಯಿತು? ಮೈಥಿಲಿಗೆ ಹೆಮ್ಮೆಯೆನಿಸಿರಬಹುದೆ? ಅವಳಿಗೆ, ಅವಳ ವ್ಯಕ್ತಿತ್ವಕ್ಕೆ ಅವಮರ್ಯಾದೆಯೆಂದು ಅವಳೇಕೆ ಭಾವಿಸಿಲ್ಲ. ದೇವವ್ರತ ಪರೋಕ್ಷವಾಗಿ ಕೇಳಿದ್ದು ಏನು? ಮೈಥಿಲಿಯನ್ನು ಅವನ ಸೂಳೆಯಾಗಿ ಇಟ್ಟುಕೊಳ್ಳುತ್ತೇನೆ ಎಂದೇ ಅಲ್ಲವೆ? ಹೆಣ್ಣಾಗಿ ಮೈಥಿಲಿಗೆ ಅದೊಂದು ಖುಶಿಯ ಮತ್ತು ನೆಮ್ಮದಿಯ ಸಂಗತಿಯೇ ಆಗುತ್ತದೆಂದಾದರೆ ಅವಳೂ ಪರೋಕ್ಷವಾಗಿ ಯಾವುದನ್ನೋ ಒಪ್ಪಿಕೊಂಡಿದ್ದಾಳೆ. ಇದು ನನ್ನ ವಿರುದ್ಧ ದೇವವ್ರತ ಮತ್ತು ಮೈಥಿಲಿಯರು ಹೂಡಿದ ಆಟ. ಚಾರುಗೆ ಯೋಚನೆಗಳು ಬೇಕು ಬೇಕಾದಂತೆ ಬಂದು ಮುತ್ತಿಕೊಂಡವು. ಇದರಾಚೆಗೆ ಹಾದಿ ಸರಿಯುವ ಲಕ್ಷಣಗಳು ಕಾಣಿಸಲಿಲ್ಲ. ಅವನು ಮತ್ತೆ ಬಚ್ಚಲಮನೆಯಿಂದ ಮೈಯೊರಸಿಕೊಂಡು ಬಂದವನೇ, ತಕ್ಷಣ ಆಫೀಸಿಗೆ ಫೋನ್ ಮಾಡಿ 'ಇವತ್ತು ರಜೆ ಹಾಕ್ತಾ ಇದ್ದೇನೆ, ಆರೋಗ್ಯ ಸರಿಯಿಲ್ಲ' ಎಂದು ಹೇಳಿದ. ಯಾಕೋ ಮನಸ್ಸು ಸರಿಯಿರಲಿಲ್ಲ. ಅಷ್ಟೆ, ಸ್ಕೂಟರ್ ತಗೊಂಡು ಹೋಗಿ, ಮತ್ತೆರಡು ಜಿನ್ ತಂದಿಟ್ಟುಕೋಬೇಕು. ಉಳಿದದ್ದು ಆಮೇಲೆ ಎಂದು ಭಾವಿಸಿದವನೇ ಲಗುಬಗೆಯಿಂದ ಹೊರಟ.

ಚಾರು ಲಗುಬಗೆಯಿಂದ ಜಿನ್ ತರಲು ಹೊರಡುವಾಗ ಸರಿಯಾಗಿ ಪಕ್ಕದ ಮನೆಯಿಂದ ದೇವವ್ರತ ಸುಜಾತಗೆ ಹೇಳುವುದು ಕೇಳಿಸಿತು "ಸುಜೀ, ನನ್ನ ಶೂಪಾಲಿಶ್ ಹಾಕಿಲ್ಲ ನೀನು, ಹೇಗೆ ಹೋಗಲಿ?" ದೇವವ್ರತ ಹೇಳುತ್ತಿರುವ ಮಾತು ಚಾರುವಿನ ಕಿವಿಗೆ ಕೇಳಿಸಿತು. ಶೂ ಹಾಕುವ ದಿನಗಳು ಮುಗಿಯುತ್ತಾ ಬಂತು ಅನ್ನುವುದು ಅವನಿಗೇ ಗೊತ್ತಿರಲಿಲ್ಲ. ಅದು ಗೊತ್ತಾಗುವುದಕ್ಕೆ ಇನ್ನೂ ನಾಕು ವರ್ಷಗಳು ಬೇಕು.

ಚಾರು ಹಗಲು ಕರೆಕ್ಟಾಗಿಯೇ ಹನ್ನೊಂದು ಗಂಟೆಗೆ ಜಿನ್ ಹಾಕಿಕೊಂಡು ಮಲಗಿದ. ರಾತ್ರಿ ಅತೃಪ್ತಿಯ ನಿದ್ದೆ. ಮತ್ತೆ ಎಚ್ಚರ ಮತ್ತು ಗೊಂದಲಗಳು! ನಾನೂ ನಗು ನಗುತ್ತಲೇ ಯುದ್ಧ ಸನ್ನದ್ಧನಾಗಬೇಕು. ಈ ನಗುವಿನೊಂದಿಗೆ ನಡೆಸುವ ಯುದ್ಧದಲ್ಲಿ ನಾನು ಗೆಲ್ಲುವುದು ಖಚಿತ. ಅದಕ್ಕೆ ಈಗಲೇ ಯಾವ ಸಿದ್ಧತೆಯೂ ಬೇಕಾಗಿಲ್ಲ. ಮೈಥಿಲಿಯ ಅಹಂಕಾರ ಮತ್ತು ನನ್ನ ಬಗೆಗಿನ ಅಸಹ್ಯ ದೇವವ್ರತನ

ಹಾದರಕ್ಕೆಡೆ ಮಾಡಿಕೊಟ್ಟ ದೇಹ ಮತ್ತು ಮನಸ್ಸುಗಳ ಮೇಲೆ, ಪ್ರಳಯವಾಗಲಿದೆ. ಪ್ರಳಯವಾಗಬೇಕೆಂದರೆ ನಾನು ಈ ನಟ್ಟನಡು ಹಗಲಿನಲ್ಲಿಯೇ ಗುಂಡಿನ ಆಪೋಶನ ತೆಗೆದುಕೊಳ್ಳಬೇಕು ಎಂದು ಭಾವಿಸಿಕೊಂಡೇ ಕುಡಿದು ಮಲಗಿದ. ಸರಿಯಾಗಿ ಎರಡೂವರೆಯ ಹೊತ್ತಿಗೆ ಬಾಗಿಲಿನ ಬದಿಯ ಬೆಲ್‌ನ ಸ್ವಿಚ್ ಎರಡೆರಡು ಬಾರಿ ಒತ್ತಿದವರು ಯಾರೋ? ಅಂತೂ ಮಹಾನ್ ನಿದ್ದೆಯ ಲೋಕದಲ್ಲಿ ಮುಳುಗಿದ, ಗುಂಡಿನ ಅಮಲಿನಲ್ಲಿ ತೇಲಾಡುತ್ತಿದ್ದ ಚಾರುವನ್ನು ಆ ಕರೆಗಂಟೆ ಎಬ್ಬಿಸಿತು. ಯಾರೇ ಕರೆ ಗಂಟೆಯೊತ್ತಲಿ ನನಗೇನು ಎಂದು ಹೊರಳಿ ಮಲಗಿದವನಿಗೆ ಮೂರನೆಯ ಬಾರಿ ಕರೆಗಂಟೆ ಒತ್ತಿದಾಗ ಏಳಲೇ ಬೇಕಾಯಿತು. ಎದ್ದು ಅಸ್ತವ್ಯಸ್ತವಾಗಿ ಕಾಲ ಕೆಳಗೆ ಮುದುರಿ ಬಿದ್ದಿದ್ದ ಲುಂಗಿಯನ್ನು ಉಟ್ಟುಕೊಂಡ. ಪುನಃ ನಾಲ್ಕನೆಯ ಬಾರಿಗೆ ಕರೆಗಂಟೆ ಸದ್ದು ಕೇಳಿಸಿತು. ಲುಂಗಿಯನ್ನು ಉಡುತ್ತಲೇ ಸ್ವಲ್ಪ ಜೋರಾಗಿ "ಬಂದೆ" ಅಂತ ಹೇಳಿದ. ಯಾಕೆಂದರೆ ಬಾಗಿಲನ್ನು ತೆರೆಯುವ ಮೊದಲು ಅವನು ಒಂಚೂರು ಸಿದ್ಧತೆಯನ್ನು ನಡೆಸಬೇಕಿತ್ತು. ತಕ್ಷಣವೇ ಒಂಚೂರು ಹಲ್ಲುಜ್ಜಿ ಗುಂಡಿನ ವಾಸನೆ ಬಾರದ ಹಾಗೆ ನೋಡಿಕೊಳ್ಳಬೇಕಿತ್ತು. ಈ ಎರಡು ಕೆಲಸಗಳನ್ನು ಪೂರೈಸಿಯೇ ಅವನು ಬಾಗಿಲ ಬೋಲ್ಟ್ ತೆಗೆದದ್ದು. ಅವನಿಗೇ ಆಶ್ಚರ್ಯವಾಗುವ ಹಾಗೆ ಬಾಗಿಲು ತೆರೆದಾಗ ಎದುರು ನಿಂತಿದ್ದು ಅವಳು. ಅವಳು ಬಂದು ಎದುರು ನಿಲ್ಲುತ್ತಾಳೆಂದಾಗಲೀ, ತನ್ನನ್ನು ಮಾತಿನಲ್ಲಿಯೇ ಸ್ವಲ್ಪ ತಂಪುಗೊಳಿಸುತ್ತಾಳೆಂಬುದಾಗಲೀ ಅವನಿಗೆ ನಿರೀಕ್ಷೆಯಿರಲಿಲ್ಲವಾದ್ದರಿಂದ, 'ಓ, ನೀನಾ' ಎಂದ ಚಾರು ಅವಳನ್ನು ಒಳಗೆ ಕರೆದ. ಅವಳು ಮನೆಯೊಳಗೆ ಕಾಲಿಟ್ಟಿದ್ದು ಮಾತ್ರ ಅವನ ಜೀವನದಲ್ಲಿ ಮತ್ತೊಂದು ಆಕಸ್ಮಿಕ ತಿರುವಿಗೆ ಕಾರಣವಾಯಿತು.

ಮಾತು ಯಾವ ದಿಕ್ಕಿನಲ್ಲಿ ಹರಿಯುತ್ತದೆ...

-೧೨-

ಅವಳು – ಆ ರೇಖಾ ಪಿಂಟೊ ಮನೆಯೊಳಗೆ ಕಾಲಿಡುವಾಗ ಎಡಗಾಲಿಟ್ಟಳೋ ಅಥವಾ ಬಲಗಾಲಿಟ್ಟಳೋ ಯಾರೂ ಗಮನಿಸಲಿಲ್ಲ. ಅಲ್ಲದೆ ಅವಳು ಬಂದಿದ್ದು ಮಧ್ಯಾಹ್ನ ಎರಡೂವರೆ – ಮೂರು ಗಂಟೆಯ ಹೊತ್ತಿಗೆ. ಮೆಲುನಿದ್ದೆ – ಅರ್ಧ ಎಚ್ಚರ ಎರಡೂ ಸೇರಿದ ಕ್ಷಣದಲ್ಲಿ. ರೇಖಾ ಪಿಂಟೋ ಬಂದಿದ್ದು ತಂಗಾಳಿಯಂತೆ. ಅವಳ ನಗೆಯಲ್ಲಿ ಧಗೆಯನ್ನು ಆರಿಸುವ ಒಂದು ಶಕ್ತಿಯಿದೆಯೆಂದು ಮಾತ್ರ ಚಾರು ಬಲ್ಲ. ಆದರೆ ಅವಳು ಅವನ ಮನೆ ಹೊಸ್ತಿಲನ್ನು ತುಳಿದದ್ದು ಮಾತ್ರ ಮೊದಲ ಬಾರಿ. ಮೊದಲಬಾರಿ ಕಾಲಿಟ್ಟ ಗಳಿಗೆಯೆಂಥದ್ದೋ – ಭವಿಷ್ಯವೇ ಹೇಳಬಲ್ಲುದು. ರೇಖಾ ಪಿಂಟೊ ಮಲ್ಲಿಗೆಯಂಥ ತನ್ನ ನಗುವನ್ನು ಸುರಿವಾಗ ಮಾತ್ರ ಚಾರು ಒಂಚೂರು ನೆಲಕ್ಕಿಳಿದ. ಉರಿಬಿಸಿಲಲ್ಲಿ ತಂಪಾದ ಮಜ್ಜಿಗೆಯಂತೆ ಬಂದವಳು ಈ ರೇಖಾ ಪಿಂಟೊ ಎಂದು ಅವನಿಗೆ ಅನ್ನಿಸಿತು. ಭಾವನೆಗಳನ್ನೇ ಕ್ಯಾಶ್ ಮಾಡಿಕೊಳ್ಳುವ ಮೈಥಿಲಿ ಮತ್ತು ದೇವವ್ರತರ

ಜೊತೆಗೆ ಈ ಸಂಜೆ ಯುದ್ಧ ಹೂಡುವುದಕ್ಕೆ ತಯಾರಾಗಬೇಕೆಂದುಕೊಳ್ಳುವಷ್ಟರಲ್ಲಿ ಈ ಹುಡುಗಿ ರೇಖಾ ಪಿಂಟೋ ಬಂದೇಬಿಟ್ಟಳಲ್ಲ ಎಂದುಕೊಂಡು ಗೊತ್ತಾಗದೇ ತಬ್ಬಿಬ್ಬಾದ. 'ಏನು? ಯಾಕೆ ಒಂಥರಾ ಕೂತಿದ್ದೀರಲ್ಲಾ? ಏನಾಯಿತು? ಆರೋಗ್ಯ ಸರಿಯಿಲ್ವಾ?' ರೇಖಾ ಪಿಂಟೋ ಕೇಳುವಾಗ ಒಂಥರಾ ಭಾವುಕತೆಯ ಸ್ಪರ್ಶವಿದೆಯೆಂದು ಚಾರುಗೆ ಅನಿಸಿತಾದರೂ ಅದಕ್ಕೆ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ರೇಖಾಳ ಮುಖವನ್ನೇ ನೋಡಿದ ಈ ಹುಡುಗಿಯದೆಂಥ ಮುಖವೆಂದು ಅನಿಸಿತು.

ರೇಖಾ ಪಿಂಟೋ ಬಿಸಿಲಿನಲ್ಲಿ ಬಂದಿದ್ದರಿಂದಲೋ ಏನೋ ಕೆಂಪು ಕೆಂಪು ಟೊಮೊಟೋ ಹಣ್ಣಿನಂತಾಗಿದೆ ಅವಳ ಗಲ್ಲವೆಂದು ಚಾರು ಯೋಚಿಸಿದನೇ ಹೊರತು ಅವಳು ಕೇಳಿದ ಯಾವ ಪ್ರಶ್ನೆಗೂ ಸರಿಯಾದ ಉತ್ತರವನ್ನು ಕೊಡಲಿಲ್ಲ. ರೇಖಾ ಪಿಂಟೋ ಮತ್ತೊಮ್ಮೆ ಕೇಳಿದಳು, "ಯಾಕೆ ಏನಾಯಿತು? ಇವತ್ತು ಆಫೀಸಿಗೂ ರಜಾ ಹಾಕಿದ್ದೀರಲ್ಲಾ? ನಾನೂ ರಜಾ ಹಾಕಿದ್ದೆ. ಯಾಕೋ ನೀವು ಮನೆಯಲ್ಲೆ ಇರಬಹುದೆಂದು ವಿಳಾಸ ತಗೊಂಡು ಬಂದ್ಬಿಟ್ಟೆ." ಚಾರು ಅದ್ಯಾವುದಕ್ಕೂ ಉತ್ತರ ಕೊಡದೆ "ಕುಡಿಯೋಕೆ ಏನಾದ್ರು ಬೇಕೆ? ಏನಾದ್ರು ಅಂದ್ರೆ ಬರೀ ತಣ್ಣೀರು ಮಾತ್ರ ಕೊಡಬಲ್ಲೆ. ಧಗೆಗೆ ತಣ್ಣೀರೂ ಕೂಡಾ ಬಿಸಿಯಾಗಿರುತ್ತಷ್ಟೆ" ಅಂದ. "ಬೇಡ ನಾನೇ ತಗೋತೇನೆ" ಎಂದವಳೇ ರೇಖಾ ಅಡುಗೆ ಮನೆಯ ಒಳಗಡೆ ಹೋಗಿ ಒಂದು ಲೋಟ ನೀರು ಕುಡಿದುಕೊಂಡು ಬಂದಳು. ಚಾರು ಸಿಗರೇಟು ಹಚ್ಚಿದ. ರೇಖಾ ಬಂದವಳೇ "ಯಾಕೆ? ನಾನು ಕೇಳಿದ್ದಕ್ಕೆ ನೀವು ಉತ್ತರ ಕೊಟ್ಟೇ ಇಲ್ಲ" ಅಂದಳು. ಚಾರು "ನಿಜ ಹೇಳಬೇಕೆಂದರೆ ಈವತ್ತು ಗುಂಡು ಹಾಕಿ ಬೆಳಗಿನಿಂದ ಈ ಹೊತ್ತಿನ ತನಕ ಮಲಗಿ ಬಿಡುತ್ತಿದ್ದೆ. ಯಾಕೋ ಬೇಸರವಾಯ್ತು ರಜಾ ಹಾಕ್ದೆ. ನೀವು ಬಂದಾಗಲೇ ಎಚ್ಚರವಾಗಿದ್ದು." ಚಾರು ಯಾವ ಮುಚ್ಚುಮರೆ ಬೇಕಿಲ್ಲವೆಂದು ಹೇಳಿದ. "ಯಾಕೆ ಹಗಲು ಹೊತ್ತಿಗೂ ಗುಂಡು ಹಾಕ್ಕೊಂಡು ಮಲಗಿಬಿಡ್ತೀರಾ? ಅದು ಇಷ್ಟೊಂದು ಸಿಗರೇಟು? ಆರೋಗ್ಯ ಕಾಪಾಡಿಕೊಳ್ಳಿ. ಆರೋಗ್ಯ ಕೈ ಕೊಟ್ಟುಬಿಟ್ರೆ ಕಷ್ಟ. ಯಾವಾಗಲೂ ಏನಾದರೂ ಒಂದು ಚಿಂತೆ ಹಂಚಿಕೊಂಡಿರ್ತೀರಾ? ಈ ಚಿಂತೆ ಗಿಂತೆ ಬಿಟ್ಟುಬಿಡಿ ಆರಾಮಾಗಿ ನಗಾಡ್ತಾ ಇದ್ಬಿಡಿ. ಅದರಿಂದ ನಿಮಗೂ ಒಳ್ಳೆದಲ್ವಾ ನಿಮ್ಮ ಹೆಂಡ್ತಿ ಏನು ಹೇಳಲ್ವಾ? ಇಷ್ಟೊಂದು ಸಿಗರೇಟನ್ನು ನೀವು ಸೇದ್ತಿರಾ? ಗುಂಡು ಹಾಕ್ತೀರಾ? ನಿಮ್ಮಂಥವರು ಬದುಕಬೇಕು ಸಾರ್. ನಾಕು ಜನರ ಕೈಲಿ ಒಳ್ಳೆಯವರು ಅಂತ ಅನಿಸಿಕೊಂಡವರೇ ಹೀಗೆ ಕಂಗಾಲಾಗಿ ಗುಂಡು ಹಾಕಿಕೊಂಡು ಕೂತರೆ ಏನಾಗುತ್ತ? Sorry, ಬಾಳ ಮಾತಾಡ್ಬಿಟ್ಟೆ" ಎನ್ನುತ್ತಲೇ ರೇಖಾ ಪಿಂಟೋ ಮುಖವನ್ನು ಒರೆಸಿಕೊಂಡಳು. ಬಹಳ ಸಹಜವಾಗಿ ಮಾತಾಡುವ ಮತ್ತು ತುಂಬಾ ಸಹಜವಾಗಿ ವರ್ತಿಸುವ ಈ ಹುಡುಗಿಯಲ್ಲಿ ಎಷ್ಟೊಂದು ಲವಲವಿಕೆ ತುಂಬಿಕೊಂಡಿವೆಯೆಲ್ಲಾ ಎಂದು ಅವನಿಗೆ ಅನಿಸಿತು. ಅವನು ಅದನ್ನು ಬದಿಗೊತ್ತಿ ಕೂತ. 'ಇಲ್ಲಾ ರೇಖಾ,

ನೀನಿನ್ನು ಸಣ್ಣ ವಯಸ್ಸಿನವಳು ನಿನಗಿನ್ನು ಜೀವನವೆಂದರೆ ಏನೂಂತಲೇ ಗೊತ್ತಿಲ್ಲ. ಹೋಗ್ಲಿಬಿಡು. ಮತ್ತೇನೆ?' ಓ ಏಕವಚನ ಬಳಸಿಬಿಟ್ಟೆ, ನೀನು ಅಂತ ಹೇಳಬಾರದಿತ್ತು ನೀವು ಅಂತ ಹೇಳುವುದು ಒಂದು ಗೌರವಯುತವಾದ ಮಾತು. ಅಂದ ಹಾಗೆ 'ನಿಮಗೆ ನನ್ನ ವಿಳಾಸ ಹುಡುಕೋದು ಕಷ್ಟವಾಗಿಲ್ವೆ?' ರೇಖಾ ಪಿಂಟೋ ಮತ್ತೆ ನಕ್ಕಳು. ಅವಳ ನಗುವಿನ ಅಲೆಯು ಹೊರಹೊಮ್ಮಿ ಚಾರುವಿನ ಕುಡಿತದ ಗಬ್ಬು ವಾಸನೆಯು ಮನೆಯಿಂದ ವಿದಾಯ ಹೇಳಿತು. ಈ ವಿದಾಯವೇ ಅವಳ ನಗುವಿನ ಶಕ್ತಿ. ಅವಳ ಕಣ್ಣಿನಲ್ಲಿ ಚಾರುವಿನ ಬಗೆಗೆ ಯಾವುದೋ ರೀತಿಯ ಕರುಣೆಯಿದೆಯೆಂದನ್ನಿಸಿ ಅವನಿಗೆ ಮುಜುಗರವಾಗತೊಡಗಿತು ಮತ್ತು ಚಾರು ತಟ್ಟನೇ ಕೇಳಿಯೇಬಿಟ್ಟ 'ಅಲ್ಲಾ ನೀವು ಮನೆ ಹುಡುಕಿಕೊಂಡು ಬರುವ ಕಷ್ಟ ಯಾಕೆ ತಗೊಂಡ್ರಿ ಅಂತಾ ಗೊತ್ತಾಗಿಲ್ಲ.' ರೇಖಾ ಪಿಂಟೋ ತನ್ನ ವ್ಯಾನಿಟಿ ಬ್ಯಾಗಿನಿಂದ ತನ್ನ ಮದುವೆಯ ಆಮಂತ್ರಣ ಪತ್ರಿಕೆಯನ್ನು ಕೊಟ್ಟು 'ನೀವು ಬರಲೇ ಬೇಕು ಸಾರ್ ನನ್ನ ಮದುವೆಗೆ. ಯಾವುದೇ ಕಾರಣದಿಂದ ಮಿಸ್ ಮಾಡ್ಬೇಡಿ ಆಫೀಸ್‌ನಲ್ಲಿ ನನಗ್ಯಾಕೋ ನೀವು ಅಂದ್ರೆ ತುಂಬಾ ಇಷ್ಟ ಸಾರ್. ನಿಮ್ಮ ಜೊತೆ ಆಫೀಸ್‌ನಲ್ಲಿ ಮಾತಾಡುವಾಗ ಒಂಥರಾ ಧೈರ್ಯ ಇರುತ್ತೆ. ಏನಾದ್ರೂ ತಪ್ಪಾದ್ರೆ ನಿಮ್ಹತ್ರ ಕೇಳೋದು ಅದಕ್ಕೇನೆ. ನಾಳೆಯಿಂದ ನಾನು ಡ್ಯೂಟಿಗೆ ಬರೋಲ್ಲ. ರಾಜೀನಾಮೆ ಕೊಟ್ಟು ಕಳಿಸ್ತೇನೆ. ನನ್ನ ವುಡ್‌ಬಿ ಅಂತೂ ದೊಡ್ಡ ಎಸ್ಟೇಟ್ ಇಟ್ಕೊಂಡಿದ್ದಾರೆ ಮತ್ತು ಅವರಿಗೆ ಸ್ವಂತ ಬಿಸ್‌ನೆಸ್ ಬೇರೆಯಿದೆ.' ಚಾರು ಅವಳ ಮುಖವನ್ನೆ ನೋಡಿದ: 'ನಿಮ್ಮನ್ನು ಮದುವೆಯಾಗೋ ಹುಡ್ಗನ ಹೆಸ್ರು–ಪ್ರಸನ್ನ ಅಂತ ಅಷ್ಟೇ ಇದೆ ಅಂದ್ರೆ...' ತನ್ನ ಮಾತನ್ನು ಪೂರ್ಣಗೊಳಿಸಬೇಕಾದ ಮೊದಲೇ ರೇಖಾ – 'ನನ್ನ ಅಪ್ಪ ಕ್ರಿಶ್ಚಿಯನ್, ಅಮ್ಮ–ಹಿಂದು. ಈಗ ನಾನೇನು ಅಂತ ನನ್ಗೇ ಗೊತ್ತಿಲ್ಲ. ನಮ್ಮದೂ ಲವ್ ಮ್ಯಾರೇಜು ಸಾರ್ ಅಷ್ಟೆ. ಅದಕ್ಕೆ ಎರಡೂ ಕಡೆಯವರ ಸಂಪ್ರದಾಯ ಬಿಟ್ಟು ಮದುವೆಯಾಗ್ತ ಇದ್ದಿನಿ' ಅಂತ ಹೇಳುತ್ತಲೇ ಮತ್ತೆ ಕಿರುನಗೆ ನಕ್ಕಳು. ಅವಳ ನಗೆಯನ್ನು ನೋಡಿ ಚಾರು ಭಾವಿಸಿದ. "ನಾನೇಕೆ ಹೀಗೆ ನಗುವುದಿಲ್ಲ?" ಆದರೆ, ಅವನಿಗೇನು ಗೊತ್ತು. ಇದೇ ರೇಖಾ ಪಿಂಟೋ ರೇಖಾ ಪ್ರಸನ್ನ ಆಗಿ ಕೆಲವು ವರ್ಷಗಳಲ್ಲಿ ಅಳುತ್ತಾ ಹೀಗೆ ನನ್ನತ್ರ ಮತ್ತೆ ಬಲಗಾಲಿಟ್ಟು ಮನೆಯೊಳಗೆ ಬರಲಿದ್ದಾಳೆಂದು ಅಥವಾ ಅವಳಿಗಾದರೂ ಅದು ಗೊತ್ತಿತ್ತೆ? ಅವನು ಯೋಚಿಸುತ್ತಾ ಇರುವಾಗಲೇ ರೇಖಾ ಪಿಂಟೋ 'ನಾನಿನ್ನು ಬರ್ತೀನಿ ಸಾರ್ ಖಂಡಿತಾ ನೀವು ಮತ್ತು ನಿಮ್ಮ ಮನೆಯವರು ನಮ್ಮ ಮದುವೆಗೆ ಬರ್ಬೇಕು' ಎನ್ನುತ್ತಲೇ ಎದ್ದು ನಂತಳು. 'ಯಾಕೋ ಈ ಹುಡುಗಿ ಗಂಡನ್ನ ಬಹಳ ಎಂದರೆ ಬಹಳ' ಹಚ್ಚಿಕೊಳ್ಳುತ್ತಾಳೆಂದು ಚಾರುಗೆ ಅನಿಸಿತು.

ಮನೆಯ ತುಂಬಾ ಪನ್ನೀರು ಹನಿಯನ್ನು ಚುಮುಕಿಸಿ ರೇಖಾ ಹೊರಟುಹೋದ ಮೇಲೆ ಚಾರು ಗಡಿಯಾರ ನೋಡಿದ. ಎಲ್ಲದಕ್ಕೂ ರೆಡಿಯಾಗುವ ಮುನ್ನ

ಮನಸ್ಸಿನಲ್ಲಿಯೇ ನಕ್ಷೆಯನ್ನು ಹಾಕತೊಡಗಿದ. ಯಾವ ರೀತಿಯಲ್ಲಿ ತಾನು ಮಾತಾಡಬೇಕು ಎಂಬುದರಲ್ಲಿ ಅವನಿಗೆ ಯಾವ ಸಂಶಯವೂ ಇದ್ದಿರಲಿಲ್ಲ. ಮುಂದೆ ನಡೆಯುವ ಯುದ್ಧ ಯಾವುದೇ ರೀತಿಯಲ್ಲಿಯೂ ದೈಹಿಕ ಹಿಂಸೆಗೆ ಸಂಬಂಧಿಸಿರಬಾರದು. ಎರಡನೆಯ ನಿಯಮವೆಂದರೆ ತನ್ನ ಮಾತುಗಳು ದೇವವ್ರತನ ಯಾವತ್ತೂ ಹಿಂಗದ ಲೈಂಗಿಕ ವಾಂಛೆಗೆ ಒಂದು ಮರ್ಮಾಘಾತವಾಗಬೇಕು ಮತ್ತು ಮೂರನೆಯದಾಗಿ ತನ್ನ ಮಾತುಗಳಿಂದ ಮೂಡಿ ಬರುವ ಮಾತುಗಳು ಸುಜಾತ ಎಂಬ ಹೆಂಗಸಿಗೆ ಜೀವನ ಪರ್ಯಂತವಾಗಿ ಗಂಡಸಿನ ಬಗೆಗೆ ಒಂದು ಅಸಹ್ಯ ಸೃಷ್ಟಿಸಿ ಅದರ ಮುಖಾಂತರ ದೇವವ್ರತನಿಗೆ ಹಾಸಿಗೆಯ ಸುಖವೇ ನರಕ ಸದೃಶವಾಗಬೇಕು. ಹಾಗೆಂದುಕೊಳ್ಳುತ್ತಲೇ ನೇರವಾಗಿ ಭೇಟಿಯಾಗಿದ್ದು ಸುಜಾತಳನ್ನು. "ಸುಜಾತ ಮೊನ್ನೆ ಸಂಜೆ ನಿಮ್ಮ ಗಂಡ ನನ್ನ ಮೈಥಿಲಿಯತ್ರ ಏನೇನೋ ಮಾತಾಡಿದನಂತೆ. ಅದನ್ನೇ ನಾನು ಮಾತಾಡಬಲ್ಲೆ ಆದ್ರೆ ನಿಮಗೆ ಗೊತ್ತಿರಲಿ" ಎಂದು ಹೇಳುತ್ತಲೇ ವಾಕ್ಯವನ್ನು ಉದ್ದೇಶಪೂರ್ವಕವಾಗಿ ನಿಲ್ಲಿಸಿದ.

*

ಸಣ್ಣಗೆ ಒಡಲು ಮುರಿದು ಎದ್ದ ಕನಸನ್ನು ಸಣ್ಣದಾಗಿ ಆಕಳಿಸುತ್ತಿರುವ ಹೊತ್ತಿನಲ್ಲಿಯೇ ಚಾರು ಅದನ್ನು ಹೊಸಕಿಹಾಕಿಬಿಡುತ್ತಾನೆಂಬ ನಿರೀಕ್ಷೆಯೂ ಮೈಥಿಲಿಗೆ ಇರಲಿಲ್ಲ. ದಿಢೀರನೆ ಈ ತರಹದ ಮುಖಾಮುಖಿಯನ್ನು ಮಾಡಿ ಮೈಥಿಲಿಯ ಕನಸನ್ನು ಛಿದ್ರಗೊಳಿಸಿದಾಗ ನಿಜವಾಗಿಯೂ ಅವಳು ಗಾಬರಿಬಿದ್ದಳು. ಇದೊಂದು ಅನಿರೀಕ್ಷಿತ ತಿರುವು. ಒಂದು ಕಡೆಯಿಂದ ಹನಿ ಹನಿಯಾಗಿ ಸವಿಮಾತುಗಳ ರುಚಿಯನ್ನು ತೋರಿಸಿದ ದೇವವ್ರತನೇ ಕಾಲಿಗೆ ಅಡ್ಡಬಿದ್ದ. ಅದೂ ಯಾವುದೇ ಮಾತುಗಳ ಪುನರ್ ಯುದ್ಧ ಶುರುಮಾಡದೆ. ದೇವವ್ರತನೆಂಬ ಸುಂದರಾತಿ ಸುಂದರಾಂಗನೆಂದು ಭ್ರಮಿಸಿಕೊಂಡವನ ಹಿಂದೆ ನಾನು ಹೋದರೆ ನನ್ನ ಕತೆಯು ಮುಗಿದೇ ಹೋಗುತ್ತದೆ. ಹಾಕಿದ ಪರದೆಯನ್ನು ಮತ್ತೆ ಮೇಲಕ್ಕೆ ಎತ್ತುವವರೇ ಇಲ್ಲ. ಬಾವಿಗೆ ಬಿದ್ದವಳನ್ನು ಎತ್ತುವುದಕ್ಕೆ ಯಾವ ಯಯಾತಿ ಬರುತ್ತಾನೆ? ಮತ್ತು ಯಾವತ್ತೂ ಮುದುಕನಾಗದೇ ಉಳಿಯುವ ಚಿರ ಮತ್ತು ಯೌವ್ವನಿಗ ಸಿಗುತ್ತಾನೆ ಎಂದು ಮೈಥಿಲಿಯು ಯೋಚಿಸುತ್ತಲೇ ಅಡುಗೆ ಮನೆಯಲ್ಲಿ ನಿರುದ್ದೇಶವಾಗಿ ಲೋಟವನ್ನು ತೊಳೆಯತೊಡಗಿದಳು. ಮತ್ತೆ ಮತ್ತೆ ವಿಮ್ ಹಚ್ಚಿ ಸ್ಟೀಲ್‌ನ ಲೋಟಗಳನ್ನು ಬೆಳಗತೊಡಗಿದಳು. ವಿಮ್ ಹಾಕಿದರೆ ಲೋಟಗಳು ಮಿರಿ ಮಿರಿ ಮಿಂಚುತ್ತವೆ. ಅದರಲ್ಲಿ ಮುಖ ಕಾಣಿಸುತ್ತವೆ ಎಂಬ ಭ್ರಮೆಯಲ್ಲಿ ಮೈಥಿಲಿಯು ಇದ್ದರೆ. ಇದೇ ಸಮಯಕ್ಕೆ ದೇವವ್ರತ ಕೆ.ಎಸ್.ಆರ್.ಟಿ.ಸಿ. ಬಸ್ಸ್ಯಾಂಡಿನಲ್ಲಿ ನಿಂತುಕೊಂಡು ಹೆಂಡತಿಗೆ ಬಹಳ ಅಕ್ಕರೆಯಿಂದ ಟಾಟಾ ಹೇಳುತ್ತಿದ್ದ. ಅದೇ ಹೊತ್ತಿಗೆ

ಚಾರು ಜಿನ್ ಬಾಟಲಿಯನ್ನೆತ್ತಿ ಒಂಚೂರು ಕುಡಿದು ಮಾಮೂಲಿನ ಯಾವ ಹೊಸ ಆವರಣಗಳಿಲ್ಲದ ಬದುಕನ್ನು ಕಲ್ಪಿಸಿಕೊಂಡೇ ಸ್ನಾನಕ್ಕೆ ಹೊರಟಿದ್ದು. ಚಾರು ಸ್ನಾನಕ್ಕೆ ಹೊರಟಾಗ ಅವನ ಮನಸ್ಸಿನಲ್ಲಿದ್ದುದೇ ಬೇರೆ. ಬಚ್ಚಲು ಮನೆಗೆ ಹೋದವನೇ ತಲೆಗೆ ತಣ್ಣೀರು ಸುರಿದುಕೊಂಡ. ಸೂತಕವನ್ನು ಕಳೆದುಕೊಂಡಂತೆ ಹೇಳಬೇಕಾದ ಮೊದಲ ಹಂತದ ಮಾತುಗಳನ್ನು ಮುಗಿಸಿದವನಿಗೆ ಒಂದು ಸಣ್ಣ ತೃಪ್ತಿಯಿತ್ತು. ಮನಸ್ಸಿನಲ್ಲಿ ಆಲೋಚಿಸಿದಂತೆ ಸರಿಯಾಗಿಯೇ ನಕ್ಷೆಯನ್ನು ತಯಾರಿಸಿದ್ದ ಮತ್ತು ನಕ್ಷೆಗನುಸಾರವಾಗಿಯೇ ಚೌಕಾಭಾರದ ಆಟಕ್ಕೆ ಬೇಕಾದ ಗೆರೆಯನ್ನು ಎಳೆದಿಟ್ಟುಬಿಟ್ಟಿದ್ದ. ಇನ್ನು ಉಳಿದದ್ದು ಹುಲಿ ಕರು ಆಟ ಮಾತ್ರ. ಈ ಹುಲಿ-ಕರು ಆಟದಲ್ಲಿ ಯಾರು ಗೆಲ್ಲುತ್ತಾರೆ ಮತ್ತು ಯಾರು ಸೋಲುತ್ತಾರೆ ಎಂಬುದು ಮುಖ್ಯವಲ್ಲ. ಗೆಲ್ಲುವುದಕ್ಕೆ ಬೇಕಾದಷ್ಟು ದೊಡ್ಡ ಪಡೆ ತನ್ನ ಹತ್ತಿರವಿರಲಿಲ್ಲ ಎಂಬುದು ಮೊದಲೇ ಅರಿವಿದ್ದ ಚಾರು ತಲೆಗೆ ಹೊಯ್ದುಕೊಂಡ ನೀರು ಕಾಲಿಗೆ ಬೀಳುವುದನ್ನೇ ನೋಡಿದ. ಬಚ್ಚಲು ಮನೆಯಲ್ಲಿ ಚಕ್ಕಳಮಕ್ಕಳ ಹಾಕಿ ಕೂತುಕೊಂಡವನು ಸುಮ್ಮನೇ ನೀರು ತಲೆಗೆ ಬೀಳುವಂತೆ ನಲ್ಲಿಗೆ ತಲೆಯಾನಿಸಿದ. ಆಲೋಚನೆಗಳು ಮುಂದುವರಿದವು. "ಅದೇ ಸರಿಯಾದ್ದು, ಚೌಕಾಭಾರದ ಆಟದಲ್ಲಿ ಮೈಥಿಲಿಯ ಒಂದು ಸಣ್ಣ ಸಹಾಯವಿದ್ದರೆ ಗೆಲ್ಲಬಹುದಿತ್ತು." ಆದರೆ, ದೇವವ್ರತ ಕಾಲಿಗೆ ಬಿದ್ದಾಗಲೂ ಮೌನದ ಮೊರೆ ಹೊಕ್ಕ ಮೈಥಿಲಿಯಲ್ಲಿ ಬೇರಾವುದೋ ಲೆಕ್ಕಾಚಾರ ನಡೆಯುತ್ತಿದೆ ಎಂಬುದು ತಿಳಿದ ಮೇಲೂ ನನಗೆ ಬೇಕಾದ ಪಡೆಯೊಂದನ್ನು ಸಿದ್ಧಗೊಳಿಸದೇ ಹೋದರೆ ಆಟ ಮುಂದುವರಿಯುವುದು ಕಷ್ಟ, ಸೋಲು ನನ್ನ ನೆತ್ತಿಯನ್ನೇ ಕುಕ್ಕುತ್ತದೆ. ಮೈಥಿಲಿ ಮತ್ತು ದೇವವ್ರತರ ನಡುವಣ ಸಂಬಂಧ ಸರಳವಾದ ಸತ್ಯವಲ್ಲ. ಹತ್ತುಹಲವು ಸೋಂಕುಗಳು ಇದಕ್ಕೆ ತಗುಲಿಕೊಂಡಿದೆ. ಆಟಕ್ಕೆ ಕೂತವನು ಎದ್ದುನಿಂತು ಸೊಂಟದ ನೋವು ಸರಿ ಮಾಡಿಕೊಳ್ಳುವಂತಿಲ್ಲ. ಕೈ ಬೆರಳುಗಳ ಲಟಿಕೆ ಮುರಿಯುವಂತಿಲ್ಲ. ಒಂದು ಕ್ಷಣ ಸ್ವಲ್ಪ ದುಬಾರಿಯಾದ ಆಟವನ್ನೇ ಆಡಿ ಬಿಟ್ಟೆವೇನೋ ಎಂದು ಚಾರುಗೆ ಅನಿಸತೊಡಗಿತು. ಆಟವನ್ನು ಮಧ್ಯದಲ್ಲಿಯೇ ಬಿಟ್ಟು ಒಂಚೂರು ಆಕಳಿಸುವಂಥ ಸನ್ನಿವೇಶವೇ ಬರಲಿಲ್ಲವಲ್ಲ ಎಂದು ಖೇದಗೊಂಡ ಚಾರು ಮತ್ತೆ ಗರಿಕೆಯ ಮೂಲ ಬೇರನ್ನು ಕಿತ್ತುಹಾಕದೇ ಹೋದರೆ ಪುನಃ ಚಿಗುರುವುದರಲ್ಲಿ ಅನುಮಾನವೇ ಇಲ್ಲ, ಗರಿಕೆಯ ಬೇರನ್ನು ಮೂಲ ಸಮೇತವಾಗಿ ಕಿತ್ತು ಹಾಕಬೇಕೆಂದಿದ್ದರೆ ಏನು ಮಾಡಬೇಕೆಂದು ತಣ್ಣೀರಲ್ಲಿ ತಲೆ ನೆನೆಸಿಕೊಳ್ಳುತ್ತಲೇ ಯೋಚಿಸಿದ. ಎದುರು ಪಕ್ಷದಲ್ಲಿರುವ ದೇವವ್ರತ ಮತ್ತು ಮೈಥಿಲಿಯರು-ಯಾವಾಗ ಏನು ಮಾಡುತ್ತಾರೆಂಬುದು ಸ್ಪಷ್ಟವಾಗಿ ತಿಳಿಯದ್ದರಿಂದ ಈ ಕಷ್ಟ. ಯಾಕೋ ಬಚ್ಚಲ ಮನೆಯಲ್ಲಿ ನಿರುಮ್ಮಳವಾಗಿ ಸ್ನಾನ ಮಾಡುವಾತನಿಗೆ ನೆನಪಿಗೆ ಬಂದ ಸಂಗತಿಗಳೆಂದರೆ ಕೋಲಾಹಲದ ಜಾತ್ರೆಯಲ್ಲಿ ಸುಜಾತ ಆಟಕ್ಕುಂಟು

ಲೆಕ್ಕಕ್ಕಿಲ್ಲ; ಲೆಕ್ಕದಲ್ಲಿ ಇರುವವರಿಬ್ಬರೇ; ಮೈಥಿಲಿ ಮತ್ತು ದೇವವ್ರತ. ಛಟೀಲನೆ ಮಿಂಚು ಹೊಡೆದಂತೆ ನೆನಪಿಗೆ ಬಂದ ಸೂತ್ರವೆಂದರೆ,

"ನೀರಿನಲ್ಲಿ ಮುಳುಗಿದವನನ್ನು,
ಬೆಟ್ಟದ ಮೇಲೆ ಏರಿ ಕೂತವನನ್ನು,
ಹಲ್ಲು ಕಚ್ಚಿದವನನ್ನು,
ಮರವನ್ನೇರಿದವನನ್ನು,
ಹೆಂಗೆಳೆಯರ ಸೆರಗಿನಲ್ಲಿ ಮುಖ ಮರೆಸಿಕೊಂಡವನನ್ನು,
ನಡುರಾತ್ರಿ ಮಲಗಿದವನನ್ನು,
ಊಟ ಮಾಡುತ್ತಿರುವವನನ್ನು,
ಪೂಜೆಗೆ ಕೂತವನನ್ನು,
ಮೈಥುನದಲ್ಲಿ ನಿರತನಾದವನನ್ನು,
ನಪುಂಸಕನನ್ನು ಏಕಾಏಕಿಯಾಗಿ ಕೊಲ್ಲಬಾರದು,

ಹಾಗಿದ್ದರೆ ಯುದ್ಧ ಯಾಕೆ ಜೊತೆಗೆ ಮಾಡಬೇಕು? ಸಮಬಲರೊಡನೆ, ಎದುರಿಸುವ ತಾಕತ್ತು ಇರುವವನೊಡನೆ, ಶಸ್ತ್ರ ಸನ್ನದ್ಧನಾಗಿರುವವನೊಡನೆ, ಮೈಮೇಲೆ ಹಾಯಲು ಬಂದವನೊಡನೆ, ಯುದ್ಧದ ಕಹಳೆ ಊದಿದವನೊಡನೆ, ಸಮವಯಸ್ಕನೊಂದಿಗೆ, ಮತ್ತು ಗಂಡಸಿನೊಡನೆ."

ನೀರಿನ ನಲ್ಲಿಯಲ್ಲಿ ತಲೆಯೊಡ್ಡಿ ಕೂತ ಚಾರು ಈ ಮಾತುಗಳನ್ನು ಹೇಳಿಕೊಟ್ಟ ಅಪ್ಪನಿಗೆ ಮನಸ್ಸಿನಲ್ಲಿಯೇ ಕೃತಜ್ಞತೆಯನ್ನು ಸಲ್ಲಿಸಿದ. ಇದು ಅವನಿಗೆ ಕಲ್ಪಿಸಿದ ಸೂತ್ರಗಳು ಹೌದು, ಅಪ್ಪ ಈ ಸೂತ್ರವನ್ನು ಹೇಳಿದ್ದು ನನಗೆ ಮಹಾಭಾರತದ ಕತೆಯನ್ನು ಹೇಳುವಾಗಲೇ. ಆದರೆ, ಆ ಕತೆಯ ಈಗೇಕೆ ನೆನಪಿಗೆ ಬರುತ್ತಿದೆ? ದೇವವ್ರತ ಖಂಡಿತವಾಗಿಯು ಯುದ್ಧದ ವಿಷಯದಲ್ಲಿ ಅನರ್ಹ. ಮೈಥಿಲಿಯ ದೃಷ್ಟಿಯಲ್ಲಿ ದೇವವ್ರತ ಗಂಡಸು, ತಾಕತ್ತು ಇರುವವನು, ರಾತ್ರಿಯಲ್ಲಿ ನಿದ್ದೆ ಮಾಡದೆಯೇ ಸುಖ ಕೊಡಬಲ್ಲ, ನೆಮ್ಮದಿಯನ್ನು ತಂದುಕೊಡಬಲ್ಲ ಮಹಾನ್ ಸುಖಿ. ಆದರೆ, ಅವೆಲ್ಲವೂ ಬಚ್ಚಲು ಮನೆಯ ಸೋಪಿನ ನೊರೆಯೊಂದಿಗೆ ಕೊಚ್ಚಿಕೊಂಡು ಹೋಗುತ್ತಿರುವುದನ್ನು ಕಂಡು ಚಾರುಗೆ ಜೋರಾಗಿ ನಗಾಡಬೇಕೆಂದು ಅನಿಸಿತು. ಯುದ್ಧಕ್ಕೆ, ಸಂಗಕ್ಕೆ ಸರಿಯಾಗದವರ ಜೊತೆಗೆ ತಾನೀಗ ಸೆಣಸಾಡಬೇಕಾಗಿ ಬಂತಲ್ಲ?

ಅಮ್ಮನ ಹೆಗಲಲ್ಲಿ ತಲೆಯಿಟ್ಟು ಅತ್ತುಬಿಟ್ಟರೆ ಸಾಕು

– ೧೩ –

ಚಾರು ಯಾಕೋ ಯೋಚನೆಯು ಸರಿ ಹೋಗುತ್ತಿಲ್ಲವೆಂದು ಭಾವಿಸಿಕೊಳ್ಳುತ್ತಲೇ ಸ್ನಾನ ಮಾಡಿದ್ದು ಸಾಕೆನ್ನಿಸಿ ಮೈಯೊರೆಸಿಕೊಳ್ಳತೊಡಗಿದ. ಅವನು ಬಚ್ಚಲು ಮನೆಯಲ್ಲಿ ಮೈಯೊರೆಸಿ ಕೊಳ್ಳುತ್ತಿರುವಾಗಲೆ ಇಬ್ಬಂದಿತನಕ್ಕೆ ಸಿಲುಕಿಕೊಂಡ ಮೈಥಿಲಿಯ ಕೈಯಿಂದ ಪಾತ್ರೆಯು ಜಾರಿ ಬಿದ್ದು ಕಣಕಣ ಸದ್ದು ಮಾಡಿತು. ಸದ್ದೆಂದರೆ ಅನಗತ್ಯ ಕಿರಿಕಿರಿ ಎಂದು ಭಾವಿಸುವ ಚಾರು ಬಚ್ಚಲು ಮನೆಯಿಂದಲೇ ಏನದು? ಎಂದು ಕೇಳಿದ. ಚಾರು ಕೇಳಿದ ಮಾತಿಗೆ ಮೈಥಿಲಿ ಉತ್ತರ ಕೊಡುವ ಗೋಜಿಗೇ ಹೋಗಲಿಲ್ಲ.

ಅದೇ ಗಳಿಗೆಯಲ್ಲಿಯೇ ದೇವವ್ರತ ಸುಜಾತ ಕೂತ ಬಸ್ಸು ಹೊರಟದ್ದು ನೋಡಿ, ಆ ರಾತ್ರಿಯ ತಂಪು ಹೊತ್ತಿನಲ್ಲಿ ಒಂದು ಸಣ್ಣ ಖುಶಿಯೊಂದಿಗೆ ಬೈಕ್ ಸ್ಟಾರ್ಟ್ ಮಾಡಿದ. ಯಾಕೆಂದರೆ, ನಾಲ್ಕಾರು ದಿನ ಹೆಂಡತಿ ತವರು ಮನೆಗೆ ಹೋದರೆ ಹೋಟೇಲಿನ ಊಟ ಮಾಡಬಹುದು ಮತ್ತು ಅದರ ಮುಖಾಂತರ ಸ್ವೇಚ್ಛೆಯಾಗಿ ಇರಬಹುದು.

ಚಾರು ಇಲ್ಲದ ವೇಳೆ ಮತ್ತೊಮ್ಮೆ ಮೈಥಿಲಿಯಲ್ಲಿ ಮಾತಾಡಬೇಕು! ಈ ನಿರ್ಧಾರ ದೇವವ್ರತನಲ್ಲಿ ಒಡಮೂಡಿದ್ದೇ ಸರಿ – ತಕ್ಷಣವೇ ಸಣ್ಣನೆಯ ಸಿಳ್ಳೆಯೊಂದು ಅವನ ಬಾಯಿಂದ ಹೊರಟಿತು.

ಸರಿಯಾಗಿ ಹನ್ನೆರಡು ಗಂಟೆಗೆ ಚಾರುಗೆ ಎಚ್ಚರವಾಯಿತು. ಅನೇಕ ದಿನಗಳಿಂದ ಕುಡಿದು ಮಲಗಿದರೆ ಬೆಳ್ಳಂಬೆಳಿಗ್ಗೆ ಎಚ್ಚರಗೊಳ್ಳುವ ಚಾರು ಆ ದಿನ ರಾತ್ರಿ ಯಾಕೋ ಎಚ್ಚರಗೊಂಡ. ಕುಡಿದ ಜಿನ್‌ನ ಅಮಲು ಇಳಿಯುವುದೆಷ್ಟು ಹೊತ್ತು? ಮೈಥಿಲಿಯ ಸಣ್ಣ ಗೊರಕೆಯ ಸದ್ದು ಕೇಳಿ, ಬೆಡ್‌ರೂಮಿನ ಲೈಟ್ ಹಾಕುವುದು ಬೇಡವೆಂದೇ, ಮೆಲ್ಲಗೆ ಹಾಲ್‌ನೊಳಗೆ ಬಂದ. ಅದೂ ಕತ್ತಲಲ್ಲಿಯೇ ಗೋಡೆಯನ್ನು ತಡವಿಕೊಂಡು ಹಾಲ್‌ನ ಲೈಟ್ ಹಾಕಿದ. ವಿಪರೀತ ಚಿಂತೆಗಳು ತಲೆ ತುಂಬಾ. ಕೊಬ್ಬರಿ ಎಣ್ಣೆ ತಲೆಗೆ ಮುತ್ತಿದಂತೆ. ಬಾಯಿ ಒಣಗುತ್ತಿದೆ. ಯಾಕೆ ಹೀಗಾಯಿತು? ಏನಾಯಿತು? ಮೈಥಿಲಿಯು ದೇವವ್ರತನಿಗೆ ಒಲಿದದ್ದು ಯಾಕೆ? ನಾನು ತಪ್ಪಿರುವುದಾದರೂ ಎಲ್ಲಿ? ಇದು ಸದ್ಯಕ್ಕೆ ಮುಗಿಯುವ ಪುರಾಣವಲ್ಲ ಎಂದೆನ್ನಿಸಿತು. ಚಾರು ಬ್ಯಾಗಿಗೆ ಕೈ ಹಾಕಿದ. ಸದ್ಯ ಮತ್ತೊಂದು ಬಾಟಲ್ ಜಿನ್ ಇದೆ. ಮಧ್ಯರಾತ್ರಿಯಾದರೇನು? ನಟ್ಟನಡು ಹಗಲಾದರೇನು? ಕುಡಿಯಬೇಕು ಎಂದರೆ ಕುಡಿಯಲೇಬೇಕು. ಅದು ಮರುಭೂಮಿಯಲ್ಲಿ ನಡೆಯುವವನಿಗೆ, ಬಾಯಾರಿದ ಹೊತ್ತಿನಲ್ಲಿ ತೃಷೆಯನ್ನು ಹಿಂಗಿಸುವ ನೀರಿನ ಹಾಗೆ. ಕುಡಿಯಬೇಕು ಎಂದೆನ್ನಿಸಿದಾಗ ಕುಡಿಯಬೇಕು ಮತ್ತು ಸಿಗರೇಟು ಸೇದಬೇಕೆಂದು ಅನಿಸಿದಾಗ ಸಿಗರೇಟು ಸೇದಬೇಕು. ವೈಯಕ್ತಿಕವಾಗಿ ಚಾರುಗೆ ಅವನದು ಅಂತ ಉಳಿದುದು ಅವೆರಡು ಮಾತ್ರ. ಚಾರು ಕೂಡಲೇ ಯಾವುದೇ ನಿರ್ಧಾರಕ್ಕೆ ಬರುವ ಮೊದಲು ಈ ಎರಡು – ಕುಡಿತ ಮತ್ತು ಸಿಗರೇಟು – ಸದಾ ನನ್ನ ಜೊತೆಗೆ ಆತ್ಮೀಯ ಸ್ನೇಹಿತರಂತೆ ಇರಲಿ ಎಂದು ಭಾವಿಸಿದ. ಕುಡಿತ ಮತ್ತು ಸಿಗರೇಟು ಎರಡೂ ನನಗೆ ಯಾವತ್ತೂ ವಿಶ್ವಾಸ ದ್ರೋಹದ ಕೆಲಸವನ್ನು ಮಾಡುವುದಿಲ್ಲ ಎಂದು ಚಾರು ತಿಳಿದುಕೊಂಡ ಈ ಸಂಗತಿಗಳೇ ನಾಕಾರು ವರ್ಷಗಳ ಮೇಲೆ ಬದಲಾಗಬೇಕಾಗಿ ಬಂದವು. ಯಾಕೆಂದರೆ ಕುಡಿತ ಮತ್ತು ಸಿಗರೇಟು ಎರಡೂ ವಿಶ್ವಾಸ ದ್ರೋಹವನ್ನೇ ಮಾಡಿದ್ದವು – ಅವನ ಆರೋಗ್ಯದ ಮೇಲೆ! ರೇಖಾ ಪಿಂಟೋ ಬಂದು ಅವನ ಈ ಎರಡೂ ಸಂಗತಿಗಳನ್ನು ದೂರಕ್ಕೆ ತಳ್ಳಿದ್ದಳು ಬರಿಯ ಮಾತಿನಲ್ಲಿಯೇ. ಆ ಗಳಿಗೆಯಲ್ಲಿ ಚಾರುಗೆ ಅದೇನು ಗೊತ್ತು – ಹೀಗೊಂದು ನಡೆಯಲಿದೆ ಅಂತ? ಅದಕ್ಕಾಗಿಯೇ ಬಾಟಲಿಯ ಬಿರಡೆಯನ್ನು ತೆರೆದ. ಗುಟುಕು ಗುಟುಕಾಗಿ ಎರಡು ಬಾರಿ ಜಿನ್ ಕುಡಿದ ಮೇಲೆ ಮನಸ್ಸಿಗೆ ಹಾಯೆನಿಸಿತು. ಮತ್ತೆ ಯೋಚನೆಯ ನೆಯ್ಗೆಯನ್ನು ಪ್ರಾರಂಭಿಸಿದ. ಮನೆಯನ್ನು ಶಿಫ್ಟ್ ಮಾಡುವಾಗ ಆ ದಾಸಯ್ಯ ಎಲ್ಲಿದ್ದನೋ ಏನೋ? ತಕ್ಷಣವೇ ಬಂದವನು ಅದೇನೋ ಶಕುನ ಹೇಳಿಹೋದ. ಆ ಶಕುನ ಸರಿಯಾಯಿತಲ್ಲಾ? ಮನೆಯನ್ನು ಬದಲಾಯಿಸಿದ ಗಳಿಗೆಯು

ಸರಿಯಾಯಿತೋ ಇಲ್ಲವೋ? ಮುಹೂರ್ತ ಕಾಯುವ ಮನಸ್ಸು ನನ್ನದಾಗಲೀ, ಮೈಥಿಲಿಯದ್ದಾಗಲೀ ಆಗಿರಲಿಲ್ಲ. ಖಂಡಿತಕ್ಕೂ ಮೈಥಿಲಿಯ ಮನಸ್ಸಿನ ಮುಹೂರ್ತವೇ ಸರಿಯಾಗಲಿಲ್ಲ. ಯಾಕೆ ನನ್ನ ಮೇಲೆ ಈ ರೀತಿಯ ಅಸಹನೆಯು ಮೈಥಿಲಿಗೆ ಉಂಟಾಯಿತೋ – ಅದು ಇನ್ನೂ ತಿಳಿಯುತ್ತಿಲ್ಲ. ಜಿನ್ ಕುಡಿಯುತ್ತಾ ಕೂತವನಿಗೆ ಹಳೆಯ ನೆನಪುಗಳೆಲ್ಲಾ ಬೇಕಾದ ಹಾಗೆ ಪುಟ ಮಗುಚುತ್ತಾ ಬಂತು – ಹಾರಿ ಬರುತ್ತಿರುವ ಹಕ್ಕಿಗಳಂತೆ. ಜೀವದಾಯಕವಾದ ಶಕ್ತಿಯನ್ನು ನನಗೆ ಒದಗಿಸಿಕೊಟ್ಟಿದ್ದು ನಿಜವಾಗಿಯೂ ನನ್ನಪ್ಪ – ಗಣಪತಿ. ಆದರೆ, ನನಗೆ ಇಪ್ಪತ್ತು ವರ್ಷವಾಗುವಾಗಲೇ ಅಚಾನಕ್ ಅಪ್ಪ ತೀರಿ ಹೋದುದಕ್ಕೆ ಯಾವ ಕಾರಣವೂ ಇರಲಿಲ್ಲ. ಅಪ್ಪ ಒಂದಷ್ಟು ವರ್ಷ ಬದುಕಿ ಉಳಿಯಬೇಕಿತ್ತು. ಮೈಥಿಲಿಯ ಹಿಂದಿನ ಒಳಗುಟ್ಟು ಯಾವುದಿತ್ತು? ದೇವವ್ರತನಲ್ಲಿ ಯಾವ ರೀತಿ ಸೆಳೆತ ಉದ್ಭವವಾಯಿತು. ಗೊತ್ತಾಗದೇ ಚಾರು ತಳಮಳಿಸಿದ ಮತ್ತು ಮಧ್ಯರಾತ್ರಿಯಲ್ಲಿ ಎದ್ದು ಕೂತು ತೀವ್ರವಾಗಿ ಅವನು ಯೋಚಿಸುತ್ತಿರುವ ಗಳಿಗೆಯಲ್ಲಿಯೇ ಮೈಥಿಲಿಯು ಎಚ್ಚೆತ್ತಳು – ಎದ್ದು ಬಂದವಳೇ "ಯಾಕ್ರೀ, ಇನ್ನೂ ನಿದ್ದೆ ಮಾಡಿಲ್ವಾ? ಸುಮ್ಮನೇ ಬಂದು ಮಲಗಿ" ಎಂದು ಅವಳಾಗಿಯೇ ಲೈಟ್ ಆರಿಸಲು ಹೊರಟಳು. ಆದರೆ, ಚಾರು "ಸುಮ್ಮನೇ ಕಿರಿಕಿರಿ ಮಾಡಬೇಡ. ತೆಪ್ಪಗೆ ಹೋಗಿ ಮಲಗು, ನನಗೀಗ ನಿದ್ದೆ ಬರ್ತಾ ಇಲ್ಲಾ, ನಿದ್ದೆ ಬಂದಾಗ ಬಂದುನಿದ್ದೆ ಮಾಡ್ತೇನೆ. ಅನಗತ್ಯ ಒತ್ತಾಯಿಸಬೇಡ" ಎಂದ ಚಾರುವಿನ ಮಾತಿನಲ್ಲಿ ಹಣಕಿದ ಅಸಹನೆ ಸಾಧಾರಣ ರೂಪದ್ದಾಗಿರಲಿಲ್ಲ ಮತ್ತು ಧ್ವನಿಯ ಏರಿಳಿತ ಮತ್ತು ಮಾತನ್ನು ಬಳಸಿಕೊಂಡ ಕ್ರಮದಲ್ಲಿ ಸುಸೂತ್ರವಾದ ಯಾವ ಸಾಂಗತ್ಯವು ಇದ್ದ ಹಾಗೆ ಅನಿಸಲಿಲ್ಲ. ಇನ್ನೊಂದು ಮಾತಾಡಿದರೆ ಚಾರು ಬೇರೊಂದು ರೀತಿಯ ವ್ಯಂಗ್ಯವನ್ನು ಬಳಸಬಹುದು, ಇಲ್ಲವೇ ಸೀಳು ನಾಯಿಯಂತೆ ನಾಲಿಗೆಯನ್ನು ಹೊರ ಚಾಚಬಹುದು. "ಬೇಕಿದ್ದರೆ ಬಂದು ನಿದ್ದೆ ಮಾಡಿ, ಇಲ್ಲಾ, ಬೆಳಗಿನ ತನಕ ಜಪ ಮಾಡ್ತಾ ಕುಡಿಯುತ್ತಾ ಕೂತಿರ್ರಿ, ನಂಗೇನಾಗಬೇಕಾಗಿದೆ. ನಂಗಂತೂ ನಿದ್ದೆ ಬರುತ್ತೆ. ನಿದ್ದೆ ಮಾಡ್ತೀನಿ," ಅಂದ ಮೈಥಿಲಿಯು ಮತ್ತೆ ಬೆಡ್‌ರೂಮಿಗೆ ವಾಪಾಸಾದಳು. ಮನಸ್ಸಿನ ಆಳದಲ್ಲಿ ಹುಟ್ಟಿಕೊಂಡಿರುವ ಅನೇಕ ಅನುಮಾನಗಳು ಚಾರುವಿನಲ್ಲಿ ಹೆಡೆಯೆತ್ತಲು ಪ್ರಾರಂಭಿಸಿತು. ಒಂದೇ ಮಂಚ, ಒಂದೇ ಹಾಸಿಗೆ; ಒಂದೇ ಕೊಠಡಿಯೊಳಗಣ ಗಂಡ–ಹೆಂಡಿರ ನಡುವೆ ಒಂದು ದೊಡ್ಡ ಗೋಡೆಯನ್ನು ಒಡೆಯಲು ಅಷ್ಟೊಂದು ಸುಲಭವೆ? ಚಾರು ಕೈ ಮತ್ತೊಮ್ಮೆ ಬಾಟಲಿಯನ್ನು ಹಿಡಿದುಕೊಂಡಿತು. ಇತ್ತ ಬಸ್ಸಲ್ಲಿ ಹೊರಟ ಸುಜಾತ ಬಸ್ಸಿನ ಕಿಟಕಿಗೆ ಒರಗಿ ಕೂತವಳು ಗಾಬರಿಯಾದವಳಂತೆ ಬೆವರ ತೊಡಗಿದಳು ಮತ್ತು ಮುಚ್ಚಿದ್ದ ಬಸ್ಸಿನ ಕಿಟಕಿಯನ್ನು ತೆರೆದಳು. ಹಾಗಾದರೂ ನಿದ್ದೆ ಬರಬಹುದೇನೋ ಎಂದು ಯೋಚಿಸುತ್ತಾ ಅವಳ ಯೋಚನೆಯು ಕಡಿದು ಬಿದ್ದದ್ದು ನಟ್ಟನಡು ರಾತ್ರಿಯಲ್ಲಿ ಡ್ರೈವರ್ ಹಾಕಿದ ಬ್ರೇಕಿನಿಂದ ಮುಗ್ಗರಿಸಿ ಬೀಳುವಂಥ ಪರಿಸ್ಥಿತಿ

ಉದ್ಭವಿಸಿದಾಗ. ಎದುರು ಸೀಟಿನ ಕಂಬಿಯು ಸಣ್ಣಗೆ ಸುಜಾತಗೆ ಹೊಡೆಯಿತೋ ಅಥವಾ ಸುಜಾತಳೆ ಕಂಬಿಗೆ ಡಿಕ್ಕಿ ಹೊಡೆದಳೋ – ಅದರ ಪರಿಣಾಮ ಮಾತ್ರ ಹಣೆಗೊಂದು ಪುಟ್ಟನೆಯ ನೋವು. ದೇಹ ಮತ್ತು ಮನಸ್ಸು ಎರಡೂ ರೀತಿಯ ನೋವುಗಳನ್ನು ಅನುಭವಿಸುತ್ತಾ 'ಒಮ್ಮೆ ಊರು ಬಂದರೆ ಸಾಕಪ್ಪಾ ಮತ್ತು ಅಮ್ಮನ ಹೆಗಲಲ್ಲಿ ತಲೆಯಿಟ್ಟು ಅತ್ತುಬಿಟ್ಟರೆ ಸಾಕು' ಎಂದು ಯೋಚಿಸಿದಳು, 'ದೇವವ್ರತ ಹಾಳಾಗಿ ಹೋಗಲಿ, ಅಮ್ಮನ ಮಡಿಲಲ್ಲಿ ತಲೆಯಿಟ್ಟು ಮಲಗಿದರೆ, ಅಮ್ಮ ನನ್ನ ತಲೆಯನ್ನು ಹದವಾಗಿ ನೇವರಿಸಿದರೆ ಅದಕ್ಕಿಂತ ದೊಡ್ಡ ಸಮಾಧಾನವಾದರೂ ಏನಿದೆ?' ಎಂದು ಭಾವಿಸಿಕೊಂಡಳು.

*

ಶಕುನದ ಹಕ್ಕಿಯಾದರೂ ಅಪರೂಪಕ್ಕೆ ಒಮ್ಮೊಮ್ಮೆಯಾದರೂ ಒಂದು ಶುಭ ಶಕುನವನ್ನು ಹೇಳಬಹುದು. ಮುಂಜಾವದ ಕೋಳಿ ಕೂಗುವುದಕ್ಕಿಂತ ಎರಡು ಗಳಿಗೆಯಲ್ಲಿ ಮುಂಚೆಯೇ ಅಲೆಮಾರಿಯಾದ ಸಿದ್ಧರವನು ಬಂದು ಮನೆಯ ಬಾಗಿಲಲ್ಲಿ ಕಣಿಯನ್ನು ದೊಡ್ಡದಾಗಿ ಹೇಳಿ ಹೋಗಬಹುದು ಮತ್ತು ಬೆಳಗಿನ ಪೂಜೆಯಲ್ಲಿ ದೇವರ ಫೋಟೋದ ಮೇಲೆ ಇಟ್ಟ ದೇವರ ಮುಡಿಯ ಹೂವು ಬಲಗಡೆಯಿಂದಲೇ ಬೀಳಬಹುದು. ಆದರೂ, ಅನಂತರದಲ್ಲಿ ನಡೆಯಬಹುದಾದ ಯಾವ ಅಬದ್ಧ ಕರ್ಮಗಳಿಗೆ ಈ ಶಕುನದ ಹಕ್ಕಿ; ಮಸಣದ ಸಿದ್ಧ; ದೇವರ ಮೇಲೆ ಇಟ್ಟ ಹೂ ಯಾವ ಕಾರಣದಿಂದಲೂ ಜವಾಬ್ದಾರಿಯನ್ನು ಹೊರುವುದು ಅಸಾಧ್ಯ. ಯಾವುದನ್ನು ಚಾರು ಅಪಶಕುನದ ಗಳಿಗೆಯೆಂದು ಭಾವಿಸಿದನೋ ಅದೇ ಹೊತ್ತಿನಲ್ಲಿ ಮೈಥಿಲಿಯ ಶುಭ ಸೂಚನೆಯಂತೆ ಕಣ್ಣು ಅದುರಿತು, ಮುಂಜಾವದಲ್ಲಿ ಗೊರಕೆ ಹೊಡೆಯುತ್ತಿದ್ದ ಚಾರುವಿಗೆ ಗೊತ್ತಾಗದ ರೀತಿಯಲ್ಲಿ ಅಲೆಮಾರಿ ಸಿದ್ಧ ಮೈಮೇಲೆ ಬೂದಿ ಹಚ್ಚಿಕೊಂಡು, ಹುಬ್ಬಿನ ನಡುವೆ ಕೆಂಪು ಬೊಟ್ಟಿಟ್ಟುಕೊಂಡು, ಕಪ್ಪು ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು, ಕಪ್ಪು ಬಟ್ಟೆಯುಟ್ಟುಕೊಂಡು ಮನೆಯ ಹತ್ತಿರ ಬಂದವನು 'ಮಂಗಳವಾಗುತ್ತೈತೆ' ಎನ್ನುತ್ತಲೇ ಮನೆಗೊಂದು ಬಾರಿ ನೋಡಿ ಹೊರಟು ಹೋಗಿದ್ದ. ಬೆಳಗಿನಿಂದ ಸಂಜೆಯವರೆಗೆ ಕಾದರೂ ಯಾವ ಶುಭ ಮಂಗಳದ ಸೂಚನೆಯಿರಲಿಲ್ಲ. ಯಾವಾಗ ಚಾರು, ನಾರಾಯಣ ನಂಬಿಯಾರನ ಜೊತೆ ಮಾತಾಡಿದ್ದನೋ ಆ ಕ್ಷಣದಲ್ಲಿಯೇ ಅವಳಿಗೆ ಶುಭ ಶಕುನದಂತೆ ಕಣ್ಣು ಅದುರತೊಡಗಿತ್ತು ಮತ್ತು ಬಲಭುಜ ಕಿಂಚಿತ್ತಾಗಿ ನಡೆದದ್ದು– ಅದೂ ಎರಡು ಕ್ಷಣ ಮಾತ್ರ, ಶುಭವಾದುದು ತನಗೆ ಯಾವುದು ಜರುಗಲಿದೆ? ಶುಭ ನುಡಿಯೋ ಶಕುನದ ಹಕ್ಕಿಯು ಬಂದು ಕಿವಿಯಲ್ಲಿ ಶುಭ ಹೇಳಿಲ್ಲ. ಕಣ್ಣರೆಪ್ಪೆಯು ಪಟಪಟನೆ ಪುಟ್ಟ

ಹಕ್ಕಿಯಂತೆ ಹೊಡೆದುಕೊಂಡದ್ದು ಮತ್ತು ಬಲಭುಜವೊಂದು ಕ್ಷಣ ಕಂಪಿಸಿದ್ದು ಶುಭವಾರ್ತೆಯೊಂದನ್ನು ತರುವ ಕ್ಷಣವೆಂದು ಮೈಥಿಲಿಯು ಭಾವಿಸಿಕೊಂಡಳು.

ಇದಾಗಬೇಕಾಗಿದ್ದರೆ ತಾನು ದೇವವ್ರತನೊಂದಿಗೆ ಮಾತಾಡಲೇಬೇಕಿತ್ತು ಮತ್ತು ಖಚಿತವಾಗಿ ಅವನ ನಿರ್ಧಾರವೇನೆಂದು ತಿಳಿಯಬೇಕಿತ್ತು. ಸ್ವರ್ಗಕ್ಕೆ ಹೋಗಲು ತಯಾರಾಗಿ ನಿಂತಿದ್ದ ತ್ರಿಶಂಕು ನೂರನೆಯ ಯಾಗವನ್ನು ಪೂರೈಸಿದವನು; ಸ್ವರ್ಗಕ್ಕೆ ಅವನು ಬರಬೇಡವೆಂಬ ಹೊಟ್ಟೆಕಿಚ್ಚಿನಿಂದ ದೇವೇಂದ್ರನು ಹೊಡೆದ ಹೊಡೆತವನ್ನು ಅನುಭವಿಸಿ ತಲೆಕೆಳಗೆ ನೇತುಹಾಕಿಕೊಳ್ಳಬೇಕಾದಂಥ ಪರಿಸ್ಥಿತಿಯುಂಟಾದಂತೆ ತನಗೂ ಉಂಟಾದರೆ? ಅತ್ತ ಚಾರುವೂ ಇಲ್ಲ, ಇತ್ತ ದೇವವ್ರತನೂ ಇಲ್ಲವೆಂಬ ಪರಿಸ್ಥಿತಿಯುಂಟಾದರೆ? ಹೇಗೋ ಚಾರುವಿಗೆ ಬೇಕಾದ ಚಾದರ ಹೊದಿಸಿಯಾಗಿದೆ. ಇನ್ನು ಏನೂ ಇಲ್ಲ. ನನ್ನ ಒಳಗಿನ ಆಸೆಯನ್ನು ಎಲ್ಲಿಯೂ ಹೊರಗಡೆಗೆ ಹಾಕದೆ, 'ನಾನು ನಿಮ್ಮ ಜೊತೆಯೇ ಇರುತ್ತೇನೆ – ಚಾರು' ಎಂದು ಹೇಳಿದ್ದೇನೋ ನಿಜವೆ? ಆದರೆ, ಕಂಠದ ಮೇಲಿಂದ ಅದು ನಾಲಿಗೆಯ ತುದಿಯಿಂದ ಬಂದ ಮಾತನ್ನು ಚಾರು ನಂಬಿರಬೇಕು! ಅದಕ್ಕಾಗಿಯೇ ದೇವವ್ರತನನ್ನು ನನ್ನ ಬಳಿ ಕರೆತಂದಿರಬೇಕು. ಚಾರು ಗೊತ್ತಿಲ್ಲದಿರುವುದೆಂದರೆ ಚಾಪೆಯ ಕೆಳಗೆ ರಂಗೋಲಿಯೂ ಇರುತ್ತದೆ ಮತ್ತು ರಂಗೋಲಿಯ ಕೆಳಗೆ ನುಸುಳುವುದಕ್ಕೂ ಬರುತ್ತದೆ. ಈ ಮೊದಲಿನ ಎಲ್ಲಾ ಸಂಗತಿಗಳನ್ನು ಚಾರುವಿಗೆ ಬಿಟ್ಟುಕೊಡದೇ ಹೋದುದೇ ನಾನು ಮಾಡಿದ ಒಳ್ಳೆಯ ಕೆಲಸವೆಂದು ಭಾವಿಸಿಕೊಂಡ ಮೈಥಿಲಿ ಸಂಜೆಯ ಶುಭ ಶಕುನದ ನಿರೀಕ್ಷೆಯಲ್ಲಿಯೇ ವಾಕಿಂಗ್ ಹೊರಟಳು. ಅವಳು ವಾಕಿಂಗ್ ಹೋಗಲೆಂದು ಬಾಗಿಲಿಗೆ ಬೀಗ ಹಾಕುತ್ತಿರುವ ಹೊತ್ತಿಗೆ ಸರಿಯಾಗಿಯೇ ಚಾರು ಮನೆಯ ಕಡೆಗೆ ಹೊರಟಿದ್ದು.

ಅದೇ ವೇಳೆಗೆ ಮನೆಗೆ ಬಂದ ದೇವವ್ರತ ಸಿಳ್ಳೆ ಹಾಕುತ್ತಾ ಮನೆಯ ಬೀಗ ತೆರೆಯುತ್ತಿದ್ದ. ಅವನು ಮನೆಯ ಬಾಗಿಲಿನ ಬೀಗ ತೆರೆಯುತ್ತಿರುವುದಕ್ಕೂ, ಮೈಥಿಲಿಯು ವಾಕಿಂಗ್ ಹೊರಡುವುದಕ್ಕೆ ಮನೆಯ ಬೀಗ ಹಾಕುತ್ತಿರುವುದಕ್ಕೂ ಮತ್ತು ಚಾರು ನಾರಾಯಣ ನಂಬಿಯಾರನನ್ನು ಬಿಟ್ಟು ಹೊರಟಿದ್ದಕ್ಕೂ ಸಮವಾಗಿರುವ ಸಮಯವೇ ಕೂಡಿ ಬಂದಿತ್ತು. ಆಗ ಕೂಡಾ ಅತ್ತ ಸರಿಯಾಗಿ ಕತ್ತಲು ಮುಸುಕಿರಲಿಲ್ಲ. ಹಾಗೂ ಸಿಟಿಯೊಂದರ ಜಗ್ಗನೇ ಉರಿಯತೊಡಗಿದ ದೀಪಗಳು ಸಮಯಕ್ಕೆ ಸರಿಯಾದ ಹೊಂದಾಣಿಕೆಯ ಯತ್ನದಲ್ಲಿದ್ದವು. ರಾಕ್ಷಸನ ಯಾತ್ರೆ; ದೇವತೆಗಳ ಇಂದ್ರ ಸಭೆಯ ನರ್ತನ ಮತ್ತು ಪಾತಾಳದಲ್ಲಿ ಹೆಡೆ ನಾಗ ಪೂತ್ಕರಿಸುವ ಹೊತ್ತದು. ಮೈಥಿಲಿಯು ವಾಕಿಂಗ್ ಹೊರಟಿರುವುದನ್ನು ಎಡಗಣ್ಣಿಂದ ನೋಡಿದ ದೇವವ್ರತ ಲಗುಬಗೆಯಿಂದಲೇ ಬಾಗಿಲು ತೆರೆದ. ಮತ್ತು ಒಳಗಡೆ ಹೋದ. ದೇವವ್ರತ ಮನೆಯ ಬಾಗಿಲು ತೆರೆಯುತ್ತಿರುವುದನ್ನು ತಲೆತಗ್ಗಿಸಿಕೊಂಡೇ ಮೈಥಿಲಿಯು ನೋಡಿದಳು. ಬೇರೆ ಸಮಯದಲ್ಲಿ ಆಗಿದ್ದರೆ ಹೊಟ್ಟೆ ಖಾಲಿಯಾಗುವಷ್ಟು ಮತ್ತು ನಾಲಗೆಯ ತೇವ

ಆರುವಷ್ಟು ಮಾತಾಡುತ್ತಿದ್ದ ಇಬ್ಬರಿಗೂ ಈಗ ಮಾತಾಗಲೀ, ತುಟಿಯಂಚಲ್ಲಿ ಸಣ್ಣ ನಗೆಯಾಗಲೀ ಬರಲಿಲ್ಲ. ಬಾರದೇ ಹೋಗಿದ್ದೇ ಅವರ ನಡುವಣ ಮಂಜುಗಡ್ಡೆಯಂಥಾ ಮೌನಕ್ಕೆ ಕಾರಣವಾದರೂ ಯಾವುದೋ ಒಂದು ಮಾತಿನ ಎಳೆಯು ಹಾಗೆಯೇ ಉಳಿದಿದೆಯೆಂದು ಇಬ್ಬರಿಗೂ ಅನಿಸತೊಡಗಿತ್ತು. ಅವರಿಬ್ಬರ ನಡುವೆ ಉಳಿದುಕೊಂಡಿರುವ ಸಣ್ಣ ಎಳೆಯನ್ನು ಹರಿಯಲು ಬಿಡುವುದೇ – ಇಬ್ಬರಿಗೂ ಉಳಿದುಕೊಂಡ ಒಂದೇ ಇಕ್ಕಟ್ಟಿನ ಪರಿಸ್ಥಿತಿ.

ದೇವವ್ರತ ಬಾಗಿಲು ತೆರೆದವನು ಬಾಗಿಲ ಬೋಲ್ಟ್ ಹಾಕಿಲ್ಲ ಮತ್ತು ಮೈಥಿಲಿಯ ಹೆಜ್ಜೆಯು ತಡವರಿಸಿತು. ಮುಂದೆ ಕಾಲಿಟ್ಟರೂ ಮತ್ತೆ ಚಲಿಸುವುದಿಲ್ಲ, ಕಾಲುಗಳು ಮುಷ್ಕರ ಹೂಡುತ್ತಿವೆ. ದೇವವ್ರತ ಭಾವಿಸಿದಂತೆ ಮೈಥಿಲಿಯು ದೇವವ್ರತನ ಮನೆಯೊಳಗಡೆಗೆ ಸಲೀಸಾಗಿ ಹೋಗಿದ್ದಿದ್ದರೆ ಆ ಸಂಜೆಯಲ್ಲಿ ಒಂದು ತಿರುವು ಎದುರಾಗುತ್ತಿತ್ತು. ದೇವವ್ರತನೆಂಬ ಹಸಿದ ಚಿರತೆಯ ಪಂಜುಗಳಿಗೆ ಸಿಕ್ಕಿ ಮೈಥಿಲಿಯು ಒದ್ದಾಡಬೇಕಾಗುತ್ತಿತ್ತು. ಆದರೆ, ಅದೇ ಸಂದರ್ಭದಲ್ಲಿ ಮೈಥಿಲಿಯ ಮನದ ತೊಯ್ದಾಟದಿಂದಲೇ ಅವಳು ಮುಂದಡಿಯಿಟ್ಟಳು. ಅದೇ ವೇಳೆಗೆ ದೇವವ್ರತನ ಮನೆಯ ಬಾಗಿಲಿನ ಬಳಿಗೆ ಆಟೋವೊಂದು ಬಂದು ನಿಂತಿತು. ಅದರಿಂದ ಇಳಿದವರು ಸುಜಾತ; ಅವಳಮ್ಮ ಮತ್ತು ಅವಳ ಅಪ್ಪ ಲಿಂಗಮೂರ್ತಿ. ಎಲ್ಲಾದರೂ ಮೈಥಿಲಿಯು ದೇವವ್ರತನ ಮನೆಯೊಳಗಡೆ ಹೋಗಿ ಮಾತಾಡಲು ಕೂತಿದ್ದರೆ; ಅವನು ಅವನ ಕೈಗಳನ್ನು ಮುಂದಕ್ಕೆ ಚಾಚಿದ್ದರೆ ಮಾತ್ರ – ಹಣೆಯಲ್ಲಿ ಬರೆದ ಬ್ರಹ್ಮನೂ ಕೂಡಾ ತನ್ನ ಲಿಪಿಯನ್ನು ಒರಸಿಹಾಕಿಕೊಳ್ಳುವುದು ಸಾಧ್ಯವಿರಲಿಲ್ಲ! ದೇವವ್ರತನ ಮುಖ ಕಪ್ಪಿಟ್ಟದ್ದು ಆವಾಗಲೇ.

ತಲೆ ತಗ್ಗಿಸಿಕೊಂಡ ಮೆತ್ತಗೆ ದೇವವ್ರತನು ಬಾಗಿಲನ್ನು ತೆರೆಯುವುದನ್ನು ಮತ್ತು ಅವನು ತನ್ನನ್ನು ಗಮನಿಸುವುದನ್ನು ತನ್ನ ಕಣ್ಣ ದೃಷ್ಟಿಗೆ ಆವಾಹನೆಯನ್ನು ಮಾಡಿಕೊಳ್ಳುತ್ತಿದ್ದ ಮೈಥಿಲಿಯು ಕೂಡಾ ಹಿಂದಕ್ಕೆ ಅಡಿಯಿಟ್ಟಳು – ಯಾವ ಗತ್ಯಂತರವೂ ಇಲ್ಲದೆ. ಅವಳು ಮುಂದೆ ಅಡಿಯಿಟ್ಟ ಕೆಲವೇ ಕ್ಷಣದಲ್ಲಿ ಚಾರುವಿನ ಸ್ಕೂಟರ್ ಮನೆಯತ್ತ ಬಂದು ನಿಂತಿತು. ಮನೆಯ ಬೀಗ ತೆಗೆದ ಮೇಲೆ ಘನ ಗಂಭೀರವಾದ ಮೌನ ಸ್ವಾಗತಿಸಿತು. ಅವನು ಮನೆಯೊಳಗೆ ಕಾಲಿಟ್ಟ ಕ್ಷಣದಲ್ಲಿ ವಾಕಿಂಗ್ ಹೊರಟ ಮೈಥಿಲಿಯು ಅವನ ಹಿಂದೆಯೇ ಬಂದಳು. ಹಾಗೂ 'ಛೇ' ಎಂದು ಅವಳ ಪಾಡಿಗೆ ಅವಳೇ ಅಂದು ನಾಲಿಗೆ ಕಚ್ಚಿಕೊಂಡಳು. ಅವಳು 'ಛೇ' ಅಂದದ್ದು ಚಾರುಗೆ ಕೇಳಿಸಿತು. ಆದರೆ, ತಿರುಗಿನೋಡಲಿಲ್ಲ. ಯಾಕೆಂದರೆ ಅವನ ಮುಖ ಬೇರೆ ಕಡೆಗಿತ್ತು ಅಷ್ಟೆ!

*

ಯಾವುದೋ ಹಿಂಸೆಯೊಂದು ತೆವಳಿಕೊಂಡೋ, ಹಾರಿಕೊಂಡೋ ಬಂದು ಕಾಲ ತುದಿಬೆರಳನ್ನೋ, ನೆತ್ತಿಯ ತುದಿಯನ್ನೋ ಕಚ್ಚಿದಂತೆ ದೇವವ್ರತ ಚಡಪಡಿಸಿದ. ಸುಜಾತ ಹೋದವಳು ನಾಕಾರು ದಿನ ಇದ್ದು ಬರಬಹುದು. ಅಷ್ಟೊಂದು ಮಟ್ಟಿಗೆ ಅವಳಿಗೆ ಸಮಾಧಾನವನ್ನು ಹೇಳಿಕಳಿಸಿದ್ದೇನೆ ಎಂದು ಭಾವಿಸಿದವನಿಗೆ ಸುಜಾತ ಮರುದಿನ ಸಂಜೆಯೇ ತಾಯಿ–ತಂದೆಯರ ಜೊತೆ ವಾಪಾಸು ನೋಡಿದವನಿಗೆ ಏನು ಹೇಳುವುದೆಂದೇ ತೋಚಲಿಲ್ಲ ಮತ್ತು ಸುಜಾತ ನಿನ್ನೆಯಷ್ಟು ಇಂದು ಲವಲವಿಕೆಯಿಂದ ಇಲ್ಲವೆಂದು ದೇವವ್ರತನೆಂಬ ಸುಜಾತಳಿಗೆ ತಾಳಿ ಕಟ್ಟಿದ ಗಂಡನಿಗೆ ಅರ್ಥವಾಯಿತು. "ಬನ್ನಿ" ಎಂದು ದೇವವ್ರತ ಒಳಗಡೆ ಕರೆದ. ಗಂಟಲಲ್ಲಿ ಮಾತ್ರ ಒಂದಿಷ್ಟೂ ಪಸೆಯಿರಲಿಲ್ಲ. ಗಂಟಲು ಆರಿಹೋದವನ ಸ್ವರವಾದರೂ ನೋಡಿಯೇ – ದೇವವ್ರತ ಕಂಗಾಲಾಗಿ ಬಿಟ್ಟಿದ್ದಾನೆ ಎಂದು ಸುಜಾತ ಅರ್ಥಮಾಡಿಕೊಂಡಳು. ಅರಸೀಕೆರೆಯ ಕೊಬ್ಬರಿ ಮಂಡಿ ಸಾಹುಕಾರ ಜೋಗೇನಹಳ್ಳಿ ಲಿಂಗಮೂರ್ತಿ ಮತ್ತು ಅವರ ಹೆಂಡತಿ ಪಾರ್ವತಮ್ಮ ಹಾಗೂ ಅವರ ಮಗಳು ಸುಜಾತ – ಮೂವರೂ ಒಳಗಡೆ ಬಂದವರು ಹಾಗೆಯೇ ಸೋಫಾದಲ್ಲಿ ಕುಳಿತರು. ಗಜದೇಹಿಯಾದ ಲಿಂಗಮೂರ್ತಿ ಸಾಹುಕಾರರು ಕೂತಾಗ ಸೋಫಾ ಕಿರಿಕಿರಿಯೆಂದು ಮಾತಾಡಿಸಿತು. ಕೊಬ್ಬರಿಯ ಕೊಬ್ಬನ್ನು ಮೈತುಂಬಾ ತುಂಬಿಕೊಂಡಿದ್ದ ಪಾರ್ವತಮ್ಮ ಸೋಫಾದಲ್ಲಿ ಕೂತವರೇ ಸೆರಗಿನ ತುದಿಯಿಂದ ಮುಖಕ್ಕೆ ಒಂದಿಷ್ಟು ಗಾಳಿ ಹಾಕಿಕೊಂಡರು. ಸೂಟ್‌ಕೇಸನ್ನು ಮೂಲೆಯಲ್ಲಿಟ್ಟು ಬೆತ್ತದ ಚೆಯರಿನ ಮೇಲೆ ಕೂತಳು. ಹಾಗೂ ಮೂಲೆಯಲ್ಲಿ ಇಟ್ಟಿದ್ದ ಕಬ್ಬಿಣದ ಫೋಲ್ಡಿಂಗ್ ಚೆಯರಿನ ಮೇಲೆ ಗುಬ್ಬಚ್ಚಿಯಂತೆ ದೇವವ್ರತ ಕೂತು "ಚೆನ್ನಾಗಿದ್ದೀರಾ" ಎಂದು ಕೇಳಿದ. ಅತ್ತೆ ಮಾವರ ಮುಖ ನೋಡಿಕೊಂಡು "ಚೆನ್ನಾಗಿದ್ದೀರಾ?" ಅಂತ ಅವನು ಕೇಳಿದ್ದು ಕೇವಲ ಔಪಚಾರಿಕವಾಗಿ ಎಂದು ಕೊಬ್ಬರಿ ಮಂಡಿ ಸಾಹುಕಾರರಿಗೆ ಅರ್ಥವಾಗದೇ ಉಳಿಯುವುದು ಸಾಧ್ಯವಿರಲಿಲ್ಲ. ಹತ್ತಾರು ಕಡೆ ಹತ್ತಾರು ರೀತಿಯ ವ್ಯವಹಾರವಿಟ್ಟುಕೊಂಡಿರುವ ಲಿಂಗಮೂರ್ತಿ ಸಾಹುಕಾರರು "ಸೂ" ಅಂದರೆ ನಂತರದ ಎಲ್ಲಾ ಪದಗಳನ್ನು ಒಟ್ಟಿಗೆ ತುಂಬಿಕೊಳ್ಳಬಲ್ಲವರು ಮತ್ತು ಅದರ ಕಾರಣದಿಂದಲೇ ಎಲ್ಲಿ ಬೇಕೋ ಅಲ್ಲಿಗೆ ಒಂದು ಮಾದರಿಯ ವ್ಯವಹಾರ ಚುಕ್ತಗೊಳಿಸಬಲ್ಲವರು. ಮತ್ತು ಅದಕ್ಕೆ ತಕ್ಕ ಅನುರೂಪವಾದ ಹಿಮ್ಮೇಳ ಒದಗಿಸಬಲ್ಲ ಸಾಮರ್ಥ್ಯ ಪಾರ್ವತಮ್ಮನಿಗೂ ಇದೆ. ಗಂಡನ ಜೇಬಿಂದ ಆಗಾಗ ತೆಗೆದುಕೊಂಡ ಒಂದು ಸಾವಿರ – ಎರಡು ಸಾವಿರ – ಹೀಗೆ ಶೇಖರಿಸಿದ್ದ ಕೈಗಂಟು – ಮತ್ತೆ ಚೀಟೀ ವ್ಯವಹಾರ, ಬಡ್ಡಿ ವ್ಯವಹಾರಗಳಲ್ಲಿ ಬಂದ ಲಾಭದ ಮೊತ್ತ ಎಲ್ಲವನ್ನು ಅಡಿಕೆ ಸಂಚಿಯ ಚೀಲದಲ್ಲಿಯೇ ಕಟ್ಟಿಡುವ ಪಾರ್ವತಮ್ಮನಿಗೂ ಈ ದೇವವ್ರತನೆಂಬ ಗುಬ್ಬಚ್ಚಿ ಮರಿಯೊಂದು 'ಚೆನ್ನಾಗಿದ್ದೀರಾ' ಎಂದು ಕೇಳಿದ್ದರ ಹಿಂದಿರುವ ಪ್ರಸ್ತಾವನೆಯು ಯಾವ ಬಗೆಯದು ಎಂದು ಅರ್ಥವಾಗದೇ ಏನೂ ಉಳಿಯಲಿಲ್ಲ.

'ಪುಟ್ಟಿ ಹೋಗಮ್ಮಾ, ಒಂಚೂರು ಕಾಫಿ ಮಾಡ್ಕೊಂಡು ಬಾ, ಯಾಕೋ ಹೋಟೆಲಿನ ಕಾಫಿ ರುಚಿಸೋಲ್ಲ, ಸಕ್ರೆ ಹಾಕಿ ಕೊಂದುಬಿಡ್ತಾರೆ' ಎಂದ ಲಿಂಗಮೂರ್ತಿ ಸಾಹುಕಾರರು ಸುಜಾತಳನ್ನು ಒಳಗಡೆ ಕಳಿಸಿದ್ದು ತುಂಬಾ ಉದ್ದೇಶಪೂರ್ವಕ. ಸುಜಾತ ಒಳಗಡೆ ಹೋದ ತಕ್ಷಣವೇ ಅವಳ ಜೊತೆಗೆ ಪಾರ್ವತಮ್ಮ ಕೂಡಾ ಅಡುಗೆ ಮನೆಯೊಳಗೆ ಹೊಕ್ಕರು. ಮಾವ ಮತ್ತು ಅಳಿಯ ಇಬ್ಬರೇ ಮತ್ತು ಇವರಿಬ್ಬರ ನಡುವೆ ಒಂದು ಸಣ್ಣ ಟೀಪಾಯಿ ಮಾತ್ರ. ಅಲೆಮಾರಿ ಮನಸ್ಸು ಮತ್ತು ಅಲೆಮಾರಿಯ ದೇಹ ಎರಡಕ್ಕೂ ಕೊಂಡಿ ಸಿಕ್ಕಿಸಬಲ್ಲ ಲಿಂಗಮೂರ್ತಿ ಸಾಹುಕಾರರು "ಮತ್ತೇನು ಅಳಿಯಂದಿರೇ, ಅದೇನೋ ಬೆಳಿಗ್ಗೆ ಬಂದು ಸುಜಾತ ಅವಳಮ್ಮನತ್ರ ಅದೇನೋ ಹೇಳಿದಳಂತೆ. ಆದರೆ, ನಾನೇ ಹಂಗೆಲ್ಲಾ ನಡೆಯೊಲ್ಲ ಅಂತಂದೆ. ಅವಳದ್ದು ಒಂದೇ ಹಟ – ನಾನಿನ್ನು ಹೋಗೋಲ್ಲಾಂತ. ಎಲ್ಲಾ ಹುಡುಗು ಬುದ್ಧಿಯವ್ರು ಎಲ್ಲೋ ಎಡವಟ್ಟು ಮಾಡಿಕೊಂಡು ಬಿಡಬಹುದು ಎಂದು ನಾನೇ ಅವಳನ್ನು ಕರೆದುಕೊಂಡು ಬಂದುಬಿಟ್ಟೆ." ಸೂಜಿ ಮೊನೆಯಷ್ಟು ಗಾತ್ರದ ಎಚ್ಚರಿಕೆಯನ್ನು ಸೂಚಿಸುತ್ತಲೇ ಹೇಳಿದಾಗ ದೇವವ್ರತ, "ಹಂಗೇನೂ ಇಲ್ಲ. ಎಲ್ಲಾ ಚಾರುವಿನ ತಪ್ಪು ಕಲ್ಪನೆಗಳಷ್ಟೆ. ಏನೋ ಇನ್ನೊಬ್ಬರಿಗೆ ಸಹಾಯ ಮಾಡೋದಿಕ್ಕೆ ಹೋದ್ರೆ ಹೀಗೇನೆ ಆಗಿಬಿಡುತ್ತೆ. ಚಾರು ಅಂದ್ರೆ ನಿಮ್ಗೆ ಗೊತ್ತಿಲ್ಲ. ಸುಜೀಗೆ ಚೆನ್ನಾಗಿ ಗೊತ್ತು. ಕುಡ್ಕ ಅಂದ್ರೆ ಕುಡ್ಕ ಬೆಳಿಗ್ಗೆ ಅಂತಾ ಇಲ್ಲ ರಾತ್ರಿ ಅಂತಾ ಇಲ್ಲ. ಇಡೀ ಹೊತ್ತು ಕುಡ್ದು ಬಿದ್ದಿರ್ತಾನೆ. ಅದಕ್ಕೇ ಅವರ ಕುಟುಂಬ ಸರಿ ಮಾಡೋಕೆ ಅಂತ ಹೋದೆ. ಆದ್ರೆ ನಮಾಜು ಮಾಡೋಕೆ ಹೋದವನ ತಲೆ ಮೇಲೆ ಮಸೀದಿ ಬಿತ್ತು ಅಂತಾರಲ್ಲ ಹಾಂಗಾಯಿತು ನನ್ನ ಕತೆ. ಸುಜಾತಗೆ ಬೇಕು ಬೇಕಾದ ಹಾಗೆಲ್ಲಾ ವಿವರಿಸಿ ಹೇಳಿದೆ. ಏನೂ ಹೇಳಿದ್ರು ಅವಳ್ಗೆ ಅದು ಅರ್ಥಾನೇ ಆಗ್ತಾ ಇಲ್ಲ ಮಾವ. ಅಷ್ಟಕ್ಕೂ ನಂದೇನೂ ತಪ್ಪಿಲ್ಲ ಮಾವ. ಬಗೆ ಬಗೆಯಾಗಿ ಸುಜಿಗೆ ಹೇಳ್ದೆ. ಕೊನೆಗೆ, ಪಾಪ ಚಾರು ಹೇಳಿದ್ದಕ್ಕೆಲ್ಲಾ ಹಿಂಗಾಯ್ತಲ್ಲ ಅಂತ ಬೇಜಾರಾಯ್ತು. ಅವಳಿಗೂ ಬೇಜಾರು ಕಳೀಲಿ ಅಂತಲೇ ಕಳಿಸಿಕೊಟ್ಟೆ. ಬೇರೇನೂ ಇಲ್ಲ ಮಾವ. ಅದೇ ನಾನು ಹೇಳಿದ್ನಲ್ಲಾ ಈಗಿನ ಕಾಲದಲ್ಲಿ ಯಾರಿಗೂ ಉಪಕಾರ ಮಾಡೋಕೆ ಹೋಗಬಾರದು" ಎಂದು ತನ್ನ ರಾಗವನ್ನು ಎಳೆದ. ಅವನ ರಾಗದಲ್ಲಿ ಇದ್ದ ಅಪಸ್ವರದ ಛಾಯೆಯು ಏಳು ಕೆರೆಯ ನೀರು ಕುಡಿದ ಸಾಹುಕಾರರಿಗೆ ಅರ್ಥವಾಗದಿರುವುದು ಸಾಧ್ಯವಿರಲಿಲ್ಲ. ಹೆಗಲಲ್ಲಿರುವ ಶಾಲಿನಲ್ಲಿ ಗಾಳಿ ಹಾಕಿಕೊಳ್ಳುತ್ತಲೇ "ಹಾಳು ಕರೆಂಟ್ ಯಾವ ಉಪಯೋಗಕ್ಕೂ ಇಲ್ಲ" ಅಂದರು. ಈ ಹಿಂದೆ ಯಾವುದೂ ಮತ್ತು ಏನೂ ಜರುಗಿಯೇ ಇಲ್ಲವೆಂಬಂತೆ ದೇವವ್ರತ "ಸುಜೀ, ಕಾಫಿ ಆಯ್ತೇನೆ?" ಅಂದ. ಅಡುಗೆ ಮನೆಯೊಳಗಿಂದ ಸುಜಾತಳ ಸ್ವರ ಕೇಳಲಿಲ್ಲ. ಬದಲಿಗೆ ಕೇಳಿಬಂದಿದ್ದು ಪಾವರ್ತಮ್ಮನ ಸ್ವರ. "ಆಯ್ತು ಈಗ ನಾನೇ ತಂದ್ಬಿಟ್ಟೆ." ಮತ್ತೆ ದಿಗಿಲಾಗುವ ಸರದಿ ದೇವವ್ರತನಿಗೆ. ಜಾತಕದ ಪ್ರಕಾರ ದಂಪತಿಗಳ ಹೊಂದಾಣಿಕೆಯು ಸರಿಯೇ ಇರಬೇಕು ಮತ್ತು ಗಂಡ–ಹೆಂಡತಿಯರ ಸಂಬಂಧವೆಂದರೆ ಅದು ರತಿ–

ಮನ್ಮಥರ ಜೋಡಿಯಿದ್ದ ಹಾಗೆ ಇರುತ್ತದೆ. ಮತ್ತು ದೇವವ್ರತನಿಗೆ ಹುಡುಗಿ ಸುಜಾತಳ ಕಾಲ್ಗುಣದಿಂದಲೇ ಒಳ್ಳೆಯದಾಗುತ್ತದೆ ಮತ್ತು ಈ ಅನುರೂಪದ ದಾಂಪತ್ಯದಲ್ಲಿ ಒಂದು ಕಪ್ಪು ಗೆರೆಯು ಮೂಡುವುದಿಲ್ಲ. ಶುಭವಾರ; ಶುಭ ನಕ್ಷತ್ರ; ಶುಭಕರಣಗಳಲ್ಲಿ ಮುಹೂರ್ತವನ್ನು ಸೂಚಿಸಿದ ಜೋಯಿಸರು ದೇವವ್ರತ ಮತ್ತು ಸುಜಾತರ ಮದುವೆಯ ದಿನ ಪಡೆದು ದಕ್ಷಿಣೆಯನ್ನು ಸೊಂಟಕ್ಕೆ ಸುತ್ತಿಕೊಂಡು ಹೋದವರು ಮಾತ್ರ ಒಂದೇ ಒಂದು ಸುಳ್ಳನ್ನು ಹೇಳಿದ್ದರು. ಅದೆಂದರೆ, ದೇವವ್ರತ ಸುಜಾತಳ ಕೊರಳಿಗೆ ತಾಳಿ ಕಟ್ಟಿದ ಮುಹೂರ್ತ ಮಾತ್ರ ಅಮೃತ ಘಳಿಗೆಯಲ್ಲ, ಅದು ರಾಹುಕಾಲ, ಶುಭ ಲಗ್ನವಲ್ಲ ಮತ್ತು ತಾಳಿ ಕಟ್ಟಿದ ಮುಹೂರ್ತಕ್ಕೆ ಸರಿಯಾಗಿಯೇ ಮದುವೆಯ ಮಂಟಪದ ಮೂಲೆಯಲ್ಲಿ ಇರಿಸಿದ್ದ ನಂದಾದೀಪ ಎಣ್ಣೆ ನೋಡುವವರಿಲ್ಲದೆ ಬತ್ತಿ ಕರಕಾಗಿ ಹೋಗಿತ್ತು. ಒಂದು ಮದುವೆಗೆ ಸಾವಿರ ಸುಳ್ಳು ಹೇಳಬಹುದು ಎಂಬ ಸಮರ್ಥನೆಯನ್ನು ಇಟ್ಟುಕೊಂಡ ಜೋಯಿಸರು ಆ ಸಮಯದಲ್ಲಿ ಒಂದೇ ಒಂದು ಸುಳ್ಳು ಹೇಳಿದ್ದರು ಮತ್ತು ಅದರಿಂದಲೇ ಸುಜಾತ ಎಂಬ ಸಾಹುಕಾರರ ಮಗಳ ಕಣ್ಣಲ್ಲಿ ಜಿನುಗಿದ ನೀರು ಆಗಾಗ ತೊಟ್ಟಿಕ್ಕುತ್ತಲೇ ಇರಬೇಕಾಯಿತು? ಮುಹೂರ್ತದ ತಪ್ಪಲ್ಲ–ದೇವವ್ರತನ ಚಾಳಿಯ ತಪ್ಪು. ಅದೇ ಕಣ್ಣೀರು ಗಲ್ಲದಿಂದ ಉರುಳಿಬಿದ್ದು ಆತಂಕದಿಂದ ಧಗೆಯೇಳುತ್ತಿದ್ದ ಎದೆಗೆ ಮತ್ತಷ್ಟು ಬಿಸಿ ಹನಿಗಳನ್ನು ಕೊಡುತ್ತಲೇ ಇದ್ದವು. ಈ ಸಂಗತಿ ಸಾಹುಕಾರ, ಸಾಹುಕಾರ್ತಿಯರ ಗಮನಕ್ಕೆ ಬಂದಿದ್ದು ಮಾತ್ರ ಮುಂಜಾವದಲ್ಲಿ ಹೊಸ್ತಿಲಿನ ಎದುರು ಪಾರ್ವತಮ್ಮ ರಂಗೋಲಿ ಬಿಡುವ ವೇಳೆ–ತಿರುಗಿ ನೋಡಿದಾಗ ಸೂಟ್‌ಕೇಸ್ ಹಿಡಕೊಂಡು ಒಬ್ಬಂಟಿಯಾಗಿ ಬಂದ ಅವರ ಏಕಮಾತ್ರ ಪುತ್ರಿ ಪುಟ್ಟಿ ಸುಜಾತಳನ್ನು ನೋಡಿದಾಗ ಬಿಕ್ಕುತ್ತಲೇ ಮನೆಯಂಗಳದಲ್ಲಿಯೇ ದಾಂಪತ್ಯ ಜೀವನದ ರಸಮಯ ಮತ್ತು ಯಮ ಯಾತನೆಯ ಗಳಿಗೆಯನ್ನು ಒಂದು ಅಂಗುಲವೂ ಬಿಡದೆ ಸುಜಾತ ಹೇಳಿದಾಗ ಮೊದಲು ಹಲ್ಲು ಕಡಿದದ್ದು ಪಾರ್ವತಮ್ಮನೇ. ಕರುಳ ಬಳ್ಳಿಗೆ ಈ ಕುಂಬಳಕಾಯಿ ಭಾರವೇ? ಹಾಗೆಂದು ಯೋಚಿಸಿದವರೇ ಗಂಡನನ್ನು ಹೊರಡಿಸಿಕೊಂಡು ದಾರಿಯಲ್ಲಿ ಕತೆಯ ಸಾರಾಂಶಕ್ಕೆ ಕೈ–ಕಾಲು; ಮೂಗು ಬರೆದು ಲಿಂಗಮೂರ್ತಿ ಸಾಹುಕಾರರ ಮಿದುಳಿಗೆ ಕೊಟ್ಟಿದ್ದೇನೋ ಸರಿ. ಆದರೆ, ಮಂಡಿ ವ್ಯಾಪಾರದ ಲೆಕ್ಕಚಾರವನ್ನು ಹಾಕಿಕೊಂಡೇ ದೇವವ್ರತನ ಮನೆಗೆ ಬಂದು ಮಾತು ಶುರುಹಚ್ಚಿದ್ದು. ಪಾರ್ವತಮ್ಮ ತಂದುಕೊಟ್ಟ ಕಾಫಿಯನ್ನು ಬಿಸಿ ಬಿಸಿಯಾಗಿಯೇ ಕುಡಿದವರು ದೇವವ್ರತನಿಗೆ ಮಾತಾಡುವುದಕ್ಕೆ ಯಾವ ಅವಕಾಶ ಕೊಟ್ಟಿಲ್ಲ. "ಬನ್ನಿ ಅಳಿಯಂದಿರೇ ಒಂಚೂರು ಹೊಗಗಡೆ ಹೋಗಿಬರೋಣ" ಅಂದವರೇ ಹೊರಟೇಬಿಟ್ಟರು. ಹಿಂದಗಡೆಯೇ ದೇವವ್ರತ. ದಾರಿಯಲ್ಲಿಯೇ ದೇವವ್ರತನಿಗೆ ಲಿಂಗಮೂರ್ತಿ ಸಾಹುಕಾರರು ಒಂದು ವಿಷಯವನ್ನು ಹೇಳಿದರು. "ನೋಡಿ ಅಳಿಯಂದಿರೇ, ನನ್ನ ಮಗಳು ದೇವತೆಯಂಥವಳು ಅವಳ ಕಣ್ಣಲ್ಲಿ ನೀರು ಬರಿಸಬೇಡಿ, ಅದನ್ನು ನೋಡೋ ತಾಕತ್ತು ನನಗೂ ಇಲ್ಲ, ಈವತ್ತೋ–ನಾಳೆಯೋ

ನೀವಿಬ್ಬರು ಜೊತೆಗೆ ಕೂತು ಸರಿಯಾಗಿ ಮಾತಾಡಿಕೊಳ್ಳಿ. ನಾನೂ ಅವಳಿಗೆ ಸಾಕಷ್ಟು ಹೇಳಿದ್ದೇನೆ. ಯಾಕೋ ಮನಸ್ಸು ತಡೀಲಾರದೆ ಬಂದುಬಿಟ್ಟೆ. ಹಾಗೆ ಹೆಂಡತಿಯೊಬ್ಬಳನ್ನೇ ಕಟ್ಟಿಕೊಂಡು ಏಗಬೇಕು ಅಂತೇಳ್ತಿಲ್ಲ. ನಾನು ನೋಡಿ ನನ್ನ ಯೌವನದಲ್ಲಿ ಎಷ್ಟೊಂದು ಕಡೆ ಇಟ್ಕೊಂಡಿದ್ದೆ ಏನು ಕತೆ? ನನ್ನ ಹಾಗೆ ಮಾಡೋ ತಾಕತ್ತಿಲ್ಲ ಈಗಿನ ನಿಮ್ಮಂಥ ಹುಡುಗರಿಗೆ. ಎಲ್ಲಿ ಬರುತ್ತೆ ಹೇಳಿ? ರಾಗಿ ಮದ್ದೆ; ಕೊಬ್ರಿ; ಆಗಾಗ ಬಾದಾಮಿ; ದ್ರಾಕ್ಷಿ; ಹೀರಿದ್ದೆ. ಒಳ್ಳೇ ತಾಕತ್ತು ಉಳಿಯೋದು. ಈಗಿನ ಕಾಲದ ಹುಡುಗರು ನೀವು ಏನು ತಿಂತೀರಿ? ತಿಂದ್ರೆ ಒಂದಿಷ್ಟು ಮಂಡಕ್ಕಿ ಮೆಣಸಿನ ಬೋಂಡ. ಸರೀ ತಿನ್ಬೇಕು ಬಿಡ್ಬಾರ್ದು. ಅಂದ ಹಾಗೆ ಬೇರೇನಿಲ್ಲ ಅಳಿಯಂದರೆ, ಒಟ್ನಲ್ಲಿ ನೀವು ಚೆನ್ನಾಗಿರಬೇಕು ಅಷ್ಟೆ. ಯಾರದು? ಆ ಚಿನಾಲಿ? ಅವಳನ್ನು ಹಚ್ಚಿಕೊಳ್ಳೋಕೆ ಹೋಗ್ಬೇಡಿ. ನಿಮ್ಗೆ ಅದೆಲ್ಲಾ ಗೊತ್ತಾಗೊಲ್ಲ ಬಿಡಿ." ಸಾಹುಕಾರರು ವಾಕಿಂಗ್ ಹೋಗುತ್ತಲೇ ಮಾತಾಡುತ್ತಿದ್ದರು, ಮಾತಿನಲ್ಲಿ ಮುಕ್ತಾಯವಿಲ್ಲ. ದೇವವ್ರತ ಗೋಣು ಅಲ್ಲಾಡಿಸುವುದರ ಹೊರತು ಬೇರೇನೂ ಇಲ್ಲ. "ಆಯಮ್ಮನ್ನ ಬಿಟ್ಬಿಡಿ, ಹಾಂಗೆಲ್ಲಾ ಏನಾದ್ರೂ ಇದ್ರು – ಕೂಡಾ ಗುಟ್ಟಾಗಿ ಮಾಡಿಬಿಡಬೇಕು, ನನ್ನ ಪುಟ್ಟಿಗೆ ಲೋಕಜ್ಞಾನವೇ ಇಲ್ಲ, ನೋಡಿ ಅಳಿಯಂದಿರೆ, ಆಯಮ್ಮನ ಗಂಡಂಗೆ ಗೊತ್ತಾಗಿಯೇ ಇಷ್ಟೊಂದು ರಾದ್ಧಾಂತ ಆಗಿರೋದು. ಸುಮ್ಮನಿದ್ದು ಬಿಡಿ, ಬೇಕಿದ್ರೆ, ಬೇರೆಲ್ಲಾದರೂ ನಿಮ್ಮ ಆಫೀಸಿನ ಹತ್ತಿರವೇ ಮನೆ ಮಾಡ್ಕೊಂಡುಬಿಡಿ. ಇದೆಲ್ಲಾ ಮಾನ–ಮರ್ಯಾದೆಯ ಪ್ರಶ್ನೆ. ಗಂಡಸಿನ ಮೈಮೇಲೆ ಹೆಣ್ಣು ಬಿದ್ದು ಬಿಟ್ರೆ ಬಿಡಬಾರದು. ಅದೆಲ್ಲಾ ನೀವು ಈಗಿನ ಕಾಲದ ಹುಡುಗರಿಗೆ ತಿಳಿಯೋಲ್ಲ ಅಷ್ಟೆ." ವಾಕಿಂಗ್ ಹೋಗುತ್ತಾ ದೇವವ್ರತನಿಗೆ ಲಿಂಗಮೂರ್ತಿ ಸಾಹುಕಾರರು ಹೇಳಿರುವ ಮಾತುಗಳಲ್ಲಿ ಕೆಲವು ದೃಢ ನಿರ್ಧಾರಗಳಿದ್ದವು. ದೇವವ್ರತನಿಗೆ ಸಲಹೆ–ಸೂಚನೆಗಳು ಇದ್ದವು. ದೇವವ್ರತ ಗೋಣು ಅಲ್ಲಾಡಿಸುವುದು – ಒಂದರ ಹೊರತು ಬೇರೇನೂ ಇರಲಿಲ್ಲ. ಕೊನೆಯ ಮಾತಾಗಿ "ನಾಳೆ ಬೆಳಿಗ್ಗೆ ಮತ್ತೆ ಪುಟ್ಟಿನ ಕರೆದುಕೊಂಡು ಊರಿಗೆ ಹೋಗ್ತೀವಿ. ಒಂದೆರಡು ದಿನಬಿಟ್ಟು ನೀವು ಬಂದ್ಬಿಡಿ. ಅದಾದ ಮೇಲೆ ಊರಲ್ಲೇ ಯೋಚನೆ ಮಾಡೋಣ ಏನು ಮಾಡ್ಬೇಕು ಅಂತ. ಬನ್ನಿ ವಾಪಾಸು ಹೋಗೋಣ" ಎಂದವರೆ ದೇವವ್ರತನನ್ನು ಕರೆದುಕೊಂಡು ವಾಪಾಸು ಬಂದರು. ಅವರಿಬ್ಬರು ವಾಪಾಸು ಬರುವಷ್ಟು ಹೊತ್ತಿಗೆ ಅಮ್ಮ ಮಗಳು ಅಡುಗೆ ಮನೆಯಲ್ಲಿ ರೊಟ್ಟಿ ತಟ್ಟುವ ಕೆಲಸದಲ್ಲಿದ್ದರು.

ತಾಕತ್ತಿದ್ದರೆ ಸಮಸ್ಯೆ ಎದುರಿಸಿ

– ೧೪ –

ಅದೇ ವೇಳೆಗೆ ಸರಿಯಾಗಿಯೇ ಚಾರು ಸ್ನಾನ ಮಾಡುತ್ತಾ 'ನಮಸ್ತೇಸು ಮಹಾಮಾಯೆ' ಎಂದು ಹೇಳುತ್ತಿದ್ದ. ಹಾಗೂ ಮೈಥಿಲಿಯ ಮನಸ್ಸು ಚಡಪಡಿಸುತ್ತಿತ್ತು. ಕೈಮೇಲೆ ಕೈಯಿಟ್ಟ ದೇವವ್ರತನ ಕೈಗಳಲ್ಲಿ ಅದೆಷ್ಟು ಬಗೆಯ ಕಂಪನವಿತ್ತು?

ಕೆಂಡ ಸಂಪಿಗೆಯ ದಂಡೆಯನ್ನೋ, ಕೇದಿಗೆಯನ್ನೋ ತುರುಬಲ್ಲಿ ಕಟ್ಟಿಕೊಂಡವಳಿಗೆ ಮಲ್ಲಿಗೆಯ ಮೊಗ್ಗು ಹೇಗೆ ಹಿಡಿಸೀತು? ತುರುಬು ತುಂಬಾ ಕೇದಿಗೆಯ ಹೂಗಳು ಇರಬೇಕು ಮತ್ತು ಕಡು ಪರಿಮಳ ಹೊತ್ತ ಕೆಂಡ ಸಂಪಿಗೆಯ ದಂಡೆಯೇ ಬೇಕು ಎಂದು ಭಾವಿಸಿಕೊಂಡ ಮೈಥಿಲಿಗೆ ರಾತ್ರಿಯಿಡೀ ಹೊಸ ಹೊಸ ಕನಸುಗಳ ಸುರಿಮಳೆ. ಕನಸುಗಳೇ ಎಷ್ಟೊಂದು ಚೆಂದ ವಾಗಿರುತ್ತೆ ಎಂದು ಭಾವಿಸಿ ಅತ್ತಿಂದಿತ್ತ ತಿರುಗಿ ಮಲಗಿದವಳಿಗೆ ಒಮ್ಮೆಲೇ ಎಚ್ಚರವಾಯಿತು. ನೋಡಿದರೆ ಪಕ್ಕದಲ್ಲಿ ಚಾರುವಿಲ್ಲ. ಮೈಥಿಲಿಯು ಗಾಬರಿಯಾದಳು. ಚಾರು ಕತ್ತಲಲ್ಲಿಯೇ ಕೂತು ತಲೆಗೆ ಕೈ ಹಚ್ಚಿದ್ದಾನೆ. ಮೈಥಿಲಿಗೆ ಚಾರುವಿನ ಈ ಸ್ಥಿತಿಯನ್ನು ನೋಡಿ ಬಂದ ಸಿಟ್ಟು ಮಾತ್ರ

ಅಸಾಧ್ಯವಾದುದು. "ತಾಕತ್ತಿದ್ದರೆ ಸಮಸ್ಯೆಯನ್ನು ಎದುರಿಸಿ ಇಲ್ಲಾ, ಸುಮ್ಮನಿರಿ. ಇದೇನಿದು ಆಕಾಶವೇ ಕಳಚಿ ತಲೆ ಮೇಲೆ ಬಿದ್ದಂತೆ ಕೂತಿದ್ದೀರಲ್ಲಾ? ಬಂದು ತೆಪ್ಪಗೆ ಮಲಗಿ. ಅದೇನು ಆಗಬಾರದ್ದು ಯಾವುದೂ ಆಗಿಲ್ಲ ಮತ್ತು ಆಗುವುದಿಲ್ಲ. ನಾನೆಲ್ಲಾದರೂ ಹಾದಿ ತಪ್ಪುವವಳೇ ಆಗಿದ್ದರೆ ನೀವು ಏನೂ ಮಾಡೋಕಾಗಲ್ಲ ಅದು ನನ್ನ ಇಷ್ಟ ಗೊತ್ತಾಯ್ತಾ?" ಅಂದವಳೇ ಮತ್ತೆ ಗಂಟಲ ಮೇಲಿನ ಮಾತನ್ನು ಆಡಿ ಹಾಸುಗೆಯ ಮೇಲೆ ಬಿದ್ದುಕೊಂಡು ಮುಸುಕು ಎಳೆದುಕೊಂಡಳು. ಅದೂ ರಾತ್ರಿ ಎರಡು ಗಂಟೆಯ ಮೇಲೆ.

ಚಾರು ಮೈಥಿಲಿಯು ಹೇಳಿದ ಮಾತನ್ನು ಸರಿಯಾಗಿಯೇ ಕೇಳಿಸಿಕೊಂಡ; "ಆಗಬಾರದ್ದು ಯಾವುದೂ ಆಗಿಲ್ಲ. ನಾನೆಲ್ಲಾದರೂ ಹಾದಿ ತಪ್ಪುವವಳೇ ಆಗಿದ್ದರೆ ನೀವು ಏನೂ ಮಾಡೋಕಾಗಲ್ಲ." ಚಾರುವಿನ ಮನಸ್ಸು ನಿಜವಾಗಿಯೂ ಈಗ ತಿರುಗಿತು. "ಆಗಬಾರದ್ದು ಯಾವುದೂ ಆಗಿಲ್ಲ" ಎಂದು ಮೈಥಿಲಿಯು ಹೇಳಿದ್ದು ಚಾರುಗೆ. ಆದರೆ ಆಗುವುದರ ಬಗೆಗೆ ಯಾವುದಾದರೂ ಸೂಚನೆಗಳಿವೆಯೇ? ಇದು ಚಾರುಗೂ ತಿಳಿಯಲಿಲ್ಲ ಮತ್ತು ಆಗಬಾರದ್ದು ಒಂದು ಆಗಿಯೇ ತೀರುತ್ತದೆ ಮತ್ತು ಆ ಕ್ಷಣದಲ್ಲಿಯೇ ತನ್ನ ಮನಸ್ಸು ದೇವವ್ರತನಿಂದ ಗೋಡೆಗೆ ಹೊಡೆದ ಫುಟ್‌ಬಾಲಿನಂತೆ ವಾಪಾಸು ಬರಲಿದೆಯೆಂಬ ಯಾವ ಸೂಚನೆಯೂ ಮೈಥಿಲಿಗೆ ಇರಲಿಲ್ಲ. ಆಗಬಾರದ್ದು ಆಗಿದೆಯೇ ಎಂದು ಕೇಳಿದರೆ ಅಂತಹ ಯಾವುದೂ ಆಗಿಲ್ಲವೆಂಬುದು ಸ್ವತಃ ಅವಳಿಗೇ ಅಸ್ಪಷ್ಟ. ಹೆಜ್ಜೆಯಿಂದ ಹೆಜ್ಜೆಗೆ, ಕ್ಷಣದಿಂದ ಕ್ಷಣಕ್ಕೆ ಆಗಬಾರದು ಯಾವುದೂ ಆಗಿಲ್ಲ ಮತ್ತು ಆಗಬೇಕಾದ್ದನ್ನು ತಪ್ಪಿಸುವುದು ನನ್ನ ಕೈಯಲ್ಲಿಲ್ಲ ಎಂದು ಚಾರು ಯಾವಾಗ ಭಾವಿಸತೊಡಗಿದನೋ ಅದೇ ಕ್ಷಣದಲ್ಲಿ ಭಾವಿಸಿದ್ದು; ಈ ಯಾವ ಉಸಾಬರಿಯೂ ಬೇಡ. ಮೈಥಿಲಿಯ ದೆಸೆಗಾಗಿ ನಾನ್ಯಾಕೆ ಸಣ್ಣವನಾಗಬೇಕು. ಮೈಥಿಲಿಯೆಂಬ ಯಕಶ್ಚಿತ್ ಹೆಣ್ಣು, ಈಗ ದೇವವ್ರತನೇ ಬೇಕೆಂದು ಹಂಬಲಿಸಿದರೆ ನನ್ನಲ್ಲಿ ಯಾವ ಪ್ರತ್ಯುಪಾಯ ಕೂಡಾ ಇಲ್ಲ. ಆಗುವುದೆಲ್ಲ ಆಗಲಿ. ಈಗ ಯೋಚಿಸಿ ಪ್ರಯೋಜನವೇ ಇಲ್ಲ. ಕಲ್ಲು ಬಂಡೆಯೊಂದನ್ನು ಅಪರಿಮಿತವಾಗಿ ಶ್ರಮಪಟ್ಟು ಗುಡ್ಡದ ನೆತ್ತಿಯಲ್ಲಿ ನಿಲ್ಲಿಸುವ ಪ್ರಯತ್ನ ಮತ್ತೆ ಮತ್ತೆ ಉರುಳಿಬೀಳುವ ಕಲ್ಲನ್ನು ಗುಡ್ಡದ ನೆತ್ತಿಯ ಮೇಲೆ ಎಷ್ಟೊಂದು ಬಾರಿ ನಿಲ್ಲಿಸಬಹುದು? ತನ್ನ ನಿರ್ಧಾರಗಳನ್ನು ಕ್ಷಣ ಕ್ಷಣಕ್ಕೆ ಬದಲಾಯಿಸಬೇಕಾದ ಕಷ್ಟವಾದರೂ ಯಾತಕ್ಕೆ ಬರುತ್ತದೆ? ಮೈಥಿಲಿ ಮಗ್ಗುಲು ಬದಲಾಯಿಸಿ ಸಣ್ಣ ಗೊರಕೆ ಹೊಡೆಯುವುದು ಚಾರುವನ್ನು ಮತ್ತಷ್ಟು ಕುಗ್ಗಿಸಿತು. ಆದರೆ, ಮೈಥಿಲಿಯ ಸಹಕಾರ ಎಳ್ಳಷ್ಟು ಸಿಗುವುದಿಲ್ಲವೆಂದೇ ನಿಶ್ಚಿತವಾಯಿತು. ಇಲ್ಲ ಹಾದಿಯನ್ನು ಬದಲಾಯಿಸಬೇಕು. ಸದ್ಯಕ್ಕೆ ಸುಮ್ಮನಿರುವುದೇ ಲೇಸು. ಆಗ ರಾತ್ರಿ ಒಂದೂವರೆ ಗಂಟೆ! ಮೊದಲನೆಯ ಯುದ್ಧದಲ್ಲಿ ಗೆದ್ದಿದ್ದೇನೆ. ಇನ್ನುಳಿದುದು ಎರಡನೆಯ ಯುದ್ಧ. ಬೇಕೋ ಬೇಡವೋ ಆಮೇಲೆ ಯೋಚನೆ ಮಾಡಿದರಾಯಿತು.

ಮೂಲೆಯಲ್ಲಿರುವ ಕಸಬರಿಕೆ; ಹಳೆಯ ಚಪ್ಪಲಿಗಳು ಅಲ್ಲಿಯೇ ಇರಲಿ. ಬೇಕಾದಾಗ ಕೈಗೆತ್ತಿಕೊಂಡರಾಯಿತು ಎಂದು ಚಾರು ಭಾವಿಸಿದ. ಆದರೆ, ಈ ರೀತಿಯ ಭಾವಿಸಿಕೊಂಡು ಎದುರಾಳಿಯನ್ನು ಹೇಡಿಯೆಂದು ಭಾವಿಸಿಕೊಂಡದ್ದು ತಪ್ಪಾಯಿತು ಎಂದು ತಿಳಿದದ್ದು ಕೂಡಾ ಅನಂತರವೇ. ಅದೂ ಮೈಥಿಲಿಯ ಡೈರಿ ಕೈಗೆ ಸಿಕ್ಕಮೇಲೆ. ಅಂತೂ ಚಾರು ಮಧ್ಯರಾತ್ರಿಯ ಹೊತ್ತಿಗೆ ದೇವವ್ರತನು ದುರ್ಬಲನೆಂದೇ ತಿಳಿದ. ಬೇರು ಸಮೇತ ಕಿತ್ತು ಹಾಕಬೇಕೆಂಬ ಆಲೋಚನೆಯನ್ನು ಬಿಟ್ಟು ಹಾಕಿದ್ದೇ ಈ ಸಂದರ್ಭದಲ್ಲಿ. ಚಾರು ಮತ್ತೊಮ್ಮೆ ತಪ್ಪು ಮಾಡಿದ. ಅದೂ ಕಾಲಾಂತರದಲ್ಲಿ ತಿಳಿದುಕೊಂಡ ವಿಷಯ. ವಿಪರೀತವಾದ ಯಾವ ನಿಲುವುಗಳನ್ನು ತಳೆಯುವುದು ಅನವಶ್ಯಕವೆಂದು ಅನಿಸಿದ ತಕ್ಷಣವೇ ಚಾರು ಹೊರಗಡೆ ಹಾಕಿದ್ದ ದಿವಾನ್ ಕಾಟಿನ ಮೇಲೆ ಉರುಳಿದ; ಬೆಳಗಾಗುವುದು ಎಷ್ಟು ಹೊತ್ತು? ಮುಂಜಾವದ ಜೊಂಪು ನಿದ್ದೆ ಹತ್ತುವ ತನಕವೂ ಯೋಚಿಸಿದವನಿಗೆ ಬೇರಾವ ಪರ್ಯಾಯವೂ ಕಾಣಿಸಲಿಲ್ಲ. ವಿಪರೀತವಾಗಿ ಯೋಚಿಸುತ್ತಾ ರಾತ್ರಿಯಲ್ಲಿ ನಿದ್ದೆ ಮಾಡಬೇಕಾದ ಹೊತ್ತೆಲ್ಲಾ ಕಳೆದು ಮುಂಜಾವ ಜೊಂಪು ಹಿಡಿಯುತ್ತಿರುವಾಗಲೇ ಅವನಿಗೆ ಬಿದ್ದ ಕನಸೆಂದರೆ, ರೇಖಾ ಪಿಂಟೋ ಬಂದು ಅವನ ತಲೆಯನ್ನು ನಿಧಾನವಾಗಿ ಸವರಿದ್ದು. ಯಾಕೋ ಮುಂಜಾವದ ನಿದ್ದೆಯಲ್ಲಿ ಬರುವ ಕನಸು ಸತ್ಯವಾಗುತ್ತದೆಯಂತೆ! ಸುಖವಾದ ಕನಸು ಬಿದ್ದ ಮೇಲೆಯೂ ಮತ್ತೆ ಮತ್ತೆ ಅದನ್ನು ಯೋಚಿಸುವುದು ತಪ್ಪೆಂದು ಭಾವಿಸಿಕೊಂಡು ಆರು ಗಂಟೆಗೆ ಎದ್ದ. ಎದ್ದವನೇ ತನ್ನ ಯೋಚನೆಗಳನ್ನು ತಿರುಗಿಸಿಕೊಳ್ಳುವ ಪ್ರಯತ್ನದಲ್ಲಿರುವಾಗಲೇ ಅವನ ಪಕ್ಕದ ಮನೆಯ ದೇವವ್ರತನ ಮನೆಯಲ್ಲಿಯೂ ದೇವವ್ರತನು ಬೇರೊಂದು ಯೋಚನೆಯ ಮಗ್ಗುಲು ಬದಲಾಯಿಸತೊಡಗಿದ.

ದೇವವ್ರತ ಹೇಗೂ ಸುಜಾತ ಮತ್ತೆ ಒಂದು ವಾರದ ಮಟ್ಟಿಗೆ ತವರು ಮನೆಗೆ ಹೋಗುತ್ತಾಳೆ. ಅವಳು ತವರು ಮನೆಗೆ ಹೋಗಿ ಬರುವ ತನಕವೂ ಸಮಯವಿದೆ. ಚಾರುಗೆ ಅರಿವಿಲ್ಲದಂತೆಯೇ ಮೈಥಿಲಿಯು ಕೂಡಾ ಈ ದಿನ ಹೇಗಾದರೂ ಮಾಡಿ ದೇವವ್ರತನನ್ನು ಭೇಟಿಯಾಗಲೇಬೇಕು ಅಂತ ನಿಶ್ಚಯಿಸಿದಳು ಮತ್ತು ಸುಜಾತ ಅಪ್ಪ-ಅಮ್ಮರ ಜೊತೆ ಮರಳಿ ಊರಿಗೆ ಹೋಗಿ ಒಂದು ವಾರ ಬಿಟ್ಟು ಮತ್ತೆ ವಾಪಾಸಾಗಲು ಅಣಿಯಾದಳು. ಎಲ್ಲರೂ ಒಂದೊಂದು ರೀತಿಯ ನಕ್ಷೆಯನ್ನು ಹಾಕುತ್ತಿರುವಾಗ ಅದೇ ಬೆಳಿಗ್ಗೆ ಅವರೆಲ್ಲಾ ಹಾದಿಯನ್ನು ಹುಡುಕುತ್ತಾ ಮುಂದುವರಿಯುವಾಗಲೇ ಬೀದಿ ಬದಿಯ ಚರಂಡಿಯ ಪಕ್ಕ ನಿಂತಿದ್ದ ಕುಂಟ ನಾಯಿಯೊಂದು ಅನವಶ್ಯಕವಾಗಿಯೇ ಬೆಳ್ಳಂಬೆಳಿಗ್ಗೆ ವಿಕಾರವಾಗಿ ಅರಚತೊಡಗಿತು. ಈ ಅರಚಾಟದ ಅರ್ಥ ಮಾತ್ರ ಯಾರಿಗೂ ತಿಳಿಯಲಿಲ್ಲ.

"ಸಂಜೆ ನಾಲ್ಕೂವರೆಗೆ ಸರಿಯಾಗಿ ನಾನು ನಿಮ್ಮ ಮನೆಗೆ ಬರುತ್ತೇನೆ. ನಿಮ್ಮ ಜೊತೆ ಮಾತಾಡಬೇಕು ಮತ್ತು ಈ ವಿಷಯ ಯಾರಿಗೂ ಗೊತ್ತಿರುವುದಿಲ್ಲ. ಚಾರು

ಬರುವಾಗ ಆರು ಗಂಟೆಯ ಮೇಲಾಗುತ್ತದೆ. ಅದರೊಳಗಡೆಗೆ ನಿಮ್ಮೊಂದಿಗೆ ಮಾತು ಮುಗಿಯಬೇಕು. ಮೊನ್ನೆ ಅಂದರೆ ಎರಡು ದಿನ ಹಿಂದೆ ಏನಾಯಿತೋ ಅದನ್ನು ಮರೆತುಬಿಡಿ. ಅದರ ಬಗ್ಗೆ ಯೋಚಿಸಬೇಡಿ. ನಿಮ್ಮ ಹೆಂಡತಿ ನಿಮ್ಮ ಮನೆಯಲ್ಲಿ ಇಲ್ಲ ತಾನೆ?" ಇಷ್ಟನ್ನು ಫೋನಿನಲ್ಲಿ ದೇವವ್ರತನಿಗೆ ತಿಳಿಸಿದವಳು ಉಳಿದ ಯಾವ ವಿಷಯವನ್ನು ಮಾತಾಡಲಿಲ್ಲ. ದೇವವ್ರತನ ಮುಖ ಸಣ್ಣಗೆ ಕೆಂಪಾಯಿತು. ಮೈಥಿಲಿ ಯಾಕೆ ಬರುತ್ತಾಳೆ? ಅವಳು ಬರುವಾಗ ಜೊತೆಯಲ್ಲಿಯೇ ಯಾವುದಾದರೂ ಒಂದು ಕರಾಮತ್ತು ಹೊತ್ತು ತರುತ್ತಾಳೆಯೇ? ಏನಿದ್ದರೂ ನನ್ನ ಎಚ್ಚರದಲ್ಲಿ ನಾನಿರಬೇಕು ಎಂದು ದೇವವ್ರತ ಭಾವಿಸಿಕೊಂಡ. ಮೈಥಿಲಿಯ ಫೋನ್ ಬಂದ ಎರಡು ಕ್ಷಣದಲ್ಲಿಯೇ ಈವತ್ತಾದರೂ ಸಾಧ್ಯವಾಗಬಹುದಾದ ಸ್ಥಿತಿಯ ಕುರಿತು ಯೋಚಿಸಬೇಕು ಎಂದುಕೊಂಡ. ಆ ಕ್ಷಣದಲ್ಲಿಯೇ ಅವನ ಸ್ಟೆನೋ – ಸಿಸಿಲಿ ಕೇಳಿದ್ದು "ಯಾಕೆ ಸಾರ್ ಇವತ್ತು ಬಹಳ ಖುಶಿಯಲ್ಲಿದ್ದಿರಾ? ಮೊನ್ನೆ ನಿಮ್ಮ ಮಿಸೆಸ್ ಬಹಳ ಅಳ್ತಾ ಬಂದಿದ್ದರು. ಈವತ್ತು ನೋಡಿದರೆ ಬಹಳ ಖುಶಿಯಲ್ಲಿದ್ದೀರಾ?" ದೇವವ್ರತ "ಸುಮ್ಮನಿರಮ್ಮ ಅದೆಲ್ಲಾ ನಿಂಗ್ಯಾಕೆ? ಈ ಮಧ್ಯಾಹ್ನ ಮಾತ್ರ ಬೇಗ ಹೊರಗೆ ಹೋಗಬೇಕು. ಅರ್ಜೆಂಟ್ ಫೈಲ್ ಇದ್ರೆ ಮೂರುವರೆಯ ಒಳಗೆ ತಂದ್ಬಿಡು ಉಳಿದದ್ದು ನಾಳೆ ನೋಡೋಣ" ಅಂದ. ದೇವವ್ರತ ಮಾತಿನಲ್ಲಿ ತುಂಬಿತುಳುಕುತ್ತಿದ್ದ ಸಂತೋಷ ಸಿಸಿಲಿಗೂ ಅರ್ಥವಾಯಿತು. ಅದೇ ಹುಸಿನಗೆಯಲ್ಲಿ "ಆಯ್ತು ಸಾರ್" ಅಂದು ಹೊರಟಳು. ಸಿಸಿಲಿ ಹೋದ ಎರಡನೆಯ ನಿಮಿಷಕ್ಕೆ ಬಂದ ಮತ್ತೊಂದು ಫೋನ್ ಕರೆ ಮಾತ್ರ ದೇವವ್ರತನನ್ನು ತಬ್ಬಿಬ್ಬು ಮಾಡಿತು. "ಅಳಿಯಂದಿರೆ, ಇನ್ನೊಂದು ವಾರದೊಳಗೆ ನಿಮಗೆ ಬೇರೊಂದು ಮನೆಯಾಗಿರಬೇಕು." ಲಿಂಗಮೂರ್ತಿ ಸಾಹುಕಾರರು ಮೆತ್ತಗೆ ಹೇಳಿದರಾದರೂ ಆ ಮಾತಿನಲ್ಲಿ ಸಣ್ಣ ಎಚ್ಚರಿಕೆಯ ಧ್ವನಿಯೂ ಇತ್ತು. ಅದನ್ನು ದೇವವ್ರತನು ಅರ್ಥವಿಸಿಕೊಂಡ. ಮಾವ ಮತ್ತು ಅಳಿಯಂದಿರ ನಡುವಣ ಶೀತಲವಾದ ಯುದ್ಧವು ಅರ್ಥವಾಗದ್ದೇನೂ ಅಲ್ಲ. ಆದರೆ, ದೇವವ್ರತ ಮಾವನ ಫೋನ್ ಕೇಳಿದ ಮೇಲೂ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಸಂಜೆ ಮೈಥಿಲಿಯನ್ನು ಭೇಟಿಯಾಗುವ ಕೆಲಸವಿದೆ. ಅದನ್ನು ಪೂರೈಸಿಕೊಂಡು ಬಿಟ್ಟರೆ ಸರಿ. ಉಳಿದದ್ದು ಆಮೇಲೆ ನೋಡಿಕೊಳ್ಳಬಹುದು. ಇದು ದೇವವ್ರತನ ಲೆಕ್ಕಾಚಾರ. ದೇವವ್ರತ ಸಂಜೆಯಾಗುವುದನ್ನು ಕಾಯುತ್ತಾ ಕುಳಿತ. ಗಡಿಯಾರದ ಮುಳ್ಳು ಯಾಕೆ ಬೇಗ ಸರಿದಿಲ್ಲವೆಂದು ಅವನು ಗಡಿಯಾರದ ಮುಳ್ಳನ್ನು ಕಾಯುತ್ತಾ ಕುಳಿತಂತೆ ಮೈಥಿಲಿಯೂ ಗಡಿಯಾರದ ಮುಳ್ಳುಗಳನ್ನೇ ಕಾಯುತ್ತಾ ಕೂತಳು. ಅದೇ ಸಮಯಕ್ಕೆ ಚಾರುವೂ ಗಡಿಯಾರದ ಮುಳ್ಳನ್ನು ನೋಡಿದ್ದ. ಮೂವರು ಗಡಿಯಾರದ ಮುಳ್ಳನ್ನು ನೋಡುತ್ತಿರುವಾಗಲೇ ಗಡಿಯಾರದ ಮುಳ್ಳು ಚಲಿಸುತ್ತಿತ್ತು. ಕಾಲವು ಸರಿಯಬಹುದು ಮತ್ತು ಕಾಲದ ಮುಳ್ಳನ್ನು ಯಾರೂ ಹಿಡಿದು ನಿಲ್ಲಿಸಲಾರರು.

ಆದರೆ, ಕಾಲಕ್ಕೆ ಕಾಯುತ್ತಾ ಕೂತ ಮೂವರಲ್ಲಿಯೂ ಸಂಜೆಯೆಂಬ ಕಾಲದ ನಿಗದಿತ ಸಮಯ ಮಾತ್ರ ಬೇರೆ ಬೇರೆ ಕಾರಣಗಳಿಂದಲೇ ಅವರ ಮನಸ್ಸಿನಲ್ಲಿ ಉಳಿಯುವಂತಾಯಿತು. ಸರಿಯುತ್ತಿರುವ ಕಾಲದ ಲೆಕ್ಕಾಚಾರವನ್ನು ಮಾತ್ರ ಆ ಮೂವರು – ಚಾರು, ಮೈಥಿಲಿ ಮತ್ತು ದೇವವ್ರತ ಕೈಹಿಡಿದು ಕರೆದೊಯ್ಯಲಿಲ್ಲ. ಕಾಲವೇ ಅವರನ್ನು ಆ ದಿನ ಸಂಜೆ ಕೊಚ್ಚಿಕೊಂಡೊಯ್ಯಲಿತ್ತು.

ಸಂಜೆ ನಾಲ್ಕೂವರೆಗೆ ಬಂದ ದೇವವ್ರತ ಕೈಕಾಲು ಮುಖ ತೊಳೆದು ಮಾಮೂಲಿನಂತೆ ಮುಖ ತೊಳೆದು ಸ್ವಲ್ಪ ಮುಖಕ್ಕೆ ಪೌಡರ್ ಹಚ್ಚಿಕೊಂಡು ಮೈಥಿಲಿಗೆ ಮನೆಯಲ್ಲಿ ಕಾಯುತ್ತಾ ಕುಳಿತ. ಸುಮ್ಮನೇ ಕಾಯುತ್ತಾ ಕುಳಿತುಕೊಳ್ಳುವುದು ವ್ಯರ್ಥವೆಂದು ಭಾವಿಸಿ ಅಡುಗೆ ಮನೆಯೊಳಗೆ ಹೋಗಿ ಮಂಡಕ್ಕಿ, ಒಂದಿಷ್ಟು ಈರುಳ್ಳಿ ತಂದಿಟ್ಟುಕೊಂಡು ಕೂತ. ಮತ್ತೊಮ್ಮೆ ವಾಚು ನೋಡಿಕೊಂಡ. ಐದು ಗಂಟೆಗೆ ಇನ್ನು ಕೇವಲ ಹದಿನೈದು ನಿಮಿಷಗಳಿದೆ. ಮನೆಯ ಬಾಗಿಲನ್ನು ಅರ್ಧ ತೆರೆದು ಬಂದ. ತಾನು ಬಂದಿದ್ದೇನೆ ಎಂದು ತಿಳಿದಿರಲಿ ಎಂದು ಭಾವಿಸಿಕೊಂಡೇ ಕಿಟಕಿಯನ್ನು ತೆರೆದಿಟ್ಟ ದೇವವ್ರತನಿಗೆ ವಿಪರೀತವಾದ ಚಡಪಡಿಕೆ. ಅದೇ ಸಮಯಕ್ಕೆ ಸರಿಯಾಗಿ ಮೈಥಿಲಿಯು ಬಂದವಳು, ಬಾಗಿಲನ್ನು ಸರಿಸಿ ಒಳಗೇ ಬಂದೇ ಬಿಟ್ಟಳು. ಅವಳು ಮನೆಯೊಳಗೆ ಬಂದ ಕೂಡಲೇ ದೇವವ್ರತನ ಕಣ್ಣಲ್ಲಿ ಖುಶಿಯರಳಿತು. 'ಬನ್ನಿ ಮೈಥಿಲಿ, ನಾನು ನಿಮಗಾಗಿಯೇ ಕಾಯುತ್ತಾ ಕೂತಿದ್ದೆ' ಎಂದ ದೇವವ್ರತ ಬಾಗಿಲನ್ನು ಮುಚ್ಚಿದ. ಮೈಥಿಲಿಯಲ್ಲಿಯೂ ಸಣ್ಣನೆಯ ನಡುಕ ಮತ್ತು ಯಾವುದೋ ಒಂದು ರೀತಿಯ ಆತಂಕ. ಮೈಥಿಲಿಯು ಸೋಫಾದಲ್ಲಿ ಕೂತವಳೇ 'ಒಂದು ಲೋಟ ನೀರು ಬೇಕಿತ್ತು' ಅಂದ. ಸುಧಾರಿಸಿಕೊಳ್ಳುವುದಕ್ಕೆ ಅವಳು ಕಂಡುಕೊಂಡ ಉಪಾಯವದು. ದೇವವ್ರತ ನಿಷ್ಠೆಯಿಂದ ಒಳಗಡೆ ಹೋಗಿ ಒಂದು ಲೋಟ ನೀರು ತಂದುಕೊಟ್ಟ. ನೀರನ್ನು ಗಟಗಟನೆ ಕುಡಿದವಳೇ ಮೈಥಿಲಿ ಲೋಟವನ್ನು ಕೆಳಗಿಟ್ಟು 'ನಾನು ನಿಮ್ಮೊಂದಿಗೆ ಮಾತಾಡಲೆಂದೇ ಬಂದೆ' ಎಂದಳು. ದೇವವ್ರತ ಮೈಥಿಲಿಯ ಸಮೀಪ ಬಂದವನೇ ಅವಳ ಬೆನ್ನು ತಡವಿದ. ಮೈಥಿಲಿಗೆ ಏನಾಗುತ್ತಿದೆಯೆಂದು ಯೋಚಿಸುತ್ತಿರುವಷ್ಟರಲ್ಲಿ ದೇವವ್ರತ ಈ ಕೆಲಸಕ್ಕೆ ಶುರು ಹಚ್ಚಿಯಾಗಿತ್ತು. ಮೈಥಿಲಿಯಲ್ಲಿಯೂ ಸಣ್ಣಗೆ ನವಿರೇಳುವ ಸಂಭ್ರಮ. ದೇವವ್ರತ ಮತ್ತೆ ಮುಂದುವರಿಯಬೇಕೆಂದು ಭಾವಿಸಿಕೊಂಡು, ಮೈಥಿಲಿಯ ಮುಖದ ಹತ್ತಿರ ತನ್ನ ಮುಖವನ್ನು ತಂದ. ದೇವವ್ರತನ ಬಾಯಿಂದ ಬರೀ ಈರುಳ್ಳಿಯ ವಾಸನೆ. ಇಬ್ಬರೂ ಮುಂದುವರಿಯಬೇಕೆಂದುಕೊಳ್ಳುವಷ್ಟರಲ್ಲಿ ಮೈಥಿಲಿಗೆ ಅವಳಮ್ಮ ಪ್ರಸ್ತದ ದಿನ ಹೇಳಿದ ಮಾತು ನೆನಪಿಗೆ ಬಂತು ಮತ್ತು ದೇವವ್ರತ ಆವರಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನವೇ ಒಂಥರಾ ವಾಕರಿಕೆಯನ್ನು ತಂದುಬಿಟ್ಟಿತು. ಪಟ್ಟನೇ ಎದ್ದವಳೇ ಗಟ್ಟಿಯಾಗಿ "ದೇವವ್ರತ ಬೇಡಿ, ನಾನು ನಿಮ್ಮೊಂದಿಗೆ ಏನೋ ಮಾತಾಡುವುದಕ್ಕೆ

ಬಂದೆ. ಆದರೆ, ನನ್ನ ಮಾತು ಕೇಳುವುದು ನಿಮಗೆ ಇಷ್ಟವಿಲ್ಲ. ಬರೀ ಇದೇ ಬೇಕೇನೋ? ಸಾರಿ ನಾನಿನ್ನು ಬರುತ್ತೇನೆ" ಎಂದವಳು ದೇವವ್ರತನ ಮನೆಯಿಂದ ಹೊರಟಳು. ದೇವವ್ರತ ತಬ್ಬಿಬ್ಬಾದ. ಕೊನೆಯ ಕ್ಷಣದಲ್ಲಿ ಮೈಥಿಲಿ ಹೀಗೆ ಮಾಡಿಬಿಟ್ಟಳಲ್ಲಾ ಎಂದು ದೇವವ್ರತನಿಗೆ ಅನಿಸಿದರೆ, ತನ್ನ ಮೈಮೇಲೆಲ್ಲಾ ದೇವವ್ರತ ತಿಂದ ಈರುಳ್ಳಿಯ ವಾಸನೆಯೇ ಬರುತ್ತಿದೆಯೆಂದು ಮೈಥಿಲಿಗೆ ಅನಿಸಿ, ಮನೆಗೆ ಬಂದವಳೇ ಸಂಜೆಯ ಸ್ನಾನಕ್ಕೆ ಇಳಿದಳು.

ಸಂಜೆ ಸ್ನಾನ ಮಾಡುತ್ತಿದ್ದ ಮೈಥಿಲಿಯ ಮನಸ್ಸಿನಲ್ಲಿ ಮಾತ್ರ "ನೆಮ್ಮದಿ, ಸುಖ ನಮಗಾಗಿ. ನಾವು ಮಜಾ ಮಾಡಬೇಕು." ಈ ಮಾತುಗಳೇ ಚುಚ್ಚಿಕೊಂಡಿದ್ದವು. ದೇವವ್ರತನನ್ನು ದೂರ ಸರಿಸಿ ಬಂದವಳ ಮನಸ್ಸಿನಲ್ಲಿ ಅವನದೇ ಮಾತುಗಳು ಮತ್ತು ಆ ದಿನದ ರಾತ್ರಿ ಚಾರು ಮತ್ತು ಮೈಥಿಲಿಯರದಾಗಿತ್ತು. ದೇವವ್ರತ ಒಂದೆರಡು ದಿನಗಳಲ್ಲಿ ಮನೆಯನ್ನು ಬದಲಾಯಿಸಬೇಕೆಂದುಕೊಂಡ. ಆದರೆ, ದೇವವ್ರತನ ಮಾತುಗಳು; ಅವನ ಬಾಯಿಂದ ಬಂದ ಈರುಳ್ಳಿಯ ವಾಸನೆ ಮಾತ್ರ ಮೈಥಿಲಿಯ ಎದೆಯಾಳದಲ್ಲಿ ಸಣ್ಣಗೆ ಆಟವಾಡಲು ಶುರು ಮಾಡಿದ್ದವು. ಅದು ಮುಗಿಯುವ ಲಕ್ಷಣ ಕಾಣಿಸಲಿಲ್ಲ. ಮತ್ತೆ ಮತ್ತೆ ಭುಗಿಲೇಳುವ ರೀತಿಯದಾಗಿತ್ತು. ಚಾರುವಿನ ಪಕ್ಕದಲ್ಲಿ ಎಲ್ಲಾ ಕೆಲಸ ಮುಗಿದ ಮೈಥಿಲಿ ಒಂದು ಸುದೀರ್ಘವಾದ ನಿಟ್ಟುಸಿರು ಬಿಟ್ಟಳು – ಮತ್ತೊಂದು ಅಂಕದ ಪರದೆ ತೆಗೆಯುವ ತನಕವೂ ಅವಳ ನಿಟ್ಟುಸಿರು ನೇಪಥ್ಯದಲ್ಲಿಯೇ ಉಳಿದಿತ್ತು.

ಬೆನ್ನು ಮೂಳೆಯ ನೋವು

-೧೫-

ಸೊಂಟದ ತಿರುವಿನಲ್ಲಿ; ಬೆನ್ನಿನ ಮೂಳೆಯಲ್ಲಿ ಸಹಿಸಲಸಾಧ್ಯವಾದ ನೋವು. ಗಂಟಲಿನ ಬುಡದಲ್ಲಿಯೇ ಯಾರೋ ಕೈ ಬೆರಳು ಹಾಕಿದಂತೆ ವಾಕರಿಕೆಯ ಅನುಭವ: ಕೈ-ಕಾಲು ಬತ್ತಿದಂತೆ, ಸುಸ್ತು; ಅನ್ನದ ಅಗುಳನ್ನು ನೆನಸಿಕೊಂಡರೆ ಸಾಕು ವಾಂತಿಯೇ ಬಾಯಿಗೆ ಬಂದಂಥ ಅನಿಸಿಕೆ-ಯಾವುದೂ ಬೇಡವೆಂದು ಅನಿಸಿದೆ. ತಲೆಯನ್ನು ಬಾಚಿಕೊಳ್ಳುವುದಕ್ಕೆ ಮನಸ್ಸಿಲ್ಲ. ದೇಹದಲ್ಲಿ ಪೂರ್ತಿಯಾಗಿ ನೋವು ಮಾತ್ರವೇ ಉಳಿದಿದೆ. ಮಲಗಿದಲ್ಲಿಂದ ಏಳುವ ಮನಸ್ಸು ಕೂಡಾ ಇಲ್ಲ. ಕಿಟಕಿಯ ಬಾಗಿಲು ಕೂಡಾ ತೆರೆಯದೆ ಹಾಸುಗೆಯ ಮೇಲೆ ಮುದುಡಿ, ನೀರಲ್ಲಿ ಬಿದ್ದ ಗುಬ್ಬಿ ಹಕ್ಕಿಯಂತೆ ಮಲಗಿದವಳಿಗೆ ತಲೆಯ ಮೇಲೆ ಯಾರೋ ಸುತ್ತಿಗೆಯಲ್ಲಿ ಹೊಡೆದಂತೆ ಅನಿಸುತ್ತಿದೆ. ಫ್ಯಾನು ಗರಗರನೆ ತಿರುಗುವ ಸದ್ದು, ಸುಸ್ತು ಜೀವ ಹಿಂಡುತ್ತಿದೆ. ಯಾರಾದರೂ ಬಿಸಿ ಬಿಸಿಯಾದ ಕಾಫಿ ಮಾಡಿ ಕೊಟ್ಟಿದ್ದರೆ ಕುಡಿಯ ಬಹುದಿತ್ತು. ಮನೆಯಲ್ಲಿ ಬಳಲಿದ ಜೀವಕ್ಕೆ ಗುಟುಕು ಎರೆಯುವವರಿಲ್ಲ.

ತಿಂಗಳ ಶಾಪ ಹೆಣ್ಣಿಗೇಕೆ ಬೇಕು? ಗಂಡಿಗೇಕೆ ತಿಂಗಳ ಶಾಪವಿಲ್ಲ, ತಿಂಗಳು-ತಿಂಗಳು ಈ ನೋವು ಅನುಭವಿಸಬೇಕು. ತಿಂಗಳಿನ ಸ್ರಾವದಲ್ಲಿಯೇ ಜೀವ ಸಾಕಾಗಿ ಬಿಟ್ಟಿದೆ. ಕಣ್ಣಿನ ಕರೆಯಲ್ಲಿ ಸುರಿಯುತ್ತಿರುವ ಅಳುವನ್ನು ಹೊದ್ದುಕೊಂಡು ಬೆಡ್‌ಶೀಟ್‌ನಲ್ಲಿ ಒರಸಿಕೊಂಡವಳಿಗೆ ಏನೇನೋ ಚಿಂತೆ. ತಡೆಯಲಾಗದ ನೋವಿನಲ್ಲಿ ಹೊರಳಾಡುವ ಹುಡುಗಿಯ ಹೆಸರು ವಿದುಲಾ. ಮೂರನೆಯ ಮುಖ್ಯ ರಸ್ತೆ-ಹನ್ನೆರಡನೆಯ ತಿರುವಿನ ನಂಬರ್ ೧೮/೨ರ ಹಿಂಬದಿಯ ಪುಟ್ಟ ಕೋಣೆಯಲ್ಲಿ ಮಲಗಿರುವವಳಿಗೆ ತಿಂಗಳ ಮೊದಲಿನ ಸಂಕಟ.

ಈ ಮನೆಯ ಮತ್ತು ಪಕ್ಕದ ಮನೆಯ ಸುತ್ತ ಹಾಕಿರುವ ಗಿಡಗಳ ಸಂದಿಯಲ್ಲಿ ತೂರಿಬರುವ ಬೆಳಕಿಗೆ ಯಾವುದೇ ಸಿಡುಕತನವಿಲ್ಲ. ದಾಸವಾಳದ ಗಿಡದಲ್ಲಿ ಅರಳಿರುವ ಹೂಗಳಿಗೆ ಕೈ ಹಾಕುವವರೂ ಅಲ್ಲ. ಎದುರು ಮನೆಯಲ್ಲಿ ವಾಸವಾಗಿರುವವರು ಬೆಳಗಿನ ಅವಸರದಲ್ಲಿ ಕಚೇರಿಗೆ ಹೊರಟರೆ ಮತ್ತೆ ಬರುವುದು ಸೂರ್ಯ ಕರಗಿದ ಮೇಲೆ, ಒಂದಿಷ್ಟೂ ಸದ್ದಿಲ್ಲ. ಆಚೆಯ ಕಂಪೌಂಡಿನಲ್ಲಿರುವ ವಯಸ್ಸಾದ ದಂಪತಿಗಳು ಹಿತ್ತಲಲ್ಲಿ ಏನೋ ಸಣ್ಣಗೆ ಮಾತಾಡುವುದು ಫ್ಯಾನಿನ ಸದ್ದಿನ ನಡುವೆ ಕೇಳಿ ಬರುತ್ತಿದೆ-ಅಷ್ಟೆ! ಉಕ್ಕಿಬರುತ್ತಿರುವ ಕಣ್ಣೀರನ್ನು ಒರೆಸಿಕೊಂಡೇ ಎದ್ದು ಕುಳಿತಳು. ಗಂಟೆ ಎಷ್ಟಾಯಿತು ಎಂಬುದರ ಅರಿವು ಇಲ್ಲ. ಮೈಯ್ಯ ರಕ್ತವೇ ಪೂರ್ತಿ ಬಸಿದು ಕಾಲುವೆಯಲ್ಲಿ ಹೋಗುತ್ತಿದೆಯೆಂಬ ಯಾತನೆಯಿಂದಾಗಿ ಮತ್ತೊಮ್ಮೆ ಮೈ ಸಡಿಲ ಮಾಡಿಕೊಳ್ಳುವ ಪ್ರಯತ್ನ ಮಾಡಿದಳು. ಬಿಚ್ಚಿದ್ದ ಕೂದಲನ್ನು ಹಾಗೆಯೇ ಗಂಟು ಹಾಕಿಕೊಂಡು ಸರಿದಿದ್ದ ನೈಟಿಯನ್ನು ಎಳೆದುಕೊಂಡಳು. "ತಪ್ಪು ಮಾಡಿದರೆ ಕೊಪ್ಪಕ್ಕೆ ಹಾಕು" "ಜ್ವರಕ್ಕೆ ತವರೂರು ಕೊಪ್ಪ" ಎನ್ನುವ ಹೇಳಿಕೆಗೆ ಪ್ರಸಿದ್ದವಾದ ಕೊಪ್ಪದ ಹತ್ತಿರದಿಂದ ಬಂದ ಹುಡುಗಿ. ಕಗ್ಗಾಡುವಿನ ನಡುವಿಂದ ಎದ್ದು ಬಂದವಳಿಗೆ ನೂರೊಂದು ತಿರುವುಗಳ ರಸ್ತೆಯಂದರೆ ಅಪರಿಚಿತ. ನಸುವಾದ ಹಸುರು ಕಣ್ಣು ಅವಳಿಗೆ. ತಿಂಗಳ ಸಂಕಟಕ್ಕೆ ಮಾಡದ ಔಷಧಿಯಿಲ್ಲ. ನಾಟಿ ಬೇರುಗಳಿಂದ ಹಿಡಿದು ಕ್ಯಾಪ್ಸೂಲ್ ತನಕ. ತಿಂಗಳ ಸಂಕಟವನ್ನು ಡಾಕ್ಟರರ ಹತ್ತಿರ ಹೇಳುವಾಗ ಕರುಳು ಬಾಯಿಗೆ ಬಂದಂತೆ ಆಗುತ್ತದೆ. ವರ್ಷವೀಗ ಇಪ್ಪತ್ತೊಂದು ಮುಗುಚಿ ಇಪ್ಪತ್ತೆರಡಕ್ಕೆ ಬೀಳಲಿದೆ. ಯಾವ ಡಾಕ್ಟ್ರ ಹತ್ತಿರ ಹೋದರೂ ಮದುವೆಯಾದ ಮೇಲೆ ಸರಿಯಾಗಬಹುದು ಅಂತ ಹೇಳ್ತಾರೆ. ನಸು ಹಸಿರು ಕಣ್ಣಿನ ಕೆಳಗೆ ಕಪ್ಪಾಗುತ್ತಿದೆ. ನಿತ್ರಾಣದಿಂದಲೇ ಇರಬಹುದು. ಊರಲ್ಲಿ ಇದ್ದಿದ್ದರೆ ಇಷ್ಟು ಹೊತ್ತಿಗೆ ಅಮ್ಮ ಬಿಸಿಬಿಸಿಯಾದ ಕಾಫಿಯನ್ನೋ, ಕಷಾಯವನ್ನೋ ಮಾಡಿಕೊಡುತ್ತಿದ್ದಳು. ಇಲ್ಲೀಗ ದಿಕ್ಕು ದೆಸೆಯಿಲ್ಲದ ಪರದೇಶಿಯಾಗಿ ಬಿಟ್ಟಿದ್ದೇನೆ. ಬಾದಾಮಿಯಾಕಾರ ಮುಖ, ಗುಂಗುರು ಕೂದಲು: ಮಧ್ಯಮ ಎತ್ತರ: ಸೊಂಟದ ಗಾತ್ರ ಹಿಗ್ಗಿಲ್ಲ: ಕುತ್ತಿಗೆಯ ಬಲಭಾಗದಲ್ಲಿ ಸಣ್ಣ ಮಚ್ಚೆ: ಕೊರಳಲ್ಲಿ ಅಮ್ಮ ಕೊಟ್ಟ ಒಂದೆಳೆಯ ಸರ: ಹತ್ತಿಯ

ಚೂಡಿದಾರವೆಂದರೆ ಬಲು ಇಷ್ಟ. ಅದರಲ್ಲಿಯೂ ಬಿಳಿಯ ಮೈಗೆ ಬೇರೆ ಡಿಸೈನ್ ಇದ್ದರಂತೂ ಬಹು ಪ್ರೀತಿ. ಚೂಡಿದಾರಕ್ಕೆ ಇಸ್ತ್ರಿ ಹಾಕಲೇಬೇಕೆಂಬ ಯಾವ ನಿಯಮವೂ ಇಲ್ಲ. ಆದರೆ ಒಮ್ಮೆ ಹಾಕಿದ ಬಟ್ಟೆಯನ್ನು ತೊಳೆಯದೆ ಮತ್ತೊಮ್ಮೆ ಹಾಕಲು ಮನಸ್ಸು ಒಪ್ಪುವುದಿಲ್ಲ. ಊರಿಂದ ಬರುವಾಗ ತಂದಿರುವ ಸೀಗೆಕಾಯಿ ಪುಡಿಯ ಸ್ನಾನ ಪ್ರತೀ ಭಾನುವಾರ. ಮಧ್ಯಾಹ್ನ ಅಚ್ಚ ಬಿಳಿಯ ದಾಸವಾಳದ ಎಲೆಯನ್ನು ಜಜ್ಜಿ ಅದರ ರಸವನ್ನು ತಲೆಗೆಲ್ಲಾ ಮೆತ್ತಿಕೊಂಡು ಎಳ್ಳೆಣ್ಣೆಯನ್ನು ಹಚ್ಚಿಕೊಂಡು ಮಧ್ಯಾಹ್ನ ಎರಡುವರೆಗೆ ಸ್ನಾನಕ್ಕಿಳಿದರೆ ಮೂರುವರೆಯ ತನಕ ಅದೇ ಕೆಲಸ. ಸ್ನಾನ ಮಾಡಿ ಮಲಗಿದರೆ ಮತ್ತೆ ಎಚ್ಚರಾಗುವುದು ಐದು ಗಂಟೆಗೆ, ಭಾನುವಾರ ದಿನವಿಡೀ ಮನೆಯಿಂದ ಹೊರಗೆ ಹೋಗುವ ಅಭ್ಯಾಸವೇ ಇಲ್ಲ. ಉಳಿದೆಲ್ಲಾ ದಿನಗಳಲ್ಲಿ ಬೆಳಗ್ಗೆ ಆರೂವರೆಗೆ ಸ್ನಾನ ಮುಗಿಸಿ ಊರಿಂದ ಬರುವಾಗ ತಂದಿರುವ ವೆಂಕಟೇಶ್ವರನ ಫೋಟೋಕ್ಕೆ ಊದುಕಡ್ಡಿ ಹಚ್ಚುವುದು: ಪ್ರಾರ್ಥಿಸುವುದು ವಿದುಲಾ ನಡೆಸಿಕೊಂಡು ಬಂದಿರುವ ರೂಢಿ. ಮನೆಯಿಂದ ಹೊರಗೆ ಹೋಗುವ ತಲೆಯನ್ನು ಕಂತು ಹಾಕಿದರೆ ಮತ್ತೆ ಎತ್ತುವ ಅಭ್ಯಾಸವಿಲ್ಲ. ಚೂಡಿದಾರ್‌ನ ಶಾಲು ಮೈ ತುಂಬಾ ಹೊದ್ದುಕೊಳ್ಳಬೇಕು. ಕೊಂಚ ಭುಜ ಬಗ್ಗಿಸಿ ನಡೆಯದೆ ಹೋದರೆ ಎಲ್ಲರ ದೃಷ್ಟಿಯೂ ತನ್ನ ಮೇಲಿರಬಹುದೆಂಬ ಅನವಶ್ಯಕ ಸಂಕೋಚ. ರಾತ್ರಿಯ ಹೊತ್ತು ಮನೆಯ ಬಾಗಿಲ ಚಿಲಕ ಎರಡೆರಡು ಸಾರಿ ನೋಡಿ ಮಬ್ಬು ಬೆಳಕಿನಲ್ಲಿಯೇ ನಿದ್ದೆ ಹೋಗುವುದು ಅವಳಿಗೆ ಅಭ್ಯಾಸವಾಗಿದೆ. ತುಂಬಾ ಜನರ ನಡುವೆ ಬೆರೆಯುವುದೆಂದರೆ ಹೇಗೆ ಆಗುವುದಿಲ್ಲವೋ ಅದೇ ರೀತಿ ಜನಜಂಗುಳಿಯಲ್ಲಿ ಮಾತಾಡುವುದು ವಿಪರೀತ ಸಂಕೋಚ, ಒಂಥರಾ ಭಯ, ಕೈ ಬೆವರುತ್ತದೆ, ಗಂಟಲು ಆರುತ್ತದೆ, ಜಿರಳೆಯನ್ನು ಕಂಡರಾಗುವುದಿಲ್ಲ, ಇಲಿಯನ್ನು ನೋಡಿದರೆ ತೀರಾ ಅಸಹ್ಯ. ಸಿಹಿತಿಂಡಿಗಿಂತ ಖಾರವೇ ಹೆಚ್ಚು ರುಚಿ. ಸೊಪ್ಪಿನ ಸಾರು ಮತ್ತು ಪತ್ರೊಡೆಯೆಂದರೆ ಬಾಯಲ್ಲಿ ನೀರೂರುತ್ತದೆ. ವಿದುಲಾ ಎದ್ದವಳು ತನ್ನ ಗುಣಾವಗುಣಗಳನ್ನು ಕಣ್ಣೀರಿನ ಮಧ್ಯೆ ನೆನಪಿಸಿಕೊಂಡಳು. ಇಲ್ಲಿ ಯಾರೂ ಇಲ್ಲವಾದ ಸ್ಥಿತಿಯ ಬಗ್ಗೆ ಬೇಸರ ಪಟ್ಟುಕೊಂಡಳು. ಇಂಥಾ ದಿನಗಳಲ್ಲಿ ಎಷ್ಟು ಅಳಬಾರದು ಎಂದು ಭಾವಿಸಿಕೊಂಡರೂ–ಸುಮ್ಮ ಸುಮ್ಮನೆ ಅಳು ಬಂದುಬಿಡುತ್ತದೆ. ಅದು ನಿಯಂತ್ರಣ ತಪ್ಪಿ ಹೊರಗೆ ಕೊಂಚ ಸದ್ದಾದರೂ ಭಯವಾಗುತ್ತದೆ. ವಿದುಲಾ ಕಷ್ಟಪಟ್ಟು ಎದ್ದು ಬಂದು ಸ್ಟೌ ಉರಿಸಿದಳು, ಪಾತ್ರೆಯನ್ನು ಒಲೆಯ ಮೇಲಿಟ್ಟು ಅದರ ಕುದಿ ಬರುವ ತನಕ ಅಲ್ಲಿಯೇ ಕೂತಿರೋಣವೆಂದು ಗೋಡೆಗೊರಗಿ ನೆಲದ ಮೇಲೆ ಕಾಲು ನೀಡಿ ಕುಳಿತಳು. ಹಲ್ಲುಜ್ಜಿಕೊಳ್ಳುವ ಮನಸ್ಸು ಕೂಡಾ ಇಲ್ಲ, ಒಲೆಯ ಮೇಲಿನ ನೀರು ಕುದಿ ಬಂದು ಹೊಡೆ ಮರಳತೊಡಗಿತು. ವಿದುಲಾ ಅದು ಹೊಡೆಮರಳುತ್ತಿರುವುದನ್ನು ನೋಡಿ ಸಕ್ಕರೆಯನ್ನು ಹಾಕಬೇಕೆಂದು ಡಬ್ಬ ಹುಡುಕಿದಳು. ಸಕ್ಕರೆ

ಖಾಲಿಯಾಗಿದೆ. ಸಕ್ಕರೆಯಿಲ್ಲದ ಕಹಿಯಾದ ಕಾಫಿಯನ್ನು ಕುಡಿಯಬೇಕೆಂದು ಕೊಂಡವಳಿಗೆ ರಾತ್ರಿ ತೆಗೆದಿರಿಸಿದ ಹಾಲು ಒಡೆದುಹೋಗಿದೆಯೆಂದು ತಿಳಿಯಿತು. ಕಹಿಯಾದ ಕಪ್ಪು ಕಾಫಿಯನ್ನು ಎರಡು ಗುಟುಕು ಕುಡಿದವಳಿಗೆ ಮತ್ತೆ ವಾಕರಿಕೆ ಬಂತು. ಲೋಟವನ್ನು ಅಡುಗೆಯ ಮನೆಯಲ್ಲಿಯೇ ಇಟ್ಟು– ಹೊಟ್ಟೆಯನ್ನು ನೇವರಿಸಿಕೊಳ್ಳುತ್ತಾ ಬಂದು ಮಲಗಿದವಳಿಗೆ ಕಣ್ಣು ಮಂಜಾದಂತೆ ಅನಿಸಿತು. ಪರದಾಡುತ್ತಲೇ ತಲೆದಿಂಬಿನಡಿಯಲ್ಲಿರಿಸಿದ್ದ ವಿಕ್ಸ್ ತೆಗೆದು ಹಣೆಗೆ ಹಚ್ಚಿಕೊಂಡಳು. ವೇಲನ್ನು ತೆಗೆದು ಹಣೆಗೆ ಬಿಗಿಯಾಗಿ ಕಟ್ಟಿಕೊಂಡಳು. "ಯಾರಿಗೂ ಬೇಡಪ್ಪಾ ಈ ಶಿಕ್ಷೆ" ಎಂದು ಮನಸ್ಸಿನಲ್ಲಿಯೇ ಭಾವಿಸಿಕೊಂಡಳು. ಬಾಗಿಲನ್ನು ಯಾರೋ ಹೊಡೆದಂತೆ ಭಾಸವಾಯಿತು. ಒಮ್ಮೆಲೇ ಹೆದರಿಕೆಯಾದಂತೆ ಅನಿಸಿತು, ಮತ್ತೊಮ್ಮೆ ಬಾಗಿಲನ ಟಕಟಕ ಸದ್ದು ಕೇಳಿದ ಮೇಲೆ ಎದ್ದಳು, ಮತ್ತೊಮ್ಮೆ ನೈಟಿಯ ಮೇಲೆ ಹಣೆಗೆ ಸುತ್ತಿದ್ದ ವೇಲನ್ನೆ ಹೆಗಲಿಗೆ ಸುತ್ತು ಬರುವಂತೆ ಹೊದ್ದುಕೊಂಡು ಬಂದು ಬಾಗಿಲು ತೆರೆದಳು; "ಏನೇ, ಹಗಲು ಮತ್ತು ರಾತ್ರಿಗೆ ವ್ಯತ್ಯಾಸವಿದೆ ಕಣೆ" ಎನ್ನುತ್ತಾ ಕಾಲಿಗೆ ಚಕ್ರ ಕಟ್ಟಿಕೊಂಡು ಸುತ್ತುವ ರೋಹಿದಾಸ ಒಳಗೆ ಬಂದ. ವಿದುಲಾ ಒಂದು ಸಣ್ಣನೆಯ ಬಿಳುಚಿದ ನಗೆಯನ್ನು ಬೀರಿದಳು. ಕಂಪೌಂಡಿನ ಆಚೆಗೆ ಇರುವ ನಿವೃತ್ತ– ಗಂಡಸು "ಏನಮ್ಮ, ಈಗ ಎಚ್ಚರಾಯ್ತೇನೊ? ಊರಿಂದ ನೆಂಟರು ಬಂದರೇನೊ? ಆಗಿಂದ ಬಾಗಿಲು ತಟ್ತಾಯಿದ್ದರು. ನಿನ್ಗೆ ಒಳ್ಳೆಯ ನಿದ್ದೆ ಅಂತ ಕಾಣ್ಸತ್ತೆ, ಇವತ್ತು ರಜಾನಾ?" ಎಂದು ಹೇಳುತ್ತಾ ಕಂಪೌಂಡಿನ ಗೋಡೆಯ ಮೇಲೆ ಇಣುಕಿ ನೋಡಿದ. ವಿದುಲಾ 'ಹೌದು'ಎನ್ನುವಂತೆ ತಲೆಯಾಡಿಸಿದಳು. ಮನಸ್ಸಿನಲ್ಲಿಯೇ ಅವನ ಬಗ್ಗೆ ಬೈದಳು, ಈ ಜನ ಅನವಶ್ಯಕ ತಲೆ ತೂರಿಸುತ್ತಿದ್ದಾರೆ ಎಂದುಕೊಂಡಳಾದರೂ ಯಾವುದನ್ನೂ ಕಡ್ಡಿ ಮುರಿದ ಹಾಗೆ ಹೇಳದಿರುವ ವಿದುಲಾ ಮೆಲ್ಲನೆ ಬಾಗಿಲು ಹಾಕಿದಳು. ರೋಹಿದಾಸ ತನ್ನ ಬ್ಯಾಗನ್ನು ಇರಿಸಿಕೊಂಡು ಶರ್ಟಿನ ಬಟನ್ ತೆಗೆಯುತ್ತಿದ್ದ. "ರಾತ್ರಿಯ ಬಸ್ಸಿಗೆ ಊರಿಂದ ಹೊರಟೆ, ಅದೂ ಕೆಂಪು ಬಸ್ಸು, ಹತ್ತಾರು ಬಾರಿ ಕಿಟಕಿಯ ಸರಳುಗಳಿಗೆ ಹೊಡಕೊಂಡಿದ್ದೇ ಬಂತು. ನಿದ್ದೆಯಿಲ್ಲ, ನನಗೆ ನಿದ್ದೆಯಿಲ್ಲ, ನಿನಗೆ ನಿದ್ದೆ ಹೆಚ್ಚಾಯಿತು. ಬಾವಲಿಗಳು ಹಾಗೆ ಕಣೇ, ಹಗಲು ನಿದ್ದೆ ಮಾಡುತ್ತವೆ, ಬಾವಲಿಗಳಂದ್ರೆ ನಿಂಗೆ ತುಂಬಾ ಇಷ್ಟ ಅಲ್ವಾ?" ಎಂದ. ವಿದುಲಾ 'ಉಷಾರಿಲ್ವೋ' ಎಂದು ಮಾತ್ರ ಹೇಳಿದಳು. ರೋಹಿದಾಸ 'ಸಾರಿ' ಎಂದವನೇ ಬ್ಯಾಗಿನಿಂದ ಟೂತ್‌ಬ್ರಶ್ ಕೈ ಗೆತ್ತಿಕೊಂಡ. ವಿದುಲಾ 'ನಾನು ಸ್ವಲ್ಪ ಹೊತ್ತು ಮಲಗಿ ಬಿಡ್ತೇನೆ' ಅಂದಳು. ರೋಹಿದಾಸ: 'ಟೀ ಪುಡಿ, ಹಾಲು ಎಲ್ಲಿದೆಯೆಂದು ಹೇಳಿ ಮಲಗು' ಎಂದ. 'ಈವತ್ತು ಹಾಲೇ ತಗೊಂಡಿಲ್ಲ, ನೀನೇ ಹೋಗಿ ಒಂದು ಪ್ಯಾಕೆಟ್ ತಗೊಂಡು ಬಾ. ನನಗೆ ತುಂಬಾ ಸುಸ್ತು' ಅಂದಳು. ರೋಹಿದಾಸ ಅವಳ ಮುಖ

ನೋಡಿ ನಕ್ಕು ಮತ್ತೆ ಬ್ರಶ್ ಮಾಡಲು ಹೊರಟ. ವಿದುಲಾ ಮಲಗಲು ಹೊರಟಳು. ರೋಹಿದಾಸ ಹಲ್ಲುಜ್ಜಿ ಸ್ನಾನ ಮಾಡಿ ಬರುವಷ್ಟರಲ್ಲಿ ವಿದುಲಾ ನಿದ್ದೆಯಲ್ಲಿ!

ರೋಹಿದಾಸ ಹಾಲು ತಗೊಂಡು ಬಂದು ಟೀ ಮಾಡಿ ಕುಡಿಯುತ್ತಿರುವಾಗಲೇ ಮತ್ತೆ ವಿದುಲಾ ಎಚ್ಚೆತ್ತು ಕೊಂಡಳು; 'ವಿದುಲಾ, ಟೀ ಕುಡಿತಿಯೇನೆ?' ಎಂದು ಕೇಳಿದ ರೋಹಿದಾಸ ತನಗೆ ಮಾಡಿದ ಟೀಯಲ್ಲಿ ಅರ್ಧ ಲೋಟವನ್ನು ತೆಗೆದುಕೊಂಡು ವಿದುಲಾ ಕೈಗೆ ಕೊಟ್ಟ, ಹಾಸುಗೆಯಲ್ಲಿಯೇ ಕುಳಿತುಕೊಂಡು "ತಿಂಗಳು ಬಂತೂಂದ್ರೆ ಜೀವ ಸಂಕಟ, ನೀವೆಲ್ಲಾ ಆರಾಮ..." ಅಂದಳು. "ಹೌದು, ನಮ್ಗೆ ಯಾವಾಗಲೂ ಆರಾಮ, ಜಗತ್ತಿನ ಸಂಕಟವೆಲ್ಲಾ ನಿಮ್ಗೆ, ಯಾಕೆ ಗೊತ್ತಾ? ಹಿಂದಿನ ಜನ್ಮದಲ್ಲಿ ಪಾಪ ಮಾಡಿದವರು ಮರುಜನ್ಮದಲ್ಲಿ ಹೆಂಗಸರಾಗಿ ಹುಟ್ತಾರಂತೆ, ಬೇಕಿದ್ದರೆ ನಿನ್ನ ವೆಂಕಟೇಶ್ವರನನ್ನು ಕೇಳು" ಎಂದು ನಗಾಡಿದ. "ಅಲ್ಲಾ ಕಣ್ಣೋ ನೀನಂತೂ ದೇವರನ್ನು ನಂಬೋಲ್ಲ ನಾನು ಯಾಕೆ ನಂಬದಿರಲಿ? ನನ್ಗೆ ಫೋಟೋಕ್ಕೆ ಕೈ ಮುಗ್ದಿಲ್ಲಾಂದ್ರೆ ಸಮಾಧಾನಾನೇ ಇರೋಲ್ಲ" ಅಂದಳು ವಿದುಲಾ. "ದೇವ್ರು ಇಲ್ಲಾಂದ್ರೆ ನೀವಿಲ್ಲ, ನೀವಿಲ್ಲಾಂದ್ರೆ ದೇವ್ರು ಇರೋಲ್ಲ, ಮೊದ್ಲು ಟೀ ಕುಡಿ" ಎಂದ ರೋಹಿದಾಸ ಕಾಲು ಮಡಚಿಕೊಂಡು ಹಾಸುಗೆಯ ಮೇಲೆ ಕುಳಿತುಕೊಂಡ. "ವಿದುಲಾ ತಿಂಡಿ ತಿಂದಿಯೇನೆ?" ಎಂದು ಕೇಳುತ್ತಲೇ ರೋಹಿದಾಸ ಅವಳ ಕಾಲ ಬುಡದಲ್ಲಿ ಮುದ್ದೆಯಾಗಿ ಇದ್ದಿದ್ದ ಹೊದಿಕೆಯನ್ನು ಕೂತಲ್ಲಿಂದಲೇ ಸರಿ ಮಾಡಿ ಇಟ್ಟ. "ತಿಂಡಿ ತಿನ್ನುವುದು ಆ ಕಡೆಗೆ ಇರಲಿ, ಒಂದು ಚೂರು ಕಾಫಿ ಕುಡಿಯೋಕು ಆಗಿರಲಿಲ್ಲ. ಈಗ ಒಂದು ಚೂರು ನಿದ್ದೆಯಾದ ಮೇಲೆ ಸ್ವಲ್ಪ ಆರಾಮ ಎನ್ನಿಸುತ್ತದೆ" ಎಂದಳು. ರೋಹಿದಾಸ "ಹೋಗಿ ಇಡ್ಲಿ ಕಟ್ಟಿಸ್ಕೊಂಡು ಬರ್ತೀನಿ. ತಿಂಡಿ ತಿಂದು ಮಲಗಿ ಬಿಡು. ಸಂಜೆ ಬಂದು ಎಬ್ಬಿಸ್ತೀನಿ" ಎಂದ. "ಯಾವಾಗ ಮತ್ತೆ ಊರಿಗೆ?" ವಿದುಲಾ ಕೇಳಿದಳು.

"ಮತ್ತೆ ರಾತ್ರಿ ಹೊರಟುಬಿಡ್ತೀನಿ."

"ಯಾಕೆ ಬಂದೆ?"

"ಅಯ್ಯೋ ಮಾರಾಯ್ತಿ, ಯಾಕೆ ಅಂತ ಹೇಳ್ಬೇಕಾ?"

"ಬೇಡ್ವೋ ಮಾರಾಯ."

"ಬೇಡದಿದ್ದರೆ ಬೇಡ ಬಿಡು. ಒಂದು ಮೀಟಿಂಗ್ ಇತ್ತು ಬಂದೆ ಮುಗಿಸಿ ಹೊರಟು ಬಿಡ್ತೇನೆ.

"ನೀನು ಮೊದ್ಲು ಶಾಲೆಯಲ್ಲಿ ಹೇಗಿದ್ದಿಯೋ ಈವಾಗ್ಲೂ ಅದೇ ರೀತಿ ಇದ್ದೀಯಾ, ಒಂದು ಚೂರು ಬದಲಾಗಲೇ ಇಲ್ಲ "

ರೋಹಿದಾಸ ಗಹಗಹಿಸಿ ನಕ್ಕು "ನೀನು ಬದಲಾಗಿದ್ದಿಯೇ? ಮೊದ್ಲು ಪುಟ್ಟ ಜಡೆ ಬಿಟ್ಕೊಂಡು ಉದ್ದ ಲಂಗ ಹಾಕೊಂಡು ಸ್ಕೂಲಿಗೆ ಬರ್ತಿದ್ದೆ, ಈಗ ನೋಡು–

ನಿನ್ನನ್ನು...", "ಬೇಡ ಕಣೋ, ತಮಾಷೆ ಮಾಡಬೇಡ, ನೀನು ಅಷ್ಟೆ; ಆಗ ಒಂದು ಖಾಕಿ ಚಡ್ಡಿ ಹಾಕೊಂಡು ಮೂಗು ತುಂಬಾ ಸಿಂಬಳ ಸುರಿಸ್ಕೊಂಡು ಬರ್ತಿದ್ದೆ, ಯಾರೂ ಇಲ್ಲದಿದ್ರೆ ಸಿಂಬಳವನ್ನೆ ತಿಂತಿದ್ದೆ, ನೆನಪಿದೆಯಾ?" ಎಂದು ವಿದುಲಾ ಕೇಳಿದಳು. ರೋಹಿದಾಸ ಮುಂದೆ ಜರುಗಿ ಅವಳ ತಲೆಗೆ ಮೆತ್ತಗೆ ಮುಟುಕಿದ. "ಸುಮ್ನಿರಪ್ಪ ನೀನು" ಎಂದಳು. "ಸುಮ್ನಿರ ಬೇಕಾದ್ರೆ- ಹುಣಸೆ ಬೀಜ ಕೊಡ್ಬೇಕು" ಎಂದ ರೋಹಿದಾಸ ನಗುತ್ತಾ ಎದ್ದು ನಿಂತ: "ಹೊರಗೆ ಹೋಗಿ ತಿಂಡಿ ತರ್ತೇನೆ" ಅಂತ ಹೊರಟ. ಅವನು ಹೊರಗೆ ಹೋದ ತಕ್ಷಣ ವಿದುಲಾ ಹಲ್ಲುಜ್ಜಲು ಹೊರಟಳು. ರೋಹಿದಾಸ ಬಂದು ಮಾತಾಡಿಸಿದ ಮೇಲೆ ಸಂಕಟವೆಲ್ಲಾ ಹಾರಿ ಹೋದಂತೆ ಅವಳಿಗೆ ಭಾಸವಾಯಿತು. ಬಾಲ್ಯ ಕಾಲದ ಸ್ನೇಹಿತ-ಡಿಗ್ರಿಯಲ್ಲಿದ್ದಾಗ ಒಂದು ದಿನ ತಾನು ಅವನಿಗೆ ರಾಖಿ ಕಟ್ಟಲು ಹೋದ ಸಂದರ್ಭವನ್ನು ನೆನಪಿಸಿಕೊಂಡಳು. ಡಿಗ್ರಿಯಲ್ಲಿ ಒಂದೇ ಒಂದು ವರ್ಷದ ಹಿರಿಯ, ರಾಖಿಯನ್ನು ಕೈಯ್ಯಲ್ಲಿ ಹಿಡಿದುಕೊಂಡ ತಕ್ಷಣ ಹೇಳಿದ್ದ: "ನಾವಿಬ್ಬರೂ ಒಳ್ಳೆಯ ಸ್ನೇಹಿತರು. ನೀನು ರಾಖಿಯನ್ನು ಕಟ್ಟಿ ನನ್ನಿಂದ ಅಪಾಯವಾಗಬಹುದು ಎಂದು ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಬೇಡ, ನೋಡು ಮರಿ- ಅದರಿಂದ ಉಪಯೋಗವಿಲ್ಲ. ನಾನು ನಿನಗೆ ಅಣ್ಣನಾಗುವುದು -ನೀನು ನನಗೆ ತಂಗಿಯಾಗುವುದು ಇದೆಲ್ಲಾ ಬೇಡ."

ಆ ದಿನ ತಾನು ರೋಹಿದಾಸನ ಬಗ್ಗೆಎಷ್ಟೊಂದು ಹೆಮ್ಮೆಪಟ್ಟಿದ್ದೆ? ಕಾಲೇಜು ದಿನಗಳಲ್ಲಿ ತರಗತಿ ಬಿಟ್ಟರೆ ಸಾಕು-ಜೊತೆಗೆ ಸದಾಕಾಲ ಇರುತ್ತಿದ್ದೆ, ಪೋಲಿ ಜೋಕುಗಳಿಂದ ಹಿಡಿದು ಪ್ರತಿಯೊಂದನ್ನು ಹೇಳುತ್ತಿದ್ದೆ. ತನಗೆ ರೋಹಿದಾಸನಲ್ಲಿ ಮಾತ್ರ ಒಂದು ದಿನವೂ ಕೆಟ್ಟದು ಅಂತನ್ನಿಸುತ್ತಿರಲಿಲ್ಲ. ಕಾಲೇಜಿನಲ್ಲಿ ಗಾಸಿಪ್ ಆದಾಗಲೂ ರೋಹಿದಾಸ ಒಂದು ದಿನವೂ ಬೇರೊಂದು ರೀತಿಯಿಂದ ಮಾತಾಡಿರಲಿಲ್ಲ. ಕೆಲಸ ಸಿಕ್ಕಿದಾಗ ಕರೆದುಕೊಂಡು ತಂದುಬಿಟ್ಟವನು ಯಾವುದೇ ಸುಳಿವಿಲ್ಲದಂತೆ ವರ್ತಿಸಿದ್ದ, ರಾತ್ರಿ ಬಸ್ಸಿನಲ್ಲಿ ಅವನೊಂದಿಗೆ ಬರುವಾಗ ಹಾಯಾಗಿ ಅವನ ಹೆಗಲ ಮೇಲೆ ತಲೆಯಿಟ್ಟು ನಿದ್ದೆ ಮಾಡಿದ್ದೆ. ಈ ಮನೆಯಲ್ಲಿ ಎಷ್ಟೊಂದು ದಿನ ಉಳಿದಿಲ್ಲ? ಅವನೊಂದಿಗೆ ಇದ್ದರೆ ತಾಯಿಯ ಜೊತೆಯಲ್ಲಿ ಇರುವಂಥ ಅನುಭವ, ಭಾಷಣ; ಮಿಾಟಿಂಗು:- ಹೀಗೆಯೇ ಸದಾಕಾಲ ಸುತ್ತುವವನು.

ಒಂದು ದಿನ ಕಾಲೇಜ್‌ನಲ್ಲಿ ಗೆಳತಿಯರು, "ಏನ್ಹುಡುಗಿ, ರೋಹಿದಾಸನ ಜೊತೆ ಲವ್ವು-ಗಿವ್ವು ಶುರುವಾಯ್ತೇನೆ?" ಅಂತ ಕೇಳಿದ್ದರು. ಆ ದಿನವಿಡೀ ಮನಸ್ಸಿನಲ್ಲಿ ಏನೋ ತಳಮಳ. ಸಂಜೆಯಾದ ತಕ್ಷಣ ರೋಹಿದಾಸನ ಹತ್ರ ಹೋದರೆ ಅವನು ನನ್ನ ಮುಖ ನೋಡಿ-'ಬಾರೆ, ಎಲ್ಲಿಯಾದರೂ ಕೂತು ಮಾತಾಡೋಣ ಅಂತ ಪುರಸಭೆಯ ಹಿಂದಿನ ಕಟ್ಟೆಗೆ ಕರೆದುಕೊಂಡು ಹೋಗಿದ್ದ, ಅಲ್ಲಿ ಕೂತು ತಕ್ಷಣವೇ ಅಳು ತಡೆಯಲಾಗದೆ ಜೋರಾಗಿ ಅತ್ತು ಬಿಟ್ಟಿದ್ದೆ. ಅವನು ತನ್ನ ತೊಡೆಯಲ್ಲಿ ಮಲಗಿಸಿ

ಸಣ್ಣ ಮಗುವಿನ ಬೆನ್ನು ತಟ್ಟುವಂತೆ ತಟ್ಟಿದ್ದ, ಅಳುತ್ತಲೆ ಗೆಳತಿಯರು ಹೇಳಿದ ವಿಷಯವನ್ನು ಹೇಳಿದಾಗ ಜೋರಾಗಿ ನಕ್ಕು ಹೇಳಿದ್ದ: "ಈ ಜನಕ್ಕೆ ಅರಿಶಿಣ ಕಾಮಾಲೆ ಕಣೆ! ಗಂಡು–ಹೆಣ್ಣಿನ ನಡುವೆ ಪ್ರೇಮ ಮತ್ತು ಕಾಮ ಮಾತ್ರ ಇರುತ್ತೆ ಅಂತ ತಿಳೀತಾರೆ. ಅವರ ಅತೃಪ್ತ ಕಾಮ, ಬಯಕೆಗಳನ್ನು ತೀರಿಸಲಾಗದೆ ನರಳ್ತಾರೆ. ಗಂಡು ಹೆಣ್ಣಿನ ನಡುವೆ ಒಳ್ಳೆಯ ಸ್ನೇಹಾನು ಇರಬಹುದು ಅಂತ ಯೋಚಿಸೋದೇ ಇಲ್ಲ. ಮಾನಸಿಕ ಕುಬ್ಜರು! ಕಾಮವೇ ನಮ್ಮನ್ನು ಆಳುತ್ತೆ ಅಂತ ಬೇಕಾದರೆ ಗಂಟೆಗಟ್ಟಲೆ ಕೋರಿತಾನೆ ಇರ್‍ತಾರೆ, ನೋಡು ಮರಿ ಅದಕ್ಕೆಲ್ಲಾ ಯೋಚನೆ ಮಾಡ್ಬೇಡ. ಅವರ ಅ ತೃಪ್ತ ಪ್ರೇತಾತ್ಮಗಳು ಬೇರೆಯವರ ಹಿಂದೆ ಸುತ್ತಾ ಸುಳೀತಾ ಇರ್‍ತಾವೆ." ಬೆನ್ನು ತಟ್ಟಿ ಧೈರ್ಯ ತುಂಬಿಸಿದ್ದ. ಅವನನ್ನು ಕಂಡರೆ ಏನೋ ಒಂಥರಾ ಖುಶಿ, ನೆಮ್ಮದಿ. ಈ ಯೋಚನೆಯಲ್ಲಿಯೇ ವಿದುಲಾ ಸ್ನಾನ ಕೂಡಾ ಮುಗಿಸಿದಳು. ಅಷ್ಟೂ ಹೊತ್ತಿಗೆ ರೋಹಿದಾಸ ಬಂದ, ಇಬ್ಬರೂ ಮಾತಾಡುತ್ತಲೇ ತಿಂಡಿ ತಿಂದರು.

ತಿಂಡಿ ತಿಂದ ತಕ್ಷಣ: "ನಾನು ಹೊರಟೆ, ಸಾಧ್ಯವಾದರೆ ರಾತ್ರಿ ಬಸ್ಸಿಗೆ ಹೊರಡುವ ಮೊದಲು ಬಂದು ಹೋಗ್ತೇನೆ. ಸರಿಯಾಗಿ ತಿನ್ನು ಮಾರಾಯ್ತಿ, ಸಾಧ್ಯವಾದರೆ ಮೀಟಿಂಗ್ ಮುಗಿಸಿ ಚಾರು ಅವರ ಮನೆಗೂ ಹೋಗಿ ಬರ್ತೇನೆ" ಅಂದ ರೋಹಿದಾಸ ಹೊರಟ. ಆದರೆ ಆ ದಿನದ ಅವನ ಉದ್ದೇಶದಂತೆ ಚಾರುವಿನ ಮನೆಗೆ ಹೋಗಲು ಸಾಧ್ಯವಾಗಲಿಲ್ಲ.

*

"ಅವರ ಕನಸುಗಳಲ್ಲಿ ಚಂದಿರನ ಸಣ್ಣ
ಹನಿಯಾದ ಬೆಳಕು ಇರಲಿಲ್ಲ
ಕಂದೀಲು ಉರಿಸಿದವನಿಗೂ ಗೊತ್ತಿಲ್ಲ
ಕಂದೀಲಿನ ಗ್ಲಾಸಿಗೆ ಕಪ್ಪು ಮಸಿ ಮುಖವೊಡ್ಡಿ ಕುಳಿತಿದೆ ಎಂದು
ಮುರುಕು ಗುಡಿಸಲ ಕೆಳಗೆ
ಹಣಕಿಕ್ಕುವ ಸೂರ್ಯನ ಬೆಳಕು
ಅವರಿಬ್ಬರ ಚಾಪೆಯ ನಡುವಣ ಗುಟ್ಟನ್ನು
ಜಗತ್ತಿಗೆ ಸಾರಿ ಹೇಳುತ್ತಾನೆ
ಕನಸ ಕದ್ದವರಾರೋ, ಕನಸ ಮೆದ್ದವರಾರೋ,
ಅಗೋ, ಅಲ್ಲಿ ಪಯಣ ಹೊರಟಿದೆ ದೋಣಿ
ದೋಣಿಯಡಿಯಲ್ಲಿ ನುಸುಳಿ ಬರುತ್ತದೆ – ನೀರು."

ಭಾಗ-೨

ದಿನಚರಿಯಲ್ಲಿ ದೇವವ್ರತನ ಧ್ಯಾನ!

– ೧ –

೧೯೯೭ರ ಸುಮಾರಿಗೆ ತೆಗೆದುಕೊಂಡ ಕಪ್ಪು ಡೈರಿಯ ಒಳಪುಟದ ಮೊದಲ ಸಾಲುಗಳನ್ನು ಯಾವತ್ತೋ ಬರೆದಿಟ್ಟಿದ್ದಾನೆ – ಚಾರು. ಅವನಿಗೆ ಕನಸಿನ ಭ್ರಮೆಗಳಿರಲಿಲ್ಲ. ಕುದುರೆಯ ಹಿಂದೆ ಓಡಿ ಮುಗ್ಗರಿಸಿ ಬೀಳುವ ಆತುರಗಳೂ ಇರಲಿಲ್ಲ ಮತ್ತು ಇಸ್ಪೀಟಿನ ಎಲೆಯನ್ನು ಮಗುಚಿಕೊಂಡು ಆಡುವ ಹವ್ಯಾಸದವನೂ ಅಲ್ಲ. ಏನಿದ್ದರೂ ಜಿನ್ ಮತ್ತು ಸಿಗರೇಟು – ಇವೆರಡೂ ಚಾರುವಿನ ಸಂಗಾತಿಗಳು. ಆದರೆ ತಾನು ಕುಡಿಯುತ್ತಿರುವ ಜಿನ್ – ಅದು ಯಾವುದೇ ಬ್ರಾಂಡಿನದಾಗಿರಲಿ ಅದಕ್ಕೊಂದು ರುಚಿಯಿದೆ ಎಂದು ಕಂಡುಂಡವನು. ದೇಹದ ಕಣ ಕಣದಲ್ಲಿಯೂ ಹರಿಯುತ್ತಿರುವುದು ಜಿನ್ ಮತ್ತು ಶ್ವಾಸಕೋಶದ ತುಂಬಾ ತುಂಬಿಕೊಂಡ ಸಿಗರೇಟಿನ ಹೊಗೆ. ಯಾವಾಗ ಮೈಥಿಲಿಯ ಮತ್ತು ದೇವವ್ರತರ ನಡುವಣ ಸಂಬಂಧದ ಸೂಕ್ಷ್ಮತೆಗಳು ಅರ್ಥವಾಯಿತೋ ಅಂದಿಗೆ ಮೈಥಿಲಿಯ ಬಗೆಗೆ ಕೂಡಾ ಸಣ್ಣ ಅನುಮಾನದ ಮೊಳಕೆಯೊಡೆಯ ತೊಡಗಿತ್ತು. ಮೈಥಿಲಿಯದು ಸುಲಭವಾದ

ವ್ಯವಹಾರವಲ್ಲ ಎಂಬುದು ನಿಶ್ಚಯವಾಗಿದ್ದೇ - ಬೇರೆ ಏನೂ ಮಾಡಬೇಡಿ ಎಂದು ರಾತ್ರಿಯ ಹೊತ್ತಿನಲ್ಲಿ ಅವಳು ಗೋಗರೆದಾಗ. ತನ್ನದು ಸ್ಪಷ್ಟ ಮತ್ತು ನೇರ ನಡೆನುಡಿಯೆಂದುಕೊಂಡು ಓಡಾಡುತ್ತಿರುವ ಮೈಥಿಲಿಯಲ್ಲಿ ಹತ್ತು ಹಲವು ಗುಟ್ಟುಗಳು ಆವಾಸಸ್ಥಾನವಾಗಿರಿಸಿಕೊಂಡಿವೆಯೆಂದು ತಿಳಿದಿದ್ದು ಮಾತ್ರ ಕೊಂಚ ಸಮಯದ ನಂತರವೇ. ಅದೂ ದೇವವ್ರತ ತನ್ನ ಮನೆಯನ್ನು ಬೇರೊಂದು ಕಡೆಗೆ ಶಿಫ್ಟ್ ಮಾಡಿದ ಬಳಿಕ. ನಟ್ಟನಡು ಮಧ್ಯಾಹ್ನದ ಒಂದು ಗಳಿಗೆಯಲ್ಲಿ ಅದೂ ಮೈಥಿಲಿಯು ಮಾರ್ಕೆಟಿಗೋ, ಸೀರೆಯಂಗಡಿಗೋ ಹೋದ ವೇಳೆಯಲ್ಲಿ ಆಕಸ್ಮಿಕವಾಗಿ ಚಾರುಗೆ ಸಿಕ್ಕಿದ್ದು ಅವಳ ದಿನಚರಿಯ ಪುಸ್ತಕ. ಆ ದಿನಚರಿಯ ಪುಸ್ತಕ ಮುಖಪುಟವೂ ಕೆಂಪಾಗಿಯೇ ಇತ್ತು. ಕೆಂಪು ಅನ್ನುವುದು ಬೆಂಕಿಯ ಚಿಹ್ನೆ ಅಪಾಯದ ಸಂಕೇತವೆಂದು ಚಾರುಗೆ ಅರಿವಾದುದು ಅವಳ ದಿನಚರಿಯನ್ನು ಓದಿದ ಮೇಲೆ. ಬಹಳ ಮುಖ್ಯವಾಗಿ ಅವಳ ದಿನಚರಿಯ ಮೂರು ಪುಟಗಳು ಮಾತ್ರ ಚಾರುವಿಗೆ ಮೈಥಿಲಿಯ ಚರಿತ್ರೆಯ ಸಂಗತಿಗಳನ್ನು ಬಿಡಿಸಿ ಹೇಳಿದ್ದವು.

ದಿನಾಂಕ......................ಶನಿವಾರ

ಈವೊತ್ತು ಸಂಜೆ ಗಾರ್ಡನಿಗೆ ದೇವವ್ರತರೊಂದಿಗೆ ವಾಕಿಂಗ್ ಹೋದೆ. ಸಹಜವಾಗಿದ್ದ ದೇವವ್ರತರ ಕಣ್ಣು - ನನ್ನ ಮೇಲೆ ಆಸೆಯಿಟ್ಟು ನೋಡುತ್ತಿದೆಯೆಂದು ವಾಕಿಂಗ್ ಹೋಗುವಾಗಲೇ ಅನಿಸತೊಡಗಿತ್ತು. ಸಂಜೆ ಆರು-ಏಳು ಗಂಟೆಯ ಹೊತ್ತಿಗೆ ಮನೆಯಲ್ಲಿ ಕೂರುವುದೆಂದರೆ ಅಪರಿಮಿತವಾದ ಬೇಸರ. ಈ ಚಾರು ಯಾವಾಗ ನೋಡಿದರೂ ಕುಡಿದು ಮಲಗಿರ್ತಾನೆ. ಅವನ ಕುಡಿತ - ಅವನ ಸಿಗರೇಟು- ಅವನ ಮೈಯ ಬೆವರು ಯಾಕೋ ಅಸಹ್ಯವೆಂದು ಅನಿಸತೊಡಗಿದೆ. ನಿಜವಾಗಿಯೂ ದೇವವ್ರತನಿಗೆ ಅಂಥಾ ಯಾವ ದುಶ್ಚಟವೂ ಇಲ್ಲ. ತುಂಬಾ ನೀಟಾಗಿ ಡ್ರೆಸ್ ಮಾಡಿಕೊಳ್ಳುತ್ತಾನೆ. ಅವರ ಹತ್ತಿರ ವಾಕಿಂಗ್ ಹೋಗುವಾಗ ಈಚೆಗೆ ಪದೇ ಪದೇ ಅನಿಸುತ್ತಿದೆ; ಇಂಥಾ ಬಾಳ ಸಂಗಾತಿ ನನಗೆ ಸಿಕ್ಕಿದಿದ್ದರೆ ನಾನು ಎಷ್ಟೊಂದು ಖುಶಿಯಲ್ಲಿ ಇರುತ್ತಿದ್ದೆ. ನನ್ನದೂ-ದೇವವ್ರತ ಅವರದೂ ಗುಣಗಳಲ್ಲಿ ಎಷ್ಟೊಂದು ಸಮಾನವಾದ ಹೋಲಿಕೆಯಿದೆ. ತಲೆ ತುಂಬಾ ಸಮಸ್ಯೆಯನ್ನು ತುಂಬಿಕೊಂಡಿರುವ ಚಾರು ಎಲ್ಲಿ? ತುಂಬಾ ಲವಲವಿಕೆಯ ಜೀವನೋತ್ಸಾಹದ ದೇವವ್ರತನೆಲ್ಲಿ? ವಾಕಿಂಗ್ ಹೋಗುವಾಗ ನಾನು ಅದನ್ನೇ ಯೋಚನೆ ಮಾಡುತ್ತಾ ಇದ್ದೆ. ದೇವವ್ರತ ಮತ್ತು ಚಾರು ಇಬ್ಬರನ್ನು ನೋಡಿದರೆ ದೇವವ್ರತ ಸಾವಿರ ಪಾಲು ಮೇಲು. ಗಾರ್ಡನಿನಲ್ಲಿ ಕೈಯ ಮೇಲೆ ಕೈಯಿಟ್ಟು ದೇವವ್ರತ ಅವರ ಮನಸ್ಸಿನಲ್ಲಿ ಇದ್ದುದನ್ನೆಲ್ಲಾ ಹೇಳಿದರು. ನಾನೂ ನನ್ನ ಮನಸ್ಸಿನಲ್ಲಿ ಇದ್ದುದನ್ನು ಪೂರ್ತಿಯಾಗಿ ಹೇಳಿದೆ. ಚಾರುವಿನೊಂದಿಗೆ ನನ್ನ ದಾಂಪತ್ಯ ಜೀವನವು ಸರಿಯಿಲ್ಲವೆಂದೂ ತಿಳಿಸಿದೆ. ಚಾರುವಿನ ದುರ್ಬಲ

ಶರೀರದ ಕುರಿತು ದೇವವ್ರತರ ನೇವರಿಕೆಯಲ್ಲಿ ಅದೆಂಥ ಅದ್ಭುತ ಶಕ್ತಿಯಿದೆ. ದೇವವ್ರತರ ಕೈಯು ಮುಂದುವರಿಯಬಾರದೇ ಎಂದು ದೇವರನ್ನು ಪ್ರಾರ್ಥಿಸಿದೆ. ಆದರೆ, ಯಾಕೋ ದೇವವ್ರತರ ಕೈಮುಂದೆ ಸಾಗಲಿಲ್ಲ. ಗಂಡನಿದ್ದೂ ಬೇರೊಬ್ಬ ಗಂಡಸನ್ನು ಮನಸ್ಸಿನಾಳದಲ್ಲಿ ಪ್ರೀತಿಸುವುದು ಮತ್ತು ಇಚ್ಛಿಸುವುದು ತಪ್ಪೊ ಏನೋ? ನನಗೆ ಗೊತ್ತಿಲ್ಲ. ದೇವವ್ರತ ನಿಜವಾಗಿಯೂ ಒಳ್ಳೆಯವರು. ಅವರಿಟ್ಟ ಪ್ರಪೋಸಲ್‌ನ್ನು ಚಾರುಗೆ ಹೇಳಬೇಕು. ಚಾರು ಒಪ್ಪಿದರೆ ಎಲ್ಲವೂ ಸುಗಮವಾಗುತ್ತದೆಯೆಂದು ನನ್ನ ಭಾವನೆ. ನಾನೇನೂ ಚಾರುಗೆ ಅಡ್ಡವಾಗಿಲ್ಲವಲ್ಲಾ? ದೇವರೇ, ಈ ದ್ವಂದ್ವದಿಂದ ನನ್ನನ್ನು ಪಾರುಮಾಡು."

ಮೈಥಿಲಿ ಡೈರಿಯಲ್ಲಿ ಉಕ್ತವಾದ ಸಾಲುಗಳನ್ನು ಚಾರು ನಿಧಾನವಾಗಿ ಮತ್ತು ಗಂಭೀರವಾಗಿ ಓದಿದ. ಹಣೆಯಲ್ಲಿ ಸಣ್ಣನೆಯ ಬೆವರು ಕಾಣಿಸತೊಡಗಿತು. ಮೈಥಿಲಿಯಲ್ಲಿ ಮನದಲ್ಲಿ ದೇವವ್ರತನ ಬಗ್ಗೆ ಒಲವು ಮೂಡಿತ್ತು. ಮತ್ಯಾಕೆ ನನ್ನ ಜೊತೆ ನಾಟಕವಾಡಿದಳು? ಚಾರು ಮೈಥಿಲಿಯ ದಿನಚರಿಯ ಮತ್ತೊಂದು ಪುಟ ತೆರೆದ.

ದಿನಾಂಕ..................ಸೋಮವಾರ

ಈವತ್ತು ಸಂಜೆ ಚಾರುವಿನಲ್ಲಿ ದೇವವ್ರತ ಪ್ರಪೋಸಲ್ ಮಾಡ್ದ ಅಂತ ಹೇಳಿದೆ. ನನಗೆ ಒಂದು ಸಣ್ಣ ಕುತೂಹಲವಿತ್ತು. ಒಂದೋ ಚಾರು ರೇಗಾಡಬಹುದು–ನನಗೆ ಬೈಯಬಹುದು ಅಂತ. ಆದ್ರೆ ಚಾರು ರೇಗಾಡಲಿಲ್ಲ ಮತ್ತು ತುಂಬಾ ನಿಧಾನವಾಗಿಯೇ ಹೇಳಿದ; ನಿನಗೆ ದೇವವ್ರತ ಬೇಕಾದರೆ ಖಂಡಿತಾ ಅದು ನಿನ್ನ ಆಯ್ಕೆ, ನಾನೇ ಬೇಕಾದರೆ ದೇವವ್ರತನೊಂದಿಗೆ ಚೆಲ್ಲಾಟ ಸಾಧ್ಯವಿಲ್ಲ. ಈ ಚಾರು ಯಾಕೆ ಹೀಗೆ? ಎಲ್ಲಾ ಮನುಷ್ಯರ ಥರ ಯಾಕಿಲ್ಲ? ಛೀ, ಅಸಹ್ಯ ಮನೆಬಿಟ್ಟು ಹೊರಟುಹೋಗು ಅಂದರೆ ನಾನು ಹೊರಟೇ ಬಿಡುತ್ತಿದ್ದೆ ಮತ್ತು ತಪ್ಪೆಲ್ಲವೂ ಚಾರುವಿನದೆಂದು ಸಾಧಿಸಿಬಿಡುತ್ತಿದ್ದೆ. ನಿಜವಾಗಿಯೂ ಚಾರು ಅಷ್ಟೊಂದು ಕುಡೀತಾನೆ, ಬಿದ್ದು ಹೊರಳಾಡ್ತಾನೆ ಅಂತ ನಾನೇ ಕೆಲವರಿಗೆ ಹೇಳಿದ್ದೆ. ಅದರ ಮೂಲಕವೇ ಚಾರುವಿನ ಮೇಲೆ ಒತ್ತಡ ತರುವುದು ನನ್ನ ಉದ್ದೇಶವಾಗಿತ್ತು. ದೇವವ್ರತ ಹೇಳಿದ್ದನ್ನು ಹೇಳಿದಾಗಲೂ ನಾನು ಅದೇ ನಿರೀಕ್ಷೆಯಲ್ಲಿದ್ದೆ. ಆದರೆ, ಚಾರು ಒಂಚೂರು ಮಾತಾಡಿಲ್ಲ ಅದೇ ನನಗೆ ಗಾಬರಿ ಹುಟ್ಟಿಸಿದ್ದು. ಚಾರು ನನ್ನ ಹತ್ತಿರ ಬಂದು ಸಾಂತ್ವನ ಹೇಳಿಲ್ಲ, ಗದರಿಸಿಲ್ಲ. ಅದೇ ನನಗೆ ಆಶ್ಚರ್ಯವನ್ನು ಉಂಟುಮಾಡಿದ್ದು, ಏನು ಮಾಡಬೇಕೋ ದೇವರೇ ಬಲ್ಲ!

ಮೈಥಿಲಿಯ ದಿನಚರಿಯ ಕೆಲ ಪುಟಗಳು ಪೂರ್ತಿ ಖಾಲಿಯಾಗಿ ಉಳಿದಿವೆ. ಇಡಿಯ ಖಾಲಿ ಪುಟದಲ್ಲಿ ಹತ್ತಾರು ಗೆರೆಯನ್ನು ಎಳೆದಿದ್ದಾಳೆ. ಯಾವುದನ್ನೂ

ಬರೆದಿಲ್ಲ, ತಾನು ದೇವವ್ರತನನ್ನು ಕರೆದದ್ದು; ಅವನ ಹೆಂಡತಿ ಸುಜಾತಳನ್ನು ಕರೆದು ಹೇಳಿದ್ದು ಎಲ್ಲಿಯೂ ಉಕ್ತವಾಗಿಲ್ಲ. ಯಾಕೆ ಹೀಗಾಗಿದೆಯೆಂದು ಚಾರು ಭಾವಿಸಿಕೊಂಡು ಅದರ ಮುಂದಿನ ಪುಟವನ್ನು ತೆರೆದ. ಮೈಥಿಲಿಯ ಮನಸ್ಸು ಹೇಗಿತ್ತು ಎಂದು ಅರ್ಥವಾದದ್ದೇ ಆಗ.

ದಿನಾಂಕ......................ಗುರುವಾರ

"ಈವೊತ್ತು ದೇವವ್ರತರನ್ನು ಮಾತಾಡಿಸಲೇಬೇಕೆಂದು ಸಂಜೆ ಅವನ ಮನೆಗೆ ಹೋಗಿದ್ದೆ. ನಾನು ದೇವವ್ರತನ ಮನೆಯೊಳಗೆ ಹೋದ ವಿಷಯ ಚಾರುವಿಗೆ ಗೊತ್ತಿಲ್ಲ. ನನಗೆ ಚಾರುವೆಂದರೆ ಅಸಹ್ಯ ಎನಿಸುತ್ತೆ. ಅತ್ತ ಡೈವೋರ್ಸ್ ಕೊಡಲಾರೆ. ಈ ಅಸಹ್ಯ ವ್ಯಕ್ತಿಯ ಜೊತೆಗೂ ಬದುಕಲಾರೆ, ಸಾಕಾಗಿದೆ. ಹೆಂಡತಿಯೆಂದರೆ ಬರೀ ಸ್ವಂತ ಸ್ವತ್ತು ಅಂತ ತಿಳಿದುಕೊಂಡಿದ್ದಾನೆ. ಅದಕ್ಕೆ ದೇವವ್ರತರಲ್ಲಿ ಮಾತಾಡಿ ಯಾವುದಾದರೂ ಒಂದು ನಿರ್ಣಯಕ್ಕೆ ಬರಬೇಕೆಂದು ಭಾವಿಸಿ ಹೋದರೆ ದೇವವ್ರತ ನನ್ನನ್ನು ಅಪ್ಪಿಕೊಳ್ಳಲು ಬಂದ. ಅವರಿಗೆ ನನ್ನ ಮಾತು ಕೇಳುವಷ್ಟು ವ್ಯವಧಾನವಿಲ್ಲ. ಅವನು ಅಪ್ಪಿಕೊಳ್ಳಲು ಬಂದಾಗ ನಾನು ಚಾರುಗೆ; ನನ್ನ ಅಪ್ಪ-ಅಮ್ಮಂಗೆ ಎಲ್ಲರಿಗೂ ಮೋಸ ಮಾಡುತ್ತೇನೆ ಎಂದನ್ನಿಸಿತು. ಅದಕ್ಕೆ ಓಡಿಬಂದೆ. ದೇವವ್ರತನೂ ಎಲ್ಲಾದರೂ ಹಾಳಾಗಿ ಹೋಗಲಿ ನನಗೇನಾಗಬೇಕಾಗಿದೆ?"

ಇದು ಮೈಥಿಲಿಯ ಡೈರಿಯ ಈ ಪುಟಗಳನ್ನು ಓದಲು ತೊಡಗಿದಂತೆ ಅವನ ಮೈಯಿಡೀ ಬೆವರತೊಡಗಿತು. ಯಾಕೆ ಹಾಗಿದ್ದರೂ ಮೈಥಿಲಿ ನನ್ನ ಜೊತೆಯಿದ್ದಾಳೆ? ಒಂದೇ ಒಂದು ಕಾರಣ – ಡೈವೋರ್ಸ್ ಕೊಟ್ಟರೆ ತನ್ನ ಮರ್ಯಾದೆಯು ಹೋಗುತ್ತದೆಯೆಂದು ಆಕೆ ಭಾವಿಸಿಕೊಂಡಿದ್ದಾಳೆ. ಇದರಿಂದಾಗಿಯೇ ಇಷ್ಟೆಲ್ಲಾ ನಾಟಕಗಳು. ಸುಜಾತ ಮತ್ತು ದೇವವ್ರತರನ್ನು ಕರೆಸಿ ಅಷ್ಟೆಲ್ಲಾ ಹೇಳಹೊರಟಿದ್ದು ತಾನು ಮಾಡಿದ ತಪ್ಪು ಎಂದರಿವಾಗಿದ್ದೇ ಆ ಹೊತ್ತಿನಲ್ಲಿ. ಮೈಥಿಲಿಯ ದಿನಚರಿಯೆಂಬ ಹುತ್ತದಲ್ಲಿ ಏನೇನೂ ಬಚ್ಚಿಟ್ಟಿದ್ದಾಳೋ, ಯಾಕೋ ಚಾರುಗೆ ಅವನ್ನು ಮತ್ತೊಮ್ಮೆ ಪುಟ ತಿರುಗಿಸಿ ಓದುವುದು ಬೇಡವೆಂದು ಅನಿಸಿತು. ದೇವವ್ರತ; ದೇವವ್ರತನೆಂದು ಹಲುಬುವ ಮೈಥಿಲಿಗೆ ಆದದ್ದಾದರೂ ಏನು? ಕಾಲವಿನ್ನೂ ಮಾಗಿಲ್ಲ. ಕಾಲವು ಮಾಗಲಿ ಆಗಲಾದರೂ ಅವಳಿಗೆ ಸ್ವಲ್ಪಮಟ್ಟಿಗೆ ಜೀವನಾನುಭವ ವೆಂದರೇನು ಎಂದು ತಿಳಿಯುತ್ತದೆ. ಅಲ್ಲಿಯತನಕ ಅದು ತಿಳಿಯಲಾರದು. ಯಾಕೆಂದರೆ, ಅವಳಿಗೆ ಅದು ತಿಳಿದುಕೊಳ್ಳುವ ಯಾವ ಮನಸ್ಸು ಇಲ್ಲ. 'ನಾನು ಚೆನ್ನಾಗಿ ಇದ್ದರಾಯಿತು. ಲೋಕದ ಹಂಗು ತನಗೇಕೆ' ಎಂದು ಮೈಥಿಲಿ ಯೋಚಿಸತೊಡಗಿದ್ದಾಳೆ. ಅದಕ್ಕೆ ಪೆಟ್ಟು ಬೀಳುವ ತನಕ ಮೈಥಿಲಿಯು ಬದಲಾಗುವುದು ಅನುಮಾನ. ಚಾರು ಅವಳ ಡೈರಿಯನ್ನು ಮಡಿಸಿ, ಮೂಲೆಯಲ್ಲಿಟ್ಟ. ಅದೇ ಅವಳ

ಸೀರೆಯ ಕೆಳಗೆ ಬೀರುವಿನಲ್ಲಿ. ದೇವವ್ರತನೆಂಬ ಮನುಷ್ಯ ಇಪ್ಪತ್ತಾರರ ಅಂಚಿನಲ್ಲಿರುವ ಮೈಥಿಲಿಗೆ ಪ್ರಪೋಸಲ್ ಇಟ್ಟು ಗಲಾಟೆಯಾದ ಮೇಲೆ ಕೆಲವೇ ದಿನಗಳಲ್ಲಿ ಚಾರು ಈ ಕೆಲಸ ಮಾಡಿದ್ದ ಮತ್ತು ಅವನು ದಿನಚರಿಯನ್ನು ನೋಡುವ ಕೆಲಸವನ್ನು ಬಹಳ ತಡವಾಗಿಯೇ ಮಾಡಿದ್ದ ಮತ್ತು ತಾನು ಅವಳ ಡೈರಿಯನ್ನು ನೋಡಿದ್ದೇನೆ ಎಂಬುದರ ಒಂದಿಷ್ಟು ಸುಳಿವು ಕೂಡಾ ನೀಡಲಿಲ್ಲ. ಅದೇ ಅವನು ಮಾಡಿದ ಒಳ್ಳೆಯ ಕೆಲಸ. ಮೈಥಿಲಿಯು ದಿನಚರಿಯಲ್ಲಿ ಕೆಲವು ಮುಖ್ಯ ಸಂಗತಿಗಳನ್ನು ಬರೆದು ದಡ್ಡ ಕೆಲಸವನ್ನು ಮಾಡಿದ್ದಳು.

ಹಣೆ ತುಂಬಾ ಬೆವರ ಹನಿಗಳ ಸಾಲು. ಎಲ್ಲೋ ನಾನೇ ಬೋನಿನೊಳಗೆ ಸಿಕ್ಕು ಹಾಕಿಕೊಂಡು ಬಿಟ್ಟೆ. ನೈತಿಕ–ಅನೈತಿಕ ಅನ್ನುವುದು ಮುಖ್ಯವೇ–ಅಮುಖ್ಯವೇ? ಇದೊಂದು ಆ ಸಂದರ್ಭದಲ್ಲಿ ಚಾರುಗೆ ತಿಳಿಯಲಿಲ್ಲ. ದೇವವ್ರತನೆಂಬ ಹುಳವನ್ನು ಸುಲಭದಲ್ಲಿ ಒರಸಿಹಾಕಬಹುದಿತ್ತು. ಆಗ, ಮೈಥಿಲಿ ಹೇಳಿದ ಮಾತನ್ನು ಕೇಳಿದೆ. ಯಾಕೋ ಬೇಡವೆಂದು ಅನಿಸಿತು. ಈಗ ನೋಡಿದರೆ ಇದು ಕತೆಯೆಂದು ಚಾರು ಭಾವಿಸಿದ. ದೇವವ್ರತ ಮನೆಯನ್ನು ಶಿಫ್ಟ್ ಮಾಡುವ ವೇಳೆಯೇ ಈ ಡೈರಿಯು ನನಗೆ ಸಿಗಬೇಕೆ? ಚಾರು ಕೆಲವು ಹೊತ್ತು ಮೌನವಹಿಸಿದ. ಇನ್ನು ಈ ರೀತಿಯ ದುಗುಡವನ್ನು ನನ್ನ ಸೊಂಟದಲ್ಲಿ ಕಟ್ಟಿಕೊಂಡು ಓಡಾಡುವುದು ಅರ್ಥವಿಲ್ಲ. ಆದದ್ದು ಆಗಿಹೋಗಿ ಕೆಲವು ತಿಂಗಳುಗಳು ಕಳೆದುಹೋದವು. ಇನ್ಯಾಕೆ ಅದರ ಚಿಂತೆ? ಆ ಕುರಿತು ಆಲೋಚನೆ ಮಾಡದಿರುವುದೇ ಹೆಚ್ಚು ಅನುಕೂಲ ಎಂದು ಚಾರು ಆಲೋಚಿಸತೊಡಗಿದ. ಅದೇ ವೇಳೆಯಲ್ಲಿ ಮೈಥಿಲಿ ತಾನು ಕೂಡಿಟ್ಟ ಹಣದಿಂದ ಸೀರೆಯನ್ನು ತೆಗೆದುಕೊಳ್ಳಬೇಕೆಂದು ಹೋದವಳು ಸೀರೆಯಂಗಡಿಯವನಿಗೆ, "ಆ ಹಸಿರು ಕಲರ್‌ನ ಮತ್ತು ಕೆಂಪು ಬಾರ್ಡರಿನ ಸೀರೆಯನ್ನು ತೋರಿಸಿ" ಅಂದಳು. "ಸೀರೆಗೆ ತುಂಬಾ ರೇಟ್ ಕಣಮ್ಮ" ಎಂದು ಸೀರೆಯಂಗಡಿಯಲ್ಲಿಯ ಜೀವಮಾನದ ಅಸಂಖ್ಯ ದಿನಗಳನ್ನು ಕಳೆದ ಮುದಿಯ ಹೇಳಿದ. ಸೀರೆಯಂಗಡಿಯಲ್ಲಿಯೇ ಸಾವಿರಾರು ದಿನಗಳನ್ನು ನೋಡಿದ ಮುದಿಯನ ದಪ್ಪ ಚಾಳೀಸು ಎಲ್ಲಾ ರೀತಿಯ ಜನರನ್ನು ನೋಡಿಯೇ ನಿರ್ಧರಿಸುತ್ತೆ; ಇವರು ಯಾವ ಮಾದರಿಯ, ಎಷ್ಟು ಬೆಲೆಯ ಸೀರೆಯನ್ನು ಕೊಂಡುಕೊಳ್ಳಬಲ್ಲರು? ಅವನಿಗಿದು ಹೊಸತಲ್ಲ. ಅದೇ ಮುದಿಯ ಮೈಥಿಲಿಯು ತುಂಬಾ ಆಸೆಪಟ್ಟು ಕೇಳಿದ ಹಸಿರು ಕಲರ್‌ನ ಸೀರೆಯನ್ನು ತೆಗೆದು ತೋರಿಸಿದ: "ಮೈತುಂಬಾ ಹಸಿರು, ಬಿಳಿಯ ಚುಕ್ಕೆ ಮತ್ತು ಬಾರ್ಡರ್ ಮಾತ್ರ ಕೆಂಪು ಈ ಡಿಸೈನ್ ಬರುವುದೇ ಅಪರೂಪ ಕಣಮ್ಮ" ಎಂದು ಮುದಿಯ ಹೇಳಿದ. ಅವನು ಬಗ್ಗಿ ಸೀರೆಯನ್ನು ಟೇಬಲ್‌ನ ಮೇಲೆ ಹರಡಲು ತೊಡಗುತ್ತಿದ್ದಂತೆ ಅವನ ಬಕ್ಕ ತಲೆಯಲ್ಲಿ ಮೇಲ್ಗಡೆಯ ಫ್ಯಾನ್ ಗರಗರನೆ ತಿರುಗತೊಡಗಿತು. ಮೈಥಿಲಿಯು ಸೀರೆಯನ್ನೇ ಮುಟ್ಟಿ ಮುಟ್ಟಿ ನೋಡಿದಳು. ಸೀರೆಯ ಮೈಯನ್ನೆಲ್ಲಾ ಮೃದುವಾಗಿ

ತಡವಿದಳು. ಅದನ್ನು ಮೃದುವಾಗಿ ತಡವಿದಾಗಲೇ ಆ ಮುದಿಯನಿಗೆ ಗೊತ್ತಾಯಿತು: ಈಯಮ್ಮ ಎಷ್ಟು ರೇಟಾದರೂ ಸರಿ! ಈ ಸೀರೆಯನ್ನು ತೆಗೆದುಕೊಂಡೇ ತೆಗೆದುಕೊಳ್ಳುತ್ತಾಳೆ. "ಸೀರೆಗೆ ಸಾವಿರದ ಇನ್ನೂರು ರೂಪಾಯಿ ಆಗುತ್ತೆ ಕಣಮ್ಮ, ಆಗಬಹುದಾದರೆ ತಗೊಳ್ಳಿ ಚೆನ್ನಾಗಿದೆ, ಹೊಸ ಮಾಲು, ನಿನ್ನೆಯಷ್ಟೇ ಬಂಡಲ್ ಬಿಚ್ಚಿದ್ದೀವಿ. ಬನಾರಸಿಂದ ಮೊನ್ನೆಯಷ್ಟೇ ಬಂತು. ಈ ಡಿಸೈನ್ ಈಗ ನಮ್ಮ ಅಂಗಡಿಯಲ್ಲಿ ಬಿಟ್ರೆ ಬೇರೆಲ್ಲೂ ಸಿಗೋಲ್ಲ." ಮುದಿಯ ಮತ್ತೊಮ್ಮೆ ಹೇಳಿದ. ಅವನು ಹೇಳಿದ್ದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ, ಅವನು ಸತ್ಯವನ್ನೇ ಹೇಳುತ್ತಿದ್ದಾನೆ ಎಂದು ಮೈಥಿಲಿ ಭಾವಿಸಿದಳು. ಸಾವಿರದ ಇನ್ನೂರು ಈ ಸೀರೆಗೆ ಹೆಚ್ಚೇನೂ ಅಲ್ಲವೆಂದು ಭಾವಿಸಿದಳಾದರೂ ಕೊಂಚ ಚರ್ಚೆಯನ್ನು ಮಾಡಿದರೆ ಸೀರೆಯ ರೇಟು ಇಳಿಸಬಹುದು ಎಂದು ಭಾವಿಸಿಕೊಂಡಳು. "ಸರಿಯಪ್ಪಾ, ಆದರೆ ನೋಡಿ ಈ ಸೀರೆಗೆ ಬಿಳಿಯ ಚುಕ್ಕಿಗಳು ಬಂದಿದ್ದೇ ಚೆನ್ನಾಗಿ ಕಾಣ್ಸೊಲ್ಲ" ಅಂದಳು. ಸೀರೆಯಲ್ಲಿ ಒಂದು ಸಣ್ಣ ಲೋಪವನ್ನು ಎತ್ತಿ ತೋರಿಸಿದರೆ ರೇಟು ಕಡಿಮೆಯಾಗಬಹುದು ಎಂದು ಅವಳ ಲೆಕ್ಕಾಚಾರ. ಮುದಿಯ ಸೇಲ್ಸ್‌ಮ್ಯಾನ್ ಅಷ್ಟು ಬೇಗನೆ ಬಿಡುವ ಅಸಾಮಿಯಲ್ಲ. "ನೋಡಿಯಮ್ಮಾ, ಈ ಸೀರೆಯಲ್ಲಿ ಬಿಳಿಯ ಚುಕ್ಕಿಗಳು ಬರದೇ ಹೋಗಿದ್ದರೆ ಬರೀ ಬಾರ್ಡರ್ ಮಾತ್ರ ಎದ್ದು ಕಾಣಿಸುತ್ತಿತ್ತು. ಬನಾರಸ್ ಮಾದರಿಯ ಡಿಸೈನ್ ಇದು." ಅನುಭವಿ ಸೇಲ್ಸ್‌ಮ್ಯಾನ್ ಮುದುಕನಿಗೆ ಮೈಥಿಲಿಯ ಹೊಸ ಪಾಠಗಳು ದೊಡ್ಡ ಸಂಗತಿಯಾಗಿರಲಿಲ್ಲ. ಹೆಂಗಸರು ಯಾವತ್ತೂ ಹಾಗೆಯೇ – ತಮಗೆ ಇಷ್ಟ ಬಂದದ್ದರಲ್ಲಿಯೂ ಸಣ್ಣ ಕೊಂಕು ಎತ್ತುವುದು ಸ್ವಭಾವ. ಸೇಲ್ಸ್‌ಮ್ಯಾನ್ "ಇದೇ ತರಹದ ಬೇರೆ ಸಿಕ್ಕಿದರೆ ಕೇಳಿ ಅಮ್ಮಾ. ಯಾವತ್ತೂ ಯಾವ ಕಾಲಕ್ಕೂ ಈ ತರಹದ ಸೀರೆ ನಿಮಗೆ ಸಿಗಲಾರದು. ಇದೊಂದು ಸ್ಯಾಂಪಲ್ ಮಾತ್ರವೇ ಇದೆ. ನಿಮ್ಮ ಮೈ ಬಣ್ಣಕ್ಕೆ ಚೆನ್ನಾಗಿ ಒಪ್ಪುತ್ತೆ, ಎಲ್ಲರಿಗೂ ಒಪ್ಪೋಲ್ಲ. ನಿಮಗೆ ರೇಟು ಹೆಚ್ಚಾಯಿತು ಅಂತ ಕಾಣಬಹುದು. ಆದರೆ, ಖಂಡಿತಾ ಹೇಳ್ತೀನಿ ಅಮ್ಮಾ – ಈ ಸೀರೆ ಉಟ್ಕೊಂಡ್ರೆ ನಿಮ್ಮ ಮನೆಯವ್ರು ಖುಶಿಪಡ್ತಾರೆ" ಎಂದು ಸಣ್ಣ ರೀಲು ಬಿಟ್ಟ. ಅನುಭವಿ ಮತ್ತು ಘಾಟಿ ಮುದುಕ! ಈ ಮುದುಕನ ಮಾತು ಕೇಳಿ ಮೈಥಿಲಿಗೆ ಮತ್ತು ಆಸೆಯಾಯಿತು. "ಸೀರೆಯೇನೋ ಚೆನ್ನಾಗಿದೆ. ಆದ್ರೆ, ರೇಟು ಕಡಿಮೆ ಮಾಡಲೇಬೇಕು ಇನ್ನೂರು ರೂಪಾಯಿ ಬಿಡಿ" ಅಂದಳು. "ಆಯ್ತು ಬಿಡಿ ಅಮ್ಮ, ಅದೇನೋ ಲುಕ್ಸಾನು ಇಲ್ಲದಂತೆ ನೋಡಿಕೊಳ್ಳಿ ನೂರು ರೂಪಾಯಿ ಬಿಡ್ತೀನಿ" ಅಂತ ಹೇಳುತ್ತಲೇ ಸೀರೆಯನ್ನು ಪ್ಯಾಕು ಮಾಡಲು ಹೊರಟ ಮುದುಕ. ಅದೇ ಹೊತ್ತಿಗೆ ಶುರುವಾಗಿದ್ದು ಗಲಭೆ -- ಅದೂ ಅಂಗಡಿಯ ಹೊರಗಡೆ. ಚಾರು ಸೇದುವ ಸಿಗರೇಟು ಮತ್ತು ಗುಂಡಿನ ಖರ್ಚು ಬಿಟ್ಟು ಎಷ್ಟಾಗಬಹುದು ಎಂದು ಮೈಥಿಲಿ ಲೆಕ್ಕ ಹಾಕಿಕೊಳ್ಳುತ್ತಲೇ ಸೀರೆಯನ್ನು ಕೊಂಡುಕೊಳ್ಳಲು ಅಣಿಯಾದಳು. ಆದರೆ, ಅದೇ ಸಮಯ ಅವಳು ಗಂಡನ ಸಿಗರೇಟಿನ ವೆಚ್ಚಕ್ಕೂ–

ತನ್ನ ಸೀರೆಯ ಖರ್ಚಿನ ಲೆಕ್ಕಕ್ಕೂ ತಾಳೆ ಹಾಕುತ್ತಿರುವುದು. ಮನೆಯ ಗೋಡೆಯ ಒಂದೊಂದೇ ಇಟ್ಟಿಗೆಯನ್ನು ತೆಗೆದಿರಿಸುವುದು ಎಂದು ಗೊತ್ತಿರಲಿಲ್ಲ ಮತ್ತು ಸೀರೆಯ ದುಡ್ಡು ಕೊಡಲು ಅವಳು ಕೌಂಟರಿನತ್ತ ಹೋಗುವಾಗಲೇ ಬೀದಿಯಲ್ಲಿ ಕಲ್ಲು ತೂರಾಟವೆಂಬ ಗಲಾಟೆ ಶುರುವಾಗಿದ್ದು. ಹಾಗೂ ಮೈಥಿಲಿಯು ಸೀರೆಯನ್ನು ಕೊಂಡುಕೊಳ್ಳಲು ಹೋದ ಅಂಗಡಿಯ ಹೆಸರು 'ಮಹಮ್ಮದ್ ಪೀರ್ ಅಂಡ್ ಸನ್ಸ್.'

ಬೀದಿಯಲ್ಲಿ ಬರುತ್ತಿರುವ ಮೆರವಣಿಗೆಯು ಅದೇ ರಸ್ತೆಯತ್ತ ಬರುವಾಗಲೇ ಮೈಥಿಲಿ ಕೊಂಡುಕೊಂಡ ಸೀರೆಯು ಪ್ಯಾಕ್ ಆಗಿತ್ತು. ನವರಂಗ್ ಥಿಯೇಟರ್‌ನಲ್ಲಿ 'ಕ್ರಾಂತಿವೀರ್' ಸಿನಿಮಾ ಪ್ರಾರಂಭವಾಗಿ ನಾನಾಪಾಟೇಕರ್ ಹೇಳುತ್ತಿದ್ದ ಹಿಂದೂ–ಮುಸಲ್ಮಾನರ ರಕ್ತವೆಲ್ಲಾ ಒಂದೇ – ಕೆಂಪು. ಚಾರು ಜಿನ್‌ಗಾಗಿ ಇದ್ದ ಬಿದ್ದ ನಾಣ್ಯಗಳನ್ನೆಲ್ಲಾ ಕೂಡಿಸಿಕೊಳ್ಳುತ್ತಿದ್ದ. ಹಳೆಯ ನಾಣ್ಯಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಅದನ್ನು ವೈನ್‌ಶಾಪಿನ ಅಂಗಡಿಯವನ ಟೇಬಲಿನಲ್ಲಿ ಚದುರಿಹಾಕಿ ಒಂದೆರಡು ಕ್ವಾಟರ್ ಕೊಡು ಎಂದು ಕೇಳುವುದೇ ಒಂದು ಮರ್ಯಾದೆಯ ಪ್ರಶ್ನೆ. ಮರ್ಯಾದೆಯನ್ನುವುದೇ ಒಂದು ಮುಜುಗರ ಸೃಷ್ಟಿ ಮಾಡುವ ಪ್ರಶ್ನೆಯೆಂದು ಕೂಡಾ ಅನಿಸಿತು. ನಾಣ್ಯಗಳನ್ನು ಚಾರು ಕಲೆಹಾಕಿಕೊಳ್ಳುತ್ತಿರುವುದು ಮನೆಯ ಮೂಲೆಯಲ್ಲಿ ಅದು ಅವನ ಅಗತ್ಯಕ್ಕೆ. ಮೈಥಿಲಿಯು ಕೌಂಟರ್‌ನಲ್ಲಿ ದುಡ್ಡನ್ನು ಎಣಿಸಿಕೊಳ್ಳುತ್ತಿರುವುದಕ್ಕೂ ಮತ್ತು ಬೀದಿಯಲ್ಲಿ ಇದ್ದಕ್ಕಿದ್ದಂತೆ ಗಲಭೆ ಶುರುವಾಗಿ ದಳ್ಳುರಿ ಹತ್ತಿಕೊಂಡದ್ದಕ್ಕೂ, ಹಾಗೂ ಅಂಗಡಿಯ ಶಟರನ್ನು ಪೀರ್ ಸಾಹೇಬರ ಮಗ ಎಳೆದದ್ದಕ್ಕೂ ಒಂದಕ್ಕೊಂದು ತಾಳೆಯಾಗಿರುವುದು ಆಕಸ್ಮಿಕ. ಆದರೆ ಅದು ಸತ್ಯ. ಪೀರ್ ಸಾಹೇಬರ ಮಗ ಅಂಗಡಿಯ ಶಟರ್ ಎಳೆಯದೇ ಹೋಗಿದ್ದರೆ ಮಾತ್ರ ಅಂಗಡಿಯ ಗಾಜುಗಳು ಪುಡಿಯಾಗುತ್ತಿದ್ದವೋ ಇಲ್ಲವೋ. ಆದರೆ ಅಂಗಡಿಯ ನಾಮಫಲಕವಂತೂ ಕಿತ್ತೇ ಹೋಗುತ್ತಿತ್ತು ಮತ್ತು ಅದಕ್ಕಾಗಿ ಯಾರೂ ಅಳುತ್ತಿರಲಿಲ್ಲ, ಆತಂಕವನ್ನೂ ಪಡುತ್ತಿರಲಿಲ್ಲ. ಇದೆಲ್ಲಾ ಒಂದು ರೀತಿಯ ಸಹಜವಾದ ಚಟುವಟಿಕೆಯೆಂದೋ, ಮಾಮೂಲಿಯಾದ ಸುದ್ದಿಯೆಂತಲೋ ಭಾವಿಸಿಕೊಂಡು ಮುಂದಕ್ಕೆ ಹೋಗುತ್ತಿದ್ದರು. ಆ ದಿನಗಳನ್ನು ತಳ್ಳಿಕೊಂಡು ಮತ್ತು ಕೆಲವು ದಿನಗಳಲ್ಲಿ ಅದನ್ನು ಮರೆತೂ ಬಿಡುತ್ತಿದ್ದರು. ಪುನಃ ಹೊಸ ಸುದ್ದಿ, ಹೊಸ ಗಾಸಿಪ್ ಶುರುವಾಗುವ ತನಕ. ಯಾವುದೋ, ಎಲ್ಲಿಂದಲೋ ಶುರುವಾಗುವ ಸಣ್ಣ ಸುದ್ದಿಗಳು ಸಾಂಕ್ರಾಮಿಕ ಕಾಯಿಲೆಯಂತೆ ನಗರದ ಬೀದಿಯಿಂದ ಹೊರಟಿದ್ದು ನಿಧಾನವಾಗಿ ದೊಡ್ಡದಾಗುತ್ತಾ, ಅದಕ್ಕೆ ರೆಕ್ಕೆ–ಪುಕ್ಕಗಳು ಸೇರಿಕೊಂಡು ಹಬ್ಬುತ್ತಾ ಬಂತು. "ಮಹಮ್ಮದ್ ಪೀರ್ ಅಂಡ್ ಸನ್ಸ್" ಅಂಗಡಿಯ ಬಳಿಗೆ ಬರುವಷ್ಟು ಹೊತ್ತಿಗೆ ಕೆಲವು ಅಂಗಡಿಗಳ ಬೋರ್ಡ್ ಕಿತ್ತುಹಾಕಲಾಗಿತ್ತು. ಅಂಗಡಿಯ ಶಟರ್ ಎಳೆಯುವುದನ್ನು ಗಮನಿಸಿದ ಮೈಥಿಲಿ, "ಯಾಕೆ? ಏನಾಯಿತು? " ಅಂದಳು. ಪೀರ್ ಸಾಹೇಬರ ಮಗ "ಸ್ವಲ್ಪ ಹೊತ್ತು

ಕೂತ್ಕೊಳ್ಳಿ ಮೇಡಂ, ಎಲ್ಲಾ ಸರಿಯಾದ ಮೇಲೆ ನಾವೇ ನಿಮ್ಮನ್ನು ಕಳಿಸಿಕೊಡುತ್ತೇವೆ, ಅದಕ್ಕೆ ನೀವೇನೂ ಗಾಬರಿಯಾಗಬೇಡಿ." ಬ್ರಾಹ್ಮಣರ ಕೇರಿಯ ಹುಡುಗರಿಗೆ ಸಾಬರು ಹೊಡೆದರೋ, ಸಾಬರ ಹುಡುಗರಿಗೆ ಬ್ರಾಹ್ಮಣ ಹುಡುಗರು ಹೊಡೆದರೋ ಯಾರಿಗೆ ಗೊತ್ತು? ಆ ಗಲಾಟೆಯೆನ್ನುವ ಸಣ್ಣ ಸಂಗತಿಯು ಕ್ರಿಕೆಟ್ ಅಟದ ಬಯಲಲ್ಲಿ ಹುಟ್ಟಿದ್ದು ಹುಡುಗರ ನಡುವೆ. ಕ್ರಿಕೆಟ್ ಆಡುವ ಹುಡುಗರ ಕ್ರಿಕೆಟ್ ಬ್ಯಾಟಿನಲ್ಲಿ; ಬಾಲ್‌ನಲ್ಲಿ ಯಾವುದೇ ರೀತಿಯ ಧರ್ಮದ ರೇಖೆಗಳು ಇರಲಿಲ್ಲ. ಧರ್ಮವೆಂದು ಒಂದಿದೆಯೆಂದು ಅದು ಬೀದಿಯ ಡಾಂಬರಿನ ಮೇಲೆ ರಕ್ತ ಚೆಲ್ಲಬಹುದೆಂದು ಯಾರೂ ಭಾವಿಸಿರಲಿಲ್ಲ. ಪೀರ್ ಸಾಹೇಬರ ಮಗ ಅಂಗಡಿಯ ಶಟರ್ ಎಳೆದವನಿಗೆ ಈ ಗಲಭೆ ಯಾಕೆಂದು ಗೊತ್ತಿರಲಿಲ್ಲ. ಆದರೆ, ಶಟರ್ ಎಳೆದ ತಕ್ಷಣ ಗಾಬರಿ ಹೊಂದಿದ ಮೈಥಿಲಿಗೆ ಮಾತ್ರ ಒಂದೇ ಒಂದು ಮಾತನ್ನು ಹೇಳಿದ; "ನಿಮ್ಮನ್ನು ತುಂಬಾ ಮುಂಜಾಗ್ರತೆಯಿಂದಲೇ ಮನೆ ತಲುಪಿಸುತ್ತೇನೆ. ಈ ಗಲಭೆ ಥಂಡಿಯಾಗಿಬಿಡುತ್ತದೆ ಮತ್ತು ಅದಕ್ಕೂ ಹೆಚ್ಚಾದ ಗಲಭೆಯೇನಾದರೂ ಆಯ್ತು ಎಂದಾದರೆ ನಿಮ್ಮನ್ನು ಪೋಲಿಸ್ ಜೀಪ್‌ನಲ್ಲಿ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡುತ್ತೇನೆ. ನೀವು ಏನೇನೂ ಯೋಚನೆ ಮಾಡಬೇಡಿ ಅಕ್ಕ – ಅಲ್ಲಾ ದೊಡ್ಡವನು!" ಈ ಮಾತುಗಳನ್ನು ಹೇಳಿದವನೇ ಮೈಥಿಲಿಗೆ ಕೂರಲು ಸ್ಟೂಲೊಂದನ್ನು ಎಳೆದುಕೊಟ್ಟ ಮತ್ತು ಟೇಬಲ್ಲಿನ ಮೇಲೆ ಹರಡಿಹಾಕಿದ್ದ ಸೀರೆಯನ್ನು ಮಡಿಸುತ್ತಾ ನಿಂತಿದ್ದ ಮುದಿಯನಿಗೂ ಹುಡುಗಿಗೂ "ಬೇಗ ಬೇಗ ಮಡಿಸಿಡಿ, ಇವರು ಸುಮ್ಮನಿರುವ ಯಾವ ಲಕ್ಷಣವೂ ಕಾಣಿಸುವುದಿಲ್ಲ." ಎಂದ.

ಇವರು ಸುಮ್ಮನಿರುವ ಲಕ್ಷಣ ಕಾಣಿಸುವುದಿಲ್ಲ ಎಂದು ಅವನು ಹೇಳಿದ್ದು ಹೊರಗಡೆಗೆ ಇರುವ ಜನರಿಗೆ ಕೇಳಲು ಸಾಧ್ಯವಿರಲಿಲ್ಲ ಮತ್ತು ಒಳಗಡೆಯಿರುವ ಜನರಿಗೆ ಹೊರಗಡೆ ಏನು ನಡೆಯುತ್ತಿದೆಯೆಂದು ತಿಳಿಯುತ್ತಿಲ್ಲ. ಅಂಗಡಿಯ ಶಟರ್‌ಗೆ ಬಿದ್ದ ಒಂದೆರಡು ಕಲ್ಲುಗಳು ಮಾತ್ರ ದಬದಬನೆ ಸದ್ದು ಮೂಡಿದವು. ಹಿಂದೂ ಮತ್ತು ಮುಸಲ್ಮಾನರ ರಕ್ತವೆಲ್ಲಾ ಒಂದೇ – ರಕ್ತ ಕೆಂಪಾಗಿರುತ್ತದೆಯೇ ಹೊರತು ಅದು ಕಪ್ಪಾಗಿರುವುದಿಲ್ಲ. 'ಹಂ ಹಿಂದೂಸ್ತಾನಿ ಹೈ'– ನವರಂಗ್ ಥಿಯೇಟರ್‌ನ ಒಳಗಡೆ ನಡೆಯುವ ಸಿನಿಮಾದ ಡೈಲಾಗು ರಸ್ತೆಯಲ್ಲಿ ಕಿರುಚಾಡುವ ಜನರಿಗೆ ಕೇಳುವುದು ಸಾಧ್ಯವಿರಲಿಲ್ಲ. ಕಿರುಚಾಡುವವರಿಗೆ ಬರೀ ಮಾತು ಮಾತ್ರ ಇರುತ್ತದೆ. ದೊಂಬಿಗಳಿಗೆ ಇಳಿಯುವವರಿಗೆ ಬರಿಯ ಕೈಗಳು ಮತ್ತು ಕಾಲುಗಳಿರುತ್ತವೆ. ಕಿವಿ; ಕಣ್ಣು ಮತ್ತು ಮೂಗು ಈ ಮೂರು ಅಂಗಗಳು ಕೆಲಸ ಮಾಡುವುದೇ ಇಲ್ಲವೇನೋ ಎಂದು ಮೈಥಿಲಿಯು ಭಾವಿಸಿದಳು.

ಚಾರು ಒಟ್ಟು ಮಾಡಿದ ನಾಣ್ಯಗಳನ್ನು ಹೇಗೆ ನೋಟುಗಳನ್ನಾಗಿ ಪರಿವರ್ತಿಸಬಹುದು ಎಂದು ಯೋಚಿಸುತ್ತಿದ್ದ. ಯಾವುದಾದರೂ ದಿನಸಿ ಅಂಗಡಿಗೆ ಹೋಗಿ ನಾಣ್ಯಗಳನ್ನು ಕೊಟ್ಟು ನೋಟು ಮಾಡಬೇಕು ಎಂದು ಹಂಬಲಿಸುವಷ್ಟರಲ್ಲಿ – ಮೈಥಿಲಿಯು ಕೂತ

ಅಂಗಡಿಯ ಹೊರಗಡೆ ಮತ್ತಷ್ಟು ಗದ್ದಲ ಹೆಚ್ಚಾಯಿತು. ಈ ತನಕ ಯಾವುದೇ ರೀತಿಯ ಭಯವಿಲ್ಲದೆ ಕೂತುಕೊಂಡಿದ್ದ ಮೈಥಿಲಿಯಲ್ಲಿ ಭಯದ ಕಪ್ಪು ಛಾಯೆಯು ಬೀಳತೊಡಗಿತು. ಈ ಗಲಭೆಯಲ್ಲಿ ನಾನು ಸಿಕ್ಕುಹಾಕಿಕೊಂಡೆನಲ್ಲಾ ಎಂದನ್ನಿಸತೊಡಗಿತು. ಹೇಗೆ ಮನೆ ಸೇರುವುದು ಎಂದು ಅವಳ ಯೋಚನೆಯಾದರೆ ಅಂಗಡಿಯನ್ನು ಉಳಿಸಿಕೊಳ್ಳುವುದು ಹೇಗೆ ಪೀರ್ ಸಾಹೇಬರ ಮಗ ಯೋಚಿಸುತ್ತಿದ್ದ. ಬಟ್ಟೆಯನ್ನು ಮಡಿಸಿಡುತ್ತಿದ್ದ ಮದುಕ ಮತ್ತು ಆ ಹುಡುಗಿಯಿಬ್ಬರೂ ಸುಮ್ಮನೇ ಕೂತಿದ್ದರು. ಮೌನದಲ್ಲಿ ಒಂದೆರಡು ಕ್ಷಣ ಬಿದ್ದ ಕಲ್ಲುಗಳ ಸದ್ದು ನಿಂತ ಮೇಲೆ ಮುದಿಯ ಹಿಂದುಗಡೆ ಬಾಗಿಲು ತೆರೆದು "ಈ ಯಮ್ಮ ಮತ್ತು ಹುಡುಗಿ ಹೊರಟುಹೋಗಿಬಿಡಲಿ ನಾವು ಹ್ಯಾಗೋ – ಇಲ್ಲೆ ಉಳೀಬಹುದು" ಎಂದ. ಪೀರ್ ಸಾಹೇಬನ ಮಗ "ತಡೀರಿ, ನಾನೇ ನೋಡ್ತೀನಿ" ಅಂದವನು ಹಿಂದುಗಡೆಯಿಂದ ಮೆಲ್ಲನೆ ಬಾಗಿಲು ತೆರೆದಾಗ ಓಣಿ ನಿರ್ಜನವಾಗಿತ್ತು ಮತ್ತೆ ವಾಪಾಸು ಬಂದವನೇ "ಹೇಗಾದರೂ ಈಗ ಹೋಗಬಹುದು, ನೀವು ಹೋಗ್ಬಿಡಿ. ನಾನು ಒಬ್ನೇ ಇಲ್ಲಿ ಇರ್ತೀನಿ" ಅಂದ. ಅಂಗಡಿಯ ಹೊರಗಡೆ ಸದ್ದು ಕಡಿಮೆಯಾದಂತೆ ಕೇಳಿಸಿತು. ಮೈಥಿಲಿಯು, ಆ ಬಟ್ಟೆಯಂಗಡಿಯ ಹುಡುಗಿಯೂ ಮುದಿಯನ ಬಟ್ಟೆಯಂಗಡಿಯಿಂದ ಹಿಂಬಾಗಿಲಲ್ಲಿ ಹೊರಬೀಳುವಾಗಲೇ – ಪೋಲಿಸರ ವ್ಯಾನೊಂದು ಬಂತು – ಅದೇ ಓಣಿಗೆ. ಮೈಥಿಲಿಯೂ, ಆ ಹುಡುಗಿಯು ಮುದಿಯನು ಅದೇ ವ್ಯಾನಿನಲ್ಲಿ ಕೂತರು. ಪೋಲಿಸ್ ವ್ಯಾನಿನಲ್ಲಿ ಕೂತು ತನ್ನ ಮನೆಯ ಅಡ್ರೆಸ್ ಹೇಳಿದವಳೇ "ಅಯ್ಯಬ್ಬಾ" ಅಂತ ನಿಟ್ಟುಸಿರುಬಿಟ್ಟಳು.

ಅವಳು ಪೋಲಿಸ್ ವ್ಯಾನಿನಲ್ಲಿ ಕುಳಿತು ನಿಟ್ಟುಸಿರು ಬಿಡುವುದಕ್ಕೂ ಚಾರು ಎಲ್ಲಾ ಚಿಲ್ಲರೆಗಳನ್ನು ಅಂಗಡಿಯಲ್ಲಿ ಕೊಟ್ಟು ನೋಟಾಗಿ ಪರಿವರ್ತಿಸಿದ್ದು ನಿಟ್ಟುಸಿರುಬಿಟ್ಟಿದ್ದು ಒಂದೇ ಹೊತ್ತಾಯಿತು. ಅವನು ಯಥಾ ಪ್ರಕಾರ ವೈನ್‌ಶಾಪಿನಿಂದ ಬಂದು ಮನೆಯ ಬೀಗ ತೆರೆಯುವಾಗ ಮೈಥಿಲಿಯೂ ಪೋಲಿಸ್ ಜೀಪಿನಿಂದ ಇಳಿದಳು. ಚಾರು ಪೋಲಿಸ್ ಜೀಪಿಂದ ಮೈಥಿಲಿಯು ಇಳಿದದ್ದು ನೋಡಿ ಗಾಬರಿಯಾದ. ಆದರೆ ಅಷ್ಟು ಹೊತ್ತಿಗೆ ಪೋಲಿಸ್ ಜೀಪ್ ಹೋಗಿಯಾಗಿತ್ತು. ಮೈಥಿಲಿಯು ಬಂದವಳೇ "ಮಾರ್ಕೆಟ್ ಬದಿಯಲ್ಲಿ ಕೋಮು ಗಲಭೆ ಶುರುವಾಗಿದೆ, ಸದ್ಯ ನಾನು ಬಂದುಬಿಟ್ಟೆ" ಎನ್ನುತ್ತಲೇ ಮನೆಯ ಒಳಗಡೆ ಹೊಕ್ಕಳು. ಅನಂತರ ಚಾರು ಹೊಕ್ಕ. "ಹೊಸ ಸೀರೆ ತಕೊಂಡಿದೀನಿ ಹೇಗಿದೆ? ರೇಟು ಎಷ್ಟು ಗೊತ್ತಾ? ಸಾವಿರದ ಇನ್ನೂರು, ನೋಡಿದಾಗ ಖುಶಿಯಾಯಿತು. ತಗೊಂಡುಬಿಟ್ಟೆ, ಸೀರೆ ತಗೊಂಡು ಹೊರಗೆ ಬರಬೇಕು ಅಂತನ್ನುವಷ್ಟರಲ್ಲಿಯೇ ಗಲಾಟೆ; ಸದ್ಯ ನಂಗೇನೂ ತೊಂದ್ರೆಯಾಗಿಲ್ಲ ಹೇಗಿದೆ ಸೀರೆ?" ಎನ್ನುತ್ತಾ ಮೈಥಿಲಿಯು ಸೀರೆಯ ಕಟ್ಟು ಬಿಚ್ಚಿದಳು. ಚಾರು ಸುಮ್ಮನೇ ಮಿಕಿಮಿಕಿ ನೋಡಿದ. ಮೈಥಿಲಿ "ನೋಡಿ ಹಸಿರು ಸೀರೆಗೆ ಕೆಂಪು ಬಾರ್ಡರ್ ಬಂದಿದೆ,

ಸೀರೆಯ ಮೈತುಂಬಾ ಬಿಳಿಯ ಚುಕ್ಕಿಗಳಿವೆ ಎಷ್ಟೊಂದು ಚೆನ್ನಾಗಿದೆ, ಆಸೆ ತಡೆಯಲಾಗದೆ ತಗೊಂಡುಬಿಟ್ಟೆ." ಚಾರು "ಚೆನ್ನಾಗಿದೆ" ಅಂದ. ಆದರೆ, ಮೈಥಿಲಿಯೇ "ಅಯ್ಯೋ ನಾನೊಬ್ಬಳು ಪೆದ್ದಿ, ನಿಮಗೇನು ಗೊತ್ತಾಗುತ್ತೆ? ಸೀರೆ ಹೇಗಿದೆ ಅಂತ ನಾನು ನಿಮ್ಮತ್ರ ಕೇಳ್ತೇನೆ ಅಲ್ವಾ? ಸೀರೆಯ ಸೆಲೆಕ್ಷನ್; ಅದರ ಮೈ, ಅದರ ಬಣ್ಣ, ಬಾರ್ಡರ್ – ಹೀಗೆ ಎಲ್ಲವೂ ದೇವವ್ರತರಂಥ ಗಂಡಸರಿಗೆ ತಿಳಿಯುತ್ತೆ. ನಿಮಗೇನು ತಿಳಿಯುತ್ತೆ ಮಣ್ಣು, ಕೈಗೆ ಸಿಗರೇಟು – ಕುಡಿಯೋಕೆ ಜಿನ್ ಇದ್ರೆ ಸಾಕಪ್ಪಾ" ಎನ್ನುತ್ತಲೇ ಮೈಥಿಲಿಯು ಹೊಸ ಸೀರೆಯನ್ನು ಕೈಯಲ್ಲಿ ಹಿಡಿದು ಬೆಡ್‌ರೂಮಿನ ಕಡೆಗೆ ನಡೆದಳು. ಅದೇ ಹೊತ್ತಿಗೆ ಗಾಂಧಿಬಜಾರಿನ ಚೌಕದಲ್ಲಿ ಗಲಭೆ ಹೆಚ್ಚಾಯಿತು ಮತ್ತು ಹೊಡೆದಾಟಗಳು ಶುರುವಾದವು. ಹಾಗೂ ವೈನ್‌ಶಾಪಿನಿಂದ ತಂದ ಜಿನ್‌ನ ಬಾಟಲಿಗಳನ್ನು ಮೆಲ್ಲನೆ ಬಿಚ್ಚಿಟ್ಟ. ಮೈಥಿಲಿಯು ಬೆಡ್‌ರೂಮಿನಲ್ಲಿ ಹೊಸ ಸೀರೆಯನ್ನು ಮೈಮೇಲೆ ಹೊದ್ದುಕೊಂಡು ಕನ್ನಡಿ ನೋಡುತ್ತಿದ್ದಳು.

ಚಾರುವಿನ ಗಮನದಲ್ಲಿ ಎರಡೇ ವಿಷಯಗಳಿದ್ದವು. "ದೇವವ್ರತರಂಥ ಗಂಡಸರಿಗೆ ತಿಳಿಯುತ್ತೆ ನಿಮಗೇನು ತಿಳಿಯುತ್ತೆ." ಮೈಥಿಲಿಯ ಈ ಮಾತುಗಳ ಗರಿಕೆಯ ಬೇರು ಆಳದಲ್ಲಿದೆ ಎಂದು ಸೂಚಿಸುತ್ತದೆಯೆಂದುಕೊಂಡ. "ಕಾಲ ದೊಡ್ಡದು, ಕಾಲದ ಕಾಲು ಹಿಡಿದು ಕಾಯುತ್ತೇನೆ. ಅಲ್ಲಿಯ ತನಕ ಸುಮ್ಮನಿರುವುದು ಲೇಸು" – ಚಾರು ಯೋಚಿಸಿದ. ಒಂದು ನಿರಾಶೆ? ಮೈಥಿಲಿಯು ಕನ್ನಡಿಯೆದುರು ನಿಂತು – ಈ ಸೀರೆ ಚೆನ್ನಾಗಿ ಒಪ್ಪುತ್ತೆ ಅಂತ ಅಂದುಕೊಂಡಳು. ಅದೇ ಸಮಯಕ್ಕೆ ಹಲ್ಲಿ ಲೊಚಗುಟ್ಟಿತು ಮತ್ತು ಅಂದು ಭಾನುವಾರ! ಭಾನುವಾರ ತೆರೆದಿದ್ದ ಕೆಲವು ಅಂಗಡಿಗಳು ಮುಚ್ಚಿದ್ದವು – ಮಧ್ಯಾಹ್ನದೊಳಗೆ ಹಾಗೂ ಅಲ್ಲಿಯೇ ಇದ್ದ ತರಕಾರಿ ಅಂಗಡಿಯ ತರಕಾರಿಗಳು ರಸ್ತೆಯಲ್ಲಿ ಬಿದ್ದಿದ್ದವು. ಅದೇ ಹೊತ್ತಿಗೆ – ಭಾನುವಾರದ ದಿನ ಚರ್ಚಿಗೆ ಹೋಗಿ ರೇಖಾ ಪಿಂಟೋ ವಾಪಾಸು ಬಂದವಳು ಅಳುತ್ತಲೇ ಕುಕ್ಕುರುಗಾಲಲ್ಲಿ ಕೂತವಳು – ಯೋಚಿಸತೊಡಗಿದಳು. ಯಾಕೆ ಬೇಕಿತ್ತು ಇವನ ಸಹವಾಸ?

ಕೆಂಡ ಸಂಪಿಗೆಯ ಬದಲಿಗೆ ಸಂಜೆಮಲ್ಲಿಗೆ

-೨-

ಚರ್ಚಿನಿಂದ ಬಂದವಳು ಬೇರೆ ಯಾವ ಕಾರಣವೂ ಇಲ್ಲದೇ ಇರುವ ಒಂದೇ ಒಂದು ಕಾರಣಕ್ಕಾಗಿ ಅಳತೊಡಗಿದಳು. ಈಗ ತಲೆಯನ್ನು ಸವರಿ; ಕಣ್ಣೀರನ್ನು ಸೆರಗಲ್ಲಿ ಒರೆಸಿ, ತೊಡೆಯಲ್ಲಿ ಮಲಗಿಸಿಕೊಂಡು ಪ್ರೀತಿಯ ಮಳೆಗರೆವ ತಾಯಿ ಪಕ್ಕದಲ್ಲಿ ಇಲ್ಲ. ಸಮಾಧಾನವೆಂಬ ಸಣ್ಣ ನೇವರಿಕೆಯನ್ನು ಮಾಡಬೇಕಾದ ತಂದೆಯೂ ಪಕ್ಕದಲ್ಲಿಲ್ಲ. ರೇಖಾ ಪಿಂಟೋ ಉಕ್ಕಿಬರತೊಡಗಿದ ವಿಪರೀತವಾದ ಅಳು ಮತ್ತು ಗಂಡನ ಮನೆಯೆಂಬ ಸ್ಮಶಾನ ವಾಸದಲ್ಲಿ ಭಯದಿಂದ ನಡುಗತೊಡಗಿದ್ದಳು. ಸಂಜೆಯ ಮೊಗ್ಗು ಮಲ್ಲಿಗೆಯ ಮೇಲೆ ಬಿಸಿ ನೀರು ಹೊಯ್ದರೆ ಆ ಮೊಗ್ಗು ಮಲ್ಲಿಗೆಯು ಉಸಿರಾಡುವುದು ಅಸಾಧ್ಯವೆಂದು ಸೈತಾನನಿಗೆ ಹೇಗೆ ಗೊತ್ತಿರಲು ಸಾಧ್ಯ. ತೀರಾ ಅಪರೂಪಕ್ಕೆ, ಅದೂ ಮದುವೆಯಾದ ಮೇಲೆ ಆ ದಯಾಮಯನಾದ ಕರುಣಾಳು ಏಸುವಿಗೆ ಪ್ರಾರ್ಥನೆ ಸಲ್ಲಿಸಲು ಮೊದಲ ಬಾರಿಗೆ ಹೋಗಿ ಬಂದಿದ್ದಾಳೆ.

ಮದುವೆಯೆಂಬ ನರಕದ ಕೂಪದಿಂದ ಪಾರು ಮಾಡಲು ದೇವರನ್ನು ಪ್ರಾರ್ಥಿಸಿಕೊಂಡಿದ್ದಾಳೆ. ಈಗಲೂ ಅವಳಿಗೆ ನೆನಪಿದೆ. ಕ್ರಿಸ್‌ಮಸ್ ಹಬ್ಬದ ದಿನ ಇದೇ ಪ್ರಸನ್ನ ಗ್ರೀಟಿಂಗ್ಸ್ ಕಳಿಸಿದ್ದ. ಅದರ ಜೊತೆಗೆ ಸಣ್ಣದೊಂದು ಚೀಟಿ. ಆ ಚೀಟಿಯಲ್ಲಿ ಇದ್ದುದೇನು? "ನನ್ನ ನರನಾಡಿಗಳಲ್ಲಿ ನಿನ್ನ ಹೆಸರು ತುಂಬಿಕೊಂಡಿದೆ. ಎದುರಿರುವ ಆಕಾಶ; ಭೂಮಿ; ಸಮುದ್ರ; ನದಿ; ಮರಗಿಡಗಳಲಿ ನಾನು ಕಾಣುತ್ತಿರುವುದು ನಿನ್ನನ್ನು. ನೀನೊಬ್ಬಳು ಜೊತೆಯಾದರೆ ನನ್ನ ಜೀವನ ಪೂರ್ಣವಾಗುತ್ತದೆ. ನಾನು ನಿನಗಾಗಿಯೇ ಕಾಯುತ್ತೇನೆ. ನಿನ್ನ ಪ್ರಸನ್ನ." ರೇಖಾ ಪಿಂಟೋಗೆ ಬಂದ ಮೊದಲ ಗ್ರೀಟಿಂಗ್ಸ್ ಮತ್ತು ಅದರ ಜೊತೆಗೆ ಇದ್ದ ಪುಟ್ಟ ಚೀಟಿಯಲ್ಲಿ ಎಷ್ಟು ಬೇಕೋ ಅಷ್ಟನ್ನು ಬರೆದು ನೇರವಾಗಿ ನನ್ನ ಅಂಗೈಯಲ್ಲಿ ಇಟ್ಟುಹೋಗಿದ್ದ. ರೇಖಾ ಪಿಂಟೋ ಆ ದಿನವೆಷ್ಟು ಚೆನ್ನಾಗಿತ್ತು? ಪ್ರೇಮವೆಂದರೆ ಅದು ಚಿರಂತನವಾಗಿ ಕಾಯುತ್ತಲೇ ಜೀವವನ್ನು ಹಸಿಯಾಗಿ ಇಡುವುದು. ಬತ್ತಿ ಒಣಗಿ ಹೋಗದ ಹಾಗೆ ನೋಡಿಕೊಳ್ಳುವುದು. ಪ್ರೇಮವೆಂದರೆ ಅದು ಸಂಪೂರ್ಣವಾದುದು ಎರಡು ಹೃದಯಗಳ ಮಿಲನ. ಪ್ರೇಮವೆಂದರೆ ಅದು ಕನಸಿನ ಪ್ರಪಂಚ. ಅದರಲ್ಲಿ ಯಾವ ಕಪ್ಪು ಮೋಡ ಕೂಡಾ ಕದ್ದು ಮುಚ್ಚಿಯಾದರೂ ಬಂದು ಬಗ್ಗಿ ನೋಡುವುದಿಲ್ಲ. ಪ್ರೇಮದಲ್ಲಿ ಎಷ್ಟೊಂದು ಅಪೂರ್ವವಾದ ಸುಂದರ ಚಿತ್ರಗಳಿವೆ. ಅದು ಹೃದಯದ ಕವಾಟದೊಳಗೆ ಭದ್ರವಾಗಿರುತ್ತದೆಯೆಂದು ಭಾವಿಸಿಕೊಂಡಿದ್ದ ರೇಖಾ ಪಿಂಟೋ ನಿಜವಾಗಿಯೂ ನೆಲದ ಮೇಲಿರಲಿಲ್ಲ. ಅವಳು ಮದುವೆಯ ಅನಂತರವೂ ಪ್ರೇಮದ ಒಂದು ಪಕಳೆಯೂ ಬಾಡಿ ಹೋಗಬಾರದು ಎಂದು ಭಾವಿಸಿಕೊಂಡಿದ್ದಳು. ಅವನು – ಆ ಪ್ರಸನ್ನ ಅವಳಿಗೆ ಪ್ರೇಮಪತ್ರ ರವಾನೆ ಮಾಡಿದ ಅನಂತರ ಆ ಪ್ರೇಮಕ್ಕೆ ಯಾವ ಕುಂದು ಬಾರದಂತೆ ನಟಿಸಿದ್ದ. ಹಾಕಿದ ಗೆರೆಯನ್ನು ದಾಟಿರಲಿಲ್ಲ ಮತ್ತು ಅದರಾಚೆಗೆ ಶರ್ಟಿನ ಇಸ್ತ್ರಿಯಾಗಲೀ; ರೇಖಾ ಪಿಂಟೋಳ ಲಂಗದ ನೆರಿಗೆಯಾಗಲೀ ಮುದುರಿಕೊಳ್ಳದ ಹಾಗೆ ನೋಡಿಕೊಂಡಿದ್ದ. ಅವರಿಬ್ಬರೂ ಕಟ್ಟಿದ ತಾಜ್‌ಮಹಲಿನಲ್ಲಿ ಅಚ್ಚ ಬಿಳಿಯೇ ಸಣ್ಣ ಮಂದಹಾಸವನ್ನು ಬೀರುತ್ತಿತ್ತು. ಪ್ರಸನ್ನ ಒಂದು ಗೆರೆ ದಾಟಲಿಲ್ಲ. ರೇಖಾ ಪಿಂಟೋ ಎಂಬ ಹುಡುಗಿಗಾಗಿ ಎರಡು–ಮೂರು ವರ್ಷ ಕಾಯುತ್ತಾ ಕೂತ. ಅದರಲ್ಲಿ ಹುಡುಗಾಟಿಕೆಯಿದೆಯೆಂದಾಗಲೀ; ಕಾಮದ ಪುನುಗು ಬೆಕ್ಕಿನ ವಾಸನೆಯಿದೆಯೆಂದಾಗಲೀ ರೇಖಾಗೆ ಅನಿಸಿರಲಿಲ್ಲ. ಕಪ್ಪು ಜೀನ್ಸ್ ಪ್ಯಾಂಟ್, ಕಡು ಹಳದಿ ಬಣ್ಣದ ಟೀಶರ್ಟ್ ಹಾಕಿಕೊಂಡು ಪ್ರಸನ್ನ ಬೈಕ್‌ಗೆ ಕಿಕ್ ಕೊಟ್ಟರೆ ಹದಿಹರೆಯದ ಹುಡುಗಿಯರ ಕಣ್ಣು ಮಿನುಗುವುದನ್ನು ಸ್ವತಃ ರೇಖಾ ನೋಡಿದ್ದಾಳೆ. ಗಟ್ಟಿಮುಟ್ಟಾದ ದೇಹ. ಅದಕ್ಕೆ ಸರಿಯಾದ ಸ್ವರ ಗಾಂಭೀರ್ಯ ಮತ್ತು ಆಗಾಗ ಸ್ಫೋಟಿಸುವ ಸಣ್ಣ ಸಣ್ಣ ಜೋಕ್‌ಗಳು ರೇಖಾನ್ನ ಮೆತ್ತಗೆ ಬೆಚ್ಚನೆಯ ಪ್ರೇಮದ ಗೂಡಿನಲ್ಲಿ ಇರಿಸಿದ್ದು ನಿಜ. ಕೊನೆಗೆ ರೇಖಾ ಮದುವೆಯಾಗಲು ಸಮ್ಮತಿಸಿದ್ದು ಕೂಡಾ ಇದೇ ಕಾರಣಕ್ಕೆ! ಈ ಬೆಚ್ಚನೆಯ ಮೃದು–ಮಧುರವಾದ ಕನಸು

ಪುಡಿಯಾಗಿರುವುದು ಮದುವೆಯ ದಿನದ ರಾತ್ರಿಯಲ್ಲಿ. ಮಲಗುವ ಕೊಠಡಿಯ ಪರಿಮಳದ ಹೂವು ಹಾಸಿಗೆಯ ಮೇಲೆ! ಅಲ್ಲಿಂದ ಶುರುವಾಗಿದ್ದು ರೇಖಾಗೆ ಮದುವೆಯೆಂಬ ನರಕದ ಅನುಭವ ಮತ್ತು ಹೆಣ್ಣಾಗಿ ಅನುಭವಿಸಬೇಕಾದ ಯಾತನೆ.

ಮದುವೆಯ ದಿನದ ರಾತ್ರಿ ಮಲಗುವ ಮುನ್ನ ಉಪ್ಪರಿಗೆಯ ಮೇಲೆ ಒಬ್ಬಂಟಿಯಾಗಿ ನಿಂತಿದ್ದ ರೇಖಾ ಪ್ರಸನ್ನ ಪುಟ್ಟ ಪುಟ್ಟ ನಕ್ಷತ್ರಗಳನ್ನು ಕಿಟಕಿಯಲ್ಲಿ ಇಣುಕಿ ನೋಡುತ್ತಿದ್ದಳು. ಕೆಳಗೆ ನೆಂಟರಪ್ಷರ ಗೌಜಿ-ಗದ್ದಲಗಳು ರೇಖಾ ಪ್ರಸನ್ನ ಒಬ್ಬಂಟಿಯಾಗಿ ಹೊರಗಡೆ ನೋಡುತ್ತಿದ್ದ ರೇಖಾಳ ಬೆನ್ನನ್ನು ಮುಟ್ಟಿದ್ದು ಪ್ರಸನ್ನ. ಆ ಗಡಸು ಕೈ ತನ್ನ ಬೆನ್ನು ಮುಟ್ಟಿದಾಗ ರಪ್ಪನೇ ತಿರುಗಿ ನೋಡಿದಳು. "ನೀವೇನ್ರಿ, ತುಂಬಾ ಭಯ ಬಿದ್ದುಬಿಟ್ಟೆ" ಎಂದಾಗ "ಭಯ ಪಡುವಂಥದ್ದು ಏನಿರುತ್ತೆ?" ಎಂದು ಹೇಳುತ್ತಲೇ ಪ್ರಸನ್ನ ಕೇಳಿದ್ದ ಮೊದಲ ಪ್ರಶ್ನೆಯೆಂದರೆ "ನಿನಗೆ ಸಂಬಳವೆಷ್ಟು?" ಈ ಪ್ರಶ್ನೆಯೇ ತುಂಬಾ ಅಸಂಗತವಾದುದು. ಮದುವೆಯ ದಿನದ ರಾತ್ರಿ ಗಂಡಸೊಬ್ಬ ಹೆಂಡತಿಗೆ ಕೇಳುವ ಸರಸ ಮಿಲನದ ಮೊದಲಾಟದ ಪ್ರೀತಿಯ ಪ್ರಶ್ನೆಯಂತೂ ಅಲ್ಲವೇ ಅಲ್ಲವೆಂಬುದು ರೇಖಾಗೆ ಅರ್ಥವಾಯಿತು. ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವುದಾಗಲೀ, ತಾನಿನ್ನು ಖಾಯಂ ಆಗಿ ಅವನ ಹೆಂಡತಿಯಾಗಿ ಅವನ ಆರೋಗ್ಯ ಭಾಗ್ಯವನ್ನು ಮಾತ್ರ ವಿಚಾರ ಮಾಡುವ ಸಹನಶೀಲೆಯಾಗಿ ಉಳಿಯುವ ಹೆಣ್ಣಾಗಿ ಮಾತ್ರ ಇರುವ ನಿರ್ಧಾರ ಮಾಡಿದ್ದನ್ನಾಗಲೀ ಆಗ ನಕ್ಷತ್ರಗಳನ್ನು ಕಿಟಕಿಯಿಂದ ನೋಡುತ್ತಿದ್ದ ಹುಡುಗಿಗೆ ಹೇಳಬೇಕೆಂದು ಅನಿಸಲಿಲ್ಲ. ಪ್ರಸನ್ನ ಕೇಳಿದ್ದಕ್ಕೆ ಉತ್ತರ ಕೊಡದೆ ಮೆತ್ತಗೆ "ಮದುವೆಯಾಯಿತು ಅಂದ್ರೆ ಅದೇನು ಖುಶಿಯಲ್ವಾ? ನಿಜವಾಗಿಯೂ ನಂಗೆ ತುಂಬಾನೇ ಹೆಮ್ಮೆ ಅನಿಸುತ್ತೆ. ಜೀವನಪೂರ್ತಿ ನಾನು-ನೀವು ಇಬ್ಬರೇ ಒಬ್ಬರಿಗೊಬ್ಬರು ಸುಖ-ದುಃಖ ಹಂಚಿಕೊಂಡು ಉಣ್ಣುವುದು ಅಂದ್ರೆ ಚೆನ್ನಾಗಿರುತ್ತೆ ಅಲ್ವಾ? ನಿಮ್ಮಂಥ ಗಂಡನ್ನ ಪಡೆದದ್ದಕ್ಕೆ ನನ್ನ ಗೆಳತಿಯರೆಲ್ಲಾ ಹೊಟ್ಟೆಕಿಚ್ಚು ಪಡ್ತಾರೆ ಗೊತ್ತಾ?" ರೇಖಾ ಹೇಳಿದಳು - ತುಂಬಾ ಮುಗ್ಧೆಯಾಗಿ. ಆದರೆ, ಇನ್ನು ಕೇವಲ ಒಂದೆರಡು ಗಂಟೆಯಲ್ಲಿಯೇ ತನ್ನ ಮಾತನ್ನು ತಾನೇ ಜೀರ್ಣಿಸಿಕೊಳ್ಳಲಾಗದ ಸ್ಥಿತಿಯೊಂದು ನಿರ್ಮಾಣವಾಗುತ್ತದೆಯೆಂದು ಅವಳಿಗೇನು ಗೊತ್ತಿತ್ತು. ಅವಳ ಕಣ್ಣು ಕಿಟಕಿಯಿಂದ ಆಚೆಗೆ ಇರುವ ಆಕಾಶವನ್ನು ನೋಡುತ್ತಿತ್ತು. ಆದರೆ ಪ್ರಸನ್ನನ ಕಣ್ಣು ಅವಳ ಕೊರಳಿಗೆ ಚೈನಿನ ಮೇಲೆ ನೆಟ್ಟಿತ್ತು. ಪ್ರಸನ್ನ ಮತ್ತೆ ಕೇಳಿದ, "ನಿನ್ನ ಸಂಬಳವೆಷ್ಟು?" ರೇಖಾ, "ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟೆ, ಹೇಗೂ ನಿಮ್ಮ ಈ ಊರಿಗೂ ನಾನು ಕೆಲಸ ಮಾಡುವ ಜಾಗಕ್ಕೂ ಎಷ್ಟೊಂದು ದೂರವಿದೆ. ಅದೆಲ್ಲಕ್ಕಿಂತ ನಾನೀಗ ಕೆಲಸಕ್ಕೆ ಹೋಗಬೇಕಾದ ಅಗತ್ಯವಿದೆಯೇ?" ಅವನ ಮುಖವನ್ನೇ ನೋಡಿ ಹೇಳಿದಳು. ಎಷ್ಟು ಸಂಬಳ ಬರುತ್ತಿತ್ತು ನಿಂಗೆ? ಪ್ರಸನ್ನ ಧ್ವನಿಯಲ್ಲಿ ಒಂದು ಸಣ್ಣ ಆಸೆಬುರುಕುತನ ಕಾಣಿಸಿಕೊಂಡಿತು. ರೇಖಾ ಅದನ್ನು

ಅರ್ಥಮಾಡಿಕೊಳ್ಳದೆ "ಎಂಟು ಸಾವಿರದ ತನಕ ಬರುತ್ತಿತ್ತು" ಅಂದಳು. ಪ್ರಸನ್ನ "ಏನಿದ್ದರೂ ನೀನು ಕೆಲಸ ಬಿಟ್ಟಿದ್ದು ಸರಿಯಾಗಲಿಲ್ಲ, ಕೆಲಸ ಬಿಡಬಾರದಿತ್ತು ಈಗ ಬರ್ತೇನೆ" ಅಂದವನೇ ಉಪ್ಪರಿಗೆಯ ಮೆಟ್ಟಿಲನ್ನು ಇಳಿಯುವಾಗಲೇ ಕೇಳಿ ಬಂದ ಅವನ ಹೆಜ್ಜೆಯ ಶಬ್ದ ಮಾತ್ರ ಸ್ವಲ್ಪಮಟ್ಟಿಗೆ ಮಂದವಾದ ಗತಿಯಲ್ಲಿಲ್ಲ. ಸಶಬ್ದವಾದ ಅವನ ಹೆಜ್ಜೆಗಾರಿಕೆ ಮದುವೆಯ ದಿನದ ಗಂಡಿನ ಹೊಸ ಉತ್ಸಾಹದ ಮಾದರಿಯದು ಅಂತ ಯಾರು ಹೇಳುವಂತಿರಲಿಲ್ಲ. ರೇಖಾಳ ಮನಸ್ಸು ಒಂದು ಕ್ಷಣ ಮುದುಡಿಹೋಯಿತು. ಮತ್ತೆ ಅವಳು ಕಿಟಕಿಯ ಸಂಧಿಯಿಂದ ಆಕಾಶವನ್ನು ನೋಡುತ್ತಾ ನಿಂತವಳು – ಕೆಳಗಡೆಯಿಂದ ಪ್ರಸನ್ನ ಕರೆದಾಗಲೇ ಹೋಗಿದ್ದು. ರಾತ್ರಿಯ ಊಟದ ವೇಳೆಯಲ್ಲಿಯೂ ಎಲ್ಲಿಯೋ ಒಂದು ಸಣ್ಣ ಮೌನ ಮತ್ತು ಅಪಸ್ವರ ಹಾಜರಾಗಿದೆಯೆಂದು ಅನಿಸತೊಡಗಿತು. ಈ ಅಪಸ್ವರ ನಿಜವಾಗಿಯೂ ಸರಿಯಾಗಿಯೇ ಹಾಜರಾಗಿದ್ದು ರಾತ್ರಿಯ ಹತ್ತು ಗಂಟೆಯ ವೇಳೆಗೆ – ಅದೇ ಉಪ್ಪರಿಗೆ ಮದುಮಕ್ಕಳ ಕೋಣೆಯಲ್ಲಿ. ಮದುಮಕ್ಕಳನ್ನು ಉಪ್ಪರಿಗೆಗೆ ಕಳಿಸಿದ ಮೇಲೆ ನೆಂಟರಿಷ್ಟರು ಅವರ ಪಾಡಿಗೆ ತಮ್ಮದೇ ರೀತಿಯಲ್ಲಿ ಜೋಕ್ ಕಟ್ ಮಾಡುತ್ತಾ ಕೆಳಗಡೆಯಲ್ಲಿ ನಗೆಯಲ್ಲಿದ್ದರೆ – ಮಾಳಿಗೆಯ ಮೇಲೆ ವಧೂವರರ ಕೊಠಡಿಯಲ್ಲಿ ಒಂದು ಸಣ್ಣ ಮಂದಹಾಸವಾಗಲೀ ರತಿವಿಲಾಸಕ್ಕೆ ಅಣಿಯಾಗುವ ಬಿಸಿಯುಸಿರಾಗಲೀ – ಯಾವೂದೂ ಇಲ್ಲ! ರೇಖಾ ಪೆಚ್ಚಾಗಿರುವುದೇ ಅದಕ್ಕೆ.

ಪ್ರಸನ್ನ ಉಪ್ಪರಿಗೆಯ ಕೋಣೆಗೆ ಬಂದವನೇ ಬಾಗಿಲು ಭದ್ರಪಡಿಸಿದ. ರೇಖಾ ಸಣ್ಣದಾಗಿ ಕಿರುನಗೆಯನ್ನು ನಕ್ಕಳು ಮತ್ತು "ಸಾಹೇಬ್ರಿಗೆ ಬಹಳ ಅವಸರವಿದ್ದ ಹಾಗಿದೆ" ಅಂದಳು. ಪ್ರಸನ್ನ ಅದನ್ನು ಕಿವಿಗೊಡದೆ ರೇಖಾಳ ಯಾವ ಮಾತು, ನಗೆಯನ್ನು ಲೆಕ್ಕಿಸದೇ ಅವಳನ್ನು ಹಾಸುಗೆಯ ಮೇಲೆ ಎಳೆದುಕೊಂಡ. ರೇಖಾಳ ಕನಸಿನ ದಾಂಪತ್ಯ ಜೀವನದ ಮೊದಲ ಜಯ ಉದುರಿಬಿತ್ತು. "ಮೊದಲು ಬಟ್ಟೆ ಬಿಚ್ಚೆ ಅದನ್ನು ಹೇಳಿಕೊಡಬೇಕೇನೋ?" ಪ್ರಸನ್ನ ಸ್ವಲ್ಪ ಗಡುಸಾಗಿ ಹೇಳಿದ. ರೇಖಾ ಯಾಕೆ ಹೀಗೆ? ಎಂದು ಕೇಳಬೇಕೆಂದು ಭಾವಿಸಿದವಳು ಒಂದೆರಡು ಕ್ಷಣ ಸುಮ್ಮನಾದಳು. ನಿನ್ನೆಯ ತನಕವೂ ನನ್ನ ಒಲವಿನ ಪ್ರಸನ್ನ ಇಂದು ಮೊದಲ ಕ್ಷಣದಲ್ಲಿ ಅಧಿಕಾರಯುತವಾಗಿ "ಬಟ್ಟೆ ಬಿಚ್ಚೆ" ಎಂದು ಹೇಳಿದ ಕ್ರಮ ನೋಡಿಯೇ ರೇಖಾ ಗಾಬರಿಯಾದಳು. ತಮ್ಮಿಬ್ಬರ ಪ್ರೇಮದ ನಡುವೆ ಒಂದು ದಿನವೂ ಗೆರೆಯನ್ನು ದಾಟದ; ಮುತ್ತು ವಿನಿಮಯಕ್ಕೆ ಸೀಮಿತಗೊಳಿಸಿದ್ದ ಪ್ರಸನ್ನ ಹಾಸಿಗೆಗೆ ಎಳೆದುಕೊಂಡು "ಬಟ್ಟೆ ಬಿಚ್ಚೆ" ಎಂದು ಹೇಳಿದ್ದು ಗಾಬರಿ ಹುಟ್ಟಿಸಿತು. ಪ್ರಸನ್ನನ ಅವಸರ ಹೆಚ್ಚಾಗಿರಬೇಕೆಂದು ತನ್ನ ಪಾಡಿಗೇ ತಾನೇ ಸಮಾಧಾನ ಹೇಳುತ್ತಾ ಅವನು ಹೇಳಿದಂತೆ ಮಾಡಿದಳು. ರತಿ ವಿಲಾಸದ ಕೇಳಿಯೊಂದನ್ನು ಹೊರತುಪಡಿಸಿ ಮೈಯಿಡೀ ಹಿಂಸೆ, ಗಾಯ ಮಾಡಿದ ಪ್ರಸನ್ನ ಅದರಲ್ಲಿಯೇ ತೃಪ್ತಿ ಹೊಂದಿದ. ರೇಖಾ

ಎಂಬ ಹಸಿ, ಮುಗ್ಧ ಮನಸ್ಸಿನ ಹುಡುಗಿಯ ಮೈ ಮೇಲೆ ಪ್ರಸನ್ನನ ಉಗುರಿನ ಗುರುತು; ಅವನು ಕಚ್ಚಿದ ಗಾಯಗಳು! ಅದು ಬಿಟ್ಟು ಬೇರೇನೂ ಇಲ್ಲ – ಯಾಕೆಂದರೆ ಪ್ರಸನ್ನನ ಗಂಡಸುತನ ಎಂಬುದನ್ನು ತೋರಿಸಲು ಅವನು ಮಾಡಿದ ಕೆಲಸಗಳು ಅವು ಮಾತ್ರ. ಪ್ರತಿ ದಿನದ ರಾತ್ರಿಗಳೂ ಜೀವ ಹಿಂಡುವ ರಾತ್ರಿಗಳು!

ಮನಸ್ಸಿನ ಸಮಾಧಾನಕ್ಕೆ ಅವಳಿಗೆ ಉಳಿದದ್ದು ಚರ್ಚ್ ಮಾತ್ರ. ರಾತ್ರಿಯೆಂಬ ಭಯವನ್ನು ಹೋಗಲಾಡಿಸಲು ಭಾನುವಾರದ ಹಗಲು ಅವಳು ಚರ್ಚಿಗೆ ಹೋಗಿಬಂದು ಅಳತೊಡಗಿದ್ದಳು. ಕಣ್ಣಿನಿಂದ ಉದುರುವ ಒಂದೊಂದು ಹನಿ ನೀರು ಅವಳ ಜೀವಕ್ಕೆ ಸಣ್ಣ ಸಾಂತ್ವನ ಹೇಳುತ್ತಿತ್ತು. ಅದೇ ಹೊತ್ತಿಗೆ ಮೈಥಿಲಿಯು ಗಂಡನಿಗೆ ಹೇಳುತ್ತಿದ್ದಳು: "ಈ ಸೀರೆಯು ಎಷ್ಟು ಚೆನ್ನಾಗಿದೆ ಅಲ್ವಾ? ನಿಮಗೇನು ಗೊತ್ತಾಗುತ್ತದೆ ಮಣ್ಣು? ದೇವವ್ರತರಿಗೆ ಇದೆಲ್ಲಾ ತಿಳಿಯುತ್ತಿತ್ತು." ಮೈಥಿಲಿಗೆ ಅರಿವಿಲ್ಲದೇ ಬಂದುದು ದೇವವ್ರತನ ಹೆಸರು! ಹಾಗೂ ಅವಳ ಎದುರುಗಡೆ ಮತ್ತೊಬ್ಬ ದೇವವ್ರತ ಹಾಜರಾಗಲಿದ್ದಾನೆ ಎಂಬುದಾಗಲೀ ಆ ಸಂದರ್ಭದಲ್ಲಿ ತಿಳಿದಿರಲಿಲ್ಲ!

ಬೇಸಿಗೆಯಲ್ಲಿ ಉದುರಿಬಿದ್ದ ತರಗೆಲೆಯನ್ನು ಒಂದೆಡೆಗೆ ರಾಶಿ ಹಾಕಿಕೊಂಡು ಚೀಲಕ್ಕೆ ತುಂಬುವಂತೆ ಹತ್ತಾರು ನೆನಪುಗಳನ್ನು ತುಂಬಾ ವ್ಯವಸ್ಥಿತವಾಗಿಯಲ್ಲವಾದರೂ ಅದನ್ನು ಹಸಿಯಾಗಿ ಇಟ್ಟುಕೊಂಡ ಮೈಥಿಲಿಗೆ ತನ್ನ ಸೀರೆಗಿಂತ ದೊಡ್ಡ ವಿಷಯ ಯಾವುದೂ ಇರಲಿಲ್ಲ. ಆಗಷ್ಟೇ ಕೆಲವು ಗಂಟೆಗಳ ಮೊದಲು ಶುರುವಾಗಿದ್ದ ಕೋಮು ಗಲಭೆಗೂ ತನ್ನ ಹಸಿರು ಬಣ್ಣದ ಸೀರೆಗೂ ಯಾವುದೇ ರೀತಿಯ ಸಂಬಂಧವಿಲ್ಲವೆಂಬಂತೆ ಚಾರುವಿನೆದುರು ವರ್ಣಿಸಿದ್ದು ನಿಜ. ಅವಳ ಮಾತಿನ ನಡುವೆ ಪಳಕ್ಕನೇ ಮಿಂಚಿದ ದೇವವ್ರತನ ಹೆಸರು ಯಾಕೋ ಅನಂತರದ ಕ್ಷಣದಲ್ಲಿ ಅಸಹಜವೆಂದು ಅನಿಸಿತು. ಅವನ ಹೆಸರನ್ನು ಬಿಟ್ಟ ಪದಗಳನ್ನು ತುಂಬಿರಿ ಅನ್ನೋ ಥರ ತಂದಿದ್ದೇ ಅವಳ ಕಸಿವಿಸಿ ಕಾರಣವಾಯಿತು. ಕಿವಿಯ ಅತಿ ಸೂಕ್ಷ್ಮತೆ, ಕಣ್ಣಿನ ರೂಕ್ಷತೆಯೆರಡನ್ನೂ ಯಾವುದೇ ಕಾರಣಕ್ಕೂ ಬಿಡಲೊಲ್ಲದ ಚಾರು ಅದನ್ನು ಕೇಳಿದರೂ ಕೇಳದಂತೆ ನಟಿಸಿದ. ಆ ತರಹದ ಒಂದು ಜಾಣ ಕಿವುಡುತನ ಅವನಿಗೆ ಅಗತ್ಯವಾಗಿತ್ತು. ಆದರೆ, ಅವನಿಗೇನು ಗೊತ್ತು – ತನ್ನ ಜೊತೆಯಲ್ಲಿ ಕಚೇರಿಯ ಮೂಲೆ ಟೇಬಲನ್ನು ಹಿಡಕೊಂಡು ಕೆಲಸ ಮಾಡುತ್ತಿದ್ದ ಮಲ್ಲಿಗೆಯಂಥ ಹುಡುಗಿಯೊಬ್ಬಳು ಚರ್ಚ್‌ಗೆ ಹೋಗಿಬಂದವಳೇ ಕುಕ್ಕುರುಗಾಲಲ್ಲಿ ಕುಳಿತುಕೊಂಡು ಅಳುತ್ತಿದ್ದಾಳೆಂದು. ಒಂದು ವೇಳೆ ಗೊತ್ತಾಗಿದ್ದರೂ ಆ ಸಮಯದಲ್ಲಿ ಅವನು ಏನೂ ಮಾಡಲಾಗುತ್ತಿರಲಿಲ್ಲ. ಅಲ್ಲದೆ ಹಾಗೇನಾದರೂ ಅವಳಿಗೆ ಸಹಾಯ ಮಾಡುವ ನೆಪದಲ್ಲಿ ಅವನು ಮುಂದಕ್ಕೆ ಹೋಗಿದ್ದಿದ್ದರೆ ರೇಖಾ ಪಿಂಟೋ ಅಥವಾ ರೇಖಾ ಪ್ರಸನ್ನ ಎಂಬ ಹುಡುಗಿಯು ಕೆಲವು ಹಿಂಸೆಗಳಿಂದ ಬಚಾವು ಆಗುತ್ತಿದ್ದಳು. ಆದರೆ, ಎರಡನೆಯ ಮತ್ತು ಮತ್ತೊಬ್ಬ ದೇವವ್ರತನ ತದ್ರೂಪಿಯೊಬ್ಬ ಮೈಥಿಲಿಯ ಬಾಳಿನಲ್ಲಿ ಪ್ರವೇಶವಾಗುತ್ತಿರಲಿಲ್ಲವೇನೋ? ಮತ್ತು

ಎರಡನೆಯ ದೇವವ್ರತ ಬರುವುದರ ಜೊತೆಗೆ ಮೈಥಿಲಿಗೆ ಎರಡನೆಯ ತಪ್ಪು ಮಾಡುವ ಅಥವಾ ಎರಡನೆಯ ಜಿಗಿತದ ಒಂದು ದೊಡ್ಡ ಅವಕಾಶ ಸಿಕ್ಕಿತು ಮತ್ತು ಕೆಂಡ ಸಂಪಿಗೆಯ ಬದಲಿಗೆ ಸಂಜೆ ಮಲ್ಲಿಗೆಯ ಮೊಗ್ಗೊಂದು ಚಾರುವಿನ ಮನೆಯಲ್ಲಿ ಅರಳುವುದು ತಡವಾಯಿತು.

ದೃಶ್ಯದ ಪುನರಾವರ್ತನೆ

– ೩ –

ಆ ದಿನದ ಭಾನುವಾರದ ಮಧ್ಯಾಹ್ನದ ವಿಷಮ ಗಳಿಗೆಯ ಹೊತ್ತೇ ಮೈಥಿಲಿಯು ಸೀರೆಯನ್ನು ಕೊಂಡಾಡಿದ್ದು ಮತ್ತು ವಿಷಮ ಗಳಿಗೆಯಲ್ಲಿಯೇ ರೇಖಾಪ್ರಸನ್ನ ಅತ್ತಿದ್ದು ಮತ್ತು ಅಂಥಾ ವಿಷಮ ಗಳಿಗೆಯಲ್ಲಿ ಪೇಟೆಯಲ್ಲಿ ಗಲಭೆ ಶುರುವಾಗಿದ್ದು. ವಿಷಮದ ಕಾಲ ಮತ್ತು ಲಯ ಎರಡೂ ಅಪಾಯಕಾರಿಯೇ. ವಿಷಮ ಕಾಲದಲ್ಲಿ ಮೈಥಿಲಿಯ ಬಾಯಿಂದ ಬಂದ ಮಾತನ್ನು ಕೇಳಿ ಕಾಂಪೌಂಡಿನ ಗೋಡೆಯ ಮೇಲಿದ್ದ ಓತಿಕ್ಯಾತ ಹೌದೆಂದು ತಲೆಯಲ್ಲಾಡಿಸಿತು. ಕುಂಬಾರರ ಓಣಿಯ ಪೂಜಾರಪ್ಪ ಈ ಓತಿಕ್ಯಾತ ತಲೆಯಲ್ಲಾಡಿಸುವುದು ನೋಡಿದ್ದರೆ ಬಿಡುತ್ತಿರಲಿಲ್ಲ. ಯಾಕೆಂದರೆ, ಮಾಟಕ್ಕೆ ಬೇಕಾದ್ದೇ ಈ ಓತಿಕ್ಯಾತ ಮತ್ತು ಕುಂಬಾರರ ಓಣಿಯ ಪೂಜಾರಪ್ಪನ ಮನೆಗೆ ಮೈಥಿಲಿಯೂ ಬೇಗನೇ ಹೋಗಲಿದ್ದಾಳೆ, ಅದು ಮಾಟಕ್ಕಲ್ಲ. ಮಂತ್ರವಾದದಿಂದ ಮದ್ದು ತಂದು ಗಂಡನಿಗೆ ಉಣಬಡಿಸುವುದಕ್ಕೆ. ಹಾಗಾಗಿಯೇ ಭಾನುವಾರದ ನಟ್ಟನಡುವಿನ ಮಧ್ಯಾಹ್ನದ ಓತಿಕ್ಯಾತನ ಸಾಕ್ಷಿಯು ಸುಳ್ಳಾಗಲಿಲ್ಲ! ಗೋಡೆಗೆ ನೇತುಹಾಕಿದ ಕ್ಯಾಲೆಂಡರ್‌ಗಳು

ತಿಂಗಳಿಗೊಮ್ಮೆ ಪುಟವನ್ನು ಮುಗುಚುತ್ತವೆ. ವರ್ಷಕ್ಕೊಮ್ಮೆ ರದ್ದಿ ಪೇಪರಿನ ಜೊತೆಗೆ ಅಂಗಡಿಯ ತಕ್ಕಡಿಗಳಲ್ಲಿ ನೇತಾಡುತ್ತವೆ. ಹೊಸ ಕ್ಯಾಲೆಂಡರ್ ಮತ್ತೆ ಅದೇ ಮೊಳೆ ಬಡಿದು ಜೋತಾಡುತ್ತವೆ. ಕಾಲದ ಪಯಣ ಮಾತ್ರ ಈ ರೀತಿಯ ಕ್ಯಾಲೆಂಡರ್‌ಗಳ ಜೊತೆಗೆ ಮಾತ್ರ ಸಾಗುವುದಿಲ್ಲ ಎಂದನ್ನಿಸಿತು ಮೈಥಿಲಿಗೆ. ದೇವವ್ರತನ ಸಲುಗೆ; ಅವನ ಮಾತುಕತೆ; ಹಾಸ್ಯ; ಶೃಂಗಾರ ಎಲ್ಲವನ್ನೂ ಇಷ್ಟಪಟ್ಟಿದ್ದ ತಾನು ಅವನು ಹತ್ತಿರ ಬಂದಾಗ ಯಾಕೆ ದೂರ ಓಡಿದೆ? ಕಟ್ಟುಪಾಡೇ? ಭಯವೇ? ಅಲ್ಲಾ ಅವನು ಆಗಷ್ಟೇ ತಿಂದ ಈರುಳ್ಳಿ ಗಬ್ಬು ವಾಸನೆಯೇ? ಸೀರೆಯ ಜೊತೆಗೆ ಅಯಾಚಿತವಾಗಿ ಬಂದ ದೇವವ್ರತನ ಹೆಸರು ಮತ್ತೆ ಹಳೆಯ ನೆನಪುಗಳ ನೂಲಿನುಂಡೆಯನ್ನು ಬಿಚ್ಚತೊಡಗಿತ್ತು. ಆದರೆ, ಚಾರು ಮಾತ್ರ ನಿರ್ವಿಕಾರಿ. ಅವನಿಗೆ ಮೈಥಿಲಿಯ ಒಳ ಹೊರಗಿನ ದ್ವಂದ್ವಗಳು, ಅಂತರಂಗ-ಬಹಿರಂಗಗಳು ಗೊತ್ತಾಗುತ್ತಿಲ್ಲವೋ? ಅಥವಾ ಗೊತ್ತಾಗದಂತೆ ನಟಿಸುತ್ತಿದ್ದಾನೋ? ವಿಪರೀತವಾದ ಗೊಂದಲಗಳು! ಸೀರೆಯನ್ನು ಮೈಥಿಲಿಯು ಮತ್ತೆ ಸರಿಯಾಗಿ ಮಡಿಸಿ ಬೀರುವಿನೊಳಗೆ ಇಡುವಾಗಲೇ ಯೋಚಿಸಿದ್ದು. ದೇವವ್ರತ ಮನೆ ಖಾಲಿ ಮಾಡಿ ಹೋಗಿ ಎಷ್ಟು ತಿಂಗಳಾಯಿತು? ಈ ಭಾನುವಾರಕ್ಕೆ ಸರಿಯಾಗಿ ನಾಲ್ಕು ತಿಂಗಳು! ಹೊಸ ಸೀರೆಯು ಬಂದ ಅಪರೂಪದ ಸಂಭ್ರಮಕ್ಕೆ ಮೈಥಿಲಿಯ ಮೈಯು ಕೊಂಚ ಬಿಸುಪೇರಿತು. ಚಾರುಗೆ ಊಟವಾಯಿತೇ, ಇಲ್ಲವೇ ಎಂಬುದನ್ನು ನೋಡಲು ಅವಳಿಗೆ ತಾಳ್ಮೆಯಿರಲಿಲ್ಲ. "ಹೊಸ ಸೀರೆ ತಗೊಂಡ ಮೇಲೆ ಎಷ್ಟೊಂದು ನೆಮ್ಮದಿಯಾಯಿತು ನೋಡಿ. ಈ ನೆಮ್ಮದಿಯು ಮತ್ತೆಲ್ಲಿ ಸಿಗುತ್ತೆ? ಇಡೀ ಅಂಗಡಿಯಲ್ಲಿ ಇದೊಂದೇ ಈ ಕಲರಿಂದು ಸಿಕ್ಕಿದ್ದು. ಹಸಿರು ಬಣ್ಣ, ಕೆಂಪು ಅಂಚು ಎಂಥಾ ಕಾಂಬಿನೇಶನ್ ಅಲ್ವಾ?" ಚಾರು ಅವಳು ಕೇಳಿದ್ದಕ್ಕೆ "ಹೌದು" ಅಂದ. ಅಲ್ಲವೆಂದು ಹೇಳುವುದು ಸರಿಯಲ್ಲವೆಂದು ಅವನಿಗೆ ಅನಿಸಿತು ಮತ್ತು ಚೆನ್ನಾಗಿದೆಯೇ ಇಲ್ಲವೇ ಎಂದು ಹೇಳುವಷ್ಟು ಪರಿಣಿತನಲ್ಲ ಎಂದು ಸ್ವತಃ ಅವನಿಗೇ ಗೊತ್ತಿತ್ತು. ಮತ್ತೆ ಮೈಥಿಲಿಯು ಅದನ್ನೇ ಪುನರಾವರ್ತಿಸಿದಾಗ 'ಹ್ಞೂಂ' ಅಂದನಾದರೂ ಕರುಳಿನಾಳದಲ್ಲಿ ಅಪ್ಪ ನೆಟ್ಟು ಹೋದ ಒಂದು ಮಾತು ನೆನಪಿಗೆ ಬಂತು. "ಬಟ್ಟೆಗೆ ಬೆಲೆ ಕೊಡಬಾರದು, ಮನುಷ್ಯತ್ವಕ್ಕೆ ಬೆಲೆ-ಗೌರವ ಕೊಡಬೇಕು ಮಗನೇ" ಇದನ್ನು ಹೇಳಿಕೊಟ್ಟ ಅಪ್ಪ ಗಾಂಧಿಯಲ್ಲ! ಆದರೂ, ಮೈಥಿಲಿಯು ಮತ್ತೆ ಕೇಳುತ್ತಿರುವಾಗ ಇದೇ ನೆನಪಿಗೆ ಬರುತ್ತಿದೆಯಲ್ಲಾ? ಯಾಕೆ? ಕಳೆದ ನಾಲ್ಕೈದು ತಿಂಗಳಿಂದ ಮೈಥಿಲಿಯ ಸ್ವಭಾವ ಮತ್ತು ಚಹರೆಗಳು ಬದಲಾಗುತ್ತಿವೆಯೆಂದನ್ನಿಸಿತು. ಸೀರೆಯನ್ನು ತಂದು ತೋರಿಸಿ ಅವಳು "ಈ ತರಹದ ಸೀರೆಯು ಸಿಕ್ಕದ್ದೇ ಒಂದು ನೆಮ್ಮದಿ" ಎಂದಾಗ ಈ ಮಾತನ್ನು ಎಲ್ಲೋ ಯಾರಲ್ಲೋ ಪದೇ ಪದೇ ಕೇಳುತ್ತಿದ್ದೆನಲ್ಲಾ ಅಂತನ್ನಿಸಿತು. ಚಾರು ತನ್ನ ಸೀರೆಯ ಬಗೆಗೆ ಮತ್ತು ತನ್ನ ಮಾತುಗಳಿಗೆ ಯಾವ ಬೆಲೆಯನ್ನು ಕೊಡುತ್ತಿಲ್ಲವೆಂದು ಭಾವಿಸಿಕೊಂಡ ಮೈಥಿಲಿಯು ಹೇಳಿದ ಮತ್ತೊಂದು ಮಾತು ಬಂದೂಕಿನ

ಬಾಯಿಯಿಂದ ಬಂದಂತಾಯಿತು: "ನಾನೆಂದರೆ ನಿಮಗೆ ನಿರ್ಲಕ್ಷ್ಯ ಮತ್ತು ತಾತ್ಸಾರ ಯಾವಾಗ ನೋಡಿದರೂ ವ್ಯಂಗ್ಯ ಮತ್ತು ಕುಹಕದ ನಗೆ ಅದು ಬಿಟ್ಟರೆ ನಿಮಗೇನೂ ಗೊತ್ತಿಲ್ಲ! ಹೆಂಡತಿಯೆಂದರೆ ನಿಮಗೆ ಕಾಲ ಕಸಕ್ಕಿಂತ ಕಡೆಯಾಯಿತು. ಗಂಡಸರ ಹಣೇ ಬರಹವೇ ಹೀಗೆ – ಹೋಗಿ ಹೋಗಿ ನಿಮ್ಮನ್ನು ಮದುವೆಯಾದೆನಲ್ಲಾ? ಅದಕ್ಕೆ ನಾನೇ ನನ್ನ ಚಪ್ಪಲಿಯಲ್ಲಿ ಹೊಡೆದುಕೊಳ್ಳಬೇಕು." ಮೈಥಿಲಿಯಿಂದ ಬಂದ ಮಾತು ಕುರುಕ್ಷೇತ್ರ ಯುದ್ಧದ ಮೊದಲ ಶಂಖದ ಧ್ವನಿಯಂತೆ ಮೊಳಗಿ ಬಂದ ಭೇರಿಯ ನಾದದಂತೆ – ಚಾರುಗೆ ಅನಿಸಿತು. ಮೈಥಿಲಿಯು ಕಾಲು ಕೆರೆಯತೊಡಗಿದ್ದಳು – ಯುದ್ಧಕ್ಕೆ ಮತ್ತೊಂದು ಅಂಗಣ ತಯಾರಾಗಿದೆಯೆಂದು ಚಾರುಗೆ ಬಂದಿದ್ದ ಭಾವನೆ ಸಕಾರಣವಾದುದೇ – ಕಾಲಕ್ಕೆ ಮತ್ತೊಂದು ಹೆಜ್ಜೆ ಗುರುತು! ಚಾರು ಅದಕ್ಕೆ ಉತ್ತರಕೊಡದೆ, "ಈ ಗಲಾಟೆಯಲ್ಲಿ ನೀಸಲ್ಲಿ ಸಿಕ್ಕಿಹಾಕಿಕೊಂಡಿದ್ದೆ" ಅಂದ. ಮೈಥಿಲಿ "ಎಲ್ಲೊ ಸಿಕ್ಕುಹಾಕಿಕೊಂಡಿದ್ದೆ, ಅದರಿಂದ ನಿಮಗೇನು ಆಗಬೇಕಾದ್ದು?" ಅಂದಳು. ಅವಳು ಹಾಗೆ ಹೇಳುವಾಗ ಅವಳ ಮಾತಿನಲ್ಲಿ ಇಣುಕಿದ ಒಂದು ತಾತ್ಸಾರದ ಮನೋಭಾವ ಚಾರುವಿನ ಮನಕ್ಕೆ ಚುಚ್ಚಿತು. "ಇರಲಿ" ಎಂದು ಸುಮ್ಮನಿದ್ದುಬಿಟ್ಟ. ಉಪಾಯಗಳು ಯಾವ ಯಾವ ರೀತಿಯಲ್ಲಿವೆ? ಸಾಮ; ದಾನ; ಭೇದ; ದಂಡ. ಈ ನಾಲ್ಕರಲ್ಲಿ ಯಾವುದನ್ನಾದರೂ ಪ್ರಯೋಗಿಸಲೇಬೇಕಿತ್ತು. ಅದಕ್ಕೆ ಸಾಮವನ್ನು ಉಪಯೋಗಿಸಿದ, ಉಪಯೋಗಕ್ಕೆ ಬರಲಿಲ್ಲ. ಚಾರು ಏನಾದರಾಗಲೀ ಈಗ ಸುಮ್ಮನಿರುವುದೇ ಲೇಸು ಎಂದು ಮೌನಿಯಾದ. ಚಾರುವಿನ ಮೌನ ಮೈಥಿಲಿಯನ್ನು ಸಣ್ಣದಾಗಿ ಇರಿಯತೊಡಗಿತು. ಯಾಕೆಂದರೆ, ಚಾರುವಿನ ಮೌನದಲ್ಲಿಯೂ ಅವಳು ಅರ್ಥವನ್ನು ಹುಡುಕತೊಡಗಿದಳು. ಚಾರು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸುತ್ತಿದ್ದಾನೆ. ಅಲ್ಲದೆ ಅವನಿಗೆ ಅವನದೇ ಹಟ. ಅವನಿಗೆ ಅವನ ಹಟವಾದರೆ ನಾನೇಕೆ ಸುಮ್ಮನಿರಲಿ? ಮೈಥಿಲಿಯ ಗರ್ಭಮೂಲದಿಂದ ಬಂದ ಅಪಸ್ವರಕ್ಕೆ ಕಾರಣ ಚಾರುವಲ್ಲ, ದೇವವ್ರತನೆಂದು ಅವಳಿಗೆ ತಿಳಿದಿರಲಿಲ್ಲ. ಅದೇ ಆಗಿರುವ ತೊಂದರೆ!

ಬೆನ್ನಿನಲ್ಲಿ ಬಿದ್ದ ಸಣ್ಣ ಗುರುತು; ಕೊರಳಿನ ಕೆಳಗೆ ಹಲ್ಲಿನ ಗುರುತು; ಹೊಕ್ಕುಳ ಬಳಿಯ ಅವನ ಕೈಯ ಉಗುರಿನಿಂದ ಬಿದ್ದ ಗೆರೆ ಮತ್ತು ಬೆನ್ನಲ್ಲಿ ಅವನು ಸುಟ್ಟ ಸಿಗರೇಟಿನ ಗುರುತು – ಇವೆಲ್ಲವನ್ನು ಸೇರಿಸಿದರೆ ರೇಖಾಳ ಮೈ ಮೇಲೆ ಬಿದ್ದಿರುವ ಒಟ್ಟಾರೆ ಕುರುಹುಗಳು ಸರಿ ಸುಮಾರು ಹದಿನಾರು. ಯಾವ ಗುರುತಿಗೆ ಎಣ್ಣೆ ಹಚ್ಚಿದರೂ ನೋವು ತಡೆಯುವುದೇ ಅಸಾಧ್ಯ. ಈ ಗುರುತು ಮತ್ತು ನೋವಿನಿಂದ ತಪ್ಪಿಸಿಕೊಳ್ಳುವುದು ಹೇಗೆ? ನೋವು ಮತ್ತು ಗುರುತುಗಳಿಗೆ ಅಂತಿಮವಾದ ತೆರೆಯು ಯಾವತ್ತು ಬೀಳುತ್ತದೆ? ಅತ್ತು ಅತ್ತು ಸಾಕಾಗಿ ಹೋದ ರೇಖಾ ಇನ್ನೇನು ಕೂತಲ್ಲಿಂದ ಏಳಬೇಕು – ಅಷ್ಟೊತ್ತಿಗೆ ಪ್ರಸನ್ನ ಬಂದ. ಅದೂ ಕಂಠ ತುಂಬಾ ಕುಡಿದುಕೊಂಡು. "ಎಲ್ಲಿ ಹೋಗಿದ್ದೆ?" ಪ್ರಸನ್ನ ಮೊದಲ ಪ್ರಶ್ನೆಯೇ ಅದು. ಈಗಷ್ಟೇ ಅತ್ತು, ಕಣ್ಣೀರನ್ನು

ಸುರಿಸಿದ ರೇಖಾ ಬೇರೆ ಯಾವುದನ್ನೂ ಮಾತಾಡಲಾಗಲಿಲ್ಲ. "ಚರ್ಚಿಗೆ ಹೋಗಿದ್ದೆ" ಎಂದು ಹೇಳುತ್ತಲೇ ಒಳಗಡೆ ಹೋದಳು. "ಚರ್ಚಿಗೆ ಹೋದೆಯೇನೇ? ಅಲ್ಲಿ ಯಾರು – ನಿನ್ನ ಮಿಂಡ ಬರ್ತೇನೆ ಅಂತ ಹೇಳಿದ್ದನಾ?" ಪ್ರಸನ್ನ ವಟವಟ ಅನ್ನುತ್ತಲೇ ರೇಖಾಳನ್ನೇ ಹಿಂಬಾಲಿಸಿದ. ಅವನು ಹಿಂಬಾಲಿಸಿದ್ದು ಅವನ ಹೆಂಡತಿಯನ್ನು. ಆದರೆ ಅವಳನ್ನು ಹಿಂಬಾಲಿಸುತ್ತಲೇ ವಟವಟ ಅನ್ನುತ್ತಲೇ ಬಂದ ಪ್ರಸನ್ನನನ್ನು ರೇಖಾ ಈಗ ಕ್ಯಾರೇ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅವಳ ಇದ್ದ ಬಿದ್ದ ತಾಕತ್ತನ್ನು ಹಿಂಡಿ ಹಿಪ್ಪೆ ಮಾಡಿದ ಅಸಾಮಿಗೆ ಈ ಜಗತ್ತಿನ ಯಾವ ಸಂಗತಿಗಳು ಅಷ್ಟೊಂದು ಮುಖ್ಯವಾಗಿರಲಿಲ್ಲ. ಬದುಕಿ ಉಳಿದರೆ ಬೇಡಿ ತಿಂದೇನು ಎಂಬಂಥ ಸ್ಥಿತಿ ರೇಖಾಳದು. ಯಾವುದೇ ಕಾರಣದಿಂದ ಹಾಸಿಗೆಯೊಂದರ ಹೊರತು ಎಲ್ಲೆಡೆಯಲ್ಲಿಯೂ ತಾನು ಗಂಡಸಾಗಿಯೇ ಉಳಿದಿದ್ದೇನೆ ಎಂದು ಸಾಬೀತುಪಡಿಸಲು ಹೊರಟ ಪ್ರಸನ್ನ. ಇವರ ನಡುವೆ ಪ್ರಸನ್ನನ ತಾಯಿ – ವಿಧವೆ ಲಕ್ಷ್ಮಮ್ಮ! ತನ್ನ ಮಗ ಗಂಡುಸೇ ಹೌದು ಮತ್ತು ಚಾಂಡಾಲಗಿತ್ತಿ ಇವಳು ಹೆಂಗಸೇ ಅಲ್ಲವೆಂಬ ತರ್ಕ ಲಕ್ಷ್ಮಮ್ಮನದು. ದುಡ್ಡು ಒಂದಿದ್ದರೆ ಜಗತ್ತನ್ನೇ ಆಳಬಹುದು ಎಂಬ ತರ್ಕದಲ್ಲಿಯೇ ಹೊರಡುವ ಮನುಷ್ಯರ ಸ್ವಭಾವಕ್ಕೆ ತಕ್ಕಂತೆ ಇರುವವಳು. ಮಗ ಪ್ರಸನ್ನ ನಟ್ಟನಡು ಮಧ್ಯಾಹ್ನ ಕುಡಿದುಕೊಂಡು ಬಂದು ಈ ಚಂಡಾಲಗಿತ್ತಿಯನ್ನು ನಾಕು ಚಚ್ಚಿದರೆ ಲಕ್ಷ್ಮಮ್ಮನಿಗೆ ಹಾಲು ಕುಡಿದಷ್ಟು ಸಂತೋಷ. ಎಲೆ ಅಡಿಕೆ ಜಗಿಯುತ್ತಲೇ ಮುಂದಿನ ದೃಶ್ಯಾವಳಿಗಳನ್ನು ಗಮನಿಸತೊಡಗಿದಳು. ಕುಡಿತದ ಅಮಲು ಒಂದು ಕಡೆ; ರೇಖಾ ಯಾವುದಕ್ಕೂ ಉತ್ತರಿಸದೆ ಹೋದ ಕ್ರಮವು ಮತ್ತೊಂದು ಕಡೆ – ಇವರೆಡೂ ಸೇರಿಕೊಂಡು ಪ್ರಸನ್ನನ ಹೊಟ್ಟೆಯಲ್ಲಿ ಉರಿಯು ಕಾಣಿಸತೊಡಗಿತು. "ನೋಡಮ್ಮ ಇವಳ ಕತೆಯಾ? ನಾನು ಏನು ಹೇಳಿದ್ರೂ ಉತ್ತರ ಕೊಡದೆ ಒಳಗೆ ಹೋಗಿಬಿಟ್ಟಿದ್ದಾಳೆ. ಈ ಸೂಳೆ ಇವಳು ಎಲ್ಲಿ ಹೋಗಿದ್ದಳು?" ಭುಗಿಲೆದ್ದ ಸಿಟ್ಟನ್ನು ವ್ಯಕ್ತಪಡಿಸಲು ಬೇಕಾದ ಧ್ವನಿಗಳು ಮತ್ತು ಮಾತುಗಳು ಸಿಗದೆ ದಡಬಡಿಸಿಕೊಂಡ ಪ್ರಸನ್ನ ಏನೇನೋ ಅನ್ನುವುದಕ್ಕೆ ಪ್ರಾರಂಭಿಸಿದ. ಅವನು ಯಾವ ಮಾತುಗಳನ್ನು ಹೇಳುತ್ತಿದ್ದಾನೆ ಎನ್ನುವುದು ಅವನಿಗೆ ಸ್ಪಷ್ಟವಿಲ್ಲ. ಆದರೆ, ಅವನ ಬೈಯ್ಯುವಿಕೆಯು ಲಕ್ಷ್ಮಮ್ಮನಿಗೆ ಒಳ್ಳೆಯ ಸಂಗೀತದಂತೆ ಕೇಳಿಸತೊಡಗಿತು. ಅಲ್ಲಿಂದಲೇ ಕಿರುನಗೆಯನ್ನು ಬೀರುತ್ತಾ "ಈ ಚಿನಾಲಿ ಚರ್ಚ್‌ಗೆ ಹೋಗಿದ್ದಳಪ್ಪ, ನಾನು ಏನು ಹೇಳಿದರೂ ಕೇಳಲಿಲ್ಲ ನಾನೇನು ಮಾಡಲಿ ಹೇಳು. ವಯಸ್ಸಾದವರಿಗೆ ಕೊಡುವ ಬೆಲೆಯೆಂದರೆ ಇಷ್ಟೆ. ನೀನೂ ಆಗ ಹೇಳಿದ್ದು ಕೇಳಲಿಲ್ಲ. ಸಂಬಂಧದೊಳಗೆ ಮದುವೆ ಮಾಡೋಣ ಅಂದ್ರೆ ನೀನು ಪ್ರೇಮ, ಲವ್ವು ಅಂತ ಕಿರುಚಾಡಿದೆ. ಈಗ ಅನುಭವಿಸು, ಅದಕ್ಕೆ ನಾನೇನೂ ಮಾಡುವಂತಿಲ್ಲ." ಲಕ್ಷ್ಮಮ್ಮನ ಮಾತಿನಿಂದ ಪ್ರಸನ್ನನಿಗೆ ಮತ್ತಷ್ಟು ಅನುಕೂಲವೇ ಆಯಿತು. ಅಡುಗೆ ಮನೆಗೆ ಹೋದವನೇ ರೇಖಾಗೆ ದಬದಬನೆ

ಬೆನ್ನಿಗೆ ಗುದ್ದಿದ. ಅವನು ಬೆನ್ನಿಗೆ ಗುದ್ದುತ್ತಿರುವಾಗ ರೇಖಾ ಹೇಳಿದ್ದು ಇಷ್ಟೆ; "ನಿಮ್ಮ ಪೌರುಷವೆಂದರೆ ಇದೇ, ರಾತ್ರಿ ಕೈಲಾಗದವರು ಹಗಲು ಬೆನ್ನಿಗೆ ಬಡೀತೀರಾ."

ರೇಖಾ ಹೇಳಿದ ಮಾತು ಪ್ರಸನ್ನನ ಮಟ್ಟಿಗೆ ಕ್ರೂರವಾದುದು. "ಗಂಡುಸೇ ಅಲ್ಲದ ನಿಮ್ಮೊಂದಿಗೆ ಬದುಕುವುದಕ್ಕಿಂತ ಸಾಯುವುದು ಲೇಸು" – ಈ ಮಾತು ರೇಖಾ ಹೇಳಿದಳು. ಅವಳು ಹೇಳಿದ ಮಾತು ಮುಂದಿನ ಅವಳ ನಡವಳಿಕೆಯ ಪೂರ್ವ ಪೀಠಿಕೆಯಾಗಿದ್ದವು ಮತ್ತು ಅದೇ ದಿನ ಸಂಜೆಯೇ ರೇಖಾ ಪಿಂಟೋ ಗಂಡನ ಮನೆಯಿಂದ ತನ್ನ ಸೂಟ್‌ಕೇಸ್ ತೆಗೆದುಕೊಂಡು ವಾಪಾಸಾದಳು. ಗಂಡನ ಮನೆಯಿಂದ ವಾಪಾಸಾದ ಹುಡುಗಿ ಮತ್ತೆ ಗಂಡನ ಮನೆಯತ್ರ ತಿರುಗಿ ಮಲಗಲಿಲ್ಲ. ರೇಖಾ ಎಂಬ ಲವಲವಿಕೆಯ; ತುಂಬು ನಗುವಿನ ಹುಡುಗಿಯ ಮುಖದಲ್ಲಿ ನಗು ಅರಳಲು ಕೆಲವು ದಿನಗಳು ಬೇಕಾದವು. ರೇಖಾ ಪಿಂಟೋ ಎಂಬ ಹುಡುಗಿಯ ದಾಂಪತ್ಯ ಜೀವನದ ಎರಡು ತಿಂಗಳು ಎನ್ನುವುದು ಅವಳ ಮಟ್ಟಿಗೆ ನರಕ ಸದೃಶವಾಗಿತ್ತು ಮತ್ತು ರೇಖಾ ಎಂಬ ಹುಡುಗಿ ಮದುವೆಯಾಗಿಯೂ ಗಂಡಸು ಎಂಬವನ ನಿಜವಾದ ಸಂಪರ್ಕ ಸಾಧಿಸಲಿಲ್ಲ. ಅದು ಸಾಧಿಸದೇ ಅವಳು ತವರು ಮನೆಗೆ ಬಂದವಳು ಮೊದಲು ಯೋಚನೆ ಮಾಡಿದ್ದೆಂದರೆ; "ಪ್ರೇಮದ ಉನ್ಮತ್ತ ಗಳಿಗೆಯಲ್ಲಿಯೂ ತನ್ನ ಸೀರೆಯ ಅಥವಾ ಲಂಗದ ಒಂದು ನೆರಿಗೆಯು ಮುಕ್ಕಾಗದಂತೆ ಪ್ರಸನ್ನ ಯಾಕೆ ನೋಡಿದನೆಂದರೆ ಅವನು ನಿಜವಾದ ಗಂಡುಸೇ ಆಗಿರಲಿಲ್ಲ. ಗಂಡುಸಾಗಿದ್ದುದು ಅವನು – ಹಿಂಸೆಯ ಆನಂದದಲ್ಲಿ ಮಾತ್ರ."

*

ಅದೇ ಸಂಜೆ; ಅಷ್ಟೇ ಹೊತ್ತಿಗೆ; ಅದೇ ಭಾನುವಾರ ಮತ್ತು ಕರೆಕ್ಟಾಗಿಯೇ ಸೂರ್ಯ ಮುಳುಗುವ ಹೊತ್ತು – ಚಾರು ಬೆಳಗ್ಗೆಯೇ ತಂದಿಟ್ಟ ಜಿನ್ ಸಾಕಷ್ಟು ಏರಿಸಿಕೊಂಡೇ ಮಲಗಿದ ಹೊತ್ತು. ಮೈಥಿಲಿಯು ವಾಕಿಂಗ್‌ಗೆಂದು ಹೊರಟಳು. ಬೆಡ್ ರೂಮಿನಲ್ಲಿ ಬಾಯ್ದೆರೆದು ಮಲಗಿರುವ ಮತ್ತು ಕಡೆ ಬಾಯಿಯಲ್ಲಿ ಬರುವ ಜೊಲ್ಲು ನೋಡಿ ಮೈಥಿಲಿಗೆ ಅಸಹ್ಯವೆನಿಸಿತು. "ಥೂ, ಇವನು ಒಬ್ಬ ಗಂಡಸೇ?" ತನ್ನ ಪಾಡಿಗೆ ತಾನೇ ಹೇಳಿದಳು. ಮೈಥಿಲಿಯು ಹೇಳಿದ ಮಾತು ಮತ್ತು ತವರು ಮನೆಗೆ ಬಂದಿಳಿದ ಮೇಲೆ ರೇಖಾ ಪಿಂಟೋ ಮನಸ್ಸಿನಲ್ಲಿಯೇ ಹೇಳಿರುವ ಮಾತುಗಳು ಒಂದಾದವು. ಕುಡಿದು ಮಲಗಿರುವ ಗಂಡನ ಬಗೆಗಿನ ಅತೀವವಾದ ವಾಕರಿಕೆ ಮತ್ತು ಅಸಹ್ಯ ಮೈಥಿಲಿಯ ಬಾಯಲ್ಲಿ ಅದನ್ನು ಹೇಳಿಸಿದರೆ ಗಂಡಸುತನವೇ ಇಲ್ಲದ ಗಂಡನೆಂಬ ಮೋಸದ ಪ್ರಾಣಿಯ ಬಗ್ಗೆ ರೇಖಾ ಯೋಚಿಸಿದ ಮಾತುಗಳು ಪರಸ್ಪರ ಸಂಧಿಸಿದವು. ಈ ಸಂಧಿಸಿದ ಮಾತು ಮತ್ತೆ ಯಾವತ್ತೋ ಒಮ್ಮೆ ತಿರುವು ಮುರುವಾಗಲಿದೆ. ಮೈಥಿಲಿಯ ಕೊರಳಿಗೆ ಕರಿಮಣಿಯನ್ನು ಕಟ್ಟಿದ ಗಂಡಸಿನ ಬಗ್ಗೆ ಅವಳಿಗೆ ಹುಟ್ಟಿದ ವಾಕರಿಕೆಯೇ

ಮತ್ತೊಬ್ಬ ದೇವವ್ರತನನ್ನು ಆಹ್ವಾನಿಸಲು ಸಿದ್ಧಪಡಿಸಿತ್ತು ಮತ್ತು ರೇಖಾ ಎಂಬ ಹುಡುಗಿಯು ಮುಂದೊಂದಿನ ಚಾರುವಿನ ಬಗ್ಗೆ ಬೇರೆ ಮಾತನ್ನು ಹೇಳಲಿದ್ದಳು. ಮೈಥಿಲಿಯ ಮಾತು ರೇಖಾಳ ಮಾತಾಗಲಿಲ್ಲ. ಮುಂದೆ ಕೆಲ ವರ್ಷಗಳಲ್ಲಿ! ಅದೇ ಹೊತ್ತಿಗೆ ಚಾರುವನ್ನು ಬಿಟ್ಟು ಮೈಥಿಲಿ ಗೊಣಗುತ್ತಾ ವಾಕಿಂಗ್ ಹೊರಟಳು. ಸಂಜೆಯ ತಂಪನೆಯ ಗಾಳಿ ಸೇವನೆಗೆ. ಆದರೆ ಕುಡಿದು ಮಲಗಿದ ಚಾರು ಮನೆಯಿಂದ ಹೊರಗೆ ಬಾರದಿರಲಿ ಎಂದು ಮನೆಯ ಬೀಗ ಹಾಕಿ. ಅವಳು ಮನೆಯ ಬೀಗ ಹಾಕಿದ್ದು ಅವಳ ಮಾನ-ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕೆ. ಅವಳು ಬೀಗ ಜಡಿದು ಮನೆಯಿಂದ ಹೊರಗೆ ಹೊರಟಿದ್ದು, ಮಲಗಿದ್ದ ಚಾರು ಎಚ್ಚರಗೊಂಡಿದ್ದು ಹಾಗೂ ಮನೆಯ ಫೋನ್ ಮೊಳಗಿದ್ದು ಸರಿಯಾಯಿತು.

"ಸಾರ್, ನಾನು ನಿಮ್ಮೊಂದಿಗೆ ಮಾತಾಡಬೇಕು ಯಾವತ್ತು ಬರಲಿ?" ಚಾರು ಗಲಿಬಿಲಿಗೊಂಡ. ಯಾರದಿದು ಧ್ವನಿಯೆಂಬುದು ಅವನಿಗೇ ಸ್ಪಷ್ಟವಾಗಲಿಲ್ಲ. ಯಾರೋ ಪರಿಚಿತರ ಧ್ವನಿಯೆಂಬುದಷ್ಟೇ ಸ್ಪಷ್ಟವಾಯಿತು. ಆದರೆ, ಯಾರು, ಏನು ಎಂಬುದು ತಿಳಿಯಲಿಲ್ಲ. "ಖಂಡಿತ ಯಾರೂಂತ ತಿಳಿಯಲಿಲ್ಲ" ಎಂದು ಚಾರುಗೆ ಆ ಕಡೆಯಿಂದ ಬಂದ ಉತ್ತರ ಸಂಕ್ಷಿಪ್ತವಾದುದು. "ನಿಮಗೆ ನಾನು ಗೊತ್ತು ಸಾರ್. ಯಾವತ್ತು ಬಿಡುವಾಗಿರ್ತೀರಾ? ಅದು ಹೇಳಿ. ಅದು ನಾನೊಬ್ಬಳೇ ನಿಮ್ಮೊಂದಿಗೆ ಮಾತಾಡಬೇಕು."

"ನಾಳೆ ನನ್ನ ಆಫೀಸಿನ ಹತ್ತಿರ ಬನ್ನಿ ಸಿಗ್ತೇನೆ ರೇಖಾ" ಎಂದ.

ಈಗ ತಬ್ಬಿಬ್ಬಾಗುವ ಸರದಿ ರೇಖಾಳದು. ಈಗ ಗೊತ್ತಾಯಿತು, ವಾಕಿಂಗ್ ಮುಗಿಸಿಬಂದವಳೇ ಮೈಥಿಲಿ ಮನೆಯ ಬೀಗ ತೆರೆಯುತ್ತಾ – ಚಾರು ಎಚ್ಚರಗೊಂಡಿದ್ದಾನೋ-ಇಲ್ಲವೋ ತಿಳಿಯದೆ ಮನೆಯೆಂದರೆ ಒಂದು ನರಕವಾಗಿದೆ ಎಂದು ಗೊಣಗಿದಳು. ಅವಳು ಗೊಣಗಿದ್ದು ಸರಿಯಾಗಿ ಚಾರುಗೆ ಕೇಳಿಸಿತು ನಿಜ. ಆದರೆ, ಚಾರು ರೇಖಾ ಪಿಂಟೋ ಯಾಕೆ ಫೋನ್ ಮಾಡಿದಳು ಎಂಬ ಯೋಚನೆಯಲ್ಲಿಯೇ ಇದ್ದ. ಮತ್ತೊಮ್ಮೆ ಚಾರುಗೆ ಕೇಳಿಸುವಂತೆ "ಅಯ್ಯೋ ಇದೂ ಒಂದು ಮನೇನಾ? ಮನೆಯೆಂದರೆ ನರಕವಾಗಿದೆ. ಈ ನರಕ ಯಾರಿಗೂ ಬೇಡ" ಎಂದಳು. ಚಾರು ಅವಳ ಮುಖವನ್ನು ನೋಡಿದವನು ಮತ್ತೊಮ್ಮೆ ಸುಮ್ಮನಾದ. ಅವನು ಸುಮ್ಮನಿರುವುದನ್ನು ನೋಡಿಯೇ ಮೈಥಿಲಿಯ ಸಿಟ್ಟು ಮತ್ತಷ್ಟು ನೆತ್ತಿಗೇರಿತು. "ಇದು ಮನೇನಾ? ನರಕವಾದಂತೆ ಆಗಿದೆ. ಸಾಕಾಗಿ ಹೋಯಿತು ನನಗೆ, ಕುಡಿಯುವುದು, ಸಿಗರೇಟು ಸೇದುವುದು – ಇದೆರಡು ಬಿಟ್ಟರೆ ಬೇರೆ ಯಾವ ಕೆಲಸವೂ ನಿಮಗಿಲ್ಲ." ಮೈಥಿಲಿಯು ಚುಚ್ಚಲೆಂದೇ ತನ್ನ ಮಾತಿನ ವರಸೆಯನ್ನು ಬೀಸಿದಳು. ದೇವವ್ರತನ ಪ್ರಕರಣವಾದ ನಂತರ ಮೈಥಿಲಿಯು ಚಾರುವನ್ನು ನೋಡುವ ಕ್ರಮಗಳು ಬದಲಾಗಿವೆ. ಅದಕ್ಕೆ ಕನ್ನಡಿ ಬೇಕಿಲ್ಲ. ಮನೆಯು

ನರಕವಾಗಿದೆಯೆಂದು ಮೈಥಿಲಿಯು ಹೇಳಿದ್ದು ಚಾರುವನ್ನು ಉದ್ದೇಶಿಸಿ ತಕ್ಷಣವೇ ಚಾರು ಅಂದ; "ಬದುಕು ಸುಂದರವಾಗಿದೆ ಮತ್ತು ಮನೆಯು ಕೂಡಾ" ಅಣಕಿಸಲೆಂದೇ ಹೇಳಿರುವ ಮಾತುಗಳಿವು. ಮೈಥಿಲಿಯು "ಹೀಗೆ ಕುಡಿದುಕೊಂಡು ಬಿದ್ದಿದ್ದರೆ ಮನೆಯು ಸುಂದರವಾಗಿರುತ್ತೆ'" ಎಂದಳು. "ನಿಜವಾಗಿಯೂ ಹೌದು" ಎಂದ ಚಾರು. "ಕೋಟೆಯೆಲ್ಲಾ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ ಹಾಗಾಗಿದೆ ನಿಮ್ಮ ಕತೆ. ಮನೆಯನ್ನು ಹಾಳುಮಾಡಿಟ್ಟು ಈಗ ಚೆನ್ನಾಗಿದೆ ಅನ್ನುತ್ತೀರಿ. ನಿಮ್ಮ ಮನಸ್ಸು ನಿಮ್ಮ ಕೈಯೊಳಗೆ ಇದ್ದರೆ ತಾನೆ? ಯಾವುದಕ್ಕೂ ಬುದ್ಧಿ ಅನ್ನುವುದು ನೆಟ್ಟಗಿರಬೇಕು. ಅದು ಕಳೆದುಕೊಂಡವರ ಹತ್ತಿರ ಏನು ಮಾತಾಡಿ ಏನು ಪ್ರಯೋಜನ?" ಮೈಥಿಲಿಯ ಮಾತು ಮತ್ತೊಂದು ಕಡೆಗೆ ಹೊರಳಿತು. ಸ್ವಲ್ಪಹೊತ್ತು ಮೌನದಲ್ಲಿಯೇ ಇದ್ದ ಚಾರು ತಕ್ಷಣ ಹೇಳಿದ; "ಬುದ್ಧಿ ಅನ್ನುವುದು ಕೆಲವರ ಸ್ವತ್ತಾಗಿರಬಹುದು. ಆದರೆ, ಬುದ್ಧಿಯನ್ನು ಕಳೆದುಕೊಂಡವರು ಕೂಡಾ ಮನುಷ್ಯರೇ. ಅದಕ್ಕಿಂತ ಹೆಚ್ಚಾಗಿ ಬುದ್ಧಿಯನ್ನು ಯಾರ್‍ಯಾರಿಗೋ ಒತ್ತೆಯಿಟ್ಟವರಿಗೆ ನೆಮ್ಮದಿಯೆನ್ನುವುದು ಮರೀಚಿಕೆ – ಮೈಥಿಲಿಯವರೇ." ಈ ಮಾತುಗಳನ್ನು ಸಾಕಷ್ಟು ನಾಟಕೀಯವಾಗಿ ಮತ್ತು ವ್ಯಂಗ್ಯದಲ್ಲಿಯೇ ಬಳಸಿದ. ಈ ವ್ಯಂಗ್ಯ ಮೈಥಿಲಿಯನ್ನು ಚೆನ್ನಾಗಿಯೇ ಚುಚ್ಚುತ್ತದೆಯೆಂದು ಚಾರುಗೆ ಗೊತ್ತು. ಚಾರುವಿನ ವ್ಯಂಗ್ಯ ಗ್ರಹಿಸಿದಂತೆಯೇ ಚುಚ್ಚಿತು ಕೂಡಾ. "ಬುದ್ಧಿಯನ್ನು ನಾನೇನೂ ಅಡವಿಟ್ಟಿಲ್ಲ. ಇಲ್ಲ–ಸಲ್ಲದ ಅಪವಾದಗಳನ್ನು ನನ್ನ ತಲೆಯ ಮೇಲೆ ಹೊರಿಸಬೇಡಿ. ಅದರಿಂದ ನಿಮಗೇನು ಉಪಯೋಗವೋ ನನಗಂತೂ ತಿಳಿಯುವುದಿಲ್ಲ. ಒಂದು ವೇಳೆ ನೀವು ಭಾವಿಸಿಕೊಂಡಂತೆ ಆಗಿದ್ದರೆ ನಾನು ಯಾವತ್ತೋ ಏನೋ ಮಾಡುತ್ತಿದ್ದೆ." ಮೈಥಿಲಿಯ ಮಾತು ಮತ್ತೆ ಕವಣೆಯಿಂದ ಹೊರಟಿತು. "ಇರುವ ವಿಷಯಗಳನ್ನು ಹೇಳುವುದು ಯಾವತ್ತೂ ಅಪವಾದವಲ್ಲ ಮೈಥಿಲಿ. ಆ ದೇವವ್ರತನ ಹಿಂದೆ ನಿನಗೆ ಓಡಾಡುವಾಗ ಏನೂ ಅನಿಸಿಲ್ಲ. ಈಗ ಅದು ಅಪವಾದದಂತೆ ಕಾಣಿಸುತ್ತದೆಯಲ್ಲವೇ? ಸತ್ಯ ಕಹಿಯಾದದ್ದು – ಹಾಗಲಕಾಯಿಯಂತೆ. ಆದರೆ, ಆ ಸತ್ಯವನ್ನು ನಾನು ನುಂಗಿಕೊಂಡಿದ್ದೆ. ಅದೂ ನೀನು ನನ್ನೆದುರು ವಿಷಯ ಬಿಚ್ಚಿಡುವ ತನಕ. ಬೇರೊಬ್ಬ ಗಂಡಸು – ನನಗೆ ಪ್ರಪೋಸಲ್ ಇಟ್ಟಿದ್ದಾನೆ ಎಂದು ಸಲೀಸಾಗಿ ಹೇಳುವವಳ ಹಿಂದಿರುವ ಮನೋಭಾವ ಅರ್ಥವಾಗದಷ್ಟು ದಡ್ಡನಲ್ಲ. ನಿನಗೆ ದೇವವ್ರತ ಬೇಕಿತ್ತು. ಆದರೆ, ಅಲ್ಲಿಯೇ ಎಡವಟ್ಟಾಯಿತು. ಈಗ ನೀನು ನನ್ನ ಜೊತೆ ಕೇವಲ ಹಾವು–ಏಣಿ ಆಟವಾಡ್ತಾ ಇದ್ದೀಯಾ? ಹಾವು ನುಂಗಿದಾಗ ಮತ್ತೆ ಏಣಿಯ ಮೆಟ್ಟಿಲನ್ನು ಏರುವ ನಿರಂತರ ಪ್ರಯತ್ನ ಮಾಡ್ತಾ ಇದ್ದೀಯಾ? ನನಗದು ಅರ್ಥವಾಗದೇ ಏನೂ ಇಲ್ಲ. ಲೋಲುಪತೆಯೆನ್ನುವುದು ಕೇವಲ ಗಂಡೊಬ್ಬನ ಸ್ವತ್ತಾಗಿರಬೇಕಾಗಿಲ್ಲ, ಅದು ಹೆಣ್ಣಿನ ಸೊತ್ತು ಆಗಿರಬಹುದು." ಒಂದೇ ಉಸಿರಲ್ಲಿ ಚಾರು ಹೇಳಿದ. ಚಾರು ಈ

ಮಾತುಗಳನ್ನು ಹೇಳುತ್ತಿರುವಾಗ ಒಂದು ಸಣ್ಣ ಉದ್ವೇಗಕ್ಕೆ ಒಳಗಾಗಿದ್ದ ಎಂಬುದಕ್ಕೆ ಅವನೇ ಮಾತೇ ಸಾಕ್ಷಿ. "ನೀವು ಅದನ್ನು ಹೇಳಬೇಡಿ, ನನಗೂ ಮಾತು ಬರುತ್ತೆ. ಮಾತು ಬಾರದ ಮೂಕಿಯೇನಲ್ಲ! ಏನೂಂತ ತಿಳ್ಕೊಂಡಿರಿ ನನ್ನ? ಹೌದು ದೇವವ್ರತನ ಹಿಂದೆ ಓಡಾಡಿದೆ. ಅದು ನಾನು ಹಾದರ ಮಾಡೋಕೆ ಹೋಗಿದ್ದು ಅಂತ ನೀವು ತಿಳ್ಕೊಂಡರೆ ಅದು ನಿಮ್ಮ ಅಹಂಕಾರ. ಕುಡ್ದು ಮಲಗೋ ನಿಮ್ಮಂಥವರಿಗೆ ಹೆಂಡ್ತಿಗೆ ಸುಖ ಕೊಡಬೇಕು. ಅವಳಿಗೆ ಬೇಕಾದ್ದು ತಂದು ಕೊಡಬೇಕೆಂದು ಗೊತ್ತಿಲ್ಲ. ನಾಲಿಗೆಯಿದೆಯೆಂದು ಬಾಯಿಗೆ ಬಂದಂತೆ ಮಾತಾಡಬೇಡಿ. ಇನ್ನೊಮ್ಮೆ ಆ ದೇವವ್ರತನ ಸುದ್ದಿಯೆತ್ತಿದರೆ ನಾನೇನೂ ಸುಮ್ಮನಿರೋಲ್ಲ." ಮಾತಿನ ಸ್ಫೋಟ ಮನೆಯೊಳಗೆ ತಾಂಡವವಾಗತೊಡಗಿತ್ತು. ಯಾವತ್ತಿದ್ದರೂ ಬರಲೇ ಬೇಕಾಗಿದ್ದ ಮಾತುಗಳು ಸ್ವಲ್ಪ ಮುಂಚಿತವಾಗಿಯೇ ಬಂತು. ಮೈಥಿಲಿಯ ಪ್ರತಿಯೊಂದು ಮಾತುಗಳನ್ನು ದಾಖಲಿಸಿಕೊಂಡ. ಚಾರುವಿನೊಂದಿಗೆ ಜಗಳ ಮಾಡಲು ಕಾಯುತ್ತಿದ್ದವಳಿಗೆ ಯಾವುದೇ ಕಾಲವೆಂಬುದು ಮುಖ್ಯವಾಗಿರಲಿಲ್ಲ. ಜಗಳ ಕಾಯಲು ಶುರುಮಾಡಲು ಮುಹೂರ್ತಕ್ಕಾಗಿ ಕಾಯುವ ಸ್ವಭಾವವೂ ಮೈಥಿಲಿಯದಲ್ಲ. ಜಗಳವಾಡಲು ಹೊತ್ತು ಎಂಬುದನ್ನು ಕಾಯುವುದು ಚಾರು ಮಾತ್ರ, ಅವನಿಗೆ ಮಾತು ಕೂಡಾ ಸಮಯಕ್ಕೆ ಕಾಯುತ್ತದೆ. ಈ ವೇಳೆಯಲ್ಲಿ ಮಾತ್ರ ಚಾರು ಕೂಡಾ ಮಾತಿಗೆ ಅಗತ್ಯವಾಗಿ ಬೇಕಾಗಿರುವ ಕಾಲದ ಗಣನೆಯಲ್ಲಿ ತೊಡಗಲಿಲ್ಲ. ಕಾಲಕ್ಕೆ ಬೇಕಾದ ತರಹವೇ ಮಾತಾಡಬಲ್ಲ ಚಾರು ಕೂಡಾ ಅನಗತ್ಯವಾಗಿ ಕಿರುಚಾಡತೊಗಿದ. ಮೈಥಿಲಿಯನ್ನು ತಡೆಯುವ ಪ್ರಯತ್ನ ಮಾಡಲಿಲ್ಲ. ಅಷ್ಟೇ ಅಲ್ಲ, ಅವನು ಕೂಡಾ ಮಾತನ್ನು ತಡೆಯಲಿಲ್ಲ. "ಆ ದೇವವ್ರತನ ಸುದ್ದಿಯನ್ನು ನೀವು ಮತ್ತೊಮ್ಮೆ ಎತ್ತಿಕೊಂಡರೆ ನಾನು ಸುಮ್ಮನಿರೋಲ್ಲ" ಅಂದ ಮೈಥಿಲಿಯ ಮಾತಿನಲ್ಲಿ ದೃಢತೆಯಿತ್ತು ಮತ್ತು ಮಾಡಿದರೆ ಮಹಾ ನೀನೇನು ಮಾಡಬಲ್ಲೆ? ಎಂಬ ರೀತಿಯ ದುರಹಂಕಾರವಿತ್ತು. ಚಾರುವಿನ ಕಿವಿಯು ಶುದ್ಧವಿರುವುದರಿಂದ ಆ ಮಾತನ್ನು ಸರಿಯಾಗಿಯೇ ಕೇಳಿಸಿಕೊಂಡ. ಚಾರು ಹಲ್ಲು ಕಚ್ಚಿಕೊಂಡ. ಮಾತನ್ನು ಸಾಧ್ಯವಾದಷ್ಟು ತಡೆಹಿಡಿಯಬೇಕೆಂದು ಪ್ರಯತ್ನಿಸಿದ. ಆದರೂ, ತನ್ನ ಮಾತುಗಳು ತನ್ನ ಹಿಡಿತದಲ್ಲಿ ಉಳಿಯುವುದೇ ಕಷ್ಟವೆಂದು ತೋರಿತು. ಮುಷ್ಠಿ ಹಿಡಿದ ಕೈಯನ್ನು ಸಡಿಲಗೊಳಿಸಿ, ಕಣ್ಣು ಕೆಕ್ಕರಿಸುತ್ತಲೇ ಹೇಳಿದ; "ದೇವವ್ರತನೆಂದರೆ ಯಾಕೆ ಮೈ ಮೇಲೆ ಬೀಳ್ತೀಯಾ? ನೀನು ಅಷ್ಟೊಂದು ನಿಯತ್ತಿನವಳೇ ಆಗಿದ್ದರೆ – ರಪ್ಪನೇ ಆಗಲೇ ಅವನ ಮುಖಕ್ಕೆ ಕ್ಯಾಕರಿಸಿ ಉಗಿದುಬರುತ್ತಿದ್ದೆ. ದೇವವ್ರತ ನನ್ನಂತೆ ಕುಡಿಯೋಲ್ಲ ನಗಾಡ್ತಾನೆ, ಕುಣೀತಾನೆ, ಬೇಕಿದ್ದರೆ ಹಗುರವಾಗಿ ನಿನ್ನ ಬೆನ್ನು ಸವರುತ್ತಾನೆ. ಅವನು ಸವರುವುದು ನಿಂಗೆ ನೆಮ್ಮದಿ ತರುತ್ತೆ. ಯಾಕೆ ಈ ರೀತಿಯ ಬೂಟಾಟಿಕೆ? ಯಾವಾಗಲೂ ಅತಿಯಾದ ನಾಟಕ ಒಳ್ಳೆಯದಲ್ಲ. ಅವನ ಜೊತೆಯಲ್ಲಿ ಹೋದರೆ ನಿನ್ನನ್ನು ಜನ

ದೂಷಿಸುತ್ತಾರೆ ಅಂತ ತಿಳ್ಕೊಂಡಿದ್ದಿಯಾ? ಗುಟ್ಟು –ಬರೀ ಗುಟ್ಟಿನಲ್ಲಿ ವ್ಯವಹರಿಸಬೇಕು. ಅದರಿಂದ ಸುಖ ಸಿಗುತ್ತೆ ಅಂತ ಹಂಬಲಿಸುತ್ತಲೇ – ನೀನು ಮುಂದು ಮುಂದೆ ಹೋಗ್ತೀಯಾ? ಆದರೆ, ಗೊತ್ತೇ ಆಗದ ಹಾಗೆ ನೀನು ಕಾಲೂರಿದ ಜಾಗದಲ್ಲಿ ಧೂಳು ಇರುತ್ತೆ. ಅದರಲ್ಲಿ ನಿನ್ನ ಹೆಜ್ಜೆಯ ಗುರುತುಗಳು ಸರಿಯಾಗಿ ಬಿದ್ದಿರುತ್ತೆ. ಒಂದು ತೋಳಿನಿಂದ ಇನ್ನೊಂದು ತೋಳಿಗೆ ವರ್ಗಾವಣೆ. ಒಂದು ರಾತ್ರಿಯಿಂದ ಮತ್ತೊಂದು ರಾತ್ರಿಗೆ ಬದಲಾವಣೆ – ಹೀಗೆ ಆಗುತ್ತಲೇ ಹೋಗುವುದರಿಂದ ನೆಮ್ಮದಿ ಸಿಗುತ್ತೆ ಅಂತ ನೀನು ಭಾವಿಸಿದ್ದೀಯಾ? ಅದರಿಂದ ಯಾವ ಪ್ರಯೋಜನವೂ ಇಲ್ಲ. ಮೈಥಿಲಿ ಬದುಕೆಂದರೆ ಅದು ಪತ್ರಿಕೆಗಳಲ್ಲಿ ಬರುವ ಪದಬಂಧದ ಆಟವಲ್ಲ." ಚಾರು ಇಷ್ಟು ಹೇಳಿ ಮತ್ತೊಂದು ಸಿಗರೇಟು ಹಚ್ಚಿದ ಮತ್ತು ಮೌನವಾದ. ತಾನು ಹೇಳುವ ಕೆಲಸ ಮುಗಿಯಿತು. ಈಗ ಮೈಥಿಲಿಯ ಸರದಿಯೆಂಬಂತೆ! ಮೈಥಿಲಿಯು ಸುಮ್ಮನುಳಿದಿದ್ದರೆ ಪ್ರಕರಣ ಅಲ್ಲಿಗೆ ಮುಗಿಯುತ್ತಿತ್ತು ಮತ್ತು ಅದರಿಂದ ಅಂಥ ಯಾವ ನೆನಪು ಮತ್ತೊಮ್ಮೆ ಅವರ ಜೀವನದ ಜೊತೆ ಜೊತೆಗೆ ಬರುತ್ತಿರಲಿಲ್ಲ. ಚಾರುವಿನ ಸಿಟ್ಟು ನೆತ್ತಿಯ ಕಡೆಗೆ ಚಲಿಸುತ್ತಿರಲಿಲ್ಲ. ಸುಮ್ಮನೇ ಅದರ ಪಾಡಿಗೆ ಸಿಟ್ಟು ಇಳಿಯುತ್ತಿತ್ತು. ಆದರೆ, ಮೈಥಿಲಿಯದು ಯಾವ ಕಾರಣಕ್ಕೂ, ಯಾವ ಸಂದರ್ಭದಲ್ಲಿಯೂ ಚಾರುವಿನೆದುರು ಸುಮ್ಮನುಳಿಯಬಾರದು ಎಂಬ ಪ್ರತಿಜ್ಞೆ ತೊಟ್ಟವಳಂತೆ ಅವನೆದರು ನಿಂತವಳೇ ಅವನ ಕೈಹಿಡಿದುಕೊಂಡು "ಅದೇನು ಹೇಳಬೇಕೆಂದು ಇದ್ದೀರೋ ಅದನ್ನು ಹೇಳಿ. ಅದನ್ನು ಬಿಟ್ಟು ಮಾತಲ್ಲಿ ಊರೆಲ್ಲಾ ಸುತ್ತಾಡಬೇಡಿ." ಚಾರು ಕೈಬಿಡಿಸಿಕೊಂಡು ಎದ್ದುನಿಂತ. ಮೈಥಿಲಿ ಮತ್ತೆ ಅವನ ತೋಳನ್ನು ಹಿಡಿದುಕೊಂಡು ಕಿರುಚಾಡುತ್ತಲೆ, "ಏಯ್ ಏನೂಂತ ತಿಳ್ಕೊಂಡಿರಿ ನನ್ನ, ಇಲ್ಲ–ಸಲ್ಲದ ಅಪವಾದ ಹೊರಿಸಬೇಡಿ. ನಿಮ್ಮನ್ನು ನಂಬಿ ಬಂದಿದ್ದಕ್ಕೆ ನೀವು ಮಾಡುವುದು ಇದನ್ನೇ. ನಿಮಗೆ ಅಷ್ಟು ತಾಕತ್ತಿದ್ದರೆ ದೇವವ್ರತನಿಗೆ ನಾಕು ಹೊಡೀಬೇಕಿತ್ತು. ನಾನು ಬಂದು ಕೇಳಿದ್ದಕ್ಕೆ ಅದು ನಿನ್ನ ಆಯ್ಕೆ ಅಂತ ಸುಲಭವಾಗಿ ಹೇಳಿದಿರಿ. ಅದು ಅಷ್ಟು ಸುಲಭವೇ?" – ಚಾರು "ಸುಮ್ಮನೇ ಕಿರುಚಾಡಬೇಡ, ಕಿರುಚಾಡಿದರೆ ನಾನೂ ಕಿರುಚಾಡಬೇಕಾಗುತ್ತೆ" ಎಂದ. ಆದರೆ ಮೈಥಿಲಿ "ನಾನು ಕಿರುಚಾಡುವವಳೇ! ಅದೇನು ಮಾಡ್ಕೊಳ್ತೀರೋ ಮಾಡ್ಕೊಳ್ಳಿ, ನಿಮ್ಮಿಂದ ಅನುಭವಿಸಿದ ಹಿಂಸೆ ಸಾಕು. ನಾನು ನಿಮ್ಮನ್ನು ಚೆನ್ನಾಗಿ ನೋಡಿದಷ್ಟು ನಿಮ್ಮದು ಅತಿಯಾಗ್ತಾ ಇವೆ. ಸುಮ್ಮನೇ ತನ್ನ ತಲೆ ಮೇಲೆ ಅಪವಾದ ಹೊರಿಸ್ತಾ ಇದ್ದೀರಾ? ನಾನೇನು ಮಾಡಲಿ? ಕುಡಿದುಬಿದ್ದ ನಿಮ್ಮನ್ನು ನೋಡಿಕೊಂಡು ಹಾಗೆ ಕೂತಿರಬೇಕು. ನಿಮಗೆ ಹೇಗೆ ಆಸೆಗಳು ಇವೆಯೋ ಅದೇ ತರಹ ನನಗೂ ಇದೆ. ನೀವು ನನ್ನನ್ನು ಮನೆಯೊಳಗೆ ಕೂಡಿ ಹಾಕುವುದಕ್ಕೆ ನಾನೇನು ಹಿಂದಿನ ಕಾಲದ ಹೆಂಗಸು ಅಲ್ಲ. ನಿಮಗೆ ತೀಟೆ ಇದ್ದಾಗ ಹತ್ತಿರ ಬಂದು ಅಪ್ಪಿಕೊಳ್ತೀರಲ್ಲಾ? ನಿಮ್ಮ ತೀಟೆಗೆ ತೀರಿಸಿಕೊಳ್ಳೋಕೆ ನಾನು ಬೇಕು ಅಲ್ಲಾ? ಅದು ಮುಗಿದಮೇಲೆ ಯಥಾಸ್ಥಿತಿ."

ಕಿರುಚಾಡುತ್ತಲೇ ಮೈಥಿಲಿಯು ಬೆಡ್‌ರೂಮಿನ ಒಳಗಡೆ ಹೋಗಿ ಬಾಗಿಲು ಹಾಕಿಕೊಂಡಳು. ಚಾರುಗೆ ಭಯ ಶುರುವಾಯಿತು. ಎಲ್ಲಿ ಮೈಥಿಲಿಯು ಏನಾದರೂ ಮಾಡಿಕೊಳ್ಳುತ್ತಾಳೋ ಎಂದು ಬಾಗಿಲನ್ನು ದೂಕಿದ. ಮೈಥಿಲಿಯು ಬಾಗಿಲಿನ ಬೋಲ್ಟ್ ಹಾಕಿರಲಿಲ್ಲ. ಆದರೆ, ರೂಮಿನ ಒಳಗಣ ದೃಶ್ಯ ನೋಡಿ; ಚಾರು ಥಂಡಿ ಹೊಡೆದ. ಯಾಕೆಂದರೆ, ಮೈಥಿಲಿಯು ಆತ್ಮಹತ್ಯೆ ಮಾಡಿಕೊಳ್ಳಲೆಂದು ಹಳೆಯ ಸೀರೆಯನ್ನು ಕೊರಳಿಗೆ ಬಿಗಿದು, ಫ್ಯಾನಿಗೆ ಹಾಕಿಕೊಳ್ಳುವ ಪ್ರಯತ್ನದಲ್ಲಿದ್ದಳು. ಅದುವೇ ಚಾರು ಅವಳನ್ನು ಹೇಗೋ ಎತ್ತಿ ಇಳಿಸಿ, ಕೊರಳಿಗೆ ಸುತ್ತಿದ ಸೀರೆಯನ್ನು ಬಿಚ್ಚಿದ. ಆ ಸಂದರ್ಭದಲ್ಲಿ ಚಾರುಗೆ ಬೇರಾವ ದಾರಿಯೂ ಇರಲಿಲ್ಲ. "ಇಲ್ಲಾ ಮೈಥಿಲಿ ನೀನು ಹಾಗೆಲ್ಲಾ ಮಾಡುವುದರಿಂದ ಯಾವ ಉಪಯೋಗವೂ ಇಲ್ಲ. ಬಾಗಿಲು ಸದಾ ತೆರೆದಿರುತ್ತದೆ. ಆದರೆ, ಈ ರೀತಿಯ ಪ್ರಯತ್ನಗಳು ಮಾತ್ರ ಬೇಡ" ಎಂದ. ಚಾರು ಹೇಳಿರುವುದೇನೋ ಸರಿ. ಆದರೆ, ಪುನಃ ಈ ದೃಶ್ಯ ಪುನರಾವರ್ತನೆಗೊಳ್ಳುತ್ತಲೇ ಹೋಯಿತು! ಚಾರುವನ್ನು ಹೆದರಿಸಲು.

ಚೌಕಟ್ಟನ್ನು ಹೊಂದಿಸಲು ಎಷ್ಟು ಕೆಲಸ?

– ೪ –

ಹೊರಗಡೆ ತುಂಬಾ ಮೌನ! ಕೊಮುಗಲಭೆ; ನಗರದಲ್ಲಿ ಕರ್ಫ್ಯೂ ಜಾರಿಗೆ – ನಗರದಲ್ಲಿ ಶಾಂತಿ ಕಾಪಾಡಲು ಮನವಿ ನಗರದ ಎಲ್ಲೆಡೆ ಬಿಗಿ ಬಂದೋಬಸ್ತು. ನಗರದ ಎಲ್ಲಾ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ, ಕಚೇರಿಗಳಿಗೂ ಒಂದು ದಿನದ ರಜೆಯನ್ನು ಕೊಡಲಾಗಿದೆ– ಪತ್ರಿಕೆಯ ತುಂಬಾ ಇದೇ ಸುದ್ದಿಗಳು. ನಿನ್ನೆ ರಾತ್ರಿಯಿಡೀ ಮೈಥಿಲಿಯನ್ನು ಸಮಾಧಾನಗೊಳಿಸಿ ಅವಳು ನಿದ್ದೆಹೋದ ಮೇಲೆ ಎದ್ದು ಕುಳಿತ ಚಾರು ಏಳುವಾಗಲೇ ಗಂಟೆ ಎಂಟು. ಪತ್ರಿಕೆಯ ಹುಡುಗ ಬಂದು ಪತ್ರಿಕೆಯ ಸುದ್ದಿಗಳನ್ನು ಬಾಗಿಲೊಳಗೆ ತೂರಿ ಹೋಗಿದ್ದ. ಕಣ್ಣು ಹೊಸಕಿಕೊಂಡು ಪತ್ರಿಕೆಯ ಮೇಲೆ ಕಣ್ಣಾಡಿಸಿದ. "ಓ ಈವತ್ತು ಆಫೀಸಿಗೆ ರಜಾ." ದೊಡ್ಡ ದನಿಯಲ್ಲಿ ಹೇಳಿದ. ತನ್ನ ಮಾತು ಮೈಥಿಲಿಗೆ ಕೇಳಿಸಲೆಂದು. ಮೈಥಿಲಿಯು ಅದರ ಬಗೆಗೆ ಯೋಚಿಸಲಿಲ್ಲ ಮತ್ತು ಪ್ರತಿಕ್ರಿಯೆಯನ್ನು ಕೊಡಲಿಲ್ಲ. ಪ್ರತಿಕ್ರಿಯೆಯನ್ನು ಕೊಡುವ ಆಸಕ್ತಿಯೇ

ಅವಳಿಗಿದ್ದಿಲ್ಲ. ಮೈಥಿಲಿಯ ಯಾವುದೇ ಪ್ರತಿಕ್ರಿಯೆ ಇಲ್ಲದ್ದನ್ನು ನೋಡಿ "ಈವತ್ತು ರಜಾ" ಎಂದು ಮತ್ತೊಮ್ಮೆ ಹೇಳಿದ. ಅದಕ್ಕೆ ಮೈಥಿಲಿಯು "ರಜಾ ಆದ್ರೆ ನಾನೇನು ಮಾಡಬೇಕು?" ಸಿಟ್ಟಿನ ಕಾವು ಪೂರ್ತಿಯಾಗಿ ಇಳಿದಿಲ್ಲವೆಂಬುದು ಚಾರುಗೆ ಅರ್ಥವಾಯಿತು. ಇನ್ನೊಮ್ಮೆ ಮಾತಾಡಿಸುವಷ್ಟು ವ್ಯವಧಾನ ಚಾರುಗೂ ಉಳಿದಿಲ್ಲ. ಚಾರು ಮತ್ತೆ ಪತ್ರಿಕೆಯನ್ನು ಓದಲು ಶುರುಮಾಡಿದ. ಪತ್ರಿಕೆಯ ಉದ್ದಗಲಕ್ಕೂ ಇರುವ ರೋಚಕ ಸುದ್ದಿಗಳು! ಚಾರು ತನ್ಮಯತೆಯಿಂದ ಓದುತ್ತಲೇ ಪತ್ರಿಕೆಯ ಪುಟವನ್ನು ತಿರುಗಿಸಿದ; ಎರಡನೆಯ ಪುಟದಲ್ಲಿ ಕೋಮುವಾದ. ಅದರ ಸಾಮರಸ್ಯದ ನೆಲೆಗಳು ಇತ್ಯಾದಿ ವಿಷಯಗಳೇ ತುಂಬಿದ್ದವು ವಾಚಕರ ವಾಣಿಯಲ್ಲಿ ಯಾರೋ ಒಬ್ಬ ಪುಣ್ಯಾತ್ಮ ಬರೆದಿದ್ದ! ಬೇರೆ ಬೇರೆ ಧರ್ಮದವರಿಗೆ ಬೇರೆ ರಾಜ್ಯಗಳನ್ನು ಕೊಟ್ಟುಬಿಡಬೇಕು! ಚಾರುಗೆ ಸಣ್ಣದೊಂದು ನಗೆಯರಳಿತು. ಬೇರೆ ಬೇರೆ ಜಾತಿಯವರಿಗೆ ಮತ್ತು ಧರ್ಮದವರಿಗೆ ಒಂದೊಂದು ಪ್ರತ್ಯೇಕ ರಾಜ್ಯದಿಂದ ಮಾತ್ರವೇ ಈ ಸಮಸ್ಯೆಯು ಪರಿಹಾರವಾಗುತ್ತದೆಯೆಂದು ಭಾವಿಸಿದ ವಾಚಕ ಮಹಾಶಯನ ತಿಳುವಳಿಕೆಯ ಬಗ್ಗೆ ಪ್ರತ್ಯೇಕವಾಗಿ ಏನು ಹೇಳುವಂತಿರಲಿಲ್ಲ. ಚಾರು ಈ ವಿಷಯವನ್ನು ನೋಡಿ ದೊಡ್ಡದಾಗಿ ನಕ್ಕುಬಿಟ್ಟ; ಚಾರು ನಗುವುದನ್ನು ನೋಡಿ ಮೈಥಿಲಿಯು ಮತ್ತೆ ಅವನತ್ತ ನೋಡಿ "ಪತ್ರಿಕೆಯನ್ನು ಓದಿ ನಗಾಡುತ್ತಿದ್ದೀರಲ್ಲಾ?" ಅಂದಳು. ಚಾರು "ಪತ್ರಿಕೆಯನ್ನು ಓದಿ ನಗಾಡ್ತಾ ಇದ್ದೀರಲ್ಲಾ ಅಂದರೆ –" ವಾಕ್ಯವನ್ನು ಅರ್ಧದಲ್ಲಿಯೇ ನಿಲ್ಲಿಸಿದ. ಅವನು ವಾಕ್ಯವನ್ನು ಅರ್ಧದಲ್ಲಿಯೇ ನಿಲ್ಲಿಸುವುದಕ್ಕೂ ಕಾರಣವಿತ್ತು. ವಾಕ್ಯವನ್ನು ಪೂರ್ಣಗೊಳಿಸಿದರೆ ಇನ್ನೊಂದು ರೀತಿಯ ಮಾತು ಶುರುವಾಗುತ್ತದೆ. ಇದೆಲ್ಲಾ ಕೊನೆಯಿಲ್ಲದ ವ್ಯವಹಾರಗಳು. "ಅಂದರೆ, ಏನೂ ಇಲ್ಲ. ನೀವು ಯಾವ ಗಳಿಗೆಯಲ್ಲಿ ಯಾವ ತರಹ ಇರುತ್ತೀರಿ? ಅಂತ ಊಹಿಸುವುದೇ ಕಷ್ಟ. ನನ್ನ ನೆಮ್ಮದಿಯಂತೂ ಪೂರ್ತಿ ಕೆಟ್ಟೇ ಹೋಗಿದೆ, ಮನಸ್ಸು ಹದಗೆಟ್ಟಿದೆ. ಇದರಿಂದ ಮುಕ್ತಿ ಸಿಕ್ಕರೆ ಸಾಕಾಗಿದೆ." ಮೈಥಿಲಿಯು ರಾತ್ರಿಯ ಸಂಗತಿಯನ್ನು ಮತ್ತೆ ಹಗಲಿಗೆ ತರತೊಡಗಿದಳು. ಹಗಲಿಗೆ ತರುವ ಅವಳ ಮಾತಿನ ಲಯ ಅರ್ಥವಾಗದ ಹಾಗೆ ಚಾರು "ಗಳಿಗೆಗೊಂದು ತರಹ ಇರುವುದು ಜೀವನ. ಅದಕ್ಕಾಗಿಯೇ ಹೀಗಿದ್ದೇನೆ ಅರ್ಥವಾಯಿತಾ?" ಅಂದವನೇ ಬೆಳಗಿನ ಸ್ನಾನಕ್ಕೆಂದು ಬಚ್ಚಲ ಮನೆಗೆ ಹೊರಟ.

ಆಗಲೇ ಫೋನ್ ಬಂತು. ಫೋನ್ ಎತ್ತಿಕೊಂಡವಳು ಮೈಥಿಲಿ "ಸಾರ್ ಇಲ್ವಾ ಮನೆಯಲ್ಲಿ?" ಆ ಕಡೆಯಿಂದ ಬಂದ ಹೆಣ್ಣು ಸ್ವರವನ್ನು ಕೇಳಿದವಳೇ ಮೈಥಿಲಿಗೆ ಸಣ್ಣ ಉರಿ ಶುರುವಾಯಿತು. "ಯಾರು ಮಾತಾಡ್ತಿರೋದು?," "ನಾನು ರೇಖಾಪಿಂಟೋ ಅಂತ. ಒಂದು ಕಾಲದಲ್ಲಿ ನಾನು ಅವರ ಕೊಲೀಗ್" ಅಂದಳು ರೇಖಾ. "ಇಲ್ಲಾ, ಅವರು ಸ್ನಾನ ಮಾಡ್ತಿದ್ದಾರೆ ಆಮೇಲೆ ಫೋನ್ ಮಾಡಿ" ಅಂತ ಫೋನನ್ನು ಮೈಥಿಲಿಯು ಇಟ್ಟೇ ಬಿಟ್ಟಳು – ಮತ್ತೊಂದು ಮಾತಿಗೆ ಕೂಡಾ ಅವಕಾಶವನ್ನು

ಕೊಡದೆ. ಮೈಥಿಲಿಯು ಮಾತಿಗೆ ಅವಕಾಶವನ್ನು ಕೊಡಬಹುದಿತ್ತು. ಮಾತಿಗೆ ಅವಳು ಅವಕಾಶವನ್ನು ಕೊಟ್ಟರೆ ಒಂದು ರೀತಿಯ ಸಾದ್ಯಂತವಾದ ವಿವರಣೆಯು ದಕ್ಕಬಹುದಿತ್ತು. ಆದರೆ, ಆ ತರಹದ ಅವಕಾಶ ಕೊಡದೇ ಹೋದುದು ಅವಳು ಮತ್ತೊಂದು ತಪ್ಪು ಮಾಡಿದಂತಾಯಿತು ಮತ್ತು ಆ ತಪ್ಪಿನಿಂದಲೇ ಚಾರುಗೆ ಹೊಸದೊಂದು ಅವಕಾಶ ಸಾಧ್ಯವಾಯಿತು. ಸದಭಿಪ್ರಾಯದೊಂದಿಗೆ ಮೈಥಿಲಿಯು ರೇಖಾ ಪಿಂಟೋ ಎಂಬ ಹುಡುಗಿಯೊಂದಿಗೆ ಮಾತಾಡಿದ್ದರೆ ಮುಂದೆ ಆ ತರಹದ ಅಪಾಯವುಂಟಾಗುತ್ತಿರಲಿಲ್ಲ. ನಿನ್ನೆಯ ಜಗಳದ ಕಾವು ಸಂಪೂರ್ಣವಾಗಿ ಇಳಿಯದ ಮೈಥಿಲಿಗೆ ಈಗಷ್ಟೇ ಬಂದು ತೊಂದರೆಯುಂಟುಮಾಡಿದ ಫೋನಿನ ಕರೆಗೆ ಅವಳಿಗೆ ಬಂದ ಸಿಟ್ಟು ರೇಖಾಳ ಧ್ವನಿ ಕೇಳಿ ಇಮ್ಮಡಿಯಾಯಿತು. ಇಮ್ಮಡಿಗೊಂಡ ಸಿಟ್ಟಿನಿಂದಲೇ ಅವಳು ಹಾಗೆ ವರ್ತಿಸಿದಳು. ಅವಳು ಹಾಗೆ ವರ್ತಿಸಿದ್ದು ಅವಳಿಗೆ ಏನೂ ಅನಿಸಿರಲಿಲ್ಲ. ಆದರೆ, ಫೋನಿನ ಮತ್ತೊಂದು ತುದಿಯಿಂದ ಮಾತಾಡುತ್ತಿದ್ದ ರೇಖಾಗೆ ಮಾತ್ರ ಗೊತ್ತಾಯಿತು: ಮೈಥಿಲಿ ನಿನ್ನೆ ರಾತ್ರಿ ಗಂಡ ಚಾರುವಿನೊಂದಿಗೆ ಜಗಳವಾಡಿದ್ದಾಳೆ ಮತ್ತು ತನ್ನ ಗಂಡ ಬೇರೆ ಹೆಂಗಸರ ಜೊತೆಗೆ ಮಾತಾಡುವುದು ಅವಳಿಗೆ ಇಷ್ಟವಿಲ್ಲ. ರೇಖಾ ಸಣ್ಣ ಮುಖ ಮಾಡಿ ಫೋನನ್ನು ಇಟ್ಟವಳು ಕೆಲವು ಗಳಿಗೆಗಳ ತನಕ ಕಾದಳು. ಅವಳು ಚಾರುವಿನ ಜೊತೆಗೆ ಮಾತಾಡಲೇ ಬೇಕಿತ್ತು. ಎದೆ ತುಂಬಾ ತುಂಬಿಕೊಂಡಿರುವ ದುಃಖವನ್ನು; ತನ್ನ ಗಂಡನನ್ನು ತಾನು ಬಿಟ್ಟು ಬಂದಿರುವುದನ್ನು ಮತ್ತು ಮುಂದಿನ ಬದುಕನ್ನು ರೂಪಿಸಲು ಒಂದು ಆಸರೆಯನ್ನು ಅವಳು ಚಾರುವಿನಲ್ಲಿಯೇ ಬೇಡಬೇಕಿತ್ತು. ಹಾಗೆ ಚಾರುವಿನಲ್ಲಿ ಬೇಡುವುದು ರೇಖಾಗೆ ತಪ್ಪೆನಿಸಲಿಲ್ಲ ಮತ್ತು ಅವಿರತವಾಗಿ ಗಂಡನಿಂದ ಹಿಂಸೆಯನ್ನು ಅನುಭವಿಸಿದ ರೇಖಾ ಎಂಬ ಹೆಣ್ಣಿಗೆ ಸಾಂತ್ವನ ನೀಡಬಲ್ಲವನು ಚಾರುವೇ ಆಗಿದ್ದ. ಚಾರುಗೆ ಇರುವ ಸಂಪರ್ಕಗಳಲ್ಲಿ ಯಾವುದಾದರೂ ಒಂದು ಸಣ್ಣ ಸಾಧ್ಯತೆಯು ಒಡಮೂಡಿತು ಎಂಬ ಕನಸಿನಿಂದಲೇ ರೇಖಾ ದೂರವಾಣಿಗೆ ಕೈ ಹಚ್ಚಿದ್ದು. ಆದರೆ ಅವಳು ದೂರವಾಣಿಯ ನಂಬರ್ ಒತ್ತುತ್ತಿರುವಾಗಲೇ ಚಾರು ಬಚ್ಚಲ ಮನೆಯ ಬೋಲ್ಟ್ ಹಾಕಿಕೊಂಡುಬಿಟ್ಟಿದ್ದ ಮತ್ತು ಫೋನನ್ನು ಅವನ ಹೆಂಡತಿ ಮೈಥಿಲಿಯೇ ಎತ್ತಿಕೊಳ್ಳುತ್ತಾಳೆ ಎಂದಾದರೂ ಅವಳಿಗೆ ಗೊತ್ತಿತ್ತೆ? ಕೆಲ ನಿಮಿಷ ಬಿಟ್ಟು ಫೋನ್ ಮಾಡಿದ್ದರೆ ಚಾರು ಸಿಗುತ್ತಿದ್ದ. ಆಮೇಲೆ ಫೋನ್ ಮಾಡಿ ಎಂದು ಮೈಥಿಲಿಯು ಹೇಳುವ ಪ್ರಮೇಯವೇ ಬರುತ್ತಿರಲಿಲ್ಲ ಮತ್ತು ರೇಖಾ ಕೂಡಾ ಗಲಿಬಿಲಿಯುಂಟಾಗುವ ಸಂಭವವಿರುತ್ತಿರಲಿಲ್ಲ. ಫೋನಿನ ಬಳಿಯಲ್ಲಿಯೇ ಕೂತ ರೇಖಾ ಇನ್ನು ಹತ್ತು ನಿಮಿಷ ಬಿಟ್ಟು ಫೋನು ಮಾಡಬೇಕೆಂದು ಯೋಚಿಸುತ್ತಿರುವ ಸಮಯದಲ್ಲಿಯೇ – ಮೈಥಿಲಿಯು "ಇದ್ಯಾರಿದು ರೇಖಾ ಪಿಂಟೋ – ಚಾರುಗೂ ಇವಳಿಗೂ ಏನು ಸಂಬಂಧ?"ವೆಂದು ಲೆಕ್ಕಾಚಾರ ಹಾಕತೊಡಗಿದಳು. ಕೂಡಿಸಿ; ಕಳೆದು; ಬಾಗಿಸಿ; ಗುಣಿಸಿ ನೋಡಿದಳು: "ಚಾರು

ಶುಭ್ರನಲ್ಲ, ಪಕ್ಕಾ ಹಿಪೋಕ್ರೇಟ್. ನನ್ನನ್ನು ಫೂಲ್ ಮಾಡಲು ನೋಡುತ್ತಿದ್ದಾನೆ. ಅವನಿಗೂ ಬೇರೆ ಹೆಂಗಸರ ಸಂಗವಿದೆ. ದೇವವ್ರತನೆಂಬವನನ್ನು ತಂದು ನನ್ನನ್ನು ಹಿಡಿತದಲ್ಲಿ ಇರಿಸಿಕೊಳ್ಳಲು ನೋಡುತ್ತಿದ್ದಾನೆ." ಅನುಮಾನದ ಒಂದು ನೂಲನ್ನು ಹಿಡಿದುಕೊಂಡು ಸರಿಯಾದ ಬಲೆಯನ್ನು ಹೆಣೆಯಲು ಮೈಥಿಲಿಯು ತಯಾರಾದಳು. ಅವಳು ತಾನು ಸಿದ್ಧಪಡಿಸುತ್ತಿರುವ ಬಲೆಯ ನೆಯ್ಗೆಯಲ್ಲಿ ಚಾರು ಸಿಕ್ಕಿ ಬೀಳುವುದನ್ನು ನೋಡಲು ಯತ್ನಿಸಿದಳು. ಅಷ್ಟು ಬೇಗನೆ ಬಲೆಯಲ್ಲಿ ಸಿಕ್ಕಿ ಬೀಳುವ ಕುಳ ಚಾರುವಲ್ಲ ಎಂದು ಮಾತ್ರ ಅವಳಿಗೆ ಗೊತ್ತಿರಲಿಲ್ಲ. ಚದುರಂಗದ ಆಟದಲ್ಲಿ ಮತ್ತೊಂದು ಕಾಯಿಯನ್ನು ನಡೆಸಲು ಮೈಥಿಲಿಯು ಸಿದ್ಧಳಾದಳು. ಅವಳ ಮನಸ್ಸಿನಲ್ಲಿ ದಾಳವಾಗಿದ್ದವಳು ರೇಖಾ ಪಿಂಟೋ ಎಂಬ ಅಮಾಯಕ ಹುಡುಗಿ! ಆದರೆ, ತದೇಕಚಿತ್ತನಾಗಿ ತಣ್ಣೀರಿನಲ್ಲಿ ತಲೆ ಮೇಲೆ ನೀರು ಹೊಯ್ದುಕೊಳ್ಳುತ್ತಿದ್ದ ಚಾರು ಮಾತ್ರ ಚದುರಂಗದ ಆಟಕ್ಕೆ ಬೇಕಾದ ಕಾಯಿಗಳನ್ನು ಮುಂದೆ ಇಡಲು ಯೋಚಿಸುತ್ತಿದ್ದ. ಅವನಿಗೆ ಕಾಲವನ್ನು ಕಾಯುವುದು ಅಭ್ಯಾಸ ಮಾತ್ರ ಮತ್ತು ನೆನಪು ಎಂಬುದು ಅವನ ಶಾಶ್ವತ ಸೊತ್ತು. ಈಗ ಹೇಳಿದ್ದನ್ನು ಇನ್ನು ಹನ್ನೆರಡು ವರುಷ ದಾಟಿದ ಮೇಲೆ ಪುನರುಚ್ಚರಿಸುವ ನಾಗ ದ್ವೇಷ ಅವನದು. ಹಲ್ಲಿನ ಬುಡದಲ್ಲಿಯೇ ವಿಷವಿಟ್ಟುಕೊಂಡು– ಅಂದದ ಹೆಡೆಯನ್ನು ಆಡಿಸುವುದು ಅವನ ಅಭ್ಯಾಸ. ಅನೇಕ ವೇಳೆಯಲ್ಲಿ ಮೌನವೆನ್ನುವುದು ಅವನಿಗೆ ಸಹಾಯ ಮಾಡುವುದೇ ಈ ಕಾರಣಕ್ಕೆ! ಸ್ನಾನ ಮಾಡುತ್ತಿದ್ದವನಿಗೆ ಫೋನ್ ರಿಂಗಾಗಿರುವುದು ಮತ್ತು ಮೈಥಿಲಿಯು ಅದನ್ನು ಎತ್ತಿಕೊಂಡದ್ದು ಎರಡೂ ತಿಳಿಯಿತು. ಯಾರದೋ ಫೋನಿರಬೇಕೆಂದು ಮತ್ತೆ ತಲೆಗೆ ತಣ್ಣೀರು ಹೊಯ್ದುಕೊಂಡ.

ಚಾರು ಸ್ನಾನ ಮುಗಿಸಿಬರುವಷ್ಟರಲ್ಲಿ ಮೈಥಿಲಿಯ ಮುಖ ಮತ್ತಷ್ಟು ಉರಿಯೆದ್ದಿರುವುದು ಗೊತ್ತಾಯಿತು. ಆದರೆ ಆ ಕುರಿತು ಯಾವುದನ್ನು ವಿಚಾರಿಸಲು ಹೋಗಲಿಲ್ಲ. ಮೌನ ಅವಳನ್ನು ಕೆರಳಿಸುತ್ತದೆಯೆಂದು ತುಂಬಾ ಚೆನ್ನಾಗಿಯೇ ಗೊತ್ತು. ಅವಳು ಕೆರಳಿದಷ್ಟೂ ಚಾರುವಿನ ಮೌನ ಹೆಚ್ಚಾಗುತ್ತದೆ. ಆಗಲೇ ಮೈಥಿಲಿ ಅಂದಳು. "ಅದ್ಯಾರೋ ರೇಖಾ ಪಿಂಟೋ ಅಂತೆ, ನಿಮ್ಗೆ ಫೋನ್ ಮಾಡಿದ್ಲು." ಚಾರು ಹೆಚ್ಚಿನ ಉತ್ಸಾಹವನ್ನು ತೋರಿಸದೆ "ಹ್ಞಾಂ" ಎಂದ. ಅದುವೇ ಅವನ ಉತ್ತರವಾಯಿತು. ಮೈಥಿಲಿಯು ಚಾರುವಿನ ಮುಖ ಚಹರೆ ಬದಲಾಗುತ್ತದೆಯಾ ಅಂತ ನೋಡಿದಳು. ಅಂಥ ಯಾವ ಲಕ್ಷಣವೂ ಕಾಣಿಸಲಿಲ್ಲ. ಅದರಿಂದಲೇ ಮೈಥಿಲಿಗೆ ಕೊಂಚ ನಿರಾಶೆಯಾಯಿತು. ಆದರೆ, ಚಾರು ಮಾತ್ರ ಈಗ ಬೇರೆ ಲೆಕ್ಕಾಚಾರವನ್ನು ಪ್ರಾರಂಭಿಸಿದ. ಕಳೆಯುವುದಕ್ಕಿಂತ ಕೂಡುವ ಲೆಕ್ಕಾಚಾರವೇ ಹೆಚ್ಚು ಸುಲಭವೆಂದು ಚಾರುಗೆ ಅನಿಸಿತು.

ಹತ್ತೇ ಹತ್ತು ನಿಮಿಷದಲ್ಲಿ ಮತ್ತೆ ಫೋನ್ ಬಂದಿರುವುದು ರೇಖಾ ಪಿಂಟೋ

ಅವಳದೇ. ಈ ಸಲ ಫೋನ್ ಎತ್ತಿಕೊಂಡವನು ಚಾರುವೇ. "ಸಾರ್, ಸಿಟಿಯಲ್ಲಿ ಫೂರ್ತಿ ಬಂದಾಗಿದೆ. ಯಾವ ಬಸ್ಸುಗಳೂ ಓಡಾಡುತ್ತಿಲ್ಲ. ರಿಕ್ಷಾಗಳು ಕೆಲವು ಓಡಾಡುತ್ತಿವೆ. ಏನು ಮಾಡಲಿ? ನಿಮ್ಮನೆಗೆ ಬರಲಾ? ತುಂಬಾ ಅಂದರೆ ತುಂಬಾ ಮಾತಾಡಬೇಕು. ಮೇಡಂ ಮನೆಯಲ್ಲಿ ಇರಬೇಕು ಅಲ್ವಾ? ಏನು ಮಾಡಲಿ ಸಾರ್". ರೇಖಾ ಫೋನಿನಲ್ಲಿ ಹೇಳುತ್ತಿರುವ ವಿಷಯಕ್ಕೆ ಪ್ರತಿಯಾಗಿ ಚಾರು ಹೆಚ್ಚೇನೂ ಹೇಳಬಯಸಲಿಲ್ಲ. "ನಾಳೆ ಭೇಟಿಯಾಗೋಣ, ತುಂಬಾ ತುರ್ತಿದ್ದರೆ ಮನೆಗೆ ಬಂದುಬಿಡು. ಓ, ಅಲ್ಲಾ, ಸಾರಿ – ಮನೆಗೆ ಬಂದುಬಿಡಿ. ಮನೆಯಲ್ಲಿ ಆರಾಮವಾಗಿ ಕೂತು ಮಾತಾಡಬಹುದು. ಆದರೆ, ನಿಮಗೆ ಮನೆಯಲ್ಲಿ ಫ್ರೀಯಾಗಿ ಮಾತಾಡಲು ಆಗತ್ತೊ ಇಲ್ಲವೋ, ನಿಜ. ಮನೆಯಲ್ಲಿ ಮೈಥಿಲಿಯೂ ಇದ್ದಾಳೆ, ಮೂವರೂ ಕೂತು ಮಾತಾಡಬಹುದು –" ಚಾರು ಫೋನಿನಲ್ಲಿ ಬಹಳ ಎಚ್ಚರದಿಂದ ಮಾತಾಡಿದ. ಮಾತಾಡಿದ ಕ್ರಮಲ್ಲಿಯೇ ಕೆಲವು ಸಂಕೇತಗಳನ್ನು ರೇಖಾಳಿಗೆ ರವಾನೆ ಮಾಡಿದ. ಚಾರು ರವಾನೆ ವಿಷಯವು ಕೂಡಲೇ ರೇಖಾಗೂ ಮನದಟ್ಟಾಯಿತು ಮತ್ತು ಅವನು ಬೇಕೆಂದೇ ಕೆಲವು ವಿಷಯಗಳನ್ನು ಪ್ರಸ್ತಾವಿಸುತ್ತಿದ್ದಾನೆಂದು ಮೈಥಿಲಿಗೂ ಗೊತ್ತಾಯಿತು. ಚಾರು ಮುಂದೆ ಏನು ಮಾತಾಡುತ್ತಾನೆಂದು ಗಮನವಿರಿಸಿ ಕೇಳಲು ತೊಡಗಿದಳು ಮೈಥಿಲಿ. ಚಾರುಗೂ ಅದು ಗೊತ್ತಾಗದ ವಿಷಯವೇನಲ್ಲ. ಚಾರು ಉದ್ದೇಶಪೂರ್ವಕವಾಗಿಯೇ "ಹೇಗಿದೆ ಜೀವನ? ಮದುವೆಯಾದ ಮೇಲೆ ಎಲ್ಲಿ ಹನಿಮೂನಿಗೆ ಹೋದ್ರಿ? ಹನಿಮೂನ್ ಚೆನ್ನಾಗಿತ್ತಾ? ಕೇಳಬಾರದ ಪ್ರಶ್ನೆಯನ್ನು ಕೇಳಿದೆನೆಂದು ಭಾವಿಸಬೇಡಿ. ನಾನೂ–ನನ್ನ ಹೆಂಡತಿಯು ಹನಿಮೂನ್ ಆಚರಿಸಿದ್ದು ಎಲ್ಲಿ ಗೊತ್ತಾ? – ಹನಿಮೂನ್‌ನ ವಿಷಯ ಹೇಳಬಾರದು, ಅದು ಗುಟ್ಟು, ಆದರೆ, ನಮ್ಮ ಮೊದಲ ಹನಿಮೂನ್‌ನ ಆಚರಣೆ ನಡೆದದ್ದು ನನ್ನ ಪುಟಾಣಿ ರೂಮಿನಲ್ಲಿ ಮತ್ತು ಆಗ ನಮ್ಮ ಹಾಸುಗೆಯ ತುಂಬಾ ತಿಗಣೆಗಳೇ ಇದ್ದವು ಮತ್ತು ಸೊಳ್ಳೆಪರದೆಯಿರಲಿಲ್ಲ. ಇಡೀ ರಾತ್ರಿ ಜಾಗರಣೆ ಮಾಡಿದೆವು." ತಾನು ಹೇಳುತ್ತಿರುವುದಕ್ಕೆ ತಾನೇ ನಗಾಡಿದ. ರೇಖಾ ಆ ಕಡೆಯಿಂದ ನಗಾಡಿದ್ದು ಚಾರುಗೆ ಕೇಳಿಸಿತು. ಆದರೆ ಮತ್ತೆ ರೇಖಾ ಪಿಂಟೋ ಏನು ಹೇಳಿದಳು ಎಂದುಮೈಥಿಲಿಗೆ ಗೊತ್ತಾಗಲಿಲ್ಲ. ಆಮೇಲೆ ಪುನಃ ಚಾರು ನಗಾಡಿದ – ಗಹಗಹಿಸಿ. ಮೈಥಿಲಿಯ ರಕ್ತನಾಳಗಳಲ್ಲಿಯೂ ಉರಿಯೇಳುವ ಹಾಗೆ. "ಓ.ಕೆ. ನಾಳೆ ಮತ್ತೆ ಭೇಟಿಯಾಗ್ತೀನಿ" ಎಂದು ನಗುತ್ತಲೇ ಹೇಳಿದ. ಮೈಥಿಲಿಯು ತುಂಬಾ ಅಂದರೆ ತುಂಬಾನೇ ಗಮನಿಸುತ್ತಿದ್ದಾಳೆ ಎಂಬುದನ್ನು ಗೊತ್ತಿದ್ದೇ ಚಾರು ಹಾಗೆ ಮಾಡಿದ. ಆದರೆ ಅವನು ಉದ್ದೇಶಪೂರ್ವಕವಾಗಿ ಹಾಗೆ ಮಾಡಿದನೆಂದು ತಿಳಿಯದ ಮೈಥಿಲಿ ತನ್ನ ದುಮುಗುಟ್ಟುವ ಮುಖದೊಂದಿಗೆ ಬೆಡ್‌ರೂಮಿನ ಒಳಗಡೆ ಹೊಕ್ಕಳು. "ಮೈಥಿಲಿ ಒಮ್ಮೆ ಈ ಕಡೆಗೆ ಬಾ, ನಿನ್ನೊಂದಿಗೆ ಮಾತಾಡಬೇಕು" ಎಂದು ಚಾರುವೇ ಕರೆದ. ಮೈಥಿಲಿ ಬಂದಳು ಉರಿಮೋರೆಯೊಂದಿಗೆ.

ಚಾರುವೇ ತುಂಬಾ ಸಮಾಧಾನದಿಂದ ಮೈಥಿಲಿಯನ್ನು ಹತ್ತಿರ ಕೂರಿಸಿಕೊಂಡು, "ಮೈಥಿಲಿ, ನಿನಗೆ ಏನಾಗಿದೆ ಹೇಳು? ಸಮಾಧಾನದಿಂದಲೇ ಅದನ್ನು ಬಗೆಹರಿಸಿಕೊಳ್ಳೋಣ, ಅದು ಬಿಟ್ಟು ನೀನು ಒಂದು ಹೇಳುವುದು, ನಾನು ಮತ್ತೊಂದು ಹೇಳುವುದು ಇದರಿಂದ ನಮ್ಮ ಸಮಸ್ಯೆ ಯಾವತ್ತೂ ಪರಿಹಾರವಾಗೋಲ್ಲ" ಅಂದ. ಚಾರುವಿನ ಮಾತಿನಲ್ಲಿ ಸ್ವಚ್ಛತೆಯಿತ್ತು. ಯಾವುದೇ ಒಂದು ರೀತಿಯ ಕಳಂಕವಾದ ಭಾವವಿರಲಿಲ್ಲ. ಆದರೆ, ಮೈಥಿಲಿ ಅವನ್ನ ಸಮಾಧಾನದ ಸ್ವರವನ್ನೇ ಅಪಾರ್ಥ ಮಾಡಿಕೊಂಡಳು. "ಏನಾಗಿದೆ ನನಗೆ? ಏನೋ ಒಂದು ಆದವರಂತೆ ನೀವು ವರ್ತಿಸುತ್ತಿದ್ದೀರಿ ಮತ್ತು ಆ ವರ್ತನೆಯು ನಿಮಗೆ ಅಭ್ಯಾಸವಾಗಿದೆ. ಈಗ ಇರುವ ತರಹ ಮತ್ತೊಂದು ಕ್ಷಣದಲ್ಲಿ ನೀವು ಇರುವುದಿಲ್ಲ, ನಿಮ್ಮ ವಿಚಿತ್ರ ವರ್ತನೆ; ಸ್ವಭಾವ; ನಿಮ್ಮ ಮನೋಸ್ಥಿತಿ ನೋಡಿ–ನೋಡಿ ಸಾಕಾಗಿ ಹೋಗಿದೆ ನನಗೆ." "ನಿನ್ನೆ ರಾತ್ರಿ ಮಾತಲ್ಲಿ ಒಂಚೂರು ಹೆಚ್ಚು ಕಡಿಮೆಯಾದ್ದಕ್ಕೆ ಆತ್ಮಹತ್ಯೆ ಮಾಡೋಕೆ ಹೋದೆ. ಏನು ನಿನ್ನ ಕತೆ? ಯಾಕೇ ಹೀಗೆ?" ಅದನ್ನೇ ಕೇಳುತ್ತಿದ್ದೇನೆ. "ಇಲ್ಲ ಅದು ನನ್ನ ಸ್ವಭಾವ, ನನಗೆ ಯಾರೂ ಕೇಳಬಾರದು, ನನ್ನಿಷ್ಟ ಬಂದಂತೆ ನಾನಿರಬೇಕು. ಈ ಕುರಿತು ಯಾರೂ ಪ್ರಶ್ನಿಸಬಾರದು ಮತ್ತು ನನ್ನ ಮೇಲೆ ಅಧಿಕಾರ ನಡೆಸಬಾರದು." ಅಂದರೆ ಯಾರೂ ಅಂದ್ರೆ ಯಾರು ಕೇಳಲೇ ಬಾರದಾ? ಚಾರು ಮೈಥಿಲಿಯನ್ನು ಹತ್ತಿರ ಕೂರಿಸಿದವನು ಎದ್ದು ಹೋಗಿ ಮತ್ತೆ ಸಿಗರೇಟು ಪ್ಯಾಕ್ ಕೈಲಿ ಹಿಡಿದುಕೊಂಡ. ಮೈಥಿಲಿ, "ಅಷ್ಟೇ ತಾನೇ? ನಾನು ಆತ್ಮಹತ್ಯೆ ಮಾಡಿಕೊಂಡರೂ, ಬಿಟ್ಟರೂ ನಿಮಗೆ ಯಾವ ಲಾಭ ನಷ್ಟವೂ ಇಲ್ಲ. ಅದಕ್ಯಾಕೆ ಯೋಚನೆ ಮಾಡ್ತೀರಿ?" ಅಂದರು. ಚಾರು ನಗುತ್ತಲೇ ಹೇಳಿದ "ಅದರಿಂದ ಲಾಭ–ನಷ್ಟದ ಲೆಕ್ಕಾಚಾರ ಹಾಕಲು ಅದೇನು ಲೇವಾದೇವಿಯಲ್ಲ, ಸುಮ್ಮನೇ ಯಾಕೆ ಹೀಗೆ? ಅಂತ ಕೇಳಿದೆ."

"ನಾನು ದುಡಿಯುತ್ತೇನೆ, ನನಗೆ ಸಂಬಳ ಬರುತ್ತೆ, ನಾನು ಖುಶಿಯಿಂದ ನನಗೆ ಬೇಕಾದ್ದು ತಗೊಂಡು ಮಜವಾಗಿರ್ತೀನಿ, ಅದನ್ನು ನೀವು ಕೇಳಬಾರದು ಅಷ್ಟೇ!" ಎಂದ ಮೈಥಿಲಿಯು "ಅಡುಗೆ ಮನೆಯಲ್ಲಿ ಹಾಲು ಉಕ್ಕಿ ಹೋಗುತ್ತದೆ ಉರಿ ಕಡಿಮೆ ಮಾಡಿ ಬರುತ್ತೇನೆ" ಎಂದು ಹೋದಳು. ಆದರೆ, ಚಾರುಗೆ ಮತ್ತೊಂದು ವಿಷಯ ಮನದಟ್ಟಾಯಿತು. ಯಾವುದೇ ವಿಷಯವನ್ನು ಮೈಥಿಲಿಯಲ್ಲಿ ಕೇಳಬಾರದು. ಆಟದ ಕೊನೆ ಮುಗಿಯುವ ಲಕ್ಷಣವಿಲ್ಲ. ಮತ್ತು ರೇಖಾ ಖಂಡಿತಾ ಬರುವುದಿಲ್ಲ. ಹೊರಗಡೆ ಕಾಲಿಡುವಂತಿಲ್ಲ, ಚಾರು ಏನು ಮಾಡಲಿ? ಸಮಯವನ್ನು ಕೊಲ್ಲುವುದು ಹೇಗೆ? ಯೋಚನೆ ಮಾಡುತ್ತಲೇ ಕೂತ. ಆದರೆ, ಮೈಥಿಲಿಯು ಸಮಾಧಾನದ ಗಳಿಗೆಯಲ್ಲಿ ಹೇಳಿರುವ ಮಾತಿನಲ್ಲಿಯೂ ಸಣ್ಣ ಒಗರಿತ್ತು. ಕಹಿ ಬೇವಿನೆಲೆಯ ಚೂರುಗಳು ಇದ್ದವು! ಸಂಜೆಯ ತನಕ ಮನೆಯಲ್ಲಿ ಕಾಲ ಕಳೆಯುವುದು ಕಷ್ಟ. ಯಾಕೋ ಮನೆಯಲ್ಲಿ ಇರುವುದೆಂದರೆ ಅದೊಂದು ತರಹದ ಶಿಕ್ಷೆಯೆಂದು ಅನಿಸತೊಡಗಿತು

– ಚಾರುಗೆ. ಅಡುಗೆ ಮನೆಯೊಳಗೆ ಹೋಗಿ ಸ್ಟೌವನ್ನು ಆರಿಸಿ ಬಂದ ಮೈಥಿಲಿ ಮತ್ತೆ ಚಾರುವಿನ ಜೊತೆಗೆ ಯಾವುದನ್ನು ಮಾತಾಡಲು ಇಷ್ಟಪಡದಂತೆ ಪತ್ರಿಕೆಯನ್ನು ತೆಗೆದುಕೊಂಡು ಬೆಡ್‌ರೂಮಿನಲ್ಲಿ ಬಿದ್ದುಕೊಂಡಳು. ಮನೆಯೆಂದರೆ ಮನೆಯೇ ಮಾತುಕತೆಯೇ ಇಲ್ಲದ, ಮೌನದ ಕೂಪವಾಗಿರುವ ಮನೆಯೊಳಗೆ ಇರುವುದೇ ಬಹಳ ಕಷ್ಟವೆಂದು ಚಾರುಗೆ ಅನಿಸತೊಡಗಿತು. ಚಾರು ಯಾವುದನ್ನು ಯೋಚಿಸುತ್ತಿದ್ದನೋ ಅದನ್ನೇ ಮೈಥಿಲಿಯೂ ಯೋಚಿಸುತ್ತಿದ್ದಳು. ಮನೆಯಲ್ಲಿ ಇರುವುದಕ್ಕಿಂತ ಲೂನಾ ಹಿಡಿದುಕೊಂಡು ಮಾರ್ಕೆಟಿಗಾದರೂ ಹೋಗಿಬರಬಹುದಿತ್ತು. ಮೈಥಿಲಿಯ ಯೋಚನೆಯು ಆ ದಿಕ್ಕಿನಲ್ಲಿ ಸಾಗಿದರೆ, ಚಾರು ಗಲಭೆಯಾಗದಿದ್ದರೆ ಒಂದೆರಡು ಬಾಟಲ್ ತಂದಿಟ್ಟುಕೊಂಡು ಗುಂಡು ಹಾಕುತ್ತಾ ಕಾಲ ಕಳೆಯಬಹುದಿತ್ತು ಎಂದು ಯೋಚಿಸುತ್ತಿದ್ದ. ಇಬ್ಬರೂ ಯೋಚಿಸುತ್ತಿದ್ದ ಕ್ರಮದಲ್ಲಿಯೇ ರೇಖಾ ಕೂಡಾ ಯೋಚಿಸುತ್ತಿದ್ದಳು. ಮನೆಯಿಂದ ಹೊರಗಡೆ ಹೋಗಿ ಅಡ್ಡಾಡಿಕೊಂಡು ಬರಬಹುದಿತ್ತು. ಒಂದಿಷ್ಟು ಅಡ್ಡಾಡಿದರೆ ಮಾತ್ರ ಮನಸ್ಸಿಗೆ ಒಂದು ರೀತಿಯ ನೆಮ್ಮದಿಯು ದೊರೆಯುತ್ತಿತ್ತೇನೋ ಎಂದು ಅವಳ ಯೋಚನೆ. ಎಲ್ಲರೂ ಮನೆಯ ಹೊರಗಿನ ಪ್ರಪಂಚದ ಕುರಿತು ಯೋಚಿಸುತ್ತಿದ್ದರು. ಆದರೆ, ಮನೆಯೊಳಗೆ ಅವರೆಲ್ಲಾ ಕೂತಿದ್ದರು!

ಗಂಡ ಹೆಂಡತಿಯರ ನಡುವೆಯೆದ್ದ ಕೋಲಾಹಲವು ಒಂದು ಗಳಿಗೆಯಲ್ಲಿ ಮುಗಿಯುವಂತಿದ್ದರೆ, ಅಥವಾ ಸಣ್ಣ ಸಮಾಧಾನದ ನಿಟ್ಟುಸಿರಲ್ಲಿ ಮುಕ್ತಾಯ ಹೊಂದುವಂತಿದ್ದರೆ ಚಾರುವಾಗಲೀ ಮೈಥಿಲಿಯಾಗಲೀ ಬೇರೆ ಬೇರೆ ಮಗ್ಗುಲುಗಳಲ್ಲಿ ಯೋಚಿಸಬೇಕಾದ ಯಾವ ಅಗತ್ಯವೂ ಇರಲಿಲ್ಲ ಮತ್ತು ಅವರು ಅವರದೇ ರೀತಿಯಲ್ಲಿ ಒಂದು ಹೊಂದಾಣಿಕೆಯ ಚೌಕಟ್ಟನ್ನು ಜೋಡಿಸಿಕೊಂಡು ಬಿಡುತ್ತಿದ್ದರು. ಚೌಕಟ್ಟನ್ನು ಹೊಂದಿಸಲು ಎಷ್ಟು ಹೊತ್ತಿನ ಕೆಲಸ– ಅದೂ ಗಂಡ–ಹೆಂಡತಿಯರ ನಡುವೆ!

ಎಷ್ಟೊಂದು ಪ್ರೀತಿಯ ನಂಬಿಕೆಗಳು

– ೫–

ಗಂಡ-ಹೆಂಡತಿಯರ ನಡುವೆ ಹೊತ್ತಿಕೊಂಡ ಒಂದು ಸಣ್ಣ ಉರಿಯನ್ನು ಇಬ್ಬರೂ ಮನಸ್ಸು ಮಾಡಿದ್ದರೆ ಆರಿಸಬಹುದಿತ್ತು. ಹೊತ್ತು ಮುಳುಗಿದ ಮೇಲೆ ಮತ್ತು ಹೊತ್ತು ಮೂಡುವ ಮೊದಲು ಇಬ್ಬರೂ ಪರಸ್ಪರ ಒಬ್ಬರಿಗೊಬ್ಬರು ತಕ್ಕೈಸಿಕೊಂಡು ಸಮಾಧಾನ ಹೇಳಿಕೊಳ್ಳುವುದು ದೊಡ್ಡದೊಂದು ಕೆಲಸವಾಗಿರಲಿಲ್ಲ. ಅದು ಮೈ-ಕೈ ನೋಯಿಸಿ ಕೊಳ್ಳುವ ಕೆಲಸವಲ್ಲ. ಹೃದಯಪೂರ್ವಕವಾಗಿ ಒಬ್ಬರಿಗೊಬ್ಬರು ಒಪ್ಪಿಸಿಕೊಂಡ ಮೇಲೆ ಯಾವ ಸಂಕೋಚವಾಗಲೀ, ಅಡ್ಡ ಪರದೆಯಾಗಲೀ ಉಳಿಯುತ್ತಿರಲಿಲ್ಲ. ದಿನಚರಿಯೊಂದರ ಭಾಗವಾಗಿ ಜಗಳ; ಸಣ್ಣ ಮಂದಹಾಸ; ಕದ್ದು ಮುಚ್ಚಿ ಆಡಬೇಕಾದ ಸರಸ; ಯಾವುದೂ ಪೂರ್ಣವಾಗಿ ಅವರ ಬದುಕಿನ ಜೊತೆ ಜೊತೆಗೆ ಬರಬೇಕಾದ್ದು- ಅಲ್ಲಲ್ಲಿ ಅಪೂರ್ಣಗೊಂಡ ವಾಕ್ಯದಂತೆ ಜೀವನ ಜೊತೆಗಾತಿಯಾಯಿತು. ಯಾವಾಗಲೋ ಬಂದು ಕಲಕಿ ಹೋಗುವ ಜಗಳ; ಅದರ ಜೊತೆಗೊಂದಿಷ್ಟು ನಂಜಿಕೊಳ್ಳಲು ವ್ಯಂಗ್ಯ; ಜಡ ಮತ್ತು

ಯಾಂತ್ರಿಕವಾಗಿ ಬಂದು ಹೋಗುವ ತೆರೆದಾಟಗಳು – ಚಾರು ಮತ್ತು ಮೈಥಿಲಿಯರ ನಡುವೆ ಹಾದುಹೋಗಲು ಶುರುವಾಯಿತು.

ಮೈಥಿಲಿಯನ್ನು ಚಾರು ಮುಟ್ಟಿದಾಗೆಲ್ಲಾ ಮೈಥಿಲಿಗೆ ದೇವವ್ರತನ ಬೆಚ್ಚಗಿನ ನೆನಪುಗಳು! ಮೈಮೇಲೆ ಮುಳ್ಳಿನ ಕಂಟಿಯೊಂದು ಬಿದ್ದಿದೆ. ಹೇಗಾದರೂ ಸುಧಾರಿಸಿಕೊಂಡು ಮುಳ್ಳು ಕಂಟಿಯನ್ನು ಮೈಮೇಲಿಂದ ತೆಗೆದರೆ ಸಾಕೆಂದು ಹಂಬಲಿಸುವ ಮೈಥಿಲಿ, ಮೈಥಿಲಿಯ ಮನಸ್ಸಿನ ತುಂಬಾ ದೇವವ್ರತನ ಹೆಜ್ಜೆ ಗುರುತುಗಳು. ಆ ದಿನ ನಟ್ಟನಡು ಮಧ್ಯಾಹ್ನ ಹೊತ್ತು ಕೂಡಾ ಆಗಿದ್ದು ಅದೇ: ಸಾಕಷ್ಟು ಸಮಾಧಾನದಿಂದ ಮೈಥಿಲಿಗೆ ಹೇಳಬೇಕಾದುದನ್ನು ಮುಚ್ಚುಮರೆಯಿಲ್ಲದೆ ಹೇಳತೊಡಗಿದ. ಕರ್ಫ್ಯೂ ಜಾರಿಯಾಗಿದೆ, ಕಚೇರಿಗಳಿಗೆ ರಜೆ. ಮಧ್ಯಾಹ್ನ ತನಕ ಎಲ್ಲಾದರೂ ಹೊರಗಡೆ ಹೋಗಬೇಕೆಂದು ಹಂಬಲಿಸಿದ ಮತ್ತು ಮಧ್ಯಾಹ್ನ ಊಟದ ತನಕವೂ ಜೈನ ಯತಿಗಳಂತೆ ಮೌನವನ್ನು ಆಶ್ರಯಿಸಿದ ದಂಪತಿಗಳು ಊಟದ ತರುವಾಯ ಮೌನವನ್ನು ಒಡೆಯಲೇ ಬೇಕಾಯಿತು. ಬೆಳಗಿನ ಹೊತ್ತು, "ನಾನು ನನಗೆ ಖುಶಿ ಬಂದಂತೆ ಇರುವೆ. ಅದರ ಮೇಲೆ ಕೇಳುವ ಅಧಿಕಾರ ಯಾರಿಗೂ ಇಲ್ಲ"ವೆಂದು ಮೈಥಿಲಿಯು ಹೇಳಿದ ಮಾತು ಚಾರುವಿನ ಮನದ ಮೂಲೆಯಲ್ಲಿ ಮತ್ತೆ ಮತ್ತೆ ಪ್ರತಿಧ್ವನಿಸತೊಡಗಿತು.

ಊಟ ಮಾಡಿ ಕೂತವನೇ 'ಮೈಥಿಲಿ' ಎಂದ. ಆ ಮಾತಿನಲ್ಲಿ ಸಾಕಷ್ಟು ಅನುನಯವನ್ನು ತುಂಬಿಕೊಂಡಿದ್ದ. ಯಾಕೆಂದರೆ ಬಿರುಕು ಮತ್ತಷ್ಟು ಬಿರುಕೊಡೆಯುವುದು ಬೇಕಿರಲಿಲ್ಲ. 'ಏನು ಹೇಳಿ?' ಎನ್ನುತ್ತಲೇ ಮೈಥಿಲಿಯು ತನ್ನ ನೈಟಿಗೆ ಕೈಯೊರೆಸುತ್ತಾ ಕೇಳಿದಳು. "ನೋಡು ಮೈಥಿಲಿ ಇದೆಲ್ಲಾ ಸರಿಯಿರೋಲ್ಲ, ಯಾವಾಗ ನೋಡಿದರೂ ಜಗಳ, ಕಿರಿಕಿರಿ. ಮನೆಯೆನ್ನುವುದು ಸ್ಮಶಾನವೆಂದು ನೀನು ಭಾವಿಸಿಕೊಳ್ಳುವುದು, ಯಾವುದೂ ನನಗೆ ಸರಿಯೆಂದು ಅನಿಸುವುದಿಲ್ಲ. ಹಿಂದಿನ ಕತೆಗಳನ್ನು ಮರೆಯಬೇಕೆಂದು ಹೇಳುವ ನೀನೇ ಯಾವ್ಯಾವುದೋ ಭ್ರಮೆಯಲ್ಲಿದ್ದೀಯಾ ಆ ಕುರಿತು ಯೋಚನೆ ಮಾಡು."

"ಯೋಚನೆ ಮಾಡುವುದಕ್ಕೆ ಏನಿಲ್ಲ. ನಾನು ನನಗೆ ಬೇಕಾದ ಹಾಗೆ ಇರುವವಳೆ. ಆದರೆ, ನಿಮಗೆ ಯಾವ ರೀತಿಯಲ್ಲಿಯೂ ತೊಂದರೆಯನ್ನು ಕೊಡುವುದಿಲ್ಲ. ನನ್ನ ಆಸೆಗಳಿಗೆ ನೀವು ಅಡ್ಡ ಬರಬೇಡಿ. ನನಗೂ ಒಂದು ವ್ಯಕ್ತಿತ್ವವಿದೆ ಎಂಬುದನ್ನು ಅರ್ಥಮಾಡಿಕೊಳ್ಳಿ." ಮೈಥಿಲಿಯ ಮಾತಿನಲ್ಲಿ ತುಂಬಾ ನಿಷ್ಠುರತೆಯಿತ್ತು ಮತ್ತು ಸ್ವ-ಸಮರ್ಥನೆಯ ಧಾಟಿಯಿತ್ತು. ಚಾರು ಆದರೂ ಮೆತ್ತಗೆ "ಇಲ್ಲ, ಮೈಥಿಲಿ ಇದೆಲ್ಲಾ ಚೆನ್ನಾಗಿರೋಲ್ಲ, ಅದಕ್ಕಾಗಿ ಹೇಳಿದೆ" ಎಂದ.

ಮೈಥಿಲಿಯು "ಯಾವುದು ಚೆನ್ನಾಗಿರೋಲ್ಲ, ನಿಮ್ಮ ತಾಳಕ್ಕೆ ತಕ್ಕಂತೆ ನಾನು ಕುಣಿಯುತ್ತೇನೆ ಎಂದು ಭಾವಿಸಬೇಡಿ. ನನಗೆ ನನ್ನ ಸ್ವಾತಂತ್ರ್ಯ ಬೇಕು, ಅದನ್ನು ನೀವು

ತಡೆಹಿಡಿಯುವಂತಿಲ್ಲ." ಆಗ ನಿಜವಾಗಿ ಬಂದಿದ್ದು ಸಿಟ್ಟು – ಚಾರುಗೆ. "ನನ್ನ ತಾಳ್ಮೆಗೂ ಒಂದು ಮಿತಿಯಿದೆ ಮೈಥಿಲಿ, ಈ ತನಕವೂ ನಾನು ಕಾದು ಕುಳಿತಿದ್ದು – ನಿನ್ನ ಅಭಿಲಾಷೆಗಳಿಗೆ ಒಂದು ಹಿಡಿತವಿರಲಿ ಅಂತ. ಆದರೆ ನೀನು ಬದಲಾಗುವ ಲಕ್ಷಣಗಳೂ ನನಗೆ ಕಾಣಿಸುತ್ತಿಲ್ಲ. ನೀನು ನನ್ನ ಬಗ್ಗೆ ಏನು ಭಾವಿಸಿಕೊಂಡಿದ್ದೆಯೋ ಅದೆಲ್ಲವೂ ತಪ್ಪು, ಮತ್ತೊಮ್ಮೆ ಹೇಳ್ತೇನೆ." ಚಾರುವಿನ ಮಾತನ್ನು ಅರ್ಧದಲ್ಲಿಯೇ ನಿಲ್ಲಿಸಿದ ಮೈಥಿಲಿ, "ಸುಮ್ಮನೇ ಏನೇನೋ ಮಾತಾಡಬೇಡಿ, ನೀವೂ ಒಬ್ಬರು ಗಂಡುಸಾ?" ಮೈಥಿಲಿಯ ಮಾತು ಪೂರ್ಣವಾಗುವುದೊಳಗೆ ಚಾರು ಎದ್ದವನೇ ಅವಳ ಕೆನ್ನೆಗೆ ಎರಡೇಟು ಕೊಟ್ಟ, "ಏನೂಂತ ತಿಳ್ಕೊಂಡೆ ನನ್ನ" ಅಂತ ಕಿರುಚಾಡಿದ. ಮೈಥಿಲಿಯು ಅವನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಳು. "ಇನ್ನೊಮ್ಮೆ ನೀನು ಹೀಗೆ ಏನೇನೋ ಒದರಿದರೆ ನಿನಗೊಂದು ಗತಿ ಕಾಣಿಸ್ತೇನೆ" ಅಂದ ಚಾರು.

ಮೈಥಿಲಿಯು ಅಳುತ್ತಲೇ "ಅದೇನು ಮಾಡ್ಕೊತೀಯೋ ಮಾಡಿಕೋ ನಾನೇನು ಸದರಕ್ಕೆ ಬಿದ್ದವಳು ಅಂತ ತಿಳ್ಕೋಬೇಡ ಕುಡ್ದು ಬಿದ್ದಿರೋನಿಗೆ ಹೆಂಡ್ತಿ ಬೇರೆ ಕೇಡು, ಇನ್ನೊಮ್ಮೆ ನನ್ನ ಮೈ ಮೇಲೆ ಕೈ ಮಾಡಿದರೆ ನೋಡು ನಿನ್ನ"ಅನ್ನುತ್ತಲೇ ಚಾರುವಿನ ಮುಖಕ್ಕೆ ಉಗುಳಿದಳು. ಚಾರುವಿನ ಸಿಟ್ಟು ತಡೆಯಲಾಗಲಿಲ್ಲ. ರಪ್ಪನೇ ಅವಳ ಬಾಯಿಗೆ ಹೊಡೆದ. ಮೈಥಿಲಿಯ ತುಟಿಯಿಂದ ರಕ್ತ ಜಿನುಗಿತು. ಯಾಕೋ ಚಾರುಗೆ ಮೈಥಿಲಿಯ ಬಗೆಗೆ ಅಸಹ್ಯವೆನಿಸಿ ಅವಳನ್ನು ಅಲ್ಲಿಯೇ ಬಿಟ್ಟು ಹೊರಗಡೆ ಹೊರಟ – ಕರ್ಫ್ಯೂ ಜಾರಿಯಲ್ಲಿದೆ, ಕೋಮು ಗಲಾಟೆ ನಡೆಯುತ್ತಿದೆಯೆಂಬುದನ್ನು ಮರೆತು. ತುಟಿಯಂಚಲ್ಲಿ ಜಿನುಗಿದ ರಕ್ತವನ್ನು ಒರೆಸಿಕೊಳ್ಳುತ್ತಲೇ ಮೈಥಿಲಿಯು ಅವನು ಹೊರಟು ಚಪ್ಪಲಿ ಹಾಕಿಕೊಳ್ಳುವಾಗ ಹೇಳಿದಳು; "ಅದೇನು ಮಾಡ್ಕೋತಿಯೋ ಮಾಡಿಕೋ." ಚಾರು ಮತ್ತು ಮೈಥಿಲಿಯರ ಈ ಮಾತುಗಳೇ ಅವರಿಬ್ಬರನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ಯಿತು. ಸಮರ ಕುರಿತಂತೆ ಇಬ್ಬರೂ ಬೇರೆ ರೀತಿಯ ನಕ್ಷೆಯನ್ನು ತಯಾರಿಸಿದರು.

ಚಾರುವಿನ ನಕ್ಷೆಯಲ್ಲಿ ರೇಖಾ ಪಿಂಟೋಳ ಹೆಸರು ದಾಖಲಾಯಿತು ಮತ್ತು ಮೈಥಿಲಿಯು ಮರುದಿನ ಸಂಜೆಯೇ ಕುಂಬಾರರ ಓಣಿಯಲ್ಲಿರುವ ಪೂಜಾರಪ್ಪನ ಮನೆಗೆ ಹೋಗುವ ನಿಶ್ಚಯ ಮಾಡಿದಳು. ಯಾಕೆಂದರೆ ಮರುದಿನವೇ ಮಂಗಳವಾರ. ಮಂಗಳವಾರ ಕುಂಬಾರ ಓಣಿಯ ಪೂಜಾರಪ್ಪನ ಮೈಮೇಲೆ ಚೌಡಮ್ಮ ಬರುತ್ತಾಳೆ.

ದೇವವ್ರತನ ತಲೆಯನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಸುಜಾತ ಕೂಡಾ ಅವನ ತಲೆಗೂದಲಲ್ಲಿ ಕೈಯಾಡಿಸುತ್ತಾ ಹೇಳಿದಳು; "ಈ ಮನೆಗೆ ಬಂದ ಮೇಲೆ ಸ್ವಲ್ಪ ಹಾಯೆನಿಸುತ್ತದೆ ಅಲ್ವಾ?" ದೇವವ್ರತನೂ ಅವಳ ಮುಖವನ್ನೇ ನೋಡುತ್ತಾ ಹೌದೆಂದ. ಅವನು ಹೌದು ಎಂದದ್ದು ನಿಜವಾದರೂ ಯಾಕೋ ಮನಸ್ಸಿಗೆ ಅಂಥ ನೆಮ್ಮದಿಯೆಂದು ಆತನಿಗೇ ಅನಿಸಿಲ್ಲ. ಮತ್ತೆ ಮತ್ತೆ ನೆನಪಾಗುವ

ಮೈಥಿಲಿ ಮತ್ತು ಅರ್ಧದಿಂದ ಎದ್ದು ಓಡಿದ್ದು – ಇವೇ ನೆನಪಿಗೆ ಬರತೊಡಗಿವೆ. ಈ ನೆನಪುಗಳು ಅವನನ್ನು ಬೆಂಬಿಡದೆ ಪೀಡಿಸುತ್ತಿರುವುದರಿಂದ ಮತ್ತೊಮ್ಮೆ ಮೈಥಿಲಿಯನ್ನು ಭೇಟಿಯಾಗಬೇಕಿತ್ತು ಎಂದು ಭಾವಿಸಿಕೊಂಡ. ಆದರೆ, ಅವನು ಭಾವಿಸಿಕೊಂಡಂತೆ ನಡೆಯುವುದು ಸಾಧ್ಯವೇ ಇರಲಿಲ್ಲ! ಮತ್ತೆ ಎರಡೇ ಎರಡು ದಿನಗಳ ಒಳಗೆ ಅವನು ಅಪಾಯವೊಂದನ್ನು ಎದುರಿಸಿದ ದಿನವೂ ಮಂಗಳವಾರವೇ ಆಗಲಿತ್ತು.

ಸುಜಾತಳ ತೊಡೆಯ ಮೇಲೆ ಮಲಗಿದ ದೇವವ್ರತ "ಹೌದು ಚಿನ್ನ, ನನಗೂ ನಿಜವಾಗಿಯೂ ಈ ಮನೆಗೆ ಬಂದ ಮೇಲೆ ತುಂಬಾ ಆರಾಮವೆನಿಸುತ್ತದೆ. ಒಂದು ತರಹದ ಖುಶಿಯಿದೆ. ಏನಿದ್ದರೂ ನಿನ್ನಪ್ಪ ಭಾಳಾ ಯೋಚನೆ ಮಾಡಿ ನಿರ್ಧಾರಕ್ಕೆ ಬರ್‍ತಾರೆ. ಮೂರು ವರ್ಷಕ್ಕೆ ಲೀಸಿಗೆ ಅಂತ ಮನೆ ಹಾಕಿಸಿಕೊಂಡೇ ಬಿಟ್ಟರು. ನಾನು ಲೀಸಿಗೆ ಈ ಮನೆಯನ್ನು ಮಾಡುವ ಹಾಗೇ ಇರಲಿಲ್ಲ ಬಿಡು." ತಾನು ಇಷ್ಟು ಹೇಳಿದವನೇ ಅಪರಿಮಿತವಾದ ಪ್ರೀತಿಯೊಂದು ಉಕ್ಕಿಬಂದಂತೆ ಎದ್ದು ಕೂತು ಸುಜಾತಳ ಗಲ್ಲಕ್ಕೆ ಮುತ್ತೊಂದು ಕೊಟ್ಟ. ಸುಜಾತ ಅದೇ ರೀತಿಯಲ್ಲಿ "ಹೋಗ್ರಿ ನಿಮಗೆ ಹೊತ್ತು–ಗೊತ್ತು ಒಂದೂ ತಿಳಿಯೋಲ್ಲ, ಈ ಮಧ್ಯಾಹ್ನ " ಅಂದಳು. "ನೋಡು, ಬೆಳಕು ಮಧ್ಯಾಹ್ನ–ಹಗಲು, ರಾತ್ರಿ – ಈ ವ್ಯತ್ಯಾಸಗಳೆಲ್ಲಾ ಇರುವುದು ಕೆಲವರಿಗೆ, ನಮ್ಮಂಥವರಿಗಲ್ಲ. ಯಾಕೆಂದರೆ, ನಮಗೆ ಭಾನುವಾರ ಮಾತ್ರ ರಜಾ, ಉಳಿದ ದಿನ ರಜವೆಲ್ಲಿ? ಭಾನುವಾರವೂ ನೀನು ಹೀಗೆ ಮಾಡಿದರೆ ಹೇಗೆ? ಭಾನುವಾರ ಒಂದು ದಿನ ಮಜಾವಾಗಿರಬೇಕು, ಉಳಿದ ದಿನವಂತೂ ಮಜಾವಾಗಿರಲು ಅವಕಾಶವೇ ಇಲ್ಲ" ಎಂದವನೇ ದೇವವ್ರತ ಹೊರಗಡೆಯ ಬಾಗಿಲಿನ ಬೋಲ್ಟ್ ಹಾಕಿಕೊಂಡ. ಆಗ ಗಂಟೆ ಹನ್ನೆರಡು! ಭಾನುವಾರ! ಹನ್ನೆರಡು ಅನ್ನುವುದೇ ಹೊತ್ತಲ್ಲದ ಹೊತ್ತು.

ಕೆನ್ನೆಯ ಮೇಲೆ, ಕೊರಳ ಇಳಿಜಾರಿನಲ್ಲಿ, ಕಿಬ್ಬೊಟ್ಟೆಯ ಮೇಲೆ ತನ್ನ ಬಿಸಿಯುಸಿರಿನ ಮುತ್ತು ಕೊಟ್ಟ ದೇವವ್ರತ ನಿಧಾನವಾಗಿ ಮತ್ತು ಅಷ್ಟೇ ಲಯಬದ್ಧವಾಗಿ ಸುಜಾತಳ ಮೈಮೇಲೆ ಬಂದ. ನಿಧಾನಗತಿಯ ವಿಧಾನವೊಂದನ್ನು ದೇವವ್ರತ ಮೊದಲಬಾರಿಗೆ ಸುಜಾತಳ ಮೇಲೆ ಪ್ರಯೋಗಿಸಿದ. ಈ ನಿಧಾನವಾದ ತನ್ನ ತಂತಿಯ ಮೇಲಿನ ನಡಿಗೆಯನ್ನು ಪ್ರಾರಂಭಿಸಿದ. ಅವಸರಕ್ಕಿಂತ ನಿಧಾನವಾದ ಮತ್ತು ಲಯಬದ್ಧವಾದ ಚಟುವಟಿಕೆಯೇ ಬಹಳ ಮುಖ್ಯವಾದುದು ಎಂದು ಭಾವಿಸಿದ ದೇವವ್ರತ ಸುಜಾತಳ ಕೊರಳ ಇಳಿಜಾರಿಗೆ ಕೈಹಾಕಿದ ಮತ್ತು ಸುಜಾತ ಇನ್ನು ಯಾವುದನ್ನು ತಡೆಹಿಡಿಯಲು ಸಾಧ್ಯವಿಲ್ಲವೆಂದು ದೇವವ್ರತನ ಬೆನ್ನನ್ನು ಗಟ್ಟಿಯಾಗಿ ಹಿಡಿದಳು. ಸುಖದ ತುತ್ತ ತುದಿಯೇರಿದ ದೇವವ್ರತ ಮತ್ತು ಸುಜಾತ ಪರಸ್ಪರ ಮೈಮೇಲಿನ ಬೆವರ ಹನಿಗಳನ್ನು ಒಬ್ಬರಿಗೊಬ್ಬರು ಅಂಟಿಸಿಕೊಂಡರು!

ಸುಜಾತಗೆ ಮೊತ್ತ ಮೊದಲಬಾರಿಗೆ ಸುಖವೆಂದರೇನು ಅರ್ಥವಾಯಿತು. ಮದುವೆಯಾದ ಮೇಲೆ ಪ್ರತಿ ಬಾರಿಯೂ ಜೀವದ ಮೇಲೆ ಚಿರತೆಯಂತೆ ಎರಗುವ

ದೇವವ್ರತನ ಕ್ರಮ – ಈ ದಿನ ತನ್ನ ವರಸೆಯನ್ನು ಬದಲಾಯಿಸಿಕೊಂಡಿತ್ತು. ಆದರೆ ಇದು ಜರುಗಿದ್ದು ಭಾನುವಾರ ಮಧ್ಯಾಹ್ನ. ಸುಜಾತಳ ಕೆನ್ನೆಯಲ್ಲಿ ಸುಖದ ನೆರಳಿತ್ತು. ಕಣ್ಣಲ್ಲಿ ಒಲವಿನ ಧಾರೆಯನ್ನು ಅನುಭವಿಸಿದ ಖುಶಿಯಿತ್ತು. ಆದರೆ ಇನ್ನೆರಡು ದಿನಗಳಲ್ಲಿ ದೇವವ್ರತನ ಬಾಳಿನಲ್ಲಿ ಅನೂಹ್ಯವಾದ ಘಟನೆಯೊಂದು ನಡೆಯಲಿತ್ತು ಮತ್ತು ಸುಜಾತ ಎಂಬ ಗರತಿಯ ಕಣ್ಣಲ್ಲಿ ಸದಾ ಅಳುವಿನ ಧಾರೆಯೇ ಭೂಮಿಯ ಮೇಲೆ ಬೀಳಲಿತ್ತು ಮತ್ತು ಸುಜಾತ ಎಂಬ ಗರತಿಯ ಹೊತ್ತಲ್ಲದ ಹೊತ್ತಿನ ಮೈಥುನದ ಸಾಕ್ಷಿಯೊಂದು ರೂಪುಗೊಳ್ಳಲಿತ್ತು! ಮುಂದಿನ ಕೆಲವು ದಿನಗಳ ಭಯಾನಕವಾದ, ಜೀವವನ್ನೇ ಹಿಂಡಿ ಹಿಪ್ಪೆ ಮಾಡಿ ಬಿಸಾಕಲಿರುವ ಘಟನೆಗಳಿಗೆ ಮಧ್ಯಾಹ್ನದ ಮೈಥುನವೆಂಬ ಸಹಜಕ್ರಿಯೆಯೂ; ಅದರೊಂದಿಗೆ ಬಂದ ಉನ್ಮತ್ತ ಕ್ಷಣಗಳಿಗೂ, ಕಾಕತಾಳೀಯವಾದ ಸಂಬಂಧವೊಂದು ರೂಪುಗೊಂಡಿತು. ಆ ಹೊತ್ತಿನ ಅಪರಿಮಿತವಾದ ಉತ್ಸಾಹವೊಂದರಲ್ಲಿ ರೂಪುಗೊಂಡ ಮೈಥುನಕ್ಕೆ ಯಾವ ಶಾಸ್ತ್ರದ ಇಕ್ಕಟ್ಟುಗಳೂ ಇರಲಿಲ್ಲ.

ಆದರೆ ಮೂಲೆ ಮನೆ ಲಿಂಗಮೂರ್ತಿ ಸಾಹುಕಾರರ ಅಟ್ಟದ ಮೇಲಿನ ಪಂಚಾಂಗವೊಂದರ ಸರಿಯಾಗಿ ಹನ್ನೆರಡನೆಯ ಪುಟದಲ್ಲಿ ಮಾತ್ರ ಹೀಗೆಯೇ ಬರೆಯಲಾಗಿತ್ತು; "ಗಂಡ–ಹೆಂಡತಿಯರ ನಡುವೆ ಗರ್ಭದಾನಕ್ಕೆ ಶುಭ ಮುಹೂರ್ತವೆಂದರೆ ದಿವಾಘಳಿಗೆಗಳು. ಸೂರ್ಯ ಹುಟ್ಟುವ ಮೊದಲ ಎರಡನೆಯ ಜಾವದಲ್ಲಿ ಸತಿ–ಪತಿಯರು ಒಂದಾದರೆ ಆಗ ಹುಟ್ಟುವ ಮಗನು ತೇಜೋವಂತನಾಗುವನು. ಸ್ತ್ರೀಯ ರಜೋದರ್ಶನವಾದ ಅನಂತರದ ದಿನಗಳನ್ನು ಸರಿಯಾಗಿ ಲೆಕ್ಕವಿಡಿಗು ಸರಿ ಸಂಖ್ಯೆಯೋ ಬೆಸ ಸಂಖ್ಯೆಯೋ – ಎಂದು ದಿನಗಳನ್ನು ಲೆಕ್ಕವಿಡಿದು ಪರಿಶುದ್ಧ ಮನಸ್ಕರಾಗಿರಬೇಕು. ಪುತ್ರ ಸಂತಾನದ ಅಪೇಕ್ಷೆಯುಳ್ಳವರು ಸೂರ್ಯೋದಯಕ್ಕಿಂತ ಮೊದಲು ಈ ಕರ್ಮಗಳಿಗೆ ತೊಡಗಿದರೆ ಅವರ ಅಪೇಕ್ಷೆಯು ಈಡೇರುವುದು. ಆದರೆ, ಮಧ್ಯಾಹ್ನದ ಹೊತ್ತು ಸತಿ–ಪತಿಯರು ಒಂದಾದರೆ ಅದರಿಂದ ಸಂತಾನದ ಭಾಗ್ಯವುಂಟಾದರೂ, ಹುಟ್ಟುವ ಮಗುವಿನ ಪ್ರವೃತ್ತಿಯು ಸರಿಯಾಗಿರುವುದಿಲ್ಲ. ಹುಟ್ಟುವ ಮಗುವು ಹಟಮಾರಿಯಾಗಿಯೂ, ರಾಕ್ಷಸ ಗುಣವುಳ್ಳದ್ದಾಗಿಯೂ ಇರಬಲ್ಲುದು ಮತ್ತು ರಜೋಗುಣದ ಅಂಶವು ಹೆಚ್ಚಿರುವುದು. ಹಾಗೂ ಮುಸ್ಸಂಜೆಯ ಹೊತ್ತಿನಲ್ಲಿ ಗಂಡ–ಹೆಂಡಿರು ಕೂಡಿದರೆ ಅದರಿಂದ ಒದಗುವ ಪುತ್ರ ಅಥವಾ ಪುತ್ರಿಯ ಗುಣವು ತಮೋಗುಣದಿಂದ ಕೂಡಿರುವುದು ಮತ್ತು ಕಾಮ ಗುಣವು ಹೆಚ್ಚಿರುವುದು. ಆದುದರಿಂದ ಪುತ್ರ ಸಂತಾನದ ಅಪೇಕ್ಷೆಯುಳ್ಳ ದಂಪತಿಗಳು ಕೇವಲ ಮೈಥುನದ ಕಾರಣಕ್ಕಾಗಿ ಮಾತ್ರವೇ ಪರಸ್ಪರ ಸೇರುವುದು ಅಷ್ಟೊಂದು ಉಚಿತವೆಂದು ಅನಿಸುವುದಿಲ್ಲ"

"ಶುಭರಸ್ತು"

ಈ ಪುಟದಲ್ಲಿ ಬರೆದಿದ್ದನ್ನು ದೇವವ್ರತನಾಗಲೀ, ಸುಜಾತ ಆಗಲೀ ಓದುವುದು ಶಕ್ಯವಿರಲಿಲ್ಲ. ಪಂಚಾಂಗ ಹೇಳಿದ್ದು ಸರಿಯೋ ತಪ್ಪೋ? ಅಂತು ಭಾನುವಾರದ ನಟ್ಟನಡು ಮಧ್ಯಾಹ್ನದಲ್ಲಿ ದೇವವ್ರತ ಸುಜಾತ ಒಂದಾದದರು ಅಷ್ಟೆ; ಎಲ್ಲಾ ಮುಗಿದ ಮೇಲೆ ಎದ್ದ ಸುಜಾತ ನೈಟಿಯನ್ನು ಹಾಕಿಕೊಳ್ಳುವಾಗಲೇ – ದೇವವ್ರತ ತೀರಾ ಆಕಸ್ಮಿಕವೆಂಬಂತೆ ಹೇಳಿದ; "ಈವತ್ತು ನಿಜವಾಗಿಯೂ ಖುಶಿಯಾಯಿತು. ಈ ರೀತಿಯ ಆಟ ಇನ್ನೊಮ್ಮೆ ಸಿಗುತ್ತೋ–ಇಲ್ಲವೋ? ರಾಣಿಯವರ ಮೂಡ್ ಹೇಗಿದೆಯೋ?" ಆ ಮಾತು ನಿಜವಾಗಲು ದಿನಗಳು ಹೆಚ್ಚು ಬೇಕಿರಲಿಲ್ಲ!

ಚಾರು ಹೊಡೆದ ರಭಸಕ್ಕೆ ತುಟಿಯಂಚಲ್ಲಿ ಚೆಲ್ಲಿ ಬಂದ ರಕ್ತವನ್ನು ಕನ್ನಡಿ ನೋಡುತ್ತಲೇ ಒರೆಸಿಕೊಂಡಳು ಮೈಥಿಲಿ. ಮದುವೆಯಾದ ಅನಂತರ ಮೊಟ್ಟ ಮೊದಲು ತಿಂದ ಏಟು ಅದು. ಚಾರು ಹೊಡೆದು, ಬಡಿದು, ಹಿಂಸಿಸಿದರೂ ಅವರ ಬಗೆಗೆ ಕಿಂಚಿತ್ತೂ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿರಲಿಲ್ಲ. ಗಂಡ ಹಿಂಸಿಸಿದ ಎಂದುಕೊಂಡು ಸುಮ್ಮನಿದ್ದು ಬಿಡುತ್ತಿದ್ದಳು. ಆದರೆ ಈವತ್ತು ಅವನು ಕೆನ್ನೆಗೆ ಹೊಡೆಯಬೇಕಾದವನು ತಪ್ಪಿ ತುಟಿಗೆ ಹೊಡೆದದ್ದು ಯಾಕೋ ಅವಳಿಗೆ ಚಾರುವಿನ ಬಗೆಗೆ ಇದ್ದ ಸಣ್ಣ–ಪುಟ್ಟ ಪ್ರೀತಿಯೂ ಗೈರುಹಾಜರಿಯಾಗಲು ಕಾರಣವಾಯಿತು. ತುಟಿಯನ್ನು ಕನ್ನಡಿ ನೋಡಿಕೊಂಡು ಒರೆಸಿಕೊಂಡಳೆಂಬುದೇನೋ ನಿಜವೇ. ಆದರೆ, ಕನ್ನಡಿಯನ್ನು ನೋಡುವಾಗ ಇದ್ದಕ್ಕಿದ್ದಂತೆ ಅವಳಿಗೆ ದೇವವ್ರತ ಗಾರ್ಡನಿನ ಕಲ್ಲ ಬೆಂಚಿನ ಮೇಲೆ ಕುಳಿತುಕೊಂಡು ಕೈಯ ಮೇಲೆ ಕೈಯನ್ನು ಇರಿಸಿಕೊಂಡು ಹೇಳಿದ ಮಾತು ನೆನಪಿಗೆ ಬಂತು. "ಮೈಥಿಲಿಯವರೇ ನಿಜವಾಗಿಯೂ ನೀವೆಷ್ಟು ಚೆನ್ನಾಗಿದ್ದೀರಿ. ಮಕ್ಕಳಾದರೂ ನಿಮ್ಮ ಸೌಂದರ್ಯ ಕುಗ್ಗದು." ತಟ್ಟನೇ ಬಂದು ಕನ್ನಡಿಯೆದುರು ಆ ಮಾತು ಬಂದು ನಿಂತಹಾಗೆ ಅನಿಸಿತು. ದೇವವ್ರತ ನಿಮ್ಮ ಸೌಂದರ್ಯ ಕುಗ್ಗದು ಎಂದು ಯಾಕೆ ಹೇಳಿದ? ಮತ್ತು ಅವನ ಬಗೆಗೆ ಇದ್ದ ಸಣ್ಣ–ಪುಟ್ಟ ಪ್ರೀತಿ ಸಣ್ಣಗೆ ಚಿಗುರೊಡೆದ ಆಸೆ – ಎಲ್ಲವನ್ನು ಯಾಕೆ ತುಳಿದು ಹೊರಗೆ ಬಂದೆ ಎಂಬುದೇ ಅವಳಿಗಿನ್ನೂ ಅರ್ಥವಾಗಿಲ್ಲ. ದೇವವ್ರತನೊಂದಿಗೆ ಮುಂದುವರಿಯಬಹುದಿತ್ತು, ಮುಂದುವರಿದಿಲ್ಲ. ದೇವವ್ರತ ಯಾಕೆ ಹಾಗೆ ಹೇಳಿದ; ನಿಮ್ಮ ಸೌಂದರ್ಯ ಮಾಸಲಾರದು. ಈ ಮಾತಿನಲ್ಲಿ ನನ್ನನ್ನು ಹೊಗಳುವ ಉದ್ದೇಶ ಮಾತ್ರವೇ ಇತ್ತೆ ಅಥವಾ ಬೇರೆ ಏನಾದರೂ ಉದ್ದೇಶಗಳಿದ್ದವೆ? ಹೆಣ್ಣು ಜನ್ಮವೆಂದರೆ ಅದು ಮುಟ್ಟು–ಋತುಸ್ರಾವ; ಹೆಣ್ಣೆಂದರೆ ಅದು ಗರ್ಭಕೋಶ; ಹೆಣ್ಣೆಂದರೆ ಅದು ಜೀವದಾಯಕವಾದ ಸಂಕಟ. ಹೀಗೆ ಅಸಂಖ್ಯ ಪ್ರಶ್ನೆಗಳಾಚೆಯೂ ಹೆಣ್ಣುತನವೊಂದಿದೆ ಎಂದುಕೊಂಡಳು ಮೈಥಿಲಿ. ಮೈಥಿಲಿಗೆ ಈಗ ದೇವವ್ರತ ನೆನಪಾದ. ಈ ಚಾರು ಎಂಬಾತನ ಬಗ್ಗೆ ಇದ್ದ ಸಣ್ಣಪುಟ್ಟ ಪ್ರೀತಿಯೂ ತುಟಿಯಿಂದ ಬಿದ್ದ ರಕ್ತದ ಹನಿಯನ್ನು ಒರಸುವ ನೆಪದಲ್ಲಿ ಒರಸಿಹಾಕಬೇಕೆಂದುಕೊಂಡಳು. ಈ ಚಾರುವಿಗೆ ಅಂಟಿಬಿದ್ದುಕೊಂಡು ಎಷ್ಟು ದಿನ

ಏಗಲಿ? ಜೀವನದ ಅದರಾಚೆಗೆ ಇರುವ ಅಪರಿಮಿತ ವಾಂಛೆಗಳ ನಿಗಿನಿಗಿ ಕೆಂಡಗಳನ್ನು ಕಿಬ್ಬೊಟ್ಟೆಯಲ್ಲಿ ಕಟ್ಟಿಕೊಂಡವಳಿಗೆ ಚಾರು ಯಾವ ಲೆಕ್ಕ? ಮೈಥಿಲಿಯು ಆಲೋಚನೆಯ ಇಬ್ಬಂದಿತನದಲ್ಲಿ ಸಿಲುಕಿಕೊಂಡಳು. ಕನ್ನಡಿಯೆದುರು ನಿಂತುಕೊಂಡು ತುಟಿಯಲ್ಲಿನ ರಕ್ತವನ್ನು ಒರೆಸಿಕೊಳ್ಳುತ್ತಿರುವವಳಿಗೆ ದೇವವ್ರತನ ಹಸಿರಾದ ನೆನಪು! ಒಡಲು ತುಂಬುವಷ್ಟು ತವಕ. ಆದರೆ, ಅದರ ಜೊತೆಗೆ ದೇವವ್ರತನ ಬಗ್ಗೆ ಹೇವರಿಕೆ ಮತ್ತು ಅಸಹ್ಯ ತಡೆಯಲಾಗದೆ ಮತ್ತೆ ಬಚ್ಚಲು ಮನೆಗೆ ಹೋಗಿ ಉಗಿದು ಬಂದಳು. ಅದೇ ಸಮಯಕ್ಕೆ ಸರಿಯಾಗಿಯೇ ಅವಳ ಮನಸ್ಸಿನಲ್ಲಿ ಉಂಟಾದ ಹೇವರಿಕೆಯ ರೂಪವೆಂಬಂತೆ – ಹೊರಗಡೆಯಿಂದ 'ಕವಳ ಹಾಕಿ ತಾಯೀ' ಎಂದು ಭಿಕ್ಷುಕಿಯೊಬ್ಬಳು ಹೇಳುವುದು ಕೇಳಿಸಿತು. ಭಿಕ್ಷೆಗೆ ನಿಂತವಳಿಗೆ ಭಿಕ್ಷೆ ಹಾಕುವ ಯಾವ ತಾಳ್ಮೆಯೂ ಮೈಥಿಲಿಗೆ ಉಳಿದಿರಲಿಲ್ಲ. 'ಮುಂದಕ್ಕೆ ಹೋಗಮ್ಮಾ' ಎಂದು ಒಳಗಿನಿಂದ ಮೈಥಿಲಿಯು ಹೇಳಿದ್ದಕ್ಕೂ, ಭಿಕ್ಷೆ ನಿಂತವಳು ತೆಲುಗಿನಲ್ಲಿ ಅವಳನ್ನು ಏನೋ ಬೈಯುತ್ತಾ ಹೋಗಿರುವುದಕ್ಕೂ ಸರಿಯಾಯಿತು.

*

ಭಿಕ್ಷುಕಿಯು ಮನೆ ಬಾಗಿಲಲ್ಲಿ ಭಿಕ್ಷೆ ಕೇಳಿದ ಹೊತ್ತಿನಲ್ಲಿಯೇ ಚಾರು ರೇಖಾ ಪಿಂಟೋಳ ಮನೆಯ ಎದುರುಗಡೆ ತನ್ನ ಸ್ಕೂಟರ್ ನಿಲ್ಲಿಸಿ ಸ್ಟ್ಯಾಂಡ್ ಹಾಕುತ್ತಿದ್ದ ಮತ್ತು ಕಿಟಕಿಯಲ್ಲಿಯೇ ಚಾರು ಬಂದು ಸ್ಕೂಟರ್ ನಿಲ್ಲಿಸಿದ್ದನ್ನು ರೇಖಾ ಪಿಂಟೋ ನೋಡಿದಳು. ಏಕಾ ಏಕಿಯಾಗಿಯೇ ಈ ಮನೆಯ ಬಾಗಿಲಿಗೆ ಬಂದು ಸ್ಕೂಟರ್ ನಿಲ್ಲಿಸಿದವನನ್ನು ಹೇಗೆ ಸ್ವಾಗತಿಸಬೇಕೆಂದು ತಿಳಿಯದೆ, ಬಾಗಿಲು ತೆರೆದು ರೇಖಾ ಪಿಂಟೋ "ಒಳಗೆ ಬನ್ನಿ ಸಾರ್" ಅಂದಳು. ಚಾರು ರೇಖಾಪಿಂಟೋಳ ಮನೆಯೊಳಗೆ ಕಾಲಿಡುವಾಗಲೇ ಒಳಗಿನಿಂದ ಜೆಸಿಂತಾ ಬಾಯಿ ಬಂದಳು. ಚಾರು "ನಮಸ್ತೆ ಅಮ್ಮಾ" ಎಂದು ಸಭ್ಯ ರೀತಿಯಲ್ಲಿ ಕೈಮುಗಿದ. ಅವರು ಹೇಳುವ ಮೊದಲೇ ಹಳೆಯ ಕಾಲದ ಮರದ ಚೆಯರಿನಲ್ಲಿ ಕೂತ. "ನಮ್ಮದು ಸಣ್ಣ ಮನೆ" ಅಂದಳು ರೇಖಾ ಪಿಂಟೋ – ಯಾವುದೋ ಒಂದು ರೀತಿಯ ಸಂಕೋಚಕ್ಕೆ ಗುರಿಯಾದಂತೆ. ಜೆಸಿಂತಾ ಬಾಯಿ ಬಂದವನ ಪರಿಚಯವಾಗದೇ ನಿಂತಿದ್ದಳು. ರೇಖಾ ಪಿಂಟೋ "ಇವರೇ ಅಮ್ಮಾ, ಚಾರು ಸಾಹೇಬ್ರು ಅಂದ್ರೆ, ತುಂಬಾ ಒಳ್ಳೆಯವರು" ಎನ್ನುತ್ತಲೇ ರೇಖಾ ಪಿಂಟೋ "ಅಮ್ಮಾ ಶರಬತ್ತು ಮಾಡ್ತಿಯಾ?" ಅಂದಳು. ನಾಳೆ ಭೇಟಿಯಾಗೋಣ ಎಂದು ಹೇಳಿದವನು –ಇಂದು ಈ ಭಾನುವಾರದ ಸಂಜೆಯ ಹೊತ್ತಿಗೆ ಮನೆಗೆ ಬಂದಿದ್ದು ನಿಜವಾಗಿಯೂ ರೇಖಾಗೆ ಆಶ್ಚರ್ಯವಾಯಿತು!

ಚದುರಂಗದ ಆಟ ತಯಾರಾಗಿದೆ, ಇನ್ನೊಂದು ಹೆಜ್ಜೆ ಮುಂದಡಿಯಿಡಬೇಕು. ಮುಂದಡಿಯಿಡಬೇಕೆಂದರೆ ಈಗ ರೇಖಾ ಪಿಂಟೋ ಸರಿ!

ಆಟದ ತುದಿ-ಮೊದಲು-ಕೊನೆಯ ಕಂತು ಎಂಬುದು ಇಲ್ಲವೇ? ಅದು ಮುಂದುವರಿಯುತ್ತಲೇ ಇರುತ್ತದೆ. ಈ ಆಟದಲ್ಲಿ ರೇಖಾಪಿಂಟೋ ಎಲ್ಲಿ ನಿಲ್ಲುತ್ತಾಳೆ? ಅವಳನ್ನು ಎಲ್ಲಿ ನಿಲ್ಲಿಸಬೇಕು. ಈ ಲೆಕ್ಕಾಚಾರಕ್ಕೆ ಚಾರು ತೊಡಗಿದ. ಜೆಸಿಂತಾ ಬಾಯಿ ಬಂದು ಲಿಂಬೆ ಶರಬತ್ತನ್ನು ಕೊಡುವ ತನಕವೂ!

ಲಿಂಬೆ ಶರಬತ್ತನ್ನು ಕೊಟ್ಟ ಜೆಸಿಂತಾ ಬಾಯಿ, ಮಾರ್ಕೆಟಿಗೆ ಹೋಗಿ ಬರುತ್ತೇನೆ ಅಂದರು. ಯಾಕೆಂದರೆ ರೇಖಾಗೆ ಚಾರುವೆಂದರೆ ಅಭಿಮಾನ. ಅವಳ ಸಮಸ್ಯೆಯನ್ನು ಅವಳೇ ಬಿಚ್ಚಿಡಲಿ, ಮಧ್ಯೆ ನಾನ್ಯಾಕೆ? ಇದು ಜೆಸಿಂತಾ ಬಾಯಿಯ ಆಲೋಚನೆ. ಇಷ್ಟು ಹೊತ್ತು ನಿಂತೇ ಇದ್ದ ರೇಖಾ ಪಿಂಟೋ ಗೋಡೆಗೊರಗಿ ಕೂತಳು ಮತ್ತು ಇಬ್ಬರ ನಡುವೆ ಮೌನವಿತ್ತು. ಮೌನ ಮುರಿದದ್ದು ಜೆಸಿಂತಾ ಬಾಯಿ ಮನೆಯಿಂದ ಹೊರಗಡೆಗೆ ಹೋದ ಮೇಲೆ ಮಾತ್ರ! ರೇಖಾ ಅಳುತ್ತಲೇ ಕತೆಯನ್ನು ಹೇಳಿ ಮುಗಿಸಿದ ಹೊತ್ತು-ಮುಸ್ಸಂಜೆ. ಅದು ಕತ್ತಲೂ ಅಲ್ಲ, ಬೆಳಕೂ ಅಲ್ಲ! ರೇಖಾ ಹೇಳಿ ಮುಗಿಸುವ ತನಕ ಕಿವಿಯಾನಿಸಿಕೊಂಡು ಕೇಳಿದ ಚಾರು ಅವಳ ಮಾತು, ಅಳು ಎಲ್ಲಾ ಮುಗಿದ ಮೇಲೆ ಹೇಳಿದ "ರೇಖಾ, ನೀನು ಡೈವೋರ್ಸ್ ಕೊಡುವುದು ಒಂದೇ ದಾರಿ. ಅದನ್ನು ಮಾಡಬಹುದು. ನನಗೆ ಗೊತ್ತಿರುವ ಲಾಯರ್‌ಗೆ ಅದನ್ನು ಹೇಳ್ತೇನೆ. ಈ ರೀತಿಯ ಹಿಂಸೆಯನ್ನು ಅನುಭವಿಸಿಕೊಂಡು ಯಾಕೆ ಅಲ್ಲಿರ್ತೀಯಾ? ನಿನ್ನ ಕೆಲಸದ ಬಗ್ಗೆ ಬೇರೆ ಯಾವುದಾದರೂ ವ್ಯವಸ್ಥೆ ಮಾಡ್ತೇನೆ. ಅದರ ಬಗ್ಗೆ ಒಂಚೂರೂ ಯೋಚನೆ ಬೇಡ, ಅದರ ಜವಾಬ್ದಾರಿ ನನ್ನದು, ನೀನು ನೆಮ್ಮದಿಯಿಂದ ಇದ್ದುಬಿಡು." ಹೀಗೆ ಹೇಳಿದವನೇ ಎದ್ದು ರೇಖಾಳ ತಲೆಯನ್ನು ಸಾಂತ್ವನ ಹೇಳುವ ರೀತಿಯಲ್ಲೇ ಸವರಿದ. ಅವನು ಅವಳ ತಲೆಯನ್ನು ಸವರುವಾಗ ರೇಖಾಪಿಂಟೋಳ ಕಣ್ಣಲ್ಲಿ ಮತ್ತೊಮ್ಮೆ ನೀರು ಉಕ್ಕಿಬಂತು ಮತ್ತು ಅವಳು ಕಣ್ಣೀರನ್ನು ಒರೆಸಲೆಂದೇ ನೈಟಿಯ ಮೇಲೆ ಹೊದ್ದುಕೊಂಡ ಟವೆಲನ್ನು ಕಣ್ಣು ಮೂಗಿಗೆ ಒತ್ತಿಕೊಂಡಳು. ಆಗಲೇ ಬಾಗಿಲಲ್ಲಿ ಕಾಣಿಸಿದವಳು ಜೆಸಿಂತಾ ಬಾಯಿ. "ಸಾಹೇಬ್ರೆ, ಹೇಗಾದ್ರೂ ಇವಳಿಗೊಂದು ಜೀವನೋಪಾಯವನ್ನು ಕಲ್ಪಿಸಿ, ಹೇಗೋ ನಿಮ್ಮ ಹೆಸ್ರು ಹೇಳಿಕೊಂಡು ಬದುಕುತ್ತಾಳೆ, ನಾನು ಬೇಡ ಅಂದ್ರೆ ಕೇಳಿಲ್ಲ. ಅದೇ ಹುಡುಗನ್ನ ಮದುವೆಯಾಗ್ತೇನೆ ಅಂದ್ಲು. ಈಗ ನೋಡಿ ಇವಳ ಕತೆ" – ಜೆಸಿಂತಾ ಬಾಯಿಯ ಕಣ್ಣಲ್ಲೂ ನೀರು ಬಂತು. ನೀವೇನೂ ಗಾಬರಿಯಾಗಬೇಡಿ ಅಂದ ಚಾರು ಹೊರಟ. ಯಾಕೋ ರೇಖಾಳ ಕಣ್ಣಲ್ಲಿ ಸಣ್ಣ ಬೆಳಕಿದೆಯೆಂದು ಅವನಿಗೆ ಅನಿಸತೊಡಗಿತು! ಅವಸರಿಸಿ ರೇಖಾ ಕೆಲಸಕ್ಕೆ ರಾಜೀನಾಮೆ ಕೊಡಬಾರದಿತ್ತು!

ಮಂಗಳವಾರದ ಬೆಳಗು ಮಾಮೂಲಿಯಂತೆಯೇ ರಂಗೋಲಿ ಬಿಡುವವರು ಮನೆಯೆದುರು ರಂಗೋಲಿಯ ಗೆರೆಯನ್ನು ಎಳೆಯತೊಡಗಿದರು. ಪತ್ರಿಕೆಯನ್ನು ಹಂಚುವ ಹುಡುಗರು ಮುಂಜಾವದ ನಿರ್ಜನ ಬೀದಿಯಲ್ಲಿ ಸೈಕಲು ತುಳಿಯುತ್ತಾ

ಹೊರಟರು. ಹಾಲಿನವರು ಬಂದು ಕೆಲವರ ಮನೆಯ ಬಾಗಿಲು ತಟ್ಟಲು ಪ್ರಾರಂಭಿಸಿದರು. ರಾತ್ರಿಯಲ್ಲಿ ತಡವಾಗಿ ಹಾಸುಗೆಗೆ ಬಂದ ಗಂಡಸರು ಇನ್ನೂ ಹಾಸುಗೆಯಲ್ಲಿ ಹೊರಳಾಡುತ್ತಿದ್ದರು. ಮತ್ತು ಎಲ್ಲರ ದೃಷ್ಟಿಯಲ್ಲಿ ಅಂದು ಪ್ರತಿದಿನದಂತೆ ಒಂದು ದಿನವಷ್ಟೆ. ಮೂವರನ್ನು ಹೊರತುಪಡಿಸಿ –ಮೈಥಿಲಿ, ದೇವವ್ರತ ಮತ್ತು ರೇಖಾ ಪಿಂಟೋ. ರೇಖಾ ಪಿಂಟೋ ಮತ್ತೆ ಈ ದಿನ ಚಾರುವನ್ನು ಭೇಟಿಯಾಗಲೇಬೇಕಿತ್ತು. ದೇವವ್ರತ ಈವತ್ತು ಆಫೀಸಿನಲ್ಲಿ ಹೊಸದೊಂದು ಜಾಗದಲ್ಲಿ ಕೂರಬೇಕಿತ್ತು. ಮೂವರೂ ಮಂಗಳವಾರದ ಬೆಳಗನ್ನು ಕಾಯುತ್ತಲೇ ಸೋಮವಾರದ ರಾತ್ರಿಯನ್ನು ಕಾಯುತ್ತಿದ್ದರು ಮತ್ತು ರಾತ್ರಿ ಮಲಗಿದ ಮೇಲೂ ಮರುದಿನದ ಕನಸಿಗಾಗಿ ಹಂಬಲಿಸುತ್ತಾ ಕನವರಿಸುತ್ತಿದ್ದರು. ಈ ಕನವರಿಕೆಗಳೇ ಅವರಿಗೆ ಸೋಮವಾರದ ರಾತ್ರಿಯೆಂಬುದನ್ನು ದಾಟಲು ಸಹಾಯ ಮಾಡಿತೆಂದು ಅವರೇ ಭಾವಿಸಿಕೊಂಡರು. ಈ ಗದ್ದಲದಲ್ಲಿಯೂ ನಿಶ್ಚಿಂತೆಯಿಂದ ಸೋಮವಾರದ ರಾತ್ರಿಯನ್ನು ಯಾವ ತಳಮಳವೂ ಇಲ್ಲದೇ ಮೈಥಿಲಿ ಕಳೆದಿದ್ದಳು. ಬೆಡ್‌ರೂಮಿನಲ್ಲಿ ದಪ್ಪನೆಯ ಹಾಸುಗೆಯ ಮೇಲೆ ಹೊರಳಾಡಿಕೊಂಡು ನಿಟ್ಟುಸಿರು ಬಿಡುತ್ತಿದ್ದಳು. ಸೋಮವಾರ ಕೋಮುಗಲಭೆಯ ಕರ್ಫ್ಯೂ ಜಾರಿಗೆ ಬಾರದೇ ಇದ್ದಿದ್ದರೆ ಖಂಡಿತಕ್ಕೂ ಮೈಥಿಲಿಯು ಚಾರುವಿನ ಏಟು ತಿನ್ನುತ್ತಿರಲಿಲ್ಲ. ಇಬ್ಬರೂ ಪರಸ್ಪರ ಬೇರೆ ಬೇರೆ ರೀತಿಯ ನಕ್ಷೆಯ ರೂಪುರೇಷೆಯೊಂದನ್ನು ಸಿದ್ಧಪಡಿಸಿಬೇಕಾದ ಅಗತ್ಯವಿರಲಿಲ್ಲ. ಚಾರುವಿನಿಂದ ಏಟು ತಿಂದ ಮೈಥಿಲಿಯು ಸಂಜೆಯ ತನಕವೂ ಮನೆಯ ಬಾಗಿಲು ಸಮೇತ ಯಾವುದನ್ನೂ ತೆರೆದಿರಲಿಲ್ಲ. ಮುಚ್ಚಿದ ಕಿಟಕಿ; ಮುಚ್ಚಿರುವ ಬಾಗಿಲು – ಅದರೊಳಗಡೆ ಮೈಥಿಲಿ, ಮನೆತುಂಬಾ ಬಿದ್ದುಕೊಂಡಿರುವ ಮೌನದ ಹೊರತು ಮತ್ತೇನೂ ಇರಲಿಲ್ಲ. ಚಾರು ಹೊಡೆದನೆಂಬ ಕಾರಣಕ್ಕೆ ಅಲ್ಲವಾದರೂ, ಇಡಿಯ ಮನೆ ತುಂಬಾ ಬಿದ್ದಿರುವ ಮೌನವನ್ನು ಝಾಡಿಸಿ ಒದೆಯಲು ಅವಳ ಬಳಿಯಲ್ಲಿ ಟಿ.ವಿ. ಒಂದರ ಹೊರತು ಮತ್ತೇನೂ ಇರಲಿಲ್ಲ. ಚಾರು ಮನೆಯಿಂದ ಹೊರಗಡೆ ಅಡಿಯಿಟ್ಟಾಗ ಬಾಗಿಲು ಹಾಕಿಕೊಂಡವಳು ಕೊಂಚ ಹೊತ್ತು ಕನ್ನಡಿ ನೋಡಿದವಳು ಮತ್ತು ಬಚ್ಚಲು ಮನೆಯಲ್ಲಿ ಕ್ಯಾಕರಿಸಿ ಉಗಿದವಳು – ಮತ್ತೆ ಬಂದು ಹಾಸಿಗೆಯ ಮೇಲೆ ಹೊರಳಾಡಿದಳು. ಹಾಗೆಯೇ ಹೊರಳಾಡುತ್ತಾ ಇದ್ದವಳು ಮಧ್ಯಾಹ್ನ ಏನೋ ತಿಂದವಳು ಮತ್ತೆ ಗಡದ್ದಾಗಿ ನಿದ್ದೆ ಹೊಡೆದಳು. ಸೋಮವಾರದ ಮಧ್ಯಾಹ್ನ ಗಡದ್ದಾಗಿ ನಿದ್ದೆ ಹೊಡೆಯುತ್ತಿರುವಾಗಲೇ ದೇವವ್ರತನ ಕನಸು ಬಿದ್ದಿರುವುದು; ಅದೇ ಹೊತ್ತಿಗೆ ದೇವವ್ರತನು ಸುಜಾತಳ ಮೈಯ ಸುಖ ಭೋಜನವನ್ನು ಅನುಭವಿಸಿದವನು ಹಾಸುಗೆಯಲ್ಲಿ ಹಾಗೆಯೇ ಉರುಳಿಕೊಂಡಿದ್ದ. ಅವನಿಗೂ ಅಮಲೇರಿಸುವ ನಿದ್ದೆ. ಆದರೆ ಅವನ ನಿದ್ದೆಯಲ್ಲಿ ಮೈಥಿಲಿಯಿರಲಿಲ್ಲ. ತಾನೇ ಕೈಹಿಡಿದು, ಮದುವೆಯಾದ ಹೆಂಡತಿ ಸುಜಾತಳನ್ನು ಒಂದು ಸೆಂಟಿಮೀಟರು ಬಿಡದೆ ಅನುಭವಿಸಿದವನಿಗೆ

ಮಧ್ಯಾಹ್ನದ ನಿದ್ದೆಯಲ್ಲಿ ಮೈಥಿಲಿ ಎಲ್ಲಿಂದ ಬರಬೇಕು? ಸೋಮವಾರದ ರಾತ್ರಿಯ ನಿದ್ದೆಯು ಸುಳಿಯುವ ಲಕ್ಷಣವಿರಲಿಲ್ಲ ಮೈಥಿಲಿಗೆ ಮತ್ತು ದೇವವ್ರತರಿಗೆ. ಆದರೆ ಅದು ಮಾತ್ರ ಬೇರೆ ಬೇರೆ ಮನೆಯಲ್ಲಿ.

ಸೋಮವಾರ ಮಧ್ಯಾಹ್ನದ ಹೊತ್ತಿಗೆ ಮೈಥಿಲಿಯ ತುಟಿಗೆ ರಪ್ಪನೇ ಹೊಡೆದು ಹೊರಗಡೆ ಹೋದ ಚಾರು ಮತ್ತೆ ಹಿಂದಿರುಗಿದ್ದು ರಾತ್ರಿಯೇ – ಅದೂ ಒಂಬತ್ತೂವರೆಯ ಮೇಲೆ. ಅವನು ಬಂದಾಗ ಬಾಗಿಲು ತೆರೆದು ಮತ್ತೆ ಹೋಗಿ ಬೆಡ್ ರೂಮಿನಲ್ಲಿ ಹೊರಳಾಡಿದ ಮೈಥಿಲಿ ಚಾರುಗೆ ಊಟವಾಯಿತೇ– ಇಲ್ಲವೇ ಎಂಬುದನ್ನು ಕೂಡಾ ಕೇಳಲಿಲ್ಲ. ಅವಳು ಕೇಳಲಿ ಎಂದು ಚಾರುವೂ ಹಂಬಲಿಸಲಿಲ್ಲ. ಬಂದವನೇ ಸ್ನಾನ ಮಾಡಿ, ಜಿನ್ ಏರಿಸಿಕೊಂಡು, ವರಾಂಡದಲ್ಲಿ ಚಾಪೆ ಹಾಸಿಕೊಂಡು ಮಲಗಿದ್ದ. ಅವನದು ನಿಶ್ಚಿಂತೆ. ಯಾವ ರೀತಿಯ ಆತಂಕವೂ ಇಲ್ಲದ ನಿದ್ದೆ. ಬೇಕಿದ್ದರೆ ಬಂದು ಬೆಡ್ ರೂಮಿನಲ್ಲಿ ಬಿದ್ದುಕೊಳ್ಳಲಿ, ಇಲ್ಲವಾದರೆ ಹೊರಗಡೆ ಹೊರಳಾಡುತ್ತಲೇ ಬೆಳಗಾಗವುದನ್ನು ಕಾಯಲಿ, ನನಗೇನಾಗಬೇಕಾಗಿದೆಯೆಂಬಂತೆ ಮೈಥಿಲಿಯು ಬೆಡ್‌ರೂಮಿನಲ್ಲಿಯೇ ಮಲಗಿದಳು. ಗಂಡ–ಹೆಂಡಿರು ಮನೆಯೊಳಗಿದ್ದೂ ಅಂತರವೊಂದನ್ನು ಅವರಾಗಿಯೇ ರೂಪಿಸಿಕೊಂಡರು. ಬಿಗುಮಾನದ ಮೈಥಿಲಿಗೆ ಪುನಃ ಕಿವಿಯಲ್ಲಿ ಮೊಳಗಿದ್ದು ದೇವವ್ರತನ ಮಾತು. ಅವನೇ ನನ್ನ ದೇಹವನ್ನು ಇಷ್ಟಪಡುತ್ತಾನೆ ಎಂದಾದ ಮೇಲೆ – ಚಾರುವಿನದೇನು ಲೆಕ್ಕ? ತೆವಲಿದ್ದರೆ ಬಂದು ಹಾಸುಗೆಯಲ್ಲಿ ಮಲಗಲಿ. ಹೀಗೆ ಭಾವಿಸಿಕೊಂಡ ಮೈಥಿಲಿಯದು ಮರುದಿನ ಬೆಳಗಾಗುವುದರ ಬಗೆಗಿನ ಚಿಂತೆ.

ಮಂಗಳವಾರ ಬೆಳಗಾದರೆ ಸಾಕು ಎಂದು ಮೈಥಿಲಿಯು ಈ ಕಾರಣಕ್ಕೆ ಯೋಚಿಸಿದಳು. ಯೋಚಿಸುತ್ತಲೇ ಮಲಗಿದವಳಿಗೆ ಮಂಗಳವಾರದ ಬೆಳಗು ಅವಳ ಹತ್ತಿರ ಬರುವುದು ತಡವಾಯಿತು. ಸರಿಯಾಗಿ ಆರು ಗಂಟೆಗೆ ಎದ್ದ ಚಾರು ಮಾತ್ರ ಒಂದು ಕಪ್ ಟೀ ಕುಡಿದು ಪೇಪರಿನ ಹುಡುಗನಿಗಾಗಿ ಕಾದ. ಮೈಥಿಲಿಯಿನ್ನೂ ಎದ್ದಿರಲಿಲ್ಲ. "ಜೀವನದಲ್ಲಿ ಜುಗುಪ್ಸೆ ತಳೆದವನೂ ನೀರಲ್ಲಿ ಬಿದ್ದ ಮೇಲೆ ಈಜುವ ಪ್ರಯತ್ನ ಮಾಡುತ್ತಾನೆ. ಅದುವೇ ಜೀವನದ ಗುಟ್ಟು. ಅದಕ್ಕಾಗಿಯೇ ಈಜಬೇಕು ಈಜಿ ಜೈಸಬೇಕು" ಎಂದು ರೇಡಿಯೋದ ರಶ್ಮಿಯಲ್ಲಿ ಬೆಳಗಿನ ತಿಂಡಿಯೂ ಖೋತಾ ಆಗಬಹುದು ಎಂದನ್ನಿಸಿ ಸ್ನಾನದ ಯೋಚನೆಯನ್ನು ಮಾಡಿದ. ಬೆಡ್‌ರೂಮಿನಲ್ಲಿ ಮೈಥಿಲಿಯು ಜೋರಾಗಿ ಆಕಳಿಸಿದ್ದು ಚಾರುಗೆ ಕೇಳಿಸಿತು. ಇನ್ನು ಕೂರುವುದು ಪ್ರಯೋಜನವಿಲ್ಲವೆಂದು ಅನ್ನಿಸಿ ಅವನು ಸ್ನಾನಕ್ಕೆ ಹೊರಟ.

ಅದೇ ವೇಳೆಯಲ್ಲಿಯೇ ಸುಜಾತ; "ಏಳ್ರೀ ಅದೇನು ಒಳ್ಳೇ ಸೋಂಬೇರಿಯ ಹಂಗೆ ಬಿದ್ದುಕೊಂಡಿದ್ದೀರಿ. ರಾಯರು ಈವತ್ತು ಆಫೀಸಿಗೆ ಹೋಗುವ ಯೋಚನೆಯಲ್ಲಿ ಇದ್ದೀರಾ? ಅಥ್ವಾ ಈವತ್ತು ರಜಾನಾ?" ಎಂದು ದೇವವ್ರತನ ಪಕ್ಕದಲ್ಲಿ

ಕುಳಿತುಕೊಂಡು ಅವನ ನಯವಾದ ಬೆನ್ನಿನ ಮೇಲೆ ಕೈಯಾಡಿಸಿದಳು. ಹತ್ತಿರ ಬಾ ಎಂದ್ರೆ ದೂರ ಸರಿಯುವ ಸುಜಾತ ಈವತ್ತು ಅವಳಾಗಿಯೇ ಕವುಚಿ ಮಲಗಿದ ತನ್ನ ಬೆನ್ನನ್ನು ನಿಧಾನವಾಗಿ ಸವರುವುದನ್ನು ನೋಡಿ ಆಶ್ಚರ್ಯಪಟ್ಟ ಮತ್ತು 'ಈಗ ಬರ್ತೀನಿ ಒಂಚೂರು ಬಿಸಿ ಬಿಸಿ ಕಾಫೀ ಮಾಡೇ' ಎಂದು ಸುಜಾತಳಿಗೆ ಗೋಗರೆದ.

ಸರಿಸುಮಾರು ಇದೇ ಸಮಯಕ್ಕೆ ಸರಿಯಾಗಿ ರೇಖಾ ಪಿಂಟೋ ತಣ್ಣೀರಲ್ಲಿ ಸ್ನಾನ ಮಾಡುತ್ತಿದ್ದಳು ಮತ್ತು ಸ್ನಾನ ಮಾಡುವಾಗಲೂ ಚಾರುವನ್ನು ಕಂಡು ಕೆಲಸದ ಪ್ರಯತ್ನ ಮುಂದುವರಿಸಬೇಕೆಂದುಕೊಂಡಳು.

ಆದರೆ, ಎಲ್ಲರಿಗೂ ಅದು ಮಂಗಳವಾರದ ದಿನವೇ ಆಗಿತ್ತು ಮತ್ತು "ಕೋಮು ಗಲಭೆಯಿಂದ ನಗರ ಮತ್ತೆ ಪ್ರಶಾಂತ ಸ್ಥಿತಿಗೆ" ಎಂದು ಆಕಾಶವಾಣಿಯ ಪ್ರದೇಶ ಸಮಾಚಾರವು ಬಿತ್ತರಿಸಲು ತೊಡಗಿತ್ತು. ಬೇಡವೆಂದರೂ, ಬೇಕೆಂದರೂ ಮಂಗಳವಾರ ಬರಲೇಬೇಕಾಗಿತ್ತು ಮತ್ತು ಮಂಗಳವಾರದಲ್ಲಿ ಆ ಮೂವರು ಬೇರೆ ಬೇರೆ ಸಮಸ್ಯೆಗಳನ್ನು ಎದುರು ಮಾಡಿಕೊಳ್ಳಲೇಬೇಕಿತ್ತು.

ಆಕಸ್ಮಿಕಗಳು ಮಾಟಮಂತ್ರಗಳೇ?

– ೬ –

ಈವೊತ್ತು ಮೈಥಿಲಿಯು ತಿಂಡಿ ಮಾಡಿಡುವುದಂತೂ ಅಸಾಧ್ಯದ ಮಾತು ಎಂದು ಅನಿಸಿದವನಿಗೆ ಕರ್ಫ್ಯೂ ಸಡಿಲಗೊಂಡಿರುವುದರಿಂದ ಯಾವುದಾದರೂ ಹೋಟೆಲ್ ತೆರೆದಿರಬಹುದು ಅಲ್ಲಿಯೇ ತಿಂಡಿ ತಿಂದು ಆಫೀಸಿಗೆ ಹೋದರಾಯಿತು ಎಂದು ಹೊರಟ. ಅವನು ಹೊರಟ ಟೈಮಿಗೆ ಸರಿಯಾಗಿಯೇ ಮೈಥಿಲಿಯು ಬೆಡ್ ರೂಮಿನ ಬಾಗಿಲನ್ನು ತೆರೆದು ಹೊರಗೆ ಬಂದಿದ್ದು. ಅಲ್ಲಿಯ ತನಕ ಅವಳೂ ಸುಮ್ಮನೇ ಆಕಳಿಸಿ ಹಾಗೆಯೇ ಕೂತು ಬಿಟ್ಟಿದ್ದಳು. ಚಾರು ಸ್ನಾನ ಮಾಡುವಾಗಲೂ ಎದ್ದು ಹೊರಗೆ ಬಂದಿರಲಿಲ್ಲ. ಚಾರು ಸ್ನಾನ ಮುಗಿಸಿ ಬಂದವನೇ ಹೊರಟುಬಿಟ್ಟ. ಅವನು ಹೊರಟಿದ್ದು ಗೊತ್ತಾದ ಮೇಲೆಯೇ ಮೈಥಿಲಿಯು ಬೆಡ್ ರೂಮಿನ ಬೋಲ್ಟ್ ತೆಗೆದು ಹೊರಗೆ ಬಂದಿದ್ದು. ಸರಿಯಾಗಿ ಏಳು ಗಂಟೆ. ಈವತ್ತು ಆಫೀಸಿಗೆ ಹೋಗಬೇಕೋ ಬೇಡವೋ ಎಂದು ಒಂದೆರಡು ಕ್ಷಣ ಯೋಚಿಸಿದಳು. ಮತ್ತೆ ಮನೆಯಲ್ಲಿಯೇ ಕೂತರೇ ಹುಚ್ಚು ಹಿಡಿಯುತ್ತದೆ ಎಂದು ಭಾವಿಸಿದಳು. ಅವಳು ಆಫೀಸಿಗೆ

ಹೊರಡುವುದೆಂದು ನಿಶ್ಚಯಿಸಿದಾಗಲೇ ಯಾಕೋ ಅವಳ ಕಣ್ಣು ಮತ್ತೆ ಅದುರಿತು. ಕಣ್ಣು ಅದುರಿದರೆ ಅದ್ಯಾವದೋ ಒಂದು ರೀತಿಯ ಶಕುನವೆಂದು ಭಾವಿಸುವ ಮೈಥಿಲಿಯು ಈವತ್ತು ಏನಾಗಲಿದೆ ಎಂದು ಯೋಚಿಸಿದಳು. ಇದೇ ರೀತಿಯ ಯೋಚನೆಯಲ್ಲಿಯೇ ಅವಳು ಹೊರಡುವ ಸಿದ್ಧತೆಯನ್ನು ನಡೆಸಿದಳು. ಅವಳು ಹೊರಡುವ ಸಿದ್ಧತೆಯನ್ನು ನಡೆಸುತ್ತಿರುವಾಗಲೇ – ಅಲ್ಲಿ ದೇವವ್ರತ ಕಾಫಿಯನ್ನು ಗುಟುಕು ಗುಟುಕಾಗಿ ಹೀರುತ್ತಿದ್ದ ಮತ್ತು ಸುಜಾತ ಅಡುಗೆ ಮನೆಯಲ್ಲಿ ಹಿಂದಿನ ರಾತ್ರಿ ಉಳಿದ ಅನ್ನಕ್ಕೆ ಒಗ್ಗರಣೆಯನ್ನು ಹಾಕಿ ಗಂಡನಿಗೆ ಚಿತ್ರಾನ್ನ ರೆಡಿ ಮಾಡಲು ಶುರು ಮಾಡಿದ್ದಳು.

ರೇಖಾ ಪಿಂಟೋ ಅಚ್ಚ ಬಿಳಿಯ ಚೂಡಿದಾರ್ ಹಾಕಿಕೊಂಡು ತಲೆಯ ಜುಟ್ಟನ್ನು ಬಿಗಿ ಮಾಡಿಕೊಳ್ಳುತ್ತಿದ್ದಳು. ಕನ್ನಡಿಯೆದುರು ನಿಂತಾಗ ಯಾಕೋ ಅವಳಿಗೆ ಪ್ರಸನ್ನ ನೆನಪಾದ. ಪ್ರಸನ್ನ ಎಲ್ಲರಂತೆ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಭಾವಿಸಿದಳು. ಅವರೆಲ್ಲಾ ಹೊರಡುವಾಗಲೇ ರೇಡಿಯೋದಲ್ಲಿ "ಹೋದೆಯಾ ದೂರ ಓ ಜೊತೆಗಾರ" ಹಾಡು ಕೇಳಿಬರುತ್ತಿತ್ತು.

ಯಾಕೋ ಲೂನಾದಲ್ಲಿ ಓಡಾಡುವುದು ಈ ದಿನದ ಮಟ್ಟಿಗೆ ಬೇಡವೆಂದು ಭಾವಿಸಿದ ಮೈಥಿಲಿಯು ಸಿಟಿ ಬಸ್ ಹಿಡಿಯೋಣವೆಂದು ಭಾವಿಸಿದಳು. ಅದೇ ಸಿಟಿ ಬಸ್‌ನಲ್ಲಿ ಅವಳು ಓಡಾಡುವುದು ಮೊದಲ ಬಾರಿಯೂ ಅಲ್ಲ. ಬಸ್‌ನಲ್ಲಿ ಅವಳು ಓಡಾಡುವುದು ಅವಳಿಗೆ ಆಶ್ಚರ್ಯ ಉಂಟುಮಾಡುವಂತಹದು ಏನೂ ಇರಲಿಲ್ಲ. ಆದರೆ, ಆ ದಿನ ಅವಳು ಲೂನಾದಲ್ಲಿಯೇ ಹೋಗಿದ್ದಿದ್ದರೆ ಅವಳಿಗೆ ತುಂಬಾ ಅನುಕೂಲವಾಗಲಿತ್ತು. ಅನುಕೂಲದ ಒಂದು ಅವಕಾಶವನ್ನು ತಪ್ಪಿಸಿಕೊಂಡಳು. ಲೂನದಲ್ಲಿ ಹೋಗಿದ್ದಿದ್ದರೆ ಮಧ್ಯ ದಾರಿಯಲ್ಲಿಯೇ ದೇವವ್ರತ ಸಿಗುತ್ತಿದ್ದ ಮತ್ತು ದೇವವ್ರತನಿಗೆ ಬೈಕ್‌ನಿಂದ ಬಿದ್ದ ಸಣ್ಣ ಗಾಯಕ್ಕೆ ಔಷಧಿ ಕೊಡಿಸುವ ಮಹತ್ವದ ಸೌಭಾಗ್ಯ ಅವಳದಾಗಿರುತ್ತಿತ್ತು. ಈ ತರಹದ ಅವಕಾಶದಿಂದಲೇ ಅವಳು ವಂಚಿತಳಾದಳು. ಮೈಥಿಲಿಯು ಬಸ್ಸು ಏರುವ ವೇಳೆಗಾಗಲೇ ದೇವವ್ರತ ಬೈಕಿಗೆ ಕಿಕ್ ಹೊಡೆದ. ಅದು ಸ್ಟಾರ್ಟ್ ಆಗುವಾಗಲೇ ಸುಜಾತ ಅವನಿಗೆ ಟಾಟಾ ಹೇಳಿ ಮನೆಯೊಳಗೆ ಹೋಗಿ ಬೋಲ್ಟ್ ಹಾಕಿಕೊಂಡಳು.

ಈವತ್ತು ಆಫೀಸಿನಲ್ಲಿ ಹೊಸದೊಂದು ಜಾಗದಲ್ಲಿ ಕೂರಲಿದ್ದೇನೆ ಮತ್ತು ಹೊಸ ಜಾಗದಲ್ಲಿ ಎದುರಿಗೆ ಸ್ಟೆನೋ ಕೂರಲಿದ್ದಾಳೆ ಎಂಬ ಯೋಚನೆಯೇ ದೇವವ್ರತನಿಗೆ ಖುಶಿಯನ್ನು ಕೊಟ್ಟಿತು. ಇದೇ ವೇಳೆಗೆ ಅವನು ಬೈಕ್‌ನ ವೇಗವನ್ನು ಹೆಚ್ಚಿಸಿರುವುದು. ಬೈಕ್‌ನ ವೇಗ ಹೆಚ್ಚುತ್ತಲೇ ಹೋಯಿತು – ಅವನ ಆಲೋಚನೆಯಂತೆ! ಮಧ್ಯೆ ಬೈಕ್‌ಗೆ ಗಾಡಿಯವನು ಎದುರಾಗಿ: ಇವನು ಪಲ್ಟಿ ಹೊಡೆಯುವ ತನಕ. ಗಾಡಿಯವನು ಎದುರು ಬರುತ್ತಿರುವುದು ನೋಡಿ ತಕ್ಷಣವೇ ಬ್ರೇಕ್ ಹಾಕಿದ ದೇವವ್ರತನ ಬೈಕ್

ಮುಗುಚಿಬಿತ್ತು – ನಡುರಸ್ತೆಯಲ್ಲಿ. ಹೆಚ್ಚು ಗಾಯವಾಗಿಲ್ಲವೆನ್ನುತ್ತಲೇ ದೇವವ್ರತ ಬಿದ್ದ ಬೈಕನ್ನು ಮತ್ತೆ ಎದ್ದು ನಿಲ್ಲಿಸಿದ. ಗಾಡಿಯವನಿಗೆ ಒಂದಷ್ಟು ಬೈದ. ಅವನ ಬೈಗುಳ ಪದವೇನೋ ಗಾಡಿಯವನಿಗೆ ತಗುಲಿದ ಹಾಗೆ ಕಾಣಿಸಲಿಲ್ಲ. ಆಗಿರುವ ಸಣ್ಣ ಗಾಯಕ್ಕೆ ಯಾವುದಾದರೂ ಕ್ಲಿನಿಕ್‌ಗೆ ಹೋಗಿ ಬ್ಯಾಂಡೇಜು ಹಾಕಿಸಿಕೊಂಡರಾಯಿತು ಎಂದುಕೊಂಡ ದೇವವ್ರತ ತನ್ನ ಮಂಡಿಗೆ ಮತ್ತು ಕಾಲ್ಬೆರಳಿಗೆ ಆದ ಗಾಯವನ್ನು ನೋಡುತ್ತಾ ಮತ್ತೆ ಬೈಕ್ ಸ್ಟಾರ್ಟ್ ಮಾಡಿದ. ಕಾಲಬೆರಳಿನ ಗಾಯಕ್ಕೆ ಬ್ಯಾಂಡೇಜು ಹಾಕಿಸಿಕೊಂಡು ದೇವವ್ರತ ಕಚೇರಿಗೆ ತಲುಪುವಾಗಲೇ ಲೇಟಾಗಿ ಹೋಯಿತು. ಅವನ ಕಾಲ್ಬೆರಳಿನ ಗಾಯಕ್ಕೆ ಎಲ್ಲರೂ ಕರುಣೆ ವ್ಯಕ್ತಪಡಿಸುವವರೇ. ಆದರೆ, ಅದೇ ವೇಳೆಗೆ ಮನೆಯಲ್ಲಿ ದೇವರ ಪೂಜೆಯನ್ನು ಮುಗಿಸಿದ ಸುಜಾತ ತನ್ನ ತಾಳಿ ಸರವನ್ನು ಕಣ್ಣಿಗೆ ಒತ್ತಿಕೊಂಡಳು ಮತ್ತು ನಿತ್ಯವೂ ಪೂಜೆಯನ್ನು ಮಾಡುವ ಮಂಗಳಗೌರಿಗೆ "ತಾಳಿಯ ಭಾಗ್ಯವನ್ನು ಉಳಿಸಮ್ಮ" ಎಂದು ಬೇಡಿಕೊಂಡಳು.

ಚಾರು ಆಫೀಸಿಗೆ ಹೊರಟವನು ಹೋಟೆಲಿನಲ್ಲಿ ತಿಂಡಿ ತಿನ್ನಬೇಕೆಂದು ಭಾವಿಸಿಕೊಂಡು ಅಲ್ಲಿಯೇ ಪೇಪರ್ ಓದುತ್ತಾ ಅದರ ಹಿಂಬದಿಯ ನುಡಿಮುತ್ತುಗಳನ್ನು ಗ್ರಹಿಸಿದ. ಅವನು ಓದುತ್ತಿರುವಾಗ ತಕ್ಷಣವೇ ಅವನಿಗೆ ಮೈಥಿಲಿಯ ನೆನಪಾಯಿತು. ಮೈಥಿಲಿಯು ನನಗೆ ಊಟದಲ್ಲಿ ಎಲ್ಲಾದರೂ ವಿಷವನ್ನು ಮಿಶ್ರಮಾಡಿ ಹಾಕಿದರೆ? ನನ್ನ ಕತೆಯೇನು? ಎಂದು ಭಾವಿಸಿದ ಬೆಳಗಿನ ಮೊದಲ ಗಿರಾಕಿಯೇ ಚಾರುವಾಗಿರುವುದರಿಂದ ಹೋಟೆಲಿನ ಸಪ್ಲೆಯರ್ ಒಂದು ಸ್ವಲ್ಪ ವಿಶೇಷ ಕಾಳಜಿಯನ್ನು ತನ್ನ ಬಗೆಗೆ ತೋರಿಸುತ್ತಿದ್ದಾನೆ ಎಂದನ್ನಿಸಿತು. "ಇಡ್ಲಿ ವಡೆಯ ಜೊತೆಗೆ ಒಂದು ಸ್ವಲ್ಪ ಬಿಸಿ ಬಿಸಿ ಕೇಸರಿಬಾತನ್ನು ತಿಂದುಬಿಡಿ ಮಾರಾಯ್ರೆ. ಮತ್ತೆ ಮಧ್ಯಾಹ್ನ ತನಕ ಹೊಟ್ಟೆ ಏನೂ ಕೇಳುವುದಿಲ್ಲ ಹೊಟ್ಟೆಯು ತುಂಬಾ ತಂಪಾಗಿರುತ್ತೆ ಮಾರಾಯ್ರೆ. ಕಾಫಿನೋ ಅಥವಾ ಚಾನೋ?" ಹೋಟೆಲಿನ ಮಾಣಿಯು ಹೇಳುತ್ತಿರುವ ಮಾತನ್ನು ಕೇಳುವ ವ್ಯವಧಾನವಿರಲಿಲ್ಲ. ಇಡ್ಲಿ ತಿಂದವನೇ ಟೀ ಕುಡಿದು ಹೊರಟ. ಆದರೂ ಆಫೀಸಿಗೆ ಇನ್ನೂ ಟೈಮಿದೆ ಕನಿಷ್ಠ ಎರಡು ಗಂಟೆ. ಹತ್ತೂವರೆಯಿಲ್ಲದೇ ಆಫೀಸಿನಲ್ಲಿ ಕುಳಿತು ಏನು ಮಾಡುವುದಿದೆ? ಬೆಳಗಿನ ಹೊತ್ತು ಹೋಗಿ ಗಾರ್ಡನಿನಲ್ಲಿ ಕೂತರೆ ನನ್ನನ್ನು ಹುಚ್ಚ ಅಥವಾ ಅಲೆಮಾರಿಯೆಂದು ಭಾವಿಸಿಬಹುದು. ಪ್ರತಿಯಾಗಿ ಎಲ್ಲಾದರೂ ಹೋಗಿ ಕೂರೋಣವೆಂದರೆ ಯಾಕೋ ಮನಸ್ಸಿಗೆ ಸಮಾಧಾನ ಎಲ್ಲಿ? ಮೈಥಿಲಿಯನ್ನು ನೆನಪಿಸಿಕೊಂಡರೆ ಯಾಕೋ ಮೈಯೆಲ್ಲಾ ಉರಿಯೆನಿಸುತ್ತದೆ. ಚಾರು ಹೋಟೆಲಿನಲ್ಲಿಯೇ ಒಂದಿಪ್ಪತ್ತು ನಿಮಿಷ ಕಾಲವನ್ನು ಕಳೆದ. ಅದೇ ಹೊತ್ತಿಗೆ ಸರಿಯಾಗಿಯೇ ಚಾರುವಿನ ಮನಸ್ಸಿನಲ್ಲಿ ಯಾಕೋ ಸಾವಿನ ಭಯ ಕಾಣಿಸಿಕೊಂಡದ್ದು ಯಾಕೆ ಎಂಬುದು ಅವನಿಗೇ ಅರ್ಥವಾಗಲಿಲ್ಲ. ಸಾವು ಬಂದು ತನ್ನ ಎದೆಯ ಕದವನ್ನು ತಟ್ಟಲಿದೆಯೆಂದನ್ನಿಸತೊಡಗಿತ್ತು.

ಸಾವು ಬಂದು ತನ್ನನ್ನು ಯಾವ ರೂಪದಲ್ಲಿ ತಟ್ಟಲಿದೆಯೆಂದು ಅವನಿಗೇ ತಿಳಿಯಲಿಲ್ಲ!

ಚಾರು ಈ ರೀತಿಯ ಹೆದರಿಕೆಯಲ್ಲಿ ಮುಳುಗಿ ಹೋಟೆಲಿನಿಂದ ಹೊರಗಡೆ ಕಾಲಿಡುವ ವೇಳೆಗೆ ಸರಿಯಾಗಿಯೇ ದೇವವ್ರತ ಅವನ ಹೆಂಡತಿಗೆ ಟಾಟಾ ಹೇಳಿರುವುದು ಮತ್ತು ರೇಖಾ ಎಂಬ ಹುಡುಗಿ ರೂಮಿಗೆ ಬಾಗಿಲು ಹಾಕಿಕೊಂಡು ಬಿಳಿಯ ಚೂಡಿದಾರ್‌ನ ಶಾಲನ್ನು ಸರಿಮಾಡಿಕೊಂಡು ಹೊರಡಲು ತಯಾರಾದ್ದು ಮತ್ತು ಮೈಥಿಲಿಯು ಮನೆಯಿಂದ ಹೊರಡಲು ಅಣಿಯಾದುದು.

ಕಚೇರಿಯಲ್ಲಿ ಹೊಸ ಜಾಗವೊಂದರಲ್ಲಿ ಕುಳಿತ ಸಂಭ್ರಮವನ್ನು ಅನುಭವಿಸುವ ಯಾವ ಉತ್ಸಾಹವೂ ದೇವವ್ರತನಿಗೆ ಉಳಿಯಲಿಲ್ಲ. ಬೈಕ್ ಜಾರಿ ಬಿದ್ದುದು ಒಂದು ನೆವ ಮಾತ್ರ, ಹೇಳಿಕೊಳ್ಳುವಂಥ ಯಾವ ದೊಡ್ಡ ಗಾಯವೂ ಅಲ್ಲ. ಆದರೆ ಹೊಸ ಜಾಗದಲ್ಲಿ ಕಚೇರಿಯ ಎಲ್ಲರಿಗೂ ಬೈಕ್ ಹೇಗೆ ಉಲ್ಟಾ ಹೊಡೆಯಿತು ಮತ್ತು ತಾನು ಹೇಗೆ ಜೀವ ಸಮೇತ ಉಳಿದುಬಂದೆ. ಹೆಲ್ಮೆಟ್ ಹಾಕದೇ ಹೋಗಿದ್ದಿದ್ದರೆ ತಲೆಯು ಹೇಗೆ ಸಹಸ್ರ ಹೋಳಾಗಿ ಹೋಗುತ್ತಿತ್ತು ಎಂದು ವಿವರಿಸುತ್ತಲೇ ಇದ್ದವನಿಗೆ ಗೊತ್ತೇ ಆಗದ ರೀತಿಯಲ್ಲಿ ಕಾಲಿನ ಗಾಯದ ಜೊತೆಗೆ ಮತ್ತೇನೋ ಸೇರಿಕೊಂಡಿದೆಯೆಂದು ತಿಳಿಯಲಿಲ್ಲ. ತಿಳಿಯುವ ಮೊದಲೇ ಕಾಲಿಗೆ ಬ್ಯಾಂಡೇಜ್ ಹಾಕಿ ಒಂದೆರಡು ನೋವು ನಿವಾರಕಗಳನ್ನು ಕೊಟ್ಟ ಡಾಕ್ಟರಿಗೂ ದೇವವ್ರತ ದೇಹದ ಸ್ಥಿತಿಯು ಯಾವ ಬಗೆಯದು ಎಂದು ಗೊತ್ತಿರಲಿಲ್ಲ. ಕಾಲ ಬೆರಳಿನ ಗಾಯವೇ ಮುಂದೆ ಮುಂದುವರಿಯಲಿತ್ತು. ರಸ್ತೆಗೆ ಬಿದ್ದವನ ತಲೆಯಲ್ಲಿಯೇ ಮತ್ತೊಂದು ರೀತಿಯ ನೋವು ಕಾಣತೊಡಗಲಿತ್ತು ಮತ್ತು ಅದ್ಯಾವುದಕ್ಕೂ ಯಾವುದೇ ಕಾರಣದಿಂದ ಚಾರುವು ಕಾರಣವಾಗಿಲ್ಲವಾದರೂ ಮತ್ತೆ ಮತ್ತೆ ಚಾರುವಿನ ಕನಸೇ ದೇವವ್ರತನಿಗೆ ಬೀಳಲಿತ್ತು. ದೇವವ್ರತನೆಂಬ ಮೈತುಂಬಾ ಲೈಂಗಿಕ ವಾಂಛೆಗಳನ್ನು, ದೇಹದ ತುಂಬಾ ಹೆಣ್ಣಿನ ಬೆವರಿನ ವಾಸನೆಯೇ ಬೇಕೆಂದು ಹಂಬಲಿಸುವವನಲ್ಲಿ ಬೇರೊಂದು ಸ್ಥಿತಿಯು ಬರಲಿತ್ತು. ಆದರೆ, ಆ ದಿನ ಮಾತ್ರ ಕಚೇರಿಯಲ್ಲಿ ಆ ಬಗ್ಗೆ ಸಣ್ಣ ವಾಸನೆಯು ಇರಲಿಲ್ಲ. ಕೆಲವು ಹೊತ್ತು ಅದು-ಇದು ಮಾತಾಡುತ್ತಾ ತಾನು ಬಿದ್ದು-ಎದ್ದು ಬಂದ ಸಾಹಸವನ್ನೇ ಬಣ್ಣಿಸುತ್ತಿದ್ದ ದೇವವ್ರತ ಸರಿಯಾಗಿ ಹನ್ನೆರಡು ಗಂಟೆಯ ಹೊತ್ತಿಗೆ ತಲೆ ಸುತ್ತು ಬಂದಂತಾಗಿ, ಬಾಯಿಯ ತೇವ ಆರಿದಂತಾಗಿ – ಟೇಬಲಿಗೆ ತಲೆಯಿಟ್ಟ. ಅವನಿಗೆ ಎಚ್ಚರವಾಗುವಾಗ ಕಚೇರಿಯ ಸಿಬ್ಬಂದಿ ಸುತ್ತ ನಿಂತಿದ್ದರು. "ಏನಾಯಿತು ಸಾರ್?" ಅಂತ ಕೇಳುವವರೇ. ಕೊನೆಗೆ ಯಾರೋ ಒಬ್ಬರು "ಬನ್ನಿ ಸಾರ್ ಮನೆಗೆ ಹೋಗೋಣ" ಅಂದರು. ಅವನಿಗೆ ಗೊತ್ತಿಲ್ಲದೆ ಬಂದ ಡಯಾಬಿಟಿಸ್.

*

ದೇವವ್ರತನನ್ನು ಕಚೇರಿಯಿಂದ ಕರೆದುಕೊಂಡು ತಂದುಬಿಟ್ಟಾಗ ಸುಜಾತ ಅಡುಗೆ ಮನೆಯಲ್ಲಿದ್ದಳು. ಮಧ್ಯಾಹ್ನ ಅಡುಗೆ ಮುಗಿಸಿ ಒಂದು ಸಣ್ಣ ನಿದ್ದೆಯನ್ನು ಹೊಡೆಯಬೇಕೆಂದು ಅವಳು ಭಾವಿಸಿಕೊಂಡೇ ಅಡುಗೆಗೆ ಒಗ್ಗರಣೆಯ ತಯಾರಿಯಲ್ಲಿ ಇದ್ದುದು. ಅದೇ ವೇಳೆ ಕರೆಗಂಟೆಯ ಸದ್ದು, ಸುಜಾತಳಿಗೆ ಯಾರೂ ಬಾರದಿರುವ ಈ ಮಧ್ಯಾಹ್ನದ ಹೊತ್ತಿನಲ್ಲಿ ಯಾರು ಬಾಗಿಲಿನ ಬೆಲ್ ಬಾರಿಸುತ್ತಿರುವುದು ಎಂದು ಮನಸ್ಸಿನಲ್ಲಿಯೇ ಯೋಚಿಸಿಕೊಂಡು ಬಾಗಿಲು ತೆರೆದಳು. ದೇವವ್ರತ ಮತ್ತು ಅವನ ಗೆಳೆಯ. ಸುಜಾತ ಗಾಬರಿಯಾಗಿದ್ದು ಆವಾಗಲೇ. ಯಾಕೋ ದೇವವ್ರತನ ಮುಖ ಬಾಡಿದೆ. ಕಾಲಿನ ಬಳಿಗೆ ಒಂದು ಸಣ್ಣ ಬ್ಯಾಂಡೇಜು. ಗಂಡನಿಗೆ ಏನಾದರೂ ಆದರೆ ಎಲ್ಲಾ ಹೆಂಡತಿಯರು ಏನನ್ನು ಕೇಳುತ್ತಾರೋ ಅದನ್ನೇ ಸುಜಾತ ಕೂಡಾ ಕೇಳಿದಳು: "ಏನಾಯಿತ್ರಿ?" ಕಳವಳ ಮತ್ತು ಗಾಬರಿಯಲ್ಲಿ ಇದ್ದವಳ ಸ್ವರ ಹೇಗಿರಬೇಕೋ ಹಾಗೆಯೇ ಇತ್ತು. "ತಡಿಯೇ ಹೇಳುತ್ತೇನೆ. ಅಂಥಾ ಗಾಬರಿಯ ವಿಷಯವೇನೂ ಇಲ್ಲ" ಎಂದ ದೇವವ್ರತ ತನ್ನ ಸ್ನೇಹಿತನನ್ನು ಪರಿಚಯಿಸಿದ. ದಿವಾನ್ ಕಾಟ್‌ನ ಮೇಲೆ ಆರಾಮವಾಗಿ ಕೂತುಕೊಂಡ. "ಈಗ ಅಂಥಾದ್ದೇನು ಇಲ್ಲ, ಆಫೀಸಲ್ಲಿ ತಲೆ ಒಂಚೂರು ಚಕ್ಕರ್ ಬಂದಿದ್ದು ನಿಜ. ಈಗ ಆರಾಮವಾಗಿದ್ದೇನೆ. ಆಫೀಸಲ್ಲಿ ಎಲ್ಲರಿಗೂ ಹೇಳಿ –ನಾನು ಚೆನ್ನಾಗಿದ್ದೇನೆ ಅಂತ, ಇಲ್ಲದಿದ್ದರೆ ಮತ್ತೆ ಎಲ್ಲರೂ ದಂಡು ಕಟ್ಟಿಕೊಂಡು ನೋಡಲು ಬರುತ್ತಾರೆ. ಅವರಿಗೆಲ್ಲಾ ಉತ್ತರ ಕೊಡುವುದೇ ಒಂದು ದೊಡ್ಡ ಕೆಲಸವಾಗಿ ಬಿಡುತ್ತದೆ." ದೇವವ್ರತ ಸ್ನೇಹಿತನಿಗೆ ಹೇಳಿದ ಅದೇ ಹೊತ್ತಿಗೆ ಸುಜಾತ ಒಂದು ಲಿಂಬೆ ಹಣ್ಣಿನ ಶರಬತ್ತನ್ನು ಕೊಟ್ಟಳು. ಲಿಂಬೆಹಣ್ಣಿನ ಶರಬತ್ತು ಕುಡಿದ ದೇವವ್ರತನ ಸ್ನೇಹಿತ ಹೊರಟ. ಅವನು ಹೊರಟುಹೋದ ಕ್ಷಣದಲ್ಲಿಯೇ – ದೇವವ್ರತ ದಿವಾನಿ ಕಾಟಿನ ಮೇಲೆ ಅಡ್ಡಾದವನು ಅಲ್ಲಿಂದಲೇ ವಿಪರೀತವಾದ ವಾಂತಿಯನ್ನು ಮಾಡಿದ. ಅವನ ವಾಂತಿಯ ವಾಸನೆಯು ಮನೆಯಿಡೀ ಹರಡಿತು. ಮಲಗಿದವನಿಗೆ ತಲೆಯೆತ್ತಲು ಸಾಧ್ಯವಾಗುತ್ತಿಲ್ಲ ಕಂಗಾಲಾದ ದೇವವ್ರತ. ಸುಜಾತ ಅವನ ವಾಂತಿಯನ್ನು ಬಳಿದು ಬಕೆಟ್‌ನೊಳಗೆ ಹಾಕಿದಳು. ಗಂಡನ ವಾಂತಿಯಿಂದ ಮನೆ ತುಂಬಾ ತುಂಬಿರುವ ಗಬ್ಬುನಾತವೂ ಕೂಡಾ ಅವಳಿಗೆ ಅಸಹ್ಯವೆನಿಸಿಲ್ಲ. ವಿಪರೀತವಾದ ಬಳಲಿಕೆಯಿಂದ ಮಲಗಿದ ದೇವವ್ರತನ ಬಾಯಿಯಿಂದ ಸಣ್ಣ ನರಳಿಕೆಯು ಕೇಳಿಬರತೊಡಗಿತು. ಈಗ ಗಾಬರಿ ಬಿದ್ದಿರುವುದು ಸುಜಾತ. ಪೂರ್ಣ ಎಚ್ಚರವೂ ಅಲ್ಲದ; ಪೂರ್ಣ ನಿದ್ದೆಯೂ ಅಲ್ಲದ ಅತ್ಯಂತ ದಯನೀಯವಾದ ಸ್ಥಿತಿಯಲ್ಲಿ ಮಲಗಿದ ದೇವವ್ರತನ ಪೂರ್ಣ ಪ್ರಮಾಣದ ತಾಕತ್ತು ಕೇವಲ ಒಂದೇ ವಾಂತಿಯಲ್ಲಿ ಇಳಿದು ಹೋದಂತೆ ಸುಜಾತಗೆ ಭಾಸವಾಯಿತು. ಅವನ ನರಳಿಕೆ ಮತ್ತು ಅವನ ಇಳಿದು ಹೋದ ಮುಖವನ್ನು ನೋಡಿಯೇ ಗಾಬರಿಯಾಗಿ ಹೋಗಿರುವ

ಸುಜಾತ, ಬಕೆಟ್‌ನಲ್ಲಿದ್ದ ಅವನ ವಾಂತಿಯನ್ನು ಬಚ್ಚಲು ಮನೆಯಲ್ಲಿ ಚೆಲ್ಲಲು ಹೊರಟಳು.

*

"ನಿನಗೆ ಇದು ಗೊತ್ತಾಗೋಲ್ಲ ಹುಡುಗಿ, ಮನಸ್ಸಿಗೆ ಬೇಡವಾದರೆ ಅದು ದೇಹಕ್ಕೂ ಬೇಡವಾಗುತ್ತೆ ಮತ್ತು ದೇಹಕ್ಕೆ ಬೇಡವೆಂದು ಅನಿಸಿದ್ದನ್ನು ಮನಸ್ಸಿನಲ್ಲಿ ತುಂಬಿ ಇಟ್ಟುಕೊಳ್ಳಲು ಆಗುವುದಿಲ್ಲ. ದೇಹ ಬೇರೆ, ಮನಸ್ಸು ಬೇರೆ ಎಂದು ಕೇವಲ ಮೂರ್ಖರು ನಂಬುತ್ತಾರೆ ಮತ್ತು ಅದರಂತೆಯೇ ವರ್ತಿಸುತ್ತಾರೆ. ಯಾವುದೇ ರೀತಿಯ ಅಲೆಯಿಲ್ಲದ, ಪ್ರಶಾಂತ ಸಾಗರದಂತೆ ಎಲ್ಲವನ್ನು ನುಂಗಿ ಸುಮ್ಮನಿರುವ ಮನಸ್ಸಿಗೆ ಜಡತೆಯೆನ್ನುವುದು ಬರುವುದಿಲ್ಲ ಮತ್ತು ಅದಕ್ಕೆ ಚೈತನ್ಯ ಇರುತ್ತೆ. ಆ ಚೈತನ್ಯವೇ ನಮ್ಮನ್ನು ಕ್ರಿಯಾಶೀಲವಾಗಿರಿಸಿಕೊಂಡಿರುತ್ತೆ ಮತ್ತು ಅದಕ್ಕೆ ಅನೇಕ ರೀತಿಯ ನೆವಗಳ ಹಾದಿಗಳು ಖಂಡಿತಾ ಬೇಕಾಗುವುದಿಲ್ಲ. ನೀನು ಇನ್ನೂ ಚಿಕ್ಕವಳು. ಅದಕ್ಕೆ ಇದೆಲ್ಲಾ ನಿನಗೆ ಅರ್ಥವಾಗೋಲ್ಲ" – ಚಾರು ತುಂಬಾ ನಿಧಾನವಾಗಿ ರೇಖಾ ಪಿಂಟೋಗೆ ವಿವರಿಸುತ್ತಿದ್ದ. ರೇಖಾಪಿಂಟೋ ತಾನು ಹೇಳುವುದನ್ನು ಸರಿಯಾಗಿಯೇ ಕೇಳಿಸಿಕೊಳ್ಳುತ್ತಿದ್ದಾಳೆ ಎಂಬುದು ಅರಿವಾದ ಮೇಲೆಯೇ ತನ್ನ ಮಾತುಗಳನ್ನು ಮುಂದುವರಿಸಿದ. ಗುರುವಿನ ಎದುರು ಕುಳಿತ ಶಿಷ್ಯೆಯಂತೆ ರೇಖಾ ಕಿವಿಗೊಟ್ಟು ಕೇಳುತ್ತಿದ್ದಳು ಮತ್ತು ಮನನ ಮಾಡಿಕೊಳ್ಳುತ್ತಿದ್ದಳು. ಅದೇ ಮಂಗಳವಾರ! ಚಾರು ಅವಳ ಹಣೆಯನ್ನೇ ನೋಡಿದ. ಈ ಕುಂಕುಮದ ಬೊಟ್ಟು ಈ ಹುಡುಗಿಯನ್ನು ಬೇರೆ ರೀತಿಯಲ್ಲಿ ನೋಡುವಂತೆ ಪ್ರಚೋದಿಸುತ್ತಿದೆಯಲ್ಲಾ ಎಂದು ಚಾರು ಭಾವಿಸಿದ. ರೇಖಾಪಿಂಟೋ ತನ್ನ ಹಣೆಯನ್ನೇ ನೋಡುತ್ತಿರುವ ಚಾರುವನ್ನು ನೋಡಿ "ಯಾಕೆ ಸಾರ್?" ಎಂದಳು. ಚಾರು 'ಯಾವುದು?' ಎಂದವನೇ ಸಣ್ಣ ಕಿರುನಗೆಯನ್ನು ಬೀರಿದ. ಸದಾ ಗಂಭೀರವಾಗಿರುವ, ಯಾವತ್ತೂ ಅಪರೂಪಕ್ಕೆ ಒಮ್ಮೊಮ್ಮೆ ಮಾತ್ರ ನಗುವ ಚಾರುವಿನ ಕಿರುನಗೆಗೆ ಬೇರೆ ಏನಾದರೂ ಅರ್ಥವಿರಬಹುದೆ? ಶಂಕಿಸಿದಳು. ಚಾರುವಿನ ನಗೆಯ ಬಗ್ಗೆ ಬಂದ ಅನುಮಾನ ಅವಳಿಗೇ ಯಾಕೋ ಮುಜುಗರವನ್ನು ತಂದಿಟ್ಟಿತು. ಅನವಶ್ಯಕ ಚಾರುವಿನ ಬಗ್ಗೆ ಶಂಕಿಸಿದೆ ಎಂದು ಭಾವಿಸಿಕೊಂಡವಳೇ ಚೂಡಿದಾರ್‌ನ ಶಾಲನ್ನು ಸರಿಪಡಿಸಿಕೊಂಡಳು. ಸಾಮಾನ್ಯವಾಗಿ ಎಲ್ಲಾ ಹುಡುಗಿಯರು ಮಾಡುವ ಹಾಗೆ. ಹುಡುಗಿಯರು ಕೆಲವೊಮ್ಮೆ ಏನೂ ಕೆಲಸವಿಲ್ಲದಿದ್ದಾಗ, ಬೇರೆಯವರು ತಮ್ಮನ್ನು ಗಮನಿಸುತ್ತಿದ್ದಾರೆ ಎಂದಾಗ ಮಾಡುವ ಮಹತ್ವದ ಕೆಲಸವೆಂದರೆ ಚೂಡಿದಾರ್‌ನ ಶಾಲನ್ನು ಸರಿಪಡಿಸಿಕೊಳ್ಳುವುದು. ಬಿಳಿಯ ಚೂಡಿದಾರ್; ಅದಕ್ಕೆ ತಕ್ಕನಾದ ಟಾಪ್ ಮತ್ತು ಸಣ್ಣನೆಯ ಹೂಗಳಿರುವ ಬಿಳಿಯ ವೇಲ್ ಈ ಹುಡುಗಿಯನ್ನು ದೇವಲೋಕದ ಅಪ್ಸರೆಯನ್ನಾಗಿಸಿದೆ ಎಂದು ಯೋಚಿಸಿದ. "ಸಾರ್,

ಅದೇನೋ ಹೇಳ್ತಾ ಇದ್ರಲ್ಲಾ? ಅದರ ಕುರಿತು ಕೇಳ್ತಾ ಇದ್ದೇನೆ, ನಾನು ಏನು ಮಾಡಬಹುದು?" ರೇಖಾ ಗಂಭೀರವಾಗಿಯೇ ಪ್ರಶ್ನಿಸಿದಳು. ಚಾರು, "ಅದೇನು ಮಾಡಬಹುದು ಅಂತಲ್ಲಾ, ಅದೇನು ಆಗಿದೆ ಆ ಸಮಸ್ಯೆಯನ್ನು ನೀನು ಹೇಗೆ ಬಗೆಹರಿಸಿಕೊಳ್ತಿಯೋ ಅದು ನಿನಗೆ ಸಂಬಂಧಿಸಿದ್ದು. ನೀನು ತುಂಬಾ ಯೋಚಿಸಿಯೇ ನಿರ್ಧಾರಕ್ಕೆ ಬರಬೇಕು. ಮನುಷ್ಯರೆಂದ ಮೇಲೆ ಹತ್ತಾರು ಯೋಚನೆಗಳಿರುತ್ತವೆ. ಹತ್ತಾರು ಆಯ್ಕೆಗಳೂ ಇರುತ್ತವೆ. ಇವನ್ನು ತಪ್ಪಿಸಿಕೊಂಡು ಯಾರೂ ಇರೋಕಾಗಲ್ಲ. ಯಾವುದಾದರು ಒಂದನ್ನು ಆಯ್ಕೆ ಮಾಡಿಕೊಳ್ಳಲೇಬೇಕು. ಈ ಆಯ್ಕೆಗಳನ್ನು ನೀನು ಇಚ್ಛಿಸಿದಂತೆ ಮಾಡಿಕೊಳ್ಳಬಹುದು ಅದರಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ ಮತ್ತು ನಿನ್ನ ಜೀವನ ಅದು ನಿನ್ನದೇ ಆಗಿರಬೇಕು ಹುಡುಗಿ. ಅದರ ಜವಾಬ್ದಾರಿಯನ್ನು ಯಾರೂ ಹೊರಲು ತಯಾರಿರುವುದಿಲ್ಲ ಇದು ನಿನಗೆ ಗೊತ್ತಿರಲಿ." ಚಾರು ಸರಿಯಾದ ರೀತಿಯಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಿದ. ರೇಖಾ, "ಸಾರ್, ನೀವೇ ಹೇಳಿ, ನಾನು ಏನು ಮಾಡಬಹುದು ಅಂತ ನನಗೆ ತೋಚ್ತಾ ಇಲ್ಲ. ಇದರಿಂದ ಒಮ್ಮೆ ತಪ್ಪಿಸಿಕೊಂಡರೆ ಸಾಕಾಗಿದೆ. ಯಾಕೋ ಜೀವನಾನೇ ಬೇಸರವಾಗಿಬಿಟ್ಟಿದೆ." ಇಷ್ಟು ಮಾತನ್ನು ಹೇಳುವಾಗಲೇ ರೇಖಾಳ ಕಣ್ಣಂಚಿನಲ್ಲಿ ನೀರು ಸಣ್ಣದಾಗಿ ಜಿನುಗತೊಡಗಿತು. "ಡೈವೋರ್ಸ್ ಕೊಡುವುದು ಒಂದನ್ನು ಹೊರತುಪಡಿಸಿ. ನಿನಗೆ ಬೇರೆ ಯಾವ ದಾರಿಯೂ ಇಲ್ಲವೆಂದು ಅಂದೇ ಹೇಳಿದೆ. ನನಗೆ ಗೊತ್ತಿರುವ ಲಾಯರ್‌ಗೆ ನಾನು ಹೇಳ್ತೇನೆ. ಅವರು ಸಲಹೆ ಕೊಡುತ್ತಾರೆ. ನಿನ್ನ ಹಿತದೃಷ್ಟಿಯಿಂದ ಹೇಳ್ತಾ ಇದ್ದೇನೆ; ಸದ್ಯ ನಿನ್ನೆದುರು ಅದೊಂದು ಆಯ್ಕೆ ಮಾತ್ರವೇ ಉಳಿದಿದೆ." ಚಾರು ಸಿಗರೇಟು ಹಚ್ಚಿಕೊಳ್ಳುತ್ತಾ ಹೇಳಿದ. ಚಾರು ಈ ಮಾತನ್ನು ಹೇಳುವಾಗ ಅವನ ಮಾತಿನಲ್ಲಿ ತಂಪೆರೆವ ದನಿಯಿತ್ತು. ಉರಿಬಿಸಿಲಲ್ಲಿ ತಂಪಾಗಿ ಬೀಸುವ ಗಾಳಿಯಂತೆ. ಬಿದಿರ ಮೆಳೆಯ ನಡುವಲ್ಲಿ ಬಾಗಿ ಬರುವ ಗಾಳಿಯೆದೆಯಿಂದ ಹೊರಡುವ ಸಣ್ಣನೆಯ ಇನಿದನಿಯಂತೆ; ಚಾರು ಹೇಳುವುದನ್ನು ಕೇಳಿದ ರೇಖಾ "ದಯವಿಟ್ಟು ಸಾರ್, ಖಂಡಿತಾ ನನಗೆ ಇದೆಲ್ಲಾ ಗೊತ್ತಾಗೊಲ್ಲ, ನೀವು ಹೇಳಿದಂತೆ ಮಾಡುತ್ತೇನೆ. ಏನಾಗುವುದೋ ಅದಾಗಲಿ. ಪ್ರಸನ್ನ ಈ ತರಹದವರು ಅಂತ ಏಸುವಿನ ಆಣೆಗೂ ನನಗೆ ಗೊತ್ತಿರಲಿಲ್ಲ. ಮದುವೆಯ ದಿನ ರಾತ್ರಿಯೇ ನನಗೆ ಈ ವಿಷಯ ಗೊತ್ತಾಯಿತು. ಯಾಕೋ ಪ್ರಸನ್ನ ನನ್ನ ದುಡ್ಡಿಗಾಗಿ ಕಾದ. ಮೊದಲ ರಾತ್ರಿಯೇ ನಿನಗೆ ಸಂಬಳವೆಷ್ಟು ಎಂದು ಕೇಳಿದ. ಆಗಲೂ ಬೇಸರವಾಗಲಿಲ್ಲ. ಆದರೆ, ಅವನು ಗಂಡಸಲ್ಲ, ಗಂಡಸಿನ ವೇಷ ಧರಿಸಿದ ಹೆಬ್ಬುಲಿಯೆಂದು ಗೊತ್ತಾಗದ ಹಾಗೇ ನನ್ನ ಮೈಮೇಲೆ ಉರುಳಿದಂತೆ ಅನಿಸಿತು. ಮದುವೆಯ ಮೊದಲು ನನಗೆ ಕನಸಿತ್ತು. ಆ ಕನಸಿನಲ್ಲಿ ಬಂಗಾರದ ಬಣ್ಣದ ಹೂಗಳಿದ್ದವು. ಗಂಡೆಂಬ ದೇಹದ ಒಂದು ಭದ್ರಕೋಟೆಯು ನನ್ನನ್ನು ರಕ್ಷಿಸುತ್ತದೆಯೆಂದು ನಾನು ಭಾವಿಸಿಕೊಂಡಿದ್ದೆ. ಆದರೆ ಮೊದಲ ರಾತ್ರಿಯೇ ಪುಡಿ ಪುಡಿಯಾದ

ಕನಸುಗಳು ನನ್ನ ಮೈ ಮೇಲಿನ ಇಂಚಿಂಚು ಗಾಯದ ರಕ್ತದ ಕಲೆಗಳ ಜೊತೆಗೆ ಹಂಚಿಕೊಂಡು ಹೋದವು. ಬೆಡ್‌ರೂಮಿನಲ್ಲಿ ಮೊದಲ ದಿನದ ರಾತ್ರಿಗಳನ್ನು ಎಲ್ಲಾ ಹುಡುಗಿಯರು ಎದುರಿಸುವ ಹಾಗೆ ಸಣ್ಣ ಭಯ ಮತ್ತು ಆತಂಕದಲ್ಲಿ ಎದುರಿಸಿದೆ. ಆದರೆ, ಪ್ರಸನ್ನ ಪುಡಿ ಮಾಡಿ ಬಿಸಾಕಿದ ಕೈ ಬಳೆಗಳ ಚೂರುಗಳನ್ನು ಮರುದಿನ ನಾನು ಹೆಕ್ಕುವಾಗ ನನ್ನಲ್ಲಿ ಇದ್ದುದು ಕೇವಲ ಕಣ್ಣೀರು ಮಾತ್ರ; ಪ್ರಸನ್ನನಿಗೆ ಕೇಳಬೇಕೆಂದುಕೊಂಡೆ; ನೀನೂ ಒಬ್ಬ ಗಂಡಸಾ?" ಆದರೆ ಆ ಪ್ರಶ್ನೆಯೇ ಅವನಿಗೆ ನಿರರ್ಥಕವೆಂದು ಆಗ ಅನಿಸಿತ್ತು. ರೇಖಾ ಯಾಕೋ ದುಗುಡದಲ್ಲಿಯೇ ತನ್ನಲ್ಲಿ ಉಳಿದುಕೊಂಡ ಮಾತುಗಳನ್ನು ಚಾರುಗೆ ಹೇಳಿದಳು. ಆದರೆ, ರೇಖಾ ಪ್ರಸನ್ನನಿಗೆ ಕೇಳಬೇಕೆಂದುಕೊಂಡಿದ್ದ ಪ್ರಶ್ನೆಗಳನ್ನೇ ಮುಂದೊಂದು ದಿನ ಮೈಥಿಲಿಯು ಚಾರುಗೆ ಕೇಳಲಿದ್ದಳು ಮತ್ತು ಇದೇ ರೇಖಾ ಪಿಂಟೋ ಚಾರುವಿನ ಎದೆಯ ರೋಮದಲ್ಲಿ ಕೈಯಾಡಿಸುತ್ತಲೇ, ನೀವೊಬ್ಬ ಒಳ್ಳೆಯ ಗಂಡಸು ಎನ್ನಲಿದ್ದಾಳೆ ಎನ್ನುವುದು ಆಗ ಅವರಿಬ್ಬರಿಗೂ ತಿಳಿದಿರಲಿಲ್ಲ. ಜೀವನದ ಆಕಸ್ಮಿಕ ತಿರುವುಗಳಲ್ಲಿ ಯಾರು ಎಲ್ಲಿ ಹೇಗೆ ಎದುರಾಗುತ್ತಾರೆ ಎನ್ನುವುದೇ ಅರ್ಥವಾಗದ ಸಮಸ್ಯೆಯೆಂದು ತಿಳಿಯುವ ಭವಿಷ್ಯಕಾರರೂ ಅವರ ಎದುರುಗಡೆಯಿರಲಿಲ್ಲ. ಅವರ ಎದುರು ಇದ್ದುದು ಕೇವಲ ನಡೆದುಹೋದ ಸಂಗತಿಗಳು ಮತ್ತು ಅದರೊಂದಿಗೆ ವರ್ತಮಾನಕ್ಕೆ ಹೊಂದಾಣಿಕೆ ಮಾಡುವ ಯತ್ನ. ಲಾಯರ್ ಅವರನ್ನು ನಾನೇ ಪರಿಚಯಿಸುತ್ತೇನೆ. ರೇಖಾ, ಅದರ ಮೇಲೆ ನೀನು ಸ್ವಂತ ಕಾಲಲ್ಲಿ ನಿಲ್ಲಬೇಕು. ಅದು ನಿನ್ನ ಆತ್ಮವಿಶ್ವಾಸದ ಪ್ರಶ್ನೆ ಮತ್ತು ಅದರಿಂದ ಮಾತ್ರವೇ ನೀನು ನಿಲ್ಲಬಲ್ಲೆ. ಒಂದು ಮಾತು ಹೇಳಲಾ? "ನೀನು ಪ್ರಸನ್ನನನ್ನು ಮದುವೆಯಾಗಿದ್ದೆ ಎಂಬುದನ್ನೇ ಮರೆತುಬಿಡು. ಕಷ್ಟ, ಆದರೆ ಪ್ರಸನ್ನನನ್ನು ಮರೆಯಲು ನೀನು ಬೇರೆ ಏನಾದರೂ ಮಾಡು – ಎಲ್ಲಾ ಬಿಟ್ಟು ಕೊಳಗೇರಿಯ ಹುಡುಗರಿಗೆ ಪಾಠ ಹೇಳಿಕೊಡು. ನಿನ್ನ ವಯಸ್ಸಿನ ಹುಡುಗಿಯರ ಜೊತೆ ಕತೆ ಹೇಳುವುದನ್ನು ಕಲಿತುಕೋ– ಹೀಗೆ ಮಾಡುತ್ತಾ ಹೋದರೆ ಜಗತ್ತನ್ನು ಗೆಲ್ಲಬಲ್ಲೆ. ಮತ್ತೆ ನಿನ್ನ ಮನದೊಳಗೆ ಒಂದು ಧೈರ್ಯ ತಂದುಕೊಳ್ಳಬಲ್ಲೆ. ನಿನ್ನ ಅನೇಕ ಆತಂಕಗಳು ಮರೆಯಾಗುತ್ತವೆ." ಚಾರು ದೃಢವಾಗಿ ಹೇಳಿದ. ಅವನು ಹೇಳಿಕೊಟ್ಟ ಮಂತ್ರವನ್ನು ಕಿವಿಯಾನಿಸಿ ಕೇಳಿದಳು. ಚಾರು ಮತ್ತು ರೇಖಾ ಮಾತಾಡುವ ಹೊತ್ತಿನಲ್ಲಿ ಕಾಲವೇ "ತಥಾಸ್ತು" ಎಂದು ಕೈ ಹಿಡಿಯಿತು ಮತ್ತು ಅದು ಸರಿಸಮಾನವಾದ ಒಂದು ಕಾಲ. ಅತ್ತ ವಿಷಮವೂ ಅಲ್ಲದೆ; ಅನಿಷ್ಟವೂ ಅಲ್ಲದ ಕಾಲವೊಂದು ಅವರ ನಡುವೆ ಹಾದುಹೋಯಿತು. ರೇಖಾ ಎಂಬ ಹುಡುಗಿಯ ಕಣ್ಣಲ್ಲಿ ಸಣ್ಣ ಮಿನುಗು; ಒಂದು ಕೊಂಚ ಬೆಳಗು. ಚಾರು ಮತ್ತು ರೇಖಾ ಇಬ್ಬರೂ ಮಾತಾಡುತ್ತಿದ್ದುದು. "ಮಧುಬನ್" ಹೋಟೆಲಿನಲ್ಲಿ ಕಾಫಿ ಕುಡಿಯುತ್ತಾ! "ಹೊರಡೋಣ, ನಿನ್ನ ನಗು

ಮಾಯವಾಗುವುದು ಬೇಡ" ಎಂದು ರೇಖಾಳಿಗೆ ಒಂದೇ ಒಂದು ಷೇಕ್‌ಹ್ಯಾಂಡ್ ಕೊಟ್ಟ. ಅದರಲ್ಲಿ ಮಾತ್ರ ವಿದ್ಯುತ್ ಕಂಪನಗಳಿದ್ದವು ಎಂದು ರೇಖಾಗೆ ಅನಿಸಿತು.

ಮನೆಯ ಬೀಗವನ್ನು ತೆರೆಯುವಾಗ ಗಂಡನಿಲ್ಲ ಎಂಬುದೇ ಮೈಥಿಲಿಗೆ ಸಮಾಧಾನ ತಂದ ವಿಷಯ. ಅಮೂಲ್ಯವಾದ ಸಂಪತ್ತನ್ನು ಜೋಪಾನವಾಗಿ ತಂದು ಮನೆಯ ಕಪಾಟಿನೊಳಗೆ ಭದ್ರವಾಗಿರಿಸುವಂತೆ ಮೈಥಿಲಿಯೂ ಕೂಡಾ ಪೂಜಾರಪ್ಪ ಕೊಟ್ಟ ತಾಯಿತ ಮತ್ತು ಔಷಧಿಯನ್ನು ತಂದು ಇರಿಸಿಕೊಂಡಳು. ಪೂಜಾರಪ್ಪ ಹೇಳಿದ್ದು ನೆನಪಿಗೆ ಬಂತು; "ಇದನ್ನು ನೆಲದ ಮೇಲೆ ಇರಿಸಬೇಡ. ರಾತ್ರಿ ಸ್ನಾನ ಮಾಡಿ ದೇವರಿಗೆ ಕೈ ಮುಗಿದು ಈ ತಾಯಿತವನ್ನು ಉಡಿದಾರದಲ್ಲಿ ಕಟ್ಟಿಕೋ ಮತ್ತು ಗಂಡನಿಗೆ ಈ ಔಷಧಿಯನ್ನು ಅನ್ನದಲ್ಲಿ ಕಲಸಿಕೊಡು" ಅದಕ್ಕಾಗಿಯೇ ಮೈಥಿಲಿಯು ಮನೆಯೊಳಗೆ ಕಾಲಿಟ್ಟವಳೇ ತಕ್ಷಣ ಪೂಜಾರಪ್ಪ ಕೊಟ್ಟದ್ದನ್ನೆಲ್ಲಾ ತೆಗೆದುಕೊಂಡು ಬೀರೊಳಗೆ ಇಟ್ಟು ಡ್ರೆಸ್ ಬದಲಾಯಿಸಿ ಸ್ನಾನ ಮಾಡುತ್ತಿರುವಾಗಲೂ ಅವಳಿಗೆ ಅದೇ ನೆನಪು; ತನ್ನ ಹೊಟ್ಟೆಯನ್ನು ಒಮ್ಮೆ ನೋಡಿಕೊಂಡಳು. ತೆಳುವಾದ ಹೊಟ್ಟೆ, ಗರ್ಭನಿಂತರೆ ತನ್ನ ಹೊಟ್ಟೆಯು ಹೇಗಾಗಬಹುದು? ಎಂದು ಕಲ್ಪಿಸಿಯೇ ಅವಳಿಗೆ ಸಣ್ಣ ಮೈ ಪುಳಕವೆದ್ದಿತು.

ಸ್ನಾನದ ಮನೆಯಲ್ಲಿ ಹೆಚ್ಚು ಹೊತ್ತು ಕಾಲ ಕಳೆಯದೆ ತಕ್ಷಣವೇ ಪೂಜೆ ಮಾಡಬೇಕೆಂದು ದೇವರ ಫೋಟೋಗಳಿಗೆ ಊದುಕಡ್ಡಿಯನ್ನು ಹಚ್ಚಿದಳು. ಆ ಕ್ಷಣದಲ್ಲಿ ಅವಳಿಗೆ – ಒಟ್ಟಾರೆಯಾಗಿ ಗುರಿಯಿದ್ದುದು ಒಂದೇ – ತನಗೆ ಮಗುವಾಗಬೇಕು. ಅವಳಿಗೆ ಗೊತ್ತೇ ಇಲ್ಲದ ಸಂಗತಿಯೆಂದರೆ: ಅದೇ ದಿನ ದೇವವ್ರತ ನಗರದ ಬೇರೊಂದು ಕಡೆಯಲ್ಲಿ ಭೋಗ್ಯಕ್ಕೆ ಹಾಕಿಸಿಕೊಂಡ ಮನೆಯೊಂದರಲ್ಲಿ ವಾಂತಿ ಮಾಡಿ ಮಾಡಿ ಸುಸ್ತಾಗಿ ಮಲಗಿದ್ದ ಮತ್ತು...

ದೇವರಿಗೆ ಊದುಕಡ್ಡಿ ಹಚ್ಚಿಟ್ಟು ಚಾರು ಬಂದು ಬಾಗಿಲು ಬಡಿದ ಬಾಗಿಲು ತೆರೆದಾಗ ಬಂದದ್ದು ಚಾರುವಿನ ಬಾಯಿಂದ ಸಿಗರೇಟು ಮತ್ತು ಜಿನ್ ಮಿಶ್ರಿತ ಕಮಟು ವಾಸನೆ! ಕುಡಿದ ಚಾರು ಸ್ನಾನ ಮುಗಿಸಿದವನೇ ಮಲಗಿದ. ಮೈಥಿಲಿಯು ನಿದ್ದೆ ಹೊಡೆಯುತ್ತಲೇ ಸಣ್ಣ ಗೊರಕೆ ಹೊಡೆಯುತ್ತಿದ್ದ ಚಾರುವಿನ ಗೊರಕೆಯನ್ನು ಕೇಳಿದಳು; "ಇವರು ಯಾವತ್ತೂ ಬದಲಾಗೋಲ್ಲ" ಎಂದು ಮೈಥಿಲಿಯು ಭಾವಿಸಿಕೊಂಡಳು. ವೃಥಾ ತಲೆಯ ಮೇಲೆ ಬಂಡೆಗಲ್ಲನ್ನು ಹೊರುತ್ತಿದ್ದೇನೆ ಎಂದನ್ನಿಸಿತು. ತನ್ನ ಸಣ್ಣ ಆಸೆಯನ್ನು ಮಣ್ಣುಪಾಲು ಮಾಡಿದ ರಾತ್ರಿಯ ಬಗ್ಗೆ ಅತೀವ ಸಿಟ್ಟು ಬಂತು ಮೈಥಿಲಿಗೆ! ರಾತ್ರಿಯಲ್ಲಿ ಗಂಡ-ಹೆಂಡಿರು ಒಂದಾಗಬೇಕಾದ ಅವಕಾಶವನ್ನು ತಪ್ಪಿಸಿದ ಚಾರುವಿನ ಕುಡಿತದ ಬಗ್ಗೆ ಮೈಥಿಲಿಗೆ ಮತ್ತಷ್ಟು ಹೇವರಿಕೆಯುಂಟಾಯಿತು. ಯಥಾ ಪ್ರಕಾರ, ಮೈಥಿಲಿಯು ಅದೇ ಸಿಟ್ಟಿನಲ್ಲಿ ಮಲಗಿ ನಿದ್ದೆ ಹೋದಳು. ಹೊರಗಡೆಯ ಗೋಡೆಗಡಿಯಾರದ ಸಣ್ಣ ಸದ್ದು!

ಸರಿಯಾಗಿ ಹನ್ನೆರಡು ಗಂಟೆ ಇಪ್ಪತ್ತು ನಿಮಿಷಕ್ಕೆ ಚಾರು ಎಚ್ಚರಗೊಂಡ –

ಫಕ್ಕನೇ ಯಾರೋ ಎದೆಯ ಮೇಲೆ ಗುದ್ದಿದಂತೆ, ಮೈ ಮೇಲೆ ಯಾರೋ ಹೊಡೆದಂತೆ. ಗಾಢವಾದ ನಿದ್ದೆಯಲ್ಲಿ ಮುಳುಗಿದವನಿಗೆ ತಟ್ಟನೇ ಎಚ್ಚರಾದಾಗ ಉಂಟಾಗುವ ತಬ್ಬಿಬ್ಬು ಮತ್ತು ಸಣ್ಣನೆಯ ಆತಂಕ ಚಾರುವಿಗೂ ಉಂಟಾಯಿತು. ಚಾರು ಎಚ್ಚರಗೊಂಡವನು ಕೇಳಿಕೊಂಡನು. ಬೆಡ್‌ರೂಮಿನಿಂದ ಎದ್ದು ಕತ್ತಲೆಯಲ್ಲಿಯೇ ಚಾವಡಿಗೆ ಬಂದನು. ಬಂದವನೇ ಚಾವಡಿಯ ಬಲ್ಬು ಉರಿಸಿದ – ಅದೂ ಜಿರೋ ವೋಲ್ಟ್‌ನದು. ಮಿಣಿ ಮಿಣಿ ಉರಿಯುತ್ತಿರುವ ಸಣ್ಣ ಬೆಳಕು ಮತ್ತು ದಟ್ಟ ಗಾಢವಾದ ಮೌನದ ನಡುವೆ ಗಡಿಯಾರದ ಮುಳ್ಳು ಚಲಿಸುತ್ತಿರುವ ಸದ್ದು. ಕಾಲವೇ ಕತ್ತಲೆಯ ಕೂಪದಲ್ಲಿ ಅಂಗಾತ ಮಲಗಿದಾಗ ಯಾವ ರೀತಿಯ ಅನುಭವವಾಗಬಹುದು? ಮಧ್ಯರಾತ್ರಿ ಎದ್ದು ಕೂತವನು ನಿದ್ದೆಯಿಲ್ಲದ ರಾತ್ರಿಗಳ ಸಂಕಟವೇನು ಎಂಬುದನ್ನು ಬಲ್ಲ. ರಾತ್ರಿಯಲ್ಲಿ ನಿದ್ದೆ ಬಾರದಿದ್ದರೆ ಆ ಜೀವಿ ನಿಜವಾಗಿಯೂ ನತದೃಷ್ಟ ಅದಕ್ಕಿಂತ ದೊಡ್ಡ ಗ್ರಹಚಾರ ಬೇರೊಂದು ಇಲ್ಲವೆಂದು ಚಾರು ಭಾವಿಸಿದ. ನಟ್ಟ ನಡುವಿರುಳು ಎನ್ನುವುದು ಬಾವಲಿಗಳಿಗೆ ಸಂಬಂಧಿಸಿದ್ದು. ಅದು ರಕ್ಕಸರ ಕಾಲ ಮತ್ತು ಅದರಿಂದ ಯಾವ ದೇವತೆಯೂ ಎದ್ದು ಬರುವುದಿಲ್ಲ. ನಟ್ಟ ನಡುವಿರುಳು ಕಾದು ಕುಳಿತು ಮುಂದೆ ಯಾವುದನ್ನೋ ನಿರೀಕ್ಷಿಸ ಹೊರಟ ತನ್ನಂತಹ ಮನುಷ್ಯರಿಗೆ ರಾತ್ರಿ ಮತ್ತು ಹಗಲಿನ ವ್ಯತ್ಯಾಸವು ಬಹಳ ಸಣ್ಣದೇನೋ ಎಂದು ಅನಿಸತೊಡಗಿತು ಚಾರುಗೆ. ಆದರೆ, ಹೊಟ್ಟೆಯಲ್ಲಿ ಯಾವುದೋ ಒಂದು ರೀತಿಯ ಸಂಕಟ ಮತ್ತು ಈ ಸಂಕಟದಿಂದ ಎದ್ದು ಪಾರಾಗಲು ಉಳಿದಿರುವುದು ಸಣ್ಣದಾದ ಒಂದು ಅವಕಾಶ; ಅದು ಜಿನ್, ಬ್ಯಾಗಿನಿಂದ ಮತ್ತೊಂದು ಬಾಟಲ್ ಎತ್ತಿಕೊಂಡ ಮತ್ತು ಹಾಗೆಯೇ ಜಿನ್ ಬಾಯಿಗೆ ಹಿಡಿದುಕೊಂಡ. ದೇವವ್ರತ ಮತ್ತು ತನ್ನ ನಡುವಿನ ಹೋರಾಟದಲ್ಲಿ ನಿಜವಾಗಿಯೂ ಯಾರು ಗೆದ್ದರು ಮತ್ತು ಯಾರು ಸೋತರು? ಅದುವೇ ಚಾರುಗೆ ಅರ್ಥವಾಗಲಿಲ್ಲ. ನಿದ್ದೆಯೇ ಬಾರದ ಕ್ಷಣದಲ್ಲಿ ಬಳಲಿದ. ಹಸಿ ಹಸಿಯಾದ, ಬರಿಯ ಕೆಟ್ಟುಹೋದ ಮೊಟ್ಟೆಯ ವಾಸನೆಯನ್ನು ಹಿಡಿದುಕೊಂಡು ಚಾರು ಕುಳಿತ. ಆ ನಟ್ಟ ನಡುವಿರುಳಲ್ಲಿ ಅವನ ಹೊಟ್ಟೆಯ ಸಂಕಟಕ್ಕೆ ಸಮಾಧಾನ ಹೇಳಬಲ್ಲ ಯಾರೊಬ್ಬರೂ ಆ ಮನೆಯಲ್ಲಿ ಇರಲಿಲ್ಲ. ಮೈಥಿಲಿಯಾದರೋ– ನಟ್ಟ ನಡುವಿರುಳಿನಲ್ಲಿ ಸಣ್ಣನೆಯ ಶಬ್ದದೊಂದಿಗೆ ಗೊರಕೆ ಹೊಡೆಯತೊಡಗಿದಳು. ಚಾರು ಭಾವಿಸಿಕೊಂಡ: ಪ್ರತಿಯೊಂದು ಸೋಲನ್ನು ಕೂಡಾ ಗೆಲುವಿನ ಹೆಜ್ಜೆಯಾಗಿ ಪರಿವರ್ತಿಸಬೇಕು. ಅದೊಂದೇ ಉಳಿದಿರುವುದು ದಾರಿ! ಈ ನಿರ್ಧಾರಕ್ಕೆ ಅವನು ಬಂದಾಗ ಸರಿಯಾಗಿ ಒಂದು ಗಂಟೆ.

ಭಾಗ - ೩

ಮೈಥಿಲಿ ಬಾಗಿಲು ತೆರೆದಳು

– ೧ –

"ನಾನು ಶಿಬಿ. ನನ್ನ ಅಪ್ಪನಿಗೆ ಪುರಾಣದ ಶಿಬಿ ಚಕ್ರವರ್ತಿ ಅಂದರೆ ಬಹಳ ಇಷ್ಟವಂತೆ ಅದಕ್ಕೆ ನನ್ನ ಹೆಸರನ್ನು ಶಿಬಿ ಅಂತ ಇಟ್ಟಿದ್ದಾರೆ. ಈವೊತ್ತು ಹೊಸದಾಗಿ ಟ್ರಾನ್ಸ್‌ಫರ್ ಆಗಿ ಬಂದಿದ್ದೇನೆ. ಮೊದಲು ಕಾರವಾರದಲ್ಲಿದ್ದೆ. ಅಲ್ಲಿಂದ ರಾಯಚೂರಿಗೆ ಹಾಕಿದ್ರು. ಅದರ ನಂತರ ಈಗ ಈ ಆಫೀಸಿಗೆ. ಅಲೆಮಾರಿಗಳು ಅಂತ ಯಾರಿಗಾದರೂ ಹೆಸರು ಇಡುವುದಿದ್ದರೆ ನಮ್ಮಂಥ ಸರ್ಕಾರಿ ನೌಕರರಿಗೆ ಇಡಬೇಕು. ಅಲೆಮಾರಿಗಳ ಹಾಗೆಯೇ ನಾವು ಬೆನ್ನ ಹಿಂದೆಯೇ ಒಂದು ಜೋಳಿಗೆಯನ್ನು ಕಟ್ಕೊಂಡು ಓಡಾಡುತ್ತಿರಬೇಕು" – ನಗುತ್ತಲೇ ಶಿಬಿ ತನ್ನ ಪರಿಚಯವನ್ನು ಮೈಥಿಲಿಗೆ ಮಾಡಿಕೊಟ್ಟ. ಶಿಬಿ ತನ್ನ ಪರಿಚಯವನ್ನು ಹೇಳಿಕೊಂಡ ಕ್ರಮ, ಅವನ ನಗೆಯ ಕ್ರಮ ಮತ್ತು ಅವನು ಮಾತಾಡುವ ರೀತಿಯಲ್ಲಿ ಸಣ್ಣನೆಯ ಹಾಸ್ಯದ ಧಾಟಿ – ಮೈಥಿಲಿಗೆ ಮೊದಲ ನೋಟಕ್ಕೆ ತುಂಬಾ ಇಷ್ಟವಾಯಿತು.

ನೀಟಾಗಿ ಶೇವ್ ಮಾಡಿಕೊಂಡ ಮುಖ, ದಪ್ಪನೆಯ ಮೀಸೆ ಮತ್ತು ಕಣ್ಣುಗಳಲ್ಲಿರುವ

ಚುರುಕುತನ ಮತ್ತು ಎತ್ತರದ ಗಟ್ಟಿಮುಟ್ಟಾದ ದೇಹ. "ನಿಮ್ದು ಯಾವೂರು ಸಾರ್?" ಥಟ್ಟನೇ ಮೈಥಿಲಿ ಕೇಳಿದಳು. "ಅಲೆಮಾರಿಗಳಿಗೆ ಒಂದು ಊರು; ಒಂದು ನೆಲೆ ಅಂತ ಇರೋಲ್ಲ ಮೇಡಂ, ನಿಂತ ಜಾಗವೇ ಊರು, ಕುಡಿಯುವ ನೀರೇ ಗಂಗಾಜಲ ಮತ್ತು ಸಿಕ್ಕಿದ್ದನ್ನು ತಿನ್ನುವುದೇ ಅಮೃತ ಇದರಾಚೆಗೆ ಏನೂ ಉಳಿದಿಲ್ಲ." "ಹಾಗಲ್ಲ ಸಾರ್, ನಾನು ನಿಜವಾಗಿಯೂ ಕೇಳಿರುವುದು ನಿಮ್ಮೂರು ಯಾವುದು? ನೀವು ಏನೇ ಹೇಳಿದರೂ ಕರ್ನಾಟಕದವರ ತರಹ ಕಾಣಿಸ್ತಾ ಇಲ್ಲಾ." ಮೈಥಿಲಿಯು ತುಂಬಾ ಕುತೂಹಲದಿಂದಲೇ ಕೇಳಿದಳು. "ನಿಮಗೆ ಹೇಳಲೇಬೇಕೆಂದರೆ ಹೇಳುತ್ತೇನೆ. ನಾನು ಹುಟ್ಟಿದ ಊರು ಕೇರಳದ ಪಾಲ್‌ಘಾಟ್. ಆದ್ರೆ, ನನ್ನಪ್ಪ ರೈಲ್ವೇ ಇಲಾಖೆಯಲ್ಲಿ ಪತಾಕೆ ಹಿಡಿಯೋ ಕೆಲಸದೋರು. ನಮ್ಮಪ್ಪ ಪತಾಕೆ ಹಿಡಿಯುತ್ತಲೇ ಎಲ್ಲಿಂದ–ಎಲ್ಲಿಗೋ ಹೋದ್ರು. ಅವರ ಜೊತೆ ನಾನು, ನನ್ನಮ್ಮ ಮತ್ತು ನನ್ನ ತಂಗಿ. ನಾನು ಹುಟ್ಟಿದ ವರ್ಷವೇ ಅಪ್ಪಂಗೆ ಪಾಲ್‌ಘಾಟ್‌ನಿಂದ ಕೊಯಮತ್ತೂರು, ಅಲ್ಲಿಂದ ಮದರಾಸು, ಮದರಾಸಿಂದ ಹೈದರಾಬಾದ್ ಹೀಗೆ. ಈ ಅಲೆದಾಟಗಳಲ್ಲಿಯೇ ನಾವು ಓದಿದೆವು. ಓದುತ್ತಲೇ ಬೆಳೆದೆವು. ಊರಲ್ಲದ ಊರುಗಳೊಂದಿಗೆ ಕೊನೆಗೆ ದೆಹಲಿಯಲ್ಲಿ ಓದಿದೆ. ದೆಹಲಿಯಲ್ಲಿ ಓದಿದವನೇ ಯಾವುದೋ ಒಂದು ಪೇಪರ್ ಸೇರಿದೆ. ಬೇಜಾರಾಯ್ತು ಬಿಟ್ಟೆ. ಈಗ ಈ ಡಿಪಾರ್ಟ್‌ಮೆಂಟಿಗೆ ಬಂದಿದ್ದೀನಿ. ಮುಂದಿನ್ನು ಯಾವ ಕಡೆಗೋ" – ಶಿಬಿಯು ಮಧ್ಯೆ ಯಾವುದೇ ಅರ್ಧ ವಿರಾಮವಾಗಲೀ; ಮಾತಿನಲ್ಲಿ ಯಾವುದೇ ದೀರ್ಘಸ್ವರ–ಅಲ್ಪಪ್ರಾಣ–ಮಹಾಪ್ರಾಣ ಇತ್ಯಾದಿಗಳ ನಡುವೆ ಕಿಂಚಿತ್ತು ವ್ಯತ್ಯಾಸವನ್ನು ತೋರದೆ ಮಾತಾಡಿದ. ಆದರೆ, ಮಾತಿನ ತುಂಬಾ ಯಾವುದೋ ಒಂದು ಲವಲವಿಕೆಯು ಆವರಿಸಿಕೊಂಡಂತೆ ಮೈಥಿಲಿಗೆ ಭಾಸವಾಯಿತು. ಬರಿಯ ವಾಕ್ಚಾತುರ್ಯದಿಂದಲೇ ಈ ಪುಣ್ಯಾತ್ಮ ಕೆಲಸಕ್ಕೆ ಸೇರಿಕೊಂಡಿರಬೇಕು ಎಂದು ಮೈಥಿಲಿಗೆ ಭಾಸವಾಯಿತು. ಮಾತಾಡುತ್ತಿದ್ದರೆ ತುಂಬಾ ಬುದ್ಧಿವಂತರ ಹಾಗೆ ಕಾಣಿಸುತ್ತದೆ ಎಂದುಕೊಂಡಳು. ಅದೇ ವೇಳೆಗೆ ಅವಳಿಗೆ ಅದನ್ನು ತಡೆಹಿಡಿಯುವುದು ಸಾಧ್ಯವಿಲ್ಲವೆಂದನ್ನಿಸಿ, "ಮಲೆಯಾಳಿ ಕುಟ್ಟಿಗಳೆಂದರೆ ಸಮುದ್ರದಲ್ಲಿ ಮನೆ ಕಟ್ಟುವವರು. ಎಲ್ಲಿ ಹೋದರೂ ಬದುಕುತ್ತಾರೆ. ಏನಿಲ್ಲವೆಂದರು ಕೊನೆಗೆ ಒಂದು ಟೀಸ್ಟಾಲ್ ಇಟ್ಟುಕೊಂಡಾದರೂ" ಅಂದಳು ಮೈಥಿಲಿ. ಶಿಬಿ "ಥ್ಯಾಂಕ್ಸ್" ಎಂದ ತುಂಬಾ ನಾಟಕೀಯವಾಗಿ. ಈ ಶಿಬಿಯಿಂದಲೇ ಈವೊತ್ತು ಈ ಆಫೀಸ್ ಇಷ್ಟೊಂದು ನಗುತ್ತಿದೆಯೆಂದು ಭಾವಿಸಿದಳು.

ಮತ್ತೊಬ್ಬ ದೇವವ್ರತ ಹೀಗೆ ಅದೇ ಆಫೀಸಿಗೆ–ಆಫೀಸಿನಿಂದ ಮೈಥಿಲಿಯ ಮನದೊಳಕ್ಕೆ ಪ್ರವೇಶಿಸಿದ! ಶಿಬಿಯು ಮೈಥಿಲಿಯ ಕಚೇರಿಗೆ ಬರುವಾಗ ಅವನು ಹೇಗೆ ಬಂದನೋ ಮೈಥಿಲಿಯು ಗಮನಿಸಿರಲಿಲ್ಲ. ಆದರೆ, ಅದು ಬೆಳಗಿನ ಹೊತ್ತು, ಕಚೇರಿಯ ಬಾಗಿಲು ತೆರೆದು ಕಸ ಗುಡಿಸುವವರು ಕಸ ಗುಡಿಸಿ; ಮೇಜು ಒರಸುವ

ಪ್ಯೂನ್ ಮೇಜೊರಸಿ ಒಬ್ಬೊಬ್ಬರೇ ಬಂದು ಅವರವರ ಕುರ್ಚಿಗಳ ಮೇಲೆ ಕೂರುವ ಹೊತ್ತು. ಆಗಲೇ ಬಂದಿದ್ದು ಶಿಬಿ. ತುಂಬಾ ನೀಟಾದ ಕಡು ನೀಲಿ ಬಣ್ಣದ ಶರಟು; ಅರೆ ಖಾಕಿ ಬಣ್ಣದ ಪ್ಯಾಂಟು ಹಾಕಿಕೊಂಡು ಬಂದವನು ಕಚೇರಿಯೊಳಗೆ ಕಾಲಿಡುವಾಗ ಅವನ ಬೂಟಿನ ಸದ್ದು ಕೇಳಿಯೇ ಮೈಥಿಲಿಯು ತಲೆಯೆತ್ತಿ ನೋಡಿದಳು. ಶಿಬಿಯು ಕೂಡಾ ಕಚೇರಿಯಲ್ಲಿ ಇರುವ ಯಾರನ್ನೂ ಅಷ್ಟಾಗಿ ಗಮನಿಸದೇ ನೇರವಾಗಿ ಅವಳ ಬಳಿ ಬಂದು ತನ್ನ ಪರಿಚಯವನ್ನು ಹೇಳಿದ್ದ. ಪರಿಚಯವನ್ನು ಹೇಳುವಾಗಲೇ ಮೈಥಿಲಿಯು ಇಷ್ಟೊಂದು ಮಾತಾಡಿದ್ದು. ಅನಂತರ ಮೈಥಿಲಿಯೇ ಉಳಿದವರಿಗೆ ಪರಿಚಯಿಸಿದಳು. ಶಿಬಿ ಮಾತ್ರ ಅವರ ಕಚೇರಿ ಬರುವಾಗ ಜೊತೆಯಲ್ಲಿ ಒಂದಿಷ್ಟು ನಗೆಯನ್ನು; ಒಂದಿಷ್ಟು ಉತ್ಸಾಹವನ್ನು ಮತ್ತು ಒಂದಿಷ್ಟು ಸಿಟ್ಟನ್ನು ಜೊತೆ ಜೊತೆಗೆ ತಂದಿದ್ದ. ಈ ಯಾವುದೂ ಚಾರುವಿನಲ್ಲಿ ಇರಲಿಲ್ಲ! ಇಡಿಯ ಕಚೇರಿಯೊಳಗೆ ಅಪ್ರತಿಮ ಉತ್ಸಾಹ ಮತ್ತು ಜೀವ ಕಳೆಯನ್ನು ಒಟ್ಟಾಗಿ ತಂದು ತುಂಬಿಸಿದ ಶಿಬಿಯನ್ನು ನೋಡಿ ಖುಶಿಪಟ್ಟವರಲ್ಲಿ ಮೈಥಿಲಿಯೂ ಒಬ್ಬಳು. ಆದರೆ, ಶಿಬಿಯಿಂದಾಗಿ ಮತ್ತೆ ಬೇರೊಂದು ತಿರುವು ಬರಲಿದೆಯೆಂದು ಅವಳಿಗೇ ಗೊತ್ತಿರಲಿಲ್ಲ!

ಮರೆತುಹೋದದ್ದು ಶಿಬಿಯ ವ್ಯಕ್ತಿತ್ವದ ದೆಸೆಯಿಂದಲೋ ಅಥವಾ ಬೇರಾವುದೇ ಕಾರಣದಿಂದಲೋ ಮೈಥಿಲಿಗೆ ತಿಳಿಯಲಿಲ್ಲ. ಮೈಥಿಲಿಗೂ ಕಚೇರಿಯ ಕೆಲಸದಲ್ಲಿ ತುಂಬಿದ ಉತ್ಸಾಹ ಸಂಜೆಯವರೆಗೂ ಉಳಿಯುವಂತಾಯಿತು. ಆದರೆ, ಅವಳು ಶಿಬಿಯನ್ನು ತುಂಬಾ ಬುದ್ಧಿವಂತ; ಉತ್ಸಾಹಿ ಹಾಗೂ ಗಟ್ಟಿ ವ್ಯಕ್ತಿತ್ವದವನೆಂದು ಮೊದಲ ನೋಟಕ್ಕೆ ಭಾವಿಸಿಕೊಂಡಳೋ ಆಗಲೇ ಅವಳು ತನ್ನ ಮನೆಯ ಗೋಡೆಯ ಮತ್ತೊಂದು ಇಟ್ಟಿಗೆಯನ್ನು ಮತ್ತು ಮನೆಯ ಹಿಂಬಾಗಿಲಿನ ಕದವನ್ನು ತೆರೆದು ಇಟ್ಟಂತೆ ಆಯಿತು.

ಅದೇ ವೇಳೆಗೆ ಕಚೇರಿಯಲ್ಲಿ ತಲೆ ತಗ್ಗಿಸಿಕೊಂಡು ಯಾವುದೋ ಒಂದು ರೀತಿಯ ಯೋಚನೆಯಲ್ಲಿ ಮಗ್ನನಾಗಿದ್ದ ಚಾರು ತನ್ನ ತಲೆಯನ್ನು ಎತ್ತಿದ: ಎದುರುಗಡೆ ಮತ್ತೆ ರೇಖಾ ಪಿಂಟೋ ತುಂಬಾ ತಿಳಿಯಾದ ನಗೆಯೊಂದಿಗೆ! ಚಾರು 'ಕೂತುಕೋ' ಅಂದ.

*

"ತಿರುಗಣಿಯ ಮಡುವಿನಲ್ಲಿ ಸಿಕ್ಕಿ ಹಾಕಿಕೊಂಡವನು ಮತ್ತು ಚಕ್ರವ್ಯೂಹ ಕೋಟೆಯ ಒಳಗಡೆ ಹೊಕ್ಕವನು ಮತ್ತೆ ಹೊರಗಡೆ ಬರುವುದು ಕಷ್ಟ. ಈ ತಿಳುವಳಿಕೆಯು ಕೊಂಚವಾದರೂ ನಮ್ಮ ತಲೆಯ ಒಂದು ಮೂಲೆಯಲ್ಲಿ ಇದ್ದರೂ ನಾವು ಹೇಗಾದರೂ ಬಚಾವು ಆಗುತ್ತೇವೆ. ಈ ಮಡುವಿಗೆ ಸಿಕ್ಕಿಬೀಳದ ಹಾಗೆ ಅಥವಾ

ಚಕ್ರವ್ಯೂಹದ ಕೋಟೆಯೊಳಗೆ ಬಾಗಿಲಲ್ಲಿ ನಿಂತ ಜಯದ್ರಥನನ್ನು ನೋಡಿಕೊಂಡು ವಾಪಾಸು ಅಗುತ್ತೇವೆ. ಅಪಾಯವನ್ನು ನಾವಾಗಿಯೇ ಮೈಮೇಲೆ ಎಳೆದುಕೊಳ್ಳುವುದು ಬೇಡ, ಅದುವೇ ಹೆಚ್ಚು ಅನುಕೂಲ! ಆದರೆ, ನಾಳೆಯಂತೂ ಏನಾದರೂ ಒಂದು ಆಗಿಯೇ ಆಗುತ್ತದೆ. ಇದರಲ್ಲಿ ನಮ್ಮ ನಿಲುವು ಏನು ಎಂಬುದನ್ನು ಮಾತ್ರ ನಾವು ತುಂಬಾ ಅಂದರೆ ತುಂಬಾ ಎಚ್ಚರದಿಂದ ಸ್ಪಷ್ಟಪಡಿಸಬೇಕು. ಹಾಗೂ ಯಾವುದೇ ಕಾರಣದಿಂದಾದರೂ ಸರಿ ನಮ್ಮ ಹೆಸರು ಈ ತಿರುಗಣಿಯ ಮಡುವಿನಲ್ಲಿ ಬೀಳದ ಹಾಗೆ ಎಚ್ಚರವಹಿಸಬೇಕು. ಯಾಕೆಂದರೆ ನಾವು ಮಾಡಲೇಬೇಕಾದ ಕೆಲಸಗಳು ಸಾಕಷ್ಟಿವೆ. ಈಗಲೇ ನಾವು ಎದುರು ಸಿಕ್ಕಿಬಿದ್ದರೆ ಮತ್ತೆ ಹೊರಗಡೆ ಬರುವುದು ಕಷ್ಟ ತುಂಬಾ ಎಚ್ಚರದಿಂದ ಕಾಲಿಡಬೇಕು ಮತ್ತು ನಾವು ಕಾಲಿಡುವಾಗ ಒಂಚೂರು ನಮ್ಮ ಪಾದದ ಗುರುತು ಕೆಸರಲ್ಲಿ ಕಾಣಿಸಕೊಳ್ಳಬಾರದು." ಎದುರುಗಡೆ ಸುತ್ತಲೂ ಅರ್ಧ ಚಂದ್ರಾಕೃತಿಯಲ್ಲಿ ಕೂತ ಹುಡುಗರಿಗೆ ಪುರುದೇವ ಭಟ್ಟಾಚಾರ್ಯ ಹೇಳಿದ. ದೂರದ ಊರಿಂದ ರಾತ್ರೀರಾತ್ರಿ ರೈಲಿನಲ್ಲಿ ಬಂದಿಳಿದವನು ಸರಿಯಾಗಿ ಮುಂಜಾವ ಬೆಳಕು ಹರಿಯುವುದಕ್ಕಿಂತ ಪೂರ್ವದ ಎರಡು ಗಳಿಗೆಯಲ್ಲಿ ಹೇಳಿದ. "ಈ ನಗರದಲ್ಲಿ ಗಲಭೆಯಾಗಿ ಇನ್ನೂ ಮೂರು-ನಾಲ್ಕು ದಿನಗಳು ಸಂದಿಲ್ಲ. ಇದುವೇ ಸರಿಯಾದ ಸಮಯ. ಈ ಸಮಯದಲ್ಲಿ ನಾವು ಕ್ರಿಯಾಶೀಲರಾದರೆ ಮುಂದಿನ ಎಲ್ಲಾ ಸನ್ನಿವೇಶಗಳು ನಮ್ಮದಾಗಿ ಪರಿವರ್ತನೆಯಾಗುತ್ತವೆ. ಸನ್ನಿವೇಶಗಳನ್ನು ನಮಗೆ ಬೇಕಾದಂತೆ ತಿರುಗಿಸಿಕೊಳ್ಳುವುದು ತುಂಬಾ ಜಾಣತನ. ಇದೇ ಸಂಜೆಯ ಆರು ಗಂಟೆಯ ಹೊತ್ತಿಗೆ ಸರಿಯಾಗಿ ಗಣಪತಿ ದೇವಾಸ್ಥನದ ಹತ್ತಿರವೇ ಈ ಬೆಂಕಿ ಹತ್ತಿಕೊಳ್ಳುವಂತೆ ನೋಡಿಕೊಳ್ಳಬೇಕು. ಇದರಲ್ಲಿ ಯಾರೂ-ಯಾವುದೇ ರೀತಿಯ ಸಾಕ್ಷಿ ಮತ್ತು ಆಧಾರಗಳನ್ನು ಅಲ್ಲಿಯೇ ಬಿಟ್ಟುಬಿಡಬೇಡಿ; ಯಾರೂ ಆ ಸ್ಥಳಕ್ಕೆ ಹೋಗುವಾಗ ಗುಂಪಿನಲ್ಲಿ ಹೋಗಬೇಡಿ." ಪುರುದೇವ ಭಟ್ಟಾಚಾರ್ಯ ಮುಂಜಾವ ಚುಮು ಚುಮು ಬೆಳಕಿನಲ್ಲಿ ಯಾವುದೇ ರೀತಿಯ ಸಣ್ಣ ಪುಟ್ಟ ಸುದ್ದಿಯೂ ಹರಡದಂತೆ ಎಚ್ಚರವಹಿಸಿಕೊಂಡೇ ರೈಲ್ವೇ ಸ್ಟೇಶನ್ನಿನಲ್ಲಿ ಇಳಿದಿದ್ದ ಮತ್ತು ಆ ಸ್ಟೇಶನ್ನಿನಲ್ಲಿ ಇಳಿದವನು ನೇರವಾಗಿ ಬಂದುದು ಅಂಬೇಡ್ಕರ್ ಕಾಲನಿಯಲ್ಲಿ. ಕೊಳಚೆಯೊಂದರ ಸಣ್ಣ ಮನೆಗೆ. ಅವನು ಅಲ್ಲಿ ಬಂದು ಇಳಿಯುವಾಗ ಮತ್ತು ಕೊಳಚೆ ಪ್ರದೇಶವೊಂದರ ಮನೆಗೆ ಬಂದು ಸೇರುವಾಗ ಯಾರ ಗಮನಕ್ಕೂ ಬಾರದ ಹಾಗೆ ನೋಡಿಕೊಂಡ. ಪುರುದೇವ ಭಟ್ಟಾಚಾರ್ಯ ರಾತ್ರೀರಾತ್ರಿ ರೈಲಿನಲ್ಲಿ ಬಂದು ಇಳಿಯುತ್ತಾನೆ. ಅವನನ್ನು ಕರೆದು ಅಂಬೇಡ್ಕರ್ ಕಾಲನಿಯ ಆಶ್ರಯ ಮನೆಯೊಂದರಲ್ಲಿ ಠಿಕಾಣಿ ಮಾಡುತ್ತಾನೆ ಎನ್ನುವುದರ ಬಗೆಗೆ ಸೂಚನೆ ಬಂದಿರುವುದೇ ಬುಧವಾರದ ರಾತ್ರಿ ಮತ್ತು ಪುರುದೇವ ಭಟ್ಟಾಚಾರ್ಯನನ್ನು ಕರೆತರಲು ರೈಲ್ವೇ ಸ್ಟೇಶನ್ನಿಗೆ ಹೋಗಬೇಕಾದ ಮತ್ತು ಅವನ ಜವಾಬ್ದಾರಿಯನ್ನು ಹೆಗಲ ಮೇಲೆ ಹೊರುವ ಕೆಲಸ

ಜೈನ್ ನಾಗೇಶನದು. ಜೈನ್ ನಾಗೇಶ ಹಗಲು ಮತ್ತು ರಾತ್ರಿ; ಸೂರ್ಯ ಮತ್ತು ಚಂದ್ರ – ಇವರೆಡರ ನಡುವೆ ಅಂಥಾ ದೊಡ್ಡ ವ್ಯತ್ಯಾಸವನ್ನು ಕಾಣದವನು. ಸೂರ್ಯ ನಮಸ್ಕಾರ; ದಂಡ ಮತ್ತು ಯೋಗಾಸನ ಪಟು. ಒಂಟಿಕಾಲಲ್ಲಿ ಅರ್ಧ ಗಂಟೆ ನಿಲ್ಲಬಲ್ಲ ಸಮರ್ಥ ಮತ್ತು ಅವನ ಒಂದೇ ಒಂದು ವಿಶಿಷ್ಟತೆಯೆಂದರೆ, ಸೊಂಟದಲ್ಲಿ ಒಂದು ಬೈಕ್ ಚೈನಿನ ಬೆಲ್ಟ್. ಈ ಬೆಲ್ಟ್ ಒಂದು ಬಿಟ್ಟರೆ ಮತ್ಯಾವ ಹತ್ಯಾರಗಳು ಆತನಿಗೆ ಬೇಕಾಗಿಲ್ಲ. ಭೂಗತ ಚಟುವಟಿಕೆಯನ್ನು ಶುದ್ಧಗೊಳಿಸುವಷ್ಟರಮಟ್ಟಿಗೆ ಜಾಣ ಮತ್ತು ಮೇಲಿನ ಯಾವುದೇ ಮೌಖಿಕ ಆದೇಶವನ್ನು ಒಂಚೂರು ತಪ್ಪದಂತೆ ನೆರವೇರಿಸಬಲ್ಲಷ್ಟು ಸಮರ್ಥ. ಸೊಂಟದಲ್ಲಿ ಯಾವಾಗಲೂ ಬೈಕ್ ಚೈನಿನ ಬೆಲ್ಟ್ ಇರುವುದರಿಂದಲೇ ಅವನನ್ನು ಜೈನ್ ನಾಗೇಶ ಎಂದು ಅವನ ಹತ್ತಿರದವರು ಕರೆಯುತ್ತಾರೆ. ಹಾಗೆ ಹೇಳಿಸಿಕೊಳ್ಳುವುದರಲ್ಲಿ ಅವನಿಗೂ ತುಂಬಾ ಆಸಕ್ತಿ. ಶುದ್ಧ ಸಸ್ಯಾಹಾರಿ ಮತ್ತು ಅಯ್ಯಂಗಾರಿ. ಪುರುದೇವ ಭಟ್ಟಾಚಾರ್ಯ ಬರುವುದನ್ನು ಮತ್ತು ಅವನನ್ನು ಕೊಳಚೆ ಪ್ರದೇಶದ ಒಂದು ಮನೆಯಲ್ಲಿ ಸೇರಿಕೊಳ್ಳಲು ಬೇಕಾದ ವ್ಯವಸ್ಥೆ ಮಾಡುವಂತೆ ಮೇಲಿನಿಂದ ಸೂಚನೆ ಬಂದಿತ್ತು. ಜೈನ್‌ನಾಗೇಶ ಅದನ್ನು ಎಷ್ಟೊಂದು ಶಿಸ್ತುಬದ್ಧವಾಗಿ ಮತ್ತು ಕ್ಲುಪ್ತವಾಗಿ ಮುಗಿಸಿದನೆಂದರೆ ಈ ಕುರಿತು ಯಾರಿಗೂ ಯಾವ ರೀತಿಯಲ್ಲೂ ನಾಗೇಶನ ಮೇಲೆ ಒಂದಿಷ್ಟು ಸಂದೇಹವೂ ಬರಲಿಲ್ಲ. ತುಂಬಾ ಲಕ್ಷಣವಾದ ಮುಖ. ಯಾವುದೇ ರೀತಿಯಲ್ಲಿಯೂ ಎಲ್ಲಿಯೂ ಸಿಕ್ಕಿಯೇ ಬೀಳದ ಜೈನ್ ನಾಗೇಶ. ಆ ದಿನವೂ ಅಂಬೇಡ್ಕರ್ ಕಾಲನಿಯ ಮನೆಯೊಂದಕ್ಕೆ ಪುರುದೇವ ಭಟ್ಟಾಚಾರ್ಯನನ್ನು ತಂದಿಳಿಸಿದ ಮೇಲೆ – ಅದು ಮೂರು ಗಂಟೆಗೆ ನಾಗೇಶ ತೆರಳಿದ್ದ. ಸರಿಯಾದ ಕಟ್ಟುಮಸ್ತಾದ ಮತ್ತು ಯಾವುದಕ್ಕೂ ಹಿಂಜರಿಯದ ನಗರದ ಕೆಲವೇ ಕೆಲವು ಹುಡುಗರಿಗೆ ಮಾತ್ರ ಸರಿಯಾಗಿ ಐದು ಗಂಟೆಗೆ ಬಂದು ಸರಕಾರಿ ಶಾಲೆಯ ಬಯಲಿನ ಎದುರು ಇರುವ ಅಶ್ವತ್ಥದ ಮರದ ಕೆಳಗೆ ಬಂದು ಸೇರುವಂತೆ ಸೂಚಿಸಿದ್ದ. ನಾಗೇಶನ ಸೂಚನೆಯಂತೆ ಆ ಹುಡುಗರು ಬಂದು ಕೂತಿದ್ದರು. ಅದೇ ಹೊತ್ತಿಗೆ ಬಂದ ಪುರುದೇವ ಭಟ್ಟಾಚಾರ್ಯ ತನ್ನ ಸಂಕ್ಷಿಪ್ತವಾದ ವಿವರಣೆಯನ್ನು ಕೊಟ್ಟ ಮತ್ತು ಎರಡೇ ಎರಡು ದಿನದಲ್ಲಿ ಮತ್ತೆ ಶಾಂತಗೊಂಡ ನಗರವೊಂದು ಹೊತ್ತಿ ಉರಿಯಲಿದೆ. ಅದೂ ಯಾವುದೇ ಸರಿಯಾದ ಕಾರಣವಿಲ್ಲದೆ – ಬೇನಾಮಿಯಾದ ಕಾರಣವೊಂದಕ್ಕೆ! ಬೇನಾಮಿಯಾದ ಕಾರಣದ ನಕ್ಷೆಯನ್ನು ತಯಾರಿಸಿಕೊಟ್ಟು ತೆರಳಿದ ಪುರುದೇವ ಭಟ್ಟಾಚಾರ್ಯ ಆಶ್ರಯ ಮನೆಯಲ್ಲಿ ತಂಗಿದವನು ಮತ್ತೆ ಸರಿಯಾಗಿ ಎಂಟು ಗಂಟೆಗೆ ನಗರದ ಮೂಲೆಯೊಂದರಿಂದ ಹೊರಬಂದು – ಹೈಟೆಕ್ ಬಸ್ಸಲ್ಲಿ ಹೈದರಾಬಾದ್ ಕಡೆಗೆ ತೆರಳಿದ. ಅವನು ಯಾರು–ಯಾಕೆ ಬಂದ–ಯಾಕೆ ಹೋದ ಎಂದು ಕೇಳುವುದಕ್ಕೆ ಬೆಳಗಿನ ಎಂಟು ಗಂಟೆಯ ಅವಸರದಲ್ಲಿದ್ದ ಜನಕ್ಕೆ ಪುರುಸೊತ್ತು ಇದ್ದಿರಲಿಲ್ಲ! ಆದರೆ, ಪುರುದೇವ ಭಟ್ಟಾಚಾರ್ಯ ಎಂದು ತನ್ನವರಿಗೆ

ಪರಿಚಯಿಸಿದವನ ನಿಜವಾದ ಹೆಸರು ಮಾತ್ರ ಬೇರೆ. ಅದು ಚೈನ್ ನಾಗೇಶನಿಗೂ ಗೊತ್ತಿರಲಿಲ್ಲ. ನಗರದ ಗಣಪತಿ ದೇವಸ್ಥಾನದಲ್ಲಿ ಸಂಜೆ ಮತ್ತೊಂದು ಸಣ್ಣ ಬೆಂಕಿಯಿಡುವುದಕ್ಕೆ ಹೇಳಿಕೊಟ್ಟು ಹೋದ ಪುರುದೇವ ಭಟ್ಟಾಚಾರ್ಯ ಮತ್ತೆ ಮರಳಿ ನಗರಕ್ಕೆ ಬರಲಿಲ್ಲ. ಹೆಜ್ಜೆಯ ಗುರುತು ಬೀಳದಂತೆ ಜಾರಿಕೊಂಡ ನಿಪುಣ!

ಪುರುದೇವ ಭಟ್ಟಾಚಾರ್ಯ ಮತ್ತು ನಾಗೇಶ ಅಶ್ವತ್ಥ ಮರದ ಕೆಳಗಡೆ ಕುಳಿತು ಮಾತಾಡುತ್ತಿರುವ ಹೊತ್ತಿನಲ್ಲಿಯೇ, ರೇಖಾ ಪಿಂಟೋ ಮನೆಯಲ್ಲಿ ಮುದುಡಿಕೊಂಡು ಮಲಗಿದವಳು ಮತ್ತೊಮ್ಮೆ ತಿರುಗಿ ಮಲಗಿಕೊಂಡಳು. ಸರಿದು ಮೇಲೆ ಬಂದ ನೈಟಿಯನ್ನು ಮಲಗಿದಲ್ಲಿಂದಲೇ ಸರಿಸಿ, ಸರಿಮಾಡಿಕೊಂಡಳು, ಏಳುವ ಮನಸ್ಸಾಗಲಿಲ್ಲ. ಯಾಕೋ ಸಣ್ಣ ಔದಾಸೀನ್ಯವೊಂದು ಬಂದು ಅವಳ ಜೊತೆ ಹಾಸುಗೆಯಲ್ಲಿ ಮಲಗಿದಂತೆ ಅನಿಸತೊಡಗಿತು. "ರೇಖಾ ಏಳಮ್ಮ, ಎದ್ದು ಟೀ ಇಡು." ಅಮ್ಮ ಕರೆದಾಗ ಮತ್ತೊಮ್ಮೆ ತಿರುಗಿ ಮಲಗಿದಳು. ರೇಖಾ ತಿರುಗಿ ಮಲಗಿದಳು. ಜೆಸಿಂತಾ ಬಾಯಿ, "ಏಳು, ಎಷ್ಟು ಹೊತ್ತು ಹೀಗೆ ಮಲಗಿರ್ತಿಯಾ?" ಎಂದಳು. ಜೆಸಿಂತಾ ಬಾಯಿ ಮತ್ತೊಮ್ಮೆ ತನ್ನ ಬಾಯಿಯನ್ನು ಸ್ವಲ್ಪ ದೊಡ್ಡದು ಮಾಡಿದಳು. ಜೆಸಿಂತಾ ಬಾಯಿಯ ಸ್ವರ ಸ್ವಲ್ಪ ದೊಡ್ಡದಾಗಿರುವುದನ್ನು ನೋಡಿ ಮತ್ತೆ ರೇಖಾ ಏಳಲೇಬೇಕಾಯಿತು. ರೇಖಾ ಕಣ್ಣು ಹೊಸಕಿಕೊಂಡು, ಹಾಸಿಗೆಯನ್ನು ಬಿಟ್ಟೆದ್ದಳು. ಸರಿದುಹೋದ ನೈಟಿಯನ್ನು ಸರಿಪಡಿಸಿಕೊಂಡಳು – ಹಾಗೆಯೇ ತಲೆಗೂದಲನ್ನು ಸುರುಳಿ ಸುತ್ತಿಕೊಂಡಳು. ಅವಳು ಸುತ್ತಿಕೊಂಡ ತಲೆಗೂದಲೇ ಅವಳನ್ನು ಹಂಗಿಸಿದಂತೆ ಅನಿಸಿತು. ರೇಖಾ ಎದ್ದವಳೇ ಹಾಸಿಗೆಯನ್ನು ಸುತ್ತಿಟ್ಟುಕೊಂಡು ಮತ್ತೆ ಬಚ್ಚಲು ಮನೆಗೆ ಹೊರಟಳು. ಅವಳು ಬಚ್ಚಲು ಮನೆಯಲ್ಲಿ ನಿಂತುಕೊಂಡು ಬ್ರಶ್ ಮಾಡುತ್ತಿರುವ ಗಳಿಗೆಗೆ ಸರಿಯಾಗಿಯೇ ಅಶ್ವತ್ಥ ಮರದ ಕೆಳಗೆ ಕುಳಿತುಕೊಂಡ ಚೈನ್ ನಾಗೇಶನಿಗೆ ಕಾರ್ಯತಂತ್ರದ ಯೋಜನೆಯೊಂದನ್ನು ಪುರುದೇವ ಭಟ್ಟಾಚಾರ್ಯ ವಿವರಿಸುತ್ತಾ "ಯಾವುದೇ ಕಾರಣದಿಂದ ನೀನು ಸಿಕ್ಕಿಹಾಕಿಕೊಳ್ಳಬೇಡ, ದೊಂಬಿಯೇ ಆಗಲೀ, ಗಲಾಟೆಯೇ ಆಗಲಿ ಅದರ ನಡುವೆ ನೀನಿರಬಾರದು ಮತ್ತು ನಿನ್ನ ಹೆಸರು ಚಾಲ್ತಿಗೆ ಯಾವುದೇ ಕಾರಣದಿಂದ ಬಾರದಂತೆ ನೋಡಿಕೋ. ನಮ್ಮ ಪಡೆಯಲ್ಲಿ ಮೊದಲಿನ ಹುಡುಗರನ್ನು ಮಾತ್ರ ಕಳಿಸು. ತರಬೇತಿ ಹೊಂದವರು; ಗುಟ್ಟಾಗಿ ಕೆಲಸ ಮಾಡುವವರು; ಯಾವುದೇ ಕಾರಣದಿಂದ ಸಿಕ್ಕಿಹಾಕಿಕೊಳ್ಳಬಾರದು" ಎನ್ನುತ್ತಿದ್ದ.

*

ಬೆಳ್ಳಂಬೆಳಗಿನ ಸುಂದರವಾದ ಹೊತ್ತಿನಲ್ಲಿಯೇ ಮೈಥಿಲಿಯು ತುಂಬಾ ಗಡಿಬಿಡಿಯಿಂದ ಮತ್ತು ಅವಸರದಿಂದ ಅಡುಗೆಯ ಸಿದ್ಧತೆ ಮಾಡುತ್ತಿದ್ದಳು. ಹಾಗೆ ಸಿದ್ಧತೆಯನ್ನು ಮಾಡುತ್ತಿರುವಾಗಲೇ ಚಾರು ಎದ್ದು ಬಂದ ಮತ್ತು ಬಂದವನೇ "ಟೀ

ಇದು ಮೈಥಿಲಿ" ಎಂದ. "ಇಲ್ಲಿ ಅಡುಗೆ ಮಾಡುವುದು ನಿಮಗೆ ಕಾಣಿಸುವುದಿಲ್ಲವೇನೋ ಈವತ್ತು ಮಧ್ಯಾಹ್ನದ ಟಿಫನ್ ಬಾಕ್ಸ್‌ಗೆ ಪುಳಿಯೋಗರೆ ತಯಾರು ಮಾಡಬೇಕು. ನಮ್ಮ ಆಫೀಸಿಗೆ ಹೊಸದಾಗಿ ಬಂದ ಶಿಬಿಯವರಿಗೆ ಪುಳಿಯೊಗರೆ ಅಂದ್ರೆ ತುಂಬಾ ಇಷ್ಟವಂತೆ! ಅವರಿನ್ನೂ ಮದುವೆಯಾಗಿಯೂ ಬ್ಯಾಚುಲರ್. ಅವರ ಹೆಂಡತಿ ಬಂದಿಲ್ಲ. ಮಧ್ಯಾಹ್ನ ಒಮ್ಮೊಮ್ಮೆ ಊಟಾನೇ ಮಾಡೋಲ್ಲ" ಎಂದು. ಅವಳ ಮೈಲಿಯುದ್ಧದ ಭಾಷಣವನ್ನು ಕೇಳುವ ತಾಳ್ಮೆಯಂತೂ ಚಾರುಗೆ ಇರಲಿಲ್ಲ. ಅವನೇ ಟೀ ಪಾತ್ರೆಯನ್ನು ತೊಳೆದು ಟೀ ಯನ್ನು ಇಟ್ಟ.

"ಹಲ್ಲು ಕೂಡಾ ಉಜ್ಜದೇ ಅದೇನು ಟೀ ಕುಡಿತೀರೋ ಏನೋ? ಬರೀ ಗಲೀಜು ಕಣ್ರೀ ನೀವು" ಎಂದಳು ಮೈಥಿಲಿ. ಒಮ್ಮೆ ಅವಳ ಮುಖವನ್ನು ನೋಡಿದ ಚಾರು ಮತ್ತೆ ಟೀ ಪಾತ್ರೆಯಲ್ಲಿ ಟೀ ಕುದಿಯುವುದನ್ನೇ ಕಾಯುತ್ತಾ ನಿಂತ ಮತ್ತು ಅಲ್ಲಿಯೇ ದೊಡ್ಡದಾಗಿ ಆಕಳಿಸಿದ. "ಛೀ" ಎನ್ನುತ್ತಾ ಮೈಥಿಲಿಯು ಮೂಗು ಮುಚ್ಚಿಕೊಂಡಳು!

ಲೆಕ್ಕಾಚಾರವೆಲ್ಲಾ ಸರಿಯಾಗಿಯೇ ಉಳಿದಿದ್ದರೆ ಇಷ್ಟು ಹೊತ್ತಿಗೆ ಏನೋ ಆಗಿಬಿಡುತ್ತಿದ್ದೆ. ಆದರೆ, ಒಮ್ಮೊಮ್ಮೆ ಹಣೇಬರಹ; ಗ್ರಹಚಾರ ಅಂತ ಇರುತ್ತದಲ್ಲ, ಅದು ನಮ್ಮನ್ನು ಮೇಲಕ್ಕೆ ಬರಲು ಬಿಡುವುದಿಲ್ಲ. ಸುಮ್ಮನೇ ಸತಾಯಿಸುತ್ತಾ ಇರುತ್ತೆ. ಇಷ್ಟು ಹೊತ್ತಿಗೆ ನಾನು ಏನೋ ಆಗಿರುತ್ತಿದ್ದೆ. ಆದರೆ, ಏನೂ ಆಗಲಿಲ್ಲ. ದೆಸೆಯು ತಿರುಗಿತು ಎಂದಾದರೆ ಏನೂ ಆಗಬಹುದು. ಶನಿಯ ಕಾಟ ಇನ್ನೂ ಎರಡು ವರ್ಷ ಇದೆಯಂತೆ. ಅದು ಮುಗಿಯುವ ತನಕ ಯಾವುದೇ ರೀತಿಯ ಉದ್ಧಾರವಾಗೋಲ್ಲ ಅಂತ ಜಾತಕ ನೋಡಿ ಜೋಯಿಸರು ಹೇಳಿದರು. ಅವರು ಹೇಳಿದ್ದೇ ಸರಿ; ನಾನು ಏನು ಮುಟ್ಟಿದರೂ ಮಣ್ಣು ಆಗಿಬಿಡುತ್ತೆ. ಯಾವುದರಲ್ಲಿಯೂ ಸುಖವಿಲ್ಲ. ಸುಖವೊಂದು ಸಿಕ್ಕಿದರೆ ಅದಕ್ಕಿಂತ ದೊಡ್ಡದು ಯಾವುದಿದೆ ಹೇಳು? ಕೆಲವರಿಗೆ ಹಾಗಲ್ಲ, ಅದೃಷ್ಟ ಅನ್ನೋದು ಒದ್ದುಕೊಂಡು ಮನೆಬಾಗಿಲಿಗೆ ಬಂದುಬೀಳುತ್ತೆ. ಯಾರೂ, ಯಾವುದನ್ನೂ ಕೇಳಬೇಕಿಲ್ಲ. ಬ್ರಹ್ಮ ಹಣೆಯಲ್ಲಿಯೇ ಬರೆದಿರುತ್ತಾನೆ. ಅಂಥವರು ಕಬ್ಬಿಣ ಮುಟ್ಟಿದರೂ ಅವರಿಗೆ ಅದು ಚಿನ್ನವಾಗುತ್ತೆ ನಮ್ಮಂಥವರದ್ದು ನೋಡಿ ಈ ಕತೆ. ಯಾವುದಕ್ಕೂ ಕೈ ಹಾಕಿದರೂ ಸುಖವಿಲ್ಲ." ಬಾಯಿಯಲ್ಲಿ ತುಂಬಿ ಜರ್ದಾವನ್ನು ಅಗಿಯುತ್ತಾ ವೆಂಕಟರಮಣ ಮೈಥಿಲಿಯೊಂದಿಗೆ ಹೇಳುತ್ತಿದ್ದ. ಮೈಥಿಲಿ ಅವನನ್ನು ಒಮ್ಮೆ ನೋಡಿದವಳು ಮತ್ತೆ ತಲೆಯನ್ನು ತಗ್ಗಿಸಿದಳು ಮತ್ತು ಫೈಲಲ್ಲಿ ಕಣ್ಣಾಡಿಸತೊಡಗಿಸಿದಳು. ವೆಂಕಟರಮಣ ಮತ್ತೆ ಬಾಯಿಯಲ್ಲಿ ತುಂಬಿಕೊಂಡ ಜರ್ದಾದ ರಸವನ್ನು ನುಂಗುತ್ತಾ "ನಂದು ಜಾತಿಯೇ ಸರಿಯಿಲ್ಲ ಬಿಡ್ರಿ. ಈ ಜನರಲ್ ಮೆರಿಟ್‌ನವರ ಹಣೇಬರಹವೇ ಇಷ್ಟು. ಇಷ್ಟು ಹೊತ್ತಿಗೆ ಆಫೀಸಿನಲ್ಲಿ ಸೂಪರಿಂಟೆಂಡೆಂಟ್ ಆಗಬೇಕಾದವನು ಈಗಲೂ ಕ್ಲಾರ್ಕ್ ಆಗಿ ಕೊಳೀತಾ ಇದ್ದೇನೆ. ನನ್ನ ಜನ್ಮ ನಕ್ಷತ್ರವೇ

ಸರಿಯಿಲ್ಲ. ಯಾರು–ಏನು ಮಾಡೋಕಾಗುತ್ತೆ"– ಮೂಗಿನ ತುದಿಯ ತನಕ ಬಂದ ಕನ್ನಡಕವನ್ನು ಸರಿಪಡಿಸುತ್ತಾ ಹೇಳಿದ. ನಿತ್ಯ ಬೆಳಗಿನ ಸಂಧ್ಯಾವಂದನೆಯನ್ನು ಮುಗಿಸಿ, ಸರಿಯಾಗಿ ಒಂದು ಕೆಂಪು ನಾಮವನ್ನು ಎಳೆದುಕೊಂಡು ಬರುವ ವೆಂಕಟರಮಣನಿಗೆ ಸರಿಯಾಗಿ ವಯಸ್ಸು ಐವತ್ತೊಂದು. "ಕೆಲವು ಜಾತಿಯಲ್ಲಿ ಹುಟ್ಟೋಕೆ ಪುಣ್ಯ ಮಾಡಿರಬೇಕು ಮೇಡಂ." ವೆಂಕಟರಮಣ ಮತ್ತೆ ತನ್ನ ಪುರಾಣದ ಕಂತೆಯನ್ನು ಬಿಚ್ಚುವುದಕ್ಕೆ ಶುರುಮಾಡಿದ. ಜಾತಿಯಲ್ಲಿ ಬ್ರಾಹ್ಮಣರಾಗಿ ಹುಟ್ಟುವುದೇ ಶ್ರೇಷ್ಠವೆಂದು ನಂಬಿರುವ ವೆಂಕಟರಮಣನಿಗೆ ಇತರ ಜಾತಿಯವರು ಎಂದರೆ ಅಷ್ಟಕ್ಕಷ್ಟೆ. ಗಾಯತ್ರಿ ಮಂತ್ರೋಪದೇಶವನ್ನು ಪಡೆಯುವ ಹಕ್ಕಿರುವುದು ಬ್ರಾಹ್ಮಣರಿಗೆ ಹೊರತು ಮತ್ತಾರಿಗೂ ಅಲ್ಲವೆಂದು ಸಮಯ ಸಿಕ್ಕಾಗಲೆಲ್ಲಾ ಹೇಳುತ್ತಲೇ ಇರುತ್ತಾನೆ. ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದ ಧರ್ಮವೆಂದರೆ ಅದು ಹಿಂದೂ ಧರ್ಮ, ಶ್ರೇಷ್ಠವಾದ ಜಾತಿಯೆಂದರೆ ಅದು ಬ್ರಾಹ್ಮಣರದು. ಶ್ರೀ ಕೃಷ್ಣ ಪರಮಾತ್ಮನ ವಿರಾಟ್ ಸ್ವರೂಪದಲ್ಲಿ ಹಣೆಯಿಂದ ಬಂದವರು ಬ್ರಾಹ್ಮಣರು ಮತ್ತು ಭುಜದಿಂದ ಕ್ಷತ್ರಿಯರು, ತೊಡೆಯಿಂದ ವೈಶ್ಯರು ಹಾಗೂ ಕಾಲಿನಿಂದ ಶೂದ್ರರು ಎನ್ನುವುದು ಅವನ ವಾದ. ಸಮಯ ಸಿಕ್ಕಾಗಲೆಲ್ಲಾ ಇಡೀ ಮಾತನ್ನು ಹೇಳುತ್ತಲೇ ಬಂದಿದ್ದಾನೆ. ಈ ವೆಂಕಟರಮಣನನ್ನು ಕಂಡರೆ ಅದೇಕೋ ಕಿರಿ ಕಿರಿಯಾಗುತ್ತದೆ. 'ಟಿಪಿಕಲ್ ಬ್ರಾಹ್ಮಣರ ಬುದ್ಧಿ' ಎಂದು ಮನಸ್ಸಿನಲ್ಲಿಯೇ ಬೈಯುತ್ತಾಳೆ ಮತ್ತು ಈ ವೆಂಕಟರಮಣನ ಉಬ್ಬಿದ ಹೊಟ್ಟೆ, ಅದಕ್ಕೆ ಸರಿಯಾಗಿ ಅವನ ಯಾವುದೋ ಹಳೆಯ ಕಾಲದ ಫ್ಯಾಶನ್‌ಗಳನ್ನು ನೆನಪಿಸುವ ಪ್ಯಾಂಟ್; ದಪ್ಪನೆಯ ಚಾಳೀಶು; ಮತ್ತು ಯಾವುದೇ ಕಾರ್ಯ–ಕಾರಣ ಸಂಬಂಧವಿಲ್ಲದೇ ಇರುವ ಹತ್ತಾರು ವಿಷಯಗಳನ್ನು ಅವನು ಹೇಳುವ ಕ್ರಮ – ಇದೆಲ್ಲವೂ ಮೈಥಿಲಿಗೆ ತುಂಬಾ ಕಿರಿ ಕಿರಿಯುಂಟುಮಾಡುವ ವಿಷಯಗಳು. ಅದಕ್ಕೆ ಸರಿಯಾಗಿ ಯಾವಾಗ ನೋಡಿದರೂ ಬಾಯಿ ತುಂಬಾ ಜರ್ದಾ. ಆಗಾಗ ಮೂಗಿನಲ್ಲಿ ಬರುವ ಸಿಂಬಳವನ್ನು ಕೈಯಲ್ಲೇ ಒರೆಸಿಕೊಂಡು, ಮತ್ತೆ ಅದನ್ನು ಟೇಬಲ್ ಕ್ಲಾತ್‌ಗೆ ಅವನು ಒರಸುವುದನ್ನು ನೋಡಿ ಮೈಥಿಲಿ ಮಹಾ ಗಲೀಜು ಪ್ರಾಣಿಯೆಂದುಕೊಳ್ಳುತ್ತಾಳೆ. ಆದರೆ, ಇಡೀ ವೆಂಕಟರಮಣ ತಾನೇ ಸಾಕ್ಷಾತ್ ತಿರುಪತಿ ವೆಂಕಟರಮಣನ ಅಪರಾವತಾರವೆಂದು, ಕಾನೂನು–ಕಾಯಿದೆಗಳು ತನಗೊಬ್ಬನಿಗೇ ತಿಳಿದಿದೆಯೆಂದು ಭಾವಿಸಿಕೊಂಡಿದ್ದಾನೆ. ಮತ್ತು ಅದು ಸ್ವಲ್ಪಮಟ್ಟಿಗೆ ನಿಜವೂ ಆಗಿತ್ತು. ಯಾವ ಕಾನೂನು ಯಾವ ರೀತಿಯಲ್ಲಿ ಹೇಳುತ್ತೆ; ಅದರ ಕಲಂನಲ್ಲಿ ಏನು ಹೇಳುತ್ತೆ. ಕಾನೂನು ತಪ್ಪಿಸಿಕೊಳ್ಳಲು ಯಾವ ಯಾವ ರೀತಿಯ ಹಾದಿಗಳಿವೆ ಎಂಬುದು ವೆಂಕಟರಮಣನಿಗೆ ಗೊತ್ತು. ಈ ವೆಂಕಟರಮಣನಿಗೆ ಅಂತರಾಳದಲ್ಲಿ ತುಂಬಿಕೊಂಡಿದ್ದ ಹಮ್ಮು ಶಿಬಿಯು ಬಂದ ಮೊದಲ ದಿನವೇ ಇಳಿಯಿತು. ಯಾವ ಕಾನೂನು, ಅದರ ಸಹ ಸೆಕ್ಷನ್‌ಗಳನ್ನು ಬೇಕು ಬೇಕಾದ ರೀತಿಯಲ್ಲಿ ಶಿಬಿಯೇ ಹೇಳುವುದಕ್ಕೆ ಶುರುಮಾಡಿದ. ವೆಂಕಟರಮಣ

ಮುನ್ನೂರ ಎಂಟನೆಯ ಕಲಂ ಎಂದರೆ, ಶಿಬಿಯು ಮೊದಲ ದಿನವೇ ಐನೂರ ಎಂಟನೆಯ ಕಲಂನ "ಬಿ" ಸೆಕ್ಷನ್ ನೋಡಿ ಎಂದು ಷರಾ ಬರೆದು ಫೈಲನ್ನು ವಾಪಾಸು ವೆಂಕಟರಮಣನಿಗೆ ಕಳಿಸಿದ್ದ. ಬ್ರಾಹ್ಮಣರೆದಂರೆ ಬುದ್ಧಿವಂತರು ಎಂಬ ವೆಂಕಟರಮಣನ ಅಹಂಕಾರ ಫೈಲಿನ ಒಂದು ಷರಾದಲ್ಲಿ ಮುಳುಗಿದರೆ, ಅದೇ ಶಿಬಿಯು ಮಹಾಬುದ್ಧಿವಂತನೆಂದು ಮೈಥಿಲಿಯು ತಿಳಿದುಕೊಂಡಳು ಮತ್ತು ಶಿಬಿಯು ಒಬ್ಬನೇ ಇದ್ದಾನೆಂದು ಮಧ್ಯಾಹ್ನದ ಹೊತ್ತು ಊಟವನ್ನು ಮಾಡುವುದಿಲ್ಲವೆಂದು ತಿಳಿದುಕೊಂಡಳು. ಅದಕ್ಕಾಗಿಯೇ ಶಿಬಿ ಪುಳಿಯೋಗರೆಯನ್ನು ತುಂಬಾ ಮುತುವರ್ಜಿಯಿಂದ ತಯಾರಿಸಿಕೊಂಡು ಬಂದಿದ್ದಳು. ಬಂದವಳಿಗೆ, ಮೊದಲು ವೆಂಕಟರಮಣನ ಭಾಷಣವನ್ನು ಕೇಳುವ ಅವಕಾಶ ಸಿಕ್ಕಿತು. ಆವಾಗಲೇ ಅವನು ಹೇಳಿದ್ದು: ಲೆಕ್ಕಾಚಾರವು ಸರಿಯಾಗಿದ್ದರೆ ಇಷ್ಟು ಹೊತ್ತಿಗೆ ನಾನು ಏನೋ ಆಗಿರುತ್ತಿದ್ದೆ. ಅವರಿಬ್ಬರೂ ಮಾತಾಡುತ್ತಿರುವಾಗಲೇ ಅಲ್ಲಿಗೆ ಶಿಬಿ ಬಂದ. "ಏನು ವೆಂಕಟರಮಣರೇ, ಏನೋ ಹೇಳ್ತಾ ಇದ್ರಿ?" ಎಂದ. ವೆಂಕಟರಮಣ "ಏನೂ ಇಲ್ಲಾ ಸಾರ್, ನೀವು ತುಂಬಾ ಒಳ್ಳೆಯವರು ಮತ್ತು ಬಹಳ ಬುದ್ಧಿವಂತರು ಅಂತಾ ಹೇಳ್ತಾ ಇದ್ದೆ" ಅಂದವನೇ ಮತ್ತೆ ಫೈಲು ನೋಡಲು ಶುರುಹಚ್ಚಿದ. "ಮೈಥಿಲಿಯವರೇ, ಈವತ್ತು ಸಂಜೆಯೊಳಗಡೆ ಕೆಲಸವೆಲ್ಲಾ ಫೈಲು ಕ್ಲಿಯರ್ ಮಾಡಿಬಿಡಬೇಕು" ಎಂದವನೇ ತನ್ನ ಬೂಟಿನ ಸದ್ದಿನೊಂದಿಗೆ ತನ್ನ ಟೇಬಲ್ ಬಳಿಗೆ ಹೋದ. "ಶಿಬಿ ಈವತ್ತು ಮತ್ತೆ ಹಳದಿ ಕಲರ್‌ನ ಟೀಶರ್ಟ್ ಮತ್ತು ಕಪ್ಪು ಪ್ಯಾಂಟ್ ಹಾಕಿಕೊಂಡಿದ್ದಾನೆ. ಡ್ರೆಸ್ ಬಗ್ಗೆ ಎಷ್ಟೊಂದು ಆಸ್ಥೆಯನ್ನು ಮತ್ತು ಶಿಸ್ತನ್ನು ಈ ಶಿಬಿಯು ರೂಪಿಸಿಕೊಂಡಿದ್ದಾನೆ. ಆದರೆ ಒಂದೇ ಒಂದು ದಿನ ಕೂಡಾ ಚಾರು ಹೀಗಿರಲಿಲ್ಲವಲ್ಲಾ" ಎಂದು ಮೈಥಿಲಿಯು ಭಾವಿಸಿಕೊಳ್ಳುತ್ತಿರುವಾಗಲೇ ವೆಂಕಟರಮಣ "ಮೇಡಂ" ಅಂದ. ಮೈಥಿಲಿ ಮತ್ತೆ ನೆಲದ ಮೇಲೆ ಕಾಲಿಟ್ಟಳು. ಕನಸಿನಿಂದ ನಿಜಕ್ಕೆ ಬಂದಹಾಗೆ, "ಈವತ್ತು ಸಾಹೇಬ್ರು ತುಂಬಾ ಗರಿ ಗರಿಯಾಗಿ ಬಂದಿದ್ದಾರೆ ಅಲ್ವಾ ಮೇಡಂ" ಎಂದು ಹೀ, ಹೀ ಎಂದು ನಗಾಡಿದ. ಅವನು ನಗಾಡುವ ಪ್ರಯತ್ನ ಮಾಡುವಾಗಲೇ ಬಾಯಿಯಲ್ಲಿ ತುಂಬಿಕೊಂಡಿದ್ದ ಎಲೆಯಡಿಕೆಯು ಬಾಯಿಂದ ಒಸರಿತು. ವೆಂಕಟರಮಣ ಕರ್ಚೀಫಿನಿಂದ ಬಾಯನ್ನು ಒರಸಿಕೊಂಡ. ಆಗಲೇ ಅಟೆಂಡರ್ ಬಂದು "ಮೇಡಂ, ಸಾಹೇಬ್ರು ಕರೀತಾವ್ರೆ" ಅಂದ. ಮೈಥಿಲಿ ಎದ್ದು ಹೊರಟಳು–ಸಣ್ಣ ಸಂಭ್ರಮದೊಂದಿಗೆ. ವೆಂಕಟರಮಣ ಕಿರುಗಣ್ಣಿಂದ ನೋಡಿದ. ಆದರೆ, ಮೈಥಿಲಿಯು ಶಿಬಿಯ ಛೇಂಬರ್‌ನ ಒಳಗಡೆಗೆ ಹೋಗುವ ಹೊತ್ತಿನಲ್ಲಿಯೇ ಚಾರುವಿಗೆ ಎಸ್.ಟಿ.ಡಿ. ಬೂತೊಂದರಿಂದ ರೇಖಾ ಪಿಂಟೋ ಫೋನ್ ಮಾಡಿದಳು. "ನೀವು ಹೇಳಿದ ಲಾಯರನ್ನು ಭೇಟಿಯಾಗಿದ್ದೇನೆ ಸಾರ್ ತುಂಬಾ ಒಳ್ಳೆಯವರು, ಡೈವೋರ್ಸಿಗೆ ಬೇಕಾದ ಎಲ್ಲಾ ಫಾರಂಗಳಿಗೆ ಸಹಿಹಾಕಿ ಬಂದಿದ್ದೇನೆ ಸಾರ್ ಬಹುಶಃ ಬೇಗನೆ ಇದೆಲ್ಲವನ್ನು

ಮುಗಿಸಬಹುದು ಎಂದು ಹೇಳಿದ್ದಾರೆ. ತುಂಬಾನೇ ಥ್ಯಾಂಕ್ಸ್ ಸಾರ್. ನಾನು ನಾಳೆ ನಿಮ್ಮನ್ನ ಭೇಟಿಯಾಗಲಾ ಸಾರ್?" ಎನ್ನುತ್ತಿರುವಾಗಲೇ ಈ ಕಡೆಯಿಂದ, "ಬೇಡ ರೇಖಾ, ನಾನೇ ನಿನ್ನನ್ನು ಭೇಟಿಯಾಗ್ತೇನೆ. ನಿನ್ನ ಕೆಲಸದ ಬಗ್ಗೆ ಮಾತ್ರ ಯೋಚಿಸಬೇಕಲ್ಲಾ? ಅದನ್ನು ನೋಡೋಣ." ಇಷ್ಟು ಹೇಳಿದವನೇ ಬೇರಾವುದನ್ನು ರೇಖಾ ಮಾತಾಡದಿರಲಿ ಎಂದು ರಿಸೀವರನ್ನು ಕೆಳಗಿಟ್ಟ. ನಾಳೆ ರೇಖಾ ಪಿಂಟೋಳನ್ನು ಭೇಟಿಯಾಗುವ ಸಣ್ಣ ಸಾಧ್ಯತೆಯೂ ಕೂಡಾ ಇಲ್ಲವಾಗಬಹುದು ಮತ್ತು ಬೇರೇನೋ ಬಂದು ಮಧ್ಯೆ ತಲೆಹಾಕಬಹುದು ಎಂಬ ಕಲ್ಪನೆಯು ಚಾರುಗೆ ಇರಲಿಲ್ಲ. ಚಾರು ಫೋನ್ ರಿಸೀವರನ್ನು ಕೆಳಗಿಟ್ಟ ಹೊತ್ತಿನಲ್ಲಿಯೇ ಚೈನ್ ನಾಗೇಶ ತನ್ನ ಮನೆಯಲ್ಲಿ ಸೊಂಟಕ್ಕೆ ಬೈಕ್ ಚೈನ್‌ನ ಬೆಲ್ಟನ್ನು ಕಟ್ಟಿಕೊಳ್ಳುತ್ತಿದ್ದ – ಸಂಜೆಯ ಹೊತ್ತಿಗೆ ಗಣಪತಿ ದೇವಸ್ಥಾನದ ಎದುರು ಉರಿಯಲಿರುವ ಬೆಂಕಿಗೆ ಸಣ್ಣದೊಂದು ಸಮಿಧೆಯನ್ನು ಹುಡುಕಬೇಕಿತ್ತು. ಆ ಸಮಿಧೆ ಇರುವುದು – ಅಂಬೇಡ್ಕರ್ ಕಾಲನಿಯಲ್ಲಿಯೇ.

*

ಅದೇ ಒಂದೂವರೆ ಕಳೆದು ಹತ್ತು ನಿಮಿಷವಾದಾಗ ಮೈಥಿಲಿ ಶಿಬಿಗೆ, "ಬನ್ನಿ ಸಾರ್, ನಿಮಗಾಗಿಯೇ ಈವತ್ತು ಪುಳಿಯೊಗರೆ ಮಾಡಿ ತಂದಿದ್ದೇನೆ" ಎನ್ನುತ್ತಿದ್ದಳು.

ಚಾರು ಕ್ಯಾಂಟೀನಿನಲ್ಲಿ ಎರಡು ಮೆಣಸಿನ ಬೋಂಡಾ ಮತ್ತು ಅರ್ಧ ಟೀ ಕುಡಿಯುತ್ತಿದ್ದ! ಮಧ್ಯಾಹ್ನದ ಉರಿಬಿಸಿಲು ತನ್ನ ಸೊಂಟದ ಲಟಿಕೆಯನ್ನು ಮುರಿಯುತ್ತಿತ್ತು.

ವೇದಬ್ರಹ್ಮ ಶೇಷಶಾಸ್ತ್ರಿಗಳು ಮಧ್ಯಾಹ್ನದ ನಿದ್ದೆ ಮಾಡಿ ಮುಗಿಸಿ, ಮತ್ತೆ ಸಂಜೆಯ ಗಣಪತಿ ಪೂಜೆಗೆ ಹೋಗಬೇಕು, ಸಂಜೆಯ ಗಣಪತಿ ಪೂಜೆಯ ವೇಳೆ ಜನರ ಸೇರುತ್ತಾರೆ. ತಟ್ಟೆಗೆ ನಾಲ್ಕು ಕಾಸು ಬೀಳುತ್ತದೆ. ಅದೆಲ್ಲಕ್ಕಿಂತ ಹೆಚ್ಚಾಗಿ ಪರಂಪರೆಯಿಂದ ಬಂದ ಪೂಜೆಯ ಕೈಂಕರ್ಯವಿದು. ಇದನ್ನು ಬಿಡುವ ಹಾಗಿಲ್ಲ. ಅರ್ಚಕರೆಂದು ಗುರುತಿಸುವುದು ತನ್ನನ್ನೇ ಹೊರತು ಮತ್ಯಾರನ್ನು ಅಲ್ಲ. ಮಹಾಗಣಪತಿಯನ್ನೇ ಪ್ರೀತಿಯಿಂದ ನಂಬಿ ಬದುಕಿದ ಜೀವ ಶೇಷಶಾಸ್ತ್ರಿಗಳದು. ಇದನ್ನು ಬಿಟ್ಟು ಬೇರೆ ಸಂಗತಿಯನ್ನು ಶೇಷಶಾಸ್ತ್ರಿಗಳು ತಿರುಗಿ ನೋಡಿದವರಲ್ಲ. ಶೇಷಶಾಸ್ತ್ರಿಗಳ ಜೀವನದಲ್ಲಿ ಪುಟ ತಿರುಗಿಸಿ ಕೂತವರೂ ಅಲ್ಲ. ಶೇಷಶಾಸ್ತ್ರಿಗಳ ಹೆಂಡತಿ ವಿಶಾಲಾಕ್ಷಮ್ಮನಾಗಲೀ, ಈ ವಿಷಯದಲ್ಲಿ ಗಣಪತಿಯ ಸೇವೆಯನ್ನು, ಗಂಡನ ಸೇವೆಯನ್ನು ಶ್ರದ್ಧೆಯಿಂದಲೇ ಮಾಡಿಕೊಂಡು ಬಂದವರು. ಮಿಂದು ಮಡಿಯುಟ್ಟು ಗಣಪತಿ ದೇವರಿಗೆ ಬೇಕಾದ ಪಂಚಕಜ್ಜಾಯ ಇತ್ಯಾದಿಗಳನ್ನು ಕಲಸಿಕೊಡುವ ಕೆಲಸ ವಿಶಾಲಾಕ್ಷಮ್ಮನದು. ಇದರಲ್ಲಿ ಎರಡು ಮಾತಿಲ್ಲದೆ ಯಾವುದೇ

ವಿಷಯದ ಬಗ್ಗೆ ಕಿಂಚಿತ್ತೂ ಯೋಚಿಸದೇ ಕೆಲಸ ಮಾಡುವ ಸ್ವಭಾವ ಗಂಡ-ಹೆಂಡಿರದು. ಸಜ್ಜನಿಕೆ ಮತ್ತು ವಿನಯ ಇವೆರಡು ಇದ್ದರೆ ಸಾಕು. ಅದರಾಚೆಗೆ ಏನೇ ಆದರೂ ಅದನ್ನು ಮಹಾಗಣಪತಿ ನೋಡಿಕೊಳ್ಳುತ್ತಾನೆ ಮತ್ತು ಮಹಾಗಣಪತಿಗೆ ಜಾತಿ, ಕುಲ, ಧರ್ಮದ ವ್ಯತ್ಯಾಸವಿಲ್ಲ ಎಂದು ನಂಬಿದವರು – ಈ ದಂಪತಿಗಳು. ಈ ದಂಪತಿಗಳ ನಂಬಿಕೆಯ ಅಡಿಪಾಯವೇ ಈ ದಿನ ಸಂಜೆ ಬೆಲ್ಟ್ ನಾಗೇಶನಿಂದ ಕುಸಿಯಲಿತ್ತು! ಮತ್ತು ಅದಕ್ಕೆ ಪರಿಹಾರವನ್ನು ಮಹಾಗಣಪತಿಯು ಕೊಡುವುದು ಸಾಧ್ಯವಿರಲಿಲ್ಲ.

ಸರಿಯಾಗಿ ನಾಲ್ಕೂವರೆ ದಾಟಿದ ಮೇಲೆ ಜನ್ನು ತನ್ನವರನ್ನು ಜಯಮ್ಮನ ಸಾರಾಯಿ ಅಂಗಡಿಗೆ ಕರೆದು ತಂದ. ತಲಾ ಒಬ್ಬೊಬ್ಬರಿಗೆ ಎರಡೆರಡು ಪಾಕೀಟು ಸಾರಾಯಿ ಪುಕ್ಕಟೆ ತೆಗೆದುಕೊಟ್ಟ. ಹಾಗೆಯೇ ಒಂದೊಂದು ಕಟ್ಟು ಬೀಡಿ. ಎಲ್ಲರೂ ಸಾರಾಯಿಯನ್ನು ಹೊಟ್ಟೆಗೆ ಎರೆದುಕೊಂಡ ಮೇಲೆ "ಬನ್ನಿ" ಎಂದು ಜನ್ನು ಕರೆದ. ಹಾಗೂ ಎಲ್ಲರಿಗೂ ಒಂದೊಂದು ಕುಂಕುಮದ ನಾಮ ಎಳೆದುಕೊಳ್ಳಲು ಹೇಳಿದ. ಜನ್ನು ಹೇಳಿದ್ದನ್ನು ಅಕ್ಷರಶಃ ಪಾಲಿಸಿದ ಹುಡುಗರು ಅವನ ಜೊತೆಯಲ್ಲಿ ಹೊರಟರು ಮತ್ತು ಗಣಪತಿ ದೇವಸ್ಥಾನದ ಎದುರು ಐದೂಕಾಲರ ಹೊತ್ತಿಗೆ ತಲುಪಿದರು. ಆ ಹುಡುಗರು ಗಣಪತಿ ದೇವಸ್ಥಾನದ ಸಮೀಪ ಬರುವಷ್ಟರ ಹೊತ್ತಿಗೆ ಬೆಲ್ಟ್ ನಾಗೇಶ ಜನ್ನುವನ್ನು ದೂರದಿಂದಲೇ ನೋಡಿ ಕೈಸನ್ನೆ ಮಾಡಿದ. ನಾಗೇಶನ ಕೈಸನ್ನೆಗೆ ಅವನ ಬಳಿಗೆ ಹೋದ ಜನ್ನು ಅವನು ಹೇಳಿದಂತೆ ಮಾಡಲು ಈಗ ತಾನೇನು ಕೆಲಸ ಮಾಡಬೇಕೆಂದು ಕೇಳಿದ. ಜನ್ನು ಮತ್ತು ನಾಗೇಶರಿಬ್ಬರೂ ಮಾತಾಡುತ್ತಿರುವಾಗ ಜನ್ನು ಕಡೆಯ ಹುಡುಗರು ಗಣಪತಿ ದೇವಸ್ಥಾನದ ಬಾಗಿಲಿಗೆ ತಲುಪಿದರು! ದೇವಸ್ಥಾನದ ಎದುರಿಗೆ ಬಂದವರು ಮಹಾಗಣಪತಿಯೆದುರು ಉದ್ದಂಡ ನಮಸ್ಕಾರವನ್ನು ಮಾಡಿದರು. "ಮುಂದಿನ ತಪ್ಪುಗಳನ್ನು ಕ್ಷಮಿಸು ದೇವರೇ" ಎಂದು ಪ್ರಾರ್ಥಿಸಿದರು.

ಜನ್ನು ಮತ್ತು ನಾಗೇಶ ಇಬ್ಬರೂ ಗುಟ್ಟಾಗಿ ಏನೋ ಮಾತಾಡತೊಡಗಿದರು. ಮತ್ತೆ ಅದೇ ಸಂಜೆಯ ಮುಸುಕು ದೇವಸ್ಥಾನ ಗರುಡಗಂಭದ ಮೇಲೆ ಮುಚ್ಚುವ ಮೊದಲು ಏನೂ ಮಾಡುವಂತಿಲ್ಲ. "ಕತ್ತಲು ಬಂದಿಳಿಯುವ ಮುಂಚೆ ಯಾವುದಕ್ಕೂ ಕೈಯಿಡಬೇಡಿ. ಕತ್ತಲು ಬಂದಿಳಿಯಲಿ, ಯಾರಾದರೂ ಒಬ್ಬರು ಸಾಬರ ಕೇರಿಗೆ ಹೋಗಿ ಎಲ್ಲವನ್ನು ನೋಡಿಕೊಂಡು ಬರಲಿ. ಈವತ್ತಂತೂ ಎಲ್ಲವೂ ಭುಗಿಲೇಳಬೇಕು." ಬೆಲ್ಟ್ ನಾಗೇಶ ಜನ್ನುಗೆ ಮತ್ತೇನೋ ಹೇಳಲು ಹೊರಟ. ಆದರೆ ಎಲ್ಲಾ ವಿಷಯವನ್ನು ಬಿಚ್ಚಿಡುವುದು ಸೂಕ್ತವೆಂದು ಅನಿಸಲಿಲ್ಲ. ಸುಮ್ಮನುಳಿದ. ಉರಿಯೇಳುವುದಂತೂ ಖಚಿತ!

*

ಸಂಜೆಯ ಐದೂಕಾಲು ಗಂಟೆ. ಚಾರು ಕಚೇರಿಯಿಂದ ಹೊರಗಡೆ ಬಂದ. ಕರುಳು ಚುರುಗುಟ್ಟುತ್ತಿದೆ, ಹಸಿವೆಯನ್ನು ಹಿಂಗಿಸಿಕೊಳ್ಳಲು ಹತ್ತಾರು ದಾರಿಗಳನ್ನು ಕಂಡುಕೊಂಡ ಚಾರುಗೆ ಅದೊಂದು ಸಮಸ್ಯೆಯಲ್ಲ. ಅವನೇ ಕಂಡುಕೊಂಡ ಅತೀ ದೊಡ್ಡ ಸತ್ಯವೆಂದರೆ – ಅದರ ಮೇಲೆ ಒಂದು ಸಿಗರೇಟು ಸೇದಿದರಂತೂ ಹಸಿವೆಯೆನ್ನುವುದು ತಕ್ಷಣ ಹತ್ತಿರ ಸುಳಿಯುವುದಿಲ್ಲ. ಮುನಿಸಿಕೊಂಡ ಹೆಂಡತಿಯಂತೆ ಹಸಿವೆಯೂ ಕೊಂಚ ದೂರವೇ ಉಳಿಯುತ್ತದೆ. ಚಾರುಗೆ ಬೇಕಾಗಿರುವುದು ಕೂಡಾ. ಅದಕ್ಕಾಗಿ ಹಸಿವೆಯು ಬಂದು ಹೊಟ್ಟೆಯೊಳಗೆ ತಾಳ ಕುಟ್ಟುತ್ತಿರುವಾಗ ಮೆತ್ತಗೆ ಕ್ಷಣಕಾಲದ ಹಸಿವನ್ನು ಹಿಂಗಿಸಲು ಅರ್ಧ ಟೀ ಮತ್ತು ಸಿಗರೇಟಿನ ಮೊರೆಹೊಕ್ಕ. ಸಿಗರೇಟು ಮತ್ತು ಗುಂಡು – ಇವೆರಡರ ಸಾಂಗತ್ಯ ಎಷ್ಟೊಂದು ಹಿತವಾದುದು ಎಂದು ಭಾವಿಸಿಕೊಂಡ. ಚಾರುವಿನ ಮನಸ್ಸಿನಲ್ಲಿ ಸಾವಿರಾರು ರೀತಿಯ ಯೋಚನೆಗಳು, ಎಲ್ಲಿಂದ ಬಿಡಿಸಲು ಹೋದರೂ ಮತ್ತೆ ಬೇರೆ ರೀತಿಯಲ್ಲಿ ಅಂಟಿಕೊಳ್ಳುತ್ತವೆ. ಅನಗತ್ಯವೆಂದರೂ ಮತ್ತೆ ಮತ್ತೆ ಮನಸಿನೊಳಗೆ ನುಗ್ಗಿ ಕಿರಿ ಕಿರಿಯುಂಟು ಮಾಡುತ್ತವೆ. ಚಾರು ಈಚಿನ ತನ್ನ ದಿನಗಳು ತನಗೇ ದಿಕ್ಕು ತಪ್ಪಿಸುತ್ತವೆಯೆಂದು ಭಾವಿಸಿದ. ಮೈಥಿಲಿಗೆ ಮನೆಯೆಂದರೆ ಹೇಗೆ ನರಕವಾಗಿದೆಯೋ ಅದೇ ರೀತಿಯಲ್ಲಿ ತನಗೂ ಮನೆಯೆಂದರೆ ನರಕವಾಗಿದೆ. ಹಿಂಸೆಯ ಕೂಪವಾಗಿದೆ. ಒಂದೇ ಒಂದು ವಿಷಯವೆಂದರೆ – ತನ್ನ ಹುಬ್ಬು ಯಾವಾಗಲೂ ಗಂಟಿಕ್ಕಿಕೊಂಡು ಇರುತ್ತದೆ. ಮೈಥಿಲಿಯ ತುಟಿಯು ಸಾರ್ವಜನಿಕರ ಎದುರು ನಗೆಯ ರಂಗನ್ನು ವ್ಯಕ್ತಪಡಿಸುತ್ತದೆ. ಕತ್ತಲೆಯ ಮೂಲೆಯಲ್ಲಿ ಕುಳಿತುಕೊಂಡು, ಮೂಲೆಯ ಕೋನಗಳನ್ನು ಲೆಕ್ಕ ಹಾಕತೊಡಗಿರುವ ತನಗೂ ಬಯಲನ್ನೇ ರಂಗಸ್ಥಳ ಮಾಡಿಕೊಂಡ ಮೈಥಿಲಿಗೂ ನಡುವೆ ಯಾವುದೋ ಪರದೆಗಳಿವೆ – ಅವೂ ವರ್ಣರಂಜಿತವಾದವು. ಕಪ್ಪು; ಬಿಳಿ; ಹಸುರು; ಹಳದಿ. ಈ ಪರದೆಗಳನ್ನು ನಾನು ದಾಟಿ ಬರಬೇಕೋ ಅಥವಾ ಮೈಥಿಲಿಯೇ ದಾಟಿ ಬರುತ್ತಾಳೋ ಒಂದೂ ಒಮ್ಮೊಮ್ಮೆ ಅರ್ಥವಾಗುವುದಿಲ್ಲ. ಮನಸ್ಸಿನ ತುಂಬಾ ಸಿಡಿದು ತುಂಬಿರುವ ಆಲೋಚನೆಗಳ ಎಳೆಯನ್ನು ಹಿಡಿಯುತ್ತಲೇ ಟೀ ಕುಡಿದವನು ತನ್ನ ಸ್ಕೂಟರ್ ಸ್ಟಾರ್ಟ್ ಮಾಡಿದ. ಆಗಲೇ ಸಮಯವಾಗುತ್ತಾ ಬಂತು ಅವನಿಗೆ – ಜಿನ್‌ನ ಕಡೆಗೆ. ಮತ್ತೆ ಈವೊತ್ತು ಜಿನ್‌ನ ಬ್ರಾಂಡ್ ಬದಲಾಯಿಸಬೇಕು ಇಲ್ಲವೇ, ರಮ್ ಕುಡಿಯಬೇಕು. ಜಿನ್ ಎಂದರೆ ಅದು ಹುಡುಗಿಯರದು. ಬಿಯರ್ ಎಂದರೆ ಅದು ಹೆಂಗಸರದು. ಪಾಕೀಟು ಸಾರಾಯಿ ಕೂಲಿಯವರದು. ಸ್ಕಾಚ್ ವಿಸ್ಕಿ ಶ್ರೀಮಂತರದು. ಕುಡಿತವೂ ಈ ದೇಶದಲ್ಲಿ ವರ್ಗದ ಮಾದರಿಗಳಾಗಿವೆಯೆಂದುಕೊಂಡ ಚಾರು ಈ ಒಂದು ರಮ್‌ನ ಗರಂಗೆ ಏರೋಣವೆಂದುಕೊಂಡ. ರಮ್‌ನ ವಾಸನೆಯು ಮೈಥಿಲಿಗೆ ಮತ್ತಷ್ಟು ಮೈಯ ಕೆರೆತವುಂಟುಮಾಡಬಹುದೆ? ರಮ್ ಅಥವಾ ವಿಸ್ಕಿಯೇ ಈವೊಂದು ರಾತ್ರಿಯ

ಮಟ್ಟಿಗೆ ಸರಿಯೆಂದುಕೊಂಡ ಚಾರು ಮಾರ್ಕೆಟ್ ಕಡೆಗೆ ತನ್ನ ಸ್ಕೂಟರ್ ತಿರುಗಿಸಿದ. ಚಾರು ಮಾರ್ಕೆಟ್ ಕಡೆಯ ಅಡ್ಡ ರಸ್ತೆಯನ್ನು ದಾಟಿ ಮುಂದೆ ಹೋಗುವಾಗಲೇ – ಗಣಪತಿ ದೇವಸ್ಥಾನದಲ್ಲಿ ವೇದಬ್ರಹ್ಮಶೇಷಶಾಸ್ತ್ರಿಗಳ ಗಮನಕ್ಕೂ ಬಾರದ ಅನೂಹ್ಯವಾದ ಘಟನೆಯೊಂದು ಜರುಗಿಬಿಟ್ಟಿತು. ಆದರೆ, ಚಾರು ಅದರ ನಡುವಿನಿಂದಲೇ ಹೊರಗಡೆ ಬಂದ ತಪ್ಪಿಸಿಕೊಂಡು. ಗಣಪತಿ ದೇವಸ್ಥಾನದಲ್ಲಿ ಆದುದೇ ಬೇರೆ.

*

ಶೇಷಶಾಸ್ತ್ರಿಗಳ ಪಂಚಕಜ್ಜಾಯ ಪ್ರಸಾದದ ಪಾತ್ರೆಯನ್ನು ಎತ್ತಿಕೊಂಡು ಶುದ್ಧ ಮಡಿವಸ್ತ್ರದಲ್ಲಿಯೇ ದೇವಸ್ಥಾನದ ಒಳಗೆಡೆಗೆ ಬಂದವರು, ಪಾತ್ರೆಯನ್ನು ಕೆಳಗಿಟ್ಟುಕೊಂಡು, ದೇವರ ಗರ್ಭಗುಡಿಯ ಬಾಗಿಲನ್ನು ತೆರೆದರು ಮತ್ತು ಗಣಪತಿ ವಿಗ್ರಹದ ಎದುರು ಇರುವ ಕಾಲು ದೀಪದ ಬತ್ತಿಯನ್ನು ಮುಂದು ಮಾಡಿದರು. ಖಾಯಂ ಆಗಿ ಮಾಡುವ ಈ ಕೆಲಸದಲ್ಲಿ ಯಾವ ವ್ಯತ್ಯಾಸವೂ ಇಲ್ಲ, ವ್ಯತ್ಯಾಸವಾಗದು. ಅಷ್ಟೊಂದು ಕರಾರುವಕ್ಕಾಗಿ ಮಾಡಿ ಮುಗಿಸುವ ಕೆಲಸವದು. ದೇವರ ಮುಂದಿನ ಕಾಲು ದೀಪದ ಬೆಳಕನ್ನು ದೊಡ್ಡದು ಮಾಡದೇ ಯಾವ ಕೆಲಸವನ್ನು ಅವರು ಮಾಡುವವರಲ್ಲ. ಅದೇ ಸಮಯಕ್ಕೆ ಸರಿಯಾಗಿ ಒಬ್ಬೊಬ್ಬರೇ ಬಂದು ದೇವರಿಗೆ ಕೈಮುಗಿದು ಪ್ರದಕ್ಷಿಣೆಯ ಕೆಲಸವನ್ನು ಶುರುಮಾಡಿದರು. ಅದೇ ವೇಳೆಗೆ ಶೇಷಶಾಸ್ತ್ರಿಗಳು ದೇವರ ಗರ್ಭಗುಡಿಯನ್ನು ಶುದ್ಧಗೊಳಿಸಲು ಪ್ರಾರಂಭಿಸಿದ್ದು ಮತ್ತು ಬೆಳಗಿನ ಪೂಜೆಯ ವೇಳೆಗೆ ಅಲಂಕರಿಸಿದ ಹೂಗಳನ್ನು ತೆಗೆದು ಗಣಪತಿ ವಿಗ್ರಹದ ಮೇಲೆ ಬೇರೆ ಹೂಗಳನ್ನು ಇರಿಸಲು ಪ್ರಾರಂಭಿಸಿದರು. ಯಾವಾಗಲೂ ಹೊರಡುವ ಮಂತ್ರಗಳನ್ನು ಪಠಿಸಲು ಶೇಷಶಾಸ್ತ್ರಿಗಳು ಪ್ರಾರಂಭಿಸುತ್ತಿರುವಂತೆಯೇ, ಎಲ್ಲಿಂದಲೋ ಒಂದು ಗಲಾಟೆಯ ದನಿಯು ಕೇಳಿಸತೊಡಗಿತು. ಸಾರಾಯಿಯ ಅಮಲಿನಲ್ಲಿದ್ದ ಹುಡುಗರು ತರಕಾರಿ ಗಾಡಿ ತಳ್ಳುತ್ತಾ ಬಂದ ಯಾರೋ ಒಬ್ಬನಿಗೆ ನಾಕು ಚಚ್ಚಿ, "ಬನ್ರೋ, ಸೂಳೆಮಕ್ಕಳೇ" ಎಂದು ಕೂಗಾಡಲು ಶುರುಮಾಡಿದರು. ತರಕಾರಿ ಗಾಡಿ ತಳ್ಳುತ್ತಾ ಬಂದವನು, ಯಾರು, ಏನು, ಎತ್ತ ಎಂಬುದನ್ನು ವಿಚಾರಿಸಿಕೊಳ್ಳುವಷ್ಟು ತಾಳ್ಮೆಯು ಜನ್ನುಗೆ ಇರಲಿಲ್ಲ. ಬೆಲ್ಟ್ ನಾಗೇಶ ಸರಿಯಾದ ನಕ್ಷೆಯನ್ನೇ ರೂಪಿಸಿದ್ದ: ಆದದ್ದು ಬೇರೇನೂ ಅಲ್ಲ.

ತರಕಾರಿ ಗಾಡಿಯಲ್ಲಿ ತರಕಾರಿಯನ್ನು ತಳ್ಳುತ್ತಾ ಬಂದವನು ಬೆಲ್ಟ್ ನಾಗೇಶನಿಗೆ ಅಪರಿಚಿತನೇನೂ ಅಲ್ಲ. ಅನೇಕ ಸಮಯದಿಂದ ನೋಡುತ್ತಲೇ ಬಂದಿದ್ದ. ತರಕಾರಿಯನ್ನು ಮಾರುವವನ ಹೆಸರು ಅಬ್ದುಲ್ ಖಾದ್ರಿ ಅನ್ನುವುದೂ ಅವನಿಗೆ ಗೊತ್ತು ಮತ್ತು ಪ್ರತಿನಿತ್ಯ ತರಕಾರಿಯನ್ನು ಮಾರಿಕೊಂಡು ಜೀವಿಸುವ ಖಾದ್ರಿ ಗಾಡಿಯನ್ನು ಸಂಜೆಯ ಐದೂವರೆಯ ಮೇಲೆ ಅದೇ ಗಣಪತಿ ದೇವಸ್ಥಾನದ

ಪಕ್ಕದಲ್ಲಿಯೇ ನಿಲ್ಲಿಸಿರುತ್ತಾನೆ. ಗಣಪತಿ ಪೂಜೆ ಮಾಡುವವರು ಅವನ ಗಾಡಿಯಿಂದಲೇ ಬಾಳೆಹಣ್ಣನ್ನು ಖರೀದಿಸುತ್ತಾರೆ. ಇಲ್ಲವೇ, ಪೂಜೆ ಮುಗಿಸಿ ಹೋಗುವಾಗ ಅವನ ಗಾಡಿಯಿಂದ ತರಕಾರಿಯನ್ನೋ, ಎಳೆಸೌತೆಕಾಯಿಯನ್ನೋ ಮನೆಗೆ ಕೊಂಡೊಯ್ಯುತ್ತಾನೆ. ಬೆಲ್ಟ್ ನಾಗೇಶ ಜನ್ನುವನ್ನು ಕರೆದು ಮೊದಲು ಖಾದ್ರಿಗೆ ಹಿಂದೂ ಹೆಂಗಸರನ್ನು ಚುಡಾಯಿಸಿದ ಎಂಬ ಕಾರಣವೋ; ಅಥವಾ ಬಾಳೆಹಣ್ಣಿಗೆ ರೇಟು ಜಾಸ್ತಿ ಮಾಡಿದ ಅಂತಲೋ ಕಾರಣ ಹೇಳಿ ನಾಕು ತದುಕಿ ಬಂದುಬಿಡಿ, ಉಳಿದದ್ದು ಆಮೇಲೆ ಅಂದಿದ್ದ. ಅಷ್ಟು ಹೇಳಿದ ನಾಗೇಶ ಕೂಡಲೇ ಜಾಗವನ್ನು ಖಾಲಿ ಮಾಡಿದ್ದ.

ಜನ್ನು ಬೇರೇನೂ ಮಾಡಲಿಲ್ಲ. ನಾಗೇಶನ ಹತ್ತಿರದಿಂದ ಬಂದವನೇ "ಏನೋ ಸಾಬಿ, ಬಾಳೆಹಣ್ಣಿಗೆ ಹೇಗೋ ರೇಟು?" ಎಂದು ಕೇಳಿದ. ಖಾದ್ರಿ ತಾಳ್ಮೆಯಿಂದಲೇ "ಡಜನ್‌ಗೆ ಎಂಟು ರೂಪ್ಯಾ" ಅಂದ. "ಏಯ್, ಮಗನೆ, ಡಜನ್‌ಗೆ ಆರು ರೂಪಾಯಿಯ ಹಂಗೆ ಮಾರೋದು ಬಿಟ್ಟು... " ಅಂದವನೇ ಖಾದ್ರಿ ತಲೆಗೆ ಮೊಟಕಿದ. ಉಳಿದ ಹುಡುಗರೂ ಮುಗಿಬಿದ್ದರು. ಸಣ್ಣ ಬೆಂಕಿಯು ಗಣಪತಿ ದೇವಸ್ಥಾನದ ಎದುರು ಹತ್ತಿಕೊಂಡಿತು. ಶೇಷಶಾಸ್ತ್ರಿಗಳ ಮಂತ್ರವೂ ಗರ್ಭಗುಡಿಯೊಳಗೆ ಸಣ್ಣಗಾಯಿತು. ಅವರಿಗೆ ಬಚಾವಾದರೆ ಸಾಕಾಗಿತ್ತು ಮತ್ತು ನಗರ ಬೆಂಕಿಯು ಸುದ್ದಿಯ ರೂಪದಲ್ಲಿ ಹುಟ್ಟಿಕೊಂಡಿತು. ಕೆಲವೇ ಕೆಲವು ನಿಮಿಷಗಳಲ್ಲಿ ಈ ಬೆಂಕಿಯು ಇಡಿಯ ನಗರವನ್ನು ಸುದ್ದಿ ರೂಪದಲ್ಲಿ ಹಬ್ಬಿಕೊಳ್ಳಲು ಶುರುವಾದಾಗ ಚಾರುವಿನ ಸ್ಕೂಟರು, ಆ ಸುದ್ದಿಯ ನಡುವಿನಿಂದಲೇ ಜಾರಿಕೊಂಡಿತು ಮತ್ತು ಅವನ ಸ್ಕೂಟರು ಅವನ ಮನೆ ತಲುಪುವ ಹೊತ್ತಿಗೆ ಸುತ್ತಲೂ ಕತ್ತಲು ಹಾಗೂ ವಿದ್ಯುಚ್ಛಕ್ತಿ ಇಲಾಖೆಗೆ ಒಂದು ಸಣ್ಣ ನಿದ್ದೆ. ಚಾರು ಬಂದವನು ಬಾಗಿಲು ತಟ್ಟಿದ. ಮೈಥಿಲಿಯು ಬಾಗಿಲು ತೆರೆದಳು – ಮುಖ ಸಿಂಡರಿಸಿಕೊಳ್ಳುತ್ತಾ!

ಅದು ಮುಗಿಯುವ ಲಕ್ಷಣಗಳಿರಲಿಲ್ಲ!

– ೨ –

ಮೂಗು ಸಿಂಡರಿಸಿಕೊಂಡೇ ಬಾಗಿಲು ತೆರೆದ ಮೈಥಿಲಿಯು ಚಾರು ಬಂದ ಕ್ಷಣವೇ ಒಳಗಡೆ ಹೋದಳು. ಚಾರು ಕುಡಿದದ್ದು ಕೂಡಾ ಕೊಂಚ ಇಳಿಯಿತು. "ಅಡ್ಡಿಯಿಲ್ಲ ಇನ್ನೂ ಸಮಯವಿದೆ" ಎಂದು ಗಡಿಯಾರ ನೋಡಿದವನೇ "ಓ, ಇನ್ನೂ ಏಳೂವರೆಯಷ್ಟೆ, ಸಮಯವಿದೆ" ಅಂದ. ಯಾವುದಕ್ಕೆ ಸಮಯವಿದೆಯೆಂದು ಮೈಥಿಲಿಯು ಕೇಳಲಿಲ್ಲ ಮತ್ತು ಸಮಯವಿದೆಯೆಂದು ಯಾತಕ್ಕೆ ಹೇಳುತ್ತಿದ್ದಾನೆಂದು ಅರ್ಥವಾಗದವಳೇನೂ ಅಲ್ಲ. ಅದಕ್ಕಾಗಿಯೇ ಸುಮ್ಮನಾದವಳು ಅಡುಗೆ ಮನೆಯಿಂದಲೇ "ಹೋಗಿ ಸ್ನಾನ ಮಾಡುತ್ತೀರಾ?" ಎಂದು ಕೇಳಿದಳು. ಅವಳು ಯಾತಕ್ಕೆ "ಸ್ನಾನ ಮಾಡುತ್ತೀರಾ?" ಎಂದು ಕೇಳಿದಳು ಎಂಬುದನ್ನು ಅರ್ಥಮಾಡಿಕೊಳ್ಳುವ ಸರದಿ ಚಾರುವಿನದಾಯಿತು. ಚಾರು ಸುಮ್ಮನೇ ಬಾಯಿ ಮುಚ್ಚಿಕೊಂಡು ಬಂದು ತನ್ನ ಡ್ರೆಸ್ ಬದಲಾಯಿಸಿದ. ಬದಲಾಯಿಸಿದವನೇ ಮತ್ತೆ ಕುಡಿಯುವುದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಂಡ. ವೈನ್

ಶಾಪಿನಲ್ಲಿ ಅವನು ಕುಡಿದಿರಲಿಲ್ಲವಾದರೂ ಅವನು ಬಂದುದನ್ನು ನೋಡಿ ಬಾಗಿಲು ತೆರೆಯುವಾಗ ಮೈಥಿಲಿಯು ಯಾಕೆ ಮುಖ ಸಿಂಡರಿಸಿದಳು ಎಂಬುದು ನಿಜವಾಗಿಯೂ ಚಾರುಗೆ ಗೊತ್ತಿಲ್ಲ ಮತ್ತು ಅವಳು ಮುಖ ಸಿಂಡರಿಸಿದ್ದಾಳೆ ಎಂಬುದು ಗೊತ್ತಾದ ಮೇಲೆ ಅದರಿಂದ ಮೇಲೆ ಹೆಚ್ಚು ಮಾತಾಡುವುದಕ್ಕಿಂತ ಕುಡಿಯುವುದರ ಸದ್ಯ ಗಮನಕೊಡುವುದು ಹೆಚ್ಚು ಸೂಕ್ತವೆಂದು ಅವನು ಭಾವಿಸಿದ. "ಈವೊತ್ತು ಮತ್ತೆ ಹೊಸ ಬ್ರಾಂಡ್" ಎಂದುಕೊಂಡ ಕುಡಿದು ಸ್ನಾನ ಮಾಡುವುದು ಒಳ್ಳೆಯದೇ ಅಥವಾ ಸ್ನಾನ ಮಾಡಿ ಕುಡಿಯುವುದು ಒಳ್ಳೆಯದೇ ಯಾವುದು ಅಂತ ತಿಳಿಯದೇ ಮತ್ತೊಂದು ಸಿಗರೇಟು ಹಚ್ಚಿದ. ಅವನು ಸಿಗರೇಟು ಹಚ್ಚಿದ ಕ್ಷಣವೇ ಮೈಥಿಲಿಯು ಬಂದವಳು, "ಅಲ್ಲಾ ನೀವು ಈ ಸಿಗರೇಟಿಗೆ ಎಷ್ಟು ಖರ್ಚು ಮಾಡುತ್ತೀರಿ ಅಂತ ಗೊತ್ತಾ?" ಎಂದು ಕೇಳಿದಳು. ಅವಳ ಮುಖ ನೋಡಿ ಸುಮ್ಮನಾದ.

ಸ್ನಾನ ಮಾಡುತ್ತಿದ್ದ ಚಾರು ಅದೇ ಬಾಲ್ಯದಲ್ಲಿ ಅಪ್ಪ ಹೇಳಿಕೊಟ್ಟ "ಗುರುಬ್ರಹ್ಮ" ಹೇಳಲು ಪ್ರಯತ್ನಿಸಿದ. ಯಾಕೋ ಸಾಲುಗಳು ಮತ್ತೆ ಮರೆತುಹೋಗುತ್ತಿವೆಯೆಂದನ್ನಿಸಿತು. ಮತ್ತೊಮ್ಮೆ ನೆನಪಿಸಿಕೊಂಡ. ಅಲ್ಲೇ ನಿಲ್ಲುತ್ತವೆ – "ಗುರುಬ್ರಹ್ಮ" ಯಾಕೋ ಸರಿಯಾಗುತ್ತಿಲ್ಲವೆಂದೆನಿಸಿ, ಸೋಪ್ ಹಚ್ಚಲು ಸೋಪ್ ಬಾಕ್ಸ್‌ಗೆ ಕೈಹಾಕಿದ. ಸೋಪು ಕೂಡಾ ಖಾಲಿಯಾಗಿದೆ. ಯಾಕೆ ಹೀಗಾಗುತ್ತಿದೆ? ಚಾರು ಬಾತ್ ರೂಮಿನಲ್ಲಿಯೇ ಉಳಿದವನು ಬಹಳ ಯೋಚಿಸಿದ. ಸೋಪು ಖಾಲಿಯಾಗಿದೆ, ಬಾಲ್ಯದಿಂದಲೂ ಕಲಿತ ಹಾಡು ಮರೆತು ಹೋಗುತ್ತಿದೆ ಮತ್ತು ಎಲ್ಲೋ ಏನೋ ಸಮಸ್ಯೆಯಾಗುತ್ತಿದೆ. ಅಡುಗೆ ಮನೆಯ ಸಿಂಕ್‌ಗೆ ಜೋರಾಗಿ ನೀರು ಬಿಡುತ್ತಲೇ, "ತುಮ್‌ಸೆ ಮಿಲ್‌ಕರ್ ನಾಜಾನೇಕ್ಯೋ"" ಎಂದು ಗೊಣಗತೊಡಗಿದಳು. ಅವಳು ಗುನು ಗುನಿಸುತ್ತಿರುವ ಹಾಡಿನ ಸಾಲು ಸರಿಯಾಗಿಯೇ ಬಚ್ಚಲು ಮನೆಯಲ್ಲಿರುವ ಚಾರುವಿನ ಕಿವಿಗೆ ಕೇಳಿಸತೊಡಗಿತು. ಲಹರಿಯಿದ್ದಾಗ ಮಾತ್ರ ಹಾಡುವ ಮತ್ತು ನಗಾಡುವ ತನ್ನ ಮನೆಯೊಳಗಿನ ಒಂದು ಪ್ರವೃತ್ತಿ ವ್ಯಕ್ತವಾಗುತ್ತಿರುವ ಕ್ರಮವನ್ನು ನೋಡಿ ಸಣ್ಣ ರೀತಿಯ ಆಶ್ಚರ್ಯಕ್ಕೆ ಒಳಗಾದ.

"ನಾಟಕವೆಂದರೆ ಬಣ್ಣ ಹಾಕಿ ರಂಗದ ಮೇಲೆ ಕುಣಿಯುವುದು ಮಾತ್ರವೇ ಅಲ್ಲ, ಬಣ್ಣ ಹಾಕದೆಯೂ ಕೆಲವರು ಬಣ್ಣ ಹಾಕುತ್ತಾರೆ. ನೀನು ದೇವವ್ರತನ ಜೊತೆ ಆಡಿದ ನಾಟಕದ ಹಾಗೆ!" – ಸುಮ್ಮನಿರಬೇಕೆಂದುಕೊಂಡವನು ತಕ್ಷಣವೇ ಆ ಮಾತನ್ನು ಹೇಳಿದ. ಹೇಳಿದ ಮೇಲೆ ಅವನಿಗನ್ನಿಸಿತು – ಹಾಗೆ ತಾನು ಹೇಳಬಾರದಿತ್ತು ಅಂತ. ಮಾತು ಉದುರಿಬಿದ್ದಿದೆ. ಅದನ್ನು ಮತ್ತೆ ಹೆಕ್ಕಿಕೊಂಡು ನಾಲಿಗೆಯ ಮೇಲೆ ಅಂಟಿಸಿಕೊಳ್ಳುವಂತಿಲ್ಲ. ಆದರೆ, ಮೈಥಿಲಿ ಸುಮ್ಮನಿರುವವಳೇ ಅಲ್ಲ. "ಏಯ್, ಏನೂಂತ ತಿಳ್ಕೊಂಡಿಯೋ ನನ್ನ? ಹೆಂಡತಿಯನ್ನು ಸಂಭಾಳಿಸೋ ತಾಕತ್ತು ಇಲ್ಲದವನು ಮಾತಾಡುತ್ತಾನೆ. ಏಯ್, ಬಾರೋ ಸಾಧ್ಯವಾದರೆ ನನ್ನನ್ನು ಮುಟ್ಟ

ನೋಡು. ಹೌದು, ದೇವವ್ರತನ ಜೊತೆ ಆಟವಾಡಿದೆ. ಏನಾಯ್ತೋ ಅದರಿಂದ? ನಿನ್ನ ಗೊಡ್ಡು ಪುರಾಣ ಬೇಡ್ವೋ." ಮೈಮೇಲೆ ಬಂದವರಂತೆ ಕಿರುಚತೊಡಗಿದಳು. ಚಾರುವಿಗೆ ಸಹಿಸುವುದಕ್ಕೆ ಸಾಧ್ಯವಾಗದೇ ಅವಳ ಕೆನ್ನೆಗೆರಡು ಏಟು ಕೊಟ್ಟ. ಮೈಥಿಲಿ ಲಬೋ ಲಬೋ ಅಂತ ಬಾಯಿ ಹೊಡೆದುಕೊಂಡಳು. ಮೈಥಿಲಿಯು ಸುಮ್ಮನಿರುವ ಜಾತಿಯಲ್ಲ ಎಂದನ್ನಿಸಿತು ಚಾರುಗೆ. ಮತ್ತೆ ಮೈಥಿಲಿಯ ಮನಸ್ಸು ಬೇರೆಡೆಗೆ ಚಲಿಸತೊಡಗಿದೆ ಎಂದು ಗೊತ್ತಿಲ್ಲದ ಅವನು ಹಾಗೆ ಭಾವಿಸಿಕೊಂಡ.

ರಪ್ಪನೇ ಮೈಥಿಲಿಯ ಕೆನ್ನೆಯ ಮೇಲೆ ಹೊಡೆದವನು ಯಾಕೋ ತನಗೆ ತಾನೇ ನಿಯಂತ್ರಿಸಿಕೊಳ್ಳಲಾಗದೇ ಚಡಪಡಿಸಿದ. ಕುಡಿಯಲೇ ಬೇಕಾದ ಒಂದು ವಿಚಿತ್ರ ದಾಹವೊಂದು ಎದ್ದುನಿಂತುಕೊಂಡು ಹೊಟ್ಟೆಯಿಂದ ನಾಲಿಗೆಯ ತುದಿಯ ತನಕವೂ ತಾಂಡವವಾಡತೊಡಗಿದೆಯೆಂದು ಚಾರುಗೆ ಅನಿಸತೊಡಗಿತು. ಕುಡಿದರೆ ಸರಿಯಾಗಿ ಕುಡಿದು ಮಲಗಿಬಿಡಬೇಕು. ಅರ್ಧ ಕುಡಿದು ಅರ್ಧ ಎಚ್ಚರಿದಿಂದ ಬೆಳಗಿನ ತನಕ ಧ್ಯಾನಿಸುವ ಸ್ಥಿತಿಯೊಂದು ಬೇಕಾಗಿರಲಿಲ್ಲ. ಸಮಯವನ್ನು ನೋಡಿಕೊಂಡ – ರಾತ್ರಿ ಒಂಬತ್ತೂವರೆಯ ಮೇಲಾಗಿದೆ. ಅರ್ಧ ಕುಡಿದವನು ಈಗ ಗುಂಡು ತರಲು ಮತ್ತೆ ಹೋಗುವುದು ತರವಲ್ಲವೆಂದು ಅವನಿಗೇ ಅನಿಸ ಹತ್ತಿತು. ಆದರೆ, ಅದೇ ವೇಳೆಗೆ ಬಂದಿದ್ದು ರೇಖಾ ಪಿಂಟೋಳ ಫೋನು. ಫೋನಿನಲ್ಲಿ ಸ್ವರ ಅವಳದೆಂದು ತಿಳಿದ ತಕ್ಷಣವೇ, "ನಾಳೆ ಭೇಟಿ ಅಥವಾ ಫೋನು ಮಾಡಿ" ಎಂದಷ್ಟೇ ಹೇಳಿ ರಿಸೀವರ್ ತೆಗೆದು ಇಟ್ಟುಬಿಟ್ಟ – ಮತ್ತೆ ಯಾರದೂ ಫೋನು ಬಾರದಿರಲಿ ಎಂಬ ಆಸೆಯಿಂದ ಮತ್ತು ಇನ್ನು ಯಾವುದೂ ಬೇಡವೆಂದು ಹೋಗಿ ಮಲಗಿಕೊಂಡೇ ಸಿಗರೇಟು ಹಚ್ಚಿದ. ಮೈಥಿಲಿಯ ತಪ್ಪೇ ಅಥವಾ ತನ್ನದೇ ಏನಾದರೂ ತಪ್ಪಿರಬಹುದೇ ಎಂಬುದು ತಿಳಿಯದೆ ಕೊಂಚ ಹೊತ್ತು ಮಂಕಾಗಿ ಕುಳಿತ. ಈ ಮಂಕುತನ ತನ್ನದೇ ವಿಕ್ಷಿಪ್ತ ಚಟುವಟಿಕೆಯಿಂದಾಯಿತೇ ಅಥವಾ ಅಪರಿಮಿತ ವಾಂಛೆಯಿಂದ ಕೆನೆಯುವ ಕುದುರೆಯಂತಿರುವ ಮೈಥಿಲಿಯ ದುಷ್ಟ ಅಹಂಕಾರದಿಂದಲೇ ಕ್ಷಣ ಕಾಲದ ಮಂಕುತನ ಆವರಿಸಿತೇ ಎಂದು ಅವನಿಗೇ ತಿಳಿದಾಯಿತು ಮತ್ತು ಈ ರೀತಿಯ ಮಾತಾಡದೇ ಉಳಿಯುವಂತಾಗುವ ಈ ಮಂಕುತನ ಮೈಥಿಲಿಯ ಸಾಮ್ರಾಜ್ಯದ ಗೋಡೆಗೆ ಒಂದು ಕಲ್ಲು ಎಂದು ಅವಳು ಭಾವಿಸಿದಂತಿದೆ. ಯಾವುದಾದರೂ ಒಂದು ಇತ್ಯರ್ಥ ಮಾಡೋಣವೆಂದರೆ ಅದೇ ಅವಳ ಮೊಂಡುತನ – ಸಿಡುಕು ಮತ್ತು ಮನೆಯ ಗೋಡೆಯೇ ಬಿರಿಯುವಂಥ ಕಿರುಚಾಟ ಹಾಗೂ ಸುತ್ತಣ ಮನೆಯವರು ಬಂದು ಒಂಚೂರು ಇಣುಕಿ ನೋಡಿ ಚಾರುವಿಗೆ ಉಗಿಯಲಿ ಎಂಬ ವಿಕ್ಷಿಪ್ತತೆ! ಒಬ್ಬ ಹೆಂಗಸಲ್ಲಿ ಈ ಎಲ್ಲಾ ಮನೋಭಾವವು ಗೂಡು ಕಟ್ಟಿಕೊಂಡು ಕುಳಿತರೆ ಅಂಥ ಹೆಂಗಸಿಗೆ ಏನೆಂದು ಹೆಸರಿಡಬಹುದು? "ಲೇಡಿ ಮ್ಯಾಕ್‌ಬೆತ್ ಕೂಡಾ ಯಾವುದೋ ಮನೋರೋಗದಿಂದ ನರಳುತ್ತಿದ್ದಳಂತೆ." ಕೈಯಲ್ಲಿ ರಕ್ತದ ಕಲೆಯನ್ನು ಅಂಟಿಸಿಕೊಂಡ

ಹೆಂಗಸಿಗೆ ಅರೇಬಿಯಾದ ಸುಗಂಧ ದ್ರವ್ಯವೂ ಒಂದು ಹುಚ್ಚು – ಅದರ ಇನ್ನೊಂದು ಹೆಸರು ಮೈಥಿಲಿ. ಇದನ್ನು ಹೇಗಾದರೂ ಮಾಡಿ ಸರಿ ಮಾಡಬೇಕೆಂದು ಯೋಚಿಸಿದ ಚಾರು ಮತ್ತೆ ಸಮಾಧಾನದಿಂದಲೇ ಮೈಥಿಲಿಯನ್ನು ಕರೆದ "ಮೈಥಿಲಿ –ಇಲ್ಲ ಬಾ. ಖಂಡಿತ ನಾನು ಹೊಡೆಯಬಾರದಿತ್ತು. ನಿನ್ನ ಮನಸ್ಸಿನಲ್ಲಿ ಏನಿದೆ? ಅದನ್ನು ಹೇಳು?" ಮೊದಲು ಈ ಮಾತನ್ನು ಆಡಿದವನು ಚಾರು. ಆದರೆ, ಬೆಡ್ ರೂಮಿನಲ್ಲಿ ಮುಸುಕು ಹೊದ್ದುಕೊಂಡು ಮಲಗಿದ ಮೈಥಿಲಿ ತುಂಬಾ ನಿರ್ಲಕ್ಷ್ಯದಿಂದಲೇ ಇದ್ದಳು. ಮಾತು ಬಂಗಾರ–ಮೌನ ಬೆಳ್ಳಿ! ಪುನಃ ಚಾರು ಕರೆದ, "ಮೈಥಿಲಿ ಸಾರಿ ಅಂದೆನಲ್ಲಾ. ಏನಾಗಿದೆ ನಿನಗೆ?" ಅದಕ್ಕೇ ಮೈಥಿಲಿಯೆಂದಳು. "ನಿಮ್ಮ ಹತ್ರ ಮಾತಾಡುವುದೇ ಅರ್ಥಹೀನ. ಒಂದು ಸಣ್ಣ ನೆಮ್ಮದಿಯೂ ಇಲ್ಲದಂತೆ ಮಾಡಿಬಿಡುತ್ತೀರಿ? ನನಗೆ ನೆಮ್ಮದಿ ಬೇಕು. ಮಜಾ ಮಾಡಬೇಕು ಅಷ್ಟೆ, ಅದರಾಚೆಗೆ ಬೇರೇನೂ ಇಲ್ಲ. ನಿಮ್ಮಿಂದಾಗಿ ನಗೆ ಯಾವ ನೆಮ್ಮದಿಯೂ ಇಲ್ಲ." ಮೈಥಿಲಿಯ ಮಾತಿನಲ್ಲಿ "ನೆಮ್ಮದಿ", "ಮಜಾ" ಅನ್ನುವ ಮಾತುಗಳು ಅವಳದಲ್ಲ. ಅದು ಯಾರ ನೆಟ್ಟ ಪದ? ಚಾರು ಕೊಂಚ ಯೋಚಿಸಿದ: ದೇವವ್ರತ ಮೈಥಿಲಿಯ ಮನಸ್ಸಿನಲ್ಲಿ ಆ ಪದಗಳನ್ನು ನೆಟ್ಟಿದ್ದಾನೆ, ಅದು ಮತ್ತೆ ಮತ್ತೆ ಚಿಗುರೊಡೆಯುತ್ತಿದೆ. "ಸರಿಯಷ್ಟೆ, ನೆಮ್ಮದಿ ಅನ್ನುವುದು ಎಲ್ಲಿಯೋ, ಹೇಗೆಯೋ ಸಿಗೋಲ್ಲ. ನಾನು ಬೀರು ಕುಡಿದರೆ, ರಮ್ ಕುಡಿದರೆ ಆಕ್ಷೇಪಿಸುವ ನಿನಗೆ ನಿನ್ನ ನೆಮ್ಮದಿಯೇ ಮುಖ್ಯವೇನೋ" – ಚಾರುವಿನ ಮಾತಿನಲ್ಲಿ ಸಣ್ಣಗೆ ವ್ಯಂಗ್ಯ ಕಾಣಿಸಿತು. "ಎಯ್ ಮತ್ತೆ ಮಾತಾಡಬೇಡ, ಮೈಯೆಲ್ಲಾ ಉರಿಯುತ್ತೆ ನಂಗೆ, ಸುಮ್ಮನೇ ಹಿಂಸೆ ಮಾಡಬೇಡ." ಮೈಥಿಲಿಯ ಧ್ವನಿಯು ಮತ್ತೆ ದೊಡ್ಡದಾಯಿತು. ಚಾರು ಸುಮ್ಮನೇ ಒಂದೆರಡು ಕ್ಷಣವಿದ್ದು ಮತ್ತೆ ಹೇಳಿದ; "ಏಕವಚನ ಬಳಸ್ಬೇಡ, ವಿಪರೀತ ಸಿಟ್ಟು ಬರುತ್ತೆ" – "ನಾನು ಏಕವಚನ ಬಳಸಿದರೆ ನಿಂಗೆ ಸಿಟ್ಟು ಬರುತ್ತೆ ಅಲ್ವಾ?" ಎನ್ನುತ್ತಲೇ ಮತ್ತೆ ಎದ್ದು ನಿಂತಳು. ಚಾರುಗೆ ಸಿಟ್ಟು ತಡೆಯಲಾಗಲಿಲ್ಲ. "ನೀನು ಕಿರುಚಾಡುವುದರಿಂದ ಪ್ರಯೋಜನವಾಗಲ್ಲ, ಅದು ತಿಳ್ಕೋ" ಎಂದವನೇ ಹೊರಗಡೆ ಬಂದ ಸಿಗರೇಟು ಹಚ್ಚಿಕೊಂಡ. ಮೈಥಿಲಿಯು ಅವನ ಹಿಂದೆಯೇ ಬಂದಳು. "ಅದೇನು – ಅದು ಹೇಳಿ" ಎಂದು ಚಾರುವಿನ ಕೈಯನ್ನು ಬಿಗಿಯಾಗಿ ಹಿಡಿದಳು. ಚಾರು ಬಿಡಿಸಿದ, "ಥೂ ನಿನ್ನ ಜನ್ಮಕ್ಕೆ" ಎಂದ. ತಕ್ಷಣವೇ ಮೈಥಿಲಿಯು ಚಾರುವಿನ ಮುಖಕ್ಕೆ ಉಗುಳಿದಳು ಮತ್ತು ಚಾರುವಿನ ಕೆನ್ನೆಗೆ ಹೊಡೆದಳು. ಕೂಡಲೇ ಚಾರುವು ಅವಳ ಮುಖಕ್ಕೆ ಹೊಡೆದ. ಈ ಕಿರುಚಾಟ ಮತ್ತು ಹೊಡೆದಾಟಗಳು ಚಾರುವಿನ ಮನದಲ್ಲಿ ಹಾಗೆಯೇ ದಾಖಲಾಯಿತು ಮತ್ತು ಮೈಥಿಲಿಯು ಅಳುತ್ತಲೇ ಹೊರಗಡೆ ಮಲಗಿದಳು. ಯಥಾ ಪ್ರಕಾರ ಗೋಡೆ ಗಡಿಯಾರ ಮೌನಕ್ಕೆ ಹೊಡೆಯುತ್ತಿತ್ತು – ತನ್ನ ಮುಳ್ಳುಗಳ ತಿರುಗಾಟದಲ್ಲಿ. ಆದರೆ,

ಮತ್ತೆ ಮೈಥಿಲಿಯ ಅವತಾರ ಬೇರೊಂದು ಕಡೆಗೆ ತಿರುಗಿತು. ಅದು ಮಾತ್ರ ಚಾರುಗೆ ಗೊತ್ತಾಗಲಿಲ್ಲ.

ಮನೆಯೊಳಗೆ ಹೊತ್ತಿ ಉರಿಯುವ ಮತ್ತು ಯಾವತ್ತೂ ಮಸುಕಾಗದೇ ಇರುವಂಥ ಗಂಡ-ಹೆಂಡಿರ ಮುನಿಸು ಕುದಿಯತೊಡಗಿತು. ಅದೇ ಹೊತ್ತಿಗೆ ಹೊರಗಡೆ ನಗರದಲ್ಲಿ ಬೇರೆ ಬೇರೆ ಕೋಮುಗಳ ನಡುವೆ ಗಲಭೆಯುರಿಯತೊಡಗಿತು. ಅದು ಮುಗಿಯುವ ಲಕ್ಷಣವಿರಲಿಲ್ಲ!

ಅದು ತಿಳಿಯುವ ಹೊತ್ತಿಗೆ ತಡವಾಗಿತ್ತು

– ೩ –

ತಾನು ಫೋನು ಮಾಡಿದಾಗ ಬೇರೇನೂ ಮಾತಾಡದೇ ಫೋನನ್ನು ಕೆಳಗಿಟ್ಟು ಬಿಟ್ಟ ರೇಖಾಗೆ ಮೊದಲ ಬಾರಿಗೆ ಚಾರುವಿನಿಂದ ಒಂದು ರೀತಿಯ ಅವಮಾನದ ಒಂದು ಬಾಣ ಬಂದೆರಗಿದಂತೆ ಭಾಸವಾಯಿತು. ತಾನು ಅನವಶ್ಯಕವಾಗಿ ಚಾರುಗೆ ತುಂಬಾ ಭಾರವನ್ನು ತಂದು ಹಾಕುತ್ತಿದ್ದೇನೆ ಎಂದು ಅನಿಸತೊಡಗಿತು. ಯಾವತ್ತೂ ಬೇರೊಬ್ಬರ ಮಾತನ್ನು ಗಮನವಿಟ್ಟು ಕೇಳಿಕೊಂಡೇ ಉತ್ತರಿಸುವ ಚಾರು ಇಂದು ಯಾವುದೇ ರೀತಿಯಲ್ಲಿಯೂ ತನಗೆ ಮಾತಿನ ಅವಕಾಶವನ್ನು ಕಲ್ಪಿಸದಿದ್ದ ಚಾರುವಿನ ನಡತೆಯ ಬಗ್ಗೆ ಯಾಕೋ ರೇಖಾ ವಿಪರೀತವಾಗಿ ಯೋಚಿಸಹತ್ತಿದಳು. "ಬಡವನ ಸಿಟ್ಟು ದವಡೆಗೆ ಮೂಲ", ಯಾವುದೇ ಕಾರಣದಿಂದ ತನಗಿಂತ ಶ್ರೀಮಂತರ ಸ್ನೇಹ ಮಾಡಬಾರದು. ಹಾಗೆಲ್ಲಾದರೂ ಸ್ನೇಹವನ್ನು ಮಾಡಿದರೆ ಕರುಳು ಇರಿಯುವುದು ಬಡವರದೇ ಹೊರತು ಶ್ರೀಮಂತರದಲ್ಲ. ಚಾರುವಿಗೆ ಇಂದು ಏನಾಯಿತು?

ಶ್ರೀಮಂತಿಕೆಯು ಹತ್ತಿರ ಸುಳಿಯತೊಡಗಿದರೆ ಸಾಕು – ಮನುಷ್ಯರಿಗೆ ಕಣ್ಣು ನೆತ್ತಿಯಲ್ಲಿ ಮೂಡುತ್ತದೆಯಂತೆ ಮತ್ತು ಭೂಮಿಯ ಮೇಲೆ ತನ್ನ ದೃಷ್ಟಿಯನ್ನು ಇಟ್ಟುಕೊಂಡಿರುವುದಿಲ್ಲವಂತೆ. ಹೇಳಿ ಕೇಳಿ ಪ್ರಸನ್ನನೆಂಬ ಹುಲಿಯ ಬೆನ್ನ ಮೇಲೆ ಸವಾರಿ ಮಾಡಲು ಹೊರಟು, ಅವನ ಪಂಜದಿಂದ ಮೈ ಮೇಲಿನ ರಕ್ತದ ರುಚಿಯನ್ನು ಅವನಿಗೆ ತೋರಿಸಿಕೊಟ್ಟವಳು. ಈ ಪಜೀತಿಯು ತನ್ನ ಹಣೆಗೆ ಬಂದು ಬಡಿಯಬೇಕೆ? ರೇಖಾ ಪಿಂಟೋ ತಾನು ಅನವಶ್ಯಕವಾಗಿ ಚಾರುವಿನ ಮೇಲೆ ನನ್ನ ಯಾತನೆಯ ಭಾರವನ್ನು ಹೊರಿಸುತ್ತಿದ್ದೇನೆ. ಇದಾಗಬಾರದು ಹೀಗೆಂದು ಯೋಚಿಸುತ್ತಲೇ ಗೋಡೆಗೊರಗಿ ನೆಲದ ಮೇಲೆ ಕುಳಿತುಕೊಂಡು ರೇಖಾಪಿಂಟೋ ಯೋಚಿಸುತ್ತಿದ್ದಳು. ಅವಳಿಗೆ ಹೊರಗಡೆ ದಳ್ಳುರಿಯೊಂದು ಸುಟ್ಟು ಸುಡುಗಾಡು ಮಾಡುವ ದಿನಗಳು ಹತ್ತಿರವಾದವು ಎಂಬುದಾಗಲೀ, ಚಾರುವೆಂಬಾತ ಮುಂದೆ ಒಂದು ದಿನ ತಾನೇ ಬಂದು ತನ್ನ ತಲೆಯನ್ನು ನೇವರಿಸಲಿದ್ದಾನೆಂಬುದಾಗಲೀ ಗೊತ್ತಿಲ್ಲ. ಅವಳ ಪುಟ್ಟ ಅನುಭವದ ಜಗತ್ತಿನಲ್ಲಿ ಒಡೆದ ಕನ್ನಡಿಯ ಚೂರುಗಳಿದ್ದವು ಮತ್ತು ಆ ರಾತ್ರಿ ಅವಳು ತನ್ನ ಪುಟ್ಟ ಬದುಕಿನ ಕನ್ನಡಿಯ ಚೂರುಗಳನ್ನು ಒಂದೆಡೆಗೆ ತಂದು ಜೋಡಿಸುವ ಪ್ರಯತ್ನದಲ್ಲಿದ್ದಳು. ಆ ಪ್ರಯತ್ನದಲ್ಲಿ ಅವಳಿಗೆ ಕಂಡುಬಂದುದು ಕೇವಲ ಅವಳದೇ ಎನ್ನಬಹುದಾದ ನೂರಾರು ಬಿಂಬಗಳು. ಇದ್ದಕ್ಕಿದ್ದಂತೆಯೇ ಅವಳು ಅದನ್ನು ಯೋಚಿಸುತ್ತಿರುವಾಗ ನೆನಪಿಗೆ ಬಂದ ಪ್ರಸನ್ನನ ನೆನಪು ಅವಳಿಗೆ ಒಂದು ರೀತಿಯ ಭಯ ಹುಟ್ಟಿಸಿತು. ಮದುವೆಯಾಗುವ ತನಕವೂ ಹಲ್ಲಿಯ ಲೊಚಗುಟ್ಟುವಿಕೆ; ನಾಯಿಯ ಬೊಗಳುವಿಕೆ ಮತ್ತು ಕಗ್ಗತ್ತಲೆಯಲ್ಲಿ ದೂರದಲ್ಲೆಲ್ಲೋ ಕಾಣಿಸುವ ಕೆಂಪು ದೀಪಗಳಿಗೆ ಹೆದರದೇ ಇದ್ದವಳು ಹೆದರುವುದಕ್ಕೆ ತೊಡಗಿದ್ದಳು. ಅವಳಿಗೆ ಗೊತ್ತೇ ಇಲ್ಲದಂತೆ ಕೆಲವು ಭಯಗಳು ಶುರುವಾಗತೊಡಗಿದ್ದವು. ಕತ್ತಲೆಯೆಂದರೆ ಭಯ ಉರಿಯುವ ಸಣ್ಣ ಮೊಂಬತ್ತಿಯೆಂದರೆ ಭಯ. ಮಲ್ಲಿಗೆಯ ಹೂವುಗಳೆಂದರೆ ಭಯ. ಯಾಕೆಂಬುದೇ ಗೊತ್ತಾಗದೇ ಅವಳನ್ನು ಇವೆಲ್ಲವೂ ಆವರಿಸಿಕೊಂಡಿದ್ದವು. ರೇಖಾ ಪಿಂಟೋ ಸಂಗತಿಗಳನ್ನು ಯೋಚಿಸುತ್ತಿರುವಾಗಲೇ ಇದ್ದಕ್ಕಿದ್ದಂತೆ ಮನೆಯ ಕರೆಂಟು ಹೋಯಿತು. ರೇಖಾ ಕೂತಲ್ಲಿಂದಲೇ "ಅಮ್ಮಾ" ಎಂದಳು. ಅವಳಮ್ಮ ಜೆಸಿಂತಾ ಬಾಯಿ, "ಯಾಕೆ ಅಷ್ಟೊಂದು ಕಿರುಚಾಡ್ತೀಯಾ? ದೀಪ ಉರಿಸಿಕೊಂಡು ಬರ್ತೇನೆ ತಡಿಯಮ್ಮ" ಅಂದಳು. ಸಣ್ಣ ಕ್ಯಾಂಡಲೊಂದನ್ನು ಉರಿಸಿಕೊಂಡು ಬಂದ ಜೆಸಿಂತಾ ಬಾಯಿ, ಯಾಕೆ ಅಷ್ಟೊಂದು ಕಿರುಚಾಡ್ತೀಯಾ ಎಂದು ಕೇಳಿದರೆ ರೇಖಾಳ ಕಣ್ಣಲ್ಲಿ ನೀರು. ಜೆಸಿಂತಾ ಬಾಯಿಯ ಕರುಳು ಚುರುಕ್ಕೆಂದಿತು. "ಯಾಕೆ ಮಗಳೇ" ಎಂದು ರೇಖಾಳ ಹತ್ತಿರ ಬಂದು ಅವಳ ಬೆನ್ನು ತಡವಿದಳು. ರೇಖಾಪಿಂಟೋ ಅಮ್ಮ ಜೆಸಿಂತಾ ಬಾಯಿಯ ತೊಡೆಯಲ್ಲಿ ತಲೆಯಿಟ್ಟು ಮಲಗಿದಳು. ಯಾವುದೋ ಭಯ ಆವರಿಸಿಕೊಂಡ ಮಗುವಿನಂತೆ ತನ್ನ ತಾಯಿಯನ್ನು ಹಿಡಿದುಕೊಂಡಳು. ಜೆಸಿಂತಾ

ಬಾಯಿಯ ಕೈಬೆರಳುಗಳು ರೇಖಾ ಪಿಂಟೋಳ ತಲೆಯನ್ನು ನೇವರಿಸಿದವು. ರೇಖಾಪಿಂಟೋಳ ಕಣ್ಣಿನಿಂದ ಬಿದ್ದ ಹನಿ ಹನಿಯಾದ ಕಣ್ಣೀರು ಜೆಸಿಂತಾ ಬಾಯಿಯ ಸೀರೆಯನ್ನು ನೆನೆಸಿದವು. ಆದರೆ, ನಿಜವಾಗಿಯೂ ಯಾವುದೋ ಒಂದು ರೀತಿಯ ಭಯ ಬಂದು ರೇಖಾಳನ್ನು ಪೀಡಿಸುತ್ತಿದೆಯೆಂದು ಮಾತ್ರ ಗೊತ್ತಾಗಲಿಲ್ಲ. ಅದು ತಿಳಿಯುವುದು ಆಕೆಗೂ ಸುಲಭವಿರಲಿಲ್ಲ!

*

ಕೋಮು ಸೌಹಾರ್ದವೆಂದರೆ ಇದುವೇ, ಗಾಳಿ ಮತ್ತು ಪ್ರಾಣವಿದ್ದ ಹಾಗೆ. ಭೂಮಿ ಮತ್ತು ಪ್ರಕೃತಿಯಿದ್ದ ಹಾಗೆ. ಹೀಗಿದ್ದರೆ ಮಾತ್ರ ಎಲ್ಲವೂ ಸಾಧ್ಯ. ಒಬ್ಬರಿಗೊಬ್ಬರು ಹೊಡೆದಾಡಿಕೊಂಡು, ಬೀದಿಯ ತುಂಬಾ ರಕ್ತದ ರಂಗೋಲಿಯನ್ನು ಬರೆಯುವುದರಿಂದ ಯಾವ ಪ್ರಯೋಜನವಿದೆ. ಮನುಷ್ಯರಾಗಿ ನಾವು ಮನುಷ್ಯರಾಗಿ ಉಳಿಯುವುದು ಹೇಗೆ ಅಂತ ಯೋಚನೆ ಮಾಡೋಣ. ಮನುಷ್ಯ ಸೈತಾನನಾಗುವುದು ಜಾತಿಯ ಹೆಸರಲ್ಲಿ. ಅದು ಧರ್ಮದ ಹೆಸರಲ್ಲಿ. ಬೀದಿಯ ಮೇಲೆ ಮನುಷ್ಯರ ರಕ್ತದ ವಾಸನೆಯು ಹೊಡೆಯಬಾರದು. ನಿಸರ್ಗ ಭೂಮಿಯನ್ನು ರಕ್ಷಣೆ ಮಾಡೋ ಹಾಗೆ; ಭೂಮಿಯು ನಮ್ಮನ್ನು ರಕ್ಷಿಸುವ ಹಾಗೆ – ನಿರಂತರವಾಗಿ ಮನುಷ್ಯ – ಮನುಷ್ಯರನ್ನು ರಕ್ಷಿಸಬೇಕು. ಒಬ್ಬರಿಗೊಬ್ಬರು ಗೌರವಿಸಬೇಕು ಮತ್ತು ಪ್ರೀತಿ–ಗೌರವದಿಂದ ನಡೆದುಕೊಳ್ಳಬೇಕು. "ಸೌಹಾರ್ದವೊಂದರ ಹೊರತು ಮನುಷ್ಯತ್ವವೇ ಸಾಧ್ಯವಿಲ್ಲ." ಇಮಾಮ್ ಸಾಬರು ಮತ್ತು ನಗರದ ಮುಖಂಡರಲ್ಲಿ ಒಬ್ಬರಾದ ಕೆ.ಪಿ. ಪೂರ್ಣಯ್ಯನವರು ಒಂದು ಪತ್ರಿಕಾ ಹೇಳಿಕೆಯನ್ನು ಜಂಟಿಯಾಗಿ ಕೊಟ್ಟರು. ಹಿಂದೂ ಮತ್ತು ಮುಸ್ಲಿಮರು ಅಣ್ಣ–ತಮ್ಮಂದಿರಿದ್ದ ಹಾಗೆ ಯಾವುದೇ ರೀತಿ ಘೋಷಣೆ ಅವಕಾಶ ಕಲ್ಪಿಸಬಾರದೆಂದು ಜನರಿಗೆ ಪತ್ರಿಕೆಯ ಮೂಲಕವೇ ಮನವಿಯನ್ನು ಮಾಡಿದರು. ಅದೂ ಯಾವಾಗ? ಕೋಮು ಗಲಭೆಯು ಉರಿದು ನಗರದ ಅರ್ಧಕ್ಕರ್ಧ ಅಂಗಡಿ ಮುಂಗಟ್ಟು ಪುಡಿ ಪುಡಿಯಾಗಿ ಚೂರಾದ ಮೇಲೆ.

*

ಚಾರು ಬೆಳಗಿನ ಹೊತ್ತು ಏಳುವಾಗಲೇ ಗಂಟೆ ಎಂಟೂವರೆ, ಹಿಂದಿನ ರಾತ್ರಿ ಸರಿಯಾಗಿ ನಿದ್ದೆ ಬಾರದೆ ಹೊರಳಾಡಿದ್ದು ಕಾರಣವೋ ಅಥವಾ ಜಿನ್ ಎಂಬ ತನ್ನ ಮಹಾ ಪ್ರಳಯಾಂತಕ ಜಗತ್ತೊಂದು ತನ್ನನ್ನು ಅದರ ಗರ್ಭದೊಳಗಡೆಗೆ ಸೇರಿಸದೇ ಇದ್ದುದು ಕಾರಣವೋ, ಇಲ್ಲಾ, ಮೈಥಿಲಿಗೆ ತಾನು ಹೊಡೆದು, ಅವಳು ತನಗೆ ಹೊಡೆದುದು ಕಾರಣವೋ – ಅಂತು ರಾತ್ರಿ ಅಂದರೆ ಸರಿಯಾಗಿ ಹನ್ನೆರಡು

ಗಂಟೆಯ ತನಕ ನಿದ್ದೆ ಮಾಡಿದವನು ಮತ್ತೆ ಎಚ್ಚರಾಗಿದ್ದ. ನಿದ್ದೆ ಅಷ್ಟೆ: ಒಂದೆರಡು ಗಂಟೆ, ಸರಿಯಾಗಿ ಮಧ್ಯರಾತ್ರಿ ಹೊತ್ತಿಗೆ ಎಚ್ಚರವಾಗುತ್ತದೆ. ಅದೂ ಮನಸ್ಸಿಗೆ ತುಂಬಾ ಕಿರಿ ಕಿರಿಯೆನಿಸಿದ ದಿನ. ಮತ್ತೆ ಒಡೆದುಹೋದ ನಿದ್ದೆಯು ಪುನಃ ಅವನನ್ನು ಸರಿಯಿಸಲು ಒಂದೆರಡು ಗಂಟೆಗಳ ತನಕ ಸತಾಯಿಸುತ್ತದೆ. ಆ ದಿನ ರಾತ್ರಿಯೂ ಆಗಿರುವುದು ಅದೇ; ಮೈಥಿಲಿಯೊಂದಿಗೆ ಹೊಡೆದಾಟ-ಬಡಿದಾಟ ಮತ್ತು ಚೀರಾಟಗಳು ಮುಗಿದ ಮೇಲೆ - ತನ್ನನ್ನೇ ತಾನು ಗೆಲ್ಲಲಾರ ಎಂದನ್ನಿಸತೊಡಗಿತು. ಹನ್ನೆರಡು ಗಂಟೆಗೆ ಎಚ್ಚರವಾದರೆ ಸ್ವಲ್ಪ ಹೊತ್ತು ಹಾಸುಗೆಯ ಮೇಲೆ ಹೊರಳಾಡಿ ಮತ್ತೆ ಎದ್ದು ಕೂತವನು ಯಥಾ ಪ್ರಕಾರ ಸಿಗರೇಟು ಹಚ್ಚಿ ಹೊರಗಡೆ ಬಂದು ಶತಪಥ ತಿರುಗಾಡಿದ. ಚಾರು ಮನೆಯಲ್ಲಿ ಅತ್ತಿತ್ತ ತಿರುಗಾಡಿದ್ದು ತನಗೂ ಮೈಥಿಲಿಗೂ ಉಂಟಾದ ಜಗಳದ ದೆಸೆಯಿಂದ. ಅದೇ ಸಮಯಕ್ಕೆ ಸರಿಯಾಗಿ ಬೆಲ್ಟ್ ನಾಗೇಶನೂ ತನ್ನ ಮನೆಯಲ್ಲಿ ಅತ್ತಿಂದಿತ್ತ ಓಡಾಡುತ್ತಿದ್ದ; ಬರುವ ಸೂಚನೆಗೆ ಕಾಯುತ್ತಾ ಮತ್ತು ರೇಖಾ ಪಿಂಟೋ ಅಳುತ್ತಾ, ತಾಯಿಯ ತೊಡೆಯ ಮೇಲೆ ಮಲಗಿದವಳು ಅಲ್ಲಿಯೇ ನಿದ್ದೆ ಹೋಗಿದ್ದಳು. ನಿದ್ದೆ ಹೋಗಿರುವ ಮಗಳನ್ನು ಅಲ್ಲಿಯೇ ಮಲಗಿಸಿ, ಅವಳ ಮೈ ಮೇಲೆ ಹೊದಿಕೆಯನ್ನು ಜೆಸಿಂತಾ ಬಾಯಿಯು ಹೊದೆಸುತ್ತಿದ್ದಳು. ಚಾರುಗೆ ಯಾಕೋ ನಿದ್ದೆಯೇ ಬರುತ್ತಿಲ್ಲವೆನಿಸಿ ಸಿಗರೇಟು ಹಚ್ಚಿಕೊಂಡೇ ಮನೆಯೊಳಗೆ ಸುತ್ತು ಹೊಡೆದ. "ನೆಮ್ಮದಿಯಿಲ್ಲ" ಎಂದು ಕಿರುಚಾಡುತ್ತಲೇ ಇರುವ ಮೈಥಿಲಿಯು ತುಂಬಾ ನೆಮ್ಮದಿಯಿಂದ ಸುಖವಾಗಿ ನಿದ್ದೆ ಹೊಡೆಯುವ ಅವಳ ಕ್ರಮವನ್ನು ನೋಡಿ ಆಶ್ಚರ್ಯವೆನಿಸಿತು.

ದೇವವ್ರತನು ಯಾವೆಲ್ಲಾ ಮಾತುಗಳನ್ನು ಮತ್ತು ಭ್ರಮೆಗಳನ್ನು ಮೈಥಿಲಿಯ ಮನಸ್ಸಿನಲ್ಲಿ ಬಿತ್ತಿ ಹೋಗಿದ್ದನೋ ಅದನ್ನೇ ಮೈಥಿಲಿಯು ಆಡುತ್ತಿದ್ದಳು. ಮಾತಿನ ಉದ್ದಗಲಕ್ಕೂ ಅದನ್ನೇ ಎಳೆ ಎಳೆಯಾಗಿ ಬಿಡಿಸಿ ಇಡುತ್ತಾಳೆ. ದೇವವ್ರತನು ಎಷ್ಟೊಂದು ರೀತಿಯಲ್ಲಿ ಮೈಥಿಲಿಯನ್ನು ಆವರಿಸಿಕೊಂಡುಬಿಟ್ಟಿದ್ದಾನೆ ಎನ್ನುವುದಕ್ಕೆ ಅವಳ ಮಾತುಗಳೇ ಸಾಕ್ಷಿಯಾಗಿವೆ. ಮೈಥಿಲಿಯು ಈ ರೀತಿಯ ಅಮಲುಗಳಿಂದ ಹೊರಬರಲು ಮಾತಿನಿಂದ ಆಸೆಯನ್ನು ಬಿತ್ತಿದ್ದಾನೆ. ದೇಹದ ಅಪರಿಮಿತವಾದ; ತಡೆಯಲಾಗದ ವಾಂಛೆಗಳನ್ನು ತುಂಬಿದ್ದಾನೆ. ಈ ಸಣ್ಣ ರೇಖೆಯ ವರ್ತುಲದಿಂದ ಮೈಥಿಲಿಯು ಹೊರಗೆ ಬರೋಲ್ಲ - ಇತ್ಯಾದಿಯೆಲ್ಲಾ ಯೋಚನೆಗಳಿಂದ ಬೆಳ್ಳಿ ಮೂಡುವ ಹೊತ್ತಿಗೆ ನಿದ್ದೆಗೆ ಶರಣಾದ. ಹೀಗೆ ಶರಣಾದವನಿಗೆ ನಿದ್ದೆಯಿಂದ ಎಚ್ಚರವಾದುದು ಬೆಳಿಗ್ಗೆ ಎಂಟೂವರೆಗೆ. ಕಣ್ಣು ತಿಕ್ಕುತ್ತಾ ಎದ್ದು ಕುಳಿತ. ಎದ್ದು ಕುಳಿತು ನೋಡಿದರೆ - ಮೈಥಿಲಿಯಿಲ್ಲ! ಅವಳಿರುವ ಯಾವ ಸೂಚನೆಯೂ ಕಾಣಿಸುತ್ತಿಲ್ಲ. ಚಾರು ಗಾಬರಿಗೊಂಡ. ಅದೇ ಹೊತ್ತಿಗೆ, ಇನ್ನೂ ಸರಿಯಾಗಿ ಕಣ್ತೆರೆದು ನೋಡುವುದಕ್ಕೂ ಸಾಧ್ಯವಾಗದೇ ಇದ್ದ - ಚಾರುಗೆ ಅವನ ಹಾಸಿಗೆಯ ಮೇಲೆ

ಒಂದು ಬಿಳಿಯ ಹಾಳೆಯಲ್ಲಿ ಮೈಥಿಲಿಯು ಬರೆದಿಟ್ಟ ಪತ್ರ ಸಿಕ್ಕಿತು. ಕಣ್ಣಿಗೆ ಒಂಚೂರು ನೀರು ಹಾಕಿಕೊಂಡು ಬಂದು ಲುಂಗಿಯಲ್ಲೇ ಮುಖವೊರಸಿ ಅವಳು ಬರೆದಿಟ್ಟ ಪತ್ರವನ್ನು ಓದಲು ಪ್ರಾರಂಭಿಸಿದ. ಮೈಥಿಲಿಯು ಬರೆದ ಮೊದಲ ವಾಕ್ಯವೇ ಅವನಿಗೆ ನೇರವಾಗಿ ಚುಚ್ಚುವಂತಿತ್ತು: "ಜಗತ್ತಿಗೆ ದೊಡ್ಡ ಆದರ್ಶವನ್ನು ಹೇಳುವ ನಿನಗೆ ನನ್ನ ಕೆಲವು ಮಾತುಗಳನ್ನು ಕೇಳುವ ತಾಳ್ಮೆಯಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಮದುವೆಯ ದಿನ ರಾತ್ರಿ ನೀನು ನನ್ನಲ್ಲಿ ಹೇಳಿರುವ ಮಾತು ನಿನಗೆ ಮರೆತು ಹೋಗಿರಬಹುದು. ಯಾಕೆಂದರೆ ನೀನು ಒಬ್ಬ ಮನುಷ್ಯನಂತೆ ನಟನೆ ಮಾಡ್ತಾ ಇದ್ದಿಯಾ? ನಿಜವಾಗಿಯೂ ನೀನು ಒಬ್ಬ ಗಂಡುಸಾ? ತಾಕತ್ತು ಇದೆಯೇನೋ ನಿನಗೆ? ನಿನ್ನೆ ರಾತ್ರಿ ಹೆಂಡತಿಗೆ ಹೊಡೆಯುವಾಗ ನಿನಗೆ ಇದ್ದ ತಾಕತ್ತು ಮೊದಲು ಯಾಕೆ ಇರಲಿಲ್ಲ. ನೀನು ನನ್ನನ್ನ ಏನೂಂತ ತಿಳ್ಕೊಂಡೆ – ದೇವವ್ರತನಿಗೂ ನನಗೂ ಸಂಬಂಧವಿದೆ ಅಂತ. ನಾನು ದೇವವ್ರತನ ಸೂಳೆಯೆಂದು ಭಾವಿಸಿದೆಯೇನೊ? ಹೆಂಡತಿಯ ಸುಖ ದುಃಖವನ್ನು ನೋಡುವ ತಾಕತ್ತು ಇಲ್ಲದವನು ನೀನು ಲೋಕಕ್ಕೆ ಸಭ್ಯನಂತೆ ನಟಿಸಬಹುದು. ಅದರಿಂದ ಯಾವ ಉಪಯೋಗವೂ ಇಲ್ಲ. ನಿನ್ನನ್ನು ನಂಬಿ ಬಂದುದಕ್ಕೆ ನೀನು ನನಗೆ ಮಾಡಿದ ಮೋಸ, ವಂಚನೆಗಳು ಸಾಕು, ಕಲಿತವನು, ವಿದ್ಯಾವಂತ; ಸಭ್ಯ; ಸಜ್ಜನ ಇತ್ಯಾದಿ ಮುಖವಾಡಗಳನ್ನು ಧರಿಸಿಕೊಂಡು, ಸಾರ್ವಜನಿಕರೆದುರು ಮಾತಾಡುವ ನಿನ್ನ ಮುಖವಾಡದ ಹಿಂದಿರುವ ಕ್ರೌರ್ಯ ಯಾವ ಬಗೆಯದು ಅಂತ ನಿನ್ನೆ ರಾತ್ರಿಯೇ ಗೊತ್ತಾಯಿತು. ನಿನ್ನಂಥ ಷಂಡನನ್ನು; ಹೇಡಿಯನ್ನು ನಾನು ಮದುವೆಯಾದೆನಲ್ಲಾ ಎಂದು ಬೇಸರವಾಗುತ್ತಿದೆ. ನೀನು ಏನು ಬೇಕಿದ್ದರೂ ಮಾಡಿಕೋ – ಆದರೆ ನನ್ನ ಸುದ್ದಿಗೆ ನೀನು ಬರಬೇಡ, ಬಂದೆಯೆಂದಾದರೆ ನಾನಂತೂ ಸುಮ್ಮನೇ ಉಳಿಯುವವಳಲ್ಲ. ಮತ್ತೆ ನಿನ್ನ ಅಧಿಕಾರವನ್ನು ನನ್ನ ಮೇಲೆ ಚಲಾಯಿಸುವ ಯಾವ ಪ್ರಯತ್ನವನ್ನು ಮಾಡಬೇಡ. ಮತ್ತೆ ಮತ್ತೆ ನೀನು ದೇವವ್ರತನನ್ನು ನೆನಪಿಸಬೇಡ. ನನಗೆ ಹಾದರವೇ ಮಾಡಬೇಕೆಂಬ ಮನಸ್ಸು ಇದ್ದಲ್ಲಿ ಅದನ್ನು ನೀನು ಯಾವ ಕಾರಣಕ್ಕೂ ತಡೆಯಲಾರೆ. ನನ್ನದೆಂಬ ತಪ್ಪು ಯಾವುದೂ ಇಲ್ಲದಿರುವಾಗಲೂ ನನ್ನ ಮನಸ್ಸನ್ನು, ದೇಹವನ್ನು ಕೆಡಿಸಿದೆ. ಜಗತ್ತಿನ ಹೆಂಗಸರಿಗೆ ಸಾಕಷ್ಟು ಬೋಧನೆಯನ್ನು ಕೊಡುವ ನೀನು ನಿನ್ನೆ ರಾತ್ರಿ ನನ್ನನ್ನು ಹೇಗೆ ನಡೆಸಿಕೊಂಡೆ? ನೀನು ಇಷ್ಟೊಂದು ದೊಡ್ಡ ಕ್ರೂರಿಯೆಂದು ನನಗೆ ಗೊತ್ತಿರಲಿಲ್ಲ. ನಿನ್ನಷ್ಟು ಸ್ವಾರ್ಥಿ ಮನುಷ್ಯರು ಈ ಜಗತ್ತಿನಲ್ಲೇ ಇರಲಾರರು. ಹೆಂಡತಿಯಾದ ನನ್ನ ಮೇಲೆ ನಿನ್ನ ಅನುಮಾನ. ನೀನು ನನಗೇನು ಸ್ವಾತಂತ್ರ್ಯ ಕೊಟ್ಟೆ. ಹೆಂಡತಿಯೆಂದರೆ ನಿನ್ನ ಅಡಿಯಾಳು ಅಂತ ಭಾವಿಸಿಕೊಂಡಿದ್ದಿ. ಥೂ ನಿನ್ನ ವಿಕೃತವಾದ ಮನಸ್ಸು ಹೊಲಸಿನಲ್ಲಿ ಹೊರಳಾಡುತ್ತಿದೆ. ಅದಕ್ಕೆ ನಾನೇನು ಮಾಡಬೇಕು? ನೀನು ಇಷ್ಟು ನೀಚನೆಂದು ಗೊತ್ತಿದ್ದರೆ ಖಂಡಿತಾ ನಿನ್ನನ್ನು ಮದುವೆಯಾಗುತ್ತಿರಲಿಲ್ಲ

ಮತ್ತು ನೀನು ನನ್ನ ಬಾಳನ್ನು ಹಾಳು ಮಾಡಿದ್ದೀಯಾ? ತಾಕತ್ತಿದ್ದರೆ ಅದನ್ನು ಸರಿಮಾಡಿಕೊಡು, ಅನಗತ್ಯವಾಗಿ ನನ್ನನ್ನು ಕೆಣಕಬೇಡ ಮತ್ತು ನನ್ನ ಸುದ್ದಿಗೆ ಬರಬೇಡ. ನಿನ್ನ ವಿಷಯದಲ್ಲಿ ಈಗ ನನಗೆ ಯಾವ ಗೌರವವೂ, ವಿಶ್ವಾಸವೂ ಉಳಿದಿಲ್ಲ. ನನ್ನ ಸುದ್ದಿಗೆ ನೀನೇನಾದರೂ ಬಂದೆಯೆಂದಾದರೆ ಖಂಡಿತಾ ನಾನು ಸುಮ್ಮನೇ ಇರುವವಳಲ್ಲ. ನಾನೀಗ – ನಿನ್ನನ್ನು ಮದುವೆಯಾದ ಸಂದರ್ಭದಲ್ಲಿನ ಮೈಥಿಲಿಯಲ್ಲ. ಆ ಮೈಥಿಲಿಯು ಯಾವತ್ತೋ ಸತ್ತು ಹೋಗಿದ್ದಾಳೆ. ನೀನಿನ್ನು ನಿನ್ನ ಅಧಿಕಾರ ಮೂಲಕ ಮೈಥಿಲಿಯನ್ನು ಬಗ್ಗಿಸಲಾರೆ, ಇದನ್ನು ನೆನಪಿಟ್ಟುಕೋ. ನೀನು ಪ್ರೀತಿಯಿಂದ ನನ್ನೊಂದಿಗೆ ನಡೆದುಕೊಂಡರೆ ಮಾತ್ರ ನಾನೂ ಹಾಗೆಯೇ ನಡೆಯಬಲ್ಲೆ, ಮತ್ತೆ ನಾನು ನಿನ್ನ ಹಂಗಿನಲ್ಲಿಯೂ ಇಲ್ಲ. ನಿನ್ನಷ್ಟು ಸಂಬಳ ನನಗೂ ಬರುತ್ತೆ ನೆನಪಿಟ್ಟುಕೋ, ಮತ್ತೊಮ್ಮೆ ಹೇಳುತ್ತಿದ್ದೇನೆ. ಇನ್ನೊಮ್ಮೆ ನನ್ನ ತಂಟೆಗೆ ಬಂದರೆ ನಾನೇನು ಮಾಡ್ತೇನೆ ಅನ್ನೋದು ನಂಗೆ ಗೊತ್ತಿಲ್ಲ. ಮತ್ತೆ ಪುನಃ ಸಂಜೆ ಕಿರಿ ಕಿರಿ ಮಾಡಬೇಡ. ಇದು ನೆನಪಿರಲಿ."

ಕಚೇರಿಗೆ ಹೋಗುವ ಮೊದಲು ಈ ಪತ್ರವನ್ನು ಬರೆದಿಟ್ಟಿದ್ದಾಳೆ ಮತ್ತು ಈ ಪತ್ರದಲ್ಲಿ ಬೆದರಿಕೆಯಿದೆ ಹಾಗೂ ಇದೇ ಪತ್ರವು ಮೈಥಿಲಿಯ ಹಾದಿ ಬದಲಾದುದರ ಸ್ಪಷ್ಟ ಕೊಡುಗೆಯಾಗಿದೆ. ಪತ್ರವನ್ನು ಬರೆದುದು ಚಾರುವನ್ನು ಹೆದರಿಸುವುದಕ್ಕೆ ಎನ್ನುವುದು ಸ್ಪಷ್ಟವಾಗಿದೆ ಮತ್ತು ಮಾನಸಿಕವಾಗಿಯೇ ಚಾರುವಿನ ಮೇಲೆ ಆಕ್ರಮಣ ಮಾಡುವ ಇಚ್ಛೆಯನ್ನು ಮೈಥಿಲಿಯು ಹೊಂದಿದ್ದಾಳೆ.

ಈವೊತ್ತು ನಾನು ಆಫೀಸಿಗೆ ಬರೋಲ್ಲ ಎಂದು ಫೋನು ಮಾಡಿ ಹೇಳಿದ. "ರಜಾ ನಮೂದಿಸಿ" ಎಂದೂ ತಿಳಿಸಿದ. ಅದಕ್ಕೆ ಕೂಡಾ ಒಂದು ಕಾರಣವನ್ನು ತನ್ನ ಜೇಬಿನ ಮೂಲದಲ್ಲಿ ಇಟ್ಟುಕೊಂಡಿದ್ದ. ಯಾವುದೋ ಒಂದು ರೀತಿಯ ನಿರ್ಧಾರಕ್ಕೆ ಬಂದವನಂತೆ! ಹೀಗೆ ಬರೆದಿಟ್ಟು ಮೈಥಿಲಿಯು ಮತ್ತೊಂದು ದೊಡ್ಡ ತಪ್ಪು ಮಾಡಿದ್ದಳು.

ಚಾರುವಿನ ಹೊಸ ರೀತಿಯ ಅವತಾರವೊಂದಕ್ಕೆ ಮೈಥಿಲಿಯೇ ಅಡಿಗಲ್ಲೊಂದನ್ನು ಹಾಕಿದಳು ಮತ್ತು ನೆರಳಾಗಿ ಇರಬೇಕಾಗಿದ್ದ ಮನೆಯ ಗೋಡೆಯ ಮತ್ತೊಂದು ಇಟ್ಟಿಗೆಯನ್ನು ತೆಗೆದಳು. ಮನೆಯು ಕುಸಿಯುವುದಕ್ಕೆ ದಿನಗಳನ್ನು ಎಣಿಸುವ ಕೆಲಸ ಯಾರದೆಂಬುದು ಮಾತ್ರ ನಿಜವಾಗಿಯೂ ಚಾರುವಾಗಲೀ ಮೈಥಿಲಿಯಾಗಲೀ ನಿಶ್ಚಯಿಸಲಿಲ್ಲ.

ಚಾರು ಮಾತ್ರ ಕಚೇರಿಗೆ ಫೋನು ಮಾಡಿ ತನ್ನದು ಈ ದಿನದ ಮಟ್ಟಿಗೆ ರಜವೆಂದು ಹೇಳಿದ್ದ. ಕಚೇರಿಯ ನಿಯಮದ ದೃಷ್ಟಿಯಿಂದ ಮತ್ತು ತನ್ನ ಕರ್ತವ್ಯದ ದೃಷ್ಟಿಯಿಂದ ಒಂದು ತಪ್ಪನ್ನು ಮಾಡಿಯೇಬಿಟ್ಟ!

*

ಎಸ್. ಪಿ. ಸಾಹೇಬರು ಸಾಬರಿಗೆ ಬೆಂಬಲವನ್ನು ಕೊಡುತ್ತಿದ್ದಾರೆಂದು ಶಂಕಿಸಲಾಗಿದೆ. ಹಾಗೂ ಇದರಲ್ಲಿ ಪ್ರತಾಪನ್ ಎಂಬ ಪೋಲಿಸು ಅಧಿಕಾರಿಯು ಶಾಮಿಲಾಗಿದ್ದಾರೆಯೇ ಎಂದು ನಾಗರಿಕರು ಸಂದೇಹಿಸುತ್ತಿದ್ದಾರೆ" ಎಂದು ದಿನಪತ್ರಿಕೆಯ ಎಲ್ಲಾ ಸಂಪಾದಕರನ್ನು ವಿನಂತಿ ಮಾಡಿಕೊಂಡ ನಾಗೇಶ, "ಇಷ್ಟು ಸಹಾಯ ಮಾಡಿ ಸಾರ್. ಇನ್ನೊಂದೆರಡು ದಿನದಲ್ಲಿ ನಿಮ್ಮ ಉಪಕಾರಕ್ಕೆ ಪ್ರತಿಯಾಗಿ ನಾನೇ ಭೇಟಿಯಾಗ್ತೇನೆ ಸಾರ್. ನಮ್ಮ ಮಿತ್ರರು ನಿಮ್ಮನ್ನು ಭೇಟಿಯಾಗ್ತಾರೆ ಸಾರ್. ಸಂಜೆಯ ನಿಮ್ಮ ಪತ್ರಿಕೆಯಲ್ಲಿ ಬರುವಂತೆ ಸಹಾಯ ಮಾಡಿ ಸಾರ್ ಉಳಿದಂತೆ ಇನ್ನೊಮ್ಮೆ" ಎಂದವನೇ ಆಯಾಯಾ ಪತ್ರಿಕೆಯ ವರದಿಗಾರರಿಗೆ ಸಣ್ಣ ಆಸೆಯನ್ನು ತೋರಿಸಿದ. ಇಮಾಮ್ ಸಾಹೇಬರಿಗೆ ಮತ್ತು ಕೆ.ಪಿ. ಪೂರ್ಣಪ್ಪನೆಂಬ ಹಿರಿತಲೆಯ ರಾಜಕಾರಣಿಗಳಿಗೆ ಈ ಸಂಗತಿಯು ಗೊತ್ತಿರಲಿಲ್ಲ. ಗಾಂಧಿವಾದದ ನೆರಳಲ್ಲಿ ಬಂದವರಿಗೆ ಹಿಂಸೆ ಮತ್ತು ಕುಟಿಲ ರಾಜಕಾರಣ ಎರಡೂ ಗೊತ್ತಿಲ್ಲ ಮತ್ತು ಅವರದು ಏನಿದ್ದರೂ ಸತ್ಯಾಗ್ರಹ, ಅಹಿಂಸೆ, ಕೋಮು ಸೌಹಾರ್ದವೆಂಬ ಹಳೆಯ ಅಳಿಸಿಹೋದ ಚಿಹ್ನೆಗಳುಳ್ಳ ನಾಣ್ಯವನ್ನು ಚಲಾವಣೆಗೆ ತರುವ ಪ್ರಯತ್ನ. ಆದರೆ, ಅವರಿಗೆ ಕೋಮುವಾದದ ಬೆಂಕಿ ತಿಳಿಯುವಷ್ಟು ಹೊತ್ತಿಗೆ ತಡವಾಗಿತ್ತು!

ರಸ್ತೆಯಲ್ಲಿ ತಿರುವು

– ೪ –

ಗಂಡನಿಗೆ ಅವನು ಏಳುವುದಕ್ಕಿಂತ ಮುಂಚಿತ ಪತ್ರವನ್ನು ಬರೆದಿಟ್ಟು ಹೊರಟ ಮೈಥಿಲಿಯು ಮತ್ತೊಂದು ಪಾತಾಳಕ್ಕೆ ಕಾಲಿಡಲು ತಯಾರಾಗಿದ್ದಳು. ಗಂಡನ ಬಗೆಗೆ ತನಗಿದ್ದ ವಾಕರಿಕೆ ಮತ್ತು ಅಸಹ್ಯವನ್ನು ನಿರರ್ಗಳವಾಗಿ ಬಳಸಿಕೊಂಡು ಬರೆದ ಪತ್ರ – ಚಾರುವನ್ನು ಖಂಡಿತಾ ಹಿಂಸಿಸುತ್ತದೆ ಮತ್ತು ಇರಿಯುತ್ತದೆಯೆಂಬುದು ಗೊತ್ತು. ತುಂಬಾ ಗಟ್ಟಿಯಾಗಿಯೇ ಇರಿದೆನೆಂಬ ಖುಶಿಯಲ್ಲಿ ಹೊರಟ ಮೈಥಿಲಿಯು ತಾನಿನ್ನು ಕಾಲಿಡುವುದು ಒಂದು ಪ್ರಪಾತಕ್ಕೆ ಎಂಬುದು ಗೊತ್ತಿರಲಿಲ್ಲ. ಅದನ್ನು ಗೊತ್ತುಪಡಿಸುವ ಹೊತ್ತಿನಲ್ಲಿ ತಿಳಿಯದೇ ಅವಳು ತಪ್ಪು ಮಾಡಿದ್ದಳು. ಈ ಪತ್ರವನ್ನು ಚಾರುಗೆ ಬರೆಯುವ ಮುಖಾಂತರ ಅವನ ಗಂಡುಸುತನಕ್ಕೆ ಒಂದು ಸವಾಲು ಹಾಕಿದ್ದೇನೆ ಮತ್ತು ಇನ್ನು ಚಾರು ತನ್ನ ಗಂಡುಸುತನದ ಅಹಂಕಾರವನ್ನು ಕಳೆದುಕೊಳ್ಳುತ್ತಾನೆ. ಇನ್ನು ಯಾವುದೇ ಕಾರಣಕ್ಕೆ ಅವನು ತನ್ನ ಅಧಿಕಾರವನ್ನು ಚಲಾಯಿಸಲಾರ.

ಒಂದು ವೇಳೆ ಚಲಾಯಿಸಿದ ಎಂದಾದರೆ ಅವನ ಮುಖಕ್ಕೆ ಉಗುಳುವುದು ಮಾತ್ರ ಖಾತ್ರಿ!

ಅದು ಅವನನ್ನು ಜೀವ ಸಮೇತವಾಗಿ ನರಳುವಂತೆ ಮಾಡುತ್ತದೆ. ಹಾಗೂ ಮನೆ ಬಿಟ್ಟು ಬೇರೊಂದು ಮನೆಯನ್ನು ಹಿಡಿಯುತ್ತೇನೆ. ಅಷ್ಟರ ಮಟ್ಟಿಗೆ ತನ್ನ ಸ್ವಾತಂತ್ರ್ಯವು ತನಗೆ ಉಳಿಯುತ್ತದೆ. ಈ ಕುರಿತು ಚಾರು ಏನೂ ಮಾಡುವಂತಿಲ್ಲ. ಅವನ ಅಹಂಕಾರದ ಮೊಟ್ಟೆಯನ್ನು ಇಷ್ಟು ಒಡೆದಿರುತ್ತೇನೆ. ಈವೊತ್ತು ಯಾವುದೇ ಕಾರಣಕ್ಕೆ ಚೇತರಿಸಿಕೊಳ್ಳಲಾರ. ಶಿಬಿಯೊಂದಿಗೆ ಈವೊತ್ತು ಮಧ್ಯಾಹ್ನವೇ ವಿವರವಾಗಿ ಮಾತಾಡಿ ಯಾವುದಾದರೂ ಒಂದು ಬಾಡಿಗೆಗೆ ಮನೆ ಸಿಗುತ್ತದೋ ನೋಡಬೇಕು, ಉಳಿದುದು ಆ ಮೇಲಿನ ವಿಷಯ. ಅದನ್ನು ಆಮೇಲೆ ನೋಡಿಕೊಂಡರಾಯಿತು ಎಂದು ಭಾವಿಸಿಕೊಂಡಳು. ಅವಳು ಭಾವಿಸಿಕೊಂಡ ತರಹವೇ ಆಗಿದಿದ್ದರೆ – ಮೈಥಿಲಿಗೆ ಸ್ವಾತಂತ್ರ್ಯ, ಅಧಿಕಾರ ಮತ್ತು ಅವಳಿಗೆ ಇಷ್ಟ ಬಂದವರೊಂದಿಗೆ ಬಾಳು ಎನ್ನುವುದು ಅಂಗೈಯ ಹುಣ್ಣಿನಂತೆ ಎದುರಾಗುತ್ತಿತ್ತು ಮತ್ತು ಅದನ್ನು ಅವಳು ಕಡೆಯತನಕ ಅನುಭವಿಸುತ್ತೇನೆ ಎಂದು ತಿಳಿಯುತ್ತಿದ್ದಳು. ಆದರೆ ಅವಳ ಕನಸಿನ ಗೋಪುರವು ಕುಸಿಯಲು ಅವಳು ಸಂಜೆಯತನಕ ಕಾಯಬೇಕಾಯಿತು! ಸ್ವಾತಂತ್ರ್ಯ ಮತ್ತು ಸ್ವೇಚ್ಛಾಚಾರವೆಂಬುದರ ನಡುವೆ ಕೇವಲ ಅಕ್ಷರಗಳು ಮಾತ್ರ ವ್ಯತ್ಯಾಸವಲ್ಲ. ಅದರ ಹಿಂದಿರುವ ಅನೇಕ ಸಂಗತಿಗಳು ಬೇರೆ ಬೇರೆ ಎಂದು ತಿಳಿಯಲು ಬೇಕಾದಷ್ಟು ಬುದ್ಧಿವಂತಿಕೆಯು ಅವಳಲ್ಲಿ ಇರಲಿಲ್ಲ. ಅದು ಗೊತ್ತಿದ್ದರೆ ಮೈಥಿಲಿಯು ಅನೇಕ ಏಣಿಯನ್ನು ಏರುವುದು ಮತ್ತು ಬೀಳುವುದು – ಈ ಕೆಲಸಗಳಲ್ಲಿಯೇ ಜೀವನವಿಡೀ ಕಳೆಯುತ್ತಿರಲಿಲ್ಲ. ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ಗೊರಕೆ ಹೊಡೆಯುತ್ತಾ, ಮುಸುಕು ಮುಚ್ಚಿಕೊಂಡು ಮಲಗಿದ್ದ ಚಾರುವಿನ ತಲೆದಿಂಬಿನ ಹತ್ತಿರ ತನ್ನ ಪತ್ರವನ್ನು ಬರೆದಿಟ್ಟು ಕಚೇರಿಗೆ ಹೊರಟವಳು ಸಂಭ್ರಮದಲ್ಲಿದ್ದಳು. ಲಿಪ್‌ಸ್ಟಿಕ್ ಕೊಂಚವೂ ವ್ಯತ್ಯಾಸವಾಗದಂತೆ ತೆಳುವಾಗಿ ಲೇಪಿಸಿಕೊಂಡವಳು ಹಸಿರು ಬಣ್ಣದ ಸೀರೆ ಮತ್ತು ಅದಕ್ಕೆ ಸರಿಯಾದ ಬ್ಲೌಸನ್ನು ಹಾಕಿ ಕನ್ನಡಿಯನ್ನು ನೋಡಿದಳು. ಶಿಬಿಯು ಸುಮ್ಮನೇ ನನ್ನನ್ನು ನೋಡುತ್ತಿಲ್ಲ. ನನ್ನ ಯೌವನದ ಗುಟ್ಟೆಲ್ಲಾ ಬ್ಲೌಸಿನಲ್ಲಿಯೇ ಅಡಗಿಸಿದ್ದೇನೆ ಎಂದು ಭಾವಿಸಿಕೊಂಡಳು. ಕನ್ನಡಿಯನ್ನು ನೋಡುವಾಗ ಅನವಶ್ಯಕವಾಗಿ ಶಿಬಿಯು ನೆನಪಿಗೆ ಬಂದು ಗಲ್ಲ ಕೊಂಚ ಕೆಂಪೇರಿತು. ತನ್ನ ಯೌವನವು ಕುಗ್ಗದೇ ಇರುವುದೇ ತನ್ನ ಅಪೂರ್ವವಾದ ಸಾಧನೆ. ತನ್ನ ಜೊತೆ ಎಲ್ಲಾದರೂ ವಾಕಿಂಗ್ ಹೊರಟರೆ ಚಾರು ತುಂಬಾ ವಯಸ್ಸಾದವರಂತೆ ಕಾಣಿಸುತ್ತಾರೆ. ಚಾರುವಿನ ಜೊತೆ ವಾಕಿಂಗ್ ಹೋಗುವುದು; ಅವನ ಜೊತೆ ಹಾಸಿಗೆಯಲ್ಲಿರುವುದು; ಅವನ ಜೊತೆ ಕೂತು ಊಟ ಮಾಡುವುದು – ಎಲ್ಲಾ ಈಚಿನ ದಿನಗಳಲ್ಲಿ ಅಸಹ್ಯವೆನಿಸತೊಡಗಿದೆ. ಇಷ್ಟೊಂದು ಗಲೀಜು ಮನುಷ್ಯನನ್ನು ತಾನು ಜೀವನ ಸಂಗಾತಿಯಾಗಿ ಯಾಕೆ ಆರಿಸಿಕೊಂಡೆನೇನೋ? ಶಿಬಿಯ ನೆನಪಾದಾಗ ಮೈಯಲ್ಲಿ ಹೊಸದೊಂದು ಪುಳಕ; ದೇವವ್ರತನನ್ನು ನೆನಪಿಸಿಕೊಂಡಾಗ ಸುಖ ಸಿಕ್ಕಿಯೂ ಸಿಗದ ಅತೃಪ್ತಿ ಮತ್ತು ಚಾರುವನ್ನು

ನೆನಪಿಸಿಕೊಂಡಾಗ ಅಸಹ್ಯ ಯಾಕೆ ಹೀಗಾಗುತ್ತದೆಯೆಂದು ನೆನಪಿನ ಮತ್ತು ವರ್ತಮಾನದ ಸಂಗತಿಗಳನ್ನು ಬೆಳೆಸಿಕೊಂಡೇ ಕಚೇರಿಯ ಕಡೆಗೆ ಹೊರಟಿದ್ದಳು. ಆದರೆ, ಅವಳ ಉತ್ಸಾಹವೊಂದು ಕುಗ್ಗುವ ಪ್ರಸಂಗವು ನಡೆಯಿತು. ಅದು ಏನೆಂದರೆ, ಕೋಮು ಗಲಭೆಯು ಹನ್ನೊಂದು–ಹನ್ನೆರಡು ಗಂಟೆ ಮತ್ತೆ ಉಲ್ಬಣಗೊಳ್ಳುವ ಸ್ಥಿತಿಯಿತ್ತು. ಆದರೆ ಅದು ಕಚೇರಿಗೆ ತಲುಪುವ ತನಕವೂ ಮೈಥಿಲಿಗೆ ತಿಳಿದಿರಲಿಲ್ಲ ಮತ್ತು ಬೆಳಿಗ್ಗೆ ಅವಳು ಕಚೇರಿಯನ್ನು ತಲುಪುವಾಗ ಶಿಬಿ ಮತ್ತು ಅಟೆಂಡರ್ ಮಾತ್ರವೇ ಇದ್ದರು. ಶಿಬಿಯು ಯಾವುದೋ ಫೈಲೊಂದನ್ನು ತಿರುವಿ ಹಾಕುತ್ತಿದ್ದ ಮತ್ತು ಅಟೆಂಡರ್ ಎಲ್ಲಾ ಟೇಬಲ್‌ಗಳನ್ನು ಒರಸುತ್ತಿದ್ದ. ಮೈಥಿಲಿಯಲ್ಲಿ ಸಂತೋಷವೊಂದು ಅರಳಿ ಹೂ ನಗೆ ಬೀರಿದ್ದನ್ನು ಅಟೆಂಡರ್ ಗಮನಿಸಿದ. "ಏನು ಮೇಡಂ, ಈವೊತ್ತು ಭಾಳಾ ಬೇಗನೆ ಆಫೀಸಿಗೆ ಬಂದುಬಿಟ್ಟಿದ್ದೀರಲ್ಲಾ?" ಎಂದ. "ಬೆಳಿಗ್ಗೆ ನ್ಯೂಸಲ್ಲಿ ಗಲಾಟೆಯಾಗುವ ಸಂಭವವಿದೆಯೆಂದರು. ಮನೆಯಲ್ಲಿ ಕೂತು ಏನು ಮಾಡುವುದು. ಆಫೀಸಲ್ಲಿ ಆರಾಮಾಗಿ ಸಂಜೆಯತನಕ ಕೆಲಸ ಮಾಡಬಹುದಲ್ಲಾ ಎಂದು ಬಂದೆ" ಎಂದು ಮೈಥಿಲಿ ಹೇಳಿದಳಾದರೂ – ಅವಳ ಮಾತಿನಲ್ಲಿ ಅಟೆಂಡರ್‌ಗೆ ನಂಬಿಕೆಯು ಬರಲಿಲ್ಲ. ತನ್ನ ನಂಬಿಕೆಗಿಂತ ಹೊರತಾದ ಬೇರೆ ನಂಬಿಕೆಗಳು ಬೇರೆಯವರ ಮನಸ್ಸಿನಲ್ಲಿಯೂ ಬೇರೂರಿರಬಹುದು ಎಂದು ತಿಳಿಯುವ ಮೈಥಿಲಿಗೆ ಅಟೆಂಡರ್ ಎಂಬಾತ ಯಾವ ಕಾರಣಕ್ಕೂ ನಂಬಿಕೆಗೆ ಯೋಗ್ಯನಲ್ಲ. ಯಾಕೆಂದರೆ ಸ್ಥಾನ–ಮಾನದ ದೃಷ್ಟಿಯಿಂದ ಅವನೊಬ್ಬ ಅಟೆಂಡರ್ ಮಾತ್ರ ಅಲ್ಲದೆ ಅವನಂಥವರಲ್ಲಿ ಹೆಚ್ಚು ಸಲುಗೆಯಿಂದ ಮಾತಾಡುವುದು ತನ್ನ ಸ್ಥಾನ–ಮಾನದ ದೃಷ್ಟಿಯಿಂದ ಕುಂದು. ಹೀಗಾಗಿಯೇ ಅಟೆಂಡರ್ ಕೇಳಿದ ಪ್ರಶ್ನೆಗೆ ಒಂದೆರಡು ವಾಕ್ಯದಲ್ಲಿ ಉತ್ತರಿಸಿ, ಮತ್ತೆ ತನ್ನ ಚೆಯರಿನಲ್ಲಿ ಕುಳಿತವಳು, ತಾನು ಬಂದುದನ್ನು ಶಿಬಿ ಗಮನಿಸಿದ್ದಾನೆಯೇ–ಇಲ್ಲವೇ ಎಂಬುದನ್ನು ತಿಳಿಯುವುದಕ್ಕಾಗಿಯೇ ವ್ಯಾನಿಟಿ ಬ್ಯಾಗನ್ನು ಟೇಬಲ್ ಮೇಲೆ ಇಟ್ಟವಳು ಕೆಮ್ಮಿದಳು. ಕೆಮ್ಮು ಕೃತಕವಾಗಿ ಒಡಮೂಡಿದರೂ ಕೂಡಾ. ಆದರೆ, ಶಿಬಿ ಒಮ್ಮೆ ತಲೆಯೆತ್ತಿ ನೋಡಿ ಮುಗುಳ್ನಗೆಯನ್ನು ಬೀರಿ ಮತ್ತೆ ಪುನಃ ಫೈಲಿನಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿದ. ಥೇಂಬರಿನ ಒಳಗಿಂದಲೇ ಒಮ್ಮೆ ಕಣ್ಣೆತ್ತಿ ನೋಡಿ – ಮತ್ತೆ ಫೈಲಿನ ಕಡೆಗೆ ತನ್ನ ಕಣ್ಣನ್ನು ಹರಿಸಿದವನ ಹತ್ತಿರ ಮೈಥಿಲಿಯೇ ಹೋದಳು: "ಏನ್ಸಾರ್, ಬಹಳ ಬೇಗ ಬಂದಿದ್ದೀರಿ? ಏನಿದ್ರೂ ನಿಮ್ಮ ಶಿಸ್ತು ಮತ್ತು ಕಾನೂನಿನ ಬಗೆಗೆ ನೀವಿಟ್ಟುಕೊಂಡಿರುವ ಜ್ಞಾನ ತುಂಬಾ ಖುಶಿಯಾಗುತ್ತೆ ಸಾರ್. ಈ ಕಚೇರಿಗೆ ನೀವು ಬರುವ ತನಕವೂ ಈ ರೀತಿಯ ಒಂದು ಶಿಸ್ತು ಅನ್ನುವುದು ಇರಲಿಲ್ಲ. ನಿಮ್ಮ ಕೈಕೆಗಳಗೆ ಕೆಲಸ ಮಾಡಿದರೆ ಎಷ್ಟೋ ಕೆಲಸವನ್ನು ಕಲಿಯಬಹುದು" ಎಂದ ಮೈಥಿಲಿಯ ಕಣ್ಣು ಶಿಬಿಯ ಮುಖವನ್ನೇ ನೋಡುತ್ತಿತ್ತು. ತಲೆಗೂದಲಲ್ಲಿಯೂ ಈ ಮನುಷ್ಯ ಒಂದು ಶಿಸ್ತು ಕಾಪಾಡಿಕೊಂಡಿದ್ದಾನೆ. ಡ್ರೆಸ್‌ನ ಬಗ್ಗೆ ಇವನಿಗಿರುವ ಕಾಳಜಿ

ಯಾರಿಗೂ ಇಲ್ಲ. ತನಗಿಂತ ಒಂದೆರಡು ವರ್ಷ ಚಿಕ್ಕವನಿರಬಹುದೇನೋ? ಚುರುಕುತನ ಮತ್ತು ಸದಾ ಹಸನ್ಮುಖಿ. ಅಯ್ಯೋ ದೇವರೇ ನಾನೆಂಥ ಗಂಡನನ್ನು ಪಡೆದೆ? ಮೈಥಿಲಿಯು ಮಾತಾಡುತ್ತಲೇ ಯಾವುದೋ ಒಂದು ಕಡೆಗೆ ಓಲಾಡುತ್ತಿರುವ ಸೂಚನೆಯು ಶಿಬಿಗೂ ಸಿಕ್ಕಿತು. "ಏನು ಮೇಡಂ, ಏನು ಯೋಚನೆ ಮಾಡ್ತಾ ಇದ್ದೀರಿ? ಯಾಕೆ? ಏನಾಯಿತು? ನಾನು ಈವೊತ್ತು ಅಂತ ಅಲ್ಲ, ಯಾವಾಗಲೂ ಬೇಗನೇ ಬರುತ್ತೇನೆ. ಯಾಕೆಂದರೆ ನಾನು ಒಬ್ಬಂಟಿ, ಅದಕ್ಕೇ ನನಗೆ ಮನೆಯಲ್ಲಿ ಒಬ್ಬನೇ ಇರುವುದು ಅಂದರೆ ಬೇಜಾರು. ಆಫೀಸಲ್ಲಿ ಕೆಲಸ ಮಾಡುತ್ತಾ ಕಾಲ ಕಳೆಯಬಹುದಲ್ಲಾ? ಅದಕ್ಕಿಂತ ಹೆಚ್ಚಾಗಿ ಈವೊತ್ತು ಗಲಾಟೆಯಾಗಿಬಿಟ್ಟರೆ ಕಷ್ಟ. ಅದಕ್ಕೇ ಬಂದುಬಿಟ್ಟೆ." ಶಿಬಿಯು ತಾನು ಹೇಳಬೇಕಾದುದನ್ನು ಹೇಳಿದ. "ಒಬ್ರೇ ಮನೆಯಲ್ಲಿ ಇರೋದು ಅಂದ್ರೆ ನಿಜವಾಗಿಯೂ ಬೇಜಾರು" ಅಂದಳು ಮೈಥಿಲಿ. ಆದರೆ, ಆಗಲಿರುವ ಮತ್ತೊಂದು ಅನಾಹುತ ಅವಳಿಗೆ ಗೊತ್ತಿಲ್ಲದಂತೆ ಅವಳ ಬಾಯಿಂದ ಮಾತೊಂದು ಉದುರಿಬಂತು. ಆಫೀಸಲ್ಲಿ ಶಿಬಿ ಮತ್ತು ಅಟೆಂಡರ್ ಇಬ್ಬರೇ ಇರುವುದು ಅವಳಿಗೆ ಯಾಕೋ ಸಣ್ಣ ಸಂತೋಷವನ್ನು ತಂದಿದ್ದು, ಅವಳ ಮುಖದಲ್ಲಿ ವ್ಯಕ್ತವಾಯಿತು ಮತ್ತು ಮನೆಯಿಂದ ಹೊರಡುವಾಗ "ಚಾರು"ಗೆ ತಾನೊಂದು ಪತ್ರವನ್ನು ಬರೆದಿಟ್ಟಿದ್ದೆ ಅನ್ನುವುದನ್ನು ಶಿಬಿಯನ್ನು ನೋಡುತ್ತಾ ಮರೆತುಬಿಟ್ಟಿದ್ದಳು. ಶಿಬಿಯೇ ಮತ್ತೆ ಕೇಳಿದ: "ನೀವ್ಯಾಕೆ ಬೇಗಬಂದಿರಿ?" ಮೈಥಿಲಿಯು, "ಇನ್ನೇನು ಮಾಡಲಿ? ನನ್ನ ಗಂಡ ಇನ್ನೂ ಎದ್ದಿರಲಿಲ್ಲ. ಅವರು ಒಂಚೂರು ಹಾಗೆಯೇ, ರಾತ್ರಿ ಗುಂಡು ಹಾಕಿ ಮಲಗಿದರೆ ಮತ್ತೆ – ಬೆಳಿಗ್ಗೆ ಎಷ್ಟು ಹೊತ್ತಿಗೆ ಏಳುತ್ತಾರೋ ಹೇಳಲು ಬರುವುದಿಲ್ಲ." ಮೈಥಿಲಿಯ ಮಾತಿನಲ್ಲಿದ್ದ ಅಸಹನೆಯ ಧ್ವನಿಯು ಶಿಬಿಗೆ ಬಹಳ ಬೇಗನೆ ತಗುಲಿತು: "ಮೈಥಿಲಿಯು ಕೌಟುಂಬಿಕವಾಗಿ ಸುಖಿಯಲ್ಲ. ಒಂದು ಅತೃಪ್ತಿಯು ಅವಳನ್ನು ಕಾಡುತ್ತಿದೆ." ಹತ್ತೂರು ತಿರುಗಿದ ಶಿಬಿಗೆ ಮೈಥಿಲಿಯ ಅಸಂತೃಪ್ತಿಯ ಎಳೆಯು ಸಾಕಾಗಿತ್ತು. ಆದರೆ, ಶಿಬಿಯ ಒಂದೇ ಗುಣವೆಂದರೆ, ಇಂಥ ವಿಷಯದಲ್ಲಿ ಶೀಘ್ರವಾಗಿ ಮುಂದಡಿಯಿಡದೆ ನಿಧಾನವಾಗಿ ಮುಂದುವರಿಯುವುದು. ಅದಕ್ಕಾಗಿಯೇ ಶಿಬಿ ಅವಳ ಮುಖ ನೋಡಿ, "ಹೌದಾ?" ಅಂದ. ಅವನ ಸಣ್ಣದೊಂದು ಪದದಲ್ಲಿ ಬೇರೆ ಅನೇಕ ಅರ್ಥಗಳಿದ್ದವು ಮತ್ತು ಮೈಥಿಲಿಯ ನಾಗಾಲೋಟದ ಆಸೆಯನ್ನು ನುಚ್ಚುನೂರು ಮಾಡಲು ಬೇಕಾದಷ್ಟು ಅವಕಾಶವನ್ನು ಆ ಪದವೇ ಕೊಟ್ಟಿತ್ತು. ಚಾರುಗೆ ತನ್ನ ಪತ್ರಮುಖೇನ ದೊಡ್ಡದೊಂದು ಹಿಂಸೆಯನ್ನು ಕೊಟ್ಟೆ ಎಂಬ ತೃಪ್ತಿಯಲ್ಲಿ ಇದ್ದ ಮೈಥಿಲಿಗೆ ಶಿಬಿಯಿಂದಲೇ ಬೇರೊಂದು ರೀತಿಯ ಉತ್ತರವು ದೊರೆಯಲಿತ್ತು ಅಲ್ಲದೆ ಮತ್ತೆ ಅವಳು ತಿರುಗಿ ನೋಡಲಾಗದಂತೆ ಶಿಬಿಯೇ ಮಾಡಲಿದ್ದ!

ಮನೆಯ ಹೊರಗಡೆಯ ಬೀಗ ಹಾಕಿ, ಸ್ಕೂಟರ್ ತೆಗೆದುಕೊಂಡು ಹೊರಟ

ಚಾರು, ಕಚೇರಿ ರಜೆಯೆಂದು ದೂರವಾಣಿಯ ಮುಖಾಂತರ ಸುದ್ದಿ ತಲುಪಿಸಿದವನು, ಫೋನು ಯಾರು ಎತ್ತಿಕೊಂಡರು ಎಂದು ಗಮನಿಸಿರಲಿಲ್ಲ. ಚಾರುವಿನ ಕಚೇರಿಯ ಯಾವನೋ ಅಟೆಂಡರ್ ಫೋನು ಎತ್ತಿಕೊಂಡವನು 'ಆಯಿತು ಸಾಹೇಬ್ರಿಗೆ ತಿಳಿಸ್ತೀನಿ' ಅಂದವನು ಮತ್ತೈದು ನಿಮಿಷದಲ್ಲಿ ಮರೆತುಬಿಟ್ಟ. ಅವನು ತನ್ನ ರಜೆಯ ವಿಷಯವನ್ನು ಹೇಳಲು ಮರೆಯಬಹುದೆಂದು ಚಾರು ಕೂಡಾ ಭಾವಿಸಿರಲಿಲ್ಲ. ಎದೆಯ ಮೂಲೆ ಮೂಲೆಯಲ್ಲಿ; ಮನಸ್ಸಿನ ಪ್ರತಿಯೊಂದು ನರ ಮಂಡಲಗಳಲ್ಲಿಯೂ ಅವನನ್ನು ವ್ಯಾಪಿಸಿಕೊಂಡುದು ಮೈಥಿಲಿಯ ಪತ್ರ ಸಾಲುಗಳು ಮಾತ್ರ! ಮೈಥಿಲಿಯು ಬರೆದ ಪ್ರತಿಯೊಂದು ಅಕ್ಷರಗಳಲ್ಲಿ ನಂಜು ತುಂಬಿಕೊಂಡಿದೆ – ಹಾವಿನ ದವಡೆಯಲ್ಲಿ ತುಂಬಿಕೊಂಡಿರುವ ವಿಷದಂತೆ. ಮಿಡಿ ನಾಗರಹಾವು ನೋಡಲು ಚೆಂದವಿದೆಯೆಂದು ಮುಟ್ಟಲು ಹೋದವನಿಗೆ ಅದೇ ಮಿಡಿನಾಗರ ತನ್ನ ದವಡೆಯಿಂದ ಅವನ ಮೈತುಂಬಾ ವಿಷವನ್ನು ಹರಿಯಬಿಟ್ಟಂತೆ ಮೈಥಿಲಿ ಪತ್ರದ ತುಂಬಾ ನಂಜು ತುಂಬಿದ್ದಾಳೆ. ಆದರೆ ಪತ್ರದ ಪ್ರತಿಯೊಂದು ಸಾಲಿನ ಅಕ್ಷರಗಳು ಮುದ್ದು ಮುದ್ದಾಗಿವೆ. ಬರವಣಿಗೆಯಲ್ಲಿ ಅವಳು ಯಾವ ಅವಸರವನ್ನು ಇಟ್ಟುಕೊಂಡಂತೆ ಕಾಣಿಸುವುದಿಲ್ಲ. ಹೇಗೂ ರಜೆ ಹಾಕಿದವನಿಗೆ ಸಂಜೆಯತನಕವೂ ಯೋಚಿಸಲು ಸಮಯವಿದೆ. ಬೆಳಿಗ್ಗೆ ಎರಡು; ಮಧ್ಯಾಹ್ನ ಊಟವಾದ ಮೇಲೆ ಹಾಗೂ ರಾತ್ರಿಗೆ ಎರಡು – ಒಟ್ಟು ಆರು ಕ್ವಾಟರ್ ಜಿನ್ನು ತೆಗೆದುಕೊಂಡುಬಿಡಬೇಕು. ಹಾಗೆಯೇ ಒಟ್ಟು ಆರು ಪ್ಯಾಕೆಟ್ ಸಿಗರೇಟು. ಇವತ್ತಿನ ಮಟ್ಟಿಗೆ ಸಾಕು – ಉಳಿದುದನ್ನು ಆಮೇಲೆ ಯೋಚಿಸಿದರಾಯಿತು ಎಂದುಕೊಂಡ ಚಾರು ಸರಿಯಾಗಿ ಎಲ್ಲರೂ ಕಚೇರಿಯಲ್ಲಿ ಸಹಿ ಹಾಕುವ ಹೊತ್ತಿಗೆ ವೈನ್ ಶಾಪಿನ ಹತ್ರ ಹೋದ. ವೈನ್‌ನ ಅಂಗಡಿಯವನು ಅಂಗಡಿಯ ಹೊರಗೆ ನಿಂತಿದ್ದ. ವೈನ್ ಶಾಪ್ ಬಾಗಿಲು ಹಾಕಿತ್ತು. "ಯಾಕಪ್ಪಾ?" ಎಂದು ಚಾರು ಕೇಳಿದ ಕೂಡಲೇ "ಗಲಾಟೆ ಸಾರ್ ಅದಕ್ಕೆ. ನೀವು ಬೇಕಿದ್ದರೆ ಸ್ಕೂಟರನ್ನು ದೂರದಲ್ಲಿ ನಿಲ್ಲಿಸಿ ಅಂಗಡಿಯ ಹಿಂದಿನ ಬಾಗಿಲಿನ ಹತ್ರ ಬಂದುಬಿಡಿ, ನಾನೇ ಪ್ಯಾಕ್ ಮಾಡಿ ತಂದ್ಕೊಡ್ತೀನಿ. ಆದ್ರೆ ಯಾರಿಗೂ ಗೊತ್ತಾಗಬಾರದು, ದುಡ್ಡು ನಾಳೆ ಕೊಡಿ ಸಾರ್ ತಗೊಂಡು ತಕ್ಷಣ ಹೋಗಿಬಿಡಿ ಎಷ್ಟು ಬೇಕು" ಎನ್ನುತ್ತಲೇ ಅವಸರದಿಂದ ಅಂಗಡಿಯಾತ ಹೊರಟ. "ಒಟ್ಟು ಆರು ಕ್ವಾಟರ್ ಜಿನ್, ಅಷ್ಟೇ ಅಲ್ಲೇ ಹಿಂದುಗಡೆಗೆ ಬರ್ತೀನಿ" ಅಂದ ಚಾರು ತನ್ನ ಸ್ಕೂಟರನ್ನು ಸ್ವಲ್ಪ ದೂರ ನಿಲ್ಲಿಸಿದ ಮತ್ತು ವೈನ್ ಶಾಪಿನ ಪಕ್ಕದ ಓಣಿಯಲ್ಲಿಯೇ ಹೋಗಿ, ಅಂಗಡಿಯ ಹಿಂಬಾಗಿಲಿನಿಂದ ಜಿನ್ ತೆಗೆದುಕೊಂಡು ಬಂದ. ಹೀಗೆ ಕದ್ದು ಮುಚ್ಚಿ ಜಿನ್ ತೆಗೆದುಕೊಂಡು ಬರುವುದರಲ್ಲಿಯೂ ಎಷ್ಟೊಂದು ಥ್ರಿಲ್ ಇದೆಯೆಂದು ಚಾರುಗೆ ಅನಿಸಿತು. ಆದರೆ, ಈ ಥ್ರಿಲ್ ಕೂಡಾ ಈ ದಿನದ ಮಟ್ಟಿಗೆ ಚಾರುವಿನ ಪಾಲಿಗೆ ಒಂದು ಜೀವನ್ಮರಣದ ಪ್ರಶ್ನೆಯಾಗುತ್ತದೆಯೆಂದು ತಿಳಿದಿರಲಿಲ್ಲ. ಚಾರು ವೈನ್ ಶಾಪಿನಿಂದ ಜಿನ್‌ನ ಬಾಟಲಿ ಮತ್ತು ಆರು ಪ್ಯಾಕು

ಸಿಗರೇಟು ತೆಗೆದುಕೊಂಡು ವಾಪಾಸು ಮನೆಯ ಕಡೆಗೆ ಹೊರಟ. ಇವನು ಮನೆಯ ಕಡೆಗೆ ಹೊರಟ ಸಮಯಕ್ಕೆ ಸರಿಯಾಗಿಯೇ ರೇಖಾ ಪಿಂಟೋ ಮನೆಯ ಎದುರುಗಡೆಯ ಮಲ್ಲಿಗೆಯ ಬಳ್ಳಿಗೆ ನೀರೆರೆಯುತ್ತಿದ್ದಳು. ವಿಚಿತ್ರವೆಂದರೆ, ಮಲ್ಲಿಗೆ ಹೂ ಆಗದೇ ಇರುವ ಹುಡುಗಿಯೇ ಬೆಳಗಿನ ಎಂಟು–ಒಂಬತ್ತು ಗಂಟೆಯ ಹೊತ್ತಿಗೆ ಮಲ್ಲಿಗೆಯ ಬಳ್ಳಿಗೆ ನೀರೆರೆಯುತ್ತಿರುವುದು!

ಅದೇ ವೇಳೆಗೆ ಮೈಥಿಲಿಯೆಂಬ ಗರತಿಯು ಶಿಬಿಯತ್ರ ತನ್ನ ಕಚೇರಿಯಲ್ಲಿ ಕೂತು ಮಾತಾಡುತ್ತಿದ್ದುದು. ಮೈಯೆಲ್ಲಾ ಕಣ್ಣಾಗಿ ಶಿಬಿಯನ್ನು ನೋಡುತ್ತಿದ್ದುದು ಹಾಗೂ ಶಿಬಿಯು ತನ್ನ ಕಣ್ಣಳತೆಯಲ್ಲಿ ಇರುವ ಮೈಥಿಲಿಯನ್ನು ಪೂರ್ಣವಾಗಿ ಗಮನಿಸುತ್ತಿದ್ದುದು. ಹಾಗೂ ನಾಗೇಶ ಡಾಬಾದ ಬಳಿಯಲ್ಲಿ ತನ್ನ ಹುಡುಗರನ್ನು ಒಟ್ಟು ಸೇರಿಸಲು ಪ್ರಯತ್ನಿಸುತ್ತಿದ್ದುದು. ಏಕಕಾಲಕ್ಕೆ ಇದು ನಡೆಯುತ್ತಿರುವಾಗಲೇ ಜಯಮ್ಮ ತನ್ನ ಸಾರಾಯಿ ಅಂಗಡಿಯ ಬಾಗಿಲು ಮುಚ್ಚಿಕೊಂಡು, "ಈ ಬೇವಾರ್ಸಿಗಳಿಗೆ ಬೇರೆ ಕಸುಬೇ ಇಲ್ಲ" ಎಂದು ಬಯ್ಯುತ್ತಿದ್ದಳು.

ಮಲ್ಲಿಗೆಯ ಬಳ್ಳಿಗೆ ನೀರೆರೆದು ಒಳಗೆ ಬಂದ ರೇಖಾ ಪಿಂಟೋ ಅದೇ ಸಮಯಕ್ಕೆ 'ವಿಸ್ಪರ್'ನ್ನು ಬೀರಿನೊಳಗಡೆಯಿಂದ ಹುಡುಕಿ ತೆಗೆದಳು, ಅವಳಿಗೆ ತಿಂಗಳ ಸ್ರಾವ.

ಚಾರು ಮನೆಯೊಳಗೆ ಬಂದವನು ಬಾಟಲಿಗಳನ್ನು ನಿಧಾನವಾಗಿ ತನ್ನ ಟೇಬಲಿನ ಮೇಲೆ ಸಾಲಾಗಿ ಜೋಡಿಸಿಟ್ಟ. ಒಂದು–ಎರಡು–ಮೂರು–ನಾಲ್ಕು–ಐದು–ಆರು. ಸರಿಯಾಗಿ ಆರು ಬಾಟಲಿಗಳು, ಬ್ಯಾಗಿನಿಂದ ಸಿಗರೇಟು ಪ್ಯಾಕುಗಳನ್ನು ತೆರೆದಿಟ್ಟ. ನಾನು ಕುಡಿಯುವುದು ಮೈಥಿಲಿಗೆ ಆಗುವುದಿಲ್ಲ ಎಂಬುದು ಸರಿಯಾಗಿ ಗೊತ್ತು. ಸಂಜೆಯೊಳಗೆ ನಾಕು ಬಾಟಲಿಗಳನ್ನು ಸರಿಯಾಗಿ ಖಾಲಿ ಮಾಡಬೇಕು ಮತ್ತು ಗಡದ್ದಾಗಿ ನಿದ್ದೆ ಮಾಡಬೇಕು. ಈ ಲೆಕ್ಕಾಚಾರವನ್ನು ಹಾಕಿಕೊಂಡೇ ಚಾರು ರಜೆಯನ್ನು ಹಾಕಿರುವುದು. ದೇವವ್ರತನೊಂದಿಗೆ ತನ್ನ ಸಂಬಂಧವು ಜಾರಿಗೊಳ್ಳುವುದಕ್ಕೆ ತನ್ನ ಕುಡಿತವೇ ಕಾರಣವೆಂದು ಅವಳು ಜಗಜ್ಜಾಹೀರು ಮಾಡಿದ್ದಾಳೆ. ಮತ್ತೆ ಈ ದಿನ ಅವಳ ಪತ್ರ ಮತ್ತೆ ಹಳೆಯ ನೆನಪುಗಳನ್ನು ಎತ್ತಿಕೊಂಡು ಆಟವಾಡಲು ಶುರುಮಾಡಿವೆ. ಚಾರು ಕುಡಿದು ಮಲಗಿರುವಾಗ ಮತ್ತೆ ಯಾರಾದರೂ ಬಂದುಬಿಟ್ಟರೆ ಎಂಬ ಶಂಕೆಯು ಆತನಿಗೆ ಪ್ರಾರಂಭವಾಯಿತು. ಅದಕ್ಕಾಗಿಯೇ ಹೊರಗೆ ಹೋಗಿ ಮುಂಬಾಗಿಲಿನ ಬೀಗವನ್ನು ಜಡಿದು ಹಿಂಬಾಗಿಲಿನ ಮೂಲಕ ಮನೆಯೊಳಗೆ ಪ್ರವೇಶಿಸಿದ. ಪ್ರವೇಶಿಸಿದವನೇ ಹಿಂಬಾಗಿಲಿನ ಬೋಲ್ಟ್ ಹಾಕಿಕೊಂಡ. ಈಗ ತಾನು ಸರ್ವತಂತ್ರ ಸ್ವತಂತ್ರನಾದೆನೆಂಬ ಭಾವ ಅವನಲ್ಲಿ ಮೊಳೆಯತೊಡಗಿತು. ಖುಶಿಯಾದುದೇ ಆವಾಗ; ಈ ಮನೆಯೊಳಗೆ ಯಾರೂ ಇರುವುದಿಲ್ಲವೆಂದು ಎಲ್ಲರೂ ಭಾವಿಸಿರುತ್ತಾರೆ ಮತ್ತು ತಾನು ಮಾತ್ರ ಒಬ್ಬನೇ ಕುಳಿತುಕೊಂಡು ಜಿನ್ ಹೀರುತ್ತಾ ಸರ್ವ

ಸ್ವಾತಂತ್ರ್ಯವನ್ನು ಅನುಭವಿಸುತ್ತೇನೆ ಎಂದು ಭಾವಿಸಿಕೊಂಡ. ಸ್ವಾತಂತ್ರ್ಯದ ನಿಜವಾದ ಖುಶಿಯು ದೊರೆಯುವುದೇ ಇಂಥ ಸಂದರ್ಭದಲ್ಲಿ – ಅಪರೂಪಕ್ಕೊಮ್ಮೆ. ಈಗ ಮನೆಯಲ್ಲಿ ಮೈಥಿಲಿಯೆಂಬ ಹಿಟ್ಲರ್ ಇಲ್ಲ, ಅವಳ ಎದುರು ನಾನು ನಿಲ್ಲಬೇಕಾದ ಅಗತ್ಯವೂ ಇಲ್ಲ. ಮಧ್ಯಾಹ್ನ ಊಟಕ್ಕೆ ಏನಿದೆಯೆಂದು ಮೊದಲು ನೋಡಿಕೊಳ್ಳಬೇಕೆಂದು ಭಾವಿಸಿದವನೇ ಅಡುಗೆ ಮನೆಯ ಒಳಗಡೆ ಹೊಕ್ಕ. ಅಡುಗೆಯ ಮನೆಯಲ್ಲಿ ತಿನ್ನಬಹುದಾದುದು ಯಾವುದೂ ಇಲ್ಲ – ಹಸಿ ಮೊಟ್ಟೆಗಳ ಹೊರತು ಮತ್ತು ಕವರ್ ಕಟ್ಟಿಟ್ಟ ಒಣ ಅವಲಕ್ಕಿ. ಅವಲಕ್ಕಿಗೆ ಮೊಸರು ಹಾಕಿ ತಿನ್ನಬಹುದು, ಅದರಿಂದ ಯಾವುದೇ ಖುಶಿಯಿಲ್ಲ, ಅದಕ್ಕಿಂತ ನಾಲ್ಕು ಮೊಟ್ಟೆಯನ್ನು ಬೇಯಿಸಲು ಇಡುವುದೇ ಹೆಚ್ಚು ಸೂಕ್ತವೆಂದು ಭಾವಿಸಿದನು ಮತ್ತು ಸಣ್ಣ ಪಾತ್ರೆಯೊಂದರಲ್ಲಿ ನಾಲ್ಕು ಮೊಟ್ಟೆಯನ್ನು ಬೇಯಲು ಇಟ್ಟ ಹಾಗೂ ಒಂದೆರಡು ಲೋಟ ನೀರು ತೆಗೆದುಕೊಂಡು ಅಡುಗೆಯ ಮನೆಯಿಂದ ಹೊರಗೆ ಬಂದ. ಅರ್ಧ ಲೋಟ ನೀರಿಗೆ ಅರ್ಧ ಲೋಟ ಜಿನ್ ಬೆರೆಸಿ ಎದುರುಗಡೆಯಿಟ್ಟುಕೊಂಡ. ಹಾಗೆಯೇ ಸಿಗರೇಟು ಹಚ್ಚಿಕೊಂಡ. ಈಗ ಪ್ರಾರಂಭವಾದುದು ಚಾರುವಿನ ಕುಡಿತದ ಯಜ್ಞ! ಈ ಯಜ್ಞದ ಮೊದಲ ಆಹುತಿಯೆಂದರೆ ಅರ್ಧ ಲೋಟವನ್ನು ಗಟಗಟನೆ ಕುಡಿದುದು, ಪಾರ್ಟಿಗಳಲ್ಲಿ ಹೆಚ್ಚಾಗಿ ಭಾಗವಹಿಸದ, ಒಬ್ಬಂಟಿಯಾಗಿ ಕುಡಿಯುವುದರ ಖುಶಿಯೆಂದರೆ ಇದುವೇ; ಪಾರ್ಟಿಗಳಲ್ಲಿ ಗುಂಡು ಹಾಕುವುದು ಎಂದರೆ ಅದಕ್ಕೆ ಅಲ್ಲೊಂದು ಶಿಷ್ಟಾಚಾರವಿರುತ್ತದೆ. ಕುಡಿತವೆನ್ನುವುದು ಶಿಷ್ಟಾಚಾರ ಹೌದೋ ಅಲ್ಲವೋ – ಆದರೆ, ಪಾರ್ಟಿಗಳಲ್ಲಿ ಕುಡಿಯುವಾಗ ಅನಗತ್ಯವಾದ ಒಂದು ಸಭ್ಯತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಎಲ್ಲರ ಲೋಟಕ್ಕೂ ಸಮನಾಗಿ ಗುಂಡು ಹಾಕಿ ಅದರ ಸೋಡಾವನ್ನೋ ಮತ್ತೇನೋ ಬೆರೆಸಿ ಎಲ್ಲವೂ ಆದ ಮೇಲೆ ಕುಡಿಯುವವರು ತಮ್ಮ ಲೋಟಗಳನ್ನು ಪರಸ್ಪರ ತಾಗಿಸಿಕೊಂಡು, ಚಿಯರ್ಸ್ ಎಂದು ಹೇಳಿ, ಆ ಮೇಲೆ ನಿಶ್ಶಬ್ದವಾಗಿ ಒಂದು ಸಿಪ್ ಕುಡಿದು ಅನಂತರ ಲೋಟ ಕೆಳಗಿಡಬೇಕು. ಪಾರ್ಟಿಯಲ್ಲಿ ಯಾರೂ ಗಟಗಟನೆ ಕುಡಿಯುವುದಿಲ್ಲ ಮತ್ತು ಪಾರ್ಟಿಯಲ್ಲಿ ಎಲ್ಲರೂ ಅನಗತ್ಯವಾಗದ ವಿಷಯವನ್ನು ಜಗಿಯುತ್ತಲೇ ಇರುತ್ತಾರೆ. ಒಂದೇ ವಿಷಯ ಹತ್ತಾರು ಬಾರಿ ಪುನರಾವರ್ತನೆಯಾಗುತ್ತವೆ. ಕುಡಿತ ಸರಿಯಾಗಿ ನೆತ್ತಿಯನ್ನು ಏರಿದ ಮೇಲೆ ಸಣ್ಣ ಜಗಳ; ಅಳು ಇತ್ಯಾದಿಗಳು ಶುರುವಾಗುತ್ತವೆ. ಇಲ್ಲವಾದರೆ ಅನಗತ್ಯವಾದ ದೊಡ್ಡ ನಗು. ಕುಡಿಯುವವರ ನಿಶೆ ಏರುವ ಬದಲು ಇಳಿಯಲು ಇಷ್ಟು ಶಿಷ್ಟಾಚಾರಗಳೇ ಸಾಕು! ಈ ತರಹದ ಶಿಷ್ಟಾಚಾರಕ್ಕಿಂತ ಭಿನ್ನವಾಗಿ ಒಬ್ಬನೇ ಹೇಗೇ ಬೇಕೋ ಹಾಗೆ ಕುಡಿಯುವುದು ಮತ್ತು ಹೇಗೆ ಬೇಕೋ ಹಾಗೆ ಇರುವುದು ಒಂದು ನೆಮ್ಮದಿ. ಕುಡಿದ ಮೇಲೆ ನಗಾಡಬೇಕಾಗಿಲ್ಲ, ಅಳಬೇಕಿಲ್ಲ ಮತ್ತು ಜಗಳವೂ ಇಲ್ಲ. ಮೊದಲ ಬಾರಿ ಕುಡಿಯವುದನ್ನು ಕಲಿಯುವುವಾಗ ಮಾತ್ರ – ಗುಂಪಿನಲ್ಲಿ ಚಾರು ಕುಡಿದಿದ್ದ.

ಗುಂಪಿನಲ್ಲಿ ಎಂದರೆ ಒಟ್ಟು ಮೂವರು ಸ್ನೇಹಿತರು ಸೇರಿಕೊಂಡು, ಬಾಲ್ಯದಿಂದಲೂ ತನ್ನ ತರಗತಿಯಲ್ಲಿಯೇ ಎಂಟನೆಯ ತರಗತಿಗೆ ಶಾಲೆಯ ಬಾಗಿಲಿಗೆ ಕೈ ಮುಗಿದು ಹೊರಬಂದ ಮಹಾತ್ಮರು; ನಾರಾಯಣ ಮತ್ತು ಮಹಮ್ಮದ್.

ಆ ದಿನ ಸಂಜೆಯೇ ತುಂಬಾ ಎಡವಟ್ಟು ಆಗಿರುವುದು ನಿಜ. ನಾರಾಯಣ ಮನೆಯಿಂದ ಮೆಲ್ಲನೆ ಕದ್ದು ನಾಲ್ಕು ತುಂಡು ಮಿಡಿ ಉಪ್ಪಿನಕಾಯಿಯನ್ನು, ಒಂಚೂರು ಉಪ್ಪನ್ನು ತೆಗೆದುಕೊಂಡು ಬಂದಿದ್ದ ಮತ್ತು ಮಹಮ್ಮದ್ ಎರಡು ಕ್ವಾಟರ್ "ಟೈಗರ್" ತಂದಿದ್ದ. ವಾಸ್ತವವಾಗಿ ಚಾರುಗೇ ಗೊತ್ತಿಲ್ಲ – ಟೈಗರ್ ಅಂದರೇನು? ಅಂತ. "ಸಂಜೆ ಸರಿಯಾಗಿ ಸರಕಾರಿ ಶಾಲೆಯ ಮೈದಾನದ ಹತ್ತಿರ ಬಾ, ನಿಂಗೆ ಟೈಗರ್‌ನ ರುಚಿ ತೋರಿಸ್ತೇನೆ. ಟೈಗರ್ ಅಂದ್ರೆ ಒಂದು ಸೋಡಾ ಇದ್ದ ಹಾಗಿದೆ, ಏನೂ ಆಗೋಲ್ಲ" ಅಂತ ನಾರಾಯಣ ಕರೆದಿದ್ದ. ಚಾರು ಆಗ ಫೈನಲ್ ಬಿ.ಎ.ಯ ಕೊನೆಯ ರಜೆ ಅನುಭವಿಸುತ್ತಿದ್ದ. ಕತ್ತಲಾಗುವ ತನಕವೂ ಬಾಲ್ಯಕಾಲದ ಸ್ನೇಹಿತರ ಜೊತೆ ಸರಕಾರಿ ಶಾಲೆಯಲ್ಲಿ ಮಾತಾಡುತ್ತಾ ಕೂತ ಚಾರು. ಕೊನೆಗೆ ಮಹಮ್ಮದ್ ಮೆಲ್ಲನೆ ಒಳ ಚಡ್ಡಿಯ ಜೇಬಿಂದ "ಎರಡು ಟೈಗರ್" ತೆಗೆದ. ನಾರಾಯಣ ಉಪ್ಪಿನಕಾಯಿಯನ್ನು ಬಾಳೆಲೆಯಲ್ಲಿ ಕಟ್ಟಿ ತಂದವನು ಎದುರು ಇರಿಸಿದ. "ಚಾರು, ನೀನೀಗ ಕಲಿತವನು, ನಮಗಿಂತ ತುಂಬಾ ಓದಿದ್ದೀಯಾ ಅದಕ್ಕೆ ಒಂದು ಟೈಗರ್ ನಿನಗೆ, ಮತ್ತೊಂದು ಟೈಗರ್‌ನ್ನು ನಾವು ಖಾಲಿ ಮಾಡ್ತೇವೆ. ಕುಡ್ದು ಮತ್ತೆ ಉಪ್ಪಿನಕಾಯಿ ತಿನ್ನು ಏನೂ ಆಗೋಲ್ಲ, ಒಳ್ಳೆ ಶರಬತ್ತು ಇದ್ದ ಹಾಗಿದೆ" ಎಂದ ಮಹಮ್ಮದ್. ನಾರಾಯಣ, "ಬಾಯಿಗಿಟ್ಟವನು ಅದನ್ನು ಮುಗಿಸುವ ತನಕ ಕೆಳಗಿಡಬೇಡ" ಎಂದ. ಚಾರು ಅದರ ಬಗ್ಗೆ ಏನೂ ತಿಳಿಯದೇ ಟೈಗರ್ ಮುಚ್ಚಳ ತೆರೆದು ಕುಡಿದ. ಕಹಿಯಾದರೂ ಬಿಡದೇ ಕ್ವಾಟರ್ ಬಾಟಲನ್ನು ಕುಡಿದು ಅವನು ಅದನ್ನು ನೆಲಕ್ಕಿಟ್ಟ ಕೂಡಲೇ. ನಾರಾಯಣ, "ನೋಡು, ಏನೂ ಆಗೋಲ್ಲ ಅಂದೆನಲ್ಲಾ? ಈಗ ಒಂದು ಮಿಡಿ ಉಪ್ಪಿನಕಾಯಿ ತಿಂದುಬಿಡು" ಅಂದ. ಚಾರು ಉಪ್ಪಿನಕಾಯಿಯನ್ನು ಜಗಿದ. ಅದಾದ ಮೇಲೆ ಮಹಮ್ಮದ್ ಹೇಳಿದ; "ಏಯ್, ಚಾರು ಯಾರಿಗೂ ಬಾಯಿ ಬಿಡಬೇಡ, ಬಾಯಿ ವಾಸನೆ ಬಾರದ ಹಾಗೆ ಒಂದು ಬೀಡಿ ಸೇದಿಬಿಡು, ಎಲ್ಲಾ ಸರಿಯಾಗುತ್ತೆ." ಚಾರು ಬೀಡಿಯೂ ಸೇದಿದ. ಸಿಗರೇಟು ಚಾರುವಿನ ಬಾಯಿಗೆ ಬಂದಿದ್ದು ಅನಂತರ ಮತ್ತು ಆಗ ಅವನಿಗೆ "ಟೈಗರ್" ಅಂದರೆ ಏನೂಂತ ಗೊತ್ತಿರಲಿಲ್ಲ. "ಟೈಗರ್" ಅಂದರೆ ಸಾರಾಯಿಯ ಪರಿಷ್ಕೃತ ರೂಪವೆಂದು ತಿಳಿದದ್ದು ಅನಂತರ ಮತ್ತು ಆ ದಿನ ಕುಡಿತದ ಅಮಲು ಹಾಗೂ ಅದರ ನಂತರದ ವಾಂತಿಯೆಂಬ ಶಿಕ್ಷೆಯನ್ನು ಅನುಭವಿಸಿದ್ದ. ಆಗ ಜೊತೆಯಾದ ಸಂಗಾತಿಗಳು ಕೆಲ ಸಮಯ ಬಿಟ್ಟು – ಈಗಲೂ ಇವೆ. ಅರ್ಧ ಲೋಟ ಜಿನ್ ಖಾಲಿ ಮಾಡಿ ಬಂದ ಮೊದಲ ನೆನಪಿದು. ಕುಡಿಯುವುದು ಆನಂದ ಮತ್ತು ಕುಡಿದ ಅನಂತರ ವಾಂತಿ

ಮಾಡುವುದು ಅಪರಿಮಿತವಾದ ಹಿಂಸೆ. ಆನಂದ ಮತ್ತು ಹಿಂಸೆ ಜೊತೆ ಜೊತೆಗೆ ಇರುವುದು ಕುಡಿತದಲ್ಲಿ. ಅಲ್ಲಿಂದ ಅನಂತರ ಜೊತೆಗಾರರಿಲ್ಲದೆ ಒಬ್ಬನೇ ಎಲ್ಲಾ ಶಿಷ್ಟಾಚಾರಗಳನ್ನು ಹೊರತುಪಡಿಸಿ ಕುಡಿಯುವುದನ್ನು ಕಲಿತ. ಈವೊತ್ತು ಒಬ್ಬಂಟಿಯಾಗಿ ಬಾಟಲಿಯ ಮುಚ್ಚಳ ತೆರೆದ. ಯಾಕೆಂದರೆ, ಮೈಥಿಲಿಯು ಬರೆದಿಟ್ಟ ಪತ್ರ ಅವನ ರಕ್ತನಾಳಗಳಲ್ಲಿ ಸೇರಿಕೊಂಡಿದ್ದವು!

ಮೊಟ್ಟೆ ಬೆಂದಿರಬಹುದೆಂದು ಸ್ಟೌವ್ ಆರಿಸಿ ಬಂದ ಚಾರು ಮತ್ತೊಮ್ಮೆ ಲೋಟಕ್ಕೆ ಸುರುವಿಕೊಂಡ. ಕುಡಿಯುವ ಒಂದು ಮಹಾನ್ ಶಕ್ತಿಯನ್ನು; ಅದರ ಮುಖಾಂತರ ಮೈ ಮರೆವಿನ ಸ್ಥಿತಿಯನ್ನು ಕರುಣಿಸಿದ ಮಹಮ್ಮದ್ ಮತ್ತು ನಾರಾಯಣರಿಗೆ ಮನದಲ್ಲಿಯೇ ಕೃತಜ್ಞತೆಯನ್ನು ಅರ್ಪಿಸಿದ. ಮತ್ತೊಂದು ಬಾಟಲಿಯ ಮುಚ್ಚಳವನ್ನು ತೆರೆಯುವ ಮುನ್ನ ಬೇಯಿಸಿದ ಮೊಟ್ಟೆಯನ್ನು ತಿನ್ನಬೇಕೆಂದು ಅದನ್ನೂ ತಂದು ತನ್ನೆದುರು ಇರಿಸಿಕೊಂಡ. ಒಂದು ಮೊಟ್ಟೆಯ ಸಿಪ್ಪೆ ಸುಲಿದು ತಿಂದ, ಉಪ್ಪು, ಖಾರ ಯಾವುದನ್ನೂ ಹಾಕದೆ. ಆದರೆ, ಅವನ ತಲೆಯ ಮೇಲೆ ನಿಧಾನವಾಗಿ ಅಮಲು ಕುಣಿಯತೊಡಗಿತು. ಮೈಥಿಲಿಯು ಪತ್ರದಲ್ಲಿ ಬರೆದುದನ್ನು ಮತ್ತೊಮ್ಮೆ ಅದೇ ಮಂಜು ಮಂಜಾದ ಕಣ್ಣಲ್ಲಿ ಓದತೊಡಗಿದ. "ಮೈಥಿಲಿಯು ನನ್ನ ಮೇಲೆ ಸವಾರಿ ಮಾಡಲು ಹೊರಟಿದ್ದಾಳು. ಅದಕ್ಕಾಗಿಯೇ ಇಷ್ಟೊಂದು ಅನಾಗರಿಕವಾದ ಭಾಷೆಯನ್ನು ಬಳಸಿದ್ದಾಳೆ." ಚಾರುಗೆ ಈ ಪತ್ರವೇ ನನಗೊಂದು ಆಧಾರ ಪತ್ರವೆಂದು ಅನಿಸಿತು. ಅದನ್ನು ತೆಗೆದು ತನ್ನ ಡೈರಿಯಲ್ಲಿ ತೆಗೆದಿರಿಸಿದ – "ನೀನು ಒಬ್ಬ ಗಂಡಸೇನೋ?"

(ಬರುವ ಚುನಾವಣೆಗೆ ತಾನೂ ಒಬ್ಬ ಅಭ್ಯರ್ಥಿ! ಬೈಕಿನಲ್ಲಿಯೇ ಸುತ್ತು ಹೊಡೆಯುತ್ತಾ, ಎಲ್ಲಿ ಬೇಕೆಂದರಲ್ಲಿ ನುಗ್ಗಿ ಇಡಿಯ ನಗರವನ್ನು ಸುತ್ತಾಡುತ್ತಲೆ ನಾಗೇಶ ಯೋಚಿಸಿದ. ಸಂಜೆಯ ಐದು ಗಂಟೆಯ ತನಕ ತನಗೆ ಸಮಯವಿದೆ, ಉಳಿದುದನ್ನು ಆ ಮೇಲೆ ಎಂದು ಸುಮ್ಮನೇ ಬೈಕ್‌ನಲ್ಲಿಯೇ ಸುತ್ತುವರಿಯುತ್ತಿದ್ದ. ಸಂಜೆ ಐದು ಗಂಟೆಯ ಒಳಗೆ ನಗರವನ್ನು ಪೂರ್ತಿ ಸುತ್ತುವರಿದವನು ಒಬೇದುಲ್ಲಾ ರೋಡಲ್ಲಿಯೂ ಒಂದು ಬಾರಿ ಸುತ್ತುವರಿದ. ಈ ಏರಿಯಾ ಸಂಜೆಯ ಹೊತ್ತಿಗೆ ಬೇರೆ ಬಣ್ಣವನ್ನು ಪಡೆದುಕೊಳ್ಳುತ್ತದೆ. ಕಪ್ಪು ಡಾಂಬರು ರಸ್ತೆಯ ತುಂಬಾ ಕೆಂಪು ರಕ್ತದ ಕಲೆಗಳು ಉದುರಲಿ ಮತ್ತು ಕಮಟು ವಾಸನೆಯು ಬರಲಿ ಎಂದು ಹಾರೈಸಿದವನು ಅನಂತರವೇ ತನ್ನ ಬೈಕಿನ ಹಾದಿಯನ್ನು ಬದಲಾಯಿಸಿದ ಮತ್ತು ಮತ್ತೆ ನಗರದ ಹೊರ ವಲಯದ ಕಡೆಗೆ ಮುಖ ಮಾಡಿದ. ನಗರದ ಹೊರ ವಲಯದ ರಸ್ತೆಯನ್ನು ಹಿಡಿದ ನಾಗೇಶ ಅದೇ ದಾರಿಯಲ್ಲಿ ಮುಂದುವರಿದ. ಅವನು ಹೆದ್ದಾರಿಯಲ್ಲಿ ಬೈಕು ಓಡಿಸುತ್ತಿರುವಾಗಲೇ) ಚಾರು ತನ್ನ ಹಾಸಿಗೆಯ ಬೆಂಕಿಯಾರಿಸಲು ಬಕೆಟಿನಲ್ಲಿ ನೀರು ಸುರಿಯುತ್ತಿದ್ದ ಮತ್ತು ನಾಗೇಶನ ಕಡೆಯ ಹುಡುಗರು ತುಂಬಾ ನಿಯತ್ತಿನಿಂದಲೇ

ಖಾಲಿ ಬೀರ್ ಬಾಟಲಿ, ಸೀಮೆ ಎಣ್ಣೆ ಮತ್ತು ಜೇಬಿನಲ್ಲಿ ಬೆಂಕಿಪೊಟ್ಟಣ ಇರಿಸಿಕೊಳ್ಳುವ ತಯಾರಿಯಲ್ಲಿದ್ದರು. ಮಧ್ಯಾಹ್ನದ ಸಮಯದಲ್ಲಿ ಪುಳಿಯೋಗರೆಯನ್ನು ಶಿಬಿಯೊಂದಿಗೆ ತಿನ್ನುತ್ತಾ ಕಾಲವನ್ನು ಕಳೆದ ಮೈಥಿಲಿಗೆ ಸಂಜೆಯು ಏನಾಗಲಿದೆಯೆಂದು ತಿಳಿದಿರಲಿಲ್ಲ. ಶಿಬಿಯೊಂದಿಗೆ ಬಹಳ ಮಾಮೂಲಿಯಂತೆ ಊಟ ಮಾಡಿದ ಅವಳಿಗೆ ಭೂತ ಮತ್ತು ವರ್ತಮಾನವು ಗೊತ್ತು. ಮುಂದಿನ ಭವಿಷ್ಯದ ಬಗೆಗೆ ಸಣ್ಣ ಚಿಂತೆಯೂ ಅವಳಿಗಿಲ್ಲ. ತನ್ನ ಕೆಲಸವಾದರೆ ಸರಿ ಮತ್ತು ತಾನು ಸುಖಿಯಾಗಿದ್ದರಾಯಿತು. ಅದಕ್ಕಾಗಿಯೇ ಶಿಬಿಯೊಂದಿಗೆ ಹರಟೆ ಹೊಡೆಯುತ್ತಿದ್ದಳು, ಅಷ್ಟೆ!

ಸಂಜೆ ಐದು ಗಂಟೆಯ ಹೊತ್ತಿಗೆ ಇದ್ದಕ್ಕಿದ್ದಂತೆ ಸಣ್ಣದೊಂದು ಸುದ್ದಿಯು ಕಿವಿಯಿಂದ ಕಿವಿಗೆ ಹರಡಿದವು. ನಾಗೇಶನು ಹೇಳಿದ ವಿಷಯವನ್ನು ಸರಿಯಾಗಿ ಪರಿಶೀಲಿಸದೆ ಒಂದೆರಡು ನಗರದ ದಿನಪತ್ರಿಕೆಗಳು ನಾಗೇಶ ಹೇಳಿದಂತೆ ವಿಷಯವನ್ನು ಪ್ರಕಟಿಸಿಬಿಟ್ಟವು. ಒಂದು ದೊಡ್ಡ ಆಧಾರ ರಹಿತವಾದ ಸುದ್ದಿಯೊಂದನ್ನು 'ಕಟಕಿ', 'ಕಿಡಿ' ಮುಂತಾದ ಪತ್ರಿಕೆಗಳು ಪ್ರಕಟಿಸಿದವು. "ನಗರದಲ್ಲಿ ಗಲಭೆ; ಪ್ರತಾಪನ್ ಎಂಬ ಪೋಲಿಸ್ ಅಧಿಕಾರಿಯ ದೌರ್ಜನ್ಯ, ಕೋಮು ಗಲಭೆಯಲ್ಲಿ ಇಬ್ಬರು ಹಿರಿಯ ರಾಜಕಾರಣಿಗಳ ಕೈವಾಡ" – ಇಷ್ಟು ಬರೆದುಹಾಕಿದ ಪತ್ರಿಕೆಯ ಸಂಪಾದಕರು ಯಾವತ್ತೂ ಪತ್ರಿಕೆ ಮೂರು ಗಂಟೆಗೆ ಬಿಡುಗಡೆಯಾಗುವುದಿದ್ದರೆ – ಆದಿನ ಎರಡು ಗಂಟೆಗೆ ವಿಷಯ ತುಂಬಿಸಿ ಪತ್ರಿಕೆಯನ್ನು ಹೊರಗಡೆ ಕಳಿಸಿದರು. ಇವಿಷ್ಟು ಸುದ್ದಿಗಳು ಕಿವಿ ಕಿವಿಯಿಂದ ಹರಡಿದವು. ಎಲ್ಲರೂ ಕಟಕಿ ಮತ್ತು ಕಿಡಿ ಪತ್ರಿಕೆಯನ್ನು ಓದುವವರೇ. ಇಮಾಮ್ ಸಾಹೇಬರು ಮತ್ತು ಕೆ.ಪಿ. ಪೂರ್ಣಯ್ಯನವರು ಜಂಟಿಯಾಗಿ ಕೊಟ್ಟ ಹೇಳಿಕೆ ಉಪಯೋಗಕ್ಕೆ ಬರಲಿಲ್ಲ!

ತಳಬುಡವಿಲ್ಲದ ಸುದ್ದಿಗಳು ಗಾಳಿಯಲ್ಲಿ ಹಾರಾಡುತ್ತಾ ಬಂದು ಮೈಥಿಲಿಯ ಕಚೇರಿಯೊಳಗಡೆಗೂ ಪ್ರವೇಶಿಸಿದವು. ನಗರವು ಮತ್ತೆ ಕರ್ಫ್ಯೂವನ್ನು ಎದುರಿಸಲು ಸಿದ್ಧವಾಯಿತು. ಅದೇ ವೇಳೆ ಸರಿಯಾಗಿ ಪ್ರತಾಪನ್ ಜನ್ನುವನ್ನು ಜೀಪಿನಲ್ಲಿ ಕೂರಿಸಿಕೊಂಡು ನಾಗೇಶನ ಮನೆಯತ್ತ ಹೊರಟ. ಈವತ್ತು ಒಂದು ದಿನದ ಮಟ್ಟಿಗೆ ನಾಗೇಶನನ್ನು ಸ್ಟೇಶನ್ನಿನಲ್ಲಿ ರಿಪೇರಿ ಮಾಡಬೇಕು, ಇದೊಂದು ಸರಿಯಾದರೆ ಎಲ್ಲವೂ ಸರಿಯಾಗುತ್ತದೆ. ಈ ಯೋಚನೆಯಲ್ಲಿಯೇ ಕರೆದು ಪ್ರತಾಪನ್ ಹೊರಟಿದ್ದು ಗಾಂಧಿ ರೋಡಲ್ಲಿ. ಪೋಲಿಸ್ ಜೀಪ್ ಗಾಂಧಿ ರೋಡಿಗೆ ಬರುವುದಕ್ಕೂ ಬಾಟಾ ಕಂಪನಿಯ ಶೂ ಅಂಗಡಿಯ ಎದುರು ಸೀಮೆ ಎಣ್ಣೆಯನ್ನು ತುಂಬಿಸಿ, ಅದಕ್ಕೆ ಬೆಂಕಿ ಕಡ್ಡಿಯನ್ನು ಹಚ್ಚಿ ಬಿಸಾಕಿದ ಎರಡು ಬಾಟಲಿಗಳು ರಸ್ತೆಯಲ್ಲಿ ಬಿದ್ದವು. ಬಾಟಲಿಗಳು ರಸ್ತೆ ಬಿದ್ದು, ದೊಡ್ಡದೊಂದು ಶಬ್ದ ಹಾಗೂ ಬೆಂಕಿಯೆರಡನ್ನು ಉಗುಳಿದವು. ಇದು ಎಲ್ಲಿಂದ ಬಿತ್ತು ಮತ್ತು ಹೇಗೆ ಬಿತ್ತು ಎಂದು ತಿಳಿಯದ ಜನರು ಓಡಲು ತೊಡಗಿದರು ಮತ್ತು ಪ್ರತಾಪನ್ ಸ್ವಲ್ಪ ದೂರದಲ್ಲಿ ಜೀಪ್ ನಿಲ್ಲಿಸಲು ಹೇಳಿ ಜೀಪಿನಿಂದ ಕೆಳಗಿಳಿದ.

ತನಿಖೆಯನ್ನು ಮಾಡುವಷ್ಟು ಸಮಯವಿಲ್ಲ; ಓಡಿ ಹೋಗುತ್ತಿರುವ ಜನರನ್ನು ತಡೆಯುವ ಯಾವ ಪ್ರಯತ್ನವನ್ನು ಪ್ರತಾಪನ್ ಮಾಡಿಲ್ಲ, ಅದರ ಬದಲು ಸೀಮೆ ಎಣ್ಣೆಯನ್ನು ಸುರಿದು ಬಾಟಲಿಯನ್ನು ರಸ್ತೆಗೆ ಬಿಸಾಕಿದವರು ಯಾರು ಎಂದು ಹುಡುಕಲು ಬಾಟಾ ಕಂಪೆನಿಯತ್ರ ಹೋದ: ಆದರೆ, ಕಟ್ಟಡದ ಮೇಲಿಂದ ಬಿದ್ದ ಬಾಟಲಿಗಳು ಮತ್ತು ಅದು ಒಡೆದದ್ದು ಮಾತ್ರ ಗೊತ್ತು. ಒಡೆದವರು ಯಾರು ಅಂತ ಗೊತ್ತಿಲ್ಲ ಅಂತೆಲ್ಲ ಬಾಟಾ ಕಂಪನಿಯ ಅಂಗಡಿಯ ಮೇನೇಜರ್ ಹೇಳಿದ. ಪ್ರತಾಪನ್ ಅಲ್ಲಿಯೇ ನಿಂತುಕೊಂಡು ನೋಡಿದ: "ಇದು ಒಳ್ಳೆಯ ಕಸುಬುದಾರರ ಕೆಲಸ" ಎಂದು ಭಾವಿಸಿದ. ಅದೇ ಸಮಯಕ್ಕೆ ಬಂದು ಮತ್ತೊಂದು ಮೆಸೇಜು – ಬೇರೊಂದನ್ನು ಹೇಳಿತು; ನಗರದ ಹತ್ತಾರು ಕಡೆಯಲ್ಲಿ ಇದೇ ರೀತಿಯ ಪ್ರಕರಣಗಳು. ತುಂಬಾ ಚಲಾಕಿಯಿಂದ ಈ ಕೆಲಸವನ್ನು ಮಾಡಲಾಗಿದೆ. ಪ್ರತಾಪನ್ ನಿಜವಾಗಿಯೂ ಈಗ ಆತಂಕಕ್ಕೆ ಒಳಗಾದ. ಕರ್ಫ್ಯೂ ಇತ್ಯಾದಿಗಳೆಲ್ಲಾ ಕಾನೂನಿನ ಭಾಷೆ. ಕಾನೂನಿಗಿಂತಲೂ ಹೊರತಾದ ಇನ್ನೊಂದು ಭಾಷೆಯನ್ನು ಈ ಗಳಿಗೆಯಿಂದಲೇ ಪ್ರಾರಂಭಿಸಬೇಕು.

ಕೋಮುಗಲಭೆಯಿಂದಾಗಿ ಗಾಬರಿಗೊಂಡವರು ಕಚೇರಿಯ ಬಾಗಿಲು ಮುಚ್ಚಲೇಬೇಕೆಂದು ಮೇಲಧಿಕಾರಿಗಳಿಗೆ ಕೋರಿದರು. ಕಚೇರಿಯ ಕೆಲಸವನ್ನು ಅರ್ಧಕ್ಕರ್ಧದಲ್ಲಿಯೇ ನಿಲ್ಲಿಸಿದವರು ಫೈಲುಗಳನ್ನು ಹಾಗೆಯೇ ಮುಚ್ಚಿಕೊಂಡು ಹೊರಟರು. ಆದಷ್ಟು ಬೇಗನೆ ಮನೆಯನ್ನು ಸೇರಿದರೆ ಸಾಕೆಂದು ಹಂಬಲಿಸಿದವರು ತುರ್ತಾಗಿ ಕಚೇರಿಯ ಹೊರ ಬಾಗಿಲಿನ ಗೇಟನ್ನು ದಾಟಿ ಹೋಗುವ ಅವಸರದಲ್ಲಿ ಇದ್ದರು. ವೆಂಕಟರಮಣ ಜರ್ದಾವನ್ನು ಬಾಯಲ್ಲಿ ತುಂಬಿಕೊಂಡವನು "ಮೇಡಂ, ನಿಮ್ಮನ್ನು ಬೇಕಿದ್ದರೆ ನಿಮ್ಮ ಮನೆಗೆ ತಲುಪಿಸಿ ಬಿಡುತ್ತೇನೆ. ನಿಮ್ಮನ್ನು ಸೇಫಾಗಿ ಮನೆಗೆ ತಲುಪಿಸುವ ಜವಾಬ್ದಾರಿ ನನಗಿರಲಿ. ಅದರ ಬಗ್ಗೆ ಯೋಚನೆಯನ್ನು ಮಾಡಬೇಡಿ" ಎಂದು ಮೈಥಿಲಿಯ ಬಳಿಗೆ ಬಂದು ಹೇಳಿದ. ಅವನು ಆ ರೀತಿಯಲ್ಲಿ ಹೇಳುವಾಗಲೇ ಅವನ ಬಾಯಿಯಿಂದ ಜೊಲ್ಲು ಸುರಿಯಿತು. ಅದನ್ನು ಕೈಯಲ್ಲಿ ಒರಸಿಕೊಂಡ. ಅವನ ದೃಷ್ಟಿಯಲ್ಲೆವೂ ಮೈಮೇಲೆ ಹರಿದಾಡುತ್ತಿರುವಂತೆ ಭಾಸವಾಗಿ ಸೀರೆಯ ಸೆರಗನ್ನು ಸರಿಪಡಿಸಿಕೊಂಡಳು. ಸೀರೆಯ ಸೆರಗು ಸರಿಪಡಿಸಿಕೊಂಡರೂ ಯಾಕೋ ಮತ್ತೆ ಮತ್ತೆ ಅವನ ಕಣ್ಣು ಎದೆಯ ಮೇಲೆ ಹರಿದಾಡುತ್ತಿದೆಯೆಂದು ತಿಳಿದ ಮೈಥಿಲಿ, "ಬೇಡ ಸಾರ್, ನಾನೇ ಆಟೋ ಹಿಡಿದುಕೊಂಡೋ, ಯಾವುದಾದರೂ ಸಿಟಿ ಬಸ್ಸಲ್ಲೋ ಹೋಗ್ತೇನೆ. ಈ ವಿಷಯದಲ್ಲಿ ತುಂಬಾ ಕಾಳಜಿಯನ್ನು ವಹಿಸಬೇಕಾದ ಅಗತ್ಯವಿಲ್ಲ ಮತ್ತು ನನ್ನ ರಕ್ಷಣೆಯನ್ನು ನಾನು ಮಾಡಿಕೊಳ್ಳಬಲ್ಲೆ"– ಈ ಮಾತು ಮೈಥಿಲಿಯ ಬಾಯಿಂದ ಬರುವಾಗ ಕೊಂಚ ಒರಟಾಗಿಯೇ ಬಂತು. ಮೈಥಿಲಿಯ ಬಾಯಿಯಿಂದ ಬಂದ ದೊಡ್ಡ ಸ್ವರವನ್ನು ಕೇಳಿಯೇ ವೆಂಕಟರಮಣ ಹ್ಹಿ ಹ್ಹಿ ಎಂದು ನಗಾಡಿದ. ಆ

ನಗೆಯಲ್ಲಿಯೂ ಸಣ್ಣದೊಂದು ವಿಕಟತೆಯಿತ್ತು. ಮೈಥಿಲಿಯು ವೆಂಕಟರಮಣನಿಗೆ ಬೆನ್ನು ಹಾಕಿ ಹೊರಟಳು. ಅವಳ ಬೆನ್ನನ್ನು ನೋಡುತ್ತಾ ನಿಂತ ವೆಂಕಟರಮಣನ ನೋಟ ಸ್ವಲ್ಪ ಸ್ವಲ್ಪ ಕೆಳಗಡೆ ಸರಿಯಿತು. ಮೈಥಿಲಿಯ ಬೆನ್ನನ್ನು ನೋಡುತ್ತಿದ್ದ ವೆಂಕಟರಮಣನ ಮುಖವನ್ನು ನೋಡಿದವನು ಶಿಬಿ. ಶಿಬಿಯ ಮುಖವನ್ನು ಮೈಥಿಲಿ ನೋಡಿದಳು. ಆಗಲೇ ಶಿಬಿ ಹೇಳಿದ, "ಮೇಡಂ, ನಿಮ್ಮನ್ನು ನಿಮ್ಮ ಮನೆಯ ಬಳಿಗೆ ನಾನೇ ಬಿಡ್ತೇನೆ. ಅದರ ಬಗ್ಗೆ ಯೋಚಿಸಬೇಡಿ." ಅನಿರೀಕ್ಷಿತವಾಗಿ ಶಿಬಿಯಿಂದ ಮಾತು ಕೇಳಿ ಮೈಥಿಲಿಗೆ ತುಂಬಾ ಸಂತೋಷವೆನಿಸಿತು. ಇಡಿಯ ನಗರವೇ ಹೊತ್ತಿ ಉರಿಯುವಾಗ ಒಬ್ಬಳೇ ಹೋಗುವುದು ಸರಿಯಲ್ಲ. ಹಾಗೆಂದು, ವೆಂಕಟರಮಣನ ಸ್ಕೂಟರಿನ ಹಿಂದೆ ಕೂತರೆ ಅದೂ ಸರಿಯೆನಿಸುವುದಿಲ್ಲ. ಇದರಿಂದಾಗಿಯೇ ಶಿಬಿಯು ಹೇಳಿದ ಮಾತು ಬಹಳ ಖುಶಿಯೆನಿಸಿತು. ಇಷ್ಟವಾದ ಆಯ್ಕೆ, "ಸರಿ ಸಾರ್ ನನ್ನ ಮನೆಯ ತನಕ ಬಿಟ್ಟುಬಿಡಿ" ಎಂದಳು ಮೈಥಿಲಿ ನಸುನಗುತ್ತಾ. ಅವಳಲ್ಲಿ ಒಂದು ವೈಯ್ಯಾರ ಮೂಡಿದ್ದನ್ನು ಶಿಬಿಯು ಗಮನಿಸದೇ ಹೋದರೂ ವೆಂಕಟರಮಣ ಗಮನಿಸಿದ. "ಶಿಬಿಯವರೇ, ಏನಿದ್ದರೂ ಮೇಡಂ ಅವರನ್ನು ಬಿಡಲು ನೀವೇ ಸರಿಯಪ್ಪ, ಯುವಕರು ಮತ್ತು ಜೀವನೋತ್ಸಾಹ ಇರುವವರು, ನಮ್ಮದೆಲ್ಲಾ ಏನು ಬಿಡಿ? ನಮ್ಮತ್ರ ಏನಿದೆ? ತಲೆಯಲ್ಲಿ ಬಿಳಿಗೂದಲುಗಳನ್ನು ಹೊರತುಪಡಿಸಿ, ನೀವು ಶಿಬಿಯವರ ಜೊತೆ ಹೋಗಿ ಮೇಡಂ ನಿಮಗೆ ಸರಿಯಾಗುವವರು ಎಂದರೆ ಶಿಬಿಯವರೇ. ನಮಗೆಲ್ಲಾ ಸ್ಕೂಟರನ್ನು ವೇಗವಾಗಿ ಓಡಿಸಲೂ ಬರೋಲ್ಲ, ಬೇಗನೇ ಗೇರು ಬದಲಾಯಿಸೋಲ್ಲ, ವೇಗವಾಗಿ ಓಡಿಸಬೇಕಾದರೆ ಶಿಬಿಯವರೇ ಸರಿ. ಅವರಿಗೆ ಚಕ್ಕನೇ ಗೇರು ಬದಲಾಯಿಸಲು ಬರುತ್ತೆ. ಯಾವ ರಸ್ತೆಯಲ್ಲಾದರೂ ಅವರ ಗಾಡಿ ಹೋಗುತ್ತೆ. ನಮ್ಮ ಗಾಡಿ ಹಳೆಯದು" ಎಂದು ವೆಂಕಟರಮಣನ ಮಾತಿನಲ್ಲಿದ್ದ ದ್ವಂದ್ವಾರ್ಥಗಳನ್ನು ಶಿಬಿ ಚೆನ್ನಾಗಿ ಗಮನಿಸಿದ. ಆದರೆ ಉತ್ತರಿಸಲು ಹೋಗಲಿಲ್ಲ. ಮೈಥಿಲಿಯಂತೂ ಉಳಿದ ಯಾವ ವಿಚಾರದ ಬಗೆಯೂ ತಲೆ ಕೆಡಿಸಿಕೊಂಡವಳಲ್ಲ. ಒಟ್ಟಾರೆಯಾಗಿ ಮನೆಯನ್ನು ತಲುಪಿದರೆ ಸಾಕೆಂದು ಅವಳು ಯೋಚಿಸಿದಳು. ಶಿಬಿಯ ಜೊತೆಗೆ ತಾನೀಗ ಬೈಕಲ್ಲಿ ಹೋಗಲಿರುವ ಮತ್ತು ಮನೆಯನ್ನು ಬೇಗ ತಲುಪಲಿರುವ ಆಲೋಚನೆಯೊಂದು ಮಾತ್ರ ಅವಳ ಎದುರುಗಡೆಯಿತ್ತು. ಆಗಲೇ ಅವಳಿಗೆ ನೆನಪಾದ್ದು; ತಾನು ಚಾರುಗೆ ಒಂದು ಪತ್ರ ಬರೆದಿಟ್ಟಿರುವೆ ಎಂದು. ಕೊಂಚ ಗಲಿಬಿಲಿಯಾದರೂ ತೋರಿಸಿಕೊಳ್ಳದೇ "ಹೋಗೋಣ ಸಾರ್" ಎಂದು ಶಿಬಿಯನ್ನು ಅವಸರಪಡಿಸಿದಳು. ಮನೆಯ ಮತ್ತೊಂದು ಜಂತಿಯನ್ನು ತೆಗೆಯುವ ಕೆಲಸ ತಾನು ಮಾಡುತ್ತಿದ್ದೇನೆ ಎಂಬ ಅರಿವು ಅವಳಿಗಿರಲಿಲ್ಲ. ಅವಳ ಜಗತ್ತಿನಲ್ಲಿ ಅವಳೊಬ್ಬಳೇ ಕೇಂದ್ರ, ಉಳಿದವರೆಲ್ಲಾ ಅವಳ ಹಿಂದೆ ಮುಂದೆ ಓಡಾಡುವ ಗ್ರಹಗಳು. ಅದರಲ್ಲಿ ಶನಿ ಗ್ರಹ ಎಂಬುದು ಒಂದು ಇದ್ದರೆ ಚಾರು ಮಾತ್ರ. ನಿತ್ಯವೂ ಮನೆಯೊಳಗೆ ಕಾಡುವ

ಶನಿ. ಜಾತಕ ಸರಿಯಾಗಿದ್ದು, ಯೋಗವೂ ಸರಿಯಾಗಿದ್ದರೆ ಈ ಚಾರು ಎಂಬಾತನನ್ನು ನಾನು ಮದುವೆಯಾಗುತ್ತಿದ್ದೆನೆ? ಗಜಕೇಸರಿ ಯೋಗವಿದ್ದರೂ ಶನಿಯ ವಕ್ರದೃಷ್ಟಿಯೊಂದು ನಿಮ್ಮ ಮೇಲಿದೆ ಎಂದು ಜೋಯಿಸರು ಹೇಳಿದ್ದು ಸರಿಯಿರಬೇಕು. ಮೈಥಿಲಿಯು ಯೋಚಿಸುತ್ತಲೇ ಶಿಬಿಯ ಹಿಂದೆ ಹೊರಟು ಕಚೇರಿಯ ವೆಹಿಕಲ್ ಸ್ಟ್ಯಾಂಡ್ ಬಳಿ ಬಂದಳು. ಜಾತಕವೆನ್ನುವುದು ಮೂರ್ಖರ ಸಂತೆಯ ಒಂದು ವಿಚಾರವೆನ್ನುವುದು ಅವಳ ಪ್ರಜ್ಞೆಯಲ್ಲಿ ಇದ್ದಿದ್ದರೆ ಕತೆಯೇ ಬೇರೆಯಾಗುತ್ತಿತ್ತು. ಶಿಬಿಯು ಬೈಕ್ ಸ್ಟಾರ್ಟ್ ಮಾಡಿದ ತಕ್ಷಣವೇ ಅವನ ಬೈಕಿನ ಹಿಂದೆ ಮೈಥಿಲಿಯು ಸಂಭ್ರಮದಲ್ಲಿಯೇ ಕುಳಿತಳು. ಈಗ ಅವಳದು ಯಾವ ಗ್ರಹಗತಿಯೆಂದು ಹೇಳಲು ಜೋಯಿಸರು ಇರಲಿಲ್ಲ ಮತ್ತು ಶಿಬಿಯೊಂದಿಗೆ ಹೊರಟ ಮೈಥಿಲಿಯು ಮನೆಯಲ್ಲಿ ಬೇರೊಂದು ಸಂಗತಿಯನ್ನು ಎದುರಿಸಲಿದ್ದೇನೆ ಎಂದು ತಿಳಿದಿರಲೂ ಇಲ್ಲ.

ಯಾವುದೋ ತಿರುವು ಮುರುವು ರಸ್ತೆಗಳಲ್ಲಿ, ಅಡ್ಡ ದಾರಿಗಳಲ್ಲಿ ಬಂದ ಶಿಬಿಯ ಬೈಕ್ ಮೈಥಿಲಿಯ ಮನೆಯ ಎದುರುಗಡೆ ಬಂದು ನಿಲ್ಲುವಾಗ ಸರಿಯಾಗಿ ಆರು ಗಂಟೆ. ಅರೆಗತ್ತಲು ಮುಚ್ಚುವ ಹೊತ್ತು. ಮನೆಯು ಬೀಗ ಹಾಕಿಕೊಂಡಿದೆ. ಅಂದರೆ ಇನ್ನೂ ಚಾರು ಮನೆಗೆ ಬಂದಿಲ್ಲ. ಮೈಥಿಲಿಯು ಶಿಬಿಯ ಬೈಕಿನಿಂದ ಇಳಿದವಳೇ ಅದನ್ನು ಗಮನಿಸಿದಳು. ಚಾರು ಇನ್ನೂ ಆಫೀಸಿಂದ ಬಂದ ಹಾಗೆ ಕಾಣಿಸ್ತಾ ಇಲ್ಲ. "ಮನೆಗೆ ಬನ್ನಿ, ಕಾಫಿ ಕುಡ್ದು ಹೋಗುವಿರಂತೆ. ನನಗಾಗಿ ತುಂಬಾ ದೊಡ್ಡ ರಿಸ್ಕು ತಗೊಂಡ್ರಿ" ಅಂದಳು ಮೈಥಿಲಿ. ಆದರೆ, ಶಿಬಿಯೇ ನಿರಾಕರಿಸಿದ. "ಇನ್ನೊಮ್ಮೆ ಬರ್ತೇನೆ, ನಾನೂ ಕೂಡಾ ಮನೆಗೆ ತಲುಪಿದರೆ ಸಾಕಾಗಿದೆ" ಅನ್ನುತ್ತಲೇ ಹೊರಟುಹೋದ. ಮೈಥಿಲಿಯು ಮನೆಯ ಬೀಗವನ್ನು ತೆರೆದುಬಂದು ಒಳಗೆ ನೋಡಿದಳು. ಚಾರು ಕುಡ್ದು ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಾನೆ. ಹಾಸಿಗೆಗೆ ಬೆಂಕಿ ಹಿಡಿದ ಸರಿಯಾದ ಕಪ್ಪು ಮಸಿ. ಹಾಸುಗೆಯ ಮೇಲೆ ನೀರು ಹಾಕಿ ಅದರ ಮೇಲೆಯೇ ಹಾಗೆಯೇ ಬಿದ್ದುಕೊಂಡ ಚಾರುಗೆ ಮೈಮೇಲೆ ಪ್ರಜ್ಞೆ ಇರುವ ಯಾವ ಸೂಚನೆಯೂ ಕಾಣಿಸಲಿಲ್ಲ ಮತ್ತು ಅದೇ ಹಾಸುಗೆಯ ಪಕ್ಕದಲ್ಲಿ ಕುಡಿದು ಖಾಲಿ ಮಾಡಿಟ್ಟ ಬಾಟಲಿಗಳು, ಅರ್ಧ ತಿಂದು ಉಳಿಸಿದ ಮೊಟ್ಟೆ, ಹೊಸಕಿಹಾಕಿದ ಸಿಗರೇಟು ತುಂಡುಗಳು, ಚಾರು ಗೊರೆಯುತ್ತಿದ್ದ. "ಥೂ, ನರಕ, ಗಲೀಜು! ಈ ಮನುಷ್ಯ ಸತ್ತಮೇಲಾದರೂ ನೆಮ್ಮದಿ ಸಿಗಬಹುದೇನೋ" ಎಂದು ಮೈಥಿಲಿ ಭಾವಿಸಿಕೊಂಡಳು. ಅವಳ ಪ್ರತಿಕ್ರಿಯೆಗೆ ಉತ್ತರ ಕೊಡುವ ಚೈತನ್ಯ ಚಾರುಗಿರಲಿಲ್ಲ ಮತ್ತು ಸ್ವಲ್ಪ ಹೆಚ್ಚುಕಡಿಮೆಯಾದರೂ ಚಾರು ಸಾಯುತ್ತಿದ್ದ ಎಂಬುದು ಮೈಥಿಲಿಯ ಮನಕ್ಕೆ ಬರಲಿಲ್ಲ. ಅದರ ಬದಲು, "ಈ ಶನಿಯಿಂದ ನನ್ನ ನೆಮ್ಮದಿಯೇ ಹಾಳಾಗಿ ಹೋಯಿತು" ಎಂದಳು. ಅದೇ ವೇಳೆ ಮತ್ತೆ ಹಲ್ಲಿ ಲೊಚಗುಟ್ಟಿತು. ಮೈಥಿಲಿಯು ಅದು ಕೂಡಾ ಒಂದು ಶಕುನವೆಂದುಕೊಂಡಳು. ಚಾರು ಕನವರಿಸುತ್ತಿದ್ದ: "ಅಯ್ಯೋ

ಅಮ್ಮಾ" ಅವನ ಅಂತರಾಳದ ದುಃಖ ಮಾತ್ರವೇ ಆ ಎರಡು ಮಾತುಗಳಲ್ಲಿ ವ್ಯಕ್ತವಾದವು. ಆದರೆ, ಮೈಥಿಲಿಗೆ ಅವನ "ಅಯ್ಯೋ ಅಮ್ಮಾ" ಎಂಬ ಮಾತು ಮಾತ್ರ ಕಿವಿಗೆ ಬೀಳಲಿಲ್ಲ. ಅವನ ಸ್ಥಿತಿಯಿಂದ ಮೈಯಲ್ಲಿ ಉರಿಯತೊಡಗಿತು. ಮನದಲ್ಲಿಯೇ ಅಂದಳು: ಈ ಶನಿಯು ತೊಲಗಿದರೆ ಸಾಕು. ಆದರೆ ಅದು ನಿಜವಾಗಲು ಸಾಧ್ಯವಿರಲಿಲ್ಲ ಯಾಕೆಂದರೆ – ಚಾರುವಿನ ಬದುಕಿನ ಬಗ್ಗೆಯೇ ಯೋಚಿಸುವ ಹುಡುಗಿಯೊಬ್ಬಳು ಯಾವುದೋ ಮನೆಯಲ್ಲಿ ಸಂಜೆ ಹೊತ್ತಿಗೆ ದೀಪವುರಿಸುತ್ತಿದ್ದಳು ಮತ್ತು ಆ ದೀಪವುರಿಸುವಾಗ ಚಾರು ಎಷ್ಟು ಒಳ್ಳೆಯವರು, ನೂರ್ಕಾಲ ಬದುಕಲಿ ಎಂದು ಆಶಿಸುತ್ತಿದ್ದಳು.

*

ಚಾರು ತನ್ನ ಮನೆಯಲ್ಲಿ ಎಚ್ಚರಾದ. ಎಚ್ಚರಾದವನು ಗಡಿಬಿಡಿಯಿಂದಲೇ ಎದ್ದು ನೋಡಿದ. ಗಂಟೆ ಆರು. ಮೈಥಿಲಿಯು ಹೊರಗಡೆಗೆ ವಾಕಿಂಗ್ ಹೋದ ಹಾಗೆ ಕಾಣಿಸುತ್ತದೆ. ಅವಳು ಕಾಣಿಸುತ್ತಿಲ್ಲ. ಚಾರು ಎದ್ದವನು ಮತ್ತೆ ಹಾಸುಗೆಯ ಬಳಿ ಬಂದ.

ಅದೇ ವೇಳೆಗೆ ಮನೆಯಿಂದ ಹೊರಗಡೆ ವಾಕಿಂಗ್ ಹೊರಟ ಮೈಥಿಲಿ "ಈ ಚಾರು ನಿತ್ಯವೂ ಇದೇ ಕೆಲಸವನ್ನು ಮುಂದುವರಿಸಿದರೆ ಮನೆಯನ್ನು ಬಿಡುವುದು ಲೇಸು. ಇಂಥವನ ಜೊತೆಗೆ ಬಾಳ್ವೆ ನಡೆಸುವುದಕ್ಕಿಂತ ಮನೆ ಬಿಟ್ಟು ಹೊರಟು ಹೋಗುವುದು ಲೇಸು. ಆದರೆ, ನಾನಾಗಿಯೇ ಡೈವೋರ್ಸ್ ಕೊಡೊಲ್ಲ, ನೋಡೋಣ. ಈ ಶನಿಯು ಏನು ಮಾಡ್ತಾನೆ ಅಂತ. ಮೆತ್ತಗಿದ್ದರೆ ಮತ್ತಷ್ಟು ಅಧಿಕಾರ ಚಲಾಯಿಸ್ತಾನೆ. ಅದರಿಂದ ನನಗೇನು ಉಪಯೋಗವಿಲ್ಲ. ಯಾವುದೇ ಕಾರಣದಿಂದ ಇನ್ನು ನಾನಾಗಿ ಚಾರುಗೆ ತಗ್ಗಿ ಬಗ್ಗಿ ನಡೆಯೋಲ್ಲ ಮತ್ತು ತೆವಲಿದ್ದರೆ ಅವನೇ ನನ್ನ ಹತ್ತಿರ ಬರಲಿ, ಆಗ ನೋಡ್ಕೊತೀನಿ. ಹಾಸುಗೆಯಲ್ಲಿ ಅವನ ಜೊತೆ ಮಲಗುವುದೇ ಅಸಹ್ಯ ಹುಟ್ಟಿಸುತ್ತೆ. ಗೊರಕೆ; ಅಸಹ್ಯ! ಬೇರೆ ಬೇರೆ ಕಡೆ ಮಲಗಬೇಕು, ಬೇಕಿದ್ದರೆ ಕ್ಷಮೆ ಕೇಳಲಿ. ನಾನಂತೂ ತಗ್ಗಿ ಬಗ್ಗಿ ನಡೆಯಬೇಕಾದ ಅಗತ್ಯವಿಲ್ಲ. ಎಲ್ಲಕ್ಕಿಂತಲೂ ಈ ಚಾರು ಮಹಾನ್ ವಂಚಕ ಮತ್ತು ಹೇಡಿ. ಏನಾದ್ರೂ ಮಾಡ್ಕೊಂಡು ಸಾಯಲಿ ನನಗೇನಾಗಬೇಕಾಗಿದೆ. ಈಗಲೂ ಚಿಟಿಕೆ ಹೊಡೆದರೆ ಸಾಕು – ಗಂಡಸರು ನನ್ನ ಹಿಂದೆ ಬರುತ್ತಾರೆ" ಎಂದು ಯೋಚಿಸುತ್ತಾ ನಡೆದಳು. ಆದರೆ, ಅವಳ ಮನಸ್ಸಿನ ತುಂಬಾ ಮತ್ತೆ ತುಂಬಿಕೊಂಡವನು ಶಿಬಿ. ಶಿಬಿ ನಿಜವಾಗಿಯೂ ಒಳ್ಳೆಯವನು. ಚಾರು–ದೇವವ್ರತ ಇಬ್ಬರಿಗಿಂತ ಹೆಚ್ಚು ಸುಂದರ; ಬುದ್ಧಿವಂತ ಮತ್ತು ಒಳ್ಳೆಯ ಮನುಷ್ಯ. ಮೈಥಿಲಿಯ ಮನಸ್ಸಿನಲ್ಲಿ ತುಂಬಿದ್ದು ಬದಲಾಗಲು ಹೆಚ್ಚು ದಿನಗಳು ಬೇಕಿರಲಿಲ್ಲ ಮತ್ತು ಅದು ದಿನ ಹಾಗೂ ಕಾಲಮಾನಗಳ ವಿವರಗಳಲ್ಲ.

ಮೈಥಿಲಿಯು ವಾಕಿಂಗ್ ಮುಗಿಸಿ ಬಂದವಳು ಮೌನದಲ್ಲಿದ್ದಳು ಮತ್ತು ಚಾರು ಕೂಡಾ. ಗೊತ್ತೇ ಇಲ್ಲದಂತೆ ಅವರಿಬ್ಬರ ನಡುವೆ ಮತ್ತು ದೊಡ್ಡ ಹುತ್ತ ಬೆಳೆಯತೊಡಗಿತು.

*

ಚಾರು ಸ್ನಾನ ಮುಗಿಸಿಬಂದವನು ಮತ್ತೊಂದು ರೌಂಡ್ ಗುಂಡು ಹಾಕಲು ಶುರುಮಾಡಿದ. ಹೊರಗಡೆಗೆ ಯಾವುದೇ ರೀತಿಯ ಏರುಪೇರಾಗಲಿ, ಗುಂಡು ಹಾಕುವುದು ಅವನ ಒಂದು ನಿತ್ಯಪೂಜೆ. ಅದರಲ್ಲಿ ಯಾವ ಏರುಪೇರೂ ಇಲ್ಲ. ನಿನ್ನೆಯ ತನಕವು ಮೈಥಿಲಿಯ ಎದುರುಗಡೆ ಕೂತು ಕುಡಿಯುವುದು ಸಣ್ಣ ಮುಜುಗರವೆಂದು ಅನಿಸುತ್ತಿತ್ತು, ಈಗ ಹಾಗಲ್ಲ. ತನ್ನ ದೃಷ್ಟಿ ಧೋರಣೆಗಳು ಬದಲಾಗಿವೆ. ಈ ದಿನದಿಂದ ಇದರ ಬಗೆಗೆ ಯಾವ ಮುಜುಗರವೂ ಇಲ್ಲ. ಅದು ಬೇಕಾಗಿಯೂ ಇಲ್ಲ. ಮೈಥಿಲಿಯು ಅವಳಿಡಿದ ದಾರಿ ಬಗ್ಗೆ ಮತ್ತು ತನ್ನ ಸ್ವಂತ ಸುಖ ಮತ್ತು ನಮ್ಮ ನೆಮ್ಮದಿಯ ಬಗ್ಗೆ ಯೋಚಿಸುತ್ತಿದ್ದರೆ ತಾನೇಕೆ ಬಿಕನಾಸಿಯಂತೆ ಇರಬೇಕು. ತಾನು ದುಡಿಯುತ್ತೇನೆ, ತಾನು ಖರ್ಚು ಮಾಡುತ್ತೇನೆ ಎಂಬುದನ್ನು ಪದೇ ಪದೇ ಉಸಿರಾಡುತ್ತಿರುವ ಮೈಥಿಲಿಗೆ ಮತ್ತೆ ಯಾವುದೂ ಬೇಕಾಗಿಲ್ಲ. ಈಗ ತನಗೂ ಅಷ್ಟೆ: ತಾನೇಕೆ ಬಗ್ಗಿ ನಡೆಯಬೇಕು ಮತ್ತು ಒಪ್ಪಂದಕ್ಕೆ ಹಾತೊರೆಯಬೇಕು. ತನ್ನನ್ನು ತೀರಾ ಜುಗುಪ್ಸೆಯಿಂದ ಮತ್ತು ಹೇಯವಾಗಿ ನಡೆಸುವ ಮೈಥಿಲಿಯ ಮನದಲ್ಲಿರುವ ಗರ್ವವು ಅಷ್ಟು ಬೇಗನೆ ಇಳಿಯಲಾರದು ಮತ್ತು ಅದನ್ನು ಇಳಿಸಲೇಬೇಕೆಂಬ ಹಟದಲ್ಲಿಯೇ ನಾನು ಉಸಿರಾಡಬೇಕಿಲ್ಲ. ಆದರೆ ಗಂಡ-ಹೆಂಡಿರ ನಡುವೆ ರಾಜಕಾರಣವು ಉಸಿರಾಡಲು ಶುರುಮಾಡಿದರೆ ಅದಕ್ಕೆ ಬೇರಾವ ಉತ್ತರವೂ ದೊರೆಯುವಂತಿಲ್ಲ. ಈ ದೃಷ್ಟಿಯಿಂದ ಬಹಳ ಗಂಭೀರವಾಗಿ ಯೋಚಿಸಬೇಕು. ಅವಳಿಗೆ ಬೇಡವಾದ ಸಂಬಂಧಗಳು ತನಗಾದರೂ ಯಾಕೆ ಬೇಕು? ಚಾರು ಗುಟುಕು-ಗುಟುಕಾಗಿಯೇ ಕುಡಿಯಲು ಪ್ರಾರಂಭಿಸಿದ. ಯಾವತ್ತಿನ ಅವಸರವಿಲ್ಲ. ಗಟಗಟನೆ ಕುಡಿದು ಜಠರ ತುಂಬಾ ಬೆಂಕಿಯನ್ನು ಎಬ್ಬಿಸಿಕೊಳ್ಳಬೇಕಾಗಿಲ್ಲ. ನಿಧಾನವಾಗಿ ಕುಡಿಯುತ್ತಾ ಕಾಲ ಕಳೆಯಬೇಕು. ಮಧ್ಯಾಹ್ನ ಯಾವ ಘಟನೆಯೂ ನೆನಪೇ ಇಲ್ಲದಂತೆ ಚಾರು ಕುಡಿಯಲು ಪ್ರಾರಂಭಿಸಿದ. ಕುಡಿಯುತ್ತಲೇ ಇರುವಾಗಲೇ ಯಾಕೋ ಚಾರುಗೆ ಬಾಲ್ಯದಲ್ಲಿ ಹೀಗಿದ್ದನೆ? ನಾರಾಯಣ ಮತ್ತು ಮಹಮ್ಮದ್ ಕುಡಿತ ಕಲಿಸಿದ ಮೇಲೂ ಅದು ಚಟವಾಗಿರಲಿಲ್ಲ. ಆದರೆ ಯಾವತ್ತು ಮೈಥಿಲಿಯು ದೇವವ್ರತನನ್ನು ವಿಪರೀತ ಹಂಬಲಿಸಲು ಪ್ರಾರಂಭಿಸಿದ ಮೇಲೆ ಕುಡಿತವೆನ್ನುವುದು ಜೀವನದ ಒಂದು ಭಾಗವಾಯಿತು. "ಮೈಥಿಲಿಯು ಉದ್ದೇಶಪೂರ್ವಕವಾಗಿ ತನ್ನ ಮೇಲೆ ವಿಪರೀತವಾಗಿ ತೋರಿರುವ ಅಸಹನೆ ಕಾರಣವೆ? ಅವಳಿಗೆ ಪರ ಪುರುಷರ

ಬಗ್ಗೆ ಇದ್ದ ಆಸಕ್ತಿ ಕಾರಣವೆ? ಯಾಕೆ ಹೀಗಾಗುತ್ತಿದೆ? ಹೆಣ್ಣಿನ ಬಗೆಗೆ ವಾಂಛೆಯನ್ನು ಹಿಡಿತದಲ್ಲಿ ಇರಿಸಿಕೊಳ್ಳಲೇ ಅಥವಾ ಮನದ ಒಳಗುದಿಯನ್ನು ಯಾರಲ್ಲೂ ಹೇಳಿಕೊಳ್ಳಲು ಸಾಧ್ಯವಾಗದ ಸಂಕಟವೆ? ಯಾವುದೆಂದು ಅರ್ಥವಾಗಲಿಲ್ಲ ಮತ್ತು ಅದನ್ನೀಗ ಅರ್ಥಮಾಡಿಕೊಳ್ಳಬೇಕಾದ ಅಗತ್ಯವೂ ಇಲ್ಲ. ಹಳಸಿದ ಅನ್ನವನ್ನು ನಾಯಿಯೇ ತಿನ್ನುವುದಿಲ್ಲ, ಹಳಸಿದ ಸಾಂಸಾರಿಕ ಜೀವನದಲ್ಲಿ ಏಗಾಡುವುದು ಕಷ್ಟ." ಚಾರು ಕುಡಿಯುತ್ತಿರುವಾಗಲೇ – ಮೈಥಿಲಿಯು ತಂದು ಅವನೆದುರು ಚಪಾತಿಯಿಟ್ಟಳು. ಕೈಯಲ್ಲಿ ಸಿಗರೇಟು–ಗುಂಡು ಎರಡೂ ಇಟ್ಟವನು ಎದುರಿಗಿಟ್ಟ ಚಪಾತಿಯ ತಟ್ಟೆ ನೋಡಿದ. ಕುಡಿಯುತ್ತಾ–ಸಿಗರೇಟು ಸೇದುತ್ತಾ–ಮಧ್ಯೆ ಮಧ್ಯೆ ಚಪಾತಿಯ ಚೂರುಗಳನ್ನು ಬಾಯಿಗೆ ಹಾಕಿಕೊಳ್ಳುತ್ತಾ ಕಾಲ ಕಳೆದ. ಚಪಾತಿಯ ಕೊನೆಯ ತುಂಡನ್ನು ಬಾಯಿಗಿಡುವ ವೇಳೆ ಗುಂಡಿನ ನಿಶೆ ಮತ್ತೆ ತಲೆಗೇರಿದಂತಾಯಿತು, ಸಾವರಿಸಿಕೊಂಡು ಬಂದು ಕೈತೊಳೆದ.

ಅದೇ ವೇಳೆಗೆ ಮನೆಯಲ್ಲಿದ್ದ ರೇಖಾ ಪಿಂಟೋ ತನ್ನ ನೆರಳೇ ಗೋಡೆಯ ಮೇಲೆ ಬಿದ್ದುದನ್ನು ಸಣ್ಣಗೆ ಹೆದರಿದಳು. ಯಾರೋ ಬಂದು ಬಾಗಿಲ ಬಳಿ ನಿಂತಿದ್ದಾರೆಂಬ ಭಯವು ಕಾಣಿಸತೊಡಗಿತು. ಮತ್ತೊಮ್ಮೆ ಬಾಗಿಲ ಬಳಿ ಟಕ ಟಕ ಸದ್ದು ಕೇಳಿದಂತೆ ಅವಳಿಗೆ ಭಾಸವಾಯಿತು. "ಅಮ್ಮಾ" ಎಂದು ರೇಖಾ ಪಿಂಟೋ ಕರೆದಳು. ಜೆಂಸಿಂತಾ ಬಾಯಿ ಅಡುಗೆ ಮನೆಯಲ್ಲಿದ್ದವರು ಹೊರಗಡೆ ಬಂದರು. "ಏನು?" ಎಂದು ಕೇಳಿದರೆ ಹೆದರಿ ಕಂಗಾಲಾದ ರೇಖಾ ಪಿಂಟೋ ಬಾಗಿಲ ಬಳಿಗೆ ಕೈ ತೋರಿಸಿದಳು ಅಷ್ಟೆ!

ಅಹಂಕಾರದ ನಿರ್ಧಾರಗಳು

– ೫–

ನಾಲ್ಕು ಅಂದರೆ ಸರಿಯಾಗಿ ನಾಲ್ಕೇ ನಾಲ್ಕು ದಿನದಲ್ಲಿ ಚಾರುವನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಮೊದಲು ಮತ್ತೊಮ್ಮೆ ಡಾ. ನಾಯಕ್ ಪರೀಕ್ಷಿಸಿದರು. ಜ್ವರ ಮೂರೇ ಮೂರು ದಿನದಲ್ಲಿ ಬಿಟ್ಟಿದೆ. ರಾತ್ರಿಯಿಡೀ ಬೆವರಿದ್ದಾನೆ. ಅತೀವವಾದ ದಾಹವೊಂದನ್ನು ಮತ್ತು ಕೈ-ಕಾಲು ಆಡಿಸದೇ ಇರುವಷ್ಟು ನಿತ್ರಾಣವನ್ನು ಹೊಂದಿದ ಚಾರುವನ್ನು, ಅವನ ನಾಡಿ ಬಡಿತವೆಲ್ಲವನ್ನು ಸರಿಯಾಗಿ ಪರೀಕ್ಷಿಸಿದರು. ನಾರ್ಮಲ್ ಅನ್ನುವ ಕಂಡೀಶನ್‌ಗೆ ಚಾರು ತಲುಪಿದ್ದಾನೆ. ಅವನ್ನು ಆಸ್ಪತ್ರೆಯಿಂದ ಡಿಸ್ಚಾರ್ಜು ಮಾಡುವ ಮೊದಲು ಚಾರು ವಿನೊಂದಿಗೆ ವೈಯಕ್ತಿಕವಾಗಿಯೇ ಮಾತಾಡಿದ್ದರು. "ನೋಡಿ ಚಾರು, ನಿಮ್ಮ ವಯಸ್ಸು ಸಣ್ಣದು, ಕುಡಿಯುವುದೇ ಬಾಳಲ್ಲ, ಕುಡಿಯುವುದು ಬದುಕಿನ ಅನಿವಾರ್ಯ ಸ್ಥಿತಿಯೂ ಅಲ್ಲ. ಕುಡಿಯವುದರಿಂದ ಬದುಕಿ ಉಳಿಯುತ್ತೇನೆ ಎಂದು ಹಂಬಲಿಸಬೇಡಿ. ಹಾಗೆ ಹೇಳುವುದಕ್ಕೆ ಒಬ್ಬ ವೈದ್ಯನಾಗಿ ನಾನು ಹಕ್ಕು ಇಟ್ಟುಕೊಂಡಿದ್ದೇನೆ. ಇದರಿಂದ ನೀವು ಬೇರೆ ಏನೂ ಭಾವಿಸಬೇಡಿ. ಇಲ್ಲಿ ಅಡ್ಮಿಟ್ ಆದ ದಿನದಿಂದ ನಿಮಗೆ ಹನಿಯನ್ನು ಕುಡಿಯಲಾಗಿಲ್ಲ.

ಅಂದರೆ ಕುಡಿಯದೆಯೂ ನೀವು ಇರಬಲ್ಲಿರಿ. ಬದುಕಿ ಎಂದು ನಾನು ನಿಮ್ಮ ಹಿತೈಷಿಯಾಗಿ ಹೇಳಬಲ್ಲೆ. ಯಾಕೆ ಕುಡಿಯುತ್ತಲೇ ಬದುಕನ್ನು ಹಾಳು ಮಾಡಿಕೊಳ್ಳುತ್ತೀರಿ. ಬದುಕುವ ವಯಸ್ಸು ನಿಮ್ಮದು, ಕೆಲವರಿಗೆ ಸ್ವಲ್ಪ ಕುಡಿದರೆ ಏನೂ ಆಗುವುದಿಲ್ಲ. ಆದರೆ, ನಿಮ್ಮ ಪರಿಸ್ಥಿತಿಯು ಹಾಗಲ್ಲ. ನೋಡಿ –ನಿಮ್ಮ ಲಿವರ್ ಕುಡಿತಕ್ಕೆ ಸರಿಯಾಗಿ ಬಾಗುವುದಿಲ್ಲ. ಕುಡಿಯುವುದನ್ನು ಮತ್ತು ಸಿಗರೇಟು ಸೇದುವುದನ್ನು ಬಿಟ್ಟುಬಿಡಿ. ಇನ್ನೊಮ್ಮೆ ಕುಡಿದು ಬಿದ್ದರೆ ನಿಮ್ಮ ಬದುಕಿನ ಕೊನೆಯ ಪರದೆಯನ್ನು ನೀವೇ ಎಳೆದುಕೊಳ್ಳುತ್ತೀರಿ. ನನ್ನ ಒಬ್ಬ ಮಗನಂತೆ ಭಾವಿಸಿಕೊಂಡು ಹೇಳುತ್ತಿದ್ದೇನೆ – ಕುಡಿಯುವುದರಿಂದ ಮತ್ತು ಸಿಗರೇಟು ಸೇದುವುದರಿಂದ ನೀವು ಯಾವ ಮಹಾನ್ ಸಾಧನೆ ಮಾಡಿದಂತಾಯಿತು. ನನ್ನ ಇದ್ದ ಒಬ್ಬ ಮಗನನ್ನು ಹೀಗೆಯೇ ಕಳೆದುಕೊಂಡೆ – ಸಿಗರೇಟು; ಕುಡಿತ; ಗಾಂಜಾ – ಹೀಗೆ ಮಾಡುತ್ತಾ ಹೋದ. ಅದು ಅವನ ದೇಹದ ಹಿಡಿತವನ್ನು ಮೀರಿ ಹೋಗಿದೆ ಎಂದು ಗೊತ್ತಾದದ್ದು ನನಗೆ ತಡವಾಗಿ, ಕೈಮೀರಿ ಹೋದ ಹುಡುಗ. ಇಷ್ಟು ಹೊತ್ತಿಗೆ ಒಳ್ಳೆಯ ಡಾಕ್ಟರಾಗಿ ಅವನು ಹೆಸರು ಮಾಡಬೇಕಿತ್ತು. ಅವನ ಹೆಣವನ್ನು ನಾನು – ನನ್ನ ಕೈಯಲ್ಲೇ ಸುಟ್ಟೆ. ಅದೇ ಕೈಗಳಲ್ಲಿ ಹತ್ತಾರು ಜೀವವುಳಿಸಿದ್ದೇನೆ. ಹತ್ತಾರು ಜೀವಗಳನ್ನು ಉಳಿಸಿದ ನನ್ನ ಕೈಗಳಿಗೆ ನನ್ನ ಮಗನನ್ನು ಉಳಿಸಿಕೊಳ್ಳಲಾಗಲಿಲ್ಲ. ಕುಡಿಯುವುದನ್ನು ಬಿಟ್ಟಿದ್ದೇನೆ ಎಂದು ಈಗಲೇ ನಿರ್ಧಾರ ಮಾಡಿಕೊಳ್ಳಿ" ಎಂದ ಡಾ. ನಾಯಕರು ಚಾರುವಿನ ತಲೆಯನ್ನು ಸವರಿ ಮೃದುವಾಗಿ ಬೆನ್ನು ಸವರಿದ್ದರು. ಅವರ ಸ್ಪರ್ಶದಲ್ಲಿ ಜೀವ ತುಂಬುವ ಕಳಕಳಿಯಿತ್ತು ಮತ್ತು ನುರಿತ ತಜ್ಞ ವೈದ್ಯನೊಬ್ಬನ ಹಿತವಾದ ನುಡಿಯದು. ಏಕ ಕಾಲಕ್ಕೆ ಅದನ್ನು ಅಲ್ಲಗಳೆಯುವ ಯಾವ ಧೈರ್ಯವೂ ಚಾರುವಿನಲ್ಲಿರಲಿಲ್ಲ ಮತ್ತು ದುಡುಕಿ ಮುಖಕ್ಕೆ ಹೊಡೆದಂತೆ ಮಾತಾಡುವ ಪರಿಸ್ಥಿತಿಯಂತೂ ಆಗ ಇರಲಿಲ್ಲ. ನಿಧಾನವಾಗಿ ಮತ್ತು ಆತ್ಮೀಯವಾಗಿ ಹೇಳಿದ ಡಾಕ್ಟರರೊಬ್ಬರ ಮಾತಿಗೆ ಎದುರಾಡಬೇಕೆಂದು ಚಾರುಗೆ ಅನಿಸುವುದಾದರೂ ಹೇಗೆ? ಚಾರು ಸರಿಯೆಂಬಂತೆ ತಲೆಯಲ್ಲಾಡಿಸಿದ. "ಸಂಜೆಯ ಹೊತ್ತಿಗೆ ನಿಮ್ಮನ್ನು ಕಳಿಸುತ್ತಿದ್ದೇವೆ. ಏನಾದರೂ ಸಮಸ್ಯೆಯಾದರೆ ಬನ್ನಿ, ಯಾವುದೇ ಕಾರಣಕ್ಕೆ ಕೆಲ ದಿನ ತುಂಬಾ ಕೇರ್‌ಫುಲ್ಲಾಗಿರಬೇಕು. ಅದರ ಬಗ್ಗೆ ಎಚ್ಚರವಿರಲಿ" ಎಂದವರೇ ವಾರ್ಡಿನಿಂದ ಹೊರಗೆ ಹೊರಟರು. ಡಾ. ನಾಯಕರು ಅವನ ರೂಮಿನಿಂದ ಹೊರಗೆ ಕಾಲಿರಿಸುವಾಗ ರೇಖಾ ಬಂದಳು. ಬಂದವಳು – ಚಾರುವಿನತ್ರ "ಹೇಗಿದ್ದೀರಿ ಸಾರ್, ಜ್ವರ ಬಿಟ್ಟಿದೆಯಲ್ವಾ? ಸದ್ಯ ಖುಶಿಯಾಯಿತು ಸಾರ್, ನಾನು ಗಾಬರಿಯಾಗಿಬಿಟ್ಟಿದ್ದೆ. ಯಾವತ್ತು ಡಿಸ್ಚಾರ್ಜು ಮಾಡ್ತಾರಂತೆ?" ಎಂದು ಕೇಳಿದಳಾದರೂ ಯಾವುದೋ ಒಂದು ರೀತಿಯ ಸಂಶಯ ಅವಳಿಗೆ. ಚಾರುಗೆ ಪೂರ್ತಿ ಜ್ವರ ಬಿಟ್ಟಿರಬಹುದೆ? ಮನೆಗೆ ಹೋಗಿ ಇವರು ವಿಶ್ರಾಂತಿ ತಗೊಳ್ಳಬಹುದೆ? ವಿಶ್ರಾಂತಿ ತಗೊಳ್ಳದೇ ಹೋದರೆ ಮತ್ತೆ ಆರೋಗ್ಯ ಕೆಟ್ಟು ಬಿಟ್ಟರೆ?

ಮೈಥಿಲಿಯು ಮನೆಯಲ್ಲಿ ಇವರನ್ನು ನೋಡಿಕೊಳ್ಳಬಹುದೆ? ಮತ್ತೆ ಮೈಥಿಲಿಯು ಕಿರಿ ಕಿರಿ ಶುರು ಮಾಡಿದರೆ ಇವರಿಗೆ ಸಹಿಸಿಕೊಳ್ಳುವ ತಾಕತ್ತು ಇದೆಯೆ? – ಇತ್ಯಾದಿ ರೇಖಾಳ ಮನಸ್ಸಿನಲ್ಲಿ ಸುಳಿದಾಡುತ್ತಿರುವ ಅನುಮಾನಗಳು ವಾಸ್ತವವಾಗಿ ಚಾರುಗೆ ತಿಳಿಯಲಿಲ್ಲ. "ಸಂಜೆ ಮನೆಗೆ ಹೋಗಬಹುದು ಅಂದಿದ್ದಾರೆ. ರೇಖಾ, ನಿಜವಾಗಿಯೂ ನಾನು ನಿನಗೆ ತುಂಬಾ ಥ್ಯಾಂಕ್ಸ್ ಹೇಳಬೇಕು, ಅನಾಥವಾಗಿ ರಸ್ತೆಯ ಮೇಲೆ ಹೆಣವಾಗಿ ಬಿದ್ದಿರುವ ನಾಯಿಗಳನ್ನು ಎತ್ತಿ ಹಾಕಲು ಕೊನೆಗೆ ಮುನಿಸ್ಪಾಲಿಟಿಯವರು ವ್ಯವಸ್ಥೆ ಮಾಡುತ್ತಾರೆ. ಅಷ್ಟರಮಟ್ಟಿಗೆ ಬೀದಿ ನಾಯಿಗಳಿಗೆ ಸಂಬಂಧಿಕರಿದ್ದಾರೆ. ಆದರೆ, ನನಗೆ ಆ ಅನುಕೂಲವೂ ಇಲ್ಲ – ನಿನ್ನ ಒಬ್ಬಳನ್ನು ಬಿಟ್ಟರೆ, ಈ ಆಸ್ಪತ್ರೆಯಲ್ಲಿ ಉರುಳಿಕೊಂಡಿದ್ದಾಗ – ನೀನಿಲ್ಲವಾಗಿದ್ದರೆ ನನ್ನ ಕತೆ ಮತ್ತಷ್ಟು ಕಷ್ಟವಾಗುತ್ತಿತ್ತು. ನಿನ್ನ ಋಣ ಎನ್ನುವುದು ದೊಡ್ಡ ಮಾತು. ಆದರೆ, ಜ್ವರ ಬಂದು ಮಲಗಿರುವ ವ್ಯಕ್ತಿಗೆ ಕೊನೆಯ ಪಕ್ಷ ಬಾಯಾರಿದ ಹನಿ ನೀರನ್ನು ಬಿಡುವುದಕ್ಕೂ ನನಗೆ ಯಾರೂ ಇದ್ದಿಲ್ಲ. ಮೈಥಿಲಿಯ ಜಗತ್ತು ದೊಡ್ಡದು. ಜಗತ್ತಿನಲ್ಲಿ ನಗೆ; ನೆಮ್ಮದಿ ಬೇಕಾದ್ದನ್ನು ಕೊಂಡುಕೊಳ್ಳಲು ಬೇಕಾದಷ್ಟು ಹಣ – ದುಡ್ಡಿನಿಂದಲೇ ಮರ್ಯಾದೆಯನ್ನು ಪಡೆದುಕೊಳ್ಳಬೇಕೆಂಬ ಹಂಬಲ, ಗಳಿಗೆಗೊಮ್ಮೆ ಜೋಕು, ಹೋಟೆಲಿನಲ್ಲಿ ಬೇಕಾದ್ದು ತಿನ್ನುವ ನಾಲಿಗೆಯ ಚಪಲ, ಜಗತ್ತು ನನ್ನ ಕಾಲ್ಬೆರಳಿನ ಕೆಳಗೆಯೇ ಇದೆಯೆಂಬ ಅಹಂಕಾರ ಎಲ್ಲವೂ ಇರುತ್ತದೆ. ಆದರೆ, ನನ್ನಂಥ ಸಾವಿರಾರು ಜನರು ಮನುಷ್ಯರು. ನಮಗೆ ನೋವಿರುತ್ತದೆ. ಕರುಳು ಇರಿಯುವಷ್ಟು ಸಂಕಟವಿರುತ್ತೆ ಎಂದು ಅಂಥವರು ಅರ್ಥಮಾಡಿಕೊಳ್ಳಲಾರರು. ಮೋಜೇ ಜೀವನ, ಅದೇ ನೆಮ್ಮದಿಯೆಂದು ತಿಳಿದುಕೊಂಡವರು ನಮ್ಮಂಥವರು ಬದುಕುವುದೇ ನಿರರ್ಥಕವೆಂದು ಭಾವಿಸಿಕೊಂಡಿರುತ್ತಾರೆ. ಮೈಥಿಲಿಯಂಥ ಹೆಂಗಸರ ಕನಸುಗಳಲ್ಲಿ ಬೀದಿಯಲ್ಲಿ ಚಿಂದಿಯೆತ್ತುವ ಹುಡುಗರು ಕಾಣಿಸೋಲ್ಲ. ರಸ್ತೆ ಮೇಲೆ ಓಡಾಡುವ ಸಾಂಟ್ರೋ; ಇಂಡಿಕಾ – ಮುಂತಾದ ಕಾರುಗಳ ಬಣ್ಣ ಕಾಣಿಸುತ್ತೆ. ಬಂಗಾರದಂಗಡಿಯ ಲಕಲಕನೆ ಹೊಳೆವ ಬಂಗಾರ ಕಾಣಿಸುತ್ತೆ – ನಮಗೆ ಆಧಾರವಾದ ಮಣ್ಣು ಅಂಥವರಿಗೆ ಅಸಹ್ಯವೆನಿಸುತ್ತೆ. ತಂಪಾದ ನೆರಳು ಕೊಡುವ ಹೊಂಗೆ ಮರದ ಹಸಿರೆಲೆಗಳು ಕಣ್ಣಿಗೆ ಬೀಳೋಲ್ಲ. ಜೀವನವೆಂದರೆ ನೆಮ್ಮದಿಯೆಂದು ತಿಳಿದುಕೊಂಡವರಿಗೆ– ಈ ದೇಶದ ಅಸಂಖ್ಯ ಜನರ ಹೊಟ್ಟೆಗೆ ಬರೀ ತಣ್ಣೀರು ಬಟ್ಟೆ ಇರುತ್ತೆ ಎಂದು ತಿಳಿಯೋಲ್ಲ. ಓ, ಸಾರಿ, ಭಾಳಾ ಮಾತಾಡಿಬಿಟ್ಟೆ, ಖಂಡಿತಾ ನಾನು ನಿನಗೆ ಋಣಿ. ಸ್ವಲ್ಪ ಹೋಗಿ ಆಸ್ಪತ್ರೆಯ ಬಿಲ್ಲು ಕೇಳಿಕೊಂಡು ಬಾ. ಮೈಥಿಲಿಯು ಬಂದಿಲ್ಲವಾದರೆ ಅಸ್ಪತ್ರೆಯ ಬಿಲ್ಲು ಕಟ್ಟಲು ದುಡ್ಡು ಅಡ್ಜೆಸ್ಟ್ ಮಾಡಿಕೋಬೇಕು. ಹಾಗೆಯೇ ಬಿಲ್ಲು ನೋಡಿ – ನಮ್ಮ ಆಫೀಸಿಗೆ ಫೋನು ಮಾಡು. ಕೊಲೀಗ್ ನಾರಾಯಣ ಕಾರಂತ ದುಡ್ಡು ತಗೊಂಡು ಬರ್ತಾನೆ, ಆಮೇಲೆ ಕೊಟ್ಟರಾಯಿತು ಅಂದವನ ಮಾತಿನಲ್ಲಿ ನಿರರ್ಗಳವಾದ

ಧ್ವನಿಯಿತ್ತು. ಮೈಥಿಲಿಯ ಬಗ್ಗೆ ವ್ಯಂಗ್ಯವಿತ್ತು. ರೇಖಾಗೆ ಅದು ಅರ್ಥವಾದರೂ ಈ ಕುರಿತು ಮಾತಾಡಬಾರದು, ಮಾತಾಡಿದರೆ ಗಂಡ-ಹೆಂಡಿರ ನಡುವೆ ಕಲಹ ತಂದಿಟ್ಟ ಖ್ಯಾತಿಯು ತನ್ನದಾಗುತ್ತದೆಯೆಂದು ಭಾವಿಸಿಕೊಂಡಳು.

ಚಾರುವಿನ ಮಾತಲ್ಲಿ ತುಂಬಿರುವ ತೀವ್ರತೆ; ಅದಮಿಟ್ಟ ಸಿಟ್ಟನ್ನು ಹೊರಗಡೆ ತಂದೆಸೆದ ಕ್ರಮವನ್ನು ನೋಡಿ ರೇಖಾ ಆಶ್ಚರ್ಯಪಟ್ಟಳು. ಯಾವತ್ತೂ ಈ ರೀತಿಯಲ್ಲಿ ಮಾತಾಡಿದ್ದನ್ನು ರೇಖಾ ನೋಡಿರಲಿಲ್ಲ. ನಿನ್ನೆಯ ಸಂಜೆಯ ತನಕ ಜ್ವರದ ಕಾವಿನಲ್ಲಿ ಪುಟ್ಟ ಮಗುವಿನಂತೆ ಮಲಗಿದ್ದ ಚಾರು ಈಗ ರಪ್ಪನೇ ಪರೋಕ್ಷವಾಗಿ ಮೈಥಿಲಿಯನ್ನು ಟೀಕಿಸಿರುವ ಕ್ರಮವನ್ನು ನೋಡಿದಿರೆ ಅವನಲ್ಲಿ ಯಾವುದೋ ಬದಲಾವಣೆ ಯಾಗುತ್ತಿದೆಯೆಲ್ಲಾ ಅಂತನ್ನಿಸಿತು. ಮೈಥಿಲಿಯ ಬಗ್ಗೆ ಒಂಚೂರು ಭರವಸೆಯನ್ನು ಚಾರು ಇಟ್ಟುಕೊಂಡ ಹಾಗೆ ಅನಿಸುವುದಿಲ್ಲ. ಆಫೀಸಲ್ಲಿ ಯಾವತ್ತೂ ತಾಳ್ಮೆಯನ್ನು ಕಳೆದುಕೊಳ್ಳದ; ಮಾನವೀಯತೆಯ ಸ್ಪರ್ಶವಿಟ್ಟುಕೊಂಡೇ ವರ್ತಿಸುವ ಮತ್ತು ಹೆಚ್ಚು ಮಾತಾಡದೇ ಇದ್ದ ಚಾರು ಈವೊತ್ತು ತನ್ನ ಹೆಂಡತಿಯನ್ನೇ ಪರೋಕ್ಷವಾಗಿ ಟೀಕಿಸುತ್ತಿದ್ದಾನೆ. ಅಂದರೆ ಏನರ್ಥ? ಅತ್ಯಂತ ಸಹನಶೀಲೆಯಾದ ಭೂಮಿ ತಾಯಿಯು ಕೂಡಾ ಮನುಷ್ಯರ ಅವಾಂತರಗಳನ್ನು ಸಹಿಸಲಾಗದೆ ಜ್ವಾಲಾಮುಖಿಯಾಗಿ ಸಿಡಿಯುತ್ತಾಳೆ. ಬೆಂಕಿಯನ್ನು ಭಗಭಗನೆ ಉಗುಳುತ್ತಾಳೆ. ಹೆಚ್ಚು ಮಾತಾಡದೇ ತನ್ನ ನೋವನ್ನು ತಾನೇ ತನ್ನ ಗಂಟಲಲ್ಲಿ ಇಟ್ಟುಕೊಂಡು ಬಂದಿರುವ ಚಾರು ಯಾವುದೋ ಮೂಡಿನಲ್ಲಿ ಮಾತಾಡುತ್ತಿದ್ದಾನೆ. ರೇಖಾ ಇನ್ನಷ್ಟು ಅವನು ಮೈಥಿಲಿಯ ಬಗ್ಗೆ ಮಾತಾಡದಿರಲಿ ಎಂಬ ಕಾರಣಕ್ಕೆ "ಸಾರ್, ನೀವು ಕುಡಿಯುವುದು ಮತ್ತು ಸಿಗರೇಟು ಎರಡನ್ನೂ ಬಿಡಬೇಕಂತಲ್ಲಾ? ಸಾರ್, ಖಂಡಿತಾ ಕುಡಿಯವುದನ್ನು ಬಿಡಿ, ಸಿಗರೇಟು ಬಿಟ್ಟುಬಿಡಿ" ಅಂದಳು ರೇಖಾ. ಚಾರು ಕಳಾಹೀನವಾದ ನಗೆಯೊಂದನ್ನು ಸಣ್ಣಗೆ ತುಟಿಯಿಂದ ಚೆಲ್ಲಿದ ಮತ್ತು "ಸಿಗರೇಟು ಮತ್ತು ಗುಂಡು ಎರಡಿದ್ದರೆ ನಾನು ಜಗತ್ತನ್ನು ಗೆಲ್ಲಬಹುದು ಎಂದು ಭಾವಿಸಿದ್ದೆ. ಅವೆರಡನ್ನು ಬಿಟ್ಟರೆ ಜಗತ್ತನ್ನು ಗೆಲ್ಲುವುದು ಹೇಗೆ ಹೇಳು?" ಎಂದ. "ಕುಡಿಯುವುದರಿಂದ ನೀವು ಗೆದ್ದ ದೇಶಗಳಲ್ಲಿ ಅಮೇರಿಕಾ ಮತ್ತು ಜಪಾನ್ ಇದೆಯಾ ಸಾರ್?" ಎಂದಳು ರೇಖಾ ಪಿಂಟೋ ಸಣ್ಣದೊಂದು ಹಾಸ್ಯಮಿಶ್ರಿತ ಧ್ವನಿಯಿತ್ತು. "ಓಹ್, ಹೌದಲ್ಲ, ಅಮೇರಿಕಾ ಮತ್ತು ಜಪಾನ್ ಎರಡನ್ನೂ ಗೆಲ್ಲಲು ಸಾಧ್ಯವಾಗಿಲ್ಲ. ಅವನ್ನು ಗೆಲ್ಲಲು ರಾಜ್ಯ ಮತ್ತೆ ಕೇಂದ್ರ ಸರಕಾರ ಎರಡೂ ಅನುಮತಿ ಕೊಟ್ಟಿಲ್ಲ. ಎಂದ ಚಾರು. ರೇಖಾ ಪಿಂಟೋಗೆ ನಗೆಯನ್ನು ತಡೆಯಲಾಗಲಿಲ್ಲ. ಅವಳು ಜೋರಾಗಿ ನಗಾಡಲು ಪ್ರಾರಂಭಿಸಿದಳು. ಅವಳು ಹೊಟ್ಟೆಯನ್ನು ಹಿಡಿದುಕೊಂಡು ನಗುವಾಗಲೇ ಮೈಥಿಲಿಯು ಬಂದಳು. ತನ್ನ ಅಸಹನೆಯ ಮುಖವನ್ನು ಹೊತ್ತುಕೊಂಡು.

ರೇಖಾ ಮತ್ತು ಚಾರು ಇಬ್ಬರು ಮಾತಾಡುತ್ತಿರುವುದೇ ಒಂದು ಅಪರಾಧವೆಂಬಂತೆ

ನುಗ್ಗಿ ಬಂದವಳು "ಜ್ವರ ಬಿಟ್ರೆ ಹೀಗೆ ನೋಡಿ ಮತ್ತು ಶುರುವಾಯಿತು ನಿಮ್ಮ ಅವತಾರ? ಯಾವಾಗಂತೆ ಡಿಸ್ಚಾರ್ಜು? ಬಿಲ್ ಎಷ್ಟಾಗಿರಬಹುದು?" ಅವಳು ಕೇಳಿದ ಕ್ರಮವನ್ನು ನೋಡಿ ರೇಖಾಪಿಂಟೋಳ ಮುಖವು ಸಪ್ಪಗಾಯಿತು. ಅವಳು ಚಾರುವಿನ ಮುಖವನ್ನು ಒಮ್ಮೆ ನೋಡಿದಳು. ಚಾರು ಮೈಥಿಲಿಯ ಸಣ್ಣ ಆರ್ಭಟದ ಧ್ವನಿಯನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದವನಂತೆ "ರೇಖಾ, ಹೋಗಿ ಬಿಲ್ ಎಷ್ಟಾಯಿತು ಅಂತ ನೋಡಿ ಬನ್ನಿ. ಹಾಗೆಯೇ ಆಫೀಸಿಗೆ ಫೋನ್ ಮಾಡಿ ಅಷ್ಟೆ" ಅಂದ. ಯಾವುದೇ ರೀತಿಯ ಗಾಬರಿಯಾಗಲೀ ಆತಂಕವಾಗಲೀ ಅವನ ಮನಸ್ಸಿನಲ್ಲಿ ಬಂದಂತೆ ಕಾಣಲಿಲ್ಲ. ರೇಖಾ ತಕ್ಷಣ ಹೊರಟಳು. "ಅಲ್ರೀ, ನಾನೇನು ಅಂಥಾದ್ದು ಏನು ಹೇಳಿದೆ. ನೀವೊಬ್ಬರು ಬಹಳ ವಿಚಿತ್ರವಾಗಿ ಆಡ್ತೀರಪ್ಪಾ?" ಅಂದವಳೇ ರೇಖಾಳ ಹಿಂದೆ ಹೊರಟಳು. ಚಾರು ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ಕೊಡಲಿಲ್ಲ. ಮೈಥಿಲಿಯು ಹೋಗುವಷ್ಟರಲ್ಲಿ ರೇಖಾ ರಿಸೆಪ್ಷನ್‌ನಲ್ಲಿ ಬಿಲ್ ಕೇಳುತ್ತಿದ್ದಳು. ಕೌಂಟರ್‌ನಲ್ಲಿದ್ದವನು ಲೆಕ್ಕ ಮಾಡುತ್ತಿದ್ದ. ಅವನು ಲೆಕ್ಕ ಮಾಡುತ್ತಿರುವಾಗಲೇ ರೇಖಾ ಚಾರುವಿನ ಆಫೀಸಿಗೆ ಫೋನು ಮಾಡತೊಡಗಿದಳು – ಆಫೀಸಿನ ಸೂಪರ್‌ವೈಸರ್‌ಗೆ. ಅವನು, "ಸರಿ"ಯೆನ್ನುತ್ತಿದ್ದ. ರೇಖಾ, "ಒಂದು ಮೂರು ಅಥವಾ ನಾಕು ಸಾವಿರ ಕ್ಯಾಶ್ ಬೇಕಾಗಬಹುದಂತೆ ಸಾರ್, ತಗೊಂಡು ಸಂಜೆಯೊಳಗೆ ಬರ್ತೀರಾ ಸಾರ್? ಚಾರುವೇ ಹೇಳಿದ್ರು ಸಾರ್." ಅವಳು ರಿಸೀವರ್ ಕೆಳಗಿಟ್ಟಾಗಲೇ ಮೈಥಿಲಿಗೆ ಗೊತ್ತಾಯಿತು. ಯಾವುದೇ ಕಾರಣಕ್ಕೂ ಚಾರು ತನ್ನನ್ನು ಒಂದು ಲೆಕ್ಕಕ್ಕೆ ತೆಗೆದುಕೊಂಡಿಲ್ಲ! ಅಕೌಂಟ್ಸ್ ಮಾಡುತ್ತಿದ್ದವನು ಒಟ್ಟು ಮೂರು ಸಾವಿರ ಇನ್ನೂರು ರೂಪಾಯಿ ಆಯಿತು ಮೇಡಂ ಎಂದ ರೇಖಾಗೆ. ಮೈಥಿಲಿ ಮತ್ತಷ್ಟು ಉರಿಯತೊಡಗಿದಳು. ಆದರೆ ರೇಖಾಗೆ ಅಡಕೊತ್ತಿನಲ್ಲಿ ಸಿಕ್ಕ ಅನುಭವವಾಯಿತು. ಅದನ್ನು ಗಮನಕ್ಕೆ ತಂದುಕೊಳ್ಳದೇ ತನ್ನ ಕೆಲಸವನ್ನು ಮುಂದುವರಿಸಿದಳು. ಅವಳ ಜೊತೆಗೆ ಮೈಥಿಲಿಯು ಚಾರುವಿನತ್ರ ಬಂದವಳು, "ಹೇಗೂ ಡಿಸ್ಚಾರ್ಜು ಸಂಜೆ ತಾನೆ? ನಾನು ಆಫೀಸಿಗೆ ಹೋಗಿ ಬರ್ತೀನಿ, ದುಡ್ಡು ಬೇಕಿದ್ರೆ ನಾನೇ ತರ್ತೇನೆ – ಯಾವಾಗಲೂ ಕ್ಯಾಶ್ ಶಿಬಿಯವರತ್ರ ಇರುತ್ತೆ, ಒಳ್ಳೆ ಮನುಷ್ಯ, ಟೈಮಿಗೆ ಸರಿಯಾಗಿ ಹೆಲ್ಪ್ ಮಾಡುತ್ತಾರೆ. ಅವರತ್ರ ತಗೊಂಡು ಬರ್ತೇನೆ" ಅಂದಳು. ಆದರೆ ಮೈಥಿಲಿಯ ಯಾವ ಮಾತಿಗೂ ಚಾರು ಸೊಪ್ಪು ಹಾಕಲಿಲ್ಲ ಮತ್ತು ಅವನು ಅದಕ್ಕೆ ಯಾವ ಪ್ರತಿಕ್ರಿಯೆಯನ್ನು ಕೊಡದೆ, ರೇಖಾ, "ಸುಪರ್‌ವೈಸರ್ ದುಡ್ಡು ತರ್ತಾನೆ ತಾನೆ? ಎಷ್ಟಾಯಿತು ಬಿಲ್ಲು? ಕುಡಿಯೋಕೆ ಒಂಚೂರು ನೀರು ಕೊಡು" ಎಂದ ಮೈಥಿಲಿಯ ಮುಖವನ್ನು ತಿರುಗಿಯೂ ನೋಡದೆಯೇ, ಮೈಥಿಲಿಗೆ ಈಗ ಅರಿವಾಯಿತು.

ತಾನು ಅಲ್ಲಿಯೇ ನಿಂತರೂ ಯಾವುದೇ ಕಾರಣಕ್ಕೆ ಚಾರು ತನ್ನನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಾರ. ಅದರೆ, ಅವಳಿಗೆ ಅರಿವಾಗದೇ ಇದ್ದ ಅನೇಕ ಅಂಶಗಳು

ಅವಳಲ್ಲಿಯೇ ಇತ್ತು. ಅವಳೇ ತನ್ನ ಮನಸ್ಸಿನೊಳಗೆ ಒಮ್ಮೆ ಭೂತಗನ್ನಡಿಯನ್ನು ಹಿಡಿದರೆ ಸಾಕಿತ್ತು. ಆದರೆ ಅವಳಿಗೆ ಆ ಪ್ರವೃತ್ತಿಯೇ ಇಲ್ಲ! ಮತ್ತೆ ಅಲ್ಲಿ ಹೆಚ್ಚು ಹೊತ್ತು ನಿಲ್ಲಲೂ ಕೂಡಾ ಇಲ್ಲ. ಅವಳಿಗಾಗಲೇ ಆಫೀಸಿಗೆ ಹೊರಡುವ ತವಕ – ಆಸ್ಪತ್ರೆಯ ಫಿನಾಯಿಲ್‌ನ ವಾಸನೆಗಿಂತ – ಶಿಬಿಯ ನಗೆ, ಸಿಟ್ಟು ಅವೇ ಮೇಲು. ಇಲ್ಲಿ ಉಳಿದು ತಾನು ಮಾಡುವುದೇನಿದೆ? ಹೇಗೂ ರೇಖಾ ಇದ್ದಾಳಲ್ಲ? ರೇಖಾನೆದುರು ತನ್ನನ್ನು ಯಾವುದೇ ಕಾರಣಕ್ಕೆ ಗಣನೆಗೆ ತೆಗೆದುಕೊಳ್ಳಲಾರ. ಹೀಗಿರುವಾಗ ತಾನ್ಯಾಕೆ ಎಲ್ಲವನ್ನು ಹಚ್ಚಿಕೊಂಡು ಓಡಾಡಬೇಕು? ಎಂದು ಮನಸ್ಸಿನಲ್ಲಿ ಭಾವಿಸಿಕೊಂಡವಳೇ ಚಾರು ಮತ್ತು ರೇಖಾ ಇಬ್ಬರನ್ನು ನೋಡದೆ ಆಫೀಸಿಗೆ ಹೊರಟಳು – ಮತ್ತೆ ಬರುವೆನೊ? ಇಲ್ಲವೋ? ಎಂಬುದನ್ನು ತಿಳಿಸದೆ. ಹಾಗೂ ಅನಂತರ ಸಂಜೆ ಅವಳು ಬರಲೂ ಇಲ್ಲ. ರೇಖಾ ಪಿಂಟೋ ಚಾರುವನ್ನು ಆಸ್ಪತ್ರೆಯಿಂದ ಡಿಸ್ಚಾರ್ಜು ಮಾಡಿಸಿ ಚಾರುವಿನ ಮನೆಯತ್ತ ಆರು ಗಂಟೆಯ ಹೊತ್ತಿಗೆ ಬಂದಾಗಲೂ ಮೈಥಿಲಿಯು ಬಂದಿರಲಿಲ್ಲ. ಮೈಥಿಲಿಯು ಬಂದುದೆ ಸಂಜೆ ಆರೂವರೆಯ ಹೊತ್ತಿಗೆ, ಅದೂ ಶಿಬಿಯ ಬೈಕಲ್ಲಿ ಹಿಂದೆ ಕೂತ್ಕೊಂಡು. ಮೈಥಿಲಿಯ ಕೈಯಲ್ಲಿ ಹೊಸ ಸೀರೆಯ ಕಟ್ಟು ಮತ್ತು ಶಿಬಿಯೊಂದಿಗೆ ಕಿಲಕಿಲನೆ ನಗುತ್ತಾ ಟಾಟಾ ಹೇಳಿದವಳು ಬಂದು ನೋಡುತ್ತಾಳೆ – ಮನೆಯ ಮೆಟ್ಟಿಲಲ್ಲಿ ಚಾರು ಬಾಗಿಲಿಗೆ ಒರಗಿ ಕೂತಿದ್ದಾನೆ. ರೇಖಾ ಸ್ವಲ್ಪ ದೂರ ಕೂತಿದ್ದಾಳೆ, ಅವರಿಬ್ಬರ ಮಧ್ಯೆ ರೇಖಾಳ ವ್ಯಾನಿಟಿ ಬ್ಯಾಗ್; ಒಂದು ಬ್ರೆಡ್; ಒಂದು ಎಳನೀರು ಇತ್ಯಾದಿ. ಅಲ್ಲಿಯೇ ಮಂಪರು ಕವಿದಂತೆ ಚಾರು ಬಾಗಿಲಿಗೆ ಒರಗಿ ಕೂತಿದ್ದಾನೆ. ಮೈಥಿಲಿಗೆ ಏನೂ ಅನಿಸಲಿಲ್ಲ – "ಚಾರು, ಮನೆಯ ಬೀಗ ತೆಗಿತೇನೆ ಒಂದೆರಡು ನಿಮಿಷ, ನನಗೆ ಇವರ ಡಿಸ್ಚಾರ್ಜು ಇಷ್ಟು ಬೇಗನೆ ಆಗುತ್ತದೆಯೆಂದು ಗೊತ್ತಿರಲಿಲ್ಲ. ಆಫೀಸಲ್ಲಿ ತುಂಬಾ ಕೆಲಸ, ಶಿಬಿಯವರು ಬಂದ ಮೇಲಂತೂ ನನಗೆ ಬಹಳಷ್ಟು ಕೆಲಸದ ಜವಾಬ್ದಾರಿ ಕೊಟ್ಟಿದ್ದಾರೆ" ಅಂದಳು. ಆದರೆ ಅವಳ ಕೈಯಲ್ಲಿ ನೇತಾಡುತ್ತಿದ್ದ ಹ್ಯಾಂಡ್ ಬ್ಯಾಗಿನಲ್ಲಿ "ಬನಾರಸ್ ಸೀರೆಗಾಗಿ ಒಮ್ಮೆ ಭೇಟಿ ಕೊಡಿ – ನಾಗಪ್ಪ ಅಂಡ್ ಸನ್ಸ್" ಎಂದು ಬರೆದಿತ್ತು.

ಎಲ್ಲಿಯಾದರೂ ಮಸಣಕ್ಕೆ ಹೋಗುವುದಾದರೂ ಯಾವ ಬಣ್ಣದ ಸೀರೆ ಉಡಲಿ? ಎಂದು ಮೈಥಿಲಿಯು ಕೇಳಬಹುದೇನೋ ಎಂದು ರೇಖಾಪಿಂಟೋಗೆ ಅನಿಸಿತು. ಆದರೆ ಅವಳು ಯಾವ ಪ್ರತಿಕ್ರಿಯೆಯನ್ನು ಕೊಡಲಿಲ್ಲ. ಅಭಿಪ್ರಾಯವನ್ನು ನಾಲಿಗೆಯ ತುದಿಯಲ್ಲಿ ಇಟ್ಟುಕೊಂಡ ಹುಡುಗಿಯಲ್ಲ. ಮೈಥಿಲಿ ಬಾಗಿಲು ತೆರೆದಳು. ಚಾರುವಿನ ಕೈ ಹಿಡಿದು ರೇಖಾ ಹೋದಳು. ಚಾರುಗೆ ಅಷ್ಟೊಂದು ನಿತ್ರಾಣವಿತ್ತು. ಆದರೆ ಮನೆಯೊಳಗೆ ಕಾಲಿರಿಸಿದ ತಕ್ಷಣ, ಅಯ್ಯೋ ಸುಸ್ತು, ಸಾಕಾಯಿತು ಎಂದವಳು ಮೈಥಿಲಿ!

*

ತನ್ನ ಕಾರ್ಯಾಚರಣೆಯು ಯಶಸ್ವಿಯಾಗಿ ಮುಂದುವರಿಯಬೇಕಾದರೆ ಕೆಲವು ಹಳೆಯ ತಲೆಗಳ ಮಿದುಳಲ್ಲಿ ತುಂಬಿಕೊಂಡಿರುವ ಹಳೆ ಕಾಲದ ಮನೋಸ್ಥಿತಿಯನ್ನು, ಅದರ ಪ್ರಭಾಕಿರಣವನ್ನು ನಗರದಿಂದಾಚೆಗೆ ತಳ್ಳಬೇಕು – ಹಳೆಯ ಮರದ ಒಂದೊಂದೇ ಬೇರುಗಳನ್ನು ಕಡಿಯಬೇಕು.

ಅರ್ಜುನನನ್ನು ಕೊಲ್ಲಲು ಕೊಟ್ಟ ಕೊನೆಯ ಅವಕಾಶವೆಂದರೆ – ಸರ್ಪಾಸ್ತ್ರವನ್ನು ಹೂಡುವುದು. ಬತ್ತಳಿಕೆಯಿಂದ ಸರ್ಪಾಸ್ತ್ರವು ಕೈಗೆ ಬಂದ ತಕ್ಷಣ ಕರ್ಣನಿಗೆ ಎಲ್ಲಿತ್ತೋ–ಏನೋ ಆ ಅಹಂಕಾರ. ಸಾರಥಿಯಾಗಿದ್ದ ಶಲ್ಯನಿಗೆ ಕೇಳಿದ್ದ, "ಏನು ಸಾರಥಿ ಸರಳು ಪಾಂಡವ ಸೇನೆಯನ್ನು ಗೆಲ್ಲಬಹುದೆ? ಅರ್ಜುನನ ತಲೆಯು ನೆಲಕ್ಕೆ ಉರುಳಬಹುದೆ? ದ್ರೌಪದಿಗೆ ವೈಧವ್ಯದ ದೀಕ್ಷೆಯನ್ನು ತರಬಹುದೆ?" ಕೊಂಚವೂ ತಟಪಟಾಯಿಸದೇ ಶಲ್ಯ ಹೇಳಿದ್ದ: "ಗುರಿಯು ತಪ್ಪಿದೆ, ಗುರಿ ತಪ್ಪಿದ ಬಾಣ ಪ್ರಯೋಗ ವ್ಯರ್ಥ". ಹಾಗೆಯೇ ಆಯಿತು, ಕರ್ಣನ ಗುರಿಯು ತಪ್ಪಿತು. ಅರ್ಜುನನ ಶಿರವು ಉಳಿಯಿತು. ಗುರಿಯೊಂದು ತಪ್ಪಿದರೆ ಸಾವಿರ ವರ್ಷ ಆಯುಷ್ಯವೆಂಬ ಗಾದೆಯ ಮಾತು ಸತ್ಯವಾಯಿತು. ಗುರಿ ತಪ್ಪಿದ ಬಾಣ ವ್ಯರ್ಥ. ಚಾರುವಿನ ಬಗ್ಗೆ ಒಂದು ಗುರಿಯಿಟ್ಟ ಮೈಥಿಲಿಯ ಕತೆಯೂ ಅದೇ – ಅವಳು ಗುರಿಯಿಟ್ಟಿದ್ದಳು ಒಂದಲ್ಲ ಒಂದು ದಿನ ಚಾರುವನ್ನು ಬಗ್ಗಿಸಿ ನೆಲಕ್ಕೆ ಹೊರಳುವಂತೆ ಮಾಡುತ್ತೇನೆ. ಅವನು ನುಣುಪಾದ ನೆಲದ ಮೇಲೆ ಕೇರೆ ಹೊರಳುವಂತೆ ಹೊರಳಬೇಕು. ಅವನು ಆಸ್ಪತ್ರೆಗೆ ಸೇರಿದಾಗ – ಅವಳಿಗೆ ಹಾಗನ್ನಿಸಿದ್ದು ನಿಜ. "ಈಗ ಈ ಮೂರ್ಖನಿಗೆ ಸಹಾಯ ಮಾಡಲು ಯಾರು ಬರುತ್ತಾರೆ? ಮೊದಲು ಹೊರಳುತ್ತಾನೆ, ಬಿಕ್ಕಿ ಬಿಕ್ಕಿ ಅಳುತ್ತಾನೆ. ಬಿದ್ದವನನ್ನು ಮೆಲ್ಲಗೆ ಎತ್ತಿ ಕೂರಿಸಿ, ಅವನ ಬಾಯಿಂದಲೇ ತಪ್ಪಾಯಿತು ಅಂತ ಹೇಳಿಸುತ್ತೇನೆ. ಹಟಕ್ಕೆ ಹಟ. ನನ್ನ ಮೇಲೆ ಹೆತ್ತಮ್ಮನ ಹೊರತು ಈ ತನಕ ಯಾರು ಕೈ ಮಾಡಿಲ್ಲ, ಚಾರು ಮಾಡಿದ್ದಾನೆ. ಯಾವ ಕೈಯಲ್ಲಿ ಹೊಡೆದನೋ ಅದೇ ಕೈಯಲ್ಲಿ ಈ ಹೊತ್ತು ಬೇಡುತ್ತಾನೆ – ಒಂದು ಹಿಡಿ ಅನ್ನಕ್ಕೆ, ಒಂದು ಗುಟುಕು ನೀರಿಗೆ." ಹೀಗೆಂದುಕೊಂಡವಳ ಬಾಣವೇ ವ್ಯರ್ಥವಾಯಿತು. ಅವಳಿಟ್ಟ ಗುರಿಯೇ ಸರಿಯಾಗಿ ಇರಲಿಲ್ಲ. ದರಿದ್ರ ಮುಸುಡಿಯ ರೇಖಾ ಪಿಂಟೋ ಮಧ್ಯೆ ಬಾರದೇ ಹೋಗಿದಿದ್ದರೆ – ಇಷ್ಟು ಹೊತ್ತಿಗೆ ಚಾರು ನೀನೇ ಶರಣೆಂದು ಕೈಮುಗಿದು – ಕಾಲ ಬುಡದಲ್ಲಿ ಜೀಯಾ ಎಂದು ಒರಲುತ್ತಿದ್ದ. ವಿಲವಿಲನೆ ಒದ್ದಾಡುತ್ತಿದ್ದ, ತನ್ನ ಇಷ್ಟಾರ್ಥ ಸಿದ್ಧಿಯ ನೆರವೇರಲಿಲ್ಲ. ದಾರಿ ಹೋಕನೊಬ್ಬ ದಾರಿಯಲ್ಲಿ ಸಾಗುತ್ತಿರುವಾಗ ಮಧ್ಯೆ ದಾರಿಯಲ್ಲಿ ಬೆಕ್ಕೊಂದು ಅಡ್ಡಬಂದಂತೆ ರೇಖಾ ಅಡ್ಡ ಬಂದುಬಿಟ್ಟಳು. ಕಾಲ ಬುಡದಲ್ಲಿ ಅಡ್ಡ ಬಿದ್ದು ಹೊರಳಬೇಕಾದವನು ಚಾರು ಉಳಿದುಬಿಟ್ಟ. ಜೇಡವೊಂದು ಹೆಣೆದ ಬಲೆಗೆ ನೊಣ ಬಿದ್ದರೆ ತಪ್ಪಿಸಿಕೊಳ್ಳುವುದಂತೂ ಸಾಧ್ಯವಿಲ್ಲ. ಅದಕ್ಕೆ ಅದರದೇ ಆದ ದಾರಿಗಳಿದ್ದರೂ ಅನವಶ್ಯಕವಾಗಿ ಸಿಕ್ಕಿ ಹಾಕಿಕೊಂಡ ತನ್ನನ್ನು ಬಿಡಿಸಿಕೊಳ್ಳಬೇಕೆಂದರೆ

ಅದು ಸಾಧ್ಯವೆ? ತನ್ನ ಕತೆಯೂ ಅದೇ ಆಯಿತು. ತಾನೇ ಹೆಣೆದ ಬಲೆಯಲ್ಲಿ ತಾನೇ ಸಿಕ್ಕಿ ಹಾಕಿಕೊಂಡವಳಂತೆ ಮೈಥಿಲಿಯು ಹೆಣಗಾಡಿದಳು. ಅವಳಿಗೆ ಮೊದಲ ಅನುಮಾನ ಬಂದಿದ್ದೇ ರೇಖಾಪಿಂಟೋಳ ಬಗೆಗೆ. ರೇಖಾ ಪಿಂಟೋಗೆ ಮತ್ತು ಚಾರುಗೆ ಯಾವ ಸಂಬಂಧ? ರೇಖಾ ಪಿಂಟೋ ಚಾರುವಿನ ಚಾಕರಿ ಮಾಡಬೇಕಾದ ಅಗತ್ಯವಾದರೂ ಏನಿತ್ತು? ಚಾರುಗೆ ಈಗ ಮತ್ತೆ ಹೊಸದೊಂದು ವ್ಯವಹಾರ ಶುರುವಾಗಿದೆ; ಹೆಣ್ಣು; ಹೆಂಡ; ಸಿಗರೇಟು. ಮೊದಲ ಸಂಗತಿಯೊಂದು ಅಪಾಯಕಾರಿ. ಇದ್ದಕ್ಕಿದ್ದಂತೆಯೇ ಚಾರುಗೆ ಅಂಟಿಕೊಂಡ ನಂಟಿದು. ಇದನ್ನು ಬಿಡಿಸುವುದು ಅಥವಾ ಬಿಡಿಸದೇ ಇರುವುದು ಎರಡರ ನಡುವೆ ಯಾವುದಾದರೂ ಒಂದು ಆಯ್ಕೆ ಇಟ್ಟುಕೊಳ್ಳಬೇಕು. ಒಂದು ದೃಷ್ಟಿಯಿಂದ ಬಿಡಿಸುವುದು ಹೆಚ್ಚು ಉಪಯುಕ್ತ. ಯಾಕೆಂದರೆ ಕೊನೆಯ ಪಕ್ಷ ರಾತ್ರಿಯಾದರೂ ಬೆನ್ನಿಗಂಟಿಕೊಂಡು ಕುಯಿಂಗುಡುತ್ತಾನೆ. ತಿರುಗಿ ಮಲಗದೇ ಇದ್ದರೆ ವಿವಶನಾಗುತ್ತಾನೆ. ಒಂದು ಒಳ್ಳೆಯ ಗಂಡಸೇ ಆಗಿರಲಿ; ಕೆಟ್ಟ ಗಂಡಸೇ ಆಗಿರಲಿ – ಮೈಗೆ ಮೈಯೊತ್ತಿ ಮಲಗಿರುವ ಹೊತ್ತಿಗೆ ತಿರುಗಿ ಮಲಗಿದರೆ ಅವನು ವಿಪರೀತ ಪಾಡುಪಡಬೇಕು. ಕಾಲಿಗೆ ಕಾಲು ಗಂಟು ಹಾಕಿಕೊಂಡು, ಮೈಗೆ ಒಂಚೂರು ಬಿಸುಪೇರದಂತೆ ನೋಡಿದರೆ ಅವನ ಕತೆ ಮುಗಿಯಿತು. ಒಂದಿಷ್ಟು ಮೈಯ ಸ್ಪರ್ಶದಲ್ಲಿ ಬಿಸುಪೇ ಏರದಂತೆ ತಿರುಗಿ ಮಲಗಿದರೆ, ಅಲ್ಲಿಗೆ ಗಂಡು ಮತ್ತೆ ತಡವಬೇಕು. ಆಸೆ ಮತ್ತು ಕಾಮನೆಗಳನ್ನು ಕೆರಳಿಸಬೇಕು. ಇಡೀ ಮೈಯನ್ನು ಕಾಮನಬಿಲ್ಲು ಆಗಬೇಕು ಅಂದರೆ ಅಷ್ಟು ಸುಲಭವಲ್ಲ. ಗಂಡನ್ನು ಆಟವಾಡಿಸಲು ಇದೊಂದು ಸುವರ್ಣಾವಕಾಶ – ಹೆಣ್ಣಿಗೆ ದತ್ತಕವಾಗಿ ಬ್ರಹ್ಮ ಸೃಷ್ಟಿಯಲ್ಲಿ ಕೊಟ್ಟಿರುವ ಒಂದು ಇನಾಮು ಇದು. ಚಾರು ಅಪರೂಪಕ್ಕೆ ಒಮ್ಮೊಮ್ಮೆಯಾದರೂ ರಾತ್ರಿಯಲ್ಲಿ ತಾಳಲಾಗದೇ ಹತ್ತಿರ ಬರುತ್ತಾನೆ. ಈಗ ಯಾವುದಾದರೂ ಒಬ್ಬಳು ಹುಡುಗಿ ಅವನಿಗೆ ಗಂಟು ಹಾಕಿಕೊಂಡರೆ ಅವನು ಅನಂತರ ಕ್ಯಾರೇ ಅನ್ನೋಲ್ಲ. ಈ ದೃಷ್ಟಿಯಿಂದ ತನಗೆ ಅನನುಕೂಲವೊಂದು ಕಟ್ಟಿಟ್ಟಂತಾಗುತ್ತದೆ. ಆದರೆ, ಈ ಚಾರುವೆಂಬ ನರಪೇತಲ ನಾರಾಯಣನೊಬ್ಬನಿಗೆ ಹುಡುಗಿ ಅಂಟಿಕೊಂಡರೆ ಆಮೇಲೆ ನನ್ನ ಸ್ವಾತಂತ್ರ್ಯಕ್ಕೆ ಯಾವ ಅಡ್ಡಿಯೂ ಇಲ್ಲ. ಹಾಯಾಗಿ ನಾನು ನನ್ನ ಪಾಡಿಗೆ ಇರಬಹುದು. ಅದರಿಂದ ಯಾರೂ ನನ್ನನ್ನು ಕೆಟ್ಟ ಕಣ್ಣಿಂದ, ಕಾಗೆಯ ದೃಷ್ಟಿಯಿಂದ ನೋಡುವವರಂತೂ ಇಲ್ಲ. ಚಾರು ಲಂಗು ಲಗಾಮಿಲ್ಲದೆ ವರ್ತಿಸಿದ್ದಕ್ಕೆ ಮೈಥಿಲಿಯು ಹಾಗೇ ವರ್ತಿಸಿದಳು ಎಂದು ಹೇಳಿ ಸುಮ್ಮನಾಗಿ ಬಿಡುತ್ತಾರೆ. ಅದರಿಂದ ವೈಯಕ್ತಿಕವಾಗಿ ನನಗಂತೂ ನಷ್ಟವಿಲ್ಲ. ಎರಡೂ ದೃಷ್ಟಿಕೋನಗಳಿಂದ ಮೈಥಿಲಿಯು ತುಲನೆ ಮಾಡಲು ತೊಡಗಿದಳು. ಅದೇ ವೇಳೆಗೆ ಸರಿಯಾಗಿ ಫೋನಿನ ಕರೆಯು ಬಂತು; "ಚಾರು ಇದ್ದಾರಾ?" ಧ್ವನಿ ರೇಖಾಳದು, ಯಾರ ಬಗ್ಗೆ ಯೋಚನೆ ಮಾಡುತ್ತೇವೋ ಅವರು ಎದುರು ಬಂದರೆ ಅಥವಾ ಅವರ

ಧ್ವನಿಯು ಕೇಳಿದರೆ ಅಲ್ಲಿಗೆ ಅವರಿಗೆ ನೂರು ವರ್ಷದ ಆಯಸ್ಸು ಬಂತೆಂದು ಅರ್ಥ. "ಇದ್ದಾರೆ, ಆದರೆ ಮಲಗಿದ್ದಾರೆ, ನೀವ್ಯಾರು ಅಂತ ಮೊದಲು ಹೇಳಿ ಉಳಿದುದು ಆಮೇಲೆ." ಒಂದು ರೀತಿಯ ಸಿಡುಕು ಮತ್ತು ಅಸಹನೆಯ ಸ್ವರವೊಂದು ಮೈಥಿಲಿಯ ಗಂಟಲಿನಿಂದ ಒಡಮೂಡಿತು. ಅನಿರೀಕ್ಷಿತ ತನ್ನ ಗಂಟಲ ನಡುವಿನಿಂದ ಹೊರಹೊಮ್ಮಿದ ಗಡುಸು ಸ್ವರದ ಬಗ್ಗೆ ತನಗೇ ಅಸಹನೆಯೆಂದನ್ನಿಸಿತು ಮತ್ತು ಆ ಸಂದರ್ಭದಲ್ಲಿ ಆ ರೀತಿಯ ಸ್ವರವೊಂದು ಬೇಕಿರಲಿಲ್ಲ. ಅದೇ ಅವಳೇ ಅವಳು ಮಾಡಿದ ತಪ್ಪು. ಹತ್ತು ಹಲವು ತಪ್ಪುಗಳನ್ನು ಮಾಡಿಯೂ ಅದನ್ನು ತನಗೇ ಬೇಕಾದಂತೆ ಪರಿವರ್ತಿಸುವ ಶಕ್ತಿಯುಳ್ಳವಳಿಗೆ ಇದೊಂದು ಸಂಗತಿಯಲ್ಲ. ನಾಗೇಶ ಮತ್ತು ಜೆ.ಕೆ. ಇಡಿಯ ನಗರಕ್ಕೆ ಒಂದು ಹೊಸ ಬಣ್ಣ ಕೊಡಲು ಯೋಚಿಸುತ್ತಿರುವ ಗಳಿಗೆಯಲ್ಲಿಯೇ ಈ ಘಟನೆ ನಡೆದಿದೆ. ಇಡಿಯ ನಗರಕ್ಕೆ ನಗರವೇ ತನ್ನ ಬೀದಿ ದೀಪಗಳ ಮೂಗುಬೊಟ್ಟನ್ನು ತಳ ತಳನೆ ಹೊರಳಿಸುವ ಹೊತ್ತು. ಗಾರ್ಡನಿನಲ್ಲಿ ಬೆಳೆದ ಪೊದೆಯ ಮರೆಯಲ್ಲಿ ತನ್ನ ಮೇಲೆ ಹೊರಳಿದ ಗಂಡಸನ್ನು, ಯಾವಳೋ "ಥೂ ನಿನ್ನ, ದುಡ್ಡು ಇಡೋ ಬೋಳಿಮಗನೇ!" ಎಂದು ಕರೆದು, ಅವನ ಪ್ಯಾಂಟಿನ ಜೇಬಿಂದ ಕಸುಬಿಗೆ ತಕ್ಕ ಹಣವನ್ನು ಕಿತ್ತುಕೊಂಡ ಸಮಯವೂ ಹೌದು. ಮೈಥಿಲಿಗೆ ಬಂದ ಫೋನು ಕರೆಗೆ ಉತ್ತರಿಸುವ ಕ್ರಮದಲ್ಲಿ ದಿಟ್ಟತನವಿತ್ತು. ಅಲ್ಲಿ ಸೌಜನ್ಯವೆಂಬ ಸಣ್ಣ ಕುರುಹು ಕೂಡಾ ಅವಳ ಮಾತಿನಲ್ಲಿ ಇಣುಕಲಿಲ್ಲ. "ನಾನು ರೇಖಾ," ಎಂದು ಹೇಳಿದವಳು ಮತ್ತೊಂದು ಮಾತಿಗೆ ಕಾದಳು. ಆದರೆ, ಸೌಜನ್ಯ, ವಿವೇಕ, ತಾಳ್ಮೆ ಎಂಬುದು ಯಾವುದೂ ಇಲ್ಲವಾದ ಹೆಣ್ಣು ಮೈಥಿಲಿ. ಬರಿಯ ಅಹಂಕಾರವೊಂದರಲ್ಲಿ! ಹೆಣ್ತನವೊಂದರಲ್ಲಿ ಜಗತ್ತನ್ನೇ ಕುಣಿಸಬಹುದು ತಿಳಿದುಕೊಂಡ ಜೀವವದು. ಆ ಜೀವಕ್ಕೆ ಇನ್ನೊಬ್ಬರ ಮಾತು ಬೇಕಿಲ್ಲ, ತನ್ನ ಗಂಟಲಲ್ಲಿ ಹರಿಯುವ ಮಾತು ಮಾತ್ರ ಮುಖ್ಯ. ಈರ್ಷ್ಯೆ ಮತ್ತು ಅಸೂಯೆಯೆರಡೂ ಜೊತೆಗೆ ಸೇರಿಕೊಂಡು ಬಿಟ್ಟರಂತೂ ಅದಕ್ಕೆ ಪ್ರತಿಯಾಗಿ ಬೇರೇನೂ ಬೇಕಾಗಿಲ್ಲ. ಎಷ್ಟು ಬೇಗನೆ ರೇಖಾಳ ಫೋನಿನ ಕರೆಗೆ ಪ್ರತಿಕ್ರಿಯಿಸಿದಳು ಎಂದರೆ ರೇಖಾ ಮತ್ತೊಂದು ಮಾತಾಡುವ ಮೊದಲೇ ರಿಸೀವರನ್ನು ಫೋನಿನ ಮೇಲಿಟ್ಟಳು. ಆದರೆ, ಚಾರುಗೆ ಎಚ್ಚರವಿತ್ತು. ಪ್ರತಿಯಾಗಿ ಎದ್ದುಬಂದು ಫೋನಿನ ಕರೆ ಬರುವಷ್ಟರಲ್ಲಿಯೇ ಮೈಥಿಲಿಯು ರಿಸೀವರ್‌ನ್ನು ಕೆಳಗಿಟ್ಟುಕೊಂಡಿದ್ದು ಗೊತ್ತಾಯಿತು. ಚಾರು ಮತ್ತೆ ಹೊರಳಿ ಮಲಗಿದ. ಮತ್ತೊಮ್ಮೆ ಕೇಳಿದರಾಯಿತು ಎಂದುಕೊಂಡ. ಮತ್ತೊಮ್ಮೆ ಫೋನು ಕಿರುಗುಟ್ಟತೊಡಗಿತು. ಮೈಥಿಲಿಯು ಯಾವುದೋ ಪೇಪರನ್ನು ಓದುತ್ತಿದ್ದವಳು ರಿಸೀವರನ್ನು ಶಪಿಸುತ್ತಲೇ ಕೈಗೆತ್ತಿಗೊಂಡಳು, "ಏನು ಕರ್ಮವೋ ಏನೊ? ಎಷ್ಟು ಹೊತ್ತಿಗೆ ಬರುತ್ತೆ – ಥೂ ಇವರಿಗೆ – ಉತ್ತರ ಹೇಳಿಯೇ ಸಾಕಾಗಿ ಹೋಯಿತು." ಆದರೆ, ಈ ಮಾತನ್ನು ಹೇಳುವಾಗಲೇ ಅವಳು ರಿಸೀವರನ್ನು ಎತ್ತಿ ಹಿಡಿದಾಗಿತ್ತು. ಆ ಕಡೆಯಿಂದ ಫೋನು

ಮಾಡಿದವನು ಶಿಬಿ. "ಏನು ಮೇಡಂ, ಫೋನಲ್ಲಿಯೇ ಬೈತಾ ಇದ್ದಿರಲ್ಲಾ ಮೇಡಂ, ಯಾರಿಗೆ?" ಎಂದು. "ಓ, ನೀವಾ ಸಾರ್? ಪದೇ ಪದೇ ಆಗಿನಿಂದಲೇ ಫೋನಿನ ಮೇಲೆ ಫೋನ್. ಎಲ್ಲರೂ ಚಾರು ಹೇಗಿದ್ದಾರೆ? ಅಂತ ಕೇಳ್ತಾನೆ ಇದ್ದಾರೆ. ಅದಕ್ಕೆ ಸಾಕಾಗಿ ಹೋಯಿತು, ನೀವೂಂತ ಗೊತ್ತಿರಲಿಲ್ಲ ಸಾರ್, ಸಾರಿ, ಮತ್ತೇನು ಸಾರ್? ಚೆನ್ನಾಗಿದ್ದೀರಾ?" ಎಲ್ಲಿಂದಲೋ ಮೂಡಿಬಂದ ಮಂದಹಾಸ; ಪುಟಿದೆದ್ದ ಸಂತೋಷದ ಅಲೆಗಳನ್ನು ವಾಸ್ತವವಾಗಿ ಮೈಥಿಲಿಗೆ ನಿಯಂತ್ರಿಸವುದು ಸಾಧ್ಯವಾಗಲೇ ಇಲ್ಲ. ಅವಳ ಸಿಟ್ಟು ತಣಿದು ತಂಪಾಗಿದೆ ಮತ್ತು ಅದರ ಬದಲಿಗೆ ತಂಪಾದ ನಗೆಯೊಂದು ಹೊರಗಡೆ ಚಿಮ್ಮುವುದನ್ನು ಧ್ವನಿಯ ಏರಿಳಿತದಲ್ಲಿಯೇ ಶಿಬಿಯು ಕಂಡುಹಿಡಿದ ಮತ್ತು ಒಳಗಡೆ ಮಲಗಿದ ಚಾರುಗೆ ಕೂಡಾ ತಕ್ಷಣವೇ ಅವಳ ಮಾತಿನ ಚಹರೆಯು ಬದಲಾದುದು ಅರ್ಥವಾಯಿತು. ಇದ್ದಕ್ಕಿದ್ದಂತೆ ನೆಲ ಕೆರೆದಾಗ ಹುಟ್ಟಿಬಂದ ನೀರ ಒರತೆಯಂತೆ, ಕಡ್ಲೆ ಮಿಠಾಯಿಗೆ ಜೊಲ್ಲು ಸುರಿಸುವ ಮಗುವಿನಂತೆ – ತಕ್ಷಣವೇ ಅವಳ ಧ್ವನಿಯ ಏರಿಳಿತವುಂಟಾದುದು ಆಶ್ಚರ್ಯವನ್ನುಂಟುಮಾಡಿತು – ಚಾರುಗೆ ಅಂದರೆ ಫೋನಿನಲ್ಲಿ ಮಾತಾಡುತ್ತಿರುವವನು ಮೈಥಿಲಿಯ ಅತ್ಮೀಯ. ಬಣ್ಣವನ್ನು ಅಷ್ಟೊಂದು ಸುಲಭವಾಗಿ ಬದಲಾಯಿಸಬಹುದೆ? ಶಿಬಿ ಮತ್ತು ಮೈಥಿಲಿಯರ ಸರಸ ಸಂಭಾಷಣೆಯು ಫೋನಿನಲ್ಲಿ ಮುಂದುವರಿಯುತ್ತಿತ್ತು. ಆಗಾಗ ಮೈಥಿಲಿಯ ನಗೆ. "ಎಷ್ಟು ಚೆನ್ನಾಗಿ ಜೋಕ್ ಹೊಡಿತೀರಾ ಸಾರ್" ಅಂದವಳು ಮೈಥಿಲಿ, "ಜೋಕ್" ಅನ್ನುವುದೂ ಜೀವನದಲ್ಲಿ ನೆಮ್ಮದಿಯ ಒಂದು ಭಾಗವೆಂದೇ ಭಾವಿಸಿಕೊಂಡಿದ್ದಾಳೆ ಮೈಥಿಲಿ. ಮತ್ತೊಮ್ಮೆ ಹೊರಳಿ ಮಲಗಿದ ಚಾರು – ಮನಸ್ಸಿನ ಮೂಲೆಯಲ್ಲಿ ಹಬೆಯಾಡುತ್ತಿರುವ ಅಸಹನೆ ಮತ್ತು ಅತೃಪ್ತಿಗಳಿಗೆ ಕೊನೆಯೆಂಬುದು ಇಲ್ಲವೆ? ಯಾವಾಗ ಕೊನೆಯಾಗಬಹುದು? ಯಾಕಿದು ಹೀಗೆ? – ಚಾರುಗೆ ಉತ್ತರ ಸಿಗಲಿಲ್ಲ. ಈಗ ಕೈಯಲ್ಲಿ ಸಿಗರೇಟು ಇಲ್ಲ, ಮನಕ್ಕೆ ಮುದನೀಡುವ ಜಿನ್ ಕೂಡಾ ಇಲ್ಲ! ಎಲ್ಲವೂ ಅಸ್ತವ್ಯಸ್ತ? ಉತ್ತರದ ಬೆಳದಿಂಗಳಿಗಾಗಿ ಕಾಯಬೇಕು. ಸ್ವಾತಿಯಲ್ಲಿ ಮುತ್ತಿನಂಥ ಮಳೆಹನಿಯನ್ನು ಕಾಯಬೇಕು. ಸಮುದ್ರದ ಆಳದಿಂದಲೇ ಕೆಲವಕ್ಕೆ ಉತ್ತರವನ್ನು ಹುಡುಕಿ ತೆಗೆಯಬೇಕು! ಮಾನಸಿಕ ಹೆಳವತನವೊಂದು ಬಂದು ಆವರಿಸಿ ಕೊಂಡಂತಾಯಿತು ಚಾರುಗೆ. ಅವನಿಗೆ ಹಿತನುಡಿವ, ಕಿವಿ ಮಾತು ಹೇಳುವ ಅಪ್ಪನಿಲ್ಲ, ಪಾಠ ಕಲಿಸಿದ ಶಂಕರ ಪಂಡಿತರಿಲ್ಲ, ಜೀವನಾನುಭವ ಪಾಠ ಕಲಿಸತೊಡಗಿದೆ!

ರೇಖಾ ಪಿಂಟೋ ಫೋನ್ ರಿಸೀವರನ್ನು ಮೈಥಿಲಿಯು ಕೂಡಲೇ ಇರಿಸಿದ್ದನ್ನು ನೋಡಿಯೇ ಕಂಗಾಲಾದಳು. ಎಲ್ಲಾದರೂ ಅವಳೆದುರು ತಾನು ಇದ್ದಿದ್ದರೆ ಕೊಳ್ಳಿ ದೆವ್ವದಂತೆ ಮೈಯಿಡೀ ಕಾದ ಕಬ್ಬಿಣದಲ್ಲಿ ಮೈಮೇಲೆ ಬರೆಯನ್ನು ಎಳೆಯುತ್ತಿತ್ತೋ ಏನೋ? ಎಸ್.ಟಿ.ಡಿ. ಬೂತೊಂದಕ್ಕೆ ಬಂದು, ಚಾರುವಿನ ಆರೋಗ್ಯವು ಹೇಗಿದೆಯೆಂದು ವಿಚಾರಿಸಲೇಬೇಕೆಂದು ಹುಟ್ಟಿಕೊಂಡ ಅವಳ ಬಯಕೆಯು

ಅಂತರಾಳದಿಂದ ಬಂದಿರುವುವಂಥದ್ದು. ಆಸ್ಪತ್ರೆಯಲ್ಲಿ ಕೇವಲ ಮಾನವೀಯವಾದ ಕಾರಣವೊಂದಕ್ಕೆ ಅವನ ಸೇವೆ ಮಾಡಿದವಳಿಗೆ – ಅವಳ ಅಂತಃಕರಣದಿಂದ ಈ ಬಯಕೆಯು ಬಂದಿರುವುದಕ್ಕೆ ಕಾರಣವನ್ನು ಹುಡುಕಬೇಕಾದ ಕಾರಣವಿರಲಿಲ್ಲ. ಮೈಥಿಲಿಯು ಕಾರಣವನ್ನು ಹುಡುಕಿದಳು ಮತ್ತು ಅದರಿಂದಲೇ ಆ ರೀತಿಯಲ್ಲಿ ವರ್ತಿಸಿದಳು ಎಂಬುದು ಸುಲಭವಾಗಿ ರೇಖಾಳಿಗೂ ಅರ್ಥವಾಯಿತು. ಅನವಶ್ಯಕವಾಗಿ ನನ್ನ ತಲೆಯ ಮೇಲೊಂದು ಗೂಬೆಯನ್ನು ಕೂರಿಸುವ ಪ್ರಯತ್ನವನ್ನು ಮೈಥಿಲಿಯು ಮಾಡಿದಳೆಂದು ರೇಖಾಗೆ ಅನಿಸಿತು. ತಕ್ಷಣವೇ ಟೆಲಿಫೋನಿನಿಂದ ಹೊರಗಡೆ ಬಂದಳು. ನಾಳೆ ಬೆಳಿಗ್ಗೆ ಚಾರುವನ್ನು ಅವರ ಮನೆಯಲ್ಲಿ ಭೇಟಿಯಾಗಬೇಕೆಂದು ಯೋಚಿಸಿದಳು – ಅದೂ ಮೈಥಿಲಿಯು ಆಫೀಸಿಗೆ ಹೋದ ತದನಂತರ. ಮಾತಾಡಿಸಿಕೊಂಡು ಬರಬೇಕೆಂದುಕೊಂಡಳು. ಅವಸರದಲ್ಲಿಯೇ ಮನೆಯತ್ತ ಹೆಜ್ಜೆ ಹಾಕಿದಳು. ಈಗ ತಕ್ಷಣವೇ ಕರೆಂಟ್ ಹೋದರೆ ಯಾರಾದರೂ ಬಂದು ನನ್ನನ್ನು ಕೆಣಕಿದರೆ – ಪ್ರಸನ್ನ ಬಂದು ನನಗೆ ಧಮಕಿ ಹಾಕಿದರೆ ಏನು ಮಾಡಬೇಕು? ಈ ಭಯವೇ ಹೆಚ್ಚಾಗತೊಡಗಿ, ರೇಖಾ ಅವಸರದಲ್ಲಿ ಹೆಜ್ಜೆ ಹಾಕಿದಳು ಮತ್ತು ಅವಸರದಿಂದ ಹೆಜ್ಜೆ ಹಾಕಲು ತೊಡಗಿದ್ದರಿಂದಲೇ ಅವಳು ಬೆವರತೊಡಗಿದಳು. ವಿಪರೀತವಾಗಿ ಅಂಗೈ ಮತ್ತು ಕಾಲೆಲ್ಲ ಬೆವರುತ್ತಿದೆಯೆಂದೂ; ಎದೆಯಲ್ಲಿ ಸಣ್ಣದೊಂದು ನಡುಕವು ಹುಟ್ಟಿಕೊಂಡಿದೆಯೆಂದೂ, ಸ್ವತಃ ಅವಳಿಗೆ ವೇದ್ಯವಾಯಿತು. ಆದರೆ ಅವಳು ಗ್ರಹಿಸಿದ ಹಾಗೆ ಕರೆಂಟು ಹೋಗಲಿಲ್ಲ – ಅವಳು ಅವಳ ಮನೆಯನ್ನು ತಲುಪುವವರೆಗೂ! ಆ ರಾತ್ರಿಯೇ ಸರಿಸುಮಾರು ಹನ್ನೆರಡು ಗಂಟೆಗೆ ಎದ್ದುಕುಳಿತ ಚಾರುಗೆ ನಿದ್ದೆಯೇ ಬರುತ್ತಿಲ್ಲ. ಆ ಕಡೆ ಹೊರಳಿ ಮಲಗಿದವನಿಗೆ ನಿದ್ದೆ ಬರಬಹುದೇನೋ ಕಾಯುತ್ತಲೇ ಮಲಗಿದ್ದ . ಆ ಕಡೆ ಹೊರಳಿದರೂ ನಿದ್ದೆಯ ಸುಳಿವಿಲ್ಲ, ಈ ಕಡೆಗೆ ಸುಳಿದರೂ ನಿದ್ದೆಯ ಸುಳಿವಿಲ್ಲ. ಕದ್ದು ಓಡಿಹೋದ ನಿದ್ದೆಯನ್ನು ಹಿಡಿದು ತರುವುದಾದರೂ ಹೇಗೆ? ಸುದೀರ್ಘವಾದ ನಿಟ್ಟುಸಿರನ್ನು ಹತ್ತಾರು ಬಾರಿ ಬಿಟ್ಟ. ಯಾರೋ ಹೇಳಿಕೊಟ್ಟ ಮಂತ್ರವದು – ನಿದ್ದೆ ಬಾರದಿದ್ದರೂ ಸುದೀರ್ಘವಾದ ನಿಟ್ಟುಸಿರನ್ನು ಬಿಟ್ಟರೆ ನಿದ್ದೆ ಬರುತ್ತೆ. ನಿದ್ದೆಯೇ ಹತ್ತಿರ ಬರಲೊಲ್ಲದು, ಇನ್ನು ಮಲಗುವುದು ಸೂಕ್ತವೆಂದವನು ಎದ್ದು ಕುಳಿತ. ಎದ್ದು ಕುಳಿತವನಿಗೆ ಕೇಳಿಸಿದ್ದು ಮೈಥಿಲಿಯ ಸಣ್ಣ ಗೊರಕೆ! ನಿದ್ದೆಯು ಅಸಾಧ್ಯವೆಂದುಕೊಂಡವನು – ಬರೆಯತೊಡಗಿದ. ತಾನು ನಿರಾಳವಾಗಬೇಕು ಎಂಬ ಒಂದೇ ಕಾರಣಕ್ಕೆ!

ನೂರು ಪುಟದ ಒಂದು ಪುಟ್ಟ ಮಕ್ಕಳು ಬರೆಯಬಹುದಾದ ನೋಟ್‌ಬುಕ್ಕೊಂದರಲ್ಲಿ – ಪ್ರಯಾಸದಿಂದ ಸಾಕಷ್ಟು ಆಯಾಸಗೊಂಡವನು ಬರೆಯತೊಡಗಿದ. ಬರೆದು ಮುಗಿದ ಮೇಲಾದರೂ ಒಂದು ಒಳ್ಳೆಯ ನಿದ್ರೆಯು ಬಂದು ಮುತ್ತಿಕ್ಕಬಹುದು ಎಂಬ

ಆಸೆಯಿಂದ. ಚಾರು ಸ್ಥಿರವಾಗಿ ಬರೆದುಕೊಂಡೇ ಕೆಲವು ಅಚಲತೆಯ ಕಡೆಗೆ ನುಗ್ಗಬೇಕು ಎಂದು ಭಾವಿಸಿಕೊಂಡೇ ಬರೆಯತೊಡಗಿದ.

ಮತ್ತೆ ಶನಿವಾರ. ಈ ಶನಿವಾರವೆಂಬುದು ಯಾಕಾದರೂ ಬರುತ್ತದೋ ಎದೆನ್ನಿಸುತ್ತದೆ. ಶನಿವಾರವೆಂಬುದು ಶುಕ್ರವಾರದ ಬೆನ್ನಟ್ಟಿಕೊಂಡು ಬರುತ್ತದೆ ಮತ್ತು ಶನಿವಾರ ನನಗೆ ಯಾವತ್ತೂ ಇಷ್ಟವಿಲ್ಲ. ಅದರ ಮರುದಿನ ಭಾನುವಾರವೆಂದರು ಯಾಕೋ ಸಣ್ಣದೊಂದು ಅಲರ್ಜಿ, ಔದಾಸೀನ್ಯ. ಭಾನುವಾರವೆಂಬುದು ಖುಶಿ ಕೊಟ್ಟದ್ದು ನನಗೆ ನನ್ನ ಬಾಲ್ಯದಲ್ಲಿ. ಆಗ ಆಟವಾಡುವ ಉಮೇದು ಇತ್ತು, ಮನೆಯೆಂದರೆ ಖುಶಿಯಿತ್ತು. ಆದರೆ ಬೆಳೆಯುತ್ತಾ ಬಂದಂತೆ ನನಗೆ ಶನಿವಾರವೆಂದರೆ ಅಸಹನೆಯು ಜೊತೆ ಜೊತೆಗೆ ಬೆಳೆಯುತ್ತಾ ಬಂತು. ಮದುವೆಯಾದ ಹೊಸತರಲ್ಲಿ ಅದೂ ಕೆಲಸಮಯ ಭಾನುವಾರವೆಂದರೆ ಒಂದು ಸಣ್ಣ ನೆಮ್ಮದಿಯಿರುತ್ತಿತ್ತು. ಆದರೆ ಅದು ಕೆಲ ಸಮಯದ ಸುಂದರವಾದ ಸ್ವಪ್ನಗಳು. ಮೈಥಿಲಿಗೂ ಭಾನುವಾರವೆಂದರೆ ಯಾವುದೋ ಒಂದು ರೀತಿಯ ಥ್ರಿಲ್. ಭಾನುವಾರ ಬೆಳಿಗ್ಗೆ ತಡವಾಗಿ ಎದ್ದು, ತಡವಾಗಿ ತಿಂಡಿ ತಿಂದು ಮತ್ತೆ ಮೈಯ ಗಂಟು ಗಂಟುಗಳಿಗೆ, ಸಂಧಿ-ಗೊಂದಿಗಳಲ್ಲಿ ಎಣ್ಣೆಯನ್ನು ತೀವಿಕೊಂಡು, ಅದನ್ನು ಮೈಥಿಲಿಗೂ ಹಚ್ಚಿ, ಸಣ್ಣ ಪುಟ್ಟ ಕಿಚಾಯಿಸುವ ನಗೆಯೊಂದಿಗೆ ಭಾನುವಾರ ಮುಗಿಯುತ್ತಿತ್ತು. ವಾತ್ಸ್ಯಾಯನ ಮುನಿಯೇ ಕಂಗೆಟ್ಟು, ತಲೆಯ ಮೇಲೆ ಕೈಯಿಟ್ಟು ಕೂರಬೇಕು, ಆ ತರಹದ ಸ್ಥಿತಿಯಿತ್ತು. ಆದರೆ ಕಾಲಕ್ರಮೇಣ ಬದಲಾಯಿತು, ಎಣ್ಣೆ ಕಾಣದ; ಆಯಿಲ್ ಕಾಣದ ಮೆಶಿನ್ ಕಿರುಗಟ್ಟುವಂತೆ ನಿಜ ಜೀವನದಲ್ಲಿಯೂ ಭಾನುವಾರ ಸಣ್ಣ ಕಿರುಚಾಟದ ಸುಪ್ರಭಾತದೊಂದಿಗೆ ಪ್ರಾರಂಭವಾಯಿತು. ಅಧೋಗತಿಗೆ ಇಳಿಯುವ ಸೂಚನೆಗಳು ಕಾಣತೊಡಗಿದ್ದು ಆವಾಗ. ಲೋಕಾಭಿರಾಮ ಸಹಜ ಮಾತುಕತೆಯಿಲ್ಲ, ಭಾನುವಾರದ ಬೆಳಿಗ್ಗೆಯೇ ಪ್ರವಚನ: "ಮನೆಯಲ್ಲಿ ಶಿಸ್ತಿಲ್ಲ, ನೆಮ್ಮದಿಯಿಲ್ಲ. ಭಾನುವಾರವಾದರೋ ಯಾಕೆ ಬರುತ್ತದೆಯೋ ಏನೊ?" – ನಿಜವಾಗಿಯೇ ಈ ಎಲ್ಲಾ ಕಾರಣಗಳನ್ನು ನೋಡಿದರೆ ಕಾಲವೆನ್ನುವುದು ಒಂದೆಡೆ ನಿಲ್ಲಬೇಕು. ಅದು ಆ ಕಡೆ-ಈಕಡೆ ಮನಸ್ಸಿನಲ್ಲಿರುವ ಅನೇಕಾನೇಕ ಆಲೋಚನೆಗಳಂತೆ ತೂಗಾಡಬಾರದು.

ನಾನು ಹುಟ್ಟಿದ್ದು ಶನಿವಾರ ಬೆಳಗಿನ ಏಳು ಗಂಟೆ, ಒಂಬತ್ತು ನಿಮಿಷಕ್ಕೆ. ಹುಟ್ಟಿದ ವೇಳೆಯನ್ನು ಬರೆದಿಟ್ಟುಕೊಂಡು ಅಪ್ಪ ಜೋಯಿಸರ ಹತ್ತಿರ ಹೋದರಂತೆ. ಕುಟುಂಬಕ್ಕೆ ಒಬ್ಬ ಗಂಡುಮಗ ಹುಟ್ಟಿದ, ವಂಶೊದ್ಧಾರಕ; ಕುಲೋದ್ಧಾರಕ – ಇತ್ಯಾದಿ ಕನಸುಗಳನ್ನು ತಲೆಯಲ್ಲಿ ತುಂಬಿಕೊಂಡು ಅಪ್ಪ ಹೋಗಿದ್ದು ಮಾಲಿಂಗ ಜೋಯಿಸರ ಮನೆಗಂತೆ. ಗಂಡು ಮಗು ಹುಟ್ಟಿದ್ದಕ್ಕೆ ತೆಂಗಿನಕಾಯಿ ಚೂರು – ಸಕ್ಕರೆಯನ್ನು ಜೋಯಿಸರಿಗೆ ಕೊಟ್ಟರಂತೆ. ಜೋಯಿಸರು ಕೊಬ್ಬರಿ ಮತ್ತು ಸಕ್ಕರೆಯನ್ನು ನೋಡಿದ ತಕ್ಷಣವೇ ಹೇಳಿದರಂತೆ; "ಕುಟುಂಬಕ್ಕೆ ಒಬ್ಬ ಉತ್ತರಾಧಿಕಾರಿ ಸಿಕ್ಕಿದ, ಪಿಂಡ

ಹಾಕುವವನು ಒಬ್ಬ ಹುಟ್ಟಿದ ಎಂದಾದರೆ ಸ್ವರ್ಗದಲ್ಲಿರುವ ನಿಮ್ಮ ಪಿತೃಗಳೂ ಸಂತೋಷಪಡುತ್ತಾರೆ. ಎಲ್ಲಿಯಾದರೂ ನೀವು ಬರುವಾಗ ಕೊಬ್ಬರಿ ಮತ್ತು ಬೆಲ್ಲ ತಂದಿದ್ದರೆ ಮಗಳು ಹುಟ್ಟಿದಳೆಂದೂ, ಮುಂದೆ ಕುಟುಂಬಕ್ಕೆ ಯಾರೆಂದು ನಾನೂ ಕೇಳಿರುತ್ತಿದ್ದೆ. ಸದ್ಯಕ್ಕೆ ಅನುಕೂಲವಾಯಿತು" ಎಂದರಂತೆ. ಗಂಡಾಗಿ ಹುಟ್ಟಿದ್ದಕ್ಕೆ – ಹುಟ್ಟಿದ ತಕ್ಷಣವೇ ಜವಾಬ್ದಾರಿಯ ಒಂದು ಗೆರೆಯನ್ನು ಜೋಯಿಸರು ಆಗಲೇ ಕೆತ್ತಿ ಇಟ್ಟುಬಿಟ್ಟಿದ್ದರು. ಅಪ್ಪನ ಬಾಯಿಯೂ ಸಂತೋಷದಲ್ಲಿ ಅಗಲವಾಯಿತಂತೆ. ಆದರೆ, ನಾನು ಹುಟ್ಟಿದ ಹೊತ್ತು ವೇಳೆಯನ್ನು ನೋಡಿದ ಜೋಯಿಸರು ಮಾತ್ರ ತುಟಿಯನ್ನು ವಕ್ರಗೊಳಿಸಿ "ಚು" "ಚು" ಅಂದಾಗ ಅಪ್ಪನಿಗೆ ಗಾಬರಿಯಾಯಿತಂತೆ. ಮಗುವು ಹುಟ್ಟಿದ ವೇಳೆಯು ಸರಿಯಿಲ್ಲ, ಕಾಲವೇ ಸರಿಯಿಲ್ಲ, ಆರ್ದ್ರಾ ನಕ್ಷತ್ರ – ಬಾಲ್ಯ ಕಾಲದಲ್ಲಿಯೇ ಅನಾರೋಗ್ಯಕ್ಕೆ ತುತ್ತಾಗುತ್ತಾನೆ. ಹುಟ್ಟಿದ ವೇಳೆಯನ್ನು ನೋಡಿದರೆ ಶನಿ ದೆಸೆಯು ಮೂರು–ನಾಕು ತಿಂಗಳಲ್ಲಿ ಶುರುವಾಗುತ್ತದೆ. ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿದೆ, ದಾರಿದ್ರ್ಯವೆನ್ನುವುದು ಜೊತೆಗೆ ಸಂಗಾತಿಯಾಗಿಯೇ ಬರಬಹುದು. ಈ ಶಿಶುವು ಇದರಿಂದ ತಪ್ಪಿಸಿಕೊಳ್ಳಲಾರ. ಮಧ್ಯೆ ಎಂಟರಿಂದ ಹತ್ತು ವರ್ಷದ ಒಳಗೆ ಸಾವಿನ ಭಯವಿದೆ, ಹದಿನಾರು ದಾಟಿದ ಮೇಲೆ ಶನಿಯ ವಕ್ರದೃಷ್ಟಿ – ಇವನ ಮೇಲೆ ಶನಿಯ ಕಾಟದಿಂದ ತಪ್ಪಿಸಿಕೊಳ್ಳಲು ದಾರಿಯಿಲ್ಲ. ನಳ ಮಹಾರಾಜನಿಗೂ ಶನಿಯ ಕಾಟದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪಡಬಾರದ ಪಾಡು ಪಟ್ಟ. ನಿಮ್ಮ ಈ ಮಗನೂ ಅಷ್ಟೆ, ಮುಂದೆ ಪಡಬಾರದ ಪಾಡು ಪಡಲಿದ್ದಾನೆ. ಜೀವನ ಉದ್ದಕ್ಕೂ ಸಮಸ್ಯೆಯನ್ನು ಎದುರು ಹಾಕಿಕೊಳ್ಳಲಿದ್ದಾನೆ. ಒಂದು ವೇಳೆ ಸಮಸ್ಯೆಯನ್ನು ಇವನು ಎದುರು ಹಾಕಿಕೊಳ್ಳದಿದ್ದರೂ ಸಮಸ್ಯೆಯೇ ಇವನ ಕಾಲ್ಬೆರಳಿಗೆ ಬಂದು ಹೊಡೆಯಲಿದೆ. ಹಾಗೆಯೇ ಗುರು–ಹಿರಿಯರನ್ನು ಧಿಕ್ಕರಿಸಲಿದ್ದಾನೆ. ಯಾರೂ ಹೇಳಿದ ಮಾತನ್ನು ಕೇಳಲಾರ. ಇವನು ಹಿಡಿದ ದಾರಿಯೇ ಇವನಿಗೆ. ಆದರೆ ಒಂದೇ ಒಂದು ಅಂಶವೆಂದರೆ – ಯಾವ ವಿಷಯದಲ್ಲಿಯೂ ದಿಟ್ಟತನವೊಂದನ್ನು ಇವನದೇ ರೀತಿಯಲ್ಲಿ ಇಟ್ಟುಕೊಳ್ಳುತ್ತಾನೆ. ಪಡಬಾರದ ಪಾಡು ಪಟ್ಟು – ಕೊನೆಗೆ ನಿರ್ಧಾರವೊಂದಕ್ಕೆ ಬರುತ್ತಾನೆ. ಮನಸ್ಸು ಒಳ್ಳೆಯದು, ಸದ್ಯಕ್ಕೆ ಒಂದು ಪರಿಹಾರ ಮಾಡಿ – ಕಂದು ಬಣ್ಣದ ಹಸುವಿನ ಕೆಳಗೆ ಈ ಮಗುವನ್ನು ಗೆರಸೆಯಲ್ಲಿಟ್ಟುಕೊಂಡು ದಾನ ಮಾಡಿ, ಅನಂತರ ದುಡ್ಡು ಕೊಟ್ಟು ಮಗುವನ್ನು ವಾಪಾಸು ಪಡೆದುಕೊಳ್ಳಿ. ಇದರಿಂದ ಶನಿಯ ವಕ್ರ ನೋಟವಾದರೂ ಕೊಂಚಮಟ್ಟಿಗೆ ಕಡಿಮೆಯಾಗಬಹುದು. ಇಷ್ಟು ಸಮಸ್ಯೆಯಿದ್ದರೂ – ಹುಡುಗ ಬುದ್ಧಿವಂತನಾಗುತ್ತಾನೆ. ಹತ್ತು ಜನರೆದುರು ಎದ್ದು ನಿಂತು ಮಾತಾಡಿದರೂ ರಾಜನಾದವನೂ ತಲೆ ಬಗ್ಗಿಸಬೇಕು – ದಾನ ಕೊಟ್ಟು ವಾಪಾಸು ಪಡೆದುಕೊಳ್ಳಿ. ನನ್ನ ಅಪ್ಪನಿಗೆ ಆಗ ವಿಪರೀತ ದುಃಖವಾಗಿತ್ತಂತೆ. ಆ ಜೋಯಿಸರು ಹೇಳಿದ್ದರಲ್ಲಿ ಎಷ್ಟು ಸತ್ಯ ಎಷ್ಟು ಸುಳ್ಳು

ಎಂದು ಪರಿಶೀಲಿಸಲು ಯಾರೂ ಹೋಗಲಿಲ್ಲ. ಆದರೆ, ದಾನವಾಗಿ ಕೊಟ್ಟು, ಅನಂತರ ನನ್ನ ಅಪ್ಪನೇ ಅವರಿಂದ ದತ್ತಕ್ಕೆ ನನ್ನನ್ನು ತೆಗೆದುಕೊಂಡರಂತೆ. ಶನಿವಾರ ಕೆಟ್ಟ ನಕ್ಷತ್ರವೊಂದಕ್ಕೆ ಹುಟ್ಟಿದ್ದಕ್ಕೆ ನನಗೆ ಇಬ್ಬರು ಅಮ್ಮಂದಿರು ಎರಡು ಗುಣ! ಯಾರಿಗೂ ಇಲ್ಲದ ಅಪೂರ್ವವಾದ ಅವಕಾಶ. ದ್ವಿವ್ಯಕ್ತಿತ್ವ ನನಗೆ ಅಂಟಿಕೊಂಡ ಶಾಪ. ಅದರಿಂದ ಬಿಡುಗಡೆಯಿಲ್ಲ ಅಂತ ನನಗೆ ಚೆನ್ನಾಗಿ ಗೊತ್ತು. ಹಿಡಿದ ಕೆಲಸ ಯಾವುದೂ ಕೊನೆಯತನಕ ತಲುಪುವುದಿಲ್ಲ ಜೋಯಿಸರು ಹೇಳಿದರಂತೆ. ಹಿಡಿದ ಹಟದ ಹಿಡಿತವೇ ಹೇಗಿರುತ್ತದೆಯೆಂದರೆ ಕೆಲಸ ಮುಗಿಯುವ ತನಕ ಯಾವ ಕಾರಣದಿಂದಲೂ ತನ್ನ ಉಡದ ಹಿಡಿತವನ್ನು ಬಿಡಲಾರ. ಶನಿ ದೆಸೆ – ಶನಿ ಸಪ್ತಮದಲ್ಲಿದ್ದಾನೆ, ಗುರು ದೆಸೆ ಚೆನ್ನಾಗಿದೆ ಇತ್ಯಾದಿ ಪಂಚಾಂಗ ಎಷ್ಟು ಸರಿ? ಯಾವುದು ನನಗೆ ಆಗ ಗೊತ್ತಿರಲಿಲ್ಲ ಮತ್ತು ಹೈಸ್ಕೂಲಿಗೆ ಬಂದ ಮೇಲೆ ಒಂದು ದಿನ ಅಪ್ಪ ಅವರ ಕಾಲ ಮೇಲೆ ಕೂರಿಸಿಕೊಂಡು ಈ ಕತೆಯನ್ನು ಹೇಳಿದ್ದ, ದುರ್ಗಾಪರಮೇಶ್ವರಿಗೆ ಹರಕೆ ಹೊತ್ತಿದ್ದು ಇತ್ಯಾದಿ. ಜಾತಕದಲ್ಲಿ ಜೋಯಿಸರು ಏನು ಹೇಳಿದ್ದಾರೆ ಅದನ್ನು ಅಪ್ಪನ ಕಾಲ ಮೇಲೆ ಕೂತು ಕೇಳಿದ್ದೆ. ಆಗ ಹೈಸ್ಕೂಲು, ಸಣ್ಣಗೆ ತುಟಿಯ ಮೇಲ್ಗಡೆ ಮೀಸೆಯು ಚಿಗುರುವ ಹೊತ್ತು. ಅಪ್ಪ ಕಾಲಲ್ಲಿ ಕೂರಿಸಿಕೊಂಡಾಗ ಸಂಕೋಚದಿಂದಲೇ ಮುದುಡಿ ಹೋಗಿದ್ದೆ, ಎಷ್ಟು ಸಂಕೋಚವಾಗಿತ್ತು ಎಂದರೆ, ವಯಸ್ಸಿಗೆ ಬಂದ ನಾನು ಅಪ್ಪನ ತೊಡೆಯ ಮೇಲೆ ಹೇಗೆ ಕೂತಿರುವುದು? ಅದನ್ನು ಅಪ್ಪ ಹೇಳಿದಾಗ ಜಾತಕವನ್ನು ನಂಬಲಿಲ್ಲ. ಜಾತಕದಲ್ಲಿ ಏನೇನೋ ಬರೆದಿರುತ್ತಾರೆ. ಅದನ್ನು ಕಟ್ಟಿಕೊಂಡು ನಾನಾದರೂ ಏನು ಮಾಡಲಿಕ್ಕಿದೆ? ಮನೆಗೆ ದಾರಿದ್ರ್ಯವೆನ್ನುವುದು ಬಂದು ಕಾಲಿಟ್ಟಿತು. ಅಮ್ಮ ಸಿಡುಕಲು ಶುರು ಮಾಡಿದರು, ಅಪ್ಪನಿಗೆ ಸಾಲಗಾರರ ಕಾಟ. ಮಧ್ಯಾಹ್ನದ ಹೊತ್ತಿಗೆ ಗೆಣಸನ್ನು ಬೇಯಿಸಿ ತಿಂದ ಕಾಲವದು. ಅಮ್ಮನೇ ಅವರಿವರಿಂದ ಬೇಡಿ ತಂದ ಅಂಗಿ–ಚೆಡ್ಡಿ! ಅದೇ ಸಮಯದಲ್ಲಿ ಒಂದು ದಿನ ಹಸಿವು ತಾಳಲಾಗದೇ ಮೂರ್ಛೆ ತಪ್ಪಿಬಿದ್ದದ್ದೆ. ಕಡು ಹಸಿವೆಯಲ್ಲಿ ತೃಪ್ತಿ ತಂದುಕೊಟ್ಟ ಒಂದೆರಡು ಬಾಳೆಹಣ್ಣು ತಿಂದು ಹಸಿವನ್ನು ತಡೆದುಕೊಂಡೆ. ಅದು ಯಾವಾಗ? ನಟ್ಟನಡು ಮಧ್ಯಾಹ್ನ ಅಪ್ಪನ ಜೊತೆ ಊರಿನಿಂದ ಇಪ್ಪತ್ತೈದು ಮೈಲು ದೂರದಲ್ಲಿರುವ ನಗರವೊಂದರಲ್ಲಿ ನಾನು ಹಸಿವೆಯಿಂದ ನೆಲಕ್ಕೆ ಒರಗಿದ್ದು ಪೋಲಿಸ್ ಸ್ಟೇಶನ್ ಎದುರುಗಡೆ. ಯಾರೋ ಒಬ್ಬ ಪೋಲಿಸ್‌ನವನು ಬಂದು ನನ್ನನ್ನು ಎತ್ತಿ ಸ್ಟೇಶನಿನಲ್ಲಿ ಮಲಗಿಸಿಬಿಟ್ಟಿದ್ದ. ಪೋಲಿಸ್‌ರವರೆಂದರೆ ಜೀವ ತಿನ್ನುವ ಜಾತಿಗಳಲ್ಲ ಎಂದು ಗೊತ್ತಾದುದು ಆ ದಿನ. ಬಾಳೆಹಣ್ಣು ಬಿಟ್ಟು ಬೇರೆ ಯಾವುದನ್ನು ಅಪ್ಪ ತರುವ ಸ್ಥಿತಿಯಲ್ಲಿ ಇರಲಿಲ್ಲ. ಶನಿ ದೆಸೆಯಿಂದ ನರಳುತ್ತಿರುವ ಆರ್ದ್ರಾ ನಕ್ಷತ್ರದಲ್ಲಿ ಹುಟ್ಟಿದ ನನ್ನಂಥ ದರಿದ್ರ ಮಗ ಅಪ್ಪನ ಜೊತೆಗೆ ಇದ್ದ, ಅಪ್ಪನ ಮುಖ ಕಂಗಾಲಾದುದನ್ನು

ನಾನು ಸರಿಯಾಗಿ ನೋಡಿದ್ದೆ. ಆ ದಿನ ಕಲಿತುಕೊಂಡೆ, ಹಸಿವೆಯನ್ನು ತಡೆದು ನಮ್ಮ ಹಿಡಿತದಲ್ಲಿರಿಸಿಕೊಳ್ಳಬೇಕು.

ಓದುವ ಸಮಯದಲ್ಲಿ – ಖರೇ ಹೇಳಬೇಕೆಂದರೆ ಯಾರಾದರೂ ಒಳ್ಳೆಯ ಡ್ರೆಸ್ ಹಾಕಿಕೊಂಡು ಬಂದರೆ ಅದನ್ನು ಮುಟ್ಟಬೇಕು ಎಂದು ಆಸೆಯಾಗುತ್ತಿತ್ತು. ಒಂದು ದಿನ ಯಾರ ಮನೆಯ ಮದುವೆಯೋ ಏನೋ – ಅಪ್ಪ–ಅಮ್ಮರ ಜೊತೆ ಹೊರಟಿದ್ದೆ. ಹೊರಡುವ ಹೊತ್ತಿನಲ್ಲಿ ಹಟ ಮಾಡಿದ್ದೆ – ನನಗೆ ಹೊಸ ಡ್ರೆಸ್ ಬೇಕು, ಎಲ್ಲರೂ ನನ್ನನ್ನು ಹಂಗಿಸುತ್ತಾರೆ. ಆಗಲೇ ಅಪ್ಪ ಹೇಳಿದ್ದು – "ಡ್ರೆಸ್‌ಗೆ ಹೊರಗಿನ ಅಲಂಕಾರಕ್ಕೆ ಬೆಲೆ ಕೊಡುವವರು ಕಡು ಮೂರ್ಖರು ಮತ್ತು ಬುದ್ಧಿಹೀನರು. ಯಾಕೆಂದರೆ, ಡ್ರೆಸ್‌ನಿಂದ ಆಚೆಗೆ ಕೂಡಾ ಮರ್ಯಾದೆಯೆನ್ನುವುದು ಇರುತ್ತದೆ, ಅದನ್ನು ಕಾಪಾಡಿಕೊಂಡುಬಂದರೆ ಸಾಕು. ಡ್ರೆಸ್‌ನ ಬಗ್ಗೆ ತುಂಬಾ ಗಮನ ಕೊಡುವವನು – ಒಳಗಿರುವ ಆತ್ಮವನ್ನು ನೋಡಲಾರ. ಬೀದಿ ಬಸವಣ್ಣನನ್ನು ಕುಣಿಸುವ ಸಮಯದಲ್ಲಿ ಡ್ರೆಸ್ ಹೊದಿಸುತ್ತಾರೆ. ಹಾಗೆಂದು ಅದನ್ನು ಗೌರವಿಸಲು ಬರುತ್ತದೆಯೇ ಡ್ರೆಸ್ ಇರುವುದು ಮೈ ಮುಚ್ಚಿಕೊಳ್ಳೋಕೆ. ಡ್ರೆಸ್ಸನ್ನು ಪ್ರದರ್ಶನಕ್ಕೆ ಅಂತ ಬಳಸಿಕೊಂಡರೆ ಅದು ಅವರೊಳಗಡೆ ಏನೂ ಇಲ್ಲಾಂತ ಅಂತ ಅರ್ಥ." ಅಪ್ಪ ಸಾಕಷ್ಟು ವಿವರಿಸಿದ್ದರು. ಮದುವೆ ಮನೆಗೆ ಹೋದರೆ ಏನೋ ಊಟಕ್ಕೆ ಬಂದವರು ಅನ್ನೋ ಥರ ವರ್ತಿಸಿದರು. ನನ್ನ ಪ್ರಾಯದ ಹುಡುಗರು ಅವಹೇಳನ ಮಾಡಿದರು. ಅಂದಿನಿಂದ, ಶ್ರೀಮಂತರ ಬಗ್ಗೆ; ಬೂಟಾಟಿಕೆಯ ಪ್ರದರ್ಶನದ ಬಗ್ಗೆ; ಸಾಂಪ್ರದಾಯಿಕವಾದ ಮದುವೆ. ಅಲ್ಲಿ ಚೆಲ್ಲಿ ಹೋಗುವ ಅನ್ನದಗುಳಿನ ಬಗ್ಗೆ ನಂಗೆ ದ್ವೇಷ, ಅಸಹನೆ. ಸಾಂಪ್ರದಾಯಿಕವಾದ ಮದುವೆಯ ಬಗ್ಗೆ ಅಸಹನೆ ಬಂದಿದ್ದೇ ಆವಾಗ. ಅದೊಂದು ಅನಗತ್ಯ ಬೂಟಾಟಿಕೆಯ ಜಗತ್ತು. ಮದುವೆಯೆನ್ನುವುದು ನಾಕು ಜನರ ಎದುರುಗಡೆ ನಡೆಯುವ ನಾಟಕ. ಅದು ಶ್ರೀಮಂತರಿಗೆ ಮೆರೆಯಲು ಇರುವ ರಂಗಸ್ಥಳ, ಅಲ್ಲಿಂದಲೇ ಬದಲಾದೆ.

ಮಾತಿನಲ್ಲಿ ನಾಟಕವೆಂದರೆ ಆಗದು. ಆದರೆ, ಮಾತಿನಲ್ಲಿ ನಾಟಕವಿಲ್ಲದೆ ಮೈಥಿಲಿಯು ಇರಲಾರಳು. ಮನುಷ್ಯತ್ವವನ್ನು ಕಳೆದುಕೊಂಡ ಯಾವುದನ್ನೂ ನಾನು ಗೌರವಿಸಲಾರೆ. ನಾನು ಯಾವುದನ್ನು ಗೌರವಿಸುವುದಿಲ್ಲವೋ ಅದನ್ನೇ ಮೈಥಿಲಿಯು ಗೌರವಿಸುತ್ತಾಳೆ. ಅವಳಿಗೆ ನನ್ನ ಹಳಿಯುವುದು ಮುಖ್ಯ ಉದ್ದೇಶ. ಅವಳಿಗೆ ಮನೆ ಬೇರೆ, ಹಾದಿಯು ಬೇರೆ. ಆದರೆ, ನನಗೆ ಗೊತ್ತಿರುವ ಹಾಗೆ ಪ್ರತಿಯೊಂದು ಮನೆಗೂ ಒಂದು ಹಾದಿಯೂ ಇರಲೇಬೇಕು. ಇದನ್ನು ಮೈಥಿಲಿಯು ಅರ್ಥಮಾಡಿಕೊಳ್ಳುವುದಕ್ಕೆ ಬಹಳವೆಂದರೆ ಬಹಳ ದಿನ ಕಾಯಬೇಕು. ನಾನೀಗ ಮಾಡಬೇಕಾದ್ದು ಯಾವುದು, ಮನೆಯ ಮೆಟ್ಟಿಲಿಳಿದು – ಕಾಲು ಹಾದಿಯನ್ನು ಹುಡುಕುತ್ತಾ ಹೊರಡುವುದು. ಅದೊಂದೇ ದಾರಿ – ಅದಕ್ಕಾಗಿ ಕಾಯಬೇಕು. ಕೊನೆಯ ಸಾಲು ಬರೆದು

ಮುಗಿಸುವಷ್ಟರಲ್ಲಿ ಯಾಕೋ ವಿಪರೀತವಾದ ಸುಸ್ತು, ಬಳಲಿಕೆ, ಬವಳಿ ಬಂದಂತಾಯಿತು. ಚಾರು ಅಲ್ಲಿಯೇ ಮೇಜಿನ ಮೇಲೆ ಒರಗಿದ – ತಲೆಯೆತ್ತುವುದೇ ಕಷ್ಟವೆಂಬಂತೆ ಅನಿಸಿತು! ಬಹಳ ದಿನ ತಲೆಯೆತ್ತದಂತೆ ಕೆಲವೇ ದಿನಗಳಲ್ಲಿ ಮೈಥಿಲಿ ಮಾಡಲಿದ್ದಾಳೆ. ಆದರೆ, ಚಾರು ಅದರಿಂದಲೂ ತಪ್ಪಿಸಿಕೊಳ್ಳಲಿದ್ದಾನೆ.

*

ಪ್ರೆಸ್‌ಕ್ಲಬ್‌ಗೆ ತೆರಳಿದ ನಾಗೇಶ ಎಲ್ಲಾ ಪತ್ರಕರ್ತರು ಹಾಜರಾಗುವಂತೆ ನೋಡಿಕೊಂಡಿದ್ದ. ಎಡ–ಬಲವೆನ್ನದೆ ಎಲ್ಲಾ ಪತ್ರಕರ್ತರು ಹಾಜರಾಗಿದ್ದರು. "ಸ್ನೇಹಿತರೆ – ನಿಮ್ಮನ್ನು ಈ ಪತ್ರಿಕಾ ಗೋಷ್ಠಿಗೆ ಆದರದಿಂದ ಸ್ವಾಗತಿಸುತ್ತಿದ್ದೇನೆ. ಪ್ರತಾಪನ್ ಎಂಬ ಪೋಲಿಸ್ ಅಧಿಕಾರಿಯು ನನ್ನ ಮೇಲೆ ನಡೆಸಿದ ದೌರ್ಜನ್ಯಕ್ಕೆ – ನೀವೆಲ್ಲಾ ಒಳ್ಳೆಯ ಪ್ರಚಾರ ಕೊಟ್ಟಿದ್ದೀರಿ. ಅದು ನ್ಯಾಯಕ್ಕೆ ಸಲ್ಲಿಸಿದ ಗೌರವವೆಂದು ನಾನು ಭಾವಿಸಿದ್ದೇನೆ. ನಿಮ್ಮ ಉಪಕಾರಕ್ಕೆ ಯಾವತ್ತೂ ಕೃತಜ್ಞತೆಯನ್ನು ಸೂಚಿಸುತ್ತೇನೆ" ಎಂದು ಕೈ ಮುಗಿದು ನಾಗೇಶ ಹೇಳಿದ. ಎಡಪಂಥೀಯ ಚಳುವಳಿಗೆ ಸದಾ ಬೆಂಬಲವನ್ನು ನೀಡುತ್ತಿದ್ದ ಪತ್ರಕರ್ತ ಶಶಿ; ಕಿರಣ್ ಇಬ್ಬರೂ ಒಂದೇ ಕ್ಷಣದಲ್ಲಿ ಎದ್ದು ನಿಂತರು. "ದಯವಿಟ್ಟು ನಿಮ್ಮ ವಂದನಾರ್ಪಣೆಯ ಕಾರ್ಯಕ್ರಮವನ್ನು ಅನಂತರ ಮಾಡಿ, ಮೊದಲು ಯಾಕೆ ಪತ್ರಿಕಾ ಗೋಷ್ಠಿ ಎಂಬುದನ್ನು ವಿವರಿಸಿ" ಎಂದು ಶಶಿ ಕೇಳಿದರೆ, ಕಿರಣ್ – "ಸ್ವಾಮಿ ನಾಗೇಶರೇ, ಪೋಲಿಸ್ ಆಫೀಸರ್ಸ್ ವರ್ಗಾವಣೆಯ ಹಿನ್ನೆಲೆಯು ನೀವೋ? ಅಥವಾ ಕಾಣದ ಕೈಗಳ ಕೆಲಸವೇನಾದರೂ ನಡೆಯಿತೆ?." ಬೆಲ್ಟ್ ನಾಗೇಶ ಒಮ್ಮೆಲೇ ತಬ್ಬಿಬ್ಬಾದ. ಯಾಕೆಂದರೆ ಶಶಿ ಮತ್ತು ಕಿರಣ್ ಇಬ್ಬರೂ ಒಂದೇ ಕ್ಷಣದಲ್ಲಿ ಪ್ರಸ್ತಾವನೆಯನ್ನು ಮುರಿದು ಹಾಕಿದರಲ್ಲಾ ಎಂದು ಸಿಟ್ಟು; ಗಲಿಬಿಲಿ ಎಲ್ಲವೂ ಜೊತೆ ಜೊತೆಗೆ ಆಯಿತು. ಆದರೆ, ನಾಗೇಶ ತನಗುಂಟಾದ ಗಲಿಬಿಲಿಯನ್ನು ವ್ಯಕ್ತಪಡಿಸಲಿಲ್ಲ. ಶಶಿ ಮತ್ತು ಕಿರಣ್ ಇಬ್ಬರೂ ಕೇಳಿದ ಕೂಡಲೇ, ನಾಗೇಶನ ಅಭಿಮಾನಿ, ಜೆ.ಕೆ. ಸಾಹೇಬರ ಕೃಪೆಯಲ್ಲಿ ಇರುವವರಿಗೆ ಇರಿಸು–ಮುರಿಸುಂಟಾಯಿತು. ನಾಗೇಶ ಪತ್ರಿಕಾಗೋಷ್ಠಿಯಲ್ಲಿ ಏನು ಹೇಳುತ್ತಾನೆ ಎಂಬುದು ಮುಖ್ಯವಲ್ಲ. ಅನಂತರ ಅವನು ಕೊಡುವ ಇನಾಮು ಅವರಿಗೆ ಮುಖ್ಯ. ಕೆಲ ಪತ್ರಕರ್ತರಿಗೆ ನಾಗೇಶನ ಹಿಂದೆ– ಜೆ.ಕೆ. ಸಾಹೇಬರು ಇದ್ದಾರೆ ಎಂಬುದೂ ಗೊತ್ತು. ಅವರಲ್ಲಿ ಒಬ್ಬ ಎದ್ದುನಿಂತು, "ನಗರಕ್ಕೆ ನೀವೊಬ್ಬರು ಹೆಮ್ಮೆಯುಂಟುಮಾಡುವವರು" ಎಂದ. ಅದು ನಾಗೇಶನಿಗೆ ಒಂದು ಬೆಂಬಲ ಸಿಕ್ಕಂತಾಯಿತು ಮತ್ತು ಇನ್ನು ವಿಷಯವನ್ನು ಬೇರೆಲ್ಲಾದರೂ ಹರಿಯಬಿಟ್ಟರೆ ಸ್ವಲ್ಪ ಕಷ್ಟವೆಂದು ಗೊತ್ತಾಯಿತು. ಕಿರಣ್ ಮತ್ತು ಶಶಿ ಇಬ್ಬರೂ ಬಿಡುವವರಲ್ಲ. ಇಬ್ಬರೂ ಚಿಗುರು ಮೀಸೆಯ ಹುಡುಗರು. ಎಳಸುತನದೊಂದಿಗೆ ಏನಾದರೂ ಈ ರಂಗದಲ್ಲಿ ದುಡಿಯಬೇಕೆಂಬ ಆಸೆಯನ್ನು ಎದೆ ತುಂಬಾ ಹರವಿ

ಕೂತವರು. ಜಿಲ್ಲಾ ಮಟ್ಟದ ವರದಿಗಾರನಾಗಿ ನಗರಕ್ಕೆ ಬಂದ ಕೂಡಲೇ ನಗರದಲ್ಲಿ ಎಡಪಂಥೀಯ ಚಳುವಳಿಯ ಬೇರು ಎಲ್ಲೆಲ್ಲಿ ಮೌನವಾಗಿ ಕೂತಿವೆಯೆಂದುಕೊಂಡು ಹುಡುಕುತ್ತಾ ಅಲೆದವನು ಶಶಿ. ಆದರೆ, ಕಿರಣ್ ಹಾಗಲ್ಲ, ಮೈ ತುಂಬಾ ಕಲ್ಪನೆ ಮತ್ತು ಕನಸುಗಳನ್ನು ಕಟ್ಟಿಕೊಂಡು ಸ್ವಂತ ಪತ್ರಿಕೆಯನ್ನು ತೆರೆದವನು. ಒಂದು ದೃಷ್ಟಿಯಿಂದ ಕಿರಣ್ ಕೂಡಾ ಎಡಪಂಥೀಯ ಚಳುವಳಿಗಳು ಈ ನೆಲದಲ್ಲಿ ಮತ್ತೆ ಚಿಗುರೊಡೆಯಬೇಕೆಂದು ಆಸೆ ಪಟ್ಟವನು. ಇಬ್ಬರಿಗೂ ವರ್ಗಾವಣೆಯ ಸ್ಥೂಲವಾದ ಹಿನ್ನೆಲೆಯು ಗೊತ್ತು. ಈ ವಿಷಯದಲ್ಲಿ ಜಂಟಿಯಾಗಿಯೇ ಜೋಡಿ ಹಕ್ಕಿಗಳಂತೆ ಕಾರ್ಯಾಚರಣೆಯನ್ನು ನಡೆಸಿ ಸಾಕಷ್ಟು ಮಾಹಿತಿ ಸಂಗ್ರಹಿಸಿದವರು. ಶಶಿ ಮತ್ತು ಕಿರಣ್ ಯೋಚನೆ ಮಾಡಿಕೊಂಡೇ ನಾಗೇಶನ ಪತ್ರಿಕಾ ಗೋಷ್ಠಿಗೆ ಬಂದವರು. ಜಾತ್ಯತೀತ ಸಮಾಜವೊಂದರಲ್ಲಿ ಪತ್ರಿಕೆಯು ಯಾಕೆ ಜವಾಬ್ದಾರಿಯನ್ನು ಹೊರಬೇಕೆಂಬ ಆಸೆಯನ್ನು ಇಟ್ಟುಕೊಂಡ ಈ ಹುಡುಗರ ಒರಟು ಮತ್ತು ದಿಟ್ಟವಾದ ಪ್ರಶ್ನೆಗಳು ಸ್ವಲ್ಪ ಹದಗೆಡಿಸಿದ್ದು ನಾಗೇಶನನ್ನು. ಅವರ ಬಾಯಿ ಮುಚ್ಚಿಸಬೇಕೆಂದುಕೊಂಡು ನಾಗೇಶ ಅವರಿಬ್ಬರನ್ನು ನೋಡುತ್ತಲೇ ಹೇಳಿದ. "ನಿಮಗೆ ಈ ನಗರದಲ್ಲಿ ಏನು ನಡೆಯುತ್ತಿದೆ ಎಂದು ತಿಳಿದಿಲ್ಲ. ಮಾತೆತ್ತಿದರೆ ಹಿಂದೂ ಕೋಮುವಾದಿಗಳ ದುಶ್ಚಟಗಳು ಎಂದು ಬರೆಯುತ್ತೀರಿ. ಅದರೆ, ನಿಮಗೆ ಗೊತ್ತಿಲ್ಲ – ಕಳೆದ ಕೆಲವು ತಿಂಗಳ ಹಿಂದೆ ನಗರದ ಕೇಂದ್ರವೊಂದರ ಭಾಗದಲ್ಲಿ ಇರುವ ಮಸೀದಿಯಲ್ಲಿ ಹಿಂದೂಗಳ ಮೇಲೆ ಆಕ್ರಮಣ ಮಾಡಲು ಶಸ್ತ್ರಾಸ್ತ್ರ ಸಿದ್ಧವಾಗಿತ್ತು. ಆದರೆ, ನಿಮ್ಮ ದೃಷ್ಟಿಯಲ್ಲಿ ಅವರು ಕೋಮುವಾದಿಗಳಲ್ಲ. ಈಗಿನ ಎ.ಸಿ.ಪಿ. ಸಾಹೇಬರು ತಮ್ಮ ಕುಮ್ಮಕ್ಕು ಕೊಡುತ್ತಿದ್ದಾರೆ. ಅದರ ಬಗ್ಗೆ ಬರೆಯುವ ಧೈರ್ಯ ನಿಮಗೆಲ್ಲಿದೆ? ಒಂದು ವೇಳೆ ನೀವು ಬರೆದರೆ ನಿಮ್ಮನ್ನು ಪ್ರಗತಿ ವಿರೋಧಿಗಳು ಎಂದು ಕರೆಯುವ ಅಪಾಯವಿದೆ ಅಲ್ಲವೆ?" – ನಾಗೇಶ ವ್ಯಂಗ್ಯದಲ್ಲಿಯೇ ಕೇಳಿದ. ಉಳಿದ ಪತ್ರಕರ್ತರು ಕಿಸ ಕಿಸನೆ ನಕ್ಕರು. ಶಶಿಯು ಎದ್ದುನಿಂತು, "ನಾವು ನಿಮ್ಮನ್ನು ಪ್ರಗತಿಪರರು ಹೌದೋ, ಅಲ್ಲವೋ ಅಂತ ಕೇಳಿಲ್ಲ. ಆದರೆ, ಈಗ ಸರಿಯಾಗಿ ಎ.ಸಿ.ಪಿ. ಸಾಹೇಬರು ಮುಸ್ಲಿಮರಿಗೆ ಕುಮ್ಮಕ್ಕು ಕೊಡುತ್ತಿದ್ದಾರೆಂದು ಹೇಳುವುದಕ್ಕೆ ನಿಮ್ಮಲ್ಲಿ ಯಾವ ಆಧಾರವಿದೆ? ಅನವಶ್ಯಕ ದಾಖಲೆಯಿಲ್ಲದೆ; ಸಾಕ್ಷ್ಯವಿಲ್ಲದೆ ಹೇಳಿದರೆ ಅದನ್ನು ನಾವು ಪತ್ರಕರ್ತರಾಗಿ ಒಪ್ಪುವುದಿಲ್ಲ. ಆಧಾರವಿದ್ದರೆ ಕೊಡಿ ಪ್ರಕಟಿಸುತ್ತೇವೆ." ಹೇಳಿದ ಕೂಡಲೇ, ಕಿರಣ್ ಕೂಡಾ ಎದ್ದು ನಿಂತು, "ಎಂ.ಕೆ. ಅಬ್ದುಲ್ಲ ಎಂಬ ಪೋಲಿಸ್ ಅಧಿಕಾರಿಯು ಸಾಬರಿಗೆ ಕುಮ್ಮಕ್ಕು ಕೊಡುತ್ತಿದ್ದಾರೆ ಎಂದು ದಪ್ಪಕ್ಷರಗಳಲ್ಲಿ ಬರೆಯುತ್ತೇವೆ, ಆದರೆ ಸಾಕ್ಷಿ ಕೊಡಿ" ಎಂದ. ನಾಗೇಶ ಸಣ್ಣಗೆ ಒಂದು ಕಿರು ನಗೆಯನ್ನು ಬೀರಿದ. ಅವನ ಕಿರು ನಗೆಯಲ್ಲಿ ಸಾವಿರ ಅರ್ಥಗಳಿದ್ದವು. "ಇದು ಸಾದಾ ವೇಷ ಧರಿಸಿಕೊಂಡು ಎಂ.ಕೆ. ಅಬ್ದುಲ್ಲ ಮಸೀದಿಗೆ ಹೋಗುತ್ತಿರುವ ಫೋಟೋ," "ಇದು ಮಸೀದಿಯಿಂದ ಹೊರಗಡೆ

ಮಾತಾಡುತ್ತಿರುವ ದೃಶ್ಯ." "ಇದು ಕಳ್ಳ ನಾಟಾದ ದೊರೆ ಇಬ್ರಾಹಿಂ ಸಾಹೇಬರೊಂದಿಗೆ ತೆಗೆಸಿಕೊಂಡ ಫೋಟೊ" ಎಂದು ಹೇಳುತ್ತಲೇ ಕೆಲವು ಫೋಟೋ ತೆಗೆದು ತೋರಿಸಿದ. ಉಳಿದ ಪತ್ರಕರ್ತರು ಶಶಿ ಮತ್ತು ಕಿರಣ್ ಎಂಬ ಹೊಸ ಹುಡುಗರ ಮುಖವನ್ನು ನೋಡಿದರು. ಬಿಳಿಯ ಮುಖದ, ದಂತದ ಮೈಯ, ಪುಟ್ಟನೆಯ ಚಿಗುರು ಮೀಸೆಯ ಹುಡುಗ – ಕಿರಣ್‌ನ ಮುಖ ಸೂರ್ಯೋದಯದ ಹೊತ್ತಿನಲ್ಲಿ ಸೂರ್ಯನಲ್ಲಿ ಕಾಣಿಸಿಕೊಳ್ಳುವ ಕೆಂಪಿನಂತೆ ಕೆಂಪು ಕೆಂಪಾಯಿತು. ಶಶಿಯಂತೂ ಉರಿಯತೊಡಗಿದ. ಆ ಇಬ್ಬರೂ ಒಬ್ಬರಿಗೊಬ್ಬರು ಮುಖ ನೋಡಿದರು: "ಸರಿ, ಎಂ.ಕೆ. ಅಬ್ದುಲ್ಲ ಮಸೀದಿಗೆ ಹೋಗ್ತಾರೆ ಎಂದಿಟ್ಟುಕೊಳ್ಳೋಣ, ಅದರಿಂದ ನಿಮಗೇನು ತೊಂದರೆಯಾಯಿತು?" ಎಂದು ಕಿರಣ್ ಕೇಳಿಯೇ ಬಿಟ್ಟ. ಎಂ.ಕೆ. ಅಬ್ದುಲ್ಲ ಯಾವ ಥರದವನು ಎಂದು ನಿಜವಾಗಿಯೂ ನಿಮಗೆ ಗೊತ್ತಿಲ್ಲ. ಇಬ್ರಾಹಿಂ ಸಾಹೇಬರ ಹಣ ತಿಂದೇ ಇಷ್ಟು ಸೊಕ್ಕಿದ್ದಾನೆ. ಇನ್ನೊಂದು ಫೋಟೋ ನೋಡಿ, ಸಿನಿಮಾ ತಾರೆಯೊಂದಿಗೆ ಅಬ್ದುಲ್ಲ ತೆಗೆಸಿಕೊಂಡ ಫೋಟೋ ಇದು. ನಮಗೆ ವೈಯಕ್ತಿಕವಾಗಿ ಏನಿಲ್ಲ. ಅದರೆ ನಗರದಲ್ಲಿ ಇಂಥ ಕೆಟ್ಟ ಕ್ರಿಮಿಗಳು ಪೋಲಿಸ್ ಅಧಿಕಾರಿಯಾಗಿ ಮುಂದುವರಿಯಬೇಕೆ? ಎಂದ. ಕಿರಣ್ ಮತ್ತು ಶಶಿ ಎದ್ದುನಿಂತು ಹೊರಟೇಬಿಟ್ಟರು. ನಾಗೇಶ ಸುಮ್ಮನೇ ನೋಡಿದ. ಕಾಪಿಗಳನ್ನು ಹಂಚಿದ. "ದಯವಿಟ್ಟು ಎಲ್ಲಾ ಪತ್ರಕರ್ತರಿಗೆ ಭೋಜನಕೂಟವನ್ನು ಮಿನಾರ್ ಹೋಟೆಲಲ್ಲಿ ಏರ್ಪಡಿಸಿದ್ದೇವೆ ಅದನ್ನು ಸ್ವೀಕರಿಸಬೇಕು" ಎಂದು ಹೇಳಿದ. ಪ್ರೆಸ್ ಕ್ಲಬ್‌ನಿಂದ ಕೂಗಳತೆಯ ದೂರದಲ್ಲಿರುವ ಹೋಟೆಲಿನ ಕಡೆಗೆ ಎಲ್ಲರೂ ಹೊರಟರು.

*

ಅದೇದಿನ ಜುಬೇದಾ ಸಂಜೆಯ ಡ್ಯೂಟಿ ಮುಗಿಸಿ ಅವಸರದಲ್ಲಿಯೇ ಮನೆಗೆ ಹೊರಟಳು. ಅದರೆ, ಮಧ್ಯ ದಾರಿಯಲ್ಲಿ ಇಂಥದೊಂದು ಪ್ರಕರಣ ಅವಳೆದುರು ಬಂದು ಹಾಜರಾಗಬಹುದೆಂದು ಅವಳಿಗಾದರೂ ಏನು ಗೊತ್ತಿತ್ತು. ಗಡಿಬಿಡಿಯಿಂದ ಆಸ್ಪತ್ರೆಯ ಡ್ಯೂಟಿ ಮುಗಿಸಿ ಹೊರಟ ಹುಡುಗಿಯವಳು. ವಯಸ್ಸಾದ ತಾಯಿ ಫಾತಿಮಾ ಉಬ್ಬಸದ ರೋಗಿ, ಹಗಲು ಡ್ಯೂಟಿ ಮಾಡಿ ರಾತ್ರಿ ಎಂಟೂವರೆಯ ಒಳಗೆ ಮನೆ ತಲುಪಿಬಿಡಬೇಕು. ರಾತ್ರಿಯ ಅಡುಗೆ ಮಾಡಬೇಕು ಎಂದು ಹೊರಟವಳು, ಇನ್ನೇನು ಮನೆಯನ್ನು ತಲುಪಿದರೆ ಸಾಕು, ಹಗಲಿಡೀ ಆಸ್ಪತ್ರೆಯ ಫಿನಾಯಿಲ್, ತಲೆ ತಿನ್ನುವ ರೋಗಿಗಳು – ಅವರ ಸಂಬಂಧಿಕರು – ಅಳು – ಯಾತನೆ – ಹಿಂಸೆ – ಇಂಜೆಕ್ಷನ್ – ಗುಳಿಗೆಗಳು – ಡಾಕ್ಟರರು – ಹೀಗೆ ಆಸ್ಪತ್ರೆಯ ಜಗತ್ತು ಎಂಬುದೇ ಒಂದು ದೊಡ್ಡ ಯಾತನೆಯ ಕೂಪ. ಜೀವನವೇ ಸಾಕೆಂದು ಅನಿಸತೊಡಗಿದೆ. ತಿಂಗಳಿಗೆ ಒಂದು ಸಾವಿರ ಸಂಬಳಕ್ಕೆ ಇಷ್ಟೆಲ್ಲಾ ದುಡಿಯಬೇಕು. ಒಂದೈದು ನಿಮಿಷ

ಕೂತು ನಿಟ್ಟುಸಿರು ಬಿಡಬೇಕೆಂದುಕೊಳ್ಳುವಷ್ಟರಲ್ಲಿ ಯಾವುದೋ ಒಂದು ವಾರ್ಡಿನ ಪೇಶಂಟ್‌ನ ಬಂಧುಗಳು ಬಂದು ಕರೆಯುತ್ತಾರೆ. ಕೆಲವೊಮ್ಮೆ ಸುಮ್ಮನೇ ಕಾರಣವಿಲ್ಲದೆ. ಇಷ್ಟಿದ್ದರೂ ನಗು ಮಾಸಬಾರದು, ತುಟಿಯಲ್ಲಿ ಸದಾ ನಗುವೆಂಬುದು ಮಿನುಗುತ್ತಿರಬೇಕು. ಆಸ್ಪತ್ರೆಯಲ್ಲಿ ಅಡ್ಮಿಟ್ ಆದವರು ಅಳುತ್ತಿದ್ದರೆ, ಹಿಂಸೆಯಲ್ಲಿ ನರಳುತ್ತಿದ್ದರೆ, ಸಣ್ಣ ನಗುವಿನೊಂದಿಗೆ ಅವರಿಗೆ ಸಮಾಧಾನ ಹೇಳಬೇಕು. ಅವರ ಸೇವೆಯಲ್ಲಿ ಒಂಚೂರು ಏರಿಳಿತವಾಗಬಾರದು. ಸಂಜೆಯ ಹೊತ್ತಿಗೆ ಸಾಕು–ಸಾಕಾಗಿ ಹೋಗಿರುತ್ತದೆ. ಅದರಿಂದಾಗಿಯೇ ಮನೆಗೆ ಹೋಗಿ ಅಡುಗೆ ಮಾಡಿ, ಅಮ್ಮನಿಗೆ ಊಟಕ್ಕಿಕ್ಕಿ ಮಲಗುವಾಗ ಹತ್ತು ಗಂಟೆಯಾಗಿರುತ್ತದೆ. ಮಲಗಿದರೆ ಸಾಕು, ಬೆಳಗಿನವರೆಗೆ ಮಿಸುಕಾಡಲು ಬಿಡದ ಗಾಢ ನಿದ್ದೆ. ಜುಬೇದಾಗೆ ಇರುವ ಒಂದೇ ಒಂದು ಕನಸೆಂದರೆ, ಒಂದಿಷ್ಟು ದುಡ್ಡು ಮಾಡಿ ಹಾಯಾಗಿರುವುದು. ಇದೊಂದು ಬಿಟ್ಟರೆ ಉಳಿದ ಹುಡುಗಿಯರಂತೆ ಬೇರಾವ ಕನಸುಗಳಿಲ್ಲ. ಹೆಚ್ಚು ಕನಸುಗಳನ್ನು ಕಟ್ಟಿಕೊಳ್ಳುವ ಯಾವ ಅವಕಾಶವೂ ಇಲ್ಲ. ಕನಸುಗಳಿದ್ದರೂ ಅದನ್ನು ಈಡೇರಿಸುವ ದಾರಿಯೂ ಇಲ್ಲ. ಹಾಸ್ಪಿಟಲ್‌ಗೆ ಹೋಗುತ್ತಾಳೆ, ಬರುತ್ತಾಳೆ. ನಡೆದುಕೊಂಡು ಹೋಗುವಾಗ ಕಣ್ಣುಗಳಿಂದ ಎಲ್ಲಾ ಅಂಗಡಿಗಳನ್ನು ನೋಡುತ್ತಾಳೆ. ನೋಡಿದಲ್ಲಿ ಯಾವುದೋ ಒಂದು ರೀತಿಯ ಸಂತೃಪ್ತಿ. ಜನ್ನುವನ್ನು ಮುಂದೆ ಹೋಗುವಾಗಲೇ – ಸಾರ್ವಜನಿಕರ ಎದುರಿನಲ್ಲಿ ಜುಬೇದಾಳನ್ನು ಕಾರಿಗೆ ಎತ್ತಿ ಹಾಕಿಕೊಂಡು ಯಾರೋ ಹೋದರು.

ಮರುದಿನದ ಪತ್ರಿಕೆಗಳ ಮುಖಪುಟಗಳಲ್ಲಿ ಎರಡು ಮುಖ್ಯ ಸುದ್ದಿಗಳು ಪ್ರಕಟವಾದವು: "ಎಂ.ಕೆ. ಅಬ್ದುಲ್ಲಾ ಅವರೇ ಕೋಮುವಾದಕ್ಕೆ ಪ್ರಚೋದನೆ ನೀಡುತ್ತಿದ್ದಾರೆ" ಮತ್ತು "ಜುಬೇದಾ ಎಂಬ ಹೆಣ್ಣು ಮಗಳ ಮೇಲೆ ಗ್ಯಾಂಗ್ ರೇಪ್ ಮತ್ತು ಆಕೆಯ ಸಾವು" ಒಂದೇ ದಿನದ ಪತ್ರಿಕೆಯಲ್ಲಿ ಬಂದ ಸುದ್ದಿಗಳು ನಾಗರಿಕರನ್ನು ತಲ್ಲಣಗೊಳಿಸಿದವು – ಶಶಿ ಮತ್ತು ಕಿರಣ್ ಮಾತ್ರ ಪರಸ್ಪರ ಫೋನಿನಲ್ಲಿ ಮಾತಾಡಿಕೊಂಡರು ಮತ್ತು ಬೇರೊಂದು ರೀತಿಯ ಸಮಗ್ರ ವರದಿಯನ್ನು ಮಾಡಲು ತಯಾರಾದರು. ಅವರಿಗೆ ಇದರ ಹಿನ್ನೆಲೆಯು ಬೇರೆಯಿದೆ ಎಂಬ ಅನುಮಾನವಿತ್ತು.

*

ಒಂದು ಗ್ಯಾಂಗ್ ರೇಪ್; ಒಂದು ಪತ್ರಿಕಾ ಗೋಷ್ಠಿಯೆರಡೂ ನಡೆದ ದಿನ ರಾತ್ರಿಯೇ – ಮತ್ತೊಂದು ಘಟನೆಯು ಚಾರುವಿನ ಮನೆಯಲ್ಲಿ ನಡೆಯಿತು, ನಡೆಯಬಾರದಿತ್ತು. ಮೈಥಿಲಿಯು ರಾತ್ರಿ ಹತ್ತೂವರೆಗೆ ಶಿಬಿಯೊಂದಿಗೆ ಮನೆಯ ತನಕ ಅವನ ಬೈಕಲ್ಲಿ ಬಂದಳು. ಸರಿಯಾಗಿ ಹತ್ತೂವರೆ ಎನ್ನುವುದನ್ನು ಗಮನವಿಟ್ಟು ಚಾರು ವಾಚು ನೋಡಿಕೊಂಡು ನೆನಪಲ್ಲಿ ಇಟ್ಟುಕೊಂಡ. ಅಡುಗೆಯ ಮನೆಯಲ್ಲಿದ್ದ ಬ್ರೆಡ್

ತಿಂದು ಅರ್ಧ ಲೋಟ ಹಾಲು ಕುಡಿದು ಮಾತ್ರೆಗಳನ್ನು ನುಂಗಿ – ಅದರ ಮೇಲೆ ಮತ್ತೆ ನೀರು ಕುಡಿದು ಅಲ್ಲೇ ಹೊರಗಿನ ವರಾಂಡದ ದಿವಾನಿ ಕಾಟಲ್ಲಿ ಒರಗಿದ್ದ ಚಾರುಗೆ ಅಲ್ಲಿಗೇ ಸಣ್ಣ ಮಂಪರು, ಎಚ್ಚರವಲ್ಲ–ಅತ್ತ ನಿದ್ದೆಯೂ ಅಲ್ಲ, ಯಾಕೋ ಸಣ್ಣಗೆ ಅವರಿಸಿಕೊಂಡ ಮಾತ್ರೆಯ ಅಮಲು. ಅದೇ ವೇಳೆಗೆ ಮನೆಯ ಹೊರಗಡೆ ಬೈಕ್ ಬಂದು ನಿಂತ ಶಬ್ದ ಕೇಳಿಸಿತು. ಮಲಗಿದವನಿಗೆ ಏಳಲಾಗದಷ್ಟು ನಿತ್ರಾಣ. "ಬರ್ತಿನಿ ಮೇಡಂ, ಗುಡ್‌ನೈಟ್" ಎಂದು ಮೈಥಿಲಿಗೆ ಹೇಳಿದ್ದು ಕೇಳಿಸಿತು. ಮೈಥಿಲಿಯು ಕಿಲಕಿಲನೆ ನಗುತ್ತಾ, "ಥ್ಯಾಂಕ್ಸ್ ಸಾರ್, ಕಂಪೆನಿ ಕೊಟ್ಟಿದ್ದಕ್ಕೆ" ಎಂದಳು. ಅವಳ ನಗುವಿನಲ್ಲಿ ಸಣ್ಣನೆಯ ಮಾದಕತೆಯೂ ಒಸರುತ್ತಿದೆಯೆ? ಚಾರುಗೆ ಹೊರಗಡೆಯಿಂದ ಅವರಿಬ್ಬರು ಮಾತಾಡುತ್ತಿರುವುದು ಕೇಳಿಸುತ್ತಿದೆ. ಇನ್ನು ಹೆಚ್ಚು ಮಾತು ಕೇಳಬಾರದೆಂದುಕೊಂಡವನು – ಕಿವಿಯನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟುಕೊಂಡ. ಮೈಥಿಲಿಯು ಶಿಬಿಯನ್ನು ಬೀಳ್ಕೊಂಡು ಬಂದು ಬಾಗಿಲು ತಟ್ಟಿದಳು. ತಟ್ಟಿದರೆ ತಟ್ಟಲಿ, ಒಂದ್ಯೆದು ನಿಮಿಷ ಕಾಯಲಿ ಎಂದುಕೊಂಡು ಚಾರು ಮಲಗಿದವನು ಎದ್ದೇಳಲೇ ಇಲ್ಲ. ಮತ್ತೊಮ್ಮೆ ಬಾಗಿಲು ತಟ್ಟಿದಳು ಮೈಥಿಲಿ. ಚಾರು ಸುಮ್ಮನಿದ್ದ ಮತ್ತೆ ಪುನಃ ಜೋರಾಗಿ ಬಾಗಿಲು ತಟ್ಟಿದ ಮೇಲೆ ಚಾರು ಬಾಗಿಲಿನ ಬೋಲ್ಟ್ ತೆಗೆದ. "ಅಯ್ಯೋ ಸಾಕಾಯ್ತಪ್ಪ" ಎನ್ನುತ್ತಾ ನಗುತ್ತಲೇ ಒಳಗಡೆ ಬಂದಳು. ತಕ್ಷಣ ಚಾರು ತಿರುಗಿ ನಿಂತು "ಕೈಯಲ್ಲಿ ವಾಚು ಇಲ್ವಾ?" ಎಂದ. "ಇದೆ" ಅಂದಳು ಮೈಥಿಲಿ. ಅವಳಿಗಿನ್ನು ಶಿಬಿಯು ಬಟ್ಟೆ ಕೊಂಡುಕೊಳ್ಳಲು ಕೊಟ್ಟ ಕಂಪೆನಿಯ ನಿಶೆ ಇಳಿದಂತಿರಲಿಲ್ಲ. ತೀರಾ ಕ್ಯಾಶುವೆಲ್ ಅನ್ನುವ ಥರ, "ಗಂಟೆಯೆಷ್ಟು"ಎಂದು ಕೇಳಿದ ಚಾರು. ಮೈಥಿಲಿಯು ನಸುನಗುತ್ತಾ "ಹತ್ತೂವರೆಯಿರಬಹುದು" ಎಂದಳು. "ಹತ್ತೂವರೆಯಿರಬಹುದು? ಏನಿದರ ಅರ್ಥ?" ಎಂದು ಚಾರು ಮತ್ತೊಮ್ಮೆ ಕೇಳಿದ. ಧ್ವನಿಯು ಸ್ವಲ್ಪ ಗಡುಸಾಗಿ ಬಂತು. ಅಲ್ಲಿಯೇ ನಿಂತಳು ಮೈಥಿಲಿ! "ಬೇಕು ಬೇಕಾದ ಹೊತ್ತಿಗೆ ಹೋಗೋದಕ್ಕೆ ಇದು ಜಾಗವಲ್ಲ" ಎಂದು ಚಾರು. ಚಾರುವಿನ ಧ್ವನಿಯು ಗಡುಸಾಗಿರುವುದು ಮಾತ್ರವೇ ಅಲ್ಲ. ಎಲ್ಲಿಂದಲೋ ಬಂದು ಧುಮುಕಿದ ಧ್ವನಿಯಂತೆ ಅನಿಸಿತು ಮೈಥಿಲಿಗೆ. ಮೈಥಿಲಿಗೆ ಅನಿರೀಕ್ಷಿತ ಮತ್ತು ಈ ರೀತಿಯ ಪ್ರತಿಕ್ರಿಯೆಯು ಚಾರುವಿನಿಂದ ಬಂದೆರಗಬಹುದು ಎಂದು ಮೈಥಿಲಿಯೂ ಊಹಿಸಿರಲಿಲ್ಲ. "ನಾನೇನು ಹಾದರ ಮಾಡೋಕೆ ಹೋಗಿಲ್ಲ, ತಿಳಿಯಿತಾ?" ಗಟ್ಟಿಯಾಗಿ ಹೇಳಿದ. ಏನಿದ್ದರೂ ನಿನ್ನ ವ್ಯವಹಾರ ನನಗೆ ಗೊತ್ತಿದೆ ಎಂಬ ಅರ್ಥದಲ್ಲಿ, "ಏಯ್, ಬೊಗಳಬೇಡ, ನಿನ್ನ ಹಣೇಬರ ನನಗೆ ಚೆನ್ನಾಗಿ ಗೊತ್ತಿದೆ. ಅವತ್ತು ನಿನ್ನನ್ನು ನಂಬಿ ಬಂದೆ. ನೀನು ಇಷ್ಟು ನೀಚನೆಂದು ಗೊತ್ತಿದ್ದರೆ ನಿನ್ನ ಹಿಂದೆ ಬರುತ್ತಿರಲಿಲ್ಲ." ಮೈಥಿಲಿಯು ಹೇಳಿದಳು. ಯಾವುದೇ ಕಾರಣಕ್ಕೆ ಮಾತು ಮಾತ್ರ ನಿಲ್ಲಿಸಲಾರೆನೆಂಬ ಹಟವಿತ್ತು. ಶಿಬಿಯೊಂದಿಗೆ ಸಣ್ಣ ಕನಸನ್ನು ಕಟ್ಟಿಕೊಂಡು ಬಂದ ಮೈಥಿಲಿಯು

ಮನೆಯೊಳಗೆ ಬಂದಾಗ ಈ ಮಾತುಗಳನ್ನು ಕೇಳಬೇಕಾಗಿ ಬಂದಾಗ, ಅವಳ ಕನಸಿನ ಕನ್ನಡಿಯು ಒಡೆದು ಚೂರಾಯಿತು. ಕಲ್ಪನೆಯೇ ಒಡೆದುಹೋದಾಗ ಉಂಟಾಗುವ ವಿಚಿತ್ರ ವೇದನೆಯೇ ಅವಳ ನಾಲಿಗೆಯನ್ನು ಹೊರ ಚಾಚಲು ಅವಕಾಶ ಕಲ್ಪಿಸಿತು. "ಹೌದು, ನಿಜ, ನಾನು ನೀಚ ಮತ್ತು ಹೇಡಿ, ಪಲಾಯನವಾದಿ, ನಾಲಿಗೆ ನಿನಗೆ ಹೊರಳುತ್ತದೆ." "ಏಯ್ ನೀನು ಒಬ್ಬ ಗಂಡಸೇನೊ? ತಾಕತ್ತಿದ್ದರೆ ನನ್ನನ್ನು ತಡೆಹಿಡಿ. ನಿನಗೆ ನನ್ನ ಮೇಲೆ ಅಧಿಕಾರ ಚಲಾಯಿಸುವ ಹಕ್ಕನ್ನು ಯಾವತ್ತೋ ಕಳೆದುಕೊಂಡಿರುವೆ"– ಮೈಥಿಲಿಯ ಮಾತಿನಲ್ಲಿ ಕಾಠಿಣ್ಯತೆಯು ತುಂಬಿಕೊಂಡಿತ್ತು. ಚಾರು ಸಿಟ್ಟಿನಲ್ಲಿಯೇ ಹೇಳಿದ, "ನೀನೂ ಒಬ್ಬಳು ಹೆಂಗಸು! ದೇವವ್ರತನ ಜೊತೆಗೆ ಚೆಲ್ಲಾಟವಾಡುವಾಗ ನಿನಗೆ ನಾನು ಬೇಕಿರಲಿಲ್ಲ. ಏನೂ ಗೊತ್ತಿಲ್ಲಾಂತ ತಿಳ್ಕೋಬೇಡ. ರಾತ್ರಿ ಹತ್ತೂವರೆಗೋ, ಹನ್ನೊಂದು ಗಂಟೆಗೋ ನೀನು ಬಂದೆ, ಒಳ್ಳೆಯದು ನಿನಗೆ ನಿನ್ನದೇ ಸ್ವಾತಂತ್ರ್ಯವಿದೆ. ಅದೇ ರೀತಿಯಲ್ಲಿ ನನಗೂ ನನ್ನ ಸ್ವಾತಂತ್ರ್ಯವಿದೆ. ಇದು ತಿಳಿದರೆ ನಿನಗೆ ಅನುಕೂಲ." ಚಾರು ಹೇಳಿದಾಗ ಅವನ ಕೈ ನಡುಗುತ್ತಿತ್ತು. ಸಾವರಿಸಿಕೊಳ್ಳಲು ಸಿಗರೇಟು ಹಚ್ಚಿದ. ಯಾವುದನ್ನು ಸೇದಬೇಡವೆಂದು ಹೇಳಿದ್ದರೋ ಅದನ್ನೇ ಅವನು ಮಾಡುವುದಕ್ಕೆ ಮೈಥಿಲಿಯು ಕಾರಣವಾದಳು. ಇನ್ನು ಮನಸ್ಸನ್ನು ಹಿಡಿತದಲ್ಲಿರಿಸಿಕೊಳ್ಳುವುದು ಅಸಾಧ್ಯವೆಂದನ್ನಿಸಿ, ಡಾಕ್ಟ್ರು ಕೊಟ್ಟ ನಿದ್ದೆಯ ಎರಡು ಮಾತ್ರೆಗಳನ್ನು ನುಂಗಿದ. ಮತ್ತೆರಡು ಲೋಟ ನೀರು ಕುಡಿದ. ಮೈಥಿಲಿಯು ಯಾವುದೇ ರೀತಿಯ ಸಂಬಂಧವಿಲ್ಲದವರ ಜೊತೆ ಜಗಳವಾಡುತ್ತಾರೋ, ಅದೇ ರೀತಿಯಲ್ಲಿ ಜಗಳಕ್ಕೆ ಅಂಟಿಕೊಂಡಂತೆ ಇದ್ದಳು. ಜಗಳವಾಡದೆ ಪರಿಹಾರವೇ ಇಲ್ಲವೆನ್ನುವುದು ಮೈಥಿಲಿಯ ನಿಲುವು. ಜಗಳವೆನ್ನುವುದು ಅಶುದ್ಧ ಮತ್ತು ಅದರಿಂದ ಪರಿಹಾರದ ಬದಲಿಗೆ ಸಮಸ್ಯೆಗಳು ಮತ್ತಷ್ಟು ಹುಟ್ಟಿಕೊಳ್ಳುತ್ತವೆ. ಸಮಸ್ಯೆಗಳು ಒಂದಕ್ಕೊಂದು ಬಿಗಿದುಕೊಂಡು ಬಿಡಿಸಲಾಗದ ಕಗ್ಗಂಟಾಗುತ್ತದೆ. ಚಾರುವಿನ ಕೈ ಮತ್ತು ಕಾಲು ನಡುಕ ಹೆಚ್ಚಾಯಿತು. ಸಿಟ್ಟು ಅವನ ಹಿಡಿಮುಷ್ಠಿಯೊಳಗೆ ಇರಲಿಲ್ಲ. ಸಿಟ್ಟು ಮೈಯಿಡೀ ವ್ಯಾಪಿಸಿಕೊಂಡಿತು. ನಾಲಿಗೆಯೆನ್ನುವುದು ಒಬ್ಬನಿಗೆ ಮೀಸಲಲ್ಲ. ಯಾರೂ ಬೇಕಾದರೂ ಮಾತಾಡಬಹುದು. "ನಾನು ನಿನ್ನ ಹಾಗೆ ದುಡಿಯುತ್ತೇನೆ, ನನಗೂ ನಿನ್ನ ಹಾಗೆ ಸಂಬಳ ಬರುತ್ತೆ. ನಿನಗೆ ಅಧಿಕಾರ ಚಲಾಯಿಸೋ ಯಾವ ಹಕ್ಕೂ ಇಲ್ಲ"ವೆಂದಳು ಮೈಥಿಲಿ. ಚಾರು ಕೂಡಲೇ ಹೇಳಿದ; "ಒಬ್ಬಳು ಸೂಳೆಗೂ ನಿಯತ್ತು ಇರುತ್ತದೆ ಎನ್ನುವುದು ಗೊತ್ತಿರಲಿ, ನೀನು ಯಾರ ಜೊತೆ ಬಂದೆ? ಇಷ್ಟು ಹೊತ್ತು ಎಲ್ಲಿದ್ದೆ ಎನ್ನುವುದು ನಂಗೆ ಗೊತ್ತು. ಬಾಯಿಗೆ ಬಂದಂತೆ ಮಾತಾಡಬೇಡ."

ಮೈಥಿಲಿ, "ಏಯ್, ನಾಲಿಗೆ ಬಿಗಿದು ಹಿಡ್ಕೊ. ನಾನು ನಿನ್ನ ಹಾಗೆ ಹೇಡಿಯಲ್ಲ. ಅಧಿಕಾರ ಚಲಾಯಿಸೋ ಕುಟುಂಬದಿಂದ ಬಂದವಳು. ನಿಮ್ಮ ಮನೆಯವರ ಹಾಗೆ ಬೇಡಿ ತಿನ್ನಬೇಕಾದ ಪರಿಸ್ಥಿತಿಯಂತೂ ಬಂದಿಲ್ಲ." ಚಾರು ಸಿಟ್ಟು ತಡೆದುಕೊಳ್ಳಲಾರದೆ

– ಮೈಥಿಲಿಯ ಕೆನ್ನೆಗೆ ಹೊಡೆದ. ಹೊಡೆಯುತ್ತಲೇ ಹೇಳಿದ; "ಸರಿಯಾಗಿ ಇದ್ದರೆ ಇರು, ಇಲ್ಲವೆಂದಾದರೆ ಜಾಗ ಖಾಲಿ ಮಾಡು. ನಿನ್ನ ಜೊತೆ ಸರಸವಾಡೋಕೆ ನಾನೇನು ದೇವವ್ರತನಲ್ಲ. ನಿನಗೆ ಅವನೊಂದಿಗೆ ಮೋಜಿಗೆ ಹೊರಟಾಗ ಸಿಕ್ಕ ರುಚಿಯಿದು. ಮನುಷ್ಯರ ಮಾಂಸ ತಿಂದ ಹುಲಿಯು ಬೇರೆ ಮಾಂಸವನ್ನು ಮುಟ್ಟೋಲ್ಲ, ನಿನ್ನ ತೆವಲಿಗೆ; ನಿನ್ನ ತಾಳಕ್ಕೆ ತಕ್ಕಂತೆ ದೇವವ್ರತ ಕುಣಿಯುತ್ತಿದ್ದ. ಅವನ ಬೆವರ ವಾಸನೆಯು ಇಷ್ಟವಾಗುತ್ತಿತ್ತು. ಈಗ ಇನ್ಯಾರದೋ ಬೆವರ ವಾಸನೆಯು ಇಷ್ಟವಾಗುತ್ತದೆ. ತೀರಾ ಸಾಮಾನ್ಯ ಮಟ್ಟದ ಹೆಂಗಸರು ಹೀಗೆ ಮಾಡಿದರೆ ನಿನ್ನಂಥವರು ಅವರನ್ನು ಸೂಳೆಯರು ಎಂದು ಕರೆಯುತ್ತೀರಿ. ಅದುವೇ ಈಗ ನಿನ್ನಂಥವರು ಗಂಡಸರಿಂದ ಗಂಡಸರ ಕಡೆಗೆ ಹಾರುತ್ತಾ ಹೋದರೆ ಅದು ಸೂಳೆಗಾರಿಕೆಯಲ್ಲ. ಬೇಕಿದ್ದರೆ ಅದಕ್ಕೆ ದೊಡ್ಡ ಹೆಸರನ್ನು ಕೊಡುತ್ತೀರಿ – ಸ್ವಾತಂತ್ರ್ಯ. ಸ್ವಾತಂತ್ರ್ಯ ಮತ್ತು ಸ್ವೇಚ್ಛಾಚಾರವೆಂಬುದರ ಅರ್ಥವೇ ಗೊತ್ತಿಲ್ಲದ; ಚರ್ಮದ ತೆವಲಿನಿಂದ ನವೆಯುತ್ತಿರುವ ನಿನ್ನಂಥವರಿಗೆ ಸಂಸಾರವೊಂದು ಕೇಡು. ನಿನ್ನಿಂದ ನಾನು ಇದರ ಬಗ್ಗೆ ಪಾಠ ಕಲಿಯಬೇಕಿಲ್ಲ. ನಿನ್ನಂಥ ಮಧ್ಯಮ ವರ್ಗದ ಹೆಂಗಸರಿಗೆ ಕನಸು–ತೆವಲು; ರಾತ್ರಿ–ಹಗಲು; ಬಡತನ–ಶ್ರೀಮಂತಿಕೆ; ಸ್ವಾತಂತ್ರ್ಯ–ಸ್ವೇಚ್ಛಾಚಾರ – ಇತ್ಯಾದಿ ಯಾವುದೂ ಅರ್ಥವಾಗುವುದಿಲ್ಲ. ಯಾವುದೋ ಒಂದು ಹೊಸ ಸೀರೆ; ಒಂದು ಹೊಸ ಲೂನಾ ಸಿಕ್ಕಿದರೆ ಅದನ್ನೇ ನೆಮ್ಮದಿಯೆಂದು ಕರೆಯುತ್ತೀರಿ ಮತ್ತು ಭ್ರಮೆಯ ಜಗತ್ತಿನಲ್ಲಿ ನರಳಿ ನರಳಿ ಸಾಯುತ್ತೀರಿ" – ತುಂಬಾ ಹೆಚ್ಚೆಂದು ಅನಿಸಿದರೂ ಚಾರು ಮೈಥಿಲಿಯ ಎರಡು ಕೈಗಳನ್ನು ಗಟ್ಟಿ ಹಿಡಿದು ಮೈಥಿಲಿಯ ಕಣ್ಣಿನ ಮೇಲೆ ತನ್ನ ದೃಷ್ಟಿಯನ್ನು ಹರಿಸಿಕೊಂಡೇ ಹೇಳಿದ. ಮೈಥಿಲಿಯು ದೃಷ್ಟಿಯನ್ನು ತಪ್ಪಿಸಿದಳು. ಅದರೆ ಪೊಗರು ಬಿಡದೆ ಉಸುರಿದಳು. ಅವಳ ಮಾತಿನಲ್ಲಿ ಅವಳ ಅಹಂಕಾರ; ಯೌವನದ ಧಿಮಾಕು ಇತ್ಯಾದಿಗಳು ವ್ಯಕ್ತವಾದವು.

*

"ಏಯ್, ಕೈ ಬಿಡೋ ನನ್ನ. ನಿನ್ನ ತಾಕತ್ತನ್ನು ನನ್ನ ಮೇಲೆ ತೋರಿಸಬೇಡ. ಇನ್ನೊಮ್ಮೆ ನನ್ನ ಮೈ ಮೇಲೆ ಕೈ ಹಾಕಿದರೆ ನೋಡು ನಿನ್ನನ್ನು – ಪೋಲಿಸ್ ಸ್ಟೇಶನ್‌ಗೆ ಎಳೆದುಕೊಂಡು ಬರುವ ಹಾಗೆ ಮಾಡ್ತೇನೆ. ಏನೂಂತ ತಿಳ್ಕೊಂಡಿಯೋ ನನ್ನ, ನಿನ್ನಂತೆ ಬಿಕನಾಸಿ ಅಲ್ಲ ಕಣೋ, ದರಿದ್ರದವನು. ಬೇಡಿ ತಿಂದೇ ಗೊತ್ತು ಕಣೋ ನಿಮ್ಮಂಥವರಿಗೆ. ಅದರಿಂದಾಚೆಗೆ ಏನು ಗೊತ್ತಿಲ್ಲ. ನಿನ್ನ ಮುಖವನ್ನು ನೀನೇ ಸರಿಯಾಗಿ ಕನ್ನಡಿಯಲ್ಲಿ ನೋಡಿ ಗೊತ್ತೇನೋ ನಿನಗೆ. ಹೌದು, ನಾನು ಮಧ್ಯಮ ವರ್ಗದವಳು, ನಮಗೆ ನೆಮ್ಮದಿ ಬೇಕು, ಖುಶಿ ಬೇಕು, ಅದಕ್ಕೆ ಏನು ಬೇಕಾದರೂ ಮಾಡಲು ತಯಾರು, ನಿನ್ನ ಹಾಗೆ ಸದಾ ಮುಖ ಗಂಟಿಕ್ಕಿಕೊಂಡು, ಅಳುತ್ತಾ

ಕೂರುವುದಕ್ಕೆ ನನಗೇನಾಗಿದೆ? ಎರಡು ದಿನಕ್ಕೊಮ್ಮೆ ನಿಮ್ಮ ಅವತಾರಗಳು ಪ್ರಾರಂಭವಾಗುತ್ತವೆ. ನೀನು ಹೇಳುವುದು ಒಂದು, ಮಾಡುವುದು ಮತ್ತೊಂದು, ನಿನಗೆ ಯಾವ ನೈತಿಕತೆಯಿದೆ? ಮೊನ್ನೆ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದ್ದೆಯಲ್ಲಾ – ಅಗ ನಿನಗೆ ರೇಖಾ ಪಿಂಟೋ ಬೇಕಾಗಿದ್ದಳು, ಅಲ್ಲವೆ?" – ಉರಿಯುವ ಕಿಡಿಯೊಂದು ಮನೆಯ ಹುಲ್ಲು ಛಾವಣಿಗೆ ಬಿದ್ದಂತೆ ಕಿರುಚಾಡತೊಡಗಿದಳು. ಚಾರು ಕೂಡಾ ಬಿಡಲಿಲ್ಲ. "ದೇವವ್ರತನೊಂದಿಗೆ ಚಕ್ಕಂದವಾಡುವಾಗ ನಿನಗೆ ನೆಮ್ಮದಿ ಸಿಕ್ತು ಅಲ್ಲವೆ?" ಎಂದು ಕೇಳಿದವನು ಸಿಗರೇಟನ್ನು ನೆಲಕ್ಕೆ ಹಾಕಿ ಕಾಲಿಂದ ಹೊಸಕಿಹಾಕಿದ. "ನಿನಗಿಂತ ಆ ದೇವವ್ರತನೇ ವಾಸಿ, ಅವನ್ಯಾಕೆ, ಅವನಿಗಿಂತ ಒಳ್ಳೆಯವನು ಸಿಕ್ಕರೆ ಅವನನ್ನೇ ಕಟ್ಟಿಕೊಂಡು ಓಡಿ ಹೋಗ್ತೇನೆ. ಅದು ನನ್ನಿಷ್ಟ, ಅದನ್ನು ಕೇಳೋ ಹಕ್ಕು ನಿನಗಿಲ್ಲ. ನಿನ್ನ ಮೇಲೆ ನನಗೆ ಯಾವ ನಂಬಿಕೆಯೂ ನನಗಿಲ್ಲ. ವಿಶ್ವಾಸದ್ರೋಹಿ ನೀನು. ಮದುವೆಯಾದ ಹೊಸತರಲ್ಲಿ ಇದ್ದ ನಿನ್ನ ಮೈಥಿಲಿಯು ಸತ್ತು ವರ್ಷಗಳೇ ಅಗಿಹೋದವು. ಅದೇನು ಮಾಡ್ಕೊಳ್ತೀಯೋ ಮಾಡಕೋ, ಗಂಡಸಾಗಿದ್ರೆ; ತಾಕತ್ತಿದ್ದರೆ ತಡೆಹಿಡಿ ನನ್ನನ್ನ, ತಾಕತ್ತಿದ್ದರೆ ಡೈವೋರ್ಸಿಗೆ ಲಾಯರ್‌ನೋಟಿಸು ಕೊಡು. ಥೂ, ನಿನ್ನದು ಒಂದು ಜೀವನಾನ?" ಚಾರುಗೆ ತಡೆಯಲಾಗಲಿಲ್ಲ. ಮತ್ತೊಮ್ಮೆ ಮೈಥಿಲಿಯ ಕೆನ್ನೆಗೆರಡು ಏಟು ಕೊಟ್ಟ. ಯಾಕೋ ಅವನಿಗೂ ಅಸಾಧ್ಯವಾದ ಜೀವ ಹಿಂಸೆಯಿದು ಎಂದೆನ್ನಿಸತೊಡಗಿತು. ಮತ್ತೊಂದು ನಿದ್ದೆಯ ಮಾತ್ರೆಯನ್ನು ತಿಂದ ಮತ್ತು ಹೊರಗಡೆ ಹೋಗಿ ನೆಲದ ಮೇಲೆ ಮಲಗಿದ. ಅಲ್ಲಿಯೇ ನಿದ್ದೆ! ಮೈಥಿಲಿಯು ಗೊಣಗುತ್ತಾ; ಅಳುತ್ತಾ ಕೂತಿದ್ದವಳು ಏನೋ ನಿರ್ಧಾರಕ್ಕೆ ಬಂದಂತೆ ಕಣ್ಣೀರು ಒರಸಿಕೊಂಡು ನಿದ್ದೆ ಮಾಡಿದಳು. ಅದರೆ, ದೊಡ್ಡ ತಿರುವೊಂದರಲ್ಲಿ ಗಂಡ–ಹೆಂಡಿರು! ಕವಲುದಾರಿಗೆ ಇಬ್ಬರೂ ಅಡಿಯಿಟ್ಟರು.

ಗಂಡನ ಬಗೆಗೆ ಯಾವ ಹಂಗೂ ಇಲ್ಲದೆ; ಕೊಂಚ ಲವಲೇಶವೂ ಪ್ರೀತಿಯಿಲ್ಲದ ಮತ್ತು ಸಾರ್ವಜನಿಕರೆದುರು ತನ್ನ ನಗುವನ್ನೇ ಬಂಡವಾಳ ಮಾಡಿಕೊಂಡ ಮೈಥಿಲಿಗೆ – ಗಂಡನ ಮೈಯೆಂದರೆ ಕುದುರೆಯ ಲದ್ದಿ ಎಂದು ಭಾವಿಸಿಕೊಂಡವಳಿಗೆ – ರಾತ್ರಿ ಕವಲುದಾರಿಯೊಂದರ ಸ್ವಚ್ಛ ಕನಸನ್ನು ಕಾಣಲು ಭಾವಿಸಿದಳು. ಆದರೆ ಮಧ್ಯರಾತ್ರಿಯಲ್ಲಿ ಚಾರುಗೆ ವಿಪರೀತ ಜ್ವರ – "ಅಪ್ಪಾ, ಅಪ್ಪಾ" ಎಂದು ಕನವರಿಸುತ್ತಿದ್ದ. ಅದು ಮೈಥಿಲಿಗೆ ಕೇಳಿಸಲಿಲ್ಲ.

ಹಸಿ ಹಸಿಯಾದ ನೆನಪುಗಳು

– ೬ –

ಅಂಟಿಕೊಂಡ ಹಸಿ ಹಸಿಯಾದ ನೆನಪುಗಳು ಮತ್ತೆ ಎದುರು ಬಂದು ನಿಂತಂತೆ ಅನಿಸತೊಡಗಿದ್ದು ಆಕಸ್ಮಿಕ. ಆದರೆ, ಆ ದಿನಗಳ ನೆನಪನ್ನು ಎಷ್ಟೊಂದು ಒತ್ತಿ ಹಿಡಿದರೂ ಮತ್ತೆ ಚಿಮ್ಮುತ್ತದೆ ಮತ್ತು ಒಬ್ಬಂಟಿಯಾಗಿ ಇದ್ದಾಗ ಬಂದು ಹೆದರಿಸುತ್ತದೆ. ಮಸೀದಿಯಲ್ಲಿ ಪ್ರತಾಪನ್ ಮತ್ತು ಎಂ.ಕೆ. ಅಬ್ದುಲ್ಲಾ ಮಾತುಕತೆ ನಡೆಸುತ್ತಿರುವಾಗಲೇ ರೇಖಾ ಪಿಂಟೋ ಯಾರೋ ಬಾಗಿಲು ಬಡಿಯುತ್ತಿದ್ದಾರೆಂದು ಭ್ರಮಿಸಿಕೊಂಡು ಅಮ್ಮನನ್ನು ಕರೆದಳು. ಅಡುಗೆ ಮನೆಯಲ್ಲಿದ್ದ ಜೆಸಿಂತಾಬಾಯಿ ಒದ್ದೆಯಾದ ಕೈಗಳನ್ನು ಸೆರಗಿಗೆ ಒರೆಸಿಕೊಳ್ಳುತ್ತಾ ಹೊರಗಡೆ ಬಂದಾಗ ಭಯಗೊಂಡಂತೆ ರೇಖಾ ಪಿಂಟೋ ನಿಂತಿದ್ದಳು. ಅಕಾಲಿಕವಾಗಿ ಕಾಣಿಸಿ ಕೊಳ್ಳುತ್ತಿರುವ ಹೆದರಿಕೆ; ಆಗಾಗ ನುಗ್ಗಿಬರುವ ಅಳು; ಒಮ್ಮೊಮ್ಮೆ ಆಕಾಶ ನೋಡಿಕೊಂಡು ಸುಮ್ಮನೇ ನಿಂತಿರುವ ಪ್ರವೃತ್ತಿ – ಇವೆಲ್ಲವೂ ಈಚೆಗೆ ರೇಖಾ ಪಿಂಟೋಳಲ್ಲಿ ಕಾಣಿಸತೊಡಗಿದೆ. ರೇಖಾ ಪಿಂಟೋ ಯಾಕೆ ಈ ರೀತಿ ಭಯ ಪಡುತ್ತಿದ್ದಾಳೆಂಬುದು ಹೆತ್ತ ಕರುಳಿಗೆ ಪೂರ್ತಿ

ಅರ್ಥವಾಗಿಲ್ಲ. ಮಗಳ ದಿಗಿಲನ್ನು ನೋಡಿ, "ಯಾಕಮ್ಮಾ" ಎಂದು ಜೆಸಿಂತಾ ಬಾಯಿ ಕೇಳಿರುವುದೇನೋ ಸರಿ. ಆದರೆ ರೇಖಾ ಅಮ್ಮನಿಗೆ ಉತ್ತರ ಕೊಡ್ತಾ ಇಲ್ಲ. ಬರೀ ಬಾಗಿಲಿನ ಕಡೆಗೆ ಕೈ ತೋರಿಸುತ್ತಿದ್ದಾಳೆ.

ಜೆಸಿಂತಾ ಬಾಯಿ ಏನೆಂದು ಮತ್ತೊಮ್ಮೆ ಕೇಳಿದಳು. ರೇಖಾ ಮತ್ತೊಮ್ಮೆ ಬಾಗಿಲ ಕಡೆಗೆ ಬೆರಳು ತೋರಿಸಿದಳು. ಜೆಸಿಂತಾ ಬಾಯಿ ಬಾಗಿಲ ಬಳಿಗೆ ಹೊರಟಾಗ ರೇಖಾ "ತಡಿಯಮ್ಮ" ಎಂದು ಹೇಳುತ್ತಲೇ ತಾಯಿಯ ಕೈಯನ್ನು ಹಿಡಿದೆಳೆದಳು. "ಯಾಕೆ? ಏನಾಯ್ತು? ಸುಮ್ಮನೇ ಹೆದರಿಕೊಂಡು ಒದ್ದಾಡ್ತಾ ಇದ್ದಿಯಲ್ಲಾ?" ಜೆಸಿಂತಾ ಬಾಯಿ ಮತ್ತೊಮ್ಮೆ ಕೇಳಿದಳು. ರೇಖಾ ಬೆವರಿದಳು ಮತ್ತು ಹೆದರಿಕೊಂಡೇ, "ಯಾರೋ ಬಾಗಿಲು ಹೊಡೆಯುತ್ತಿದ್ದಾರಮ್ಮ, ಅವರು ಬಂದ್ಬಿಟ್ಟರೇನೋ? ಬಾಗಿಲು ತೆಗಿಬೇಡ" ಎಂದಳು. ಜೆಸಿಂತಾ ಬಾಯಿ "ಅಯ್ಯೋ ನಿನ್ನ ಭ್ರಾಂತು; ಯಾರು ಬರುತ್ತಾರೆ, ಬಂದು ಬಾಗಿಲು ತಟ್ತಾರೆ. ಅದಕ್ಕೆಲ್ಲಾ ಯಾಕೆ ಹೆದರಬೇಕು? ಹೇಗೂ ಗಂಡನ ಮನೆ ಬಿಟ್ಟು ಬಂದಿದ್ದಿಯಾ ಅವನು ಬರಲಾರ" ಎಂದರು. ಆದರೆ, ಅವರಿಬ್ಬರು ಮಾತಾಡುವಾಗ ಮತ್ತೊಮ್ಮೆ ಬಾಗಿಲು ಬಡಿದ ಶಬ್ದ ಕೇಳಿಸಿತು. ಜೆಸಿಂತಾ ಬಾಯಿ, ಒಳಗಿನಿಂದಲೇ "ಯಾರು? ಯಾರು ಬೇಕಿತ್ತು?" ಎಂದು ಬಾಗಿಲು ತೆಗೆಯದೇ ಕೇಳಿದಾಗ ಹೊರಗಡೆಯಿಂದ ಮೌನವೇ ಉತ್ತರ. ಮತ್ತೊಮ್ಮೆ ಜೆಸಿಂತಾ ಬಾಯಿ "ಯಾರದು?" ಎಂದು ಕೇಳಿದಾಗ ಹೊರಗಡೆಯಿಂದ ಪುನಃ ಬಾಗಿಲಿಗೆ ಹೊಡೆದ ಸದ್ದು. ಜೆಸಿಂತಾ ಬಾಯಿ ಮೆಲ್ಲಗೆ ಕಿಟಕಿಯತ್ತ ಹೋಗಿ ನೋಡಿದರೆ, ಕತ್ತಲೆಯಲ್ಲಿ ಸರಿಯಾಗಿ ಕಾಣಿಸುತ್ತಲೂ ಇಲ್ಲ. ಯಾಕೆ? ಯಾರು? ಎಂದು ಸರಿಯಾಗಿ ತಿಳಿಯದೆ ಬಾಗಿಲು ತೆರೆಯುವುದು ಕೂಡಾ ಅಪಾಯ; ಮನೆಯಲ್ಲಿ ತಾಯಿ – ಮಗಳು ಇಬ್ಬರೇ ಇದ್ದಾರೆ. ಪುನಃ ಜೆಸಿಂತಾ ಬಾಯಿ ಕೇಳಿದರು. "ಯಾರದು?" ಈಗ ಹೊರಗಡೆಯಿಂದ "ನಾನು" ಎಂಬ ಉತ್ತರ ಬಂತು. "ನಾನು ಅಂದರೆ?" ಪುನಃ ಜೆಸಿಂತಾ ಬಾಯಿ ಕೇಳಿದರು. "ಬಾಗಿಲು ತೆರಿತಿರೋ ಅಥ್ವಾ ನಾನೇ ಬಾಗಿಲು ಒಡ್ದು ಒಳಗಡೆ ಬರ್ಲೋ, ಆ ಮುಂಡೆ ಅವಳು – ಆ ಸೂಳೆ ಎಲ್ಲಿದ್ದಾಳೆ? – ರೇಖಾ – ಅವಳಿಗೆ ಹೇಳಿ. ಅವಳನ್ನು ಈವತ್ತು ನಾನು ಎಳ್ಕೊಂಡು ಹೋಗುವುದೇ ಸೈ. ಅದ್ಯಾರು ಅಡ್ಡ ಬರ್ತಾರೋ ನೋಡೇ ಬಿಡ್ತೀನಿ. ಎಯ್ ಸೂಳೆ, ಹಾದರಗಿತ್ತಿ ರಂಡೆ, ಬಾರೇ, ಬಾಗಿಲು ತೆಗಿಯೇ, ಯಾಕೆ ನಿನ್ನ ಮಿಂಡ ಇದ್ದಾನಾ? ಅಲ್ಲಿ?" ರೇಖಾಳ ಗಾಬರಿಯು ಸಕಾರಣವಾಯಿತು ಮತ್ತು ಈ ತನಕ ಬಾಗಿಲ ಹೊರಗಡೆ ನಿಂತವನು ಒಮ್ಮೆಲೇ ಕಿರುಚಾಡತೊಡಗಿದ. "ಬಾಗಿಲು ತೆಗಿಯೇ ಬೇವರ್ಸಿ?" ಮತ್ತೊಮ್ಮೆ ಕಿರುಚಿದ – ಪ್ರಸನ್ನ. ಜೆಸಿಂತಾ ಬಾಯಿ ಗತ್ಯಂತರವಿಲ್ಲದೆ ಬಾಗಿಲು ತೆಗೆದಳು. ರೇಖಾ, ಒಂಥರಾ ಭಯದಿಂದಲೇ ಜೆಸಿಂತಾ ಬಾಯಿ ಬಾಗಿಲು ತೆರೆಯುವಾಗಲೇ ಅಡುಗೆ ಮನೆಯಲ್ಲಿ ಕುಳಿತಿದ್ದಳು. ಪ್ರಸನ್ನ ಕಂಠಮಟ್ಟದ ತನಕ ಕುಡಿದು ಬಂದಿರುವುದು ಸ್ಪಷ್ಟ. ಸರಿಯಾಗಿ

ನಡೆಯಲು ಬರುವುದಿಲ್ಲ, ತೂರಾಡುತ್ತಿದ್ದಾನೆ. ಜೆಸಿಂತಾ ಬಾಯಿಗೆ ಈ ವಿಷಯ ಸರಿಯಾಗಿಯೇ ಅರ್ಥವಾಗಿದೆ. ನಗರದಲ್ಲಿ ಗಲಭೆ ನಡೆಯುತ್ತಿರುವಾಗ ಈ ಹುಡುಗ ಹೇಗೆ ಬಂದ? ಜೆಸಿಂತಾ ಬಾಯಿ ಅದನ್ನು ಯೋಚಿಸಿದರೂ ಬೇರೆ ಏನೂ ಹೇಳದೆ, ತಾಳ್ಮೆಯಿಂದಲೇ "ಕುಳಿತುಕೋ ಪ್ರಸನ್ನ" ಎಂದು ಹೇಳಿದಾಗ, ಪ್ರಸನ್ನ "ನಿಮ್ಮತ್ರ ಅದು–ಇದು ಪುರಾಣ ಕೇಳಲು ಬಂದಿಲ್ಲ ಎಂದವನೇ "ರೇಖಾ ಎಲ್ಲಿದ್ದಾಳೆ" ಎಂದು ಹುಡುಕುವಂತೆ ಕಣ್ಣಿಂದ ಮನೆಯೊಳಗೆ ಅರಸಿದ. ಜೆಸಿಂತಾ ಬಾಯಿ, "ಕಾಫಿ ಅಥವಾ ಟೀ ಏನಾದರೂ ಕುಡಿತೀಯೇನಪ್ಪಾ?" ಪ್ರಸನ್ನನ ಸಿಟ್ಟು ಕಡಿಮೆಯಾದಂತೆ ಕಾಣಿಸಲಿಲ್ಲ. "ಅವೆಲ್ಲಾ ಪ್ರಶ್ನೆಗಳು ಬೇಡ. ಈ ರಾತ್ರಿಯ ಹೊತ್ತಿನಲ್ಲಿ ಯಾರು ಟೀ ಕುಡಿತಾರೆ. ನಿಮ್ಮ ಮಗಳನ್ನು ಕರೆದುಕೊಂಡು ಹೋಗುವುದಕ್ಕೆ ಬಂದಿದ್ದೇನೆ, ಕಳಿಸಿಕೊಡ್ತೀರಾ? ಇಲ್ವಾ? ಅದಷ್ಟೆ ಕೇಳುವುದಕ್ಕೆ ಬಂದಿದ್ದೇನೆ." ಅವನ ನಿಷ್ಠುರವಾದ ಮಾತಿಗೆ ಜೆಸಿಂತಾ ಬಾಯಿಯು ಕೂಡಾ ತಾಳ್ಮೆಗೆಡತೊಡಗಿದಳು. "ನಾನೇನು ಹೇಳಿದರೂ ಅರ್ಥವಾಗುವುದಿಲ್ಲ, ನಾನು ನನ್ನ ಮಗಳನ್ನು ನಿನ್ನ ಜೊತೆ ಕಳಿಸಿಕೊಡೋಲ್ಲ, ಡೈವೋರ್ಸ್ ಕೊಟ್ಟುಬಿಡು ಸಾಕು. ನಾವು ನಮ್ಮ ಪಾಡಿಗೆ ಬದುಕುತ್ತೇವೆ" – ಜೆಸಿಂತಾ ಬಾಯಿ ವಿವರಿಸಿ ನಿಧಾನವಾಗಿ ಹೇಳಿದರೂ, ಅವರ ಮಾತಿನಲ್ಲಿ ತಾಳ್ಮೆಗೆಟ್ಟ ಸೂಚನೆಗಳಿವೆ. "ಎಲ್ಲಿ – ಆ ರಂಡೆ, ಅವಳನ್ನು ಕಳಿಸಿ, ಆ ಸೂಳೆ–ಹಾದರಗಿತ್ತಿ ಯಾವ ಮಿಂಡನನ್ನು ಕಟ್ಟಿಕೊಂಡಿದ್ದಾಳೆ? ಬಿಡೋಲ್ಲ – ಅವಳನ್ನು, ಈವೊತ್ತು ಕರೆದುಕೊಂಡು ಹೋಗುವುದೇ ಸೈ! ನನ್ನ ಜೊತೆ ಅವಳನ್ನು ಕಳಿಸಿಕೊಟ್ಟಿಲ್ಲವೆಂದಾದರೆ ಮಾತ್ರ ಬಿಡೋಲ್ಲ. ನನಗೆ ಯಾವ ಯಾವ ರೀತಿಯ ಸಂಪರ್ಕವಿದೆ ಎಂಬುದು ನಿಮಗೆ ಗೊತ್ತಿಲ್ಲ." ತೂರಾಡುತ್ತಲೇ ಎದ್ದುನಿಂತ. ಎದ್ದು ಸರಿಯಾಗಿ ನಡೆಯಲಾಗದ ಪ್ರಸನ್ನನನ್ನು ನೋಡುತ್ತಲೇ ಜೆಸಿಂತಾ ಬಾಯಿಗೆ ನಗೆ ಬಂತು. ಬರುತ್ತಿರುವ ನಗೆಯನ್ನು ತಡೆಹಿಡಿಯಲು ಜೆಸಿಂತಾ ಬಾಯಿ ಸೆರಗನ್ನು ಬಾಯಿಗೆ ಅಡ್ಡ ಹಿಡಿದರೂ ಎದ್ದುನಿಂತ ಪ್ರಸನ್ನನಿಗೆ ಮುಂದೆ ಹೆಜ್ಜೆ ಇಡಲು ಸಾಧ್ಯವಾಗಲಿಲ್ಲ. ಅಡುಗೆ ಮನೆಯಿಂದ ರೇಖಾ ಪಿಂಟೋ ನೋಡಿದಳು. ಅವಳಿಗೆ ಭಯ ಮತ್ತಷ್ಟು ಹೆಚ್ಚಾಯಿತು. ಎದ್ದುನಿಂತ ಪ್ರಸನ್ನ ನಡೆಯಲಾಗದೆ ಕುಸಿದು ಕುಳಿತವನು ಅಲ್ಲಿಯೇ ಬಿದ್ದುಬಿಟ್ಟ. ಎರಡೆರಡು ಬಾರಿ ಎದ್ದು ಕುಳಿತುಕೊಳ್ಳುವ ಪ್ರಯತ್ನ ಮಾಡಿದವನು – ಅಲ್ಲಿಯೇ ಮಲಗಿದ. ಜೆಸಿಂತಾಬಾಯಿ ನಗೆಯನ್ನು ತಡೆಯಲಾಗದೆ ನಕ್ಕುಬಿಟ್ಟರು. ಆಗಲೇ ರೇಖಾ ಅಡುಗೆ ಮನೆಯಿಂದ ಹೊರಗೆ ಬಂದಳು. ಬಿದ್ದಿರುವ ಪ್ರಸನ್ನನ ಅವಸ್ಥೆಯನ್ನು ನೋಡಿ ಸಣ್ಣ ಮರುಕವುಂಟಾಯಿತು. "ಅಮ್ಮಾ, ಅವರು ಬಿದ್ದುಬಿಟ್ಟಿದ್ದಾರೆ, ಕುಡಿದದ್ದು ಹೆಚ್ಚಾಗಿರಬೇಕು, ಮುಖಕ್ಕೆ ಒಂಚೂರು ನೀರು ಹಾಕಿ, ಅವರ ಮುಖವೊರೆಸುತ್ತೇನೆ" ಎಂದಳು. ಜೆಸಿಂತಾಬಾಯಿ ಬಿಡಲಿಲ್ಲ, ರೇಖಾ ಒಳಗಡೆಯಿಂದ ಒಂದು ಪಾತ್ರೆಯಲ್ಲಿ ನೀರು ತೆಗೆದುಕೊಂಡು

ಬಂದಳು ಮತ್ತು ಪ್ರಸನ್ನನ ಮುಖಕ್ಕೆ ನೀರು ಚಿಮುಕಿಸಿದಳು. ಪ್ರಸನ್ನನ ಕಡೆ ಬಾಯಲ್ಲಿ ಜೊಲ್ಲು ಸುರಿಯುತ್ತಿರುವುದನ್ನು ನೋಡಿ ಒದ್ದೆ ಬಟ್ಟೆಯಲ್ಲಿ ಒರಸಿದಳು. ಪ್ರಸನ್ನ ನಿಧಾನವಾಗಿ ಕಣ್ತೆರೆದರೂ ಮತ್ತೆ ಅಲ್ಲಿಯೇ ಒರಗಿದನು. ಜೆಸಿಂತಾಬಾಯಿ ಮತ್ತು ರೇಖಾ ಇಬ್ಬರೂ ಮುಖ ಮುಖ ನೋಡಿಕೊಂಡರು. ಅವರಿಬ್ಬರೂ ಏನೂ ಮಾಡುವಂತಿರಲಿಲ್ಲ. ತಾಯಿ ಮಗಳಿಬ್ಬರೂ ಪ್ರಸನ್ನನನ್ನು ಹೊರಳಿಸಿ ಮಲಗಿಸಿದರು. ಪ್ರಸನ್ನ ಅಲ್ಲಿಯೇ ನಿದ್ದೆ ಹೋದಂತೆ ಅವರಿಗನ್ನಿಸಿತು. ಆದರೆ, ಅವನು ಅಮಲು ಇಳಿದ ಮೇಲೆ ಏನು ಮಾಡುವನೋ ಎಂಬ ಅಂಜಿಕೆಯುಂಟಾಯಿತು. ಅವರಿಬ್ಬರೂ ಅದನ್ನು ವ್ಯಕ್ತಪಡಿಸುವಂತಿರಲಿಲ್ಲ. ಆದರೆ, ಅದೇ ಮುಳುವಾಯಿತು; ಮತ್ತೆ ಅರ್ಧ ಗಂಟೆಯಲ್ಲಿ ಪ್ರಸನ್ನ ಎದ್ದು ಕುಳಿತ ಮತ್ತು ರೇಖಾಳನ್ನು ಪುನಃ ಬಾಯಿಗೆ ಬಂದಂತೆ ಬಯ್ಯಲು ಪ್ರಾರಂಭಿಸಿದ. "ರಂಡೆ – ಬಾರೇ – ನೀನು ಮನೆಗೆ ಬಂದಿಲ್ಲವೆಂದಾದರೆ ನಿನ್ನನ್ನೇ ಕೊಂದುಬಿಡ್ತೇನೆ" – ಇತ್ಯಾದಿ ಬೈಗುಳವನ್ನು ಕೇಳಿದ ಜೆಸಿಂತಾಬಾಯಿ ಕೂಡಲೇ ಅಡುಗೆ ಮನೆಯಿಂದ ಒಂದು ಕುಡುಗೋಲು ತಗೊಂಡು, "ನಡಿಯೋ, ಇನ್ನೊಮ್ಮೆ ಮನೆಬಾಗಿಲಿಗೆ ಬಂದ್ರೆ ಕೊಚ್ಚಿಹಾಕ್ತೇನೆ. ಸೂಳೇ ಮಗನೇ! ಏನೂಂತ ತಿಳ್ಕೊಂಡೆ, ನೀನು ಏನು ಹೇಳಿದರೂ ಸುಮ್ಮನಿದ್ದೆ, ಇನ್ನೊಮ್ಮೆ ನನ್ನ ಮಗಳ ತಂಟೆಗೆ ಬಂದೆಯೆಂದಾದರೆ ಏನೂ ಇಲ್ಲ ಮತ್ತೆ" ಎನ್ನುವಾಗಲೇ ಪ್ರಸನ್ನನ ಕುಡಿತ ಅಮಲು ಅರ್ಧಕ್ಕರ್ಧ ಇಳಿಯಿತು ಮತ್ತು ಮೆಲ್ಲನೆದ್ದು ಹೊರಟ. ಅವನಿಗೆ ಜೆಸಿಂತಾಬಾಯಿಯ ಸಿಟ್ಟು ನೋಡಿಯೇ ಭಯವುಂಟಾಯಿತು. ಆದರೆ, ಮನೆಯಿಂದ ಹೊರಗಡೆಗೆ ಹೋಗುವಾಗ ಹೇಳಿದ; ನಿಮ್ಮನ್ನು ನೋಡಿಕೊಳ್ಳದೆ ಬಿಡುವುದಿಲ್ಲ, ಬಿಕನಾಸಿಗಳು – ಕಾಲಿಗೆ ಬೀಳುವಂತೆ ಮಾಡುತ್ತೇನೆ ಎಂದ. ಪ್ರಸನ್ನ ಕುಡಿತದಲ್ಲಿ ಹೇಳಿರಬಹುದು ಎಂದುಕೊಂಡು ಜಸಿಂತಾ ಬಾಯಿ ಅಷ್ಟೊಂದು ತಲೆ ಕೆಡಿಸಿಕೊಳ್ಳಲಿಲ್ಲ. ಆದರೆ, ಅವನು ಕೊನೆಗೆ ಹೇಳಿರುವ ಮಾತು ಮಾತ್ರ ರೇಖಾಳ ಎದೆಯಾಳದಲ್ಲಿ ಮತ್ತೊಂದು ಭಯದ ಮೊನೆಯನ್ನು ನೆಟ್ಟಿತು!

ಯಾವುದೇ ಒಂದು ರೀತಿಯಲ್ಲಾದರೂ ಸರಿ – ಉರಿ ಬಿಸಿಲಲ್ಲಿ ಚಳಿ ಕಾಯಿಸೋಣವೆಂದು ಮಧ್ಯಾಹ್ನದ ಹೊತ್ತು ಯಾರೂ ಅಂಗಳದಲ್ಲಿ ಕುಳಿತಿರುವುದಿಲ್ಲ. ಬೆವರಿಳಿದು ಮೈಯೆಲ್ಲಾ ನೆನೆದು ಹೋಗುವ ಹೊತ್ತು ಚಳಿ ಕಾಯಿಸುವ ಸಮಯವಲ್ಲವೆಂಬುದು ಗೊತ್ತು. ಹಾಗೆಯೇ ಉರಿಯುತ್ತಿರುವ ಮನೆಯಲ್ಲಿ ಜಂತಿಯನ್ನೆಳೆದುಕೊಂಡು ಹೋಗುವ ಜಾಣತನವೂ ಆರೋಗ್ಯಕರವಲ್ಲ. ಕಡುಬೇಸಿಗೆಯ ನಟ್ಟನಡು ಮಧ್ಯಾಹ್ನ ಮತ್ತು ಉರಿಯುತ್ತಿರುವ ಮನೆಯಿಂದ ಗಳವನ್ನು ತೆಗೆದುಕೊಂಡು ಕೆಲಸವೆರಡನ್ನೂ ಮಾಡಲು ಪ್ರಯತ್ನಿಸಿದವನು – ನಾಗೇಶ. ಅದೇ ನಾಗೇಶ, ಜೀವನದುದ್ದಕ್ಕೂ ಕಾಪಾಡಿಕೊಂಡು ಬರಬೇಕೆಂದಿದ್ದ ಮಹತ್ವಾಕಾಂಕ್ಷೆ ಹೊಂದಿದ್ದವನು ಕೇವಲ ಮುದ್ದೆಯಂತಾಗಿದ್ದ. ಮೈ–ಕೈ–ಬೆನ್ನು–ತಲೆಯಲ್ಲಿ – ಹೀಗೆ ಅಸಂಖ್ಯವಾದ

ನೋವುಗಳು ನಾಗೇಶನ ತುಂಬಾ ತುಂಬಿಕೊಂಡಿದೆ. ಒತ್ತಿಕೊಂಡು ಬರುತ್ತಿರುವ ನೋವು – ಅವನನ್ನು ಹೇಗೆ ಪುಡಿ ಮಾಡಿವೆಯೆಂದರೆ, ಆ ಕಡೆಯೂ ತಿರುಗಲಾರ– ಆ ಕಡೆಯು ತಿರುಗಲಾರ. ತಿರುಗಿ ಮಲಗಲಾರ. ಬಲ ಬದಿಯಾಗಲೀ, ಎಡಬದಿಯಾಗಲೀ ಎಲ್ಲಿ ಮುಟ್ಟಿದರೂ ನೋವು, ಆಸ್ಪತ್ರೆಯಲ್ಲಿರುವ ನಾಗೇಶನನ್ನು ಸಂದರ್ಶಿಸಿದ ಪತ್ರಿಕೆಯವರಿಗೆ ಅವನ ವಿವಿಧ ಭಂಗಿಯ ಫೋಟೋಗಳು ಸಿಕ್ಕಿದವು ಮತ್ತು ನಾಗೇಶ ಅವರಿಗೆ ಹೇಳಿದ; "ದೇಶಕ್ಕಾಗಿ ನಾನು ಈ ಸಂಕಟ; ನೋವು ಅನುಭವಿಸಬೇಕಾಯಿತು. ನಮ್ಮಂಥ ಸಾವಿರಾರು ಜನ ದೇಶಭಕ್ತರ; ಸತ್ಪ್ರಜೆಗಳ ಏಳಿಗೆಗಾಗಿ ನಾನು ಇನ್ನೂ ದುಡಿಯುತ್ತೇನೆ, ಹಿಂದೆಗೆಯುವುದಿಲ್ಲ."

ನಾಗೇಶ ಸಂದರ್ಶನದ ಕೊನೆಯಲ್ಲಿ ಹೇಳಿದ ಮಾತುಗಳು ಪತ್ರಿಕೆಗಳಲ್ಲಿ ದಪ್ಪಕ್ಷರಗಳಲ್ಲಿ ಪ್ರಕಟವಾದುದೇ ತಡ – ಈ ಪತ್ರಿಕೆಯ ಪ್ರತಿಗಳನ್ನು ಹಿಡಿದು ವಿಧಾನಸಭೆಯಲ್ಲಿಯೂ ಶಾಸಕರು ಎದ್ದು ನಿಂತು ಕೂಗಾಡಿದರು. ಯಾಕೆಂದರೆ, ಅವರಿಗೆ ಮಾತಾಡಲು ಬೇರೆ ಯಾವ ಸುದ್ದಿಯೂ ಸಿಕ್ಕಿರಲಿಲ್ಲ. ಎಲ್ಲಾ ಬಿಟ್ಟು ರಾಯಚೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತನ ಸಾವು ವಿಧಾನಸಭೆಯ ಲಕ್ಷ್ಮಣ ರೇಖೆಯೊಳಗಡೆ ಬರಲಿಲ್ಲ, ಲಕ್ಷ್ಮಣರೇಖೆ ದಾಟಿದ್ದು – ನಾಗೇಶನ ಪ್ರಸಂಗ ಮಾತ್ರ!

*

ಪ್ರಸನ್ನ ಬಂದು ಹೋದ ನಂತರ ರೇಖಾ ಮಾತ್ರ ನೀರಲ್ಲಿ ಗುಬ್ಬಚ್ಚಿಯಂತೆ ಮುದುಡಿ ಕೂತಳು. ಅವಳಿಗೆ ವಿಪರೀತ ಭಯವಾಗಿ, ಏನು ಮಾಡುವುದು ಗೊತ್ತಾಗದೇ ಕಣ್ಣಲ್ಲಿ ಗಳ ಗಳನೆ ನೀರು ಬೀಳುವುದಕ್ಕೂ ಪ್ರಸನ್ನ ಹೊರಗೆ ಅಡಿಯಿಟ್ಟ ತಕ್ಷಣ ಜೆಸಿಂತಾ ಬಾಯಿ ಬಾಗಿಲು ಹಾಕಿ ಬೋಲ್ಟ್ ಹಾಕಿ ಬರುವುದಕ್ಕೂ ಸರಿಯಾಯಿತು. ಬರಿಯ ಬಾಯಿ ಮಾತಿನಲ್ಲಿ ಹೆದರಿಸಿದರೂ ಜೆಸಿಂತಾ ಬಾಯಿಗೂ ಸಣ್ಣ ಅಳುಕೊಂದು ಕಾಣಿಸಿಕೊಂಡಿತು. ತಕ್ಷಣವೇ ಬಿಡುಗಡೆಯಾಗುವ ಅಳುಕು ಕೂಡಾ ಅಲ್ಲ. ಯಾವುದೋ ಶಾಲೆಯೊಂದರಲ್ಲಿ ನಿವೃತ್ತಿ ಹೊಂದಿದ ಟೀಚರೊಬ್ಬಳಿಗೆ ಇರಬಹುದಾದ ಧೈರ್ಯವೆಂದರೆ ಬೆತ್ತವನ್ನು ಹಿಡಿದುಕೊಂಡು ಮಕ್ಕಳಿಗೆ ಹೆದರಿಸುವುದು ಮಾತ್ರ. ಶಾಲೆಯಲ್ಲಿ ಸಣ್ಣ ಮಕ್ಕಳಿಗೆ ಬುದ್ಧಿ ಹೇಳಲು ಮೇಜಿಗೆ ಬೆತ್ತದಿಂದ ಎರಡು ಹೊಡೆದರೂ ಸಾಕು, ಮಕ್ಕಳು ಗಪ್‌ಚಿಪ್. ಆದರೆ, ಪ್ರಸನ್ನ ಶಾಲೆಯ ಹುಡುಗನಲ್ಲ. ತನ್ನ ಮಗಳ ಗಂಡನಾಗಿ ಕೆಲವು ದಿನ ವಿಧಿವತ್ತಾಗಿ ತನ್ನ ಹಕ್ಕುಗಳನ್ನು ಚಲಾಯಿಸಿದವನು. ಯಾವ ಮುಜುಗರವೂ ಇಲ್ಲದೆ ಈಗ ತಾನು ಗಂಡನೆಂಬುದನ್ನು ಸಾಬೀತುಪಡಿಸಲೆಂದೇ ಮತ್ತೆ ಮನೆಯೊಳಗೆ ಬಂದವನು ಗಂಡನಿಲ್ಲದ, ನಿವೃತ್ತಿ ಹೊಂದಿದ ಜೆಸಿಂತಾ ಬಾಯಿಗೆ ಬೇರೆ ಯಾವುದೇ ರೀತಿಯಲ್ಲಿಯೂ ಒಂದು ನೈತಿಕ ಧೈರ್ಯ ತುಂಬುವವರಿಲ್ಲ. ಪ್ರತೀ ಭಾನುವಾರದ ಬೆಳಿಗ್ಗೆ ಚರ್ಚ್‌ಗೆ ಹೋಗುವುದು ಮತ್ತು

ಅಲ್ಲಿ ಏಸುವನ್ನು ಪ್ರಾರ್ಥಿಸುವುದು – ಈ ಧೈರ್ಯವೊಂದರ ಹೊರತು ಗಂಡು ಸಂತಾನವಿಲ್ಲದ ಜೆಸಿಂತಾಬಾಯಿ ಪ್ರಸನ್ನನ ಮೇಲೆ ಎಗರಾಡಿದ್ದು – ತಾಯಿಯ ಕರುಳು ಚುರುಕು ಎಂದ ಕಾರಣಕ್ಕೆ ಹೊರತು ಬೇರಾವುದಕ್ಕೂ ಅಲ್ಲ. ಹೆದರಿ ಕಂಗಾಲಾದ ರೇಖಾಳ ಎದುರು ಪ್ರಸನ್ನನಿಗೆ ಆ ರೀತಿ ಹೆದರಿಸದೇ ಬೇರೆ ದಾರಿಯೇ ಇರಲಿಲ್ಲ. ಕರುಳು ನಿಗಿನಿಗಿ ಕೆಂಡದಂತೆ ಸುಡುವಾಗ ತಾಯಿಯಾದ ಜೆಸಿಂತಾಗೆ ಬೇರೆ ದಾರಿಯೇ ಇರಲಿಲ್ಲ. ಪ್ರಸನ್ನನ ಧೂರ್ತತನವೊಂದು ಕಡೆ; ಮಗಳನ್ನು ಇಂಚು ಇಂಚಾಗಿ ಹಿಂಸಿಸಿದ ನೋವು; ಮಗಳನ್ನು ನಿತ್ಯ ನರಕವನ್ನಾಗಿಸಿದ ಬೇಸರ – ಎಲ್ಲವೂ ಜೊತೆ ಜೊತೆಗೆ ಸೇರಿಕೊಂಡವು. ಪ್ರಸನ್ನನ್ನು ಹೊರಗೆ ಕಳಿಸುವ ತನಕವೂ ಕುದಿಯುತ್ತಿದ್ದ ಸಿಟ್ಟು ಕೂಡಲೇ ಜರ್ರನೇ ಇಳಿಯಿತು. ಸಿಟ್ಟಿನ ಜಾಗದಲ್ಲಿ ಆಗ ಹಾಜರಾಗಿದ್ದು ಅಳು. ಜೆಸಿಂತಾಬಾಯಿ ಮಗಳನ್ನು ಗಟ್ಟಿಯಾಗಿ ತಬ್ಬಿಕೊಂಡು ಅತ್ತಳು. ತಾಯಿ–ಮಗಳ ದುಃಖದಲ್ಲಿ ತೊಯ್ದು ನೆಲವೆಲ್ಲಾ ಒದ್ದೆಯಾಯಿತು. ಕರುಣಾಳು ಏಸುವೂ ಕೂಡಾ ಈ ಸಮಯದಲ್ಲಿ ಅವರ ಒದ್ದೆ ಕಣ್ಣುಗಳನ್ನು ಒರಸಲು ಬರಲಿಲ್ಲ. ಸ್ವತಃ ಏಸುವೇ ಶಿಲುಬೆಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಮತ್ತು ಅಪರಿಮಿತವಾದ ಹಿಂಸೆಯನ್ನು ಅನುಭವಿಸಿದ್ದ ಏಸುವನ್ನು ಶಿಲುಬೆಗೇರಿಸಿದ ಯಹೂದ್ಯರನ್ನು ಕಂಡು, "ಈ ಪಾಪಿಗಳನ್ನು ಉದ್ಧರಿಸು" ಎಂದಿದ್ದ. ಆ ಏಸುವನ್ನು ನಂಬಿದ ತಾಯಿ–ಮಗಳಿಬ್ಬರೂ ಪ್ರಸನ್ನನೆಂಬ ಪಾಪಿಯನ್ನು ಉದ್ಧರಿಸು ಎಂದು ಹೇಳುವ ಅಗತ್ಯವಿರಲಿಲ್ಲ. ಪ್ರಸನ್ನನ ಪಾಪವನ್ನು ಉದ್ಧರಿಸಿ ಮೇಲೆತ್ತಿ ಸಾಂತ್ವನ ಹೇಳುವ ಅವಶ್ಯಕತೆಯಾದರೂ ಯಾರಿಗಿತ್ತು?

ದಿಕ್ಕಿಲ್ಲದ ಪರದೇಸಿಗಳು ಎಂದು ಇಬ್ಬರಿಗೂ ಅನಿಸಿತ್ತು ಮತ್ತು ಅದರಿಂದ. ಭವಿಷ್ಯ ಹೇಗೆ? ಎಂಬ ಚಿಂತೆಯು ಇಬ್ಬರಿಗೂ ಕಾಡತೊಡಗಿತು. ಮುಂದೆ ಹೇಗೆ? ಎಂಬುದರ ಬಗೆಗೆ ಇಬ್ಬರೂ ಯೋಚಿಸುತ್ತಿರುವಾಗಲೇ ಪ್ರಸನ್ನ ಬಂದು ಮತ್ತೆ ಬಾಗಿಲು ತಟ್ಟತೊಡಗಿದ. "ರೇಖಾ, ಏಯ್ ರೇಖಾ, ರಂಡೆ, ಬಾಗಿಲು ತೆಗಿಯೇ, ಕೊಚ್ಚಿ ಹಾಕ್ತೇನೆ. ಯಾರು, ನಿನ್ನ ಮಿಂಡ ಬಂದು ಮಲಗಿದ್ದಾನಾ? ಸೂಳೆ ಬಾಗಿಲು ತೆರೆದಿಲ್ಲವೆಂದಾದರೆ ಒದ್ದು ಒಳಗಡೆ ಬರ್ತೇನೆ." ಕುಡಿದು ಮಾತಾಡುತ್ತಿರುವ ಪ್ರಸನ್ನನ ಧ್ವನಿಯು ಸರಿಯಾಗಿ ಒಳಗಿದ್ದವರಿಗೆ ಕೇಳಿಸಲಿಲ್ಲ. ಆದರೆ ಅಕ್ಕಪಕ್ಕದ ಮನೆಯವರು ಬಂದು ಪ್ರಸನ್ನನ ನಾಟಕವನ್ನು ರಾತ್ರಿಯಲ್ಲಿಯೂ ನೋಡತೊಡಗಿದರು. ಪ್ರಸನ್ನ ತನ್ನ ಶರ್ಟು ಬಿಚ್ಚಿಕೊಂಡು ಒಂದೇ ಸಮನೆ ಬಾಗಿಲು ಹೊಡೆಯತೊಡಗಿದ. "ರಂಡೆ, ಮುಂಡೆ, ನಿನ್ನವ್ವನ..." ಎಂದು ಕಿರುಚಾಡುತ್ತಿದ್ದ. ಜೆಸಿಂತಾಬಾಯಿಗೆ ಮತ್ತು ರೇಖಾಗೆ ಭಯ ಹುಟ್ಟಿದ್ದೇ ಆವಾಗ – ಅವನ ಬಗೆಗೆ ಸಣ್ಣದೊಂದು ಕರುಣೆಯ ಸಲೆಯೂ ಬತ್ತಿ ಹೋಯಿತು. ಗಾಬರಿ ಬಿದ್ದವರು ಏನು ಮಾಡುವುದೆಂದು ತೋರದೆ ಸುಮ್ಮನಿದ್ದರು. ಸ್ವಲ್ಪ ಹೊತ್ತು ನೋಡಿದ ಅಕ್ಕಪಕ್ಕದ ಮನೆಯವರು ಅನಂತರ

ಹೊರಟುಹೋದರು. ಪ್ರಸನ್ನ ಕಿರುಚಾಡುತ್ತಿದ್ದವನು ಅಲ್ಲಿಯೇ ಬಿದ್ದ. ಆಗ ಸರಿಯಾಗಿ ಗಂಟೆ ಹನ್ನೊಂದೂವರೆ. ಅವನ ಕಿರುಚಾಟ ನಿಂತ ಮೇಲೆ ಕಿಟಕಿಯಿಂದ ಜೆಸಿಂತಾ ಬಾಯಿ 'ಸಾಯಲಿ' ಎಂದವರೇ ಮಗಳನ್ನು ಕರೆದುಕೊಂಡು ಲೈಟಾರಿಸಿ ಮಲಗಿದರು.

ಥಟ್ಟನೇ ಗಲ್ಲ ಮತ್ತು ನೆತ್ತಿಯ ಮೇಲೆ ಹೊಡೆದಂತೆ ಚಾರುಗೆ ಎಚ್ಚರವಾಯಿತು. ನಿಶ್ಚಿಂತೆಯಿಂದ ನಿದ್ದೆ ಮಾಡದ ವರ್ಷಗಳು. ಚಿಂತೆಯಿಲ್ಲದೆ, ಆತಂಕರಹಿತವಾಗಿ ನಿದ್ದೆ ಮಾಡಬೇಕೆಂದು ಯಾವ ರೀತಿಯಲ್ಲಿ ಪ್ರಯತ್ನಿಸಿದರೂ ಮತ್ತೆ ಹನ್ನೆರಡು ಗಂಟೆಯ ಹೊತ್ತಿಗೆ ಎಚ್ಚರವಾಗುತ್ತದೆ – ಯಾರೋ ಬಂದು ಸುಖವಾದ ನಿದ್ದೆಯನ್ನು ಪೂರ್ತಿಯಾಗಿ ಹಾಳು ಮಾಡಿದಂತೆ. ಮೈಥಿಲಿಯು ಎಂದಿನಂತೆ ಮೌನವಾಗಿ ಅಡುಗೆ ಮನೆಯನ್ನು ಶುಚಿಮಾಡಿ ಹೋಗಿ ಮಲಗಿದ್ದಳು. ಚಾರು ಎಂದಿನಂತೆ ಹೊರಗಡೆ ದಿವಾನ್ ಕಾಟಿನಲ್ಲಿ ಒರಗಿದ. ಎಷ್ಟೇ ಕುಡಿಯಲಿ ಕುಡಿಯದಿರಲಿ ಸರಿಯಾಗಿ ರಾತ್ರಿ ಎಚ್ಚರ ಮತ್ತು ಅದರೊಂದಿಗೆ ಸಣ್ಣ ಆತಂಕ. ರಾತ್ರಿ ಎಚ್ಚರವಾದರೆ ಮತ್ತೆ ನಿದ್ದೆಯ ಸುಳಿವು ಕೂಡಾ ಇಲ್ಲ – ಅನೇಕ ಹೊತ್ತು, ರಾತ್ರಿಯೆಂದರೆ ಅಪಾಯಕಾರಿ ಎಂದೆನ್ನಿಸಿಕೊಳ್ಳತೊಡಗಿದ್ದು ಈ ಕಾರಣಕ್ಕೆ. ಮಧ್ಯರಾತ್ರಿಯ ಹೊತ್ತಿಗೆ ಎಚ್ಚರವಾಗುವುದೆಂದರೆ ಅಂದೊಂದು ಪಿಶಾಚ ಸ್ಥಿತಿ. ಒಂದೇ ಒಂದು ನುಡಿಯು ಇಲ್ಲದ ಮನೆ ಹೊರಗಡೆ ಪ್ರಶಾಂತವಾದ ಮೌನ ಮತ್ತು ಕಂಗಾಲುಗೊಳ್ಳುವಂಥ ಸ್ಥಿತಿ. ಯಾಕೆ ಹೀಗಾಯಿತು? ಚಾರುಗೆ ಏನು ಮಾಡಿದರೂ ತಲೆಯೊಳಗೆ ಹೋಗುತ್ತಿಲ್ಲ. ದೇವವ್ರತನ ನಿಟ್ಟುಸಿರು ಎಲ್ಲಿಯೋ ತನಗೂ ಆವರಿಸಿಕೊಂಡು ಬಿಟ್ಟಿದೆಯೇನೋ ಎಂದು ಚಾರು ಯೋಚಿಸಿದವನು ಅದನ್ನು ಅಲ್ಲಿಗೆ ಬಿಟ್ಟ. ದೇವವ್ರತನ ಬಿಸಿಯುಸಿರಿಗೆ; ಅವನ ಸಾಮಿಪ್ಯಕ್ಕೆ ಹಂಬಲಿಸಿದ ಮೈಥಿಲಿಗೆ ನಾನೊಂದು ಲೆಕ್ಕವಿಲ್ಲದಿರಬಹುದು. ಆದರೆ ತಾನು ಮಾಡಬೇಕಾದುದು ಏನು ಎಂದು ತಿಳಿಯದೆ ಒದ್ದಾಡಿದ. ಹಗಲಿಡೀ ಕಂಠ ಮಟ್ಟದ ತನಕ ಕುಡಿದವನಿಗೆ; ಸಾವಿನ ಹತ್ತಿರ ಹೋಗಿ ವಾಪಾಸು ಬಂದವನಿಗೆ – ಇದ್ಯಾರ ಶಾಪ? ರಾತ್ರಿಯಿಡೀ ನಿದ್ದೆಯಿಲ್ಲದೇ ಕಾಲ ಕಳೆದು – ಹಗಲು ರಾತ್ರಿಯಾಗಲು ಕಾಯುವ ತನ್ನದು ಇದ್ಯಾವ ಪರಿ? ಜೀವ ಹಿಂಸೆಯೆಂದರೆ ಇದುವೇ. ಅಪರ ರಾತ್ರಿಯಲ್ಲಿ ಗೂಬೆಗಳನ್ನು ಹೊರತುಪಡಿಸಿದರೆ ತಾನೊಬ್ಬನು ಮಾತ್ರ ಜೀವ ಸಮೇತವಾಗಿ ಎಚ್ಚರದಲ್ಲಿದ್ದೇನೆ ಎಂದೆನ್ನಿಸಿದೆ – ಚಾರುಗೆ. ಮೈಥಿಲಿಯು ಆಡಿದ ಒಂದೊಂದೇ ಮಾತುಗಳು ಬಂದು ಒಂದೊಂದೇ ಚುಚ್ಚತೊಡಗಿತು. 'ಹೇಡಿ', 'ನಪುಂಸಕ', 'ಪಲಾಯನವಾದಿ', 'ನೀನು ಒಬ್ಬ ಗಂಡುಸಾ?' – ಮಾತುಗಳು ತಲೆಯ ಮೂಲೆಯಿಂದ ಒಂದೊಂದೇ ಹೊರಗೆ ಬಂದು ಅಣಕಿಸಿದಂತಾಯಿತು. ಜೀವವುಳಿದರೆ ಸಾಕೆಂದು ಹಂಬಲಿಸುವವರು ಹಲವರು. ಜೀವ ಹೋದರೆ ಸಾಕೆಂದು ಹಂಬಲಿಸುವವರು ಕೆಲವರು. ತನ್ನದು ಎರಡನೆಯ ಜಾತಿ, ಬದುಕಿಗೆ ಯಾವ ರೀತಿಯ ಅರ್ಥವಿಲ್ಲ ಎಂದನ್ನಿಸಿದ್ದೇ ತಡ ಚಾರು ದಿವಾನಿ ಕಾಟಿನಿಂದ ತಟ್ಟನೇ ಎದ್ದ. ಎದ್ದವನೇ

ಏನಾದರೂ ಸರಿ – ಸಾವೆನ್ನುವುದು ತನಗೊಬ್ಬ ನಿಕಟ ಸ್ನೇಹಿತನೆಂದುಕೊಂಡು ಲುಂಗಿಯನ್ನು ಫ್ಯಾನಿಗೆ ಬಿಗಿದ ಮತ್ತು ಅದನ್ನು ಉರುಳು ಮಾಡಿಕೊಳ್ಳಲು ಯತ್ನಿಸಿದ. ಉರುಳು ಮಾಡಿಕೊಂಡವನೇ ಅದನ್ನು ಕೊರಳಿಗೆ ಬಿಗಿದುಕೊಂಡ. ಚಾರುಗೆ ಸಾವು ಎನ್ನುವುದು ಒಂದು ಗೇಣು ದೂರದಲ್ಲಿತ್ತು ಮತ್ತು ಒಂದೆರಡು ಕ್ಷಣದಲ್ಲಿ ಬಂದು ಸಾವು ಅವನ ಬಿರುಕೊಡೆದ ಹೃದಯದಲ್ಲಿ ಪ್ರತಿಷ್ಠಾಪಿಸಲಿದೆ. ಅತ್ಯಂತ ಭಯಾನಕವಾದ ಮೃತ್ಯು ಅವನ ಲುಂಗಿಯ ಉರುಳಿನಲ್ಲಿ ಬಂದು ಕಾದು ಕುಳಿತಿತ್ತು. ದಿನಗಟ್ಟಲೆ; ಲೀಟರುಗಟ್ಟಲೆ ಕುಡಿದು ಹೊರಳಿ ಮಲಗಿದವನು, ಹೃದಯದಲ್ಲಿ ತುಂಬು ಭಾವನೆಗಳನ್ನು ತುಂಬಿಟ್ಟುಕೊಂಡವನು ಇನ್ನು ಒಂದೆರಡು ಕ್ಷಣದಲ್ಲಿ ಜೀವ ಕಳೆದುಕೊಳ್ಳಲಿದ್ದಾನೆ. ಕರಾಳರೂಪಿಯಾದ ಮೃತ್ಯುವು ಚಾರುವಿನ ಹತ್ತಿರ ಹತ್ತಿರ ಬಂದು ಪಿಸುಗುಟ್ಟತೊಡಗಿತು: "ಬಾ, ಮಗನೇ ಚಾರು." ಚಾರುವಿನ ಮನದಲ್ಲಿ ಮೃತ್ಯುಕೂಪಕ್ಕೆ ತೆರಳುವ ಆಸೆಯನ್ನು ಮೂಡಿಸಿದ ಮೈಥಿಲಿಯು ಬೆಡ್ ರೂಮಿನಲ್ಲಿ ಸಣ್ಣ ಗೊರಕೆ ತೆಗೆಯುತ್ತಿದ್ದಳು ಮತ್ತು ಅವಳ ಕನಸಿನಲ್ಲಿ ಶಿಬಿಯು ಮಲ್ಲಿಗೆಯ ಬಳ್ಳಿಯನ್ನು ನೆಡುತ್ತಿದ್ದ.

ಕೆಲವೇ ಕೆಲವು ಕ್ಷಣ ದಾಟಿದರೂ ಸಾಕು – ಚಾರು ಜೀವಂತ ಉಳಿಯುವುದಿಲ್ಲ. ಮೈಥಿಲಿಯ ದಾರಿಯು ಸುಗಮವಾಗಲಿದೆ. ನಾಳೆ ಮುಂಜಾವದ ಹೊತ್ತಿಗೆ – ಮೈಥಿಲಿಯು ಲೋಕದ ಕಣ್ಣಿಗೆ ಲಬೋ ಲಬೋ ಅಂತ ಹೊಡಕ್ಕೊಂಡು ಮೂರನೆಯ ದಿನ ಶಿಬಿಯ ಬೈಕಲ್ಲಿ ಓಡಾಡುವ ಸನ್ನಿವೇಶ ಬರಲಿದೆ. ಚಾರುವಿನ ಹೆಣವು ಯಾವುದೋ ಸ್ಮಶಾನ ಸೇರಲಿದೆ. ಸಂದರ್ಭವು ಅಷ್ಟು ಹತ್ತಿರ ಬಂದು ನಿಂತಿದೆ. "ಸಾವು ಅಂತಿಮ ಸತ್ಯ" ಎಂದುಕೊಂಡ. ಕಣ್ಣಿನಲ್ಲಿ ನೀರು ಜಿನುಗತೊಡಗಿತು. "ನಾನೇನು ತಪ್ಪು ಮಾಡಿದ್ದೇನೆಂದು ನನಗೀ ಉರುಳಿನ ಶಿಕ್ಷೆ" ಎಂದುಕೊಂಡು, ಕಣ್ಣೀರು ಒರಸಿಕೊಂಡು – ಉರುಳಿಗೆ ಕೊರಳು ಒಡ್ಡಿದ. ಇನ್ನೇನು ಮುಗಿಯಿತು ಚಾರುವಿನ ಚರಿತ್ರೆ!

ಒಂದೆರಡು ಕ್ಷಣ ಜಾರಿದರೂ ಸಾಕು – ಕೊರಳಿಗೆ ಉರುಳು ಹಾಕಿಕೊಂಡವನು ಕಾಲ ಕೆಳಗೆ ಇರುವ ಸ್ಟೂಲನ್ನು ಜರುಗಿಸಿದರೂ ಸಾಕು – ಅಲ್ಲಿಗೆ ಅವನ ಕತೆಯು ಮುಗಿಯಿತು. ಮತ್ತೆ ಅವನನ್ನು ಬದುಕಿಸಲು ಬ್ರಹ್ಮನೂ ಬರಲಾರ – ಯಮಪಾಶ ಸತ್ತವನ ಪ್ರಾಣಪಕ್ಷಿಯನ್ನು ಉರುಲುಹಾಕಿಕೊಂಡು ಎಳೆದುಕೊಂಡು ಹೋಗುತ್ತದೆಯೆಂದು ನಂಬುವವರು ನಂಬುತ್ತಾರೆ. ಅದನ್ನು ನಂಬದೇ ಇರುವವರು ಸತ್ತವನ ಹೆಣವನ್ನು ಕೆಳಗಿಳಿಸಿ ಬೇಕಿದ್ದರೆ ಪೋಸ್ಟ್‌ಮಾರ್ಟಂ ಮಾಡಿಸುತ್ತಾರೆ. ಇಲ್ಲವೇ ಹೃದಯಾಘಾತವಾಗಿದೆಯೆಂದು ಹೇಳಿ ಅವನ ಹೆಣವನ್ನು ಸುಡುಗಾಡಿಗೆ ಕೊಂಡೊಯ್ಯುತ್ತಾರೆ. ಸತ್ತವನ ಬಗ್ಗೆ – ಅಳುತ್ತಿರುವ ಅವನ ಹೆಂಡತಿಯ ಬಗ್ಗೆ ಅಪಾರ ಕರುಣೆಯನ್ನು ವ್ಯಕ್ತಪಡಿಸಿ ಕಣ್ಣು ತಿಕ್ಕಿಕೊಂಡು, ಸೀರೆಯ ಸೆರಗಲ್ಲೋ, ಹೆಗಲ

ಮೇಲಿರುವ ಶಾಲಲ್ಲೋ ಅಥವಾ ಕರ್ಚೀಫಿನಲ್ಲೋ ಸಿಂಬಳ ಒರೆಸಿಕೊಂಡು ಮುಂದಕ್ಕೆ ಹೋಗುತ್ತಾರೆ. ಸತ್ತವನ ಹೆಂಡತಿಯೋ, ಅವಳ ಕಡೆಯವರೋ ಸತ್ತವನ ಸಾಲ, ಎಲ್ಲೈಸಿ ಪಾಲಿಸಿ, ಅವನ ಇತರ ಉಳಿತಾಯಗಳ ಲೆಕ್ಕ ಪುಸ್ತಕದ ಪುಟವನ್ನು ಮರುದಿನವೇ ಮಗುಚತೊಡಗುತ್ತಾರೆ. ಕೊರಳಿಗೆ ಉರುಳು ಹಾಕಿಕೊಂಡು ಇನ್ನೇನು ಸಾಯಬೇಕೆಂದು ಹೊರಟ ಚಾರು ಕೆಲವೇ ಕ್ಷಣದಲ್ಲಿ ಜೀವಪಕ್ಷಿಯು ಹಾರಿಹೋಗಲಿದೆ ಎಂದು ನಿರೀಕ್ಷಿಸುತ್ತಿದ್ದ. ಆದರೆ, ಅದೇ ವೇಳೆಗೆ ಅಡುಗೆಯ ಮನೆಯಲ್ಲಿದ್ದ ಬೆಕ್ಕು ಹಾಲಿನ ಪಾತ್ರೆಯನ್ನು ತಳ್ಳಿಹಾಕಿತು. ಬೆಕ್ಕು ತಳ್ಳಿಹಾಕಿದ ಪಾತ್ರೆಯಿಂದ ತಬ್ಬಿಬ್ಬಾದ ಚಾರು ಕಾಲ ಕೆಳಗಿನ ಸ್ಟೂಲನ್ನು ಜಾರಿಸುವುದಕ್ಕೆ ಮರೆತು ದಿಙ್ಮೂಢವಾಗಿ ನಿಂತುಕೊಂಡ ಮತ್ತು ಅದೇ ವೇಳೆಗೆ ಬಂದ ಶಬ್ದದಿಂದ ಎಚ್ಚರಗೊಂಡ ಮೈಥಿಲಿಯು ಎದ್ದು ಬಂದು ನೋಡುತ್ತಾಳೆ; "ಕೊರಳಿಗೆ ಉರುಳು ಹಾಕಿಕೊಂಡು ಚಾರು ನಿಂತಿದ್ದಾನೆ – ಸ್ಟೂಲೊಂದರ ಮೇಲೆ." ಈಗ ತಬ್ಬಿಬ್ಬಾಗುವ ಸರದಿ ಮೈಥಿಲಿಯದು. ಅವಳು ಬರುವಾಗ ಕೆಲವು ಕ್ಷಣ ದಾಟಿದ್ದರೆ ಅವಳು ಚಾರುವಿನ ನೇತಾಡುವ ಬಾವಲಿಯಂತಿರುವ ಚಾರುವಿನ ಹೆಣವನ್ನು ಕಾಣುತ್ತಿದ್ದಳು. ಆ ಕಳ್ಳ ಬೆಕ್ಕು ಹಾಲು ಕುಡಿಯುವ ಅವಸರದಲ್ಲಿ ಪಾತ್ರೆಯನ್ನು ಮಗುಚಿಹಾಕಿದ್ದು – ಚಾರುವನ್ನು ಜೀವಂತವಾಗಿಯೇ ನೋಡುವಂತಾಯಿತು. ಸ್ಟೂಲಿನ ಮೇಲೆ ನಿಂತಿರುವ ಚಾರುವನ್ನು ನೋಡಿದ ಮೈಥಿಲಿಯಲ್ಲಿ ಹುಟ್ಟಿಕೊಂಡ ಹೆದರಿಕೆಯೆಂದರೆ – "ಈ ಮನುಷ್ಯ ಜೇಬಲ್ಲಿ ಏನಾದರೂ ಚೀಟಿ ಇಟ್ಟುಕೊಂಡು ಸತ್ತರೆ ತಾನು ಜೈಲಲ್ಲಿ ಕೊಳೆಯಬೇಕಾಗುತ್ತದೆ." ಅವಳು ಭಯಗೊಂಡಿದ್ದು ಅದಕ್ಕೆ: ಎಲ್ಲಿ ತನ್ನ ಸ್ಥಾನ–ಮಾನ ಹೊರಟುಹೋಗಿ ಬೇಡಿ ಹಾಕಿಸಿಕೊಂಡು ಹೋಗಲೇ ಬೇಕಾಗುತ್ತದೆಯೇನೋ? "ಚಾರು, ಪ್ಲೀಸ್ ಇಳಿಯಿರಿ" ಅಂದಳು ಮೈಥಿಲಿ. ಮೈಥಿಲಿಯು ಕಂಗಾಲು ಆಗಿರುವುದು ಅವಳ ಮಾತಿನಲ್ಲಿ ಸ್ಪಷ್ಟವಾಗಿ ವ್ಯಕ್ತವಾಯಿತು. ಚಾರು ಅವಳ ಮುಖವನ್ನೊಮ್ಮೆ ನೋಡಿದ. ಸಾವಿನ ಹತ್ತಿರವಾಗಿ ಹೊರಟ ತನ್ನನ್ನು ತಡೆಯುತ್ತಿರುವ ಮೈಥಿಲಿಯ ಉದ್ದೇಶವಾದರೂ ಸ್ಪಷ್ಟ: ಅದು ಸಾಯಬಾರದು ಎಂಬುದು ಅವಳ ಗುರಿಯಲ್ಲ. ಆದರೆ ಅವಳ ಸ್ಥಾನ–ಮಾನಕ್ಕೆ ಕುಂದಾಗಬಾರದು. ಸಾಯಲು ಹೊರಟ ತನ್ನನ್ನು ತಡೆಯಲು ಹೊರಟ ಅವಳ ಮಾತಿನಲ್ಲಿ ಸಣ್ಣ ನಾಟಕೀಯತೆಯ ಧ್ವನಿಯು ಹಣಿಕಿಕ್ಕಿದ್ದು ಚಾರುವೂ ಕೂಡಾ ಗಮನಿಸಿದ. ಆದರೆ ಪುನಃ ನಾನು ಈ ಕೊರಳಿಗೆ ಹಾಕಿಕೊಂಡ ಉರುಳನ್ನು ತೆಗೆಯದೆ ಸ್ಟೂಲನ್ನು ದೂಕಿಬಿಟ್ಟರೆ – ಮೈಥಿಲಿಯು ಬದುಕಿಸುವ ಪ್ರಯತ್ನವಂತೂ ಮಾಡುತ್ತಾಳೆ. ಅದರಿಂದ ಬೇರೆ ಯಾವ ಉಪಯೋಗವೂ ಇಲ್ಲ. ಚಾರು ಕೊರಳಿಗೆ ಹಾಕಿಕೊಂಡ ಉರುಳನ್ನು ಬಿಡಿಸಿಕೊಂಡ ಮತ್ತು ತುಂಬಾ ಬಸವಳಿದಂತೆ, ಏನೂ ಮಾಡಲು ಸಾಧ್ಯವಾಗದಂತೆ ನೆಲದ ಮೇಲೆ ಉರುಳಿಕೊಂಡ. ಮೈಥಿಲಿಯ ಮುಖವು ನಿಸ್ತೇಜವಾಗಿತ್ತು – ಬಿಸಿ ನೀರಲ್ಲಿ ಅದ್ದಿ ತೆಗೆದ ಕೆಂಪು ಗುಲಾಬಿ ಹೂವಿನಂತೆ. ಆ

ಕ್ಷಣ ಮಾತ್ರ ನಿಜವಾಗಿಯೂ ಆ ಇಬ್ಬರಿಗೂ ರಾತ್ರಿಯೆನ್ನುವುದು ಕರಾಳವಾಯಿತು. ತನ್ನ ಇಡಿಯ ಮನಸ್ಸನ್ನು ಮೈಥಿಲಿಯು ಹಿಂಡಿ ಹಿಂಡಿ ಹಿಪ್ಪೆ ಮಾಡಿ ಹಾಕಿದ್ದಾಳೆ ಎಂದು ಚಾರು ಭಾವಿಸಿದರೆ, ಅದೇ ಸಮಯ ಮತ್ತೆ ಬೆಡ್ ರೂಮಿಗೆ ತೆರಳಿದ. ಮೈಥಿಲಿಯು ಅನಗತ್ಯವಾಗಿ ಚಾರುವನ್ನು ಕೊಂದ ಪಾಪವೊಂದು ನನಗಂಟಿಕೊಂಡು ಜೀವನವಿಡೀ ಪೀಡಿಸುತ್ತಿತ್ತಲ್ಲಾ ಎಂದು ಭಾವಿಸಿಕೊಂಡಳು. ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಹೊರಟ ಚಾರುವಿನ ಬಗ್ಗೆ ಮತ್ತಷ್ಟು ಅಸಹ್ಯವೆನಿಸಿತೇ ಹೊರತು ಬೇರೇನೂ ಅನಿಸಲಿಲ್ಲ.

ಒಮ್ಮೆ ಬದುಕಬೇಕೆಂಬ ಹಂಬಲ, ಮತ್ತೊಮ್ಮೆ ಮನದ ಕೊನೆಯ ಮೂಲೆಯಲ್ಲಿ ಬಂದು ಇಣುಕಿ ನೋಡುವ ಸಾವು – ಈ ಎರಡರ ಸಂಘರ್ಷದಲ್ಲಿ ಚಾರು ನೆಲದ ಮೇಲೆ ಒರಗಿದವನು ಅಲ್ಲಿಯೇ ಹೊರಳಾಡಿದ ಬೆಳಗಾಗುವ ತನಕ. ಬೆಳಗು ಮೂಡುವ ಹೊತ್ತಿಗೆ ಚಾರುವಿನ ಕಣ್ಣು ಕೆಂಪಾಗಿತ್ತು – ಉರಿಯುತ್ತಲೇ ಇರುವ ಕೆಂಡದಂತೆ.

ಅದೇ ಬೆಳಗಿನ ಸೂರ್ಯನ ಕಿರಣಗಳು ಜೆಸಿಂತಾ ಬಾಯಿಯ ಮನೆಯಂಗಳಕ್ಕೆ ಬೀಳುವ ಮೊದಲೇ ಜೆಸಿಂತಾಬಾಯಿಗೆ ಎಚ್ಚರವಾಯಿತು. ಜೆಸಿಂತಾ ಬಾಯಿಯನ್ನೇ ಗಟ್ಟಿಯಾಗಿ ಹಿಡಿದುಕೊಂಡು ಮಲಗಿದ ರೇಖಾಪಿಂಟೋಳ ಕೈಯನ್ನು ನಿಧಾನವಾಗಿ ಸರಿಸಿ, ಜೆಸಿಂತಾ ಬಾಯಿ ಎದ್ದರು. ರಾತ್ರಿಯಿಡೀ ಅರೆ ಮಂಪರು ನಿದ್ದೆ. ರೇಖಾ ರಾತ್ರಿಯಿಡೀ ಹೆದರಿಕೊಂಡು ಕನವರಿಸಿಕೊಳ್ಳುತ್ತಿದ್ದಳು. ಅವಳ ಕನವರಿಕೆಯೊಂದು ಕಡೆ, ಮತ್ತೊಂದು ಕಡೆ ಹೊರಗಡೆ ಮೆಟ್ಟಿಲಲ್ಲಿ ಮಲಗಿರುವ ಪ್ರಸನ್ನ ಎಷ್ಟೊತ್ತಿಗೆ ಗಲಾಟೆ ಮಾಡುತ್ತಾನೋ ಎಂಬ ಭಯ – ಈ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ ಜೆಸಿಂತಾಬಾಯಿ ಮುಂಜಾವದ ಮಂಪರು ನಿದ್ದೆಯಿಂದಲೇ ಎದ್ದುಕುಳಿತರು. ಅವರ ಕಣ್ಣು ಕೆಂಪಾಗಿತ್ತು – ಅದೇ ಸೂರ್ಯಾಸ್ತದ ವೇಳೆ ಆಕಾಶವು ಕೆಂಪಾಗುವ ರೀತಿಯಲ್ಲಿ, ಜೆಸಿಂತಾಬಾಯಿ ಎದ್ದು ಕುಳಿತವರು ಅವಸರಿಸಿಕೊಂಡೇ ಬಂದು ಕಿಟಕಿಯಿಂದ ಇಣಕಿನೋಡಿದರು. ಪ್ರಸನ್ನ ಮೆಟ್ಟಿಲ ಮೇಲೆ ಮಲಗಿ ಅಲ್ಲಿಯೇ ನಿದ್ದೆ ಹೊಡೆಯುತ್ತಿದ್ದ. "ಈ ಅಸಾಮಿ ಪೂರ್ಣ ಬೆಳಗಾಗುವ ತನಕ ಏಳಲಾರ" ಎಂದುಕೊಂಡೇ ಜೆಸಿಂತಾ ಬಾಯಿ ಬಚ್ಚಲು ಮನೆಯತ್ತ ನಡೆದರು!

ಚಾರು ಎದ್ದು ತಾನೇ ಟೀ ಮಾಡಿಕೊಂಡು ಕುಡಿದು ಸಿಗರೇಟು ಹಚ್ಚಿದ ಮೇಲೆ ಮೈಥಿಲಿಯು ಎದ್ದುಕೂತು ಆಕಳಿಸಿದಳು. ಯಾವುದೇ ರೀತಿಯ ಅವಸ್ಥಾಂತರಗಳಿಗೂ ತನಗೂ ಸಂಬಂಧವಿಲ್ಲದಂತೆ! ಮತ್ತು ದಿನನಿತ್ಯದಂತೆ ಕಚೇರಿಗೆ ಹೊರಡಲು ಬೇಕಾದ ಸಿದ್ಧತೆಯನ್ನು ನಡೆಸತೊಡಗಿದಳು – ಚಾರು ಎಂಬ ಮನುಷ್ಯನೊಬ್ಬ ಮನೆಯಲ್ಲಿ ಇದ್ದರೂ ಲೆಕ್ಕಕ್ಕಿಲ್ಲದಂತೆ. ಚಾರುಗೂ ಅದು ಅರ್ಥವಾಗಿದೆ. ಆದರೆ, ನಿನ್ನೆಯಿಡೀ ದಿನ ಕುಡಿದುದರ ಪರಿಣಾಮ ಸಣ್ಣಗೆ ಬಂದು ತಾಗಿದ ತಲೆನೋವು. ಯಾವುದಕ್ಕೂ ಇಲ್ಲದೆ

ತಣ್ಣಗೆ ಆವರಿಸಿಕೊಂಡ ನಿರುತ್ಸಾಹ. ಯಾಂತ್ರಿಕವಾಗಿ ಮತ್ತು ಮೌನವಾಗಿ ಗಂಡ-ಹೆಂಡಿರಿಬ್ಬರು ತಂತಮ್ಮ ಕೆಲಸದಲ್ಲಿ ತೊಡಗಿದರು. ಬೆಳಗಾಯಿತು ಎಂದರೆ ಮತ್ತೆ ಎಷ್ಟು ಹೊತ್ತು - ಕಚೇರಿಗೆ ಹೊರಡಲು, ಕಚೇರಿಗೆ ಹೊರಡುವಾಗ ಯಾವತ್ತೂ ಲೂನಾ ಕೊಂಡೊಯ್ಯದ, ಆದರೆ ಸಂಜೆ ಹತ್ತಿರ ಅಲ್ಲಿ-ಇಲ್ಲಿ ಓಡಾಡುವಾಗ ಮಾತ್ರ ಲೂನಾ ಕೊಂಡೊಯ್ಯುವ ಮೈಥಿಲಿ ಬೆಳಗಿನ ಹೊತ್ತು - ಯಾವತ್ತಿಗಿಂತ ಬೇಗನೆ ಕಚೇರಿಗೆ ಹೊರಟಳು - ಲೂನಾದ ಮೇಲೇರಿ. ಯಾಕೆ ಈ ರೀತಿಯ ಹೊಸ ಪರಿಯೆಂದು ಚಾರುಗೆ ಗೊತ್ತಾಗಲಿಲ್ಲ ಮತ್ತು ಚಾರು ಅಂಥ ವಿಷಯವನ್ನು ಮನಸ್ಸಿಗೆ ತಂದುಕೊಳ್ಳಲೇಬಾರದು ಎಂದುಕೊಂಡ. ಬಚ್ಚಲು ಮನೆಯಲ್ಲಿ ಸತತವಾಗಿ ತಣ್ಣೀರಿನ ಧಾರೆಯೆರೆದ ಮೇಲೆ ಸ್ವಲ್ಪಮಟ್ಟಿಗೆ ತಾನು ಫ್ರೆಶ್ ಆಗಿದ್ದೇನೆ ಎಂದನ್ನಿಸಿತು. ಮನಸ್ಸಿಗೆ ಕೊಂಚ ಮಟ್ಟಿಗೆ ಆರಾಮವೆನ್ನಿಸಿತು.

ಮತ್ತು ಅದೇ ವೇಳೆಗೆ ಜೆಸಿಂತಾ ಬಾಯಿಯ ಮನೆಯ ಎದುರು ಮೆಟ್ಟಿಲಲ್ಲಿ ಮಲಗಿದ್ದ ಪ್ರಸನ್ನ ಎಚ್ಚರಗೊಂಡು ಎದ್ದು ಕುಳಿತ. ತಾನು ಇಷ್ಟು ಹೊತ್ತು ಮಲಗಿದ್ದ ಜಾಗ - ಜೆಸಿಂತಾ ಬಾಯಿಯ ಮೆಟ್ಟಿಲಲ್ಲಿ ಎಂದು ತಿಳಿದಾಗ ಸಣ್ಣನೆಯ ನಾಚಿಕೆಯೊಂದು ಆವರಿಸಿತು ಮತ್ತು ತಲೆ ತಗ್ಗಿಸಿಕೊಂಡು ಅವನು ಹೊರಟು ಹೋದುದನ್ನು ಜೆಸಿಂತಾಬಾಯಿ ನೋಡಿದ ಮೇಲೆಯೇ - ಬಾಗಿಲನ್ನು ತೆರೆದರು. ಆದರೆ, ಸ್ವಲ್ಪ ದೂರ ಹೋದ ಪ್ರಸನ್ನ ಮಾತ್ರ ಜೆಸಿಂತಾಬಾಯಿಯ ಮನೆಯ ಕಡೆಗೊಮ್ಮೆ ತಿರುಗಿ ನೋಡಿದ. ಆ ನೋಟ ಮಾತ್ರ ಸಹಜವಾದುದಾಗಿರಲಿಲ್ಲ! ಅದಕ್ಕೆ ಸಾವಿರಾರು ರೀತಿಯ ಅರ್ಥಗಳಿದ್ದವು. ಅವನ ಕಣ್ಣೇ ಹೇಳಿದೆ; "ಬಿಡಲಾರೆ, ಮತ್ತೊಮ್ಮೆ ಬರುವೆ. ಇನ್ನು ನಿಮ್ಮ ನೆಮ್ಮದಿಯ ದಿನಗಳು ಮುಗಿದವು ಮತ್ತು ರೇಖಾಳ ತುಟಿಯಲ್ಲಿ ಇನ್ನು ನಗು ಅರಳುವುದಿಲ್ಲ. ಕಣ್ಣಿನ ರೆಪ್ಪೆಗೆ ಹಚ್ಚಿಕೊಳ್ಳುವ ಕಾಡಿಗೆ (ಕಪ್ಪು) ಮುಖವನ್ನೇ ಕಪ್ಪು ಮಾಡಲಿದೆ." ರೇಖಾಳ ಮುಖ ತುಂಬಾ ತುಂಬಿಕೊಳ್ಳಲಿರುವ ಕಪ್ಪು ಹಣೆಯಲ್ಲಿ ಮೂಡಲಿರುವ ಗೆರೆಗಳನ್ನು ಒರೆಸಲು ಯಾರೂ ಬರಲಾರರು. ಈ ದಿನವೇ ಕಟ್ಟಕಡೆಯ ದಿನ - ರೇಖಾಳ ಕಣ್ಣಲ್ಲಿ ಇನ್ನು ಬರುವುದು ಕೇವಲ ಕಣ್ಣೀರು. ಅದೇ ಕಣ್ಣೀರನ್ನು ಕುಡಿದು ಅವಳು ಬದುಕಲಿದ್ದಾಳೆ. ಆ ಬದುಕು ಮಾತ್ರ ಶಾಶ್ವತವಾಗಿ ಶಾಪಗ್ರಸ್ತವಾದುದು. ಅದರಿಂದ ಬಿಡುಗಡೆಯಿಲ್ಲ. ಇನ್ನೊಬ್ಬ ಗಂಡಸಿನ ನೆರಳು ಕೂಡಾ ಇವಳ ಮೈಮೇಲೆ ಬೀಳಬಾರದು, ಬೀಳಲಾರದು. ಪ್ರಸನ್ನ ಒಮ್ಮೆ ತಿರುಗಿ ನೋಡಿ ಹೀಗೆ ಯೋಚಿಸಿದವನೇ ಮುಂದಕ್ಕೆ ಹೆಜ್ಜೆ ಹಾಕಿದ. ಅವನ ಮುಖದಲ್ಲಿ ಬೆಳಗಿನ ಶುಭ್ರತೆಯಿರಲಿಲ್ಲ. ಕತ್ತಲೆಯ ರಾಹು ಬಂದು ಅವನ ಮುಖವನ್ನು ಆವರಿಸಿಕೊಂಡಂತೆ ಇತ್ತು. ಅವನ ಲೆಕ್ಕಾಚಾರ ಕೇವಲ ಅವನಿಗೆ ಮಾತ್ರವೇ ಸಲ್ಲುವಂತಿತ್ತು. ಜಗತ್ತಿನ ಯಾರಿಗೂ ಅವನ ಲೆಕ್ಕಾಚಾರ ಬೇಕಿರಲಿಲ್ಲ! ಅವನ ಹೆಂಡತಿ ರೇಖಾಗೆ ಅಥವಾ ರೇಖಾಪಿಂಟೋಳ ಆತ್ಮೀಯ ಚಾರುಗೆ ಕೂಡಾ ಮುಂದಿನದು ಗೊತ್ತಿರಲಿಲ್ಲ .

ಯಾವ ರೀತಿಯ ಕ್ರಮವನ್ನು ಬೇಕಿದ್ದರೂ ತೆಗೆದುಕೊಳ್ಳಬಹುದು

– ೭ –

ಸಣ್ಣಗೆ ನರಳಿದ ನಾಗೇಶ. ನೋವು ಅಸಾಧ್ಯವೆಂದೆನ್ನಿಸಿತು. ಆ ನೋವು ತಡೆಯಲು ಅವನಿಗೆ ಅಸಾಧ್ಯವೆಂದನ್ನಿಸಿ, "ಸಿಸ್ಟರ್" ಎಂದು ಕೂಗಿದ. ನಾಗೇಶನಿಗೆ ಮೈ–ಕೈಗೆ ನೋವಾಗಿದ್ದರೂ – ಮನಸ್ಸು ಮಾತ್ರ ಖುಶಿಯಲ್ಲಿಯೇ ತೇಲಾಡುತ್ತಿತ್ತು. ಯಾವ ಉದ್ದೇಶಕ್ಕಾಗಿ ಒಂದು ಕೆಲಸ ಶುರು ಮಾಡಿದನೋ ಅದು ನಗರದ ಉದ್ದಗಲಕ್ಕೂ ವ್ಯಾಪಿಸಿಕೊಂಡಿದೆ – ಮನುಷ್ಯನ ದೇಹದಲ್ಲಿ ವಿಷವೇರುವಂತೆ ಒಮ್ಮೆ ನರಮಂಡಲವಿಡೀ ವ್ಯಾಪಿಸಿಕೊಂಡ ವಿಷವನ್ನು ಇಳಿಸುವುದು ಕಷ್ಟ. ಅದೇ ರೀತಿಯಲ್ಲಾಯಿತು. ನಾಗೇಶನಿಗೆ ಮಲಗಿದಲ್ಲಿಗೆ ವ್ಯಾಪಕವಾದ ಪ್ರಚಾರವೂ ಸಿಕ್ಕಿತು. ಅವನಿಗೆ ಗೊತ್ತೇ ಇಲ್ಲದಂತೆ ಅವನಿಗೆ ದೊರಕಿದ ಪ್ರಚಾರದಿಂದ ಸಂತೃಪ್ತನಾದವನು ಇನ್ನು ಅಡ್ಡಿಯಿಲ್ಲ ಎಂದು ಭಾವಿಸಿಕೊಂಡ. ಹಾಗೆ ಭಾವಿಸಿಕೊಂಡು ಎದ್ದು ಕೂರಲು ಯತ್ನಿಸಿದವನಿಗೆ ನೋವುಂಟಾಗಿಯೇ ನರಳಿದ ಮತ್ತು ಇನ್ನು ಅಸಾಧ್ಯವೆಂದನ್ನಿಸಿ "ಸಿಸ್ಟರ್" ಎಂದು ಕರೆದಿರುವುದು. ಅವನು ಸಿಸ್ಟರ್ ಎಂದು ಕರೆದಿರುವುದು – ವಾರ್ಡ್‌

ಹೊರಗಿನ ಚೆಯರೊಂದರಲ್ಲಿ ಕುಳಿತು ಕಾದಂಬರಿಯೊಂದನ್ನು ಓದುತ್ತಿದ್ದ ಸಿಸ್ಟರ್‌ಗೆ ತಿಳಿಯಲಿಲ್ಲ. ಪುನಃ ನಾಗೇಶ "ಸಿಸ್ಟರ್" ಎಂದು ಕರೆದ. ಆದರೆ ಅವನು ಕರೆದ ಧ್ವನಿಯು ಕ್ಷೀಣವಾಗಿತ್ತು ಅಥವಾ ಕಾದಂಬರಿಯನ್ನು ಓದುತ್ತಿದ್ದ ಸಿಸ್ಟರ್ ಅದರಲ್ಲಿಯೆ ಮಗ್ನವಾಗಿದ್ದು ಕಾರಣವೋ ತಿಳಿಯದು. ಆದರೆ, ಅವಳು ಓದುತ್ತಿದ್ದ ಕಾದಂಬರಿಯ ಹೆಸರು – 'ಮಾಟಗಾತಿ' ಮತ್ತು ಆ ಕಾದಂಬರಿಯನ್ನು ಓದುತ್ತಿದ್ದ ಸಿಸ್ಟರ್‌ನ ಹೆಸರು ಜುಬೇದಾ. ಆ ತಿಳಿವು ಮಹಾನ್ ಆಕಾಂಕ್ಷಿಯಾದ ಬೆಲ್ಟ್ ನಾಗೇಶನಿಗೆ ಬೇಕಿರಲಿಲ್ಲ. ಅದೇ ಹೊತ್ತಿಗೆ ಅಲ್ಲಿಗೆ ಬಂದಿರುವುದು – ತಂದೆ ವೇದಬ್ರಹ್ಮಶೇಷಶಾಸ್ತ್ರಿಗಳು. ತಾಯಿ ವಿಶಾಲಾಕ್ಷಮ್ಮ. ಅದರ ನಡುವೆ ಮಗನ ಮೇಲಿನ ಎಲ್ಲಾ ರೀತಿಯ ವ್ಯಾಮೋಹಗಳಿಗೂ ತಿಲಾಂಜಲಿಯನ್ನು ಕೊಟ್ಟ ಶೇಷ ಶಾಸ್ತ್ರಿಗಳು ಮಾತ್ರ ಯಾವುದೇ ಕಾರಣದಿಂದ ಮಗನನ್ನು ನೋಡಲು ಬಂದಿರಲಿಲ್ಲ. ಸುದ್ದಿಗಳು ಸಾವಿರ ರೀತಿಯಲ್ಲಿ ಹಾರಾಡಿದ ಮೇಲೂ ಇರುವ ಒಬ್ಬನೇ ಮಗ ಹೀಗಾದನಲ್ಲ ಎಂಬ ಬೇಸರದಿಂದಾಗಿ ಎಲ್ಲಾ ಭಾರವನ್ನು ಆ ಮಹಾಗಣಪತಿಗೆ ಹಾಕಿ ಸುಮ್ಮನಾದವರು. ಯಾಕೆ ಈ ರಂಪಾಟ, ತಂದೆಗೆ ತಕ್ಕ ಮಗನಲ್ಲನೆಂಬುದು ಅವರಿಗೆ ಯಾವತ್ತೋ ಅನಿಸಿತ್ತು ಮತ್ತು ಮಗನೆಂಬ ವ್ಯಾಮೋಹವನ್ನು ಇಟ್ಟುಕೊಂಡು ಇವನನ್ನು ತಿದ್ದುವುದು ಸಾಧ್ಯವಿಲ್ಲ ಎಂದು ತಿಳಿದುಕೊಂಡವರು ನಾಗೇಶನನ್ನು ನೋಡಲು ಮೊದಲಬಾರಿಗೆ ಬಂದರು. ಯಾಕೆಂದರೆ ಮನೆಯಲ್ಲಿ ಒಂದೇ ಸಮನೆ ಕಣ್ಣೀರು ಸುರಿಸುತ್ತಿದ್ದ ಧರ್ಮಪತ್ನಿಯ ಅಳುವನ್ನು ನೋಡಲಾಗದೆ ವೇದಬ್ರಹ್ಮ ಶೇಷಶಾಸ್ತ್ರಿಗಳು ಬರುವಾಗಲೇ – ಬೆಲ್ಟ್ ನಾಗೇಶ ಒಂಚೂರು ನಿಂತು ಕಾಡಿ ಸಿಸ್ಟರ್ ಎಂದು ಕರೆದಿದ್ದು. ಆದರೆ, ಸಿಸ್ಟರ್ ಜುಬೇದಾಗೆ ಇಹದ ಪರಿವೆಯಿಲ್ಲ. ಮಾಟಗಾತಿ ಕಾದಂಬರಿಯಲ್ಲಿ ಅವಳು ತನ್ಮಯವಾಗಿದ್ದಳು ಮತ್ತು ಅದೇ ವೇಳೆಗೆ ಶೇಷಶಾಸ್ತ್ರಿಗಳು ವಾರ್ಡಿನೊಳಗೆ ಪ್ರವೇಶಿಸಿದರು. ಅವರು ವಾರ್ಡಿನೊಳಗೆ ಪ್ರವೇಶಿಸುವಾಗ ಗಡಿಬಿಡಿಗೊಂಡು ಎದ್ದು ನಿಂತಳು ಜುಬೇದಾ. ನಾಗೇಶ ಯಾರು, ಏನು, ಎತ್ತ ಎಂಬುದನ್ನು ತಿಳಿಯದೇ ಅವನನ್ನು ಒಬ್ಬ ಪೇಶಂಟ್ ಎಂದು ತಿಳಿದವಳು, ನಾಗೇಶನ ಯಾವ ಹಿನ್ನೆಲೆಯೂ ಅವಳಿಗೆ ಗೊತ್ತಿಲ್ಲ ಮತ್ತು ಜುಬೇದಾಗೂ ಅದು ಮುಖ್ಯವಲ್ಲ. ಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ಅಷ್ಟೊಂದು ಗಂಭೀರವಾಗಿ ಓದಿದವಳಲ್ಲ ಮತ್ತು ಈ ನಾಗೇಶ ಯಾರಾದರೆ ತನಗೇನು – ಆಸ್ಪತ್ರೆಗೆ ಸೇರುವಾಗಲೂ ನಾಗೇಶ ಹಿಟ್ಟಿನ ಮುದ್ದೆಯಂತಾಗಿದ್ದ. ಶೇಷಶಾಸ್ತ್ರಿಗಳು ಬರುವಾಗ ಜುಬೇದಾ ಬಂದವಳು ಪೇಶಂಟ್ ನಾಗೇಶನನ್ನು ನೋಡಿದಳು ಮತ್ತು ನಾಗೇಶನ ತಂದೆ ಶೇಷಶಾಸ್ತ್ರಿಗಳನ್ನು ನೋಡಿದಳು. ಅದರಾಚೆಗೆ ಅವಳೇನು ಯೋಚಿಸಲು ಹೋಗುವ ಹುಡುಗಿಯಲ್ಲ – ನಾಗೇಶನ ಹತ್ತಿರ ಬಂದವಳೇ "ಏನಾದರೂ ಬೇಕಾ?" ಎಂದು ಕೇಳಿದಳು. "ಇಡೀ ಮೈ–ಕೈ ನೋವು" ಎಂದು ಹೇಳುತ್ತಾ ನರಳಿದ ನಾಗೇಶ. ಸಾತ್ವಿಕ ಜೀವಿ ಶೇಷಶಾಸ್ತ್ರಿಗಳಿಗೆ ಮಗನ

ಅವಸ್ಥೆಯನ್ನು ನೋಡಿದ ಮೇಲೆ ಅನಿಸಿತು; "ಇವನಿಗ್ಯಾಕೆ ಈ ಉಸಾಬರಿ?" ಆದರೆ, ನಾಗೇಶ ಏನು ಹೇಳಿದರೂ ಕೇಳುವವನಲ್ಲ. ಅವನಿಗೆ ಅದರ ಅಗತ್ಯವಿಲ್ಲ. ಅವನೆದುರು – ಅವನೇ ಕಟ್ಟಿಕೊಂಡ ದೊಡ್ಡ ಮಹತ್ವಾಕಾಂಕ್ಷೆಯಿದೆ. ಬೃಹತ್ತಾದ ಆಸೆಯೊಂದರಲ್ಲಿ ಅವನು ಮುಂದೆ ಉಸಿರಾಡಬೇಕಿದೆ. ಸಿಸ್ಟರ್ ಜುಬೇದಾಳನ್ನು ನೋಡಿ "ಅಮ್ಮಾ ತಾಯಿ, ಇವನನ್ನು ಯಾವತ್ತು ಕರೆದುಕೊಂಡು ಹೋಗಬಹುದು?" ಜುಬೇದಾ, "ಇನ್ನೊಂದೆರಡು ದಿನಗಳಲ್ಲಿ ಇವರನ್ನು ಡಿಸ್ಚಾರ್ಜು ಮಾಡಬಹುದು, ಯಾವುದಕ್ಕೂ ಡಾಕ್ಟರರು ಬರಲಿ" ಎಂದಳು. ಅವಳ ಮುಗ್ಧವಾದ ಮುಖವನ್ನು ನೋಡುತ್ತಲೇ ಶೇಷಶಾಸ್ತ್ರಿಗಳು, "ದೊಡ್ಡ ಉಪಕಾರ ಮಾಡಿದಿರಿ ತಾಯಿ" ಎಂದರು. ಶೇಷ ಶಾಸ್ತ್ರಿಗಳು ಹೇಳಿರುವ ಕೃತಜ್ಞತೆಯು ಅವರ ಸೌಜನ್ಯ ಮತ್ತು ವಿಶ್ವಾಸದ ಪ್ರತೀಕವಾಗಿತ್ತು. ಜುಬೇದಾ – "ನೀವು ಹಿರಿಯರು, ನಾವು ವಯಸ್ಸಿನಲ್ಲಿ ಕಿರಿಯರು, ನೀವು ಹಾಗೆಲ್ಲಾ ಅನ್ನಬಾರದು. ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದಕ್ಕೆ ನೀವು ಹೀಗೆಲ್ಲಾ ಅನ್ನಬಾರದು" ಎಂದಳು. ತನ್ನ ಕೆಲಸದ ಬಗೆಗಿನ ನಿಷ್ಠೆಯೇ ಅಲ್ಲಿ ವ್ಯಕ್ತವಾಯಿತು ವಿನಃ ಬೇರಾವುದೂ ಅಲ್ಲ! ಶಾಸ್ತ್ರಿಗಳು ಕೂಡಾ ತಮ್ಮ ಹಿರಿತನವನ್ನು ತಮ್ಮ ವಿಶ್ವಾಸವನ್ನು ಉಳಿಸಿಕೊಂಡಿದ್ದರು. ಶಾಸ್ತ್ರಿಗಳಿಗೆ ಕೊರಗನ್ನು ತಂದಿತ್ತವನು ನಾಗೇಶ. ಸಂಕ್ಷಿಪ್ತವಾದ ಪುಟ್ಟ ಮಾತಿನಲ್ಲಿಯೇ ತಂಪೆರೆದವಳು ಜುಬೇದಾ. ನೋವಿನಿಂದ ನರಳುತ್ತಿದ್ದವನು ನಾಗೇಶ. ನಾಗೇಶನ ಬಾಯಿಗೆ ಮಾತ್ರೆ ನುಂಗಿಸಿ, ನೀರು ಕುಡಿಸಿ ಜುಬೇದಾ ಹೊರಟುಹೋದಳು. "ತುಂಬಾ ಒಳ್ಳೆಯ ಹುಡುಗಿ" ಎಂದು ಶಾಸ್ತ್ರಿಗಳು ಅಂದರು. ನಾಗೇಶನ ಕಿವಿಗೂ ಅದು ಬಿತ್ತು. ಅದರ ಬಗೆಗೆ ಯೋಚಿಸುವುದಕ್ಕಿಂತ ಮುಂಚಿತವಾಗಿ ತಾನು ಮುಂದೇನು ಮಾಡಬೇಕು ಎಂಬುದರ ಬಗೆಗೆ ಯೋಚಿಸುತ್ತಿದ್ದ. ಮಗನನ್ನು ಸ್ವಲ್ಪ ಹೊತ್ತು ನೋಡಿ ಅನಂತರ ಮೌನವಾಗಿ ಹೊರಟುಹೋದರು. ಮಗನ ಲೆಕ್ಕಾಚಾರ ಮತ್ತು ತಂದೆಯ ಲೆಕ್ಕಾಚಾರ ಸರಿಬರುತ್ತಿರಲಿಲ್ಲ. ತಾಳೆ ಸರಿಬರದ ಲೆಕ್ಕಾಚಾರವೊಂದರಲ್ಲಿ ತಂದೆ–ಮಗ ಹೊರಟರು. ಒಬ್ಬರ ಲೆಕ್ಕಾಚಾರಕ್ಕೂ ಮತ್ತೊಬ್ಬನ ಲೆಕ್ಕಾಚಾರಕ್ಕೆ ಪರಸ್ಪರ ದೊಡ್ಡ ಅಂತರವಿತ್ತು. ಅದು ಕೂಡಿ ಬರುವುದಕ್ಕಿಂತ ಹೆಚ್ಚಾಗಿ ಬೇರೆ ದಿಕ್ಕುಗಳಿಗೆ ಹೊರಟುಹೋಯಿತು. ಆದರೆ, ಮಗನ ಬಗ್ಗೆ ಹೊಟ್ಟೆ ತುಂಬುವಷ್ಟು ವ್ಯಥೆಯಿಂದ ಕೊರಗಿದರು ಶಾಸ್ತ್ರಿಗಳು. ಶಾಸ್ತ್ರಿಗಳ ದಿಕ್ಕು ದಕ್ಷಿಣವಾದರೆ ಮಗ ನಾಗೇಶನ ದಿಕ್ಕು ಪಶ್ಚಿಮವಾಯಿತು. ಕೈಹಿಡಿದ ಗಂಡನಿಗೆ ಎರಡು ಮಾತಾಡದ ವಿಶಾಲಾಕ್ಷಮ್ಮ ಕರುಳ ಬಳ್ಳಿಯ ಕೂಸು ನಾಗೇಶನಿಗೂ ಹೇಳದಾದರು. ಉನ್ಮತ್ತನಂತೆ ಹೊರಟವನು ನಾಗೇಶ. ಅವನದು ಔನ್ನತ್ಯಕ್ಕೆ ಹಂಬಲಿಸುವ ಅಗ್ನಿಯ ಜ್ವಾಲೆ. ತಂದೆ ಶೇಷ ಶಾಸ್ತ್ರಿಯ ಗುಣವೆಂದರೆ ವರುಣ ಸದೃಶವಾದುದು. "ಸರ್ವೇ ಜನಃ ಸುಖಿನೋಭವಂತು"(ಸರ್ವ ಜನರೂ ಸುಖವಾಗಿರಲಿ) ಎಂದು ಹಂಬಲಿಸುವ

ನಿಸ್ವಾರ್ಥಿ. ಕಡಲಿನ ಅಬ್ಬರದ ನಡುವೆಯೂ ಪ್ರಶಾಂತವಾಗಿ ಉಳಿಯಬಹುದಾದ ಸ್ವಭಾವ.

ಹುಣ್ಣಿಮೆ ಮತ್ತು ಅಮವಾಸ್ಯೆಯ ನಡುವಣ ಅಂತರ ಹೆಚ್ಚೆಂದರೆ ಎಷ್ಟಿರಬಹುದು? ಹುಣ್ಣಿಮೆ ಮೊದಲು ಹುಟ್ಟಿತೋ ಅಮವಾಸ್ಯೆಯು ಮೊದಲು ಹುಟ್ಟಿತೋ ಅದು ತಿಳಿಯದು. ಹುಣ್ಣಿಮೆ ಮತ್ತು ಅಮವಾಸ್ಯೆಯರ ನಡುವೆ – ಸವತಿಯರ ನಡುವಣ ಜಗಳದ ನಡುವೆ ಹಣ್ಣಾದ ಗಂಡಸಿನಂತೆ ಚಂದ್ರ; ಒಮ್ಮೆ ಪೂರ್ಣ – ಇನ್ನೊಮ್ಮೆ ಸಂಪೂರ್ಣ ಕ್ಷೀಣ. ಒಮ್ಮೆ ಬೆಳದಿಂಗಳಿನ ನಗು ಮತ್ತೊಮ್ಮೆ ನಗುವಿಲ್ಲದ ದುರಂತ ನಾಟಕದ ಮುಕ್ತಾಯದಂತೆ ನಿಡಿದಾದ ನಿಟ್ಟುಸಿರ ನಡುವೆಯೇ ಚಂದ್ರ ಮಾಯ. ಈ ಸ್ಥಿತಿಯು ಬಂದಿರುವುದು ಮಾತ್ರ ಮೈಥಿಲಿಗೆ ಹೊರತು ಚಾರುವಿಗಲ್ಲ. ಹಾಗಿದ್ದರೆ ನನ್ನ ನಡುವೆ ಸುಳಿದಾಡುವ ಹುಣ್ಣಿಮೆಯಂಥಾ ಗಂಡು – ಶಿಬಿ. ನಿಡಿದಾದ ನಿರಾಶೆಯ ಮಡಿಲಲ್ಲಿ ತಳ್ಳಿ ಬಿಡುವ ಚಾರುವನ್ನು ಸೀರೆಗಂಟಿದ ಧೂಳನ್ನು ಕೊಡವಿ ಎದ್ದು ಹೋಗುವಂತೆ ಚಾರುವನ್ನು ಬಿಟ್ಟು ಹೋಗುವುದಕ್ಕೆ ಸಣ್ಣ ಅಳುಕು. ಸದಾ ನಗುವ ಹುಣ್ಣಿಮೆಯ ಚಂದಿರನಂತಿರುವ ಶಿಬಿ, ನಿಜವಾಗಿಯೂ ಶಿಬಿ ಚಕ್ರವರ್ತಿಯೇ ಸರಿ, ಅನಭಿಷಕ್ತ ದೊರೆ. ನಗುವಿನಲ್ಲಿ, ಮಾತಿನಲ್ಲಿ, ನಡಿಗೆಯಲ್ಲಿ ಇರುವುದು ಅದೇ ರೀತಿಯ ದೊರೆಯ ಲಕ್ಷಣಗಳು. ಚಾರು ಶಿಬಿಯ ಎದುರು ನಿಲ್ಲಿಸಿದರೆ – ಕಬ್ಬಿನ ಗಾಣದಲ್ಲಿ ಕಬ್ಬಿನ ರಸ ತೆಗೆದು ಬಿಸಾಕಿರುವ ಕಬ್ಬಿನ ಜಲ್ಲೆಯಂತೆ, ರಸವಿಲ್ಲ, ಸ್ವಾರಸ್ಯವಿಲ್ಲ. ಜೀವನದಲ್ಲಿ ನಗಾಡಿಯೇ ಗೊತ್ತಿಲ್ಲದಂತೆ ವರ್ತಿಸಿ ಹದಗೆಟ್ಟ ನಡಿಗೆಯ ಮನುಷ್ಯ. ಅವನ ಜೀವನ ಕ್ರಮವನ್ನು ಯಾರೊಬ್ಬರೂ ಸಹಿಸಲಾರರು. ಕುಡಿದು ಮಲಗಿದರೆ ಸೆಗಣಿ ತೊಪ್ಪೆಯಂತೆ ಬಿದ್ದಿರುತ್ತಾನೆ. ಕುಡಿತವನ್ನು ಬಿಡಿಸಬೇಕೆಂದು ಮಾಡಿದ ಪ್ರಯತ್ನವೂ ವಿಫಲವಾಯಿತು. ಅದು ತಾನು ಮಾಡಿದ ತಪ್ಪು, ಆಕಸ್ಮಿಕವೇ – ಒಂದು ಗೊತ್ತಾಗದೇ ಅಯೋಮಯವಾಗಿದ್ದಂತೂ ನಿಜ. ಲೂನಾದಲ್ಲಿ ಹೋಗುತ್ತಿರುವಾಗ ಮೈಥಿಲಿಯ ತಲೆಯಲ್ಲಿ ಸುಳಿಯುತ್ತಿದ್ದುದು ಇದೇ ವಿಷಯ. ಮೊತ್ತ ಮೊದಲ ಬಾರಿಗೆ ನಗರದ ನಡುವಿನ ರಸ್ತೆಯಲ್ಲಿ ಲೂನಾ ಓಡಿಸುವಾಗಲೂ, ಅವಳ ತಲೆಯಲ್ಲಿ ಸುಳಿಯುತ್ತಿದ್ದುದು: ಅದೇ ವಿಷಯ. ಚಾರು ಮತ್ತು ಶಿಬಿ. ಭಾವನೆಗಳ ಮತ್ತು ಮೈ ತುಂಬಾ ತುಂಬಿಕೊಂಡಿರುವ ಕಾಮನೆಗಳನ್ನು ಮೈಥಿಲಿಯು ನಿಯಂತ್ರಿಸಲಾರಳು. ಚಾರು ರಾತ್ರಿ ಆತ್ಮಹತ್ಯೆ ಮಾಡಿಕೊಳ್ಳಲು ಮಾಡಿದ ಪ್ರಯತ್ನದ ಸಂದರ್ಭದಲ್ಲಿಯು ಅವನ ಮುಖ ಕಳಾಹೀನವಾಗಿತ್ತು. ಜೀವಂತವಾದ ಯಾವ ಕಳೆಯೂ ಇಲ್ಲದ, ಲವಲವಿಕೆಯಿಲ್ಲದ ಮನುಷ್ಯ. ಇದೇ ಯೋಚನೆಯಲ್ಲಿ ಬಂದವಳು ಲೂನಾದ ಸ್ಟಾಂಡ್ ಹಾಕುವ ಹೊತ್ತಿಗೆ ಸರಿಯಾಗಿ, ಶಿಬಿಯು ಬೈಕಲ್ಲಿ ಬಂದು ಸ್ಟ್ಯಾಂಡ್ ಹಾಕಿದ. "ಏನು ಮೇಡಂ, ಚೆನ್ನಾಗಿದ್ದೀರಾ?" ಎಂದು ನಗುನಗುತ್ತಲೇ ಕೇಳಿದ. ನಿಜವಾಗಿಯೂ ಹುಣ್ಣಿಮೆಯ ಚಂದ್ರವೆಂದುಕೊಂಡ ಮೈಥಿಲಿ, "ಏನು ಚೆನ್ನಾಗಿರುವುದು ಸಾರ್,

ಸಾಕಾಗಿ ಹೋಯಿತು" ಎಂದಳು. ಅದೇ ಪೀಠಿಕೆಯನ್ನು ಪರೋಕ್ಷವಾಗಿ ದೇವವ್ರತನೆದುರಿಗೆ ಕೂಡಾ ಮಂಡಿಸಿದ್ದಳು. ಮೈಥಿಲಿಯ ಕ್ರಮವೇ ಅದು: ತಾನು ಸರಿಯಾಗಿದ್ದೇನೆ ಮತ್ತು ತನ್ನ ಗಂಡ ಸರಿಯಾಗಿಲ್ಲ ಎಂದು ಹೇಳುವ ಮೊದಲು ಅವಳು ಹೇಳುವ ಮಾತುಗಳೇ ಇವು. ಕಥನ ಶುರುವಾಗುವ ಮೊದಲು ಒಂದು ಸ್ಥಳ; ಒಂದು ಕಾಲ; ಒಂದು ದೇಶ – ಇತ್ಯಾದಿಗಳನ್ನು ಮಂಡಿಸುವಂತೆ ಮೈಥಿಲಿಯು "ಸಾಕಾಗಿ ಹೋಯ್ತು"ಅನ್ನುತ್ತಾಳೆ. 'ಸಾಕಾಗಿ ಹೋಯಿತು' ಎಂದರೆ ಸಾಕು ಎದುರು ಇರುವ ವ್ಯಕ್ತಿಯು ಸಹಜವಾಗಿಯೇ ಕೇಳುತ್ತಾನೆ; "ಅಷ್ಟು ಕಷ್ಟ ಏನು ನಿಮಗೆ?" ಮೈಥಿಲಿಯು ಮುಂದಣ ಕತೆಯನ್ನು ಮಂಡಿಸುತ್ತಲೆ, ಚಾರು ಅತ್ಯಂತ ಅನಾಗರಿಕ, ಪಶು ಸಮಾನ ಹಾಗೂ ತಾನು ಅಂತಹ ಚಾರುವನ್ನು ಸಹಿಸಿಕೊಂಡು ಬದುಕಿ ಉಳಿದಿದ್ದೇನೆ ಎಂದು ಬಿಡುತ್ತಾಳೆ. ಕೇಳುವವರು ಸಹಜವಾಗಿಯೇ ಮೈಥಿಲಿಯ ಪರ ವಕಾಲತ್ತು ನಡೆಸುತ್ತಾರೆ ಮತ್ತು ಚಾರು ಮಹಾನ್ ಖಳನಾಯಕನೆಂಬಂತೆ ಚಿತ್ರಿಸುತ್ತಾರೆ. ಅಲ್ಲಿಂದ ಮೈಥಿಲಿಯ ಗೆಲುವಿನ ನಡಿಗೆ ಶುರುವಾಗುತ್ತದೆ. ಶಿಬಿಯಲ್ಲಿ ಅದೇ ಕತೆಯನ್ನು ಪುನರಾವರ್ತಿಸಿದಳು. ಶಿಬಿಯು ಚಾರುವನ್ನು ನೋಡಿಲ್ಲ. ಅವನಿಗೆ ಗೊತ್ತಿರುವುದು ಮೈಥಿಲಿ, ಸಹಜವಾಗಿಯೇ ಮೈಥಿಲಿಯ ಮೇಲಿನ ಆಸಕ್ತಿ. ಅವಳು ಹೇಳುವುದನ್ನು ಕೇಳಿದವನೇ – "ಬನ್ನಿ ಕ್ಯಾಂಟೀನ್‌ಗೆ ಹೋಗೋಣ" ಎಂದು ಕರೆದೊಯ್ದು ಕೊನೆಗೆ ಅಂದ – "ಡೈವೋರ್ಸ್ ಕೊಟ್ಟುಬಿಡಿ. ಚಾರುವಿನ ಕೊಬ್ಬು ಇಳಿಯುತ್ತೆ" ಅಂದವನೇ ಅವಳ ಕೈ ಕುಲುಕಿದ. ಅವನು ಕೈ ಕುಲುಕುವಾಗ ಮೈಥಿಲಿಯ ಜೀವ ಬಿಸಿಯೇರಿತು. ಆದರೆ, ಶಿಬಿ ಅಂದಷ್ಟು ಸುಲಭವಾಗಿರಲಿಲ್ಲ, ಡೈವೋರ್ಸ್ ಅನ್ನುವುದು. ಅದಕ್ಕೆ ಕಾರಣ; ಮೈಥಿಲಿಯ ವ್ಯಾವಹಾರಿಕ ಮನಸ್ಸು. ಈ ವಿಷಯದಲ್ಲಿ ಪಕ್ಕಾ ಲೇವಾದೇವಿ ವ್ಯವಹಾರಸ್ಥರ ಮಗಳು, ಅದೇ ಗುಣ, ಲಾಭ ಮತ್ತು ನಷ್ಟಗಳ ಲೆಕ್ಕಾಚಾರ!

ಅದೇ ವೇಳೆಗೆ ಸರಿಯಾಗಿ ಚಾರು ಕಚೇರಿಯಲ್ಲಿ ಅನಧಿಕೃತವಾಗಿ ಗೈರುಹಾಜರಾಗಿದ್ದಕ್ಕೆ ಮೇಲಿನ ಅಧಿಕಾರಿಯಿಂದ ಮೆಮೋ ತೆಗೆದುಕೊಂಡ. ಅನಧಿಕೃತವಾಗಿ ಗೈರುಹಾಜರಿಯಾಗಿರುವುದಕ್ಕೆ ಸಕಾರಣವನ್ನು ಕೊಡುವಂತೆ ನೆನಪಿನೋಲೆಯಲ್ಲಿ ತಿಳಿಸಲಾಗಿತ್ತು. ನಿರ್ದೇಶಕನಾದವನ ಕಿವಿಯು ಹಿತ್ತಾಳೆ, ಕಣ್ಣು – ತಾಳೆಯ ಹಣ್ಣು ಮತ್ತು ಮಾತೆಂಬುದು ಕತ್ತೆಯದು. ಆದರೆ ಪ್ರತಿಯೊಬ್ಬ ನೌಕರರಿಗೂ ಈ ನೆನಪಿನೋಲೆ (ಮೆಮೋ) ಅನ್ನುವುದು ತಪ್ಪಿದ್ದಲ್ಲ. ನೌಕರನಿಗೆ ನೆನಪಿನೋಲೆಯೆನ್ನುವುದು ಅವನ ಮೇಲೆ ಕೈಗೊಳ್ಳಲು ಬೇಕಾದ ಕಾರ್ಯವಿಧಾನದ ಮೊದಲ ಕೆಂಪು ಸಿಗ್ನಲ್. ಯಾವ ನೌಕರ ನೆನಪಿನೋಲೆ ಸ್ವೀಕರಿಸಿದನೋ ಅವನ ಸರ್ವೀಸ್ ರೆಕಾರ್ಡ್‌ನಲ್ಲಿ ಅದು ದಾಖಲಾಗುತ್ತದೆ – ಅದೊಂದು ಅವನ ಸೇವಾವಧಿಯಲ್ಲಿ ಅನಂತರ ಬೆಂಬಿಡದ ಭೂತದಂತೆ ಕಾಡಲು ಶುರು ಮಾಡುತ್ತದೆ. ಅವನಿಗೆ ನೆನಪಿನೋಲೆಯನ್ನು ತಂದುಕೊಟ್ಟವನು ಅದೇ ಹಿಂದಿನ ದಿನ ಚಾರುವಿನ

ಫೋನ್‌ನಲ್ಲಿ ಬಂದ ಸೂಚನೆಯನ್ನು ಸ್ವೀಕರಿಸಿದ ಅಟೆಂಡರ್. ಸೇವಾವಧಿಯ ಮೊದಲ ಶಾಸನ ಲಿಖಿತವನ್ನು ಚಾರು ಸ್ವೀಕರಿಸಿದ – ನಿರ್ಲಿಪ್ತವಾಗಿ. ನಿನ್ನೆ ರಾತ್ರಿಯಲ್ಲಿ ಸಾಯ ಹೊರಟವನಿಗೆ ಒಂದು ಸಣ್ಣ ಮೆಮೋ ಎನ್ನುವುದು ಯಾವ ಲೆಕ್ಕ? ಇಷ್ಟಪಟ್ಟಿದ್ದರೆ ಸಂಸ್ಥೆಯ ನಿರ್ದೇಶಕ ಕರೆದು ಕೇಳಬಹುದಿತ್ತು. ಆದರೆ, ಕರೆದು ಕೇಳಿಲ್ಲ, ಅದರ ಬದಲು ಒಂದು ಮೆಮೋ ಬೆರಳಚ್ಚು ಮಾಡಿಸಿದ ಮತ್ತು ಒಂದು ಪ್ರತಿಯನ್ನು ಚಾರುಗೆ ಕಳಿಸಿಕೊಟ್ಟ. ಚಾರುಗೆ ಮೆಮೋ ಕಳಿಸಿದ ತಕ್ಷಣವೇ ನಿರ್ದೇಶಕ ಮಾಡಿದ ಕೆಲಸವೆಂದರೆ, ಬೆಲ್ ಮಾಡಿ, ಪ್ಯೂನ್‌ಗೆ, "ಒಂದು ಸಕ್ಕರೆ ಕಮ್ಮಿ ಹಾಕಿದ ಟೀ ತಗೋಬಾ, ಹಾಗೆಯೇ ನೀನೂ ಒಂದು ಕಾಫಿ ಅಲ್ಲೇ ಕುಡಿದು ಬಾರಪ್ಪ. ಬೇಗ ಬಂದುಬಿಡು, ಕ್ಯಾಂಟೀನಿನಲ್ಲಿ ಬೀಡಿ ಸೇದ್ತಾ ನಿಂತಕೋಬೇಡ" ಎಂದು ಹೇಳಿದ. ಮೊದಲ ಬಾರಿಗೆ ಸಾಹೇಬರ ಮುಖದಲ್ಲಿ ಒಂದು ಖುಶಿ ಮತ್ತು ಕೈಯಲ್ಲಿ ಧಾರಾಳತನ ತುಂಬಿದ್ದನ್ನು ಪ್ಯೂನ್ ಗಮನಿಸಿದ.

"ಅನಧಿಕೃತವಾಗಿ ನಿನ್ನೆ ಗೈರುಹಾಜರಿಯಾದುದಕ್ಕೆ ನಿಮ್ಮಿಂದ ವಿವರಣೆಯನ್ನು ಕೇಳಲಾಗಿದೆ. ತಕ್ಷಣವೇ ತತ್ಸಂಬಂಧವಾಗಿ ಉತ್ತರವನ್ನು ನೀಡಲು ಕೋರಲಾಗಿದೆ. ಒಂದು ವೇಳೆ ತಮ್ಮಿಂದ ಯಾವುದೇ ಉತ್ತರ ಬಂದಿಲ್ಲವೆಂದಾದರೆ ನಿಮ್ಮ ಮೇಲೆ ಕ್ರಮಕೈಗೊಳ್ಳುವುದಕ್ಕೆ ತಮ್ಮ ಒಪ್ಪಿಗೆಯಿದೆಯೆಂದು ಭಾವಿಸಲಾಗಿದೆ" – ನೆನಪಿನೋಲೆಯ ಸಾರಾಂಶವನ್ನು ಚಾರು ಓದಿದ. ಓದಿದವನು ಅದಕ್ಕೆ ಯಾವ ರೀತಿಯಲ್ಲಿ ಉತ್ತರ ಕೊಡಬಹುದು ಎಂದು ಚಿಂತಿಸತೊಡಗಿದ. "ನಿನ್ನೆ ಕಚೇರಿಗೆ ಗೈರುಹಾಜರಿಯಾಗಿ ಕುಡ್ದು ಮಲಗಿಬಿಟ್ಟಿದ್ದೆ ಮತ್ತು ಈ ವಿಷಯದಲ್ಲಿ ನೀವು ಯಾವ ರೀತಿಯ ಕ್ರಮವನ್ನು ಬೇಕಾದರೂ ತೆಗೆದುಕೊಳ್ಳಬಹುದು" ಎಂದು ಬರೆಯಬೇಕೆಂದು ಯೋಚಿಸಿದವನು ಹಾಗೆ ಬರೆಯುವುದು ಕಚೇರಿಯ ಮತ್ತು ಕರ್ತವ್ಯದ ದೃಷ್ಟಿಯಿಂದ ಸರಿಯಲ್ಲವೆಂದು ವಾಕ್ಯ ಬದಲಾಯಿಸಲು ಪ್ರಯತ್ನಿಸಿದ. ಒಂದು ಮೆಮೋ, ಅದಕ್ಕೆ ಒಂದು ಉತ್ತರ ದೊಡ್ಡ ಸಮಸ್ಯೆಯಲ್ಲವೆಂದು ಅನಿಸಿತು ಚಾರುಗೆ. ಕಚೇರಿಯೆನ್ನುವುದು ಕೂಡಾ ಹೀಗೆ ಜಡ; ಯಾಂತ್ರಿಕ ಮತ್ತು ಮೇಲಿನವರು ಮತ್ತು ಕೆಳಗಿನವರ ನಡುವಣ ತಿಕ್ಕಾಟ. ಮೇಲಿನ ಅಧಿಕಾರಿಗೆ ಕೆಳಗಿನವರ ಮೇಲೆ ಮೆಮೋ ಕೊಡುವುದು ಪ್ರತಿಷ್ಠೆಯ ಪ್ರಶ್ನೆ ಮತ್ತು ಕೆಳಗಿನವರಿಗೆ ಮೇಲಧಿಕಾರಿಗಳಿಗೆ ಹತ್ತಿರವಿರುವುದೇ ಗೌರವ ಮತ್ತು ಪ್ರತಿಷ್ಠೆ. ಇದರ ದೂರವುಳಿದವರು ಮಾತ್ರ ಕಚೇರಿಯ ಕೆಲಸಕಾರ್ಯಗಳ ದೃಷ್ಟಿಯಿಂದ ಎಷ್ಟೇ ಸಮರ್ಪಕವಾಗಿ ಕೆಲಸ ಮಾಡಿದರೂ ನಿರುಪಯೋಗ ಜೀವಿಗಳು. ಚಾರು ಕಚೇರಿಯಲ್ಲಿ ಈ ವರ್ಗಕ್ಕೆ ಸೇರಿದವನು. ವ್ಯವಸ್ಥಾಪಕ ನಿರ್ದೇಶಕ ಮಳೆ–ಚಳಿ–ಗಾಳಿ ಮೂರನ್ನು ಬಿಟ್ಟವನು. ಮೂರನ್ನು ಬಿಟ್ಟವನಿಗೆ ಕೆಲವು ಮಾದರಿಯ ಹಂಗುಗಳಿಲ್ಲ. ಮಳೆ ಬಂದರೆ ಛತ್ರಿ ಹಿಡಿಯುವುದು ಗೊತ್ತು. ಚಳಿಯಾದರೆ ಬೆಚ್ಚಗೆ ಕಂಬಳಿಯನ್ನು ಹೊದ್ದುಕೊಂಡು ಮುದುಡಿ ಮಲಗುವುದು ತಿಳಿದಿದೆ. ಗಾಳಿ ಬಂದರೆ ಅದು

ಹಾರಿಸಿಕೊಂಡು ಹೋಗದ ಹಾಗೆ ದೊಡ್ಡ ಮರವನ್ನು ಅಪ್ಪಿ ಹಿಡಿಯುವುದು ತಿಳಿದಿದೆ. ಇಂಥ ವ್ಯವಸ್ಥಾಪಕ ನಿರ್ದೇಶಕರ ಕೆಲಸದಲ್ಲಿ ಕೆಲವು ನಿಯಮಗಳನ್ನು ಗಟ್ಟಿಯಾಗಿ ಪಾಲಿಸಿಕೊಂಡು ಬಂದಿದ್ದಾನೆ. ಕಿವಿಯನ್ನು ಹಿತ್ತಾಳೆ ಮಾಡಿಕೊಂಡರೆ, ತನ್ನ ವಿರುದ್ಧ ನಿಂತವರ ಬಗ್ಗೆ ಕೆಲವು ಮಾಹಿತಿಗಳು ತಿಳಿಯುತ್ತದೆ. ಕಣ್ಣನ್ನು ಕುರುಡು ಮಾಡಿಕೊಂಡರೆ ಕುರುಕ್ಷೇತ್ರದ ಯುದ್ಧದ ವಿವರವನ್ನು ಹೇಳಲು ಸಂಜಯನಂಥವರು ಸಿಗುತ್ತಾರೆ. ಬಾಯಿ ಮುಚ್ಚಿಕೊಂಡಿದ್ದರೆ, ತಮ್ಮ ಬಾಯಿಯ ಬದಲಿಗೆ ಮಾತಾಡಲು ಶಕುನಿಯಂಥವರು ಇದ್ದೇ ಇರುತ್ತಾರೆ. ಆಡಳಿತ ನಡೆಸುವವನಿಗೆ ಈ ತಂತ್ರಗಾರಿಕೆ ಗೊತ್ತಿದ್ದರೆ ಉಳಿದವೆಲ್ಲಾ ಸುಲಭ. ಆಡಳಿತದ ಯಂತ್ರ ನಡೆಯುವುದೇ ಹೀಗೆ – ಎದುರು ನಿಂತವರನ್ನು ನೆಲಸಮಗೊಳಿಸುವುದು ಮತ್ತು ಹೊಗಳಿಕೊಂಡು ಬಾಲವಾಡಿಸುತ್ತಾ ಬಂದವರಿಗೆ ಬೇರೆ ಬೇರೆ ರೀತಿಯ ಅನುಕೂಲ ಕಲ್ಪಿಸುವುದು ಮತ್ತು ಬೇಕಿದ್ದರೆ ಅವರ ಜೊತೆಯಲ್ಲಿ ಹೋಗಿ ಕುಡಿಯುವುದು. ಅದಕ್ಕೆ ಬದಲಿಗೆ ಪ್ರಮೋಶನ್ ಎಂಬ ಇನಾಮು ಕೊಡುವುದು, ಇದರಿಂದ ಹಳಸಿದ ರೊಟ್ಟಿಯನ್ನಾದರೂ ಬಾಲವಾಡಿಸಿಕೊಂಡು ಬಂದವುಗಳು ಬಾಯಿ ಮುಚ್ಚಿಕೊಂಡು ತಿನ್ನುತ್ತವೆ. ಚಾರು ಮೊದಲೇ ಅನುಮತಿ ಪಡೆಯದೇ ರಜೆಯನ್ನು ಹಾಕಿರುವುದೇ ಒಂದು ಮಹಾನ್ ತಪ್ಪು. ಯಾಕೆಂದರೆ ವ್ಯವಸ್ಥಾಪಕ ನಿರ್ದೇಶಕನ ತಲೆಯಲ್ಲಿ ಮಿದುಳು ಅನ್ನುವ ಒಂದು ಭಾಗವೇ ಇಲ್ಲವೆಂದು ಒಮ್ಮೆ ಚಾರು ಹೇಳಿದ್ದ. ಚಾರು ಸತ್ಯ ಹೇಳಿದ್ದು ತಪ್ಪಾಯಿತು. ಬಕಪಕ್ಷಿಯಂತೆ ಕಾಯುತ್ತಾ ಕೂತ ವ್ಯವಸ್ಥಾಪಕ ನಿರ್ದೇಶಕ ತನ್ನ ಹಿತ್ತಾಳೆಯ ಕಿವಿಯನ್ನು ಮಾತ್ರ ನಂಬಿದ್ದ. ಸಮಯ ಕಾದು ಮೆಮೋವನ್ನು ಕೊಟ್ಟ. ಚಾರುಗೆ ಗೊತ್ತು: ಅದು ಸೇವೆಯ ರಿಜಿಸ್ಟರ್‌ನಲ್ಲಿ ಕೆಂಪು ಅಕ್ಷರದಲ್ಲಿ ಬರೆಯಲಾಗುತ್ತದೆ – ಅನಧಿಕೃತವಾದ ರಜೆಯಿಂದ ಉಂಟಾದ ಒಂದು ಸಜೆಗೆ ಅವನು ತಯಾರಾದ. ಈ ಯಾವೊಂದು ಕಾರಣಕ್ಕಾಗಿಯೂ ಒಪ್ಪಂದ ಬೇಕಿಲ್ಲವೆಂದು ನಿಶ್ಚಯಿಸಿದವನು ಮಧ್ಯಾಹ್ನದ ಹೊತ್ತಿಗೆ ಅಧಿಕೃತವಾಗಿಯೇ ಮೆಮೋಗೆ ಉತ್ತರವನ್ನು ಕೊಟ್ಟ; "ವೈಯಕ್ತಿಕ ತೊಂದರೆಯಿಂದ ವೈಯಕ್ತಿಕವಾಗಿ ತಮ್ಮನ್ನು ಭೇಟಿಯಾಗಿ ರಜೆಯನ್ನು ಕೇಳಲು ಸಾಧ್ಯವಿರಲಿಲ್ಲ. ಯಾಕೆಂದರೆ – ನನಗೆ ನಿನ್ನೆ ಉಂಟಾದ ಅನಾರೋಗ್ಯ ಮೊನ್ನೆ ನನ್ನಲ್ಲಿ ಬಂದು ಕೇಳಿರಲಿಲ್ಲ, ಮೊನ್ನೆ ಅನಾರೋಗ್ಯ ಬಂದು ಹೇಳಿದ್ದರೆ, ಮೊನ್ನೆಯೇ ರಜೆಗೆ ಅರ್ಜಿ ಸಲ್ಲಿಸುತ್ತಿದ್ದೆ." ಈ ಪತ್ರವನ್ನು ಲಿಖಿತವಾಗಿಯೇ ಎರಡು ಪ್ರತಿ ಮಾಡಿಟ್ಟು ಒಂದು ಪ್ರತಿಗೆ ಪತ್ರ ತಲುಪಿದ್ದಕ್ಕೆ ರಸೀತಿಯನ್ನು, ಸಹಿಯನ್ನು ಪಡೆದ. ಬೆಪ್ಪಾದುದು ವ್ಯವಸ್ಥಾಪಕ! ಚಾರು ನಿರ್ದೇಶಕ ಕೊಟ್ಟ ಮೆಮೋವನ್ನು ಚೂರುಪಡಿಸಿ, ಕಸದ ಬುಟ್ಟಿಗೆ ಹಾಕಿದ.

ಮುಂದೊಂದು ದಿನ ಇಂಥದ್ದೊಂದು ಸಂಭವಿಸಿಯೇ ತೀರುತ್ತದೆ. ಅದನ್ನು ಮಾತ್ರ ಯಾವುದೇ ಕಾರಣದಿಂದ ಅಳಿಸಿ ಹಾಕಲಾರೆ. ಯಾಕೆಂದರೆ ಹೃದಯದಲ್ಲಿ

ಬರೆಯಲಾಗಿರುವ ಅಕ್ಷರಗಳ ಒರಸಿಹಾಕಲು ಒದ್ದೆ ಬಟ್ಟೆಯೇ ಬೇಕಾಗುವುದಿಲ್ಲ ಹಾಗೆಂದು ಒರಸಿಹಾಕಲು ಸಾಧ್ಯವಿದ್ದಿದ್ದರೆ ಎಷ್ಟೊಂದು ಜನ ಪ್ರೇಮಿಗಳು ತಮ್ಮ ಪ್ರೇಮದ ಪಿಸು ಮತ್ತು ಬಿಸಿಯಾದ ಮಾತನ್ನು ಒರಸಿಹಾಕಿಕೊಳ್ಳುತ್ತಿದ್ದರೇನೋ? ಪ್ರೇಮ ಹುಟ್ಟಿಸುವ ಎದೆ ನಡುಕ ಮತ್ತು ಉದ್ವೇಗ ಮತ್ತು ಜೀವದ ಮೇಲೆ ಹುಟ್ಟಿಸುವ ಅಪರಿಮಿತವಾದ ಪ್ರೀತಿಯನ್ನು ಈ ಜಗದಲ್ಲಿ ಯಾರೂ ಕೊಡಲಾರರು. ಕೊಡುವುದಕ್ಕೆ ಸಾಧ್ಯವೂ ಇಲ್ಲ. ಪ್ರೇಮವೆಂದರೆ ಅದು ಗೊತ್ತಾಗದಂತೆ ಎದೆಯ ಕದವನ್ನು ತಟ್ಟುವ ಕಳ್ಳಬಿದ್ದ ಮಂದಾನಿಲ. ಪ್ರೇಮವೆಂದರೆ ಎಲ್ಲಿಂದಲೋ ಎಲ್ಲಿಗೋ ರವಾನೆಯಾಗುವ ಸಂದೇಶ. ಆ ಸಂದೇಶವನ್ನು ಯಾರೂ ಪತ್ತೆಹಚ್ಚಲಾರರು, ಪತ್ತೆಹಚ್ಚಲು ಸಾಧ್ಯವಿಲ್ಲ, ಹಾಗೆಯೇ ಪ್ರೇಮವೆಂದರೆ ಔಚಿತ್ಯವೇ ಗೊತ್ತಿಲ್ಲದಂತೆ ನುಗ್ಗಿಬರುವ ಒಣಕೆಮ್ಮು, ಅರ್ಥವಾದರೆ ಸಾಕು. ಪ್ರೇಮವೆಂಬುದಕ್ಕೆ ಜಾತಿಯ, ಧರ್ಮದ ಹಂಗಿಲ್ಲ, ಅದಕ್ಕೆ ಯಾವುದೇ ಕೋಟೆಗಳಿಲ್ಲ. ಒಬ್ಬ ಗಂಡಿನಿಂದ ಒಬ್ಬ ಹೆಣ್ಣಿಗೆ, ಒಬ್ಬ ಹೆಣ್ಣಿನಿಂದ ಒಬ್ಬ ಗಂಡಿಗೆ ರವಾನೆಯಾಗುವ ಈ ಸಂದೇಶದಲ್ಲಿ ಬೇರೆ ಏನೂ ಇರೋಲ್ಲ. ಅದು ನಿರ್ಮಲವಾದ ನೀರಿನಂತೆ. ಅದು ಬಾಯಾರಿದ ಜೀವಕ್ಕೆ ತಂಪು ಕೊಡುತ್ತೆ, ಜೀವ ಕೊಡುತ್ತೆ. ಪ್ರೇಮವೆಂಬುದಕ್ಕೆ ನೈತಿಕ–ಅನೈತಿಕವೆಂಬ ಹಂಗಿಲ್ಲ. ಹರೆಯದ ಅಂತರವಿಲ್ಲ. ಮನಸಾರ ಬಂದು ಪ್ರೇಮವು ನಮ್ಮೆದೆಯ ಕವಾಟದ ಕೀಲಿಯನ್ನು ತೆರೆಯುತ್ತದೆ. ಪ್ರೇಮವೆಂಬುದು ಇಲ್ಲದೇ ಹೋದರೆ ನಾವು ಮನುಷ್ಯರಲ್ಲ, ಕಲ್ಲುಬಂಡೆಗಳು. ಪ್ರೇಮವೆಂಬುದು ನಮ್ಮ ಜೀವದೊಳಗೆ ಪ್ರವೇಶಿಸದೇ ಹೋದರೆ ನಾವು ಚರಂಡಿಯ ಹುಳಗಳು. ಈ ತನಕದ ಚರಿತ್ರೆಯಲ್ಲಿ ಪ್ರೇಮ ಯಾರ ಋಣದಲ್ಲಿ, ಸಾಲದ ಹೊರೆಯಲ್ಲಿ ಸತ್ತಿದೆ? ಪ್ರೇಮ ನಮ್ಮ ಜೀವಕ್ಕೆ ಪೂರ್ಣವಾದ ಒರತೆಯ ಸೆಲೆ. ಅದು ಯಾರನ್ನು ಕೇಳಿಲ್ಲ – ಹತ್ತು ತಲೆಯ ರಾವಣನಿಗೆ ಸೀತೆಯ ಮೇಲಿನ ಪ್ರೇಮ – ಚಂಡಶಾಸನನಿಗೆ ಅವನ ಸ್ನೇಹಿತನ ಹೆಂಡತಿಯ ಮೇಲಿನ ಪ್ರೇಮ, ಅಮೃತಮತಿಗೆ ಕುರೂಪಿ ಮಾವುತನ ಮೇಲಿನ ಪ್ರೇಮ, ಅವರೆಲ್ಲರ ಪ್ರೇಮಕ್ಕೆ ಯಾವ ಶಂಕೆಗಳಿದ್ದವು? – ಅದೇ ದಿನ ಶಿಬಿಯು - ಹೇಳಿದ ದಿನ ಮೈಥಿಲಿಯು ಡೈರಿಯಲ್ಲಿ ಕೆಂಪು ಅಕ್ಷರದಲ್ಲಿ ಬರೆದಿಟ್ಟಳು. ಅಪ್ಪಿತಪ್ಪಿಯೂ ಡೈರಿಯಲ್ಲಿ ಶಿಬಿಯ ಹೆಸರು ಬಂದಿರಲಿಲ್ಲ ಮತ್ತು ಯಾವುದರ ಬಗೆಗೆ ಬರೆಯುತ್ತಿದ್ದೇನೆ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಮೈಥಿಲಿಯು ಡೈರಿಯಲ್ಲಿ ಕೊಟ್ಟ ಸಮರ್ಥನೆಯಾಗಲೀ ವಿವರಣೆಯಾಗಲೀ ಯಾವುದೇ ಕಾರಣದಿಂದ ಅವಳಿಗೆ ಅಲ್ಲದೆ ಉಳಿದವರಿಗೆ ಅರ್ಥವಾಗಲಾರದು ಎಂದೇ ಭಾವಿಸಿಕೊಂಡಿದ್ದಳು. ಅವಳೆದರು – "ಡೈವೋರ್ಸ್" ಮತ್ತು "ಶಿಬಿ" ಎಂಬ ಎರಡೇ ಪದಗಳಿದ್ದವು. ಕಚೇರಿ ಮರಳಿ ವಾಪಾಸು ಬರುವಾಗ ಇದನ್ನೇ ಯೋಚಿಸಿಕೊಂಡು ಬಂದವಳು ರೂಮಿಗೆ ಹೋಗಿ ಡೈರಿಯಲ್ಲಿ ಇದೇ ರೀತಿಯಲ್ಲಿ ಬರೆದುಹಾಕಿದ್ದಳು. ಇದನ್ನು ಬರೆದುದು ಕಾಲೇಜಿನಲ್ಲಿಯೋ, ಯುನಿವರ್ಸಿಟಿಯಲ್ಲಿಯೋ ಓದುತ್ತಿರುವ ಹದಿಹರೆಯದ

ಚೆಲುವೆಯಲ್ಲ. ಯೌವನ ಪುಟಿದೇಳುವ ಯುವತಿಯಲ್ಲ ಮತ್ತು ಹಗಲು ಕಂಡ ಹುಡುಗನನ್ನು ನೆನಪಿಸಿಕೊಂಡು ರಾತ್ರಿ ದಿಂಬನ್ನು ಅಪ್ಪಿಕೊಂಡು ಮಲಗುವ ಹದಿನಾರರ ಹುಡುಗಿಯಲ್ಲ. ಮದುವೆಯಾಗಿ, ಮತ್ತೊಬ್ಬ ಗಂಡಸಿನ ಸ್ಪರ್ಶಕ್ಕೆ ಮೈಯೆಲ್ಲಾ ಥರಗುಟ್ಟಿ ನಡುಗಿಸಿಕೊಂಡು ಅವನ ಸ್ಪರ್ಶದ ಹತ್ತಿರ ಬಂದಾಗ ನೂಕಿ, ಕಾಮನೆಗಳನ್ನು ಒರಸಿಹಾಕಿದವಳು – ಮತ್ತು ಇಪ್ಪತ್ತೈದರ ಅನಂತರ ಕಾಮ ಕಾಮನೆಗಳನ್ನು ಎದೆಯಲ್ಲಿ ಅಡಗಿಸಿಟ್ಟುಕೊಂಡವಳು – ಅದೇ ಮೈಥಿಲಿ! ನೆಗೆ ನೆಗೆದು ಬರುತ್ತಿರುವ ಕಾಮ ಭಾವನೆಗಳನ್ನು ಮೈತುಂಬಾ ತುಂಬಿಕೊಂಡಿರುವ ಅವಳು ಕಾಮದ ಬದಲಿಗೆ ಸುಲಭವಾಗಿ ಪ್ರೇಮವೆಂದು ಬರೆಯಬಲ್ಲವಳು. ಡಿಗ್ರಿಯಲ್ಲಿ ಓದಿದ ನಾಟಕಗಳು; ಕವಿತೆಗಳು; ಕತೆ–ಕಾದಂಬರಿಗಳು ಕಾಮ ಎನ್ನುವುದರ ಬದಲಿಗೆ ಪ್ರೇಮವೆಂದು ಮಾತ್ರ ಹೇಳಿಕೊಟ್ಟಿವೆಯೇ ವಿನಃ ಅವುಗಳ ನಡುವಣ ಅಂತರವು ಕೂಡಾ ಎಷ್ಟೊಂದು ಗಾವುದ ದೂರವಿದೆಯೆಂದು ಹೇಳಿಕೊಟ್ಟಿರಲಿಲ್ಲ. ಅಲ್ಲಿಂದಲೇ ಅವಳಿಗೆ ಈ ಸಂಗತಿಗಳ ಭೇದವಾಗಲೀ ಗಂಡಸರ ನಡುವೆಯೂ ಅನೇಕ ಭೇದಗಳಿವೆಯೆಂಬುದಾಗಲೀ ತಿಳಿಯಲಿಲ್ಲ, ತಿಳಿಯುವ ಕ್ಷಣಗಳು ಕಣ್ಣಳತೆಯಲ್ಲಿ ಇದ್ದಾಗ ಕೂಡಾ ಅದು ಅವಳ ಮಿದುಳೆಂಬ ಕ್ಷೇತ್ರದೊಳಗೆ ಪ್ರವೇಶಿಸಲಿಲ್ಲ. ಡೈರಿಯಲ್ಲಿ ಈ ರೀತಿಯ ಮಾತುಗಳು ಬರೆದ ಕ್ಷಣದಲ್ಲಿ ಅವಳಿಗೆ ಒಂದು ಸುದೀರ್ಘವಾದ ನಿಟ್ಟುಸಿರು ಬಂದಿರುವುದು ನಿಜ. ಡೈರಿಯಲ್ಲಿ ತನಗನ್ನಿಸಿದ ಸಂಗತಿಗಳನ್ನು ಬರೆದಿಟ್ಟು ಅದರ ಮೇಲೆಯೇ ಒಂದು ಕ್ಷಣ ಸಂತೋಷವನ್ನು ಅವಳು ಅನುಭವಿಸುತ್ತಿರುವ ಸಂದರ್ಭದಲ್ಲಿಯೇ ಚಾರು ಮನೆಯೊಳಗೆ ಕಾಲಿರಿಸಿದ. ಅವನು ಕಾಲಿರಿಸಿದ ಕೂಡಲೇ ಅವನು ಬಾಯಿಂದ ಅಯೋಚಿತವಾಗಿ "ಬದುಕಿದೆ" ಎಂಬ ಮಾತು ಬಂತು. ಅವನು "ಬದುಕಿದೆ" ಎಂಬ ಮಾತನ್ನು ಬಳಸಿದ್ದು ಯಾಕೆಂದು ಮೈಥಿಲಿಗೆ ತಿಳಿಯಲಿಲ್ಲ. ಬಂದವನೇ ತುಂಬಾ ಆಯಾಸಗೊಂಡವನಂತೆ ಚೆಯರಿನಲ್ಲಿ ಕುಳಿತುಕೊಂಡು ನಿಟ್ಟುಸಿರುಬಿಟ್ಟ. ನಿಟ್ಟುಸಿರು ಬಿಟ್ಟುದು ಯಾಕೆಂದು ಸ್ವತಃ ಅವನಿಗೆ ಕೂಡಾ ತಿಳಿಯಲಿಲ್ಲ. ಕಣ್ಣು ಮುಚ್ಚಿ ಸ್ವಲ್ಪ ಹೊತ್ತು ಕುಳಿತ. ಅವನನ್ನು ನೋಡಿದರೇ ತಿಳಿಯುತ್ತಿತ್ತು – ಚಾರು ವಿಪರೀತ ಆಯಾಸಗೊಂಡಿದ್ದಾನೆ. ಬಳಲಿದವನ ಹಾಗೆ ಕಾಣಿಸುತ್ತಿದ್ದಾನೆ. ಒಂದು ಕ್ಷಣ ನೋಡಿದಳು ಮೈಥಿಲಿ – ಮತ್ತೆ ಯಥಾ ಪ್ರಕಾರ ಅಡುಗೆ ಮನೆಯೊಳಕ್ಕೆ ನುಗ್ಗಿದಳು, ಹತ್ತು ನಿಮಿಷ ವಿಶ್ರಾಂತಿಯನ್ನು ತೆಗೆದುಕೊಂಡ ಚಾರು ಸ್ನಾನ ಮುಗಿಸಿ ಬಂದ. ಸ್ನಾನ ಮುಗಿಸಿಬಂದವನೇ ಒಂದೇ ಒಂದು ಬಿಯರನ್ನು ಗಟಗಟನೇ ಕುಡಿದ. ಅವನು ಬಿಯರ್ ಬಾಟಲಿಯ ಮುಚ್ಚಳ ತೆರೆಯುತ್ತಿರುವುದು ಮತ್ತು ಬಿಯರನ್ನು ಕುಡಿಯುತ್ತಿರುವುದು ಮೈಥಿಲಿಗೆ ಗೊತ್ತಾದರೂ ಸುಮ್ಮನಾದಳು. ಚಾರು ಕುಡಿಯುವುದರ ಬಗ್ಗೆ ಅಥವಾ ಅವನ ಯಾವುದೇ ವಿಷಯದ ಬಗ್ಗೆ ತಲೆಹಾಕಬಾರದು ಎಂದು ನಿಶ್ಚಯಿಸಿದ್ದ ಮೈಥಿಲಿ ಮತ್ತೆ ಬೇರೆ

ಯೋಚನೆಯನ್ನು ಮಾಡಲಿಲ್ಲ. ಚಾರು ಕೂಡಾ ಮಾತಿಗಿಂತ ಮೌನವೇ ಲೇಸೆಂದು ಕುಳಿತ. ಒಂದು ಹಿಡಿಯಷ್ಟು ಮೌನವಾಗಿದ್ದರೂ ಕೂಡಾ ಮನೆ ಮತ್ತು ಮಸಣಕ್ಕೆ ಬೇರೆ ಅರ್ಥಗಳಿರುವುದಿಲ್ಲ. ಯಾಕೋ ಸಣ್ಣಗೆ ಜ್ವರವೊಂದು ಕಾಡುತ್ತಿರುವಂತೆ ಕಾಣಿಸಿತು ಚಾರುಗೆ. ಮಾಮೂಲಿಯಂತೆ ಬೆಡ್‌ಶೀಟ್ ತೆಗೆದುಕೊಂಡು ಹೊರಗಡೆ ಬಂದು ಮುಸುಕು ಹಾಕಿ ಮಲಗಿದ! ಕೆಲವೇ ಕ್ಷಣದಲ್ಲಿ ಗಾಢವಾದ ನಿದ್ದೆ ಅವನನ್ನು ಆವರಿಸಿಕೊಂಡಿತು. ಅಡುಗೆ ಮನೆಯಲ್ಲಿದ್ದ ಮೈಥಿಲಿಯು ಹೊರಗಡೆ ಬಂದು ನೋಡುತ್ತಾಳೆ: ಚಾರುವಿಗೆ ನಿದ್ದೆ. ಅಡುಗೆಯ ಮನೆಯಲ್ಲಿ ಊಟ ಮುಗಿಸಿದ ಮೈಥಿಲಿಯು ಕೂಡಾ ಹೋಗಿ ಬೆಡ್‌ರೂಮಿನಲ್ಲಿ ಕುಳಿತು 'ಕಮಲಾದಾಸನ್ ಆತ್ಮಚರಿತ್ರೆ' ಓದತೊಡಗಿದಳು ಮತ್ತು ಕಮಲಾದಾಸ್‌ನ ಆತ್ಮಚರಿತ್ರೆಗೂ ತನ್ನ ಆತ್ಮಕ್ಕೂ ಯಾವುದೋ ಒಂದು ರೀತಿಯ ಸಂಬಂಧವಿದೆಯೆಂದು ಭಾವಿಸಿಕೊಂಡಳು. ಅದೊಂದು ಮಾದರಿಯಲ್ಲಿ ಅವಳಿಗೆ ತಲ್ಲೀನತೆಯು ಸಾಧ್ಯವಾಯಿತು. ಅದರೊಂದಿಗೆ ಮಿಸುಕಾಡತೊಡಗಿದ್ದು ಶಿಬಿಯೆಂಬಾತನ ನೆನಪು! ಸಮಯ ಕಳೆದುದೇ ಅವಳಿಗೆ ತಿಳಿಯಲಿಲ್ಲ. ಹೊರಗಡೆ ಮಲಗಿದ ಚಾರು ಸ್ವಲ್ಪ ಹೊತ್ತಿನಲ್ಲಿಯೇ ವಿಪರೀತವಾಗಿ ಕೆಮ್ಮತೊಡಗಿದ. ಹಾಸುಗೆಯಿಂದ ಎದ್ದು ಕುಳಿತ. ಬಾಯಿ ತುಂಬಾ ಒಣಗುತ್ತಿದೆಯೆಂದು ಅನಿಸತೊಡಗಿತು. ಎದ್ದುಹೋಗಿ ಒಂದು ಲೋಟ ನೀರು ಕುಡಿದ. ಮತ್ತೆ ಬಂದು ಮಲಗಿದ. ಬಂದು ಮಲಗಿದರೂ ಯಾಕೋ ನಿದ್ದೆ ಬರುತ್ತಿಲ್ಲ. ಮನಸ್ಸಿಗೆ ಒಂದು ರೀತಿಯ ಸಂಕಟ ಮತ್ತು ವಿಪರೀತ ಜ್ವರ ಕುದಿಯತೊಡಗಿದೆ – ಕುದಿಯಲು ಇಟ್ಟ ನೀರಿನಂತೆ. ಕೆಮ್ಮು ಬೇರೆ, ಎದ್ದು ಕೂರಲಾರ, ನಿದ್ದೆ ಮಾಡಲಾರ. ಮತ್ತಷ್ಟು ದಾಹ, ತಡೆಯಲಾಗದ ಸಂಕಟದಲ್ಲಿ "ಅಯ್ಯೋ ಅಮ್ಮಾ" ಎಂದ. ಅವನು 'ಅಯ್ಯೋ ಅಮ್ಮ' ಎಂದುದು ಮೈಥಿಲಿಗೆ ಕೇಳಿಸಿತು. ಆದರೆ ಅವಳು ಕೂತಲ್ಲಿಂದ ಏಳಲಿಲ್ಲ. ಚಾರುಗೆ ಅಷ್ಟು ಧಿಮಾಕಿದ್ದರೆ ನನಗೆಷ್ಟು ಧಿಮಾಕಿರಬೇಕು? ಚಾರು ಮಲಗಿದ್ದವನು ಮತ್ತೆ 'ಅಯ್ಯೋ ಅಮ್ಮ' ಎಂದ. ಆದರೆ, ಅವನ ನರಳುವಿಕೆ; ಸಂಕಟವನ್ನು ಆ ಮನೆಯೆಂಬ ಆಲಯದಲ್ಲಿ ಕೇಳುವವರಿದ್ದಿಲ್ಲ! ಕೇಳಬೇಕಾದ, ಹಾಸುಗೆಯನ್ನು ಹಂಚಿಕೊಂಡ ಮೈಥಿಲಿಗೆ ವಿಪರೀತವಾದ ಭ್ರಮೆ – ಆಲಯಕ್ಕೆ ಇರಬೇಕಾದ ಕಂಬವೊಂದನ್ನು ಮುರಿಯುವ ಹಂಬಲದಲ್ಲಿ ಅವಳಿದ್ದಳು. ಚಾರು ಸಂಕಟದಲ್ಲಿ ಆಲಯದ ಆಶ್ರಯಕ್ಕಾಗಿ ಹಂಲಿಸತೊಡಗಿದ – ವಿಪರೀತವಾದ ಜ್ವರದ ನಡುವೆ!

ರೇಖಾ ಪಿಂಟೋ, ಪ್ರಸನ್ನ ಮನೆಯ ಅಂಗಳದಲ್ಲಿ ಬಿದ್ದು, ಎದ್ದು ಕಿರುಚಾಡಿ ಹೋದ ನಂತರ ವಾಸ್ತವವಾಗಿ ಗಾಬರಿಯಲ್ಲಿಯೇ ಇದ್ದಳು. ಪ್ರಸನ್ನ – ಗಂಡುಸಲ್ಲ, ಷಂಡತ್ವವು ಅವನ ಇಡಿಯ ಮೈಯನ್ನು ಆವರಿಸಿಕೊಂಡಿಲ್ಲ, ದೇಹ ಸಂದಿಮೂಲೆಯೊಂದರಲ್ಲಿ ಮಾತ್ರ ಅವನು ಷಂಡ. ಉಳಿದಂತೆ ಅವನು ಗಂಡು. ಪ್ರತಿದಿನದ ರಾತ್ರಿಯಲ್ಲಿಯೂ ಅವನ ಹುಲಿ ಮುದ್ದು ಅನುಭವಿಸಿದ ಅವಳಿಗೆ –

ಅವನು ಗಂಡಸಲ್ಲ ಎಂದು ಅವಳು ಲೋಕಕ್ಕೇ ಹೇಳಲಾರಳು. ಲೋಕ ಕಣ್ಣಿಗೆ ಅವನು ಗಂಡುಸು. ಅವನು ಗಂಡಸಿನಂತೆ ನಡೆಯುತ್ತಾನೆ, ಗಂಡುಸಂತೆ ಮಾತಾಡುತ್ತಾನೆ, ಗಂಡಸಿನಂತೆ ವರ್ತಿಸುತ್ತಾನೆ. ಅದೇ ರೀತಿಯ ಪ್ಯಾಂಟು-ಶರ್ಟು ಹಾಕಿಕೊಳ್ಳುತ್ತಾನೆ. ಎಲ್ಲವೂ ಸರಿ. ರೇಖಾ ಎನ್ನುವ ಜಗದ ಕ್ರೌರ್ಯವನ್ನು ಅರಿಯದ ಬಾಲೆಯು ಪ್ರಸನ್ನನ ಬಗ್ಗೆ ವಿವರಿಸಿ ಜಗಕ್ಕೆ ತಿಳಿಯ ಹೇಳುವುದಾದರೂ ಹೇಗೆ? ಅವನು ಗಂಡಸಲ್ಲ. ಅವನ ದೇಹದ ಬಿಡಿಭಾಗಗಳ ಕುರಿತು ನಿಸ್ಸಂಕೋಚವಾಗಿ ಹೇಳಲು, ಅವಳಿಗೆ ಪದ ನುಡಿಯಲು ಅಸಾಧ್ಯ. ತನ್ನ ದೇಹದ ವಿವರಗಳನ್ನು ಸಾರ್ವಜನಿಕವಾಗಿ ವಿವರಿಸಿ ಹೇಳಲು ಸಂಕೋಚಪಡುವ ಕೇದಿಗೆಯ ಬನದ ಹುಡುಗಿಯೊಬ್ಬಳು ತನ್ನನ್ನು ಮದುವೆಯಾದವನು ಗಂಡಸು ಅಲ್ಲವೆಂದು ಸಾರ್ವಜನಿಕವಾಗಿ ವಿವರಿಸಲು ಸಾಧ್ಯವೇ? ರೇಖಾ ಬೆಳಗಾದರೂ ಮದುವೆಯ ಅನಂತರದ ಎಲ್ಲಾ ಸಂಗತಿಗಳನ್ನು ನೆನಪಿಸಿಕೊಂಡಳು. ರಾತ್ರಿಯಿಡೀ ಕಿರುಚಾಡಿದ ಪ್ರಸನ್ನನ ಕುರಿತು ಹೊರಗಡೆಯಿರುವ ನಾಕು ಜನ ಕೇಳಿದರೆ ಅವಳು ಅದನ್ನು ಹೇಳುವುದು ಹೇಗೆ ಸಾಧ್ಯ? ಮೈಯೆಲ್ಲಾ ಉರಿಯುತ್ತಿರುವ ಸಂದರ್ಭದಲ್ಲಿಯೇ ಮೈಗೆ ಬಿಸಿ ನೀರು ಎರೆದಂತೆ ರಾತ್ರಿ ಬಂದು ಕಿರುಚಾಡಿದವನು ನಾಳೆ ಇನ್ನೇನು ಮಾಡಲಿದ್ದಾನೋ? ಅಂಗಾಂಗವಿಡೀ ಬಾಲ್ಯದಲ್ಲಿ ತುಂಬಿಕೊಂಡದ್ದು ಕಲ್ಪನೆಯ ನಕ್ಷತ್ರಲೋಕ. ಯೌವನದಲ್ಲಿ ಪ್ರೇಮದ ಸಾಕಾರ ರೂಪ. ಆದರೆ, ಅಕಾಲಿಕ ಉಲ್ಕೆಯೇ ಮೈಮೇಲೆ ಬಿದ್ದಂತೆ ಆಗಿಬಿಟ್ಟಿದೆ. ಪ್ರತೀ ಭಾನುವಾರ ಚರ್ಚಿಗೆ ಹೋಗಿ ಪ್ರಾರ್ಥನೆಯನ್ನು ಸಲ್ಲಿಸುವ ಅಮ್ಮನಾಗಲೀ, ಪ್ರಸನ್ನನ ಅಮ್ಮನಾಗಲೀ ಧರ್ಮದ ಭದ್ರವಾದ ಕೋಟೆಯೊಳಗೆ ಬದುಕಲಿಲ್ಲ. ಪ್ರೇಮಿಸಿದವನನ್ನು ಮದುವೆಯಾಗುವುದರ ಬಗ್ಗೆ ಯಾವುದೇ ರೀತಿಯ ತಕರಾರು ಎತ್ತಿಕೊಂಡವರಲ್ಲ ಮತ್ತು ಅವರಾರಿಗೂ ಬೇಸರವಾಗಲಿಲ್ಲ. ಈಗ ನೋಡಿದವರೆಲ್ಲರೂ – ಗಂಡನನ್ನು ಬಿಟ್ಟುಬಂದವಳು ಎಂಬ ಹಾಗೆ ಪಟ್ಟಿಯೊಂದನ್ನು ಕಟ್ಟುತ್ತಾರೆ. ಬೆನ್ನ ಹಿಂದೆ ಪ್ರಸನ್ನ ರಾತ್ರಿಯಲ್ಲಿ ಮೈ ಮೇಲೆಲ್ಲಾ ಮಾಡಿದ ಗಾಯಗಳು; ಸುಟ್ಟು ಹೋದ ಹಾಗಿರುವ ಕಲೆಗಳು ತುಂಬಿಕೊಂಡಿವೆ. ವರ್ತಮಾನದಲ್ಲಿ ಭೂತದ ಭಯವೆನ್ನುವುದು ಚಾದರದ ಒಳಗಡೆಗೂ ನುಗ್ಗಿ ಬರುತ್ತವೆ. ಭವಿಷ್ಯವನ್ನು ನೆನೆದರೆ ಬರೀ ಕತ್ತಲು ತುಂಬಿಕೊಂಡಂತೆ ಅನಿಸುತ್ತದೆ. ಯಾಕೋ ಆತಂಕವೊಂದನ್ನು ಬಿಟ್ಟರೆ ಬೇರಾವುದು ಜೀವದಲ್ಲಿಲ್ಲ, ದೇಹದಲ್ಲಿಲ್ಲ, ಮನಸ್ಸಿನಲ್ಲಿಲ್ಲ. ಕತ್ತಲೆಯೆಂದರೆ ಭಯ, ಹಗಲೆಂದರೆ ಭಯ, ಬೆಂಕಿಯೆಂದರೆ ಭಯ, ಒಬ್ಬಂಟಿಯಾಗಿ ಇರುವುದೆಂದರೆ ಭಯ. ಒಬ್ಬಳೇ ಎಲ್ಲಾದರೂ ಹೋಗೋಣವೆಂದರೆ ಆತಂಕ ಮನದ ತುಂಬಾ ಮನೆ ಮಾಡಿದಂತೆ ಅನಿಸುತ್ತದೆ. ಪ್ರಸನ್ನ ಹೋದ ತಕ್ಷಣವೇ ಜೆಸಿಂತಾ ಬಾಯಿಯನ್ನು ಅಪ್ಪಿ ರೇಖಾ ಪಿಂಟೋ ಅತ್ತಳು-ಎಡೆಬಿಡದೆ. ಅಳುವು ಕೂಡಾ ಅವಳೊಳಗಿನ ಆತಂಕ; ರಾತ್ರಿಗಳಲ್ಲಿ ಪ್ರಸನ್ನ ಕೊಟ್ಟ ನರಕ ಹಿಂಸೆಗಳ ರೂಪಗಳು ಮರೆಯಲು ಬಿಡಲಿಲ್ಲ. ಜೆಸಿಂತಾ

ಬಾಯಿಯೂ ಏನು ಮಾಡುವುದೆಂದು ತಿಳಿಯದೆ ಮಗಳನ್ನು ಅಪ್ಪಿಕೊಂಡು ಅತ್ತಳು. ಅವರಿಬ್ಬರ ಅಳುವಿಗೆ ಕಾರಣಗಳಿದ್ದವು. ಆದರೆ, ಕಣ್ಣೀರನ್ನು ಒರಸುವ ಯಾವ ಕೈಗಳೂ ಇರಲಿಲ್ಲ.

ಅವರಿಬ್ಬರೂ ಅಳುತ್ತಲೇ ಕಂಗಾಲಾಗಿ ಕೂತ ಸಂದರ್ಭದಲ್ಲಿಯೇ ನಾಗೇಶ ನಗು ನಗುತ್ತಾ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ. ಬಿಡುಗಡೆ ಹೊಂದುವ ಸಂದರ್ಭದಲ್ಲಿ ಜುಬೇದಾಗೆ "ತುಂಬಾ ಥ್ಯಾಂಕ್ಸ್ ಸಿಸ್ಟರ್" ಅಂದ. ಆದರೆ ಅದಕ್ಕೆ ಹೆಚ್ಚು ದಿನ ಅರ್ಥ ಉಳಿಯುವ ಸಂದರ್ಭಗಳಿರಲಿಲ್ಲ. ಯಾಕೆಂದರೆ ಜೊತೆಗೆ ಜನ್ನು ಇದ್ದ ಮತ್ತು ಜನ್ನು ಸರಿಯಾಗಿ ಮೇಲಿಂದ ಕೆಳಗಿನ ತನಕ ಒಮ್ಮೆ ನೋಡಿ ಅವಳ ಎಲ್ಲಾ ವಿವರಗಳನ್ನು ದಾಖಲಿಸಿಕೊಂಡಿದ್ದ ಮತ್ತು ಅದೇ ವೇಳೆ ಜ್ವರದ ಕುದಿತದಲ್ಲಿ ರಾತ್ರಿಯಿಡೀ ಮಲಗಿದ್ದ ಚಾರುವಿಗೆ ಬೆಳಗಿನ ವೇಳೆ ಹಾಸುಗೆಬಿಟ್ಟು ಏಳಲು ಸಾಧ್ಯವಾಗಿರಲಿಲ್ಲ. ಈ ಚಾರು ಎದ್ದಿಲ್ಲವೆಂದೇ ಮೈಥಿಲಿಯು ಲಿಪ್‌ಸ್ಟಿಕ್ ಲೈಟಾಗಿ ಹಚ್ಚಿಕೊಂಡು ಕಚೇರಿಗೆ ಹೊರಟಳು. ಕಾಲವು ಮತ್ತೆ ತಿರುಗಲೇಬೇಕಿತ್ತು, ಕಾಲ ತಿರುಗಲು ಸನ್ನಾಹವನ್ನು ನಡೆಸಿತು.

ಚಾರು ವಿಪರೀತವಾದ ಜ್ವರದಿಂದ ಬಳಲಿದ, ಗತಿಗೋತ್ರ ಯಾವುದೂ ಇಲ್ಲದ ಮನೆಯ ಮೌನದಲ್ಲಿ ನರಳುತ್ತಾ ಮಲಗಿದ. ಒಣಗಿಹೋದ ತುಟಿಗೆ ಒಂದು ಹನಿ ನೀರೆರೆಯಲು ಯಾರೂ ಇರಲಿಲ್ಲ. ಬಿದ್ದಿರುವ ತರಗಲೆಯಂತೆ ಹಾಸುಗೆಯ ಮೇಲೆ ಒರಗಿದ್ದ. ಕಾಲವೆನ್ನುವುದು ಅಪಾಯಕಾರಿಯಾಗುವುದೇ ಹೀಗೆ! ಜ್ವರವೆಂಬುದು ಚಾರುವನ್ನು ಒಂದು ವಾರ ಹಾಸುಗೆಯಲ್ಲೇ ಮಲಗಿಸಿತು. ಕಚೇರಿಯ ಅಟೆಂಡರ್ ಬಂದು ಚಾರುವನ್ನು ನೋಡುವ ತನಕ – ಅದೇ ನರಳಾಟದಲ್ಲಿದ್ದ. ಅದೇ ಅಟೆಂಡರ್ ಚಾರುವನ್ನು ಕರೆದೊಯ್ದು ಆಸ್ಪತ್ರೆಗೆ ಸೇರಿಸುವಾಗ ಮೈಥಿಲಿಯು ಶಿಬಿಗೆ "ನಿಜವಾಗಿಯೂ ನಿಮ್ಮ ಕೆಲಸದ ಚುರುಕು ನನಗೆ ಸಿಕ್ಕಿದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು? ನಿಮ್ಮ ಪ್ರತಿಯೊಂದು ಕೆಲಸವು ತುಂಬಾ ಶಿಸ್ತುಬದ್ಧ ಅದೇ ನಂಗಿಷ್ಟ" ಅನ್ನುತ್ತಲೇ ಕಿಲ ಕಿಲನೆ ನಗಾಡಿದಳು. ತುಂಬಾ ಅಳುವವರು ನಗಲು ಹೆಚ್ಚು ದಿನ ಬೇಕಿಲ್ಲ ಮತ್ತು ಹೆಚ್ಚು ನಗಾಡುವವರು ಅಳುವುದಕ್ಕೂ ಹೆಚ್ಚು ದಿನ ಬೇಕಾಗುವುದಿಲ್ಲ ಅಷ್ಟೆ! ವರ್ತುಲದ ಮಿತಿಯು ಗೊತ್ತಿಲ್ಲದವರ ಹಣೆಬರಹ ಇದು! ಚಾರುವಿನ ಕೊನೆಯ ಸೋಲಿನ ಹೆಜ್ಜೆಯ ಉದ್ದಳತೆಯು ಎಷ್ಟಿರಬಹುದು ಎಂದು ಲೆಕ್ಕ ಹಾಕಿದಳು ಮೈಥಿಲಿ – ಶಿಬಿಯೊಂದಿಗೆ ನಗುತ್ತಲೇ, ರಾತ್ರಿಯಿಡೀ ಜ್ವರದಿಂದ ಬಳಲಿದ ಮತ್ತು ವಿಪರೀತವಾಗಿ ಕನವರಿಸಿದಾತನ ಬಗ್ಗೆ ಒಂದಿಷ್ಟು ಕರುಣೆಯನ್ನಾದರೂ ದಾನ ಮಾಡದ ಇರುವವಳಿಗೆ– ಹಗಲಿನಲ್ಲಿ ಶಿಬಿಯೊಂದಿಗೆ ಮಾತಾಡುವ ಸಂದರ್ಭದಲ್ಲಿ ಹುಟ್ಟಿದ ವೈಯ್ಯಾರದ ನಗೆಯ ಬಗ್ಗೆ ಅವಳಿಗೆ ಹೆಮ್ಮೆಯೆನಿಸಿತು. ಹಣಾಹಣಿಯಾದ ಯುದ್ಧದಲ್ಲಿ ಸೋಲು– ಗೆಲುವು ಎನ್ನುವುದು ಕನ್ನಡಿಯಷ್ಟೇ ನಿಚ್ಚಳ. ಪರೋಕ್ಷ ರಾಜಕಾರಣದಲ್ಲಿ ಸೋಲು

ಮತ್ತು ಗೆಲುವು ಎನ್ನುವುದು ಖಚಿತವಲ್ಲ, ಸ್ಪಷ್ಟವೂ ಅಲ್ಲ. ಮಂಪರು ಕವಿಸುವ ಹೊತ್ತಿನಲ್ಲಿ ಯಾರದು ಬಲವಾದ ಹೆಜ್ಜೆಯೆನ್ನುವುದನ್ನು ನಿರ್ಧರಿಸುವುದು ಕಷ್ಟ. ರಾತ್ರಿಯಲ್ಲಿ ಚಾರುವು ಕನವರಿಸಿದಾಗ; ಬಳಲಿದಾಗ, ಅವನು ಸಂಪೂರ್ಣವಾಗಿ ಸೋತಿದ್ದಾನೆ ಮತ್ತು ಇನ್ನು ಬೇಡುವ ಕಾಲ ಆತನಿಗೆ ಸನ್ನಿಹಿತವಾಗಿದೆ, ಇನ್ನು ಏನಿದ್ದರೂ ನಾನು ಕೊಡುವವಳು, ನನ್ನ ಕೈ ಮೇಲಿದೆ. ಚಾರು-ಅವನು ಬೇಡುವವನು, ಅವನ ಕೈ ಕೆಳಗೆಯೇ ಇರುತ್ತದೆ. ಅನುಕೂಲಸಿಂಧುವೆಂಬ ರಾಜಕಾರಣವನ್ನು ಪ್ರಾರಂಭಿಸಬೇಕಾದವಳು ತಾನು ಎಂದೇ ಭಾವಿಸಿಕೊಂಡಿದ್ದಳು. ಅದಕ್ಕಾಗಿಯೇ ಬೆಳಿಗ್ಗೆಯೂ ಅವನು ಏಳದಿದ್ದಾಗ – ಅವನನ್ನು ಕರೆಯುವ ತಂಟೆಗೆ ಹೋಗದೆ ಆಫೀಸಿಗೆ ಹೊರಟು ಬಂದಿದ್ದಳು ಮತ್ತು ಯಾವತ್ತಿಗಿಂತ ಹೆಚ್ಚು ಖುಶಿಯಲ್ಲಿ ಮಾತಾಡಲು ತೊಗಡಿದ್ದಳು. ಯಾಕೆಂದರೆ, ತನ್ನನ್ನು ಹಿಡಿತದಲ್ಲಿರಿಸಿಕೊಳ್ಳುವ ಯಾವ ಯತ್ನವೂ ಚಾರುವಿನಿಂದಾಗದು ಎಂಬುದು ಸ್ಪಷ್ಟವಾಗಿದೆ. ಯಾಕೆಂದರೆ ಕೆಲವು ದಿನಗಳ ಹಿಂದೆ ಚಾರು ಆತ್ಮಹತ್ಯೆಗೆ ಯತ್ನಿಸಿದ್ದ. ಅಂದರೆ, ಸೋಲಿನಲ್ಲಿ ಚಾರು ಅವನತಮುಖಿಯಾಗುತ್ತಿದ್ದಾನೆ. ಚಾರು ಭಯಪಡಲು ಮತ್ತು ಹೆದರಿಕೊಂಡು ಯಾವುದರಲ್ಲೋ ಮುಖವನ್ನು ಮರೆಮಾಚಲು ಯತ್ನಿಸುತ್ತಿದ್ದಾನೆ. ಇನ್ನು ಯಾವ ಕಾರಣಕ್ಕೂ ಚಾರುವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬಾರದು ಮಾತ್ರವಲ್ಲ ಅವನೊಬ್ಬ ವ್ಯಕ್ತಿಯೆಂಬ ಕರುಣೆಯ ಹನಿಯನ್ನು ಬೀರಲಾರದು. ಅದೇ ಯೋಚನೆಯಲ್ಲಿಯೇ ಸಂಜೆಯ ತನಕ ಶಿಬಿಯೊಂದಿಗೆ ಹರಟುತ್ತಾ, ಉದ್ದೇಶಪೂರ್ವಕವಾಗಿ ತಡವಾಗಿಯೇ ಮನೆಗೆ ಬಂದಳು. ಮೈಥಿಲಿಯು ಮನೆಗೆ ಬರುವಾಗ ಚಾರು ಮನೆಯಲ್ಲಿಲ್ಲ. ಪಕ್ಕದ ಮನೆಯವರು ಬಂದು, ಚಾರುವನ್ನು ಅವರ ಆಫೀಸಿನ ಅಟೆಂಡರ್ ಆಸ್ಪತ್ರೆಗೆ ಕರೆದೊಯ್ದಿದ್ದಾನೆ ಎಂದಷ್ಟೇ ವಿಷಯ ತಿಳಿಸಿದರು. ಸಣ್ಣ ಕಿರು ನಗೆಯೊಂದಿಗೆ ಮೈಥಿಲಿಯು ಯಾವ ಕಳವಳಕ್ಕೂ ಗುರಿಯಾಗದೆ, ಮರು ಪ್ರಶ್ನೆಯನ್ನು ಮಾಡದೆ- ಮನೆಯ ಬೀಗ ತೆರೆದಳು. ಗಂಡನ ವಿರುದ್ಧದ ಒಳಜಗಳದಲ್ಲಿ. ಗಂಡ-ಹೆಂಡಿರ ಶೀತಲ ಯುದ್ಧದಲ್ಲಿ ಗೆಲುವಿನ ಮತ್ತೊಂದು ಮೆಟ್ಟಿಲು ತಾನೇರಿದ್ದೇನೆ ಎಂದು ಭಾವಿಸಿದಳು. ಚಾರುವೆಂಬ ಯಕಶ್ಚಿತ್ ವ್ಯಕ್ತಿಯು ತನಗೆ ಯಾವತ್ತೂ ಮುಖ್ಯವಲ್ಲ ಎಂದುಕೊಂಡವಳೇ ಮನೆಯೊಳಗಡೆಗೆ ಬಂದು ಟಿ.ವಿ.ಯನ್ನು ಹಚ್ಚಿದಳು. ಟಿ.ವಿ.ಯಲ್ಲಿ ಮುಖಾಮುಖಿ ಕಾರ್ಯಕ್ರಮ ನಡೆಯುತ್ತಿತ್ತು. ಸಂದರ್ಶಕ ಗೃಹ ಮಂತ್ರಿಗೆ ಪ್ರಶ್ನೆ ಕೇಳುತ್ತಿದ್ದಳು; "ನಗರದಲ್ಲಿ ಪದೇ ಪದೇ ಕೋಮು ಗಲಭೆಯಾಗುತ್ತಿದೆ. ಈ ವಿಷಯದಲ್ಲಿ ನಿಮ್ಮ ಸರ್ಕಾರ ಯಾವ ಹೆಜ್ಜೆಯನ್ನು ಇಟ್ಟಿಲ್ಲವೆಂದು ಹೇಳುತ್ತಿದ್ದಾರೆ. ನಿಮ್ಮ ಸರ್ಕಾರದ ಬಗ್ಗೆ ಜನರಿಗೆ ನಿರಾಶೆಯುಂಟಾಗಿದೆ. ಈ ದೃಷ್ಟಿಯಿಂದ ನೀವೇನು ಹೇಳುತ್ತೀರಿ?" ಗೃಹ ಸಚಿವರು ನಿಧಾನವಾಗಿ ಹೇಳತೊಡಗಿದರು; "ನಮ್ಮ ಸರಕಾರ ಈ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದೆ. ಶಾಂತಿಯನ್ನು ಕಾಪಾಡಲು,

ಕೋಮು ಸೌಹಾರ್ದ ರೂಪುಗೊಳ್ಳಲು ಬೇಕಾಗುವ ಎಲ್ಲಾ ಯತ್ನ ಮಾಡುತ್ತೇವೆ. ಹಿಂದೂ–ಮುಸ್ಲಿಂ–ಕ್ರಿಶ್ಚಿಯನ್ ಎಂದು ಪ್ರತ್ಯೇಕವಾಗಿ ನೋಡದೆ – ಎಲ್ಲರಿಗೂ ಅವರವರ ಧಾರ್ಮಿಕ ನಂಬಿಕೆಗಳ ಸ್ವಾತಂತ್ರ್ಯವಿದೆ. ಅದನ್ನು ಅನುಷ್ಠಾನಕ್ಕೆ ತರಲು ಬೇಕಾದ ಎಲ್ಲಾ ಪ್ರಯತ್ನ ಮಾಡುತ್ತೇವೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಒಂದು ಸಮಿತಿ ರಚಿಸಿ, ಅದರ ವರದಿ ಬಂದ ಮೇಲೆ ಸಂಬಂಧಪಟ್ಟ ಕ್ರಮಕೈಗೊಳ್ಳುತ್ತೇವೆ." ಸಂದರ್ಶಕಿ ತಕ್ಷಣ ಕೇಳಿದಳು; "ಆ ವರದಿ ಬರುವಷ್ಟರಲ್ಲಿ ಕೋಮು ಗಲಭೆಯೆನ್ನುವುದು ಇನ್ನಷ್ಟು ಹೆಚ್ಚುತ್ತದೆ ಮತ್ತು ಸಾಮಾನ್ಯ ಜನರು ಇದರಿಂದಾಗಿ ಯಾವ್ಯಾವುದೋ ನಷ್ಟ ಅನುಭವಿಸುತ್ತಾರೆ. ಗೃಹ ಮಂತ್ರಿಯಾಗಿ ನೀವು ಕಣ್ಣು ಮುಚ್ಚಿ ಕೂತಿರುವುದು ಸರಿಯಲ್ಲ. ಮೊನ್ನೆಯ ಕೋಮು ಗಲಭೆಯ ದಿನ ನಿಮ್ಮ ಮನೆಯಲ್ಲಿ ನೀವು ಸತ್ಯನಾರಾಯಣ ಪೂಜೆಯ ವ್ರತ ಹಿಡಿದು ಕೂತಿದ್ದಿರಂತೆ ನಿಜನಾ?" – "ಏನು ಕಾರ್ಯಕ್ರಮವೋ ಏನೋ? ದರಿದ್ರ" ಎಂದು ಗೊಣಗುತ್ತಾ ಮೈಥಿಲಿ ಟಿ.ವಿ. ಸ್ವಿಚ್ ಆಫ್ ಮಾಡಿದಳು! ಚಾರುವನ್ನು ಆಸ್ಪತ್ರೆಗೆ ಸೇರಿಸಿದ ಅಟೆಂಡರ್ ಫೋನು ಮಾಡಿದ್ದು ಆಗಲೇ – ವಿಷಯ ತಿಳಿಸಲು. ಆದರೆ, ಮೈಥಿಲಿ "ಸರಿ" ಎಂದಿಟ್ಟಳು – ರಿಸೀವರನ್ನು. ಅವಳ "ಸರಿ" ಎಂಬ ಪದದಲ್ಲಿ ಯಾಂತ್ರಿಕತೆಯಿತ್ತು – ಯಾವ ಆತಂಕವಿರಲಿಲ್ಲ!

ಆಸ್ಪತ್ರೆಗೆ ಬೆಳಿಗ್ಗೆ ಕಚೇರಿಗೆ ಹೊರಡುವ ಮುನ್ನ ಹೋಗಬೇಕೆಂದುಕೊಂಡು ಅವನು ಹುಟ್ಟು ರಾಕ್ಷಸನೇ ಆಗಿರಲಿ; ಹುಟ್ಟುವಾಗಲೇ ರಣಚಂಡಿತನವನ್ನೇ ಹಿಡಿದುಕೊಂಡವನೇ ಆಗಿರಲಿ ಅವನನ್ನು ಹೋಗಿ ಮಾತಾಡಿಸಬೇಕಿದ್ದು ತನ್ನ ಕರ್ತವ್ಯವೆಂದು ಹೊರಟಳು – ಮೈಥಿಲಿ. ಮೈಥಿಲಿಯು ಆಸ್ಪತ್ರೆಯ ಆವರಣಕ್ಕೆ ಬರುವುದಕ್ಕೂ – ಆಸ್ಪತ್ರೆಯ ಆವರಣದಲ್ಲಿ ನೆಲವೊರೆಸುವ ಆಯಾ ಫಿನಾಯಿಲ್‌ನಲ್ಲಿ ಆಸ್ಪತ್ರೆಯ ನೆಲವನ್ನು ಒರಸುವುದಕ್ಕೂ ಸರಿಹೋಯಿತು. ಆಸ್ಪತ್ರೆಯ ನೆಲದಿಂದ ಹುಟ್ಟಿಬಂದುದು – ಫಿನಾಯಿಲ್‌ನ ಕಮಟು ವಾಸನೆ, ಘಾಟು ವಾಸನೆಯು ತಕ್ಷಣ ಮೂಗಿಗೆ ಬಡಿದುದರಿಂದಲೇ ಮೈಥಿಲಿಯು ಮೂಗು ಮುಚ್ಚಿಕೊಂಡಳು. ಅವಳು ಮೂಗು ಮುಚ್ಚಿಕೊಂಡು ಆಸ್ಪತ್ರೆಯ ಫಿನಾಯಿಲ್ ವಾಸನೆಗೆ ಅನ್ನುವುದು ನಿಜವಾದರೂ ಮುಂದಕ್ಕೆ ಹೆಜ್ಜೆ ಇಡಲು ಕೊಂಚ ಯೋಚನೆ ಮಾಡಿದಳು. ಯಾಕೆಂದರೆ ಗಂಡನೆಂಬ ಪ್ರಾಣಿಯ ಜೊತೆಗೆ ಅವಳು ಮಾತು ಬಿಟ್ಟು ಎರಡು ಮೂರು ದಿನಗಳಾಗಿದ್ದವು! ಈಗ ಅವನು ನನ್ನನ್ನು ನೋಡಿ ಮಾತಾಡುತ್ತಾನೋ ಇಲ್ಲವೋ ಅವಳಿಗೆ ತಿಳಿಯದು. ಒಂದು ಕ್ಷಣ ಆಸ್ಪತ್ರೆಯ ಹೊರ ಅವರಣದಲ್ಲಿ ನಿಂತವಳು –ಅನಂತರವೇ ಆಸ್ಪತ್ರೆಯ ಸಿಸ್ಟರ್ ಒಬ್ಬಳಲ್ಲಿ ಕೇಳಿದಳು – ಚಾರು ಎಂಬ ಪೇಶಂಟ್ ಎಲ್ಲಿದ್ದಾರೆ ಸಿಸ್ಟರ್? ಸಿಸ್ಟರ್ ತೋರಿಸುತ್ತಾ ಹೇಳಿದಳು – ಹೀಗೆ ಎಡಗಡೆ ಹೋಗಿ – 'ಬಿ' ವಾರ್ಡ್‌ನಲ್ಲಿ ನಾಲ್ಕನೆಯ ನಂಬರ್‌ನ ರೂಮ್‌ನಲ್ಲಿದ್ದಾರೆ. ಸಿಸ್ಟರ್ ಅವಸರದಲ್ಲಿಯೇ ಮುಂದೆ ಹೋದಳು.

ಮೈಥಿಲಿಯು ಹೆಜ್ಜೆಯನ್ನು ಮುಂದಕ್ಕೆ ಹಾಕಿದಳು. 'ಬಿ' ವಾರ್ಡಿನ ಸಮೀಪ ಬರುವಾಗಲಂತೂ ಅವಳಿಗೆ ಮತ್ತಷ್ಟು ಮುಜುಗರವುಂಟಾಯಿತು. ಚಾರುವನ್ನು ಮಾತಾಡಿಸುವುದು ಹೇಗೆ? ಅವನಾವ ಸ್ಥಿತಿಯಲ್ಲಿದ್ದಾನೊ? ಅವಳಿಗೆ ಆ ಆತಂಕವು ಬೇಕಿರಲಿಲ್ಲ. ಆದರೂ ಯಾಕೋ ಅನಗತ್ಯವಾದ ಮುಜುಗರವನ್ನು ಅವಳೇ ಸೃಷ್ಟಿ ಮಾಡಿಕೊಂಡಳು. ಯಾಕೆಂಬುದು ಅವಳಿಗೇ ಅರ್ಥವಾಗಲಿಲ್ಲ. ನಾಲ್ಕನೆಯ ರೂಂ ನಂಬರ್‌ನೊಳಗಡೆ ಮೈಥಿಲಿಯು ಕಾಲಿಡುವಾಗ ಚಾರುವು ಸಣ್ಣ ನಿದ್ದೆಯಲ್ಲಿದ್ದ – ಅದೇ ವಿಪರೀತವಾದ ಜ್ವರದಿಂದ. ಜ್ವರದಿಂದ ನರಳುತ್ತಿದ್ದ. ಪಕ್ಕದ ಟೀಪಾಯಿಯ ಮೇಲೆ ಹಿಂದಿನ ದಿನ ಬ್ರೆಡ್‌ನ ತುಣುಕುಗಳು, ಮೈಮೇಲೆ ಸಂಪೂರ್ಣವಾದ ಎಚ್ಚರವಿರುವಂತೆ ಕಾಣಿಸಲಿಲ್ಲ. ಚಾರುವಿನ ಗಡ್ಡ, ಅವನ ಹಣೆಯ ಮೇಲಿನ ತಣ್ಣೀರಿನ ಪಟ್ಟಿ, ಅವನ ನರಳುವಿಕೆ – ಇವೆಲ್ಲವನ್ನು ಮೈಥಿಲಿಯು ನೋಡಿದಳು. ಮಾತಾಡುವ ಸ್ಥಿತಿಯಲ್ಲಿ ಅವಳಿರಲಿಲ್ಲ ಮತ್ತು ಚಾರುಗೆ ಸಂಪೂರ್ಣ ಎಚ್ಚರವಿರಲಿಲ್ಲ. ಜ್ವರದ ಕಾವು ಎಲ್ಲಿ ತನ್ನ ಮೈ ಮೇಲೆ ಬರುತ್ತದೋ ಎಂಬಷ್ಟು ದೂರದಲ್ಲಿ ನಿಂತ ಮೈಥಿಲಿಯು ಮಲಗಿದ್ದ ಚಾರುವನ್ನು ನೋಡಿದಳು. ಮತ್ತೆ ತನ್ನ ಕೈಯಲ್ಲಿರುವ ವಾಚನ್ನು ನೋಡಿಕೊಂಡಳು. ಆಗಲೇ ಆ ಕೊಠಡಿಗೆ ಸಿಸ್ಟರ್ ಒಬ್ಬಳು ಬಂದಳು, "ಸ್ವಲ್ಪ ದೂರ ಸರಿಯಿರಿ ಅಮ್ಮಾ ಜ್ವರ ಎಷ್ಟಿದೆ ಎಂದು ನೋಡುತ್ತೇನೆ" ಎಂದವಳು ಚಾರುವನ್ನು ಎಬ್ಬಿಸಿದಳು. ಕಣ್ತೆರೆದು ನೋಡಿದ ಚಾರು – ಅವನ ಗುಳಿ ಬಿದ್ದ ಕಣ್ಣುಗಳಲ್ಲಿ ಬೆಳಕಿರಲಿಲ್ಲ. ಸಿಸ್ಟರ್ ಅವನ ಹಣೆಯ ಮೇಲಿನ ಪಟ್ಟಿಯನ್ನು ತೆಗೆದಳು ಮತ್ತು "ಬಾಯಿ ತೆರೆಯಿರಿ – ಜ್ವರ ಎಷ್ಟಿದೆ? ಎಂದು ನೋಡುತ್ತೇನೆ" ಅಂದಳು. ಚಾರು ನನ್ನ ನಾಲಿಗೆಯ ಸಂಧಿಯಲ್ಲಿ ಥರ್ಮಾಮಿಟರ್ ಇಟ್ಟುಕೊಂಡು ಬಾಯಿ ಮುಚ್ಚಿದ. ಮೈಥಿಲಿ, "ನಂಗೆ ಆಫೀಸಿಗೆ ಲೇಟಾಗುತ್ತದೆ ಸಂಜೆ ಬರ್ತೇನೆ" ಎಂದು ಸಿಸ್ಟರ್ ಬಳಿ ಹೇಳಿದಳು. ಆವಾಗಲೇ ಸಿಸ್ಟರ್ ಅಂದಳು; "ನೀವ್ಯಾರು?" – "ನಾನು ಇವರ ಮಿಸೆಸ್, ಈವತ್ತು ಅರ್ಜೆಂಟ್ ಡ್ಯೂಟಿಗೆ ಹೋಗಲೇಬೇಕು, ಸಂಜೆ ಬರ್ತೀನಿ" ಅಂದವಳೇ, "ಏನು ಸಿಸ್ಟರ್ ಬರೀ ಜ್ವರ ಅಷ್ಟೆ ತಾನೆ?" ಅಂದಳು. ಸಿಸ್ಟರ್ ಅನುಭವಿ, ತಿಳುವಳಿಕೆಯುಳ್ಳವಳು, ಮೈಥಿಲಿಯನ್ನು ನೋಡುತ್ತಲೇ ಅಂದಳು; "ಜ್ವರ, ಏನು ಕಾರಣ ಅಂತ ಗೊತ್ತಿಲ್ಲ, ಡಾಕ್ಟ್ರು ಏನೂ ಹೇಳಿಲ್ಲ, ಜ್ವರ ಇಳಿಯದೇ ಏನು ಮಾಡುವಂತೆಯೂ ಇಲ್ಲ, ಬಹಳ ವೀಕ್‌ನೆಸ್ ಇವರಿಗೆ – ನೋಡ್ಬೇಕು." ಆದರೆ, ಸಿಸ್ಟರ್‌ನ ಮನಸ್ಸಿನಲ್ಲಿ ಇವಳೆಂಥಾ ಹೆಂಡತಿಯೆಂದು ಅನಿಸಿತು. ಅಸಹನೆಯ ಅವಳ ಕಣ್ಣು ಮೈಥಿಲಿಯ ಕಡೆಗೊಮ್ಮೆ ನೋಡಿ ನತದೃಷ್ಟ ಪೇಶಂಟ್‌ನ ಬಾಯಿಂದ ಥರ್ಮಾಮಿಟರ್ ತೆಗೆದಳು. ಮತ್ತೊಮ್ಮೆ ವಾಚು ನೋಡಿಕೊಂಡ ಮೈಥಿಲಿಯು "ಸಂಜೆ ಬರುತ್ತೇನೆ" ಎಂದವಳೇ ಹೊರಟುಹೋದಳು. ಈ ಕುರಿತು ಬಾಯೊಣಗಿದಂತೆ ಇದ್ದ ಚಾರು ಮಾತಾಡುವಂತಿರಲಿಲ್ಲ ಮತ್ತು ಸಿಸ್ಟರ್‌ಗೆ ಯಾರು ಬಂದರೂ ಯಾರು

ಹೋದರೂ ಅದು ಅನವಶ್ಯಕ! ಅದಕ್ಕಾಗಿ ಅವಳಂತೂ ಮತ್ತೊಮ್ಮೆ ತಿರುಗಿ ನೋಡಿ ಸುಮ್ಮನಾದಳು. ಅವಳಿಗೂ ಅವಳ ಕರ್ತವ್ಯವೇ ದೊಡ್ಡದು! ಚಾರುವಿನ ಮುಖದಲ್ಲಿ ಸಣ್ಣದೊಂದು ವಿಷಾದದ ಕಳೆಯು ಬಂದು ಹೇಗೆ ಹೋಯಿತು? ಮನಸ್ಸಿನ ಮೇಲೆ ಮತ್ತೊಂದು ಕಪ್ಪು ಗೆರೆಯನ್ನು ಎಳೆದಳು – ಮೈಥಿಲಿ.

ಕರ್ತವ್ಯದ ಕಾರಣವನ್ನು ಹೇಳಿಕೊಂಡು ಹೊರಟ ಮೈಥಿಲಿಯು ಆಸ್ಪತ್ರೆಯ ಗೇಟ್ ದಾಟಿಕೊಂಡು ಹೋಗಿ ಅರ್ಧ ಗಂಟೆಯಲ್ಲಿ ಆಟೋವೊಂದರಲ್ಲಿ ಬಂದಿಳಿದವಳು – ರೇಖಾ ಪಿಂಟೋ. ರೇಖಾಪಿಂಟೋಗೆ ರಾತ್ರಿಯೇ ಸುದ್ದಿ ಮುಟ್ಟಿಸಿದ ಅಟೆಂಡರ್ ವಿಷಯ ತಿಳಿಸಿಯೇ ಹೋಗಿದ್ದ. ರೇಖಾ ಪಿಂಟೋ ಬಂದವಳು ನೇರವಾಗಿಯೇ ಚಾರುವಿನ ಕೊಠಡಿಯನ್ನು ಹೊಕ್ಕಳು. ಮೈಮೇಲೆ ಸಣ್ಣದೊಂದು ಜಿರಳೆ ಬಿದ್ದರೂ ಗಾಬರಿ ಬೀಳುವ ಹುಡುಗಿ ರೇಖಾ ಪಿಂಟೋ. ಅವಳಿಗೆ ಚಾರುವನ್ನು ನೋಡಿದಾಗಲೇ ಗಾಬರಿಯಾಯಿತು. ತಕ್ಷಣವೇ ಅವಳಿಗೆ ಸಹಜವಾದ ಕಣ್ಣೀರು ಹನಿಯಾಡಿಸಿತು. ಚಾರು ಗಮನಿಸದಿರಲಿ – ಮುಖ ತಿರುವಿ ನಿಂತಳು. ಚಾರು ಒಂದು ಮಾತನ್ನು ಆಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ರೇಖಾ ಬಂದಾಗ ಅವನು ಕಣ್ಮುಚ್ಚಿ ಮಲಗಿದ್ದ, ಅವನಿಗೆ ಅವಳು ಬಂದ ಅರಿವು ಇರಲಿಲ್ಲ. ಚಾರುವಿನ ಬಳಿಯಲ್ಲಿ ಕುಳಿತ ರೇಖಾ ಪಿಂಟೋ ಅವನ ಹಣೆಯ ಮೇಲೆ ತನ್ನ ಕೈಯಿಟ್ಟಳು. ಕುದಿಯುತ್ತಿರುವ ಅವನ ಹಣೆಯ ಬಿಸಿಯು ರೇಖಾಳ ಕೈ ಮೇಲೆ ತಗುಲಿತು. ಅಲ್ಲಿಯೇ ಕುಳಿತಳು – ಅವನ ಸೇವೆಗಾಗಿ ಮತ್ತು ಹೋಗಿ ಮಾಡಲು ಯಾವ ಡ್ಯೂಟಿಯೂ ಇರಲಿಲ್ಲ. ಚಾರುವಿನ ಪರಿಸ್ಥಿತಿಯನ್ನು ನೋಡಿ ಅವನನ್ನು ಬಿಟ್ಟು ಹೋಗಲು ರೇಖಾಗೆ ಮನಸ್ಸು ಬರಲಿಲ್ಲ. "ಅನ್ಯರ; ದುರ್ಬಲರ ಸೇವೆಗಿಂತ ಮಿಗಿಲಾದ ದೇವರಿಲ್ಲ" ಎಂದು ನಂಬಿದ ಹುಡುಗಿ ರೇಖಾಪಿಂಟೋ ಆ ಕ್ಷಣದಲ್ಲಿ ಸೀರೆಯ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಚಾರುಗೆ ಬೇಕಾದ ಸೇವೆ ಮಾಡಲು ಸಿದ್ಧವಾದಳು. ರೇಖಾಗೆ ಬೇರೆ ಯಾವುದೂ ಮುಖ್ಯವಾಗಿರಲಿಲ್ಲ. "ಚಾರು ಚೇತರಿಸಿಕೊಂಡರೆ ಸಾಕು, ಚಾರುವಿನಂಥವರು ಉಳಿಯಬೇಕು." ಅವಳ ಹಂಬಲವು ದೊಡ್ಡದು. ಮುಗ್ಧ ಹೆಣ್ಣು ಜೀವವೊಂದರ ಅಪರಿಮಿತವಾದ ವಿಶ್ವಾಸ ಮತ್ತು ನಂಬಿಕೆಯ ಮೇಲೆ ಯಾರೂ ಬೆಲೆ ಕಟ್ಟಲಾರರು! ರೇಖಾ ಚಾರುವನ್ನು ನೋಡಿ – ಬಾಯಾರುತ್ತಿರುವ ಒಣಗಿದ ತುಟಿಗೆ – ಗ್ಲೂಕೋಸು ನೀರನ್ನು ಎರೆಯುತ್ತಿರುವ ಸಂದರ್ಭದಲ್ಲಿಯೇ ಅಲ್ಲಿಗೆ ಡಾಕ್ಟರ್ ನಾಯಕ್ ಬಂದರು. ಬಾಗಿ ನಿಂತು, ಚಾರುವಿನ ನಾಡಿ ಮಿಡಿತ ನೋಡಿದರು. ತಿರುಗಿ ನಿಂತು ಸಿಸ್ಟರ್ ಹತ್ರ – ಯಾವುದೋ ವಿವರಗಳನ್ನು ಕೇಳಿದರು. ಡಾ. ನಾಯಕ್‌ರ ತಲೆಯಲ್ಲಿ ನಾಕು ಕೂದಲು ಬಿಳಿಯಾಗಿವೆ, ಅರ್ಧ ಬಕ್ಕತಲೆ, ಅನುಭವಿ ಮುದುಕ ಡಾಕ್ಟರು. ಚಿತ್ರದಲ್ಲಿರುವ ಪ್ರಶಾಂತತೆಯು ಅವರ ಹಸನ್ಮುಖದಲ್ಲಿಯೇ ವ್ಯಕ್ತವಾಗುತ್ತದೆ. ದಪ್ಪ ಚಾಳೀಸು,

ಚಾರುವಿನ ಮುಖದಲ್ಲಿ ಜ್ವರದ ಪ್ರೇತ ಕಳೆಯನ್ನು ನೋಡಿಯೇ ಅಂದಾಜು ಮಾಡಿದ್ದಾರೆ. ಸಣ್ಣದೊಂದು ಅನುಮಾನದಲ್ಲಿಯೇ ಕೇಳಿದರು – ಯುರೀನ್; ಬ್ಲಡ್ ಟೆಸ್ಟ್ ಮಾಡಿಸಿ – ರಿಪೋರ್ಟು ತರಿಸಿ. ತಲೆಯನ್ನು ಮೇಲಕ್ಕೆತ್ತದೆ, "ಅಲ್ಲಮ್ಮ, ನಿಮ್ಮ ಗಂಡ ಎಷ್ಟು ಕುಡೀತಾರೆ? ಸಿಗರೇಟು ಎಷ್ಟು ಸೇದ್ತಾರೆ?" ಡಾಕ್ಟರು ನಾಯಕ್ ಕೇಳಿದ ಪ್ರಶ್ನೆಗೆ ಉತ್ತರ ಕೊಡಲು – ರೇಖಾ ಪಿಂಟೋಗೆ ವಿಪರೀತವಾದ ಸಂಕೋಚವಾಯಿತು. ಥಟ್ಟನೇ ಕೆಂಪೇರಿತು ಅಚ್ಚ ಮಲ್ಲಿಗೆಯ ಗಲ್ಲವುಳ್ಳ ಹುಡುಗಿಗೆ – ಅವಳ ಕೆನ್ನೆ. ಅವಳ ಕೆಂಪೇರಿದ ಗಲ್ಲವನ್ನು ನೋಡುವ ತಾಳ್ಮೆಯಂತೂ ವೃದ್ಧ ವೈದ್ಯರಿಗೆ ಇರಲಿಲ್ಲ. ಎದುರುಗಡೆಯಿರುವುದು ರೋಗಿ ಮತ್ತು ಅವನ ದೇಹ. ಉಳಿದುದರ ಗೊಡವೆ ಯಾತಕ್ಕೆ? ಡಾ. ನಾಯಕ್‌ರು ತಮ್ಮ ಕೈ ಬೆರಳಿಂದ ರೋಗಿಯಾದ ಚಾರುವಿನ ಹೊಟ್ಟೆಯನ್ನು ನಿಧಾನವಾಗಿ ಒತ್ತುತ್ತಾ ಬಂದರು. ಜ್ವರದಿಂದ ಬಳಲಿದ ಚಾರುವಿನ ಮುಖದಲ್ಲಿಯೂ ಸಣ್ಣನೆಯ ನೋವಿನಿಂದ ಉಂಟಾದ ಯಾತನೆಯು ವ್ಯಕ್ತವಾಯಿತು. ರೋಗ ಯಾವುದು ಎಂದು ತಿಳಿಯಿತು ತಜ್ಞ ವೈದ್ಯನಿಗೆ! ಕುಡಿತದಿಂದ ಲಿವರ್ ಸ್ವಲ್ಪ ಊದಿಕೊಂಡಂತಿದೆ. ಡಾ. ನಾಯಕ್ ತಿರುಗಿ ರೇಖಾಳ ಮುಖ ನೋಡಿ; "ಕಡ್ಡಾಯವಾಗಿ ಕುಡಿತ ಮತ್ತು ಸಿಗರೇಟು ಎರಡನ್ನು ಬಿಡಲೇಬೇಕು. ಈಗ ಜಲ್ದಿ ಬಂದಿರುವುದರಿಂದ ಬದುಕಿದನಮ್ಮಾ, ನಿನ್ನ ಗಂಡ. ಅದೆರಡನ್ನು ಇನ್ನು ಮುಟ್ಟಬಾರದು. ಮೂರು–ನಾಕು ದಿನಗಳಲ್ಲಿ ಜ್ವರ ಕಡಿಮೆಯಾಗುತ್ತದೆ. ಆದರೆ, ಔಷಧಿ ಮತ್ತು ಪಥ್ಯ ಎರಡೂ ಕೆಲ ಸಮಯ ಬೇಕು, ಇಲ್ಲದಿದ್ದರೆ ಜೀವಕ್ಕೆ ಅಪಾಯ, ಸಿಸ್ಟರ್ ಈಗ ಬ್ಲಡ್ ಮತ್ತು ಯುರೀನ್ ರಿಪೋರ್ಟು ತರಿಸಿಬಿಡಿ, ಅಷ್ಟೆ; ಏನೂ ತೊಂದರೆಯಿಲ್ಲ" ಎಂದವರೆ ರೂಮಿನ ಹೊರಗಡೆ ಕಾಲಿಟ್ಟರು. ಚಾರುವಿನಂಥ ಕೃಶದೇಹಿಯು ಆಸ್ಪತ್ರೆಯ ಬೆಡ್‌ನ ಮೇಲೆ ಪುಟ್ಟ ಮಗುವಿನಂತೆ ಮಲಗಿದ್ದ. ರೇಖಾಳ ಕಣ್ಣಂಚಿನಲ್ಲಿ ಮತ್ತೊಮ್ಮೆ ಹನಿ! ಸಿಗರೇಟು ಮತ್ತು ಕುಡಿತದಿಂದ ಜಗವನ್ನೇ ಗೆಲ್ಲಬಹುದು ಎಂದುಕೊಂಡವನಿಗೆ ಅವನೆದುರಲ್ಲೇ ಅವನ ಶಸ್ತ್ರಾಸ್ತ್ರವನ್ನು ಬಿಸಾಕಲು ಡಾಕ್ಟರ್ ನಾಯಕ್ ಹೇಳಿದರು. ಕಣ್ಣಂಚಿನಲ್ಲಿ ಜಿನುಗಿದ ನೀರನ್ನು ಒರೆಸಿಕೊಂಡ ರೇಖಾ ನಿಧಾನವಾಗಿ ಎಳೆಯ ಬೆಂಡೆಕಾಯಿಯಂಥ, ಚಿಗುರೆಲೆಯಂಥ ಕೈ ಬೆರಳನ್ನು ಚಾರುವಿನ ಹಣೆಯ ಮೇಲಿಟ್ಟಳು. ಚಾರುಗೊಂದು ಆಪ್ತವಾದ ನೇವರಿಕೆ, ಅಲ್ಲಿಯೇ ನಿದ್ದೆಯ ಮಂಪರು ಅವನಿಗೆ. ಹುಡುಗಿಯೊಬ್ಬಳ ಪ್ರೀತಿ ತುಂಬಿದ ಸ್ಪರ್ಶದಲ್ಲಿ ಅಸಂಖ್ಯ ಅರ್ಥಗಳಿವೆಯೆಂದು ಜ್ವರದಿಂದ ಕುದಿಯುತ್ತಲೇ ಮಲಗಿದ ಚಾರುಗೆ ಕೂಡಾ ತಿಳಿಯಿತು. ಚಾರುಗೆ ಜ್ವರ ಕಡಿಮೆಯಾಗಿ ಬದುಕಿ ಉಳಿಯಲಿ ಎಂದು ರೇಖಾ ಪಿಂಟೋ ಭಾವಿಸಿದಳು. ಆದರೆ, ಅವಳ ಕೈ ಮಾತ್ರ ಚಾರುವಿನ ಹಣೆಯ ಮೇಲಿತ್ತು – ಚಾರುವಿನ ಹಣೆಬರಹವನ್ನು ಮುಚ್ಚಿಕೊಂಡ ರೀತಿಯಲ್ಲಿ!

ಇಬ್ಬರಿಗೂ ಬೆಳಗೆಂದರೆ ಇಷ್ಟ

–೮ –

ನಾಗೇಶ ಮನೆಗೆ ಬರುವಾಗ ದಾರಿಯಲ್ಲಿಯೇ ಜನ್ನುಗೆ ಒಂದು ಮಾತು ಹೇಳಿದ; "ಹದಿನಾರು ವರ್ಷದಿಂದ ಮೇಲಿನ ಮೂವತ್ತು ವರ್ಷದ ಒಳಗಿನ ಹುಡುಗರ ಪಡೆಯೊಂದು ಸರಿಯಾಗಿ ನಿರ್ಮಾಣವಾಗಬೇಕು. ಇದಕ್ಕೆ ನಾವು ಯಾವುದೇ ರೀತಿಯ ಖರ್ಚು ಮಾಡಬೇಕಿಲ್ಲ. ನಗರದ ಪ್ರತಿಯೊಂದು ಬೀದಿಯಲ್ಲಿರುವ ಹುಡುಗರನ್ನು ಬೇರೆ ಬೇರೆ ಸಮಯದಲ್ಲಿ ಒಂದೆಡೆಗೆ ಸೇರುವಂತೆ ಮಾಡು. ನಗರದ ಪ್ರತಿಯೊಂದು ಬೀದಿಯಲ್ಲಿಯೂ ಕನಿಷ್ಠವೆಂದರೆ ಹತ್ತತ್ತು ಹುಡುಗರು ಸಿಗಬೇಕು. ಗಣೇಶೋತ್ಸವದ ವೇಳೆಗೆ ಅವರನ್ನು ಒಳ್ಳೆಯ ಕಸುಬುದಾರರನ್ನಾಗಿ ಮಾಡುವುದು ನನ್ನ ಜವಾಬ್ದಾರಿ. ಅದಕ್ಕಾಗಿ ಸರಿಯಾದ ನಿಷ್ಠೆಯಲ್ಲಿರುವ ಒಬ್ಬೊಬ್ಬ ಹುಡುಗರನ್ನು ತಲಾಶ್ ಮಾಡು. ಯಾವ ಕಾಲಕ್ಕೂ ಅವರ ನಿಷ್ಠೆ ಮಾತ್ರ ಬದಲಾಗಬಾರದು. ಯಾವುದೇ ಹುಡುಗರನ್ನು ಆಯ್ಕೆ ಮಾಡಿಕೊಳ್ಳುವಾಗ ಎರಡು ಅಂಶಗಳನ್ನು ಸರಿಯಾಗಿ ನೆನಪಿಟ್ಟುಕೋ: ಅವರ ಕಣ್ಣುಗಳಲ್ಲಿ ಚುರುಕುತನವಿದೆಯೇ ಇಲ್ಲವೇ ಎಂಬುದು

ಒಂದಂಶ. ಅವರ ಕಣ್ಣುಗಳಲ್ಲಿ ಚುರುಕುತನವಿದ್ದರೆ ಚಟುವಟಿಕೆಯಲ್ಲಿ ಅವರು ತುಂಬಾ ಕ್ರಿಯಾಶೀಲರಾಗಿರುತ್ತಾರೆಂದರ್ಥ. ಎರಡನೆಯದು – ಅವರಿಗೆ ಧೈರ್ಯವಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸು. ಧೈರ್ಯ ಮತ್ತು ಚುರುಕುತನವಿದ್ದರೆ ಉಳಿದುದನ್ನು ಸಲೀಸಾಗಿ ರೂಢಿಸಿಕೊಳ್ಳಬಹುದು. ಅದಕ್ಕೆ ಬೇರೆ ಪುರಾವೆಗಳು ಬೇಕಿಲ್ಲ." ಜನ್ನು ಕಿವಿಗೊಟ್ಟು ಕೇಳಿದ. ಪ್ರತಾಪನ್ ಈ ಮನುಷ್ಯನನ್ನು ಹಣ್ಣುಗಾಯಿ, ನೀರುಗಾಯಿ ಮಾಡಿದ್ದರೂ ಮತ್ತೆ ಮೇಲೇಳುವ ಮತ್ತೊಂದು ಪ್ರಯತ್ನ ಮಾಡುತ್ತಿದ್ದಾನೆ. ಅಂದರೆ: ಮುಂದಿನ ಮಹಾನ್ ಸಂಗ್ರಾಮಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾನೆ. ಮರು ಪ್ರಶ್ನೆಯನ್ನು ಕೇಳುವ ಸ್ವಭಾವವು ಜನ್ನುವಲ್ಲಿ ಇಲ್ಲ. ಹಾಕಿದ ಅನ್ನ, ಹೇಳಿದ ಕೆಲಸ, ಅದು ಅವನ ನಿಯಮ. "ಆಯ್ತು ನಾಗೇಶಣ್ಣ" ಎಂದ. "ಖರ್ಚಿಗೇನು ಮಾಡುವುದು ಅಂತ ಯೋಚಿಸಬೇಡ, ಅದಕ್ಕೆ ನಾನೇ ವ್ಯವಸ್ಥೆ ಮಾಡುತ್ತೇನೆ" ಅಂದ ನಾಗೇಶ ಅರ್ಧ ದಾರಿಯಲ್ಲಿಯೇ ಜನ್ನುವನ್ನು ಕಳಿಸಿಕೊಟ್ಟ. ನಾಗೇಶನಿಗೆ ಮನೆಯತನಕ ಜನ್ನುವು ಬರುವುದು ಬೇಕಿರಲಿಲ್ಲ! ಅವನನ್ನು ಬಿಟ್ಟು ಹೊರಡುವಾಗ ಜನ್ನು ನಾಗೇಶನ ಮುಖ ನೋಡಿ – ಹಲ್ಲು ಕಿರಿದ. "ಜಯಮ್ಮಂಗೆ ಹೇಳು ನಾಗೇಶಣ್ಣ ಹೇಳಿದ್ದಾನೆ ಕೊಡ್ಬೇಕಂತೆ ಅಂತ, ಅವಳು ಕೊಡುತ್ತಾಳೆ, ಎಷ್ಟು ಬೇಕೋ ಅಷ್ಟು ಕುಡಿ. ಅದರೆ, ಇನ್ನು ಮುಂದೆ ರಾತ್ರಿ ಮಾತ್ರ ಕುಡಿಯಬೇಕು. ನಿನ್ನ ದುಶ್ಚಟ ಯಾರಿಗೂ ಗೊತ್ತಾಗಬಾರದು, ತಿಳಿಯಿತಾ"ಎಂದ ನಾಗೇಶ ಅನಂತರ ತಿರುಗಿ ಅವನನ್ನು ನೋಡಲಿಲ್ಲ. ಅವನು ಒಂದು ಕಡೆಗೆ ಹೋದರೆ–ಮತ್ತೊಂದು ಕಡೆಗೆ ಜನ್ನು ಹೆಜ್ಜೆ ಹಾಕಿದ. ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ನಾಗೇಶ ಬಂದಾಗ ಅವನಿಗೆ ಸ್ವಾಗತ ಕೋರಲು ಮನೆಯಲ್ಲಿ ಯಾರೂ ಇರಲಿಲ್ಲ. ಶ್ರೀ ಮಹಾಗಣಪತಿಯ ಸನ್ನಿಧಿಯಲ್ಲಿ ಶೇಷ ಶಾಸ್ತ್ರಿಗಳು ಮಂತ್ರ ಹೇಳುತ್ತಾ ಗಣಪತಿ ದೇವರಿಗೆ ಆರತಿ ಬೆಳಗುತ್ತಿದ್ದರು. "ಮಗನಿಗೆ ಸದ್ಬುದ್ಧಿಯನ್ನು ಕರುಣಿಸು ದೇವರೇ" ಎಂದು ವಿಶಾಲಾಕ್ಷಮ್ಮ ಪ್ರಾರ್ಥಿಸುತ್ತಿದ್ದರು. "ತಂದೆ–ತಾಯಿ ಇಬ್ಬರಿಗೂ ಮುದಿತನದ ಭ್ರಾಂತು. ದೇವರ ಪೂಜೆಯಿಂದ ಉಪಯೋಗವಿಲ್ಲ, ದೇವರು ಕೂಡಾ ನಮಗೆ ಒಂದು ದಾರಿ. ತೋಳ್ಬಲದ ಮೇಲೆ ನಂಬಿಕೆಯು ಇಲ್ಲದಿದ್ದವರು ದೇವರನ್ನು ನಂಬಬೇಕು ಅಷ್ಟೆ" ಎಂದುಕೊಂಡ ನಾಗೇಶ. ಮೈ ಮತ್ತು ತೋಳ್ಬಲದ ಕಟ್ಟೆಚ್ಚರದ ಶಕ್ತಿಯನ್ನು ಅತ್ಯಂತ ಜಾಗ್ರತೆಯಾಗಿ ನಂಬಿಕೊಂಡಿರುವ ನಾಗೇಶನಿಗೆ ಹಾಗೆನ್ನಿಸುವುದು ಸಹಜ. ಅದು ಹುಟ್ಟಿದ್ದು ಅವನ ಮಹತ್ವಾಕಾಂಕ್ಷೆಯ ಫಲವಾಗಿ. ಅವನು ಬಂದವನೇ ಕಳೆದುಹೋದ ತನ್ನ ಬೈಕ್ ಚೈನಿನ ಬೆಲ್ಟ್‌ನ್ನು ಹೊಸದಾಗಿ ಮಾಡಿಸಿಕೊಳ್ಳಬೇಕು ಮತ್ತು ಕಬ್ಬಿಣದ ಸಣ್ಣದೊಂದು ಚಾಕು ಮಾಡಿಸಿಕೊಳ್ಳಬೇಕು. ಈ ಎರಡರ ತಯಾರಿಯಾದರೆ ಉಳಿದದ್ದು ಆಮೇಲೆ ಮಾಡಿಸಿಕೊಳ್ಳಬಹುದು. ಬೈಕ್ ಚೈನಿನ ಬೆಲ್ಟ್ ಮಾಡಿಸಿಕೊಳ್ಳುವುದು ಮತ್ತು ಒಂದು ಹರಿತವಾದ ಚಾಕು ಇವೆರಡನ್ನು ಜೊತೆಯಲ್ಲಿ ಇಟ್ಟುಕೊಳ್ಳುವುದು ಸೂಕ್ತವೆಂದು

ಅವನು ಪರಿಭಾವಿಸಿಕೊಳ್ಳುತ್ತಿರುವ ಹೊತ್ತಿಗೆ ಬಂದುದು ಒಂದು ಫೋನು ಕರೆ; "ಜೆ.ಕೆ. ಸಾಹೇಬ್ರು ನಿಮ್ಮನ್ನು ಬರಹೇಳಿದ್ದಾರೆ. ನಿಮ್ಮನ್ನು ಅವರು ಭೇಟಿಯಾಗಬೇಕು ಅಂತ ಹೇಳುತ್ತಿದ್ದಾರೆ, ಸಾಧ್ಯವಾದರೆ ಈಗಲೇ ಬನ್ನಿ. ಜೆ.ಕೆ. ಸಾಹೇಬ್ರು ನಿಮಗಾಗಿ ಕಾಯುತ್ತಿದ್ದಾರೆ. ಅವರು ನಿಮಗೆ ಎಲ್ಲಿ ಸಿಗುತ್ತಾರೆ ಅಂತ ಐದು ನಿಮಿಷ ಬಿಟ್ಟು ಹೇಳ್ತಾರಂತೆ, ಮನೆಯಲ್ಲಿಯೇ ಕೂತಿರಿ." ನಾಗೇಶನಿಗೆ ಈ ಜೆ.ಕೆ. ಸಾಹೇಬರು ಅಂದರೆ ಯಾರು? ಯಾಕಾಗಿ ತನ್ನನ್ನು ಭೇಟಿಯಾಗಲು ಇಷ್ಟಪಡುತ್ತಿದ್ದಾರೆ ಎಂದು ಗೊತ್ತಿಲ್ಲ. ಅವರ ಹೆಸರನ್ನು ಕೇಳಿದವನಾದರೂ ಅವರು ಯಾಕಾಗಿ ತಮ್ಮ ಕರೆಯುತ್ತಿದ್ದಾರೆ ಎಂದು ಅರಿವಿಲ್ಲ. ಒಂದಂತೂ ಅವನ ಎದುರಲ್ಲಿದೆ: ಅದೆಂದರೆ ನಗರದಲ್ಲಿ ಹೇಗಾದರೂ ಮಾಡಿ ಮುಂದಿನ ನಾಯಕನಾಗುವುದು, ಜನಕ್ಕೆ ಈಗ ಬೇಕಾಗಿರುವುದು ಹೊಸ ಮುಖದ; ಹೊಸ ರಕ್ತದ ನಾಯಕರು ಮಾತ್ರ. ಜೆ.ಕೆ. ಸಾಹೇಬರನ್ನು ಭೇಟಿಯಾಗುವುದು ಅನುಕೂಲವಾಗಬಹುದು ಅಥವಾ ಆಗದೆಯೂ ಇರಬಹುದು. ಆದರೆ, ಏಣಿಗೂ ಹತ್ತಾರು ಮೆಟ್ಟಿಲುಗಳಿರುತ್ತವೆ. ಮೇಲೆ ಏರಲು ಬಯಸುವವನಿಗೆ ತಾನು ಮೆಟ್ಟಿದ ಮೆಟ್ಟಿಲುಗಳು ಮುಖ ಕೆಳಗೆ ನೋಡಬೇಕಿಲ್ಲ. ಆದರೆ ಹತ್ತಲು ಬೇಕಾದ ಮೆಟ್ಟಿಲುಗಳ ಅರಿವಿರಬೇಕು. ಅದನ್ನು ಯೋಚಿಸುತ್ತಿದ್ದವನಿಗೆ ತಾನು ಬೈಕ್ ಚೈನಿನ ಬೆಲ್ಟ್ ಮತ್ತು ಚಾಕು ಮಾಡಿಸಬೇಕೆಂದವನು ಅದನ್ನು ಮರೆತು ಫೋನು ಕರೆಗೆ ಕಾಯುತ್ತಾ ಕುಳಿತ. ಆದರೆ, ಅವನು ಫೋನಿನ ಕರೆಗೆ ಕಾಯುತ್ತಾ ಕೂತುದು ಅವನ ಪ್ರಬುದ್ಧತೆಯ ಲಕ್ಷಣವಲ್ಲ. ಅಪ್ರಬುದ್ಧ ಮತ್ತು ಉತ್ಸಾಹಿಯಾದ ಅವನನ್ನು ಪರೀಕ್ಷಿಸುವುದಕ್ಕಾಗಿಯೇ ಜೆ.ಕೆ. ಹಾಗೆ ಮಾಡಿದ್ದಾನೆಂಬ ಸಣ್ಣ ಶಂಕೆಯೂ ಅವನಲ್ಲಿ ಮೂಡಲಿಲ್ಲ. ಗೊತ್ತಿದ್ದರೆ ಚಡಪಡಿಸುವುದರ ಯಾವ ಅಗತ್ಯವೂ ನಾಗೇಶನಿಗೆ ಇರುತ್ತಿರಲಿಲ್ಲ. ರಂಗೋಲಿಯ ಕೆಳಗೆ ಜೆ.ಕೆ. ನುಸುಳಿಬಿಟ್ಟ, ಯಾಕೆಂದರೆ ಅವನು ಕಟ್ಟಿದ ಕೋಟೆಯ ದಿಡ್ಡಿ ಬಾಗಿಲು ಹಾಕುವುದಕ್ಕೆ ನಾಗೇಶ ಸಿಕ್ಕಿದ! ಜೆ.ಕೆ. ಸಾಹೇಬರು ಐದು ನಿಮಿಷ ಬಿಟ್ಟು ಸ್ವತಃ ಫೋನು ಮಾಡಿದರು – "ನಾಗೇಶ, ನೋಡಪ್ಪ, ನಾನು ನಿನ್ನ ಜೊತೆ ಮಾತಾಡಬೇಕು, ನೇರವಾಗಿ ಎಂ.ಜಿ. ರೋಡ್‌ನ ಜೆ.ಕೆ. ಬ್ರದರ್ಸ್ ಅಂಗಡಿಯತ್ರ ಬಂದುಬಿಡು. ನನ್ನ ಹುಡುಗ್ರು ನಿನ್ನನ್ನು ಕರೆಕೊಂಡು ಬರುತ್ತಾರೆ. ಮಧ್ಯಾಹ್ನ ಒಂದು ಗಂಟೆಯ ಮೇಲೆ ನಾನು ರಾಯಚೂರು ಕಡೆಗೆ ಹೊರಟುಬಿಡಬೇಕು. ಚೆನ್ನಾಗಿದ್ದಿ ತಾನೆ? ಅದೇ, ಜಯಮ್ಮ ಬಂದು ಹೇಳಿದಳು – ನಮ್ಮವರು ಅಂದ ಮೇಲೆ ಸಹಾಯ ಮಾಡದೇ ಇರೋಕ್ಕಾಗುತ್ತಾ? ಅದಕ್ಕೆ ಪ್ರತಾಪನ್ ಎತ್ತಂಗಡಿಯಾದ, ಕೇವಲ ಎರಡೇ ದಿನದಲ್ಲಿ, ಬಹಳ ಪೊಗರು ಅವನ್ಗೆ. ಅಂದಹಾಗೆ, ಬರ್ತಿಯಲ್ಲಾಪ್ಪ?" ಅವರ ಧ್ವನಿಯಲ್ಲಿ ಯಜಮಾನಿಕೆ, ಸೂಕ್ಷ್ಮ ರಾಜಕಾರಣದ ಸುಳಿವೊಂದು ಇತ್ತು ಅದನ್ನು ಮಾತಾಡಲೆಂದೇ ಜೆ.ಕೆ. ಸಾಹೇಬರು ಅಂದರೆಂಬುದು ವಾಸ್ತವವಾಗಿ ನಾಗೇಶನಿಗೂ ತಿಳಿಯಿತು. ತನ್ನ ಸುತ್ತ ಒಂದು ನಿರ್ದಿಷ್ಟ ಲಕ್ಷಣ

ರೇಖೆಯೊಂದನ್ನು ಜೆ.ಕೆ. ಸಾಹೇಬರು ಎಳೆಯುತ್ತಿದ್ದಾರೆ. ಅಂದರೆ; ಮುಂದೆ ತನ್ನನ್ನು ಭೇಟಿಯಾದಾಗಲೂ ಜೆ.ಕೆ. ಬೇರೆ ಯಾವುದನ್ನೋ ಹೇಳಲಿದ್ದಾನೆ. ಆದರೆ, ಚಾಣಕ್ಯ ಕಾಲಿಗೆ ಸಿಕ್ಕಿದ ಗರಿಕೆಯ ಬೇರನ್ನು ಕಿತ್ತೆಸೆಯದೆ ಉಳಿಯಲಿಲ್ಲ ಎಂಬುದು ಜೆ.ಕೆ. ತಿಳಿದಿಲ್ಲ, ಇರಲಿ ಸಮಯಕ್ಕೆ ಬೇಕಾಗುತ್ತಾನೆ – ಈ ಜೆ.ಕೆ., ಹೋದರೆ ತಪ್ಪೇನಿಲ್ಲ. "ಸರಿಯಾಗಿ ಇನ್ನು ಹತ್ತು ನಿಮಿಷದಲ್ಲಿ ನಿಮ್ಮ ಜೆ.ಕೆ. ಬ್ರದರ್ಸ್ ಅಂಗಡಿಯ ಹತ್ತಿರ ಬಂದು ನಿಂತಿರುತ್ತೇನೆ." ಸಂಕ್ಷಿಪ್ತವಾಗಿಯೇ ನಾಗೇಶ ಉತ್ತರ ಹೇಳಿದ. ಅವನಿಗೂ ಗೊತ್ತು – ಜೆ.ಕೆ.ಗೆ ನಾನು ಬೇಕಾಗಿದೆ ಮತ್ತು ನನಗೆ ಜೆ.ಕೆ. ಬೇಕಾಗಿದ್ದಾನೆ. ಹುಲಿಯ ಮೇಲೆ ಸವಾರಿ ಹೊರಟವನಿಗೆ ಇದು ಯಾವ ಲೆಕ್ಕ? ಮತ್ತು ಯಾವ ಹಂಗು? ಜೆ.ಕೆ. ಗೆ ದುಡ್ಡಿದೆ, ಸಾಕಷ್ಟು ಪ್ರಭಾವಶಾಲಿ. ಆದರೆ, ನಾನೀಗ ದುಡ್ಡು–ಕಾಸು ಯಾವುದೂ ಇಲ್ಲದೇ ಕೇವಲ ಕೆಲವು ಆಸೆಗಳೊಂದಿಗೆ ಹೊರಟಿದ್ದೇನೆ ಎಂದು ಭಾವಿಸಿಕೊಂಡ ತಡಮಾಡದೆ ಮತ್ತೆ ಮನೆಯ ಬೀಗ ಹಾಕಿ ಹೊರಗೆ ಹೊರಟ. ಎದುರುಗಡೆಯಿಂದ ವಿಶಾಲಾಕ್ಷಮ್ಮ ಬಂದವರು, ಮಗ ಮತ್ತೆ ಮನೆಯಿಂದ ಹೊರಗೆ ಹೊರಟವನನ್ನು "ಎಲ್ಲಿಗೆ?" ಎಂದು ಕೇಳಬಾರದೆಂದು ಸುಮ್ಮನಾದರು. "ಎಲ್ಲಿಗೆ?" ಎಂದು ಕೇಳಿದ್ದರೆ ಒಂದು ಅಪಶಕುನವಾಗುತ್ತಿತ್ತು ನಾಗೇಶನಿಗೆ. ಆ ಅಪಶುಕುನದ ನುಡಿಯೊಂದನ್ನು ತಪ್ಪಿಸಿಕೊಂಡ! ಅವಸರದಲ್ಲಿಯೇ ಆಟೋರಿಕ್ಷಾವೊಂದನ್ನು ಹಿಡಿದುಕೊಂಡು ಜೆ.ಕೆ. ಬ್ರದರ್ಸ್ ಅಂಗಡಿಯ ಎದುರು ಕೇವಲ ಹತ್ತು ನಿಮಿಷದಲ್ಲಿ ಬಂದು ನಿಂತ. ನಾಗೇಶನ ಹಣೆಯಲ್ಲಿ ಎರಡು ಹುಬ್ಬುಗಳ ಮಧ್ಯೆ ಒಂದು ಕುಂಕುಮದ ತಿಲಕ. ಮುಂದಿನ ರಕ್ತತಿಲಕಗಳನ್ನು ಅವನು ಯಾರ್‍ಯಾರಿಗೆ ಹಂಚಬೇಕೆಂದು ಭಾವಿಸಿಕೊಂಡಿದ್ದನೋ ಅದರ ಸಂಕೇತವಾಗಿ ಅವನು ಬಂದು ಜೆ.ಕೆ. ಬ್ರದರ್ಸ್ ಅಂಗಡಿಯ ಬಳಿಯಲ್ಲಿ ಬಂದು ನಿಂತ ಎರಡೇ ಕ್ಷಣದಲ್ಲಿ ಸಾಹೇಬ್ರು ಕಾರಲ್ಲಿ ಕೂತವ್ರೆ, ಬರಬೇಕೆಂತೆ ಅಂತ ಡ್ರೈವರ್ ಕರೆದ. ನಾಗೇಶ ಜೆ.ಕೆ. ಸಾಹೇಬರನ್ನು ಭೇಟಿಯಾಗಲು ಅದೇ ಬಿಳಿಯ ಅಂಬಾಸಿಡರ್ ಕಾರು ಸಂಖ್ಯೆ–೬೩೭೧ರ ಹತ್ತಿರ ಹೋದ. ಕಾರಿನ ಸಂಖ್ಯೆಯನ್ನು ನಾಗೇಶ ಸರಿಯಾಗಿ ನೆನಪಿಟ್ಟುಕೊಂಡ. ೬೩೭೧ – ಆರು ಕೂಡಿಸು ಮೂರು ಅಂದರೆ ಒಂಬತ್ತು. ಏಳು ಕೂಡಿಸು ಒಂದು ಎಂಟು, ಒಂದು ಬೆಸ, ಮತ್ತೊಂದು ಸರಿ. ಈ ಭೇಟಿಯಲ್ಲಿ ಯಾರು ಬೆಸ, ಯಾರು ಸರಿಯೆಂದು ಕಾಲವೇ ನಿರ್ಧರಿಸಲಿದೆ. ಆದರೂ, ನಾಗೇಶನ ಹೆಜ್ಜೆಯಲ್ಲಿ ಅವಸರವಿತ್ತು. ಹೇಳದೇ ಇದ್ದರೂ ಅವನು ಮಾಡಬೇಕಾದ ಕೆಲಸಗಳು ಅನೇಕ!

ಕಾರಲ್ಲಿ ಹಿಂದುಗಡೆಯ ಸೀಟಿನಲ್ಲಿ ಕುಳಿತಿದ್ದವರು – ಜೆ.ಕೆ. ಬಿಳಿಯ ಶರಟು ಮತ್ತು ಬಿಳಿಯ ಮಕಮಲ್ಲಿನ ಪಂಚೆ, ಹೆಗಲಲ್ಲಿ ಒಂದು ಬಿಳಿಯ ಶಾಲು ಮತ್ತು ಬೋಳು ಮುಖದಲ್ಲಿ ಹುಬ್ಬಿನ ಒಂದು ಕಡೆ ಸಣ್ಣ ಗಾಯವಾದುದರ ಕಲೆ. ದುಂಡು ಮುಖಕ್ಕೆ ಯಾವುದೇ ಕಾರಣಕ್ಕೆ ಒಪ್ಪದಿರುವ ಗಿಡುಗ ಮೂಗು ಮತ್ತು ತೀರಾ ಸಣ್ಣ–

ಬಿಳಿಯ ಕಣ್ಣುಗಳು. ನಗೆಯೊಂದು ಸದಾ ಮುಖಕ್ಕೆ ಅಂಟಿಸಿಕೊಂಡಿರುವಂತೆ ಕಾಣಿಸುವ ರೀತಿ–ನಗು ಮತ್ತು ಹೆಬ್ಬೆರಳು ಒಂದನ್ನು ಹೊರತುಪಡಿಸಿ ಉಳಿದೆಲ್ಲಾ ಬೆರಳುಗಳಿಗೆ ಉಂಗುರ ಹಾಗೂ ತುಳಸೀ ಮಣಿಯನ್ನು ಕಟ್ಟಿಸಿಕೊಂಡ ಕೊರಳ ಹಾರ. ಯಾರೂ ನೋಡಿದರೂ ಈ ಮನುಷ್ಯ ಪೂರ್ತಿ ಸಾತ್ವಿಕನಲ್ಲ, ಅರಬರೆಯಾಗಿ ಕೇಡಿಗನೂ ಹೌದು ಎಂಬುದನ್ನು ಹೇಳಬಲ್ಲರು. ನಾಗೇಶ ಬಂದಕೂಡಲೇ ಹಿಂದಿನ ಬಾಗಿಲನ್ನು ಸ್ವತಃ ತೆರೆದ ಜೆ.ಕೆ. ಸಾಹೇಬರು, "ಬಾರಪ್ಪ ಕೂತುಕೋ" ಎಂದರು. ನಾಗೇಶನು ಕೂತುಕೊಂಡು ಬಾಗಿಲು ಎಳೆದುಕೊಂಡ. ಜೆ.ಕೆ. ಸಾಹೇಬರು ಡ್ರೈವರ್‌ಗೆ "ಹೋಗೋಣ, ನಮ್ಮ ಆಫೀಸಿನತ್ರ ನಡೆಯಪ್ಪ" ಎಂದರು. ಡ್ರೈವರ್ ಮರು ಮಾತಾಡದೆ ಕಾರು ಸ್ಟಾರ್ಟ್ ಮಾಡಿದ. ಜೆ.ಕೆ. ಸಾಹೇಬರು "ಏನಪ್ಪಾ ಆರೋಗ್ಯ ಸರಿಯಾಯ್ತೇನಪ್ಪಾ? ಜಯಮ್ಮನೇ ಸ್ವತಃ ಬಂದಿದ್ದಳು ಪಾಪ! ಅವಳು ಗಾಬರಿಯಾಗಿದ್ದಳು. ಒಳ್ಳೆಯ ಹೆಂಗಸು, ಏನೋ ಪಾಪ ಬದುಕಲಿ ಅಂತ ನಾನೇ ಅವಳಿಗೆ ಸಾರಾಯಿ ಅಂಗಡಿ ಕೊಡ್ಸಿದೆ. ಅವಳ ಗಂಡ ಬೇರೆ ಬಿಟ್ಟು ಹೋಗಿದ್ದ, ಬದುಕಿಕೊಳ್ಳಲಿ ಎಂದು ನಾನೇ ವ್ಯವಸ್ಥೆ ಮಾಡಿದೆ. ನನ್ನದೇನಿದ್ದರೂ ಸಣ್ಣಪುಟ್ಟವರ ಜೊತೆಗೆ ಕೆಲಸವಿಲ್ಲ. ಹೋಂ ಮಿನಿಷ್ಟ್ರು ಕೂಡಾ – ನನ್ನ ಗರಡಿಯಲ್ಲಿಯೇ ಬೆಳೆದವನು, ನಾನು ಏನಿದ್ದರೂ– ಯಾರನ್ನಾದರೂ ಮೇಲೆ ತರುತ್ತೇನೆಯೇ ಹೊರತು – ನಾನೇ ಸ್ವತಃ ಯಾವುದರ ಮೇಲೆಯೂ ಆಸೆಯನ್ನು ಪಡೆಯೋಲ್ಲ. ನನಗೆ ನನ್ನ ಟಿಂಬರ್; ಡಿಸ್ಟಿಲರಿಯ ವ್ಯವಹಾರವೇ ಸಾಕಾಗಿ ಹೋಗಿದೆ. ಉಳಿದ ಯಾವ ವಿಷಯಕ್ಕೂ ನಾನು ಕೈ ಹಾಕೋಲ್ಲ." ಜೆ.ಕೆ. ಯ ಮಾತಿನಲ್ಲಿ ಉದ್ದಗಲಕ್ಕೂ "ನಾನು" ಎಂಬ ಪದದ ಬಳಕೆ ಸಲೀಸಾಗಿ ಬಂದಿರುವುದನ್ನು ನೋಡಿದ. ನಾನೇ ಮಾಡಿದ್ದು ಎಂದು ಮಾತಾಡುವವರು; ಸ್ವಯಂ ಹೊಗಳಿಕೆಯಲ್ಲಿಯೇ ಮಗ್ನರಾಗಿರುವವರು; ಇನ್ನೊಬ್ಬರ ಏಳಿಗೆಯನ್ನು ಸಹಿಸುವುದಿಲ್ಲ ಎಂಬುದು ಸ್ಪಷ್ಟ. ನಾಗೇಶ ಕೂಡಾ ಒಮ್ಮೊಮ್ಮೆ "ಹೂಂ" ಎಂದು ಹೇಳುತ್ತಾ ಬಂದನೇ ಹೊರತು ಮಧ್ಯೆ ಬೇರೆ ಯಾವುದೇ ವಿಷಯವನ್ನು ಪ್ರಸ್ತಾವಿಸಲಿಲ್ಲ. ತಾನೆಷ್ಟು ದೊಡ್ಡವನು ಎಂದು ಜೆ.ಕೆ. ಯ ಬಾಯಲ್ಲಿ ಬಂತೇ ವಿನಃ ಬೇರೇನೂ ಇಲ್ಲ. ಕಾರು ಅವನ ಡಿಸ್ಟಿಲರಿಯತ್ರ ಬರುವ ತನಕವೂ ಅವನದೇ ಮಾತು, ಬೇರೆ ಯಾವುದೂ ಇಲ್ಲ. ನಾಗೇಶನೂ ಸುಮ್ಮನಿದ್ದ. ಡಿಸ್ಟಿಲರಿಯ ಕಚೇರಿಯತ್ರ ಬರುವ ತನಕವು ಮಾತಾಡಿದ ಜೆ.ಕೆ. ಸಾಹೇಬರು – ಕಾರನ್ನು ಕಚೇರಿಯ ಎದುರುಗಡೆ ನಿಲ್ಲಿಸಿದ ತಕ್ಷಣವೇ – ಇಳಿದರು. "ಬಾರಪ್ಪ" ಎಂದು ನಾಗೇಶನನ್ನು ಕರೆದುಕೊಂಡು ಹೋದರು. ಇದ್ದ ಕೆಲವರು ಸಾಹೇಬರಿಗೆ ನಮಸ್ಕಾರ ತಿಳಿಸಿದರು. ಆದರೆ, ಅವರ ಕಡೆಗೆ ಒಂದಿಷ್ಟು ಗಮನವನ್ನು ಕೊಡದೆ ಜೆ.ಕೆ. ಸಾಹೇಬರು ಅವರ ವೈಯಕ್ತಿಕ ಛೇಂಬರಿನ ಒಳಗಡೆ ಹೋದ ತಕ್ಷಣ, ಕೂತುಕೋ ಎಂದು ಕೂತರು. ಅವರ ಚೇಂಬರಿನ ಒಳಗಡೆ ಹೋದ ಮೇಲೆಯೇ ಅವರು ಮಾತು ಶುರುಮಾಡಿದ್ದು

ಮಾತ್ರ ಬೇರೆಯೇ. ಅದು ನಾಗೇಶ ಮತ್ತು ಜೆ.ಕೆ.ಯವರ ನಡುವಣ ಒಂದು ಒಪ್ಪಂದದ ಸಾಕ್ಷಿ. ಅವರಿಬ್ಬರು ಆಡಿರುವ ಮಾತು ಕೋಣೆಯ ಹೊರಗೆ ಕೇಳಿಸುವಂತಿರಲಿಲ್ಲ.

ಜೆ.ಕೆ. ಚೆಯರಿನ ಮೇಲೆ ಒರಗಿಕೊಂಡು ಮೊದಲು ಹೇಳಿದ ಮಾತೆಂದರೆ – "ನೋಡಪ್ಪಾ, ಇದು ನನ್ನ ಛೇಂಬರ್. ಈ ಛೇಂಬರಲ್ಲಿ ಮಾತಾಡಿದ್ದು ಹೊರಗಡೆಗೆ ಕೂತ ಯಾರಿಗೂ ಕೇಳಿಸುವುದಿಲ್ಲ. ಕೇಳುವುದಕ್ಕೆ ಸಾಧ್ಯವೂ ಇಲ್ಲ, ಸ್ಪಷ್ಟವಾಗಿ ಹೇಳುತ್ತಿದ್ದೇನೆ – ನೋಡಪ್ಪಾ. ರಾಜಕೀಯವಾಗಿ ಮುಂದೆ ನಿನ್ನನ್ನು ನಾಯಕನನ್ನಾಗಿ ಮಾಡುತ್ತೇನೆ. ಆದರೆ, ಅದಕ್ಕೆ ಪ್ರತಿಯಾಗಿ ನೀನು ನನಗೇನು ಮಾಡಬೇಕು ಅಂತಲೂ ಹೇಳ್ತೇನೆ. ನಿನ್ನತ್ರ ಹಣಕಾಸು ಇತ್ಯಾದಿ ಯಾವುದನ್ನು ಕೇಳುತ್ತಿಲ್ಲ. ಅದು ನನ್ನ ಕಾಲಬುಡದಲ್ಲಿ ರಾಶಿ ರಾಶಿಯಾಗಿ ಬಿದ್ದಿದೆ. ಯಾರನ್ನು ರಾಜಿ ಮಾಡಬೇಕು, ಯಾರು ನನ್ನ ಕೋಟೆಯಲ್ಲಿ ಮಂತ್ರಿಯಾಗಿರಬೇಕು ಎಂದು ನಿಶ್ಚಯಿಸುವ ತಾಕತ್ತನ್ನು ಈ ಹೊತ್ತಿಗೂ ಉಳಿಸಿಕೊಂಡಿದ್ದೇನೆ. ಅದನ್ನು ಯಾವ ಕ್ಷಣಕ್ಕೂ, ನಾನು ಬಿಡಲಾರೆ. ನನಗೆ ಪಕ್ಷ–ಗಿಕ್ಷ ಅಂತ ನಂಬಿಕೆಯೇ ಇಲ್ಲ. ಎಲ್ಲರೂ ನಮ್ಮ ಪಕ್ಷವೇ – ಯಾವಾಗ ಎಂದರೆ ನಮ್ಮ ಜೊತೆ ಸಹಕರಿಸುವ ತನಕ ಮಾತ್ರ. ಆದರೆ, ಈಗ ನನ್ನನ್ನು ನಡುಗಿಸಬೇಕು ಅಂತ ಇಬ್ರಾಹಿಂ ಟಿಂಬರ್ ವ್ಯವಹಾರದಲ್ಲಿ ಮಧ್ಯೆ ಕೈ ತೂರಿಸಿದ್ದಾನೆ. ಇದೇ ಸಮಸ್ಯೆಯಾಗಿರುವುದು, ಅದನ್ನು ಹೇಗಾದರೂ ಮಾಡಿ ಬಗ್ಗಿಸಬೇಕು. ಯಾರನ್ನಾದರೂ ನಂಬಬಹುದು – ಆದರೆ, ಟಿಂಬರ್ ವ್ಯವಹಾರದ ಒಂದು ವಿಷಯದಲ್ಲಿ ಮಾತ್ರ ಈ ಸಾಬರನ್ನು ನಂಬಬಾರದು ಏನಂತಿಯಾ?" ಹೇಳಬೇಕಾದುದನ್ನು ಸುದೀರ್ಘವಾಗಿ ಹೇಳಿ ಮುಗಿಸಿದ ಜೆ.ಕೆ.ಯ ಕಣ್ಣಾಳತೆಯಲ್ಲಿ ಬೇರಾವುದೇ ಒಂದು ಗುರಿಯಿತ್ತು ಎಂಬುದು ಸ್ಪಷ್ಟ. ನಾಗೇಶ ಜೆ.ಕೆ.ಯ ಮುಖವನ್ನು ನೋಡಿದ. ಅವನು ಜೆ.ಕೆ.ಯ ಮುಖವನ್ನು ನೋಡಿದ್ದರಲ್ಲಿ ನಾನಾ ರೀತಿಯ ಅರ್ಥಗಳಿದ್ದವು. ಸಾರಾಯಿ ಕಂಟ್ರಾಕ್ಟರ್; ಡಿಸ್ಟಿಲಿರಿಯ ಸಾಹುಕಾರ; ಟಿಂಬರ್ ಮರ್ಚೆಂಟ್ ಒಬ್ಬನ ವ್ಯವಹಾರದಲ್ಲಿ ಸರಳತೆ ಮತ್ತು ಸ್ಪಷ್ಟತೆಯಂತೂ ಇರಲಾರದು. ಸರಳ ಮತ್ತು ಸ್ವಚ್ಛ ರೀತಿಯ ವ್ಯವಹಾರ ಮಾಡುವ ಮನುಷ್ಯನೊಬ್ಬ ಈ ಜಗತ್ತಿನಲ್ಲಿ ಇಂಥ ದಂಧೆಗೆ ಇಳಿಯಲಾರ. ನಾಗೇಶನಂಥ ಹತ್ತಾರು ಹುಡುಗರನ್ನು ಸಾಕಿರುವ ಜೆ.ಕೆ.ಗೆ ಅವನ ನೋಟವು ಅರ್ಥವಾಗದ್ದೇನೂ ಅಲ್ಲ! ನಾಗೇಶ, "ಸರಿ, ಆದರೆ ನಾನೀಗ ಮಾಡಬೇಕಾದ್ದೇನು? ಅದನ್ನು ಹೇಳಿ ಉಳಿದ ವಿಷಯವೆಲ್ಲಾ ಆಮೇಲೆ." ಜೆ.ಕೆ.ಯಿಂದ ಖಚಿತವಾದ ಮತ್ತು ಸ್ಪಷ್ಟವಾದ ನಿಲುವನ್ನು ಅಪೇಕ್ಷಿಸಿದ. "ಆಗಬೇಕಾದುದು ಏನೂ ಇಲ್ಲ, ನಿನ್ನ ಜೊತೆಗೆ ಇರುವ ಹುಡುಗರು ನನಗೆ ಬೆಂಬಲ ಕೊಡಬೇಕು, ಅಗತ್ಯವಿದ್ದರೆ ನಾನು ಕರೆಸುತ್ತೇನೆ. ಅವರು ಯಾವುದಕ್ಕೂ ತಯಾರಾಗಿರಬೇಕು. ಹಣಕಾಸಿನ ವ್ಯವಹಾರ; ಕಾನೂನಿನ ವ್ಯವಹಾರ ಇತ್ಯಾದಿ ಎಲ್ಲವನ್ನು ನಾನೇ ನೋಡಿಕೊಳ್ಳುತ್ತೇನೆ. ಸರಿಯಾದ ಒಂದು

ಒಕ್ಕೂಟ ಮಾತ್ರ ನಮ್ಮ ಜೊತೆಗೆ ಇರಬೇಕು. ಸರಿ, ಇನ್ನೊಮ್ಮೆ ಮಾತಾಡುತ್ತೇನೆ. ಸಣ್ಣಪುಟ್ಟದು ಏನಾದರೂ ಇದ್ದರೆ, ಜಯಮ್ಮಂಗೆ ಹೇಳು, ಅವಳೇ ಮುಗಿಸಿಕೊಡುತ್ತಾಳೆ" – ಜೆ.ಕೆ.ಯ ಮಾತುಗಳಲ್ಲಿ ತಾನು ನಿಮಗೆ ಬೆಂಬಲ ಕೊಡುತ್ತೇನೆ ಎಂಬ ನಿಲುವು ಇತ್ತು. ಆದರೆ, ಮುಂದೆ ಯಾವುದು? ಏನು? ಎನ್ನುವುದರ ಯಾವ ಸುಳಿವೂ ಇರಲಿಲ್ಲ. ಅದರ ಅಗತ್ಯವಂತೂ ನಾಗೇಶನಿಗೆ ಇರಲಿಲ್ಲ. ನಾಗೇಶ ತಕ್ಷಣವೇ ಎದ್ದು ಹೊರಟ. ಹಿಂದು-ಮುಂದಿನದನ್ನು ಆಲೋಚಿಸುವ ಸಮಯಾವಕಾಶ ನಾಗೇಶನಿಗೂ ಇರಲಿಲ್ಲ. ಅವನೂ ತುರ್ತಾಗಿ ಮಾಡಬೇಕಾದ ಹತ್ತು ಹಲವು ಕೆಲಸಗಳಿದ್ದವು. ಇನ್ನು ಏನಿದ್ದರೂ ಚುರುಕಾದ ಕೆಲಸ ಮಾಡದೇ ಹೋದರೆ, ನಗರದಲ್ಲಿ ಬೀಸಿಹೋದ ಕೋಮು ಗಲಭೆಯ ಗಾಳಿಯು ಮತ್ತೆ ಬೀಸುವುದು ಕಷ್ಟ. ಅತ್ಯಂತ ವ್ಯವಸ್ಥಿತವಾಗಿ ತಾನೆಲ್ಲಿಯೂ ಸಿಕ್ಕಿ ಬೀಳದಂತೆ ಸುಸಂಘಟಿತವಾಗಿ ಕೆಲಸ ಮುಂದುವರಿಸಬೇಕು. ಜೆ.ಕೆ. ಯವರ ಆಫೀಸಿಂದ ಹೊರಗಡೆ ಹೊರಟ ತಕ್ಷಣವೇ ಒಡಮೂಡಿದ ಚಿತ್ರವಿದು. ಜೆ.ಕೆ.ಯ ಕಾರಿನಲ್ಲಿಯೇ ಇಳಿದು – ಇಲ್ಲಿಂದ ಆಟೋ ಮಾಡಿಕೊಂಡೇ ಜಯಮ್ಮನ ಸಾರಾಯಿ ಅಂಗಡಿಯತ್ತ ಹೋದ. ಅದೇ ವೇಳೆಗೆ ಜನ್ನು ಎರಡು ಪಾಕೀಟು ಹಾಕ್ಕೊಂಡು ಸಾರಾಯಿ ಅಂಗಡಿಯಿಂದ ಹೊರಗೆ ಬರುತ್ತಿದ್ದ! ದೊಡ್ಡದೊಂದು ಕಲಹವನ್ನು ಸಿದ್ಧಗೊಳಿಸಲು ಜನ್ನು ಮತ್ತು ನಾಗೇಶ ಮತ್ತೊಮ್ಮೆ ತಯಾರಾದರು. ಆದರೆ, ಯಾವುದೇ ಕಾರಣಕ್ಕೆ ನಾವು ಸಿಕ್ಕಿಹಾಕಿಕೊಳ್ಳಬಾರದು!!

*

ರೇಖಾ ಪಿಂಟೋಗೆ ಅಚ್ಚರಿಯಾದುದೇ ಆಗ; ಮೈಥಿಲಿಯೆಂಬವಳು ಸಂಜೆಯ ಐದೂವರೆಗೆ ಬಂದಳು-ಶಿಬಿಯೊಡನೆ, ಚಾರುವಿನ ಧರ್ಮಪತ್ನಿ. ಚಾರು ಸುಡುವ ಜ್ವರದಲ್ಲಿ ಬಳಲಿ ಆಸ್ಪತ್ರೆಯ ಬೆಡ್‌ನಲ್ಲಿ ಮುದುಡಿ ಮಲಗಿದವನು ಮೈಥಿಲಿಯೊಡನೆ ಶಂಕಿನಿಯೆಂಬ ಜಾತಿಯ ಹೆಣ್ಣು ಲಕ ಲಕಿಸುವ ನಗುವಿನೊಂದಿಗೆ ಶಿಬಿಯೊಂದಿಗೆ ಬಂದಳು. ಶಿಬಿಯ ಕೈಯಲ್ಲಿ ಹೆಲ್ಮೆಟ್ ಇತ್ತು, ಅವನೂ ನಗುತ್ತಿದ್ದ. ಮೈಥಿಲಿಯು ಚಾರು ಮಲಗಿದ ಕೊಠಡಿಗೆ ಅಡಿಯಿಡುವ ಮುನ್ನವೇ ಶಿಬಿಯೊಂದಿಗ, "ಈ ಆಸ್ಪತ್ರೆಗಳೆಂದರೆ ನರಕ! ಫಿನಾಯಿಲ್‌ನ ಕೆಟ್ಟ ವಾಸನೆ ಮೂಗಿಗೆ ಹೊಡೆಯುತ್ತಿರುತ್ತೆ. ಆಸ್ಪತ್ರೆಯೆಂದರೆ ನಂಗೆ ಒಂಥರಾ ಅಲರ್ಜಿ. ಆಸ್ಪತ್ರೆಯಲ್ಲಿರುವ ರೋಗಿಗಳನ್ನು ಕಂಡರಂತೂ ಇನ್ನಷ್ಟು ಕಷ್ಟವಾಗುತ್ತೆ. ಆಸ್ಪತ್ರೆಯಲ್ಲಿ ಈ ನರ್ಸ್‌ಗಳು ಹೇಗೆ ಕೆಲಸ ಮಾಡುತ್ತಾರೋ-ಏನು ಕತೆಯೋ? ಯಾವೊಬ್ಬ ರೋಗಿಯನ್ನು ನೋಡಿದರೂ- ಹೀಗೆ ಬದುಕುವುದಕ್ಕಿಂತ ಸಾಯುವುದು ಮೇಲು! ಹಾಸುಗೆಯಲ್ಲಿ ನರಳಿ ನರಳಿ ಸಾಯುವುದು ಯಾರಿಗೆ ಬೇಕಾಗಿದೆ ಅಲ್ವಾ?" ಅಂದಳು ಮೈಥಿಲಿ. ನನಗೂ ಹಾಗೆ ಅನಿಸುತ್ತೆ, ಹಾಸುಗೆಯಲ್ಲಿ ನರಳಿ, ಮನೆಯವರಿಗೆಲ್ಲಾ ಹಿಂಸೆ ಕೊಟ್ಟು ಸಾಯುವುದಕ್ಕಿಂತ,

ಅವರೇ ವಿಷ ಕುಡಿದಾದರೂ ಸಾಯುವುದು ಮೇಲು ಎಂದ ಶಿಬಿ. ರೇಖಾ ಪಿಂಟೋ ಚಾರುವಿನ ಒಣಗಿದ ತುಟಿಗೆ ಗ್ಲೂಕೋಸು ನೀರು ಕುಡಿಸುತ್ತಿದ್ದವಳು ಅವರಿಬ್ಬರೂ ಒಳಗೆ ಬರುವಾಗ ಆಡಿಕೊಂಡ ಮಾತು ಕೇಳಿಸಿಕೊಂಡೇ ಈ ರೀತಿಯ ಅಚ್ಚರಿಯನ್ನು ವ್ಯಕ್ತಪಡಿಸಿದಳು ಮತ್ತು ಚಾರುವಿನ ಒಣಗಿದ ಬಾಯಿಗೆ ಗ್ಲೂಕೋಸು ನೀರು ಕುಡಿಸುತ್ತಿದ್ದ ರೇಖಾಳನ್ನು ನೋಡಿ ಮೈಥಿಲಿಗೂ ಅಚ್ಚರಿಯಾಯಿತು. "ಒಬ್ಬನೇ ಬೆಡ್ ಮೇಲೆ ಬಿದ್ದಿರುತ್ತಾನೆ – ಅನಾಥವಾದ ಒಂದು ಹೆಣದಂತೆ" ಎಂದು ಭಾವಿಸಿಕೊಂಡು ಕಿಲಕಿಲನೆ ನಗುತ್ತಾ, ಮಾತಾಡುತ್ತಾ ಬಂದವಳು ರೇಖಾಳನ್ನು ನೋಡಿಯೇ ಮೈಥಿಲಿಯೇನು–ಸ್ವತಃ ಶಿಬಿಗೂ ಅಚ್ಚರಿಯಾಯಿತು. ಅವರು ಬರುವುದನ್ನು ನೋಡಿ ಒಮ್ಮೆ ಅಚ್ಚರಿ ವ್ಯಕ್ತಪಡಿಸಿದ ರೇಖಾ ಪಿಂಟೋ ಮತ್ತೆ ಚಾರುಗೆ ಪುನಃ ಗುಟುಕು–ಗುಟುಕಾಗಿ ಗ್ಲೂಕೋಸು ನೀರು ಕುಡಿಸಿದಳು. ಚಾರುವಿನ ಹೆಂಡತಿ, ಕೈಹಿಡಿದು ಬಂದವಳು; ಅವನ ಮನೆಯಲ್ಲಿ ಒಂದು ಬೆಳಕಾಗಿ ಇರಬೇಕಾದವಳು, ಗಂಡನ ವಿಪರೀತವಾದ ಜ್ವರದ ಸಂದರ್ಭದಲ್ಲಿ ಫ್ಯಾಶನ್ ಶೋಗೆ ಬಂದಂತೆ ಬಂದವಳನ್ನು ಕಂಡು ರೇಖಾಗೆ ಅಸಹ್ಯವೆನಿಸಿತು. ಚಾರು, ನೀರು ಸಾಕೆಂಬಂತೆ ಸನ್ನೆ ಮಾಡಿದ. ಅವನೂ ಮೈಥಿಲಿಯ ಮುಖ ನೋಡುವುದಕ್ಕೆ ಇಷ್ಟಪಟ್ಟಂತೆ ಕಾಣಿಸಲಿಲ್ಲ. ರೇಖಾಳನ್ನು ನೋಡಿ ಮೈಥಿಲಿಯೇ, "ನೀವು?" ಎಂದು ಕೇಳಿದಳು. ರೇಖಾ ಕೈಯಲ್ಲಿದ್ದ ಗ್ಲುಕೋಸ್ ನೀರಿನ ಲೋಟವನ್ನು ಕೆಳಗಿಟ್ಟು ಮತ್ತೆ ಸ್ಟೂಲನ್ನು ಶಿಬಿಯ ಕಡೆಗಿಟ್ಟು "ಕೂತ್ಕೊಳ್ಳಿ" ಅಂದಳು. ಅವಳ ಸೌಜನ್ಯಭರಿತ ಮಾತು ಮತ್ತು ತನ್ನ ಮಾತಿಗೆ ಅವಳು ಉತ್ತರ ಕೊಡದೇ ಇದ್ದ ಕ್ರಮವನ್ನು ನೋಡಿಯೇ ಮೈಥಿಲಿಯಲ್ಲಿ ಸಣ್ಣದೊಂದು ಅಸಹನೆಯ ಕಿಡಿಯು ಉರಿಯಿತು. ಅವಳಿಗೆ ಅಸಹನೆಯಾಗಿದೆ ಎಂಬುದು ಅವಳ ಮುಖ ಚಹರೆಯಲ್ಲಿಯೇ ವ್ಯಕ್ತವಾದುದರಿಂದ ಕೊಂಚ ಪೆಚ್ಚಾದವಳು ರೇಖಾಪಿಂಟೋ. ಅದಕ್ಕಾಗಿಯೇ ಶಿಬಿ ಮಿಕಿಮಿಕಿ ನೋಡುತ್ತಿದ್ದಾನೆ ರೇಖಾಳನ್ನು. ರೇಖಾ ನಗುನಗುತ್ತಾ ಮಾತಾಡುವಾಗ ಅವಳ ಕೆನ್ನೆಯಲ್ಲಿ ಬೀಳುತ್ತಿರುವ ಗುಳಿಯೊಂದರಲ್ಲಿಯೇ ಎಷ್ಟೊಂದು ಸೌಂದರ್ಯ ಅಡಗಿಸಿಟ್ಟಿದ್ದಾಳು? ಅಸಹನೆಯಿಂದ ಕುದಿದ ಮೈಥಿಲಿ, "ಶಿಬಿಯವರೇ ನೀವು ಹೋಗುವುದಿದ್ದರೆ ಹೋಗಿ, ಇವರು ಈಗ ಮಾತಾಡುವ ಸ್ಥಿತಿಯಲ್ಲಿಲ್ಲ. ಸಿಗರೇಟು ಸೇದಬೇಡಿ ಅಂದ್ರೆ ಕೇಳೊಲ್ಲ! ಗುಂಡು ಹಾಕಬೇಡಿ ಅಂದ್ರೆ ಅದರಲ್ಲಿ ಸ್ನಾನ ಬೇಕಿದ್ದರೂ ಮಾಡುತ್ತಾರೆ. ತನ್ನದೇ ಹಟ, ತನ್ನ ಮೂಗಿನ ನೇರಕ್ಕೆ ಎಲ್ಲವೂ ಇರಬ್ಬೇಕೆನ್ನುತ್ತಾರೆ. ಈಗ ನೋಡಿ ಇವರ ಅವಸ್ಥೆ. ಒಂಚೂರು ಪಾರು ಇದ್ದ ನೆಮ್ಮದಿಯನ್ನು ಇವರು ಹಾಳು ಮಾಡುತ್ತಾರೆ. ಅವರಿಗೂ ನೆಮ್ಮದಿಯಿಲ್ಲ, ಉಳಿದವರಿಗೂ ನೆಮ್ಮದಿಯಿಲ್ಲ." ಅದಕ್ಕೆ ಶಿಬಿ, "ಇಲ್ಲ ಮೈಥಿಲಿಯವರೆ, ಅದಕ್ಕೆ ನೀವ್ಯಾಕೆ ಗಾಬರಿಯಾಗ್ತೀರಿ" ಎಂದು ನಗಾಡಿದ, ಅವನ ನಗೆಯು ಇಡೀ ರೂಮನ್ನೇ ಆವರಿಸಿಕೊಂಡಿತು. ರೇಖಾ ಮಾತ್ರ ಗಂಭೀರವಾದಳು, ಅವಳಿಗೆ ನಗೆ

ಬರಲಿಲ್ಲ. ಚಾರುವಿನ ಬಗ್ಗೆ ಸಣ್ಣ ಮರುಕವೊಂದು ಮಾತ್ರವಿತ್ತು. ಚಾರು ಕುಡೀತಾನೆ; ಸಿಗರೇಟು ಸೇದ್ತಾನೆ, ಅದರಿಂದಲೇ ತನ್ನ ನೆಮ್ಮದಿ ಹಾಳಾಗಿದೆ ಎಂದು ಹೇಳುತ್ತಿರುವ ಹೆಣ್ಣು ಮನೆಯ ಜಂತಿಯನ್ನೇ ಒಲೆಗೆ ಹಾಕುತ್ತಾಳೆಂಬುದು ಶತಃಸಿದ್ಧ. ಅದಕ್ಕೆ ಬೇರೆ ಪುರಾವೆ ಬೇಕಿಲ್ಲ. 'ಸರಿ, ನಾನಿನ್ನು ಬರ್‍ತೀನಿ' ಎಂದ ಶಿಬಿಯ ಮುಖವನ್ನು, ಮಲಗಿದ ಚಾರುವಿನ ಮುಖವನ್ನು ಮೈಥಿಲಿ ನೋಡಿದಳು. ಶಿಬಿಯ ಮುಖದಲ್ಲಿರುವ ಜೀವಕಳೆ; ಅವನ ನಗೆ; ಚಿಕ್ಕ-ಚೊಕ್ಕ ಹಾಸ್ಯ-ಜೀವ ತುಂಬುವಂತಿದೆ. ಅದೇ ಚಾರುವಿನ ಮುಖದಲ್ಲಿ ಮಂಕು ಕವಿದಿದೆ. ಕಪ್ಪು ಮುಖದಲ್ಲಿ ಕಪ್ಪು ಗಡ್ಡ ಅಕಾಲಿಕವಾದ ವೃದ್ಧಾಪ್ಯವೊಂದನ್ನು ಆಹ್ವಾನಿಸಿಕೊಂಡ ಥರ ಇದ್ದಾನೆ. ಗುಳಿಬಿದ್ದ ಕಣ್ಣು, ಯಾವಾಗ ನೋಡಿದರೂ ಆಕಾಶ ತಲೆ ಮೇಲೆ ಬಿದ್ದಂತೆ ವರ್ತಿಸುತ್ತಾನೆ. ಯಾವಾಗ ಈ ಮನುಷ್ಯ ಬದಲಾಗುತ್ತಾನೋ ದೇವರೇ ಬಲ್ಲ! ನಗೆಯಿಲ್ಲದ ಮನುಷ್ಯನ ಗಂಭೀರವಾದ ಪರಿಸ್ಥಿತಿಯಿದು! ಶಿಬಿ ನಗು ನಗುತ್ತಲೇ ಮೈಥಿಲಿ ಮತ್ತು ರೇಖಾರನ್ನು ನೋಡಿಹೋದ. ಆದರೆ, ಅವನ ಕಣ್ಣು ಅಪ್ಪಿತಪ್ಪಿಯೂ ಚಾರುವಿನ ಕಡೆ ಬೀಳಲಿಲ್ಲ. ಜ್ವರ ಬಂದು ಮಲಗಿದವನ ಕಣ್ಣು ಸೂಕ್ಷ್ಮವಾದ ಶಕ್ತಿಯನ್ನು ಕಳೆದುಕೊಂಡಿಲ್ಲ! ಶಿಬಿ ಹೊರಗಡೆ ಅಡಿಯಿಡುವಾಗಲೂ ಅವನನ್ನೇ ದಿಟ್ಟಿಸುತ್ತಿರುವ ಮೈಥಿಲಿಯತ್ತ ಚಾರು ಕಣ್ಣು ಹರಿಸಿ, ಮತ್ತೆ ಕಣ್ಣು ಮುಚ್ಚಿಕೊಂಡ – ಆಯಾಸಗೊಂಡವನಂತೆ – ಯಾವುದರಲ್ಲಿಯೂ ಆಸಕ್ತಿಯೇ ಇಲ್ಲದವನಂತೆ. ಮೈಥಿಲಿಯು ರೇಖಾಗೆ ಹೇಳಿದಳು – "ನೀವು ಹೋಗುವುದಿದ್ದರೆ ಹೋಗಿ, ನಾನು ಸ್ವಲ್ಪ ಹೊತ್ತು ಇರುತ್ತೇನೆ. ನಾಳೆಯಿಂದ ಇವರನ್ನು ನೋಡಿಕೊಳ್ಳಲು ಒಬ್ಬ ಹುಡುಗನನ್ನು ಕರೆತರುತ್ತೇನೆ. ನನಗೆ ರಾತ್ರಿ ಇರಲು ಕಷ್ಟ. ಆಸ್ಪತ್ರೆಯೆಂದರೆ ನನಗೆ ಒಂಥರಾ ವಾಕರಿಕೆ, ಸಿಸ್ಟರ್ ಹತ್ರ ಹೇಳಿ ಹೋಗಿರುತ್ತೇನೆ. ಯಾವುದಕ್ಕೂ ಆಸ್ಪತ್ರೆಯಲ್ಲಿ ಭಯವಿಲ್ಲ ಬಿಡಿ, ಸಿಸ್ಟರ್‌ಗಳು ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಾವಿದ್ದರೂ ಏನೂ ಮಾಡುವ ಹಾಗಿಲ್ಲ, ರಾತ್ರಿಯಂತೂ ಇಲ್ಲಿ ಇದ್ದರೆ ನೆಮ್ಮದಿಯಿಂದ ನಿದ್ದೆ ಮಾಡುವ ಹಾಗೂ ಇಲ್ಲ." ಮೈಥಿಲಿಯ ನಾಲಿಗೆಯು ತನಗೆ ಬೇಕಾದಂತೆ ಹೊರಳಿತು ಮತ್ತು ರೇಖಾ ಇರಬೇಕಾದ ಯಾವ ಅವಶ್ಯಕತೆಯೂ ಇಲ್ಲವೆಂದೇ ಸೂಚಿಸಿದಳು. "ಇವರು ಕುಡಿಯುವುದು ಬಿಡಬೇಕಂತೆ, ಸಿಗರೇಟು ಮುಟ್ಟಬಾರದಂತೆ. ಬಹುಶಃ ಲಿವರ್‌ನ ಸಮಸ್ಯೆಯಿರಬಹುದು ಎಂದು ಡಾಕ್ಟರ್ ನಾಯಕ್ ಹೇಳಿದರು, ಒಳ್ಳೆಯ ಡಾಕ್ಟ್ರು" ಅಂದು ರೇಖಾ ಪಿಂಟೋ ಮೈಥಿಲಿಯ ಮುಖವನ್ನೇ ನೋಡಿದಳು. "ನಾನು ಇವರ ಕಾಲ ಕಸಕ್ಕಿಂತಲೂ ಕಡಿಮೆ, ನನ್ನ ಮಾತು ಎಲ್ಲಿ ಕೇಳ್ತಾರೆ? ಕುಡೀತಾರೆ, ವಾಂತಿ ಮಾಡ್ತಾರೆ. ಸಿಗರೇಟು ಸೇದ್ತಾರೆ, ಮನೆ ತುಂಬಾ ಸಿಗರೇಟು ಹೊಗೆ ತುಂಬಿಸ್ತಾರೆ. ಇವರಿಗೆ ನಿಜವಾಗಿಯೂ ಯಾರೂ ಹೇಳುವವರೇ ಇಲ್ಲ. ನಂಗಂತೂ ಸಾಕಾಗಿ ಹೋಯ್ತು. ಒಮ್ಮೊಮ್ಮೆ ಎಲ್ಲಾದರೂ ಓಡಿಹೋಗಿ ಬಿಡೋಣ ಎಂದೆನ್ನಿಸುತ್ತದೆ" ಅಂದಳು ಮೈಥಿಲಿ. ಅವಳ ಮಾತಿನಲ್ಲಿ ಚಾರುವಿನ ಬಗ್ಗೆ

ಯಾವುದೇ ರೀತಿಯ ಮುಲಾಜು ಇರುವ ಹಾಗೆ ಕಾಣಿಸಲಿಲ್ಲ. ರೇಖಾ ಮುಖ ತಿರುಗಿಸಿ ಚಾರುವಿನ ಮುಖವನ್ನು ನೋಡಿದಳು. ಒಂದೆರಡು ದಿನದಲ್ಲಿಯೇ ಬಸವಳಿದು ಮಲಗಿದ ಮನುಷ್ಯ – "ಏನಾದರೂ ಬೇಕಾ?" ಎಂದು ಕೇಳಿದಳು. ಚಾರು ಮಾತಾಡಲು ಮನಸ್ಸಿಲ್ಲದವನಂತೆ ಮತ್ತೆ ಕುಡಿಯಲು ನೀರು ಬೇಕೆಂದು ಸನ್ನೆ ಮಾಡಿದ. ರೇಖಾ ಅವನ ಬಾಯಿಗೆ ಹನಿ ಹನಿಯಾಗಿ ನೀರುಣಿಸಿದಳು. ಮೈಥಿಲಿ ಅತಿಥಿಯಂತೆ ನೋಡುತ್ತಾ ಕೂತಳು. ಅವಳಿಗೆ ಕೂತಲ್ಲಿಂದ ಏಳುವ ಮನಸ್ಸು ಕೂಡಾ ಇಲ್ಲ. ರೇಖಾ ಬಾಯಿಗೆ ಹನಿಯಾಗಿ ನೀರುಣಿಸುತ್ತಿರುವಾಗ ಫಳಕ್ಕನೆ ಎರಡು ಕಣ್ಣೀರು– ಚಾರುವಿನ ಕಣ್ಣಿಂದ ಜಾರಿತು – ಮೈಥಿಲಿಯ ವರ್ತನೆಗೆ ಪ್ರತಿಕ್ರಿಯೆಯಾಗಿ – ರೇಖಾಳ ಬಗ್ಗೆ ಕೃತಜ್ಞತೆಯ ಸೂಚಕವಾಗಿ. ಆದರೆ ಹೃದಯವನ್ನು ಒಂದು ಬಂಡೆಗಲ್ಲಿನ ಚೂರು ಎಂದು ಭಾವಿಸಿಕೊಂಡ ಮೈಥಿಲಿಯು ಎತ್ತಲೋ ನೋಡುತ್ತಾ ಚಡಪಡಿಸಿದಳು. ರೇಖಾ ನೀರಿನ ಲೋಟವಿಟ್ಟು, "ನಾನಿನ್ನು ಬರ್ತೇನೆ ಸಾರ್, ಬೇಕಿದ್ದರೆ ಈ ರಾತ್ರಿ ನನ್ನಮ್ಮ ಬರುತ್ತಾರೆ" ಅಂದಳು. ಚಾರು ಬೇಡವೆಂಬಂತೆ ತಲೆಯಲ್ಲಾಡಿಸಿದ. ರೇಖಾ ಹೊರಟ ಐದು ನಿಮಿಷದಲ್ಲಿ ಮೈಥಿಲಿಯೂ ಹೊರಟಳು – ಚಾರುಗೆ ಏನು ಬೇಕೆ? ಏನು ಬೇಡ? ಎಂಬುದನ್ನು ವಿಚಾರಿಸದೆ. ಅವಳ ಮುಖ ಮಾತ್ರ ಹೇಳುತ್ತಿತ್ತು; "ಮಾಡಿದ್ದುಣ್ಣೋ ಮಹರಾಯ." ಆದರೆ, ಮೈಥಿಲಿಯು ಬೆನ್ನು ತಿರುವಿದಾಗಲೇ ಚಾರುಗೆ ಮತ್ತೆ ಬದುಕಿ ಉಳಿಯುತ್ತಲೇ, ಚಿಗುರಿ ಹೆಮ್ಮರವಾಗುವ ಆಸೆ ಮೊಳಕೆಯೊಡೆಯಿತು. ಜೊತೆಗೇ – "ಮೈಥಿಲಿ ಮನುಷ್ಯ ವರ್ಗಕ್ಕೆ ಸೇರಿದ್ದಾಳೆಯೇ ಅದೇ ಸಂಶಯ! " ಎಂಬ ಭಾವವೂ ಮೂಡಿತು.

ಅದೇ ವೇಳೆಗೆ ಬೆಳಗಿನ ಹೊತ್ತು ರೇಖಾ ಪಿಂಟೋ ಅವಸರದಲ್ಲಿಯೇ ಮನೆಯಿಂದ ಚಾರುವನ್ನು ನೋಡಲು ಹೊರಟವಳು ಅಮ್ಮನಿಗೆ ವಿಷಯ ತಿಳಿಸಿದಳು. ಅದೇ ಮುಹೂರ್ತಕ್ಕೆ ಸರಿಯಾಗಿ ಮೈಥಿಲಿಗೆ ಶಿಬಿಯು ಫೋನು ಮಾಡಿದ – "ಮೈಥಿಲಿಯವರೇ, ನಿಮ್ಮ ಗಂಡ ಹೇಗಿದ್ದಾರೆ?" ಮೈಥಿಲಿಯು, "ಹೇಗಿದ್ದಾರೆ ಅಂದರೆ ಏನೂಂತ ಹೇಳಲಿ? ಆಸ್ಪತ್ರೆಯಲ್ಲಿ ಮಲಗಿದ್ದಾರೆ, ನನ್ನ ನೆಮ್ಮದಿಯಂತೂ ಪೂರ್ತಿ ಹೊರಟೇ ಹೋಯಿತು. ಯಾಕೋ ಜೀವನವೇ ಸಾಕಾಗಿ ಹೋಗಿದೆ" ಎಂದು ಹೇಳುವಾಗ ಅವಳ ಗಂಡನ ಬಗ್ಗೆ ಇರುವ ಅಸಹನೆಯು ಸ್ಪಷ್ಟವಾಗಿ ವ್ಯಕ್ತವಾಯಿತು. ಶಿಬಿಯು ಹೆಚ್ಚು ಮಾತಾಡಲಿಲ್ಲ. ಆದರೆ, ಒಂದು ಮಾತು ಹೇಳಿದ, "ನೀವು ಹೆಚ್ಚು ಮಾತಾಡಬೇಡಿ, ನನಗೂ ನಿಮ್ಮ ಸಮಸ್ಯೆಯು ಅರ್ಥವಾಗುತ್ತದೆ. ನಾವೆಲ್ಲಾ ನಿಮ್ಮ ಜೊತೆ ಇದ್ದೇವೆ ಮೇಡಂ, ಏನೇನೂ ಯೋಚನೆ ಮಾಡಬೇಡಿ." ಶಿಬಿಯ ಮಾತಿನಲ್ಲಿ ಯಾವುದೋ ಒಂದು ರೀತಿಯ ಭರವಸೆ ಇರುವುದನ್ನು ಮೈಥಿಲಿಯು ಕಂಡುಕೊಂಡಳು. ಮನಸ್ಸಿನ ಮುಳ್ಳು ಶಿಬಿಯ ಕಡೆಗೆ ಹೆಚ್ಚು ವಾಲಿತು. ಅನುರಾಗದ ಮತ್ತೊಂದು ಸಣ್ಣನೆಯ ಕಂಪನ ಮೈಥಿಲಿಯಲ್ಲಿ ಚಿಗುರೊಡೆಯಿತು.

ಚಾರುವೆಂಬ ನಿರುಪದ್ರವಿ ಜೀವವೊಂದು ಆಸ್ಪತ್ರೆಯ ಬೆಡ್‌ನಲ್ಲಿ ಒಣಗಿಕೊಂಡು ಮಲಗಿದ್ದ. ಸಣ್ಣದೊಂದು ಜೀವ ಕಳೆಯನ್ನು ರೂಪಿಸಿಕೊಂಡು ಬದುಕಬೇಕು. ಸತ್ತು ಬೂದಿಯಾದ ಹಕ್ಕಿಯೂ ಕೂಡಾ ಮತ್ತೆ ಮರು ಹುಟ್ಟು ಪಡೆಯುತ್ತದೆ. ಜೀವ ಪಡೆದು ಸೂರ್ಯನ ಹತ್ತಿರ ಹೋಗುತ್ತದೆ. ಸೂರ್ಯನ ಹತ್ತಿರ ಹೋದ ತಕ್ಷಣ ಮತ್ತೆ ಬೂದಿಯಾಗಿ ಬೀಳುತ್ತದೆ. ಪುನಃ ಹುಟ್ಟು ಪಡೆದುಕೊಳ್ಳುತ್ತದೆ. ಆ ಹಕ್ಕಿಯ ಹೆಸರು ಫೀನಿಕ್ಸ್. ತಾನು ಕೂಡ ಒಂದು ಜಾತಿಯ ಫೀನಿಕ್ಸ್ – ಮರು ಹುಟ್ಟು , ಮರು ಜೀವ ಬಂದ ಕೂಡಲೇ ಸೂರ್ಯನ ಕೆಂಡಮಂಡಲದ ಹತ್ತಿರ ಹೋಗುವ ಆತ್ಮಶಕ್ತಿಯನ್ನು ಪಡೆದುಕೊಂಡವನು, ಚಿಗುರುವುದು–ಹಾರುವುದು–ತುಳಿದಷ್ಟು ಮರಳಿ ಜೀವವನ್ನು ಪಡೆದುಕೊಳ್ಳುವುದು ಚಾರುವಿನ ಅತ್ಮದ ಮೂಲೆಯಲ್ಲಿದೆ, ಅದು ಮೈಥಿಲಿಗೆ ಗೊತ್ತಿಲ್ಲ. ಅದು ಅಪ್ಪನಿಗೆ ಗೊತ್ತಿತ್ತು, ಬೇಗನೆ ಸತ್ತುಬಿಟ್ಟ. ಸಾಯುವುದಕ್ಕೆ ಮುಂಚೆ ಹೇಳಿದ್ದ; "ನಿನಗೆ ನಿನ್ನದೇ ಶಕ್ತಿಯಿದೆ, ಇನ್ನೊಬ್ಬರು ತುಳಿದರೆ ದ್ವೇಷವನ್ನು ಎದೆಯಲ್ಲಿ ಮುಚ್ಚಿಟ್ಟುಕೋ, ಬದುಕಿನಲ್ಲಿ ಯಾರೂ – ಯಾರನ್ನೂ ತುಳಿದು ಹೆಚ್ಚು ಸಮಯ ಉಳಿಯೋಲ್ಲ. ಚಕ್ರ ತಿರುಗುತ್ತೆ ಮಗನೇ ಬಂಡಿಯ ಗಾಲಿಯ ಹಾಗೆ." ಇದನ್ನೇ ಹೈಸ್ಕೂಲಲ್ಲಿ ಇದ್ದಾಗ ಶಂಕರ ಪಂಡಿತರು – ಕನ್ನಡ ಮೇಷ್ಟ್ರು ಮಧ್ಯಾಹ್ನದ ಹೊತ್ತಿಗೆ ಸ್ಟಾಫ್ ರೂಮಿಗೆ ಕರೆದು ಹೇಳಿದ್ದರು, "ನೀನೊಬ್ಬ ಒಳ್ಳೆಯ ವಿದ್ಯಾರ್ಥಿ, ವಿನಯವಿದೆ, ಸಂಸ್ಕಾರವಿದೆ, ಸೌಜನ್ಯವಿದೆ. ಅದು ನಿನ್ನನ್ನು ಕಾಪಾಡುತ್ತದೆ. ಎಲ್ಲಿಯೂ ದುಡುಕಿ ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳಬೇಡ. ನಿರ್ಧಾರ ತೆಗೆದುಕೊಳ್ಳುವಾಗ ಯೋಚಿಸು, ಇದು ಕಾಲ ಕೆಟ್ಟದು. ಬಗ್ಗಿದವರಿಗೆ ತುಳಿಯುತ್ತಾರೆ. ಆದರೂ ಸೌಜನ್ಯವೆಂಬುದನ್ನು ಮಾತ್ರ ಬಿಡಬೇಡ, ಕಾಲ ಯಾವತ್ತೂ ಒಂದೇ ರೀತಿಯಲ್ಲಿರುವುದಿಲ್ಲ." ಅದೇ ಶಂಕರ ಪಂಡಿತರು ಈಗಿಲ್ಲ, ಅಪ್ಪನೂ ಇಲ್ಲ. ಆದರೆ ಅವರು ಹೇಳಿದ ಮಾತುಗಳು ಸ್ಮೃತಿ ಪಟಲಕ್ಕೆ ಅಂಟಿಕೊಂಡಿದೆ. ಕಾಲವೆನ್ನುವುದು ನನಗೂ ಇದೆ. ಯೋಚಿಸುತ್ತಲೇ ಚಾರು ಮಂಪರು ನಿದ್ದೆಯತ್ತ ಹೊರಳಿದ. ಆಗಲೇ ರೇಖಾ ಪಿಂಟೋ ಬ್ರೆಡ್; ಹಣ್ಣು; ಎಳನೀರು ಇವುಗಳನ್ನು ತೆಗೆದುಕೊಂಡು ಅವನ ರೂಮಿಗೆ ಕಾಲಿಟ್ಟಳು! ಹತ್ತು ಜನ ಕೊಲ್ಲಲು ಹೊರಟರೆ ಯಾರಾದರೂ ಒಬ್ಬರು ಬದುಕಿಸುತ್ತಾರೆ. ರೇಖಾ ಪಿಂಟೋ ಕಾಲಿಟ್ಟ ಗಳಿಗೆ ಸರಿಯಾಗಿದೆ. ಅದು ಉದಯದ ಕಾಲ, ಅಸ್ತ ಕಾಲವಲ್ಲ, ಅದು ಸಂಜೆಯಲ್ಲ, ಬೆಳಗು, ಬೆಳಗೆನ್ನುವುದೇ ರೇಖಾಗೆ ಸಂಭ್ರಮ. ಕತ್ತಲೆಯೆಂದರೆ ಅವಳಿಗೆ ಭಯ. ಚಾರುಗೆ ಕತ್ತಲೆಯೆಂದರೆ ಟೆನ್ಷನ್, ಒಂದು ರೀತಿಯ ಅತಂಕ. ಇಬ್ಬರಿಗೂ ಬೆಳಗೆಂದರೆ ಇಷ್ಟ!

ನಗರ ಉರಿಯಿತು

– ೯ –

ನಗರವು ಹೊತ್ತಿ ಉರಿಯತೊಡಗಿತು. ಜುಬೇದಾ ಎಂಬ ಹೆಣ್ಣು ಮಗಳ ದೇಹವು ಮಣ್ಣು ಸೇರಿದ ಒಂದೆರಡು ದಿನದಲ್ಲಿ ಬಾಂಬೆಯಿಂದ ಮುಂಜಾವದ ಹನಿಯೊಂದಿಗೆ ಬಂದಿಳಿದ ದಾವೂದ್. ಜೊತೆಗೆ ಇಬ್ಬರು ಜೊತೆಗಾರರು. ದಾವೂದ್ ಮತ್ತು ಅವನ ಜೊತೆಗಾರರ ದೊಡ್ಡ ಏರ್ ಬ್ಯಾಗ್. ಬಸ್ ಸ್ಟಾಂಡಿನಲ್ಲಿ ಇಳಿದವರೇ ಆಟೋದಲ್ಲಿ ಮಂಡಿ ಮೊಹಲ್ಲಾದ ಕಡೆಗೆ ಹೋದರು. ಮುಂಜಾವದ ಹೊತ್ತಿಗೆ ದಾವೂದ್ ಮತ್ತು ಅವನ ಗೆಳೆಯರು ಬಂದು ಇಳಿದುದನ್ನು ಗಮನಿಸಲು ಯಾರಿದ್ದರು? ಎಲ್ಲರೂ ಅವರವರ ಪಾಡಿಗೆ ನಿದ್ದೆಯಲ್ಲಿ ಸವಿಗನಸನ್ನೋ; ದಟ್ಟ ದರಿದ್ರವಾದ ಕೆಟ್ಟ ಕನಸನ್ನೋ ಕಾಣುತ್ತಿದ್ದರು. ದಾವೂದ್ ಬಂದು ಮಂಡಿ ಮೊಹಲ್ಲಾದ ಒಳಗಣ ರಸ್ತೆಯ ಮೂಲೆಯ ತಿರುವನ್ನು ದಾಟಿ ಒಂದು ಚಿಕ್ಕ ಮನೆಯೊಳಗೆ ಬೀಗ ತೆರೆದು ಹೊಕ್ಕ. ಜೊತೆಯಲ್ಲಿ ಅವನಿಬ್ಬರು ಜೊತೆಗಾರರು, ಅವರ ದೊಡ್ಡದಾದ ಏರ್ ಬ್ಯಾಗುಗಳು. ಮನೆಯೊಳಗಡೆಗೆ ಹೊಕ್ಕವರೇ ತಕ್ಷಣ ಬಾಗಿಲಿನ

ಬೋಲ್ಟ್ ಹಾಕಿಕೊಂಡರು. ಬ್ಯಾಗಿನೊಳಗಿನಿಂದ ಸಕಲ ಸಾಮಗ್ರಿಯನ್ನು ತೆರೆದಿಟ್ಟುಕೊಂಡರು. ಬ್ಯಾಗಿನೊಳಗಿನ ಪಿಸ್ತೂಲು; ನಾಡಬಾಂಬುಗಳು ಎಲ್ಲವನ್ನು ಸಣ್ಣ ಪೇಪರ್‌ಗಳಲ್ಲಿ ಸುತ್ತಿಟ್ಟುಕೊಂಡು, ಅದನ್ನು ಅಡುಗೆ ಮನೆಯಲ್ಲಿ ಮತ್ತು ಬಚ್ಚಲು ಮನೆಯಲ್ಲಿ ಬಚ್ಚಿಟ್ಟರು. ಬಚ್ಚಿಟ್ಟುಕೊಂಡವರು ಒಂದು ಸಣ್ಣ ಹದವಾದ ನಿದ್ದೆಯನ್ನು ತೆಗೆದರು. ದಾವೂದ್ ತನ್ನಿಬ್ಬರು ಸಹಚರರನ್ನು ಅಲ್ಲಿಯೇ ಬಿಟ್ಟು ಮನೆಯಿಂದ ಹೊರಗಡೆಗೆ ಬಂದ. ಹೊರಗಡೆ ಬಂದವನು ಅವರಿಬ್ಬರನ್ನು ಒಳಗಡೆಗೆ ಬಿಟ್ಟು ಮನೆಗೆ ಬೀಗ ಹಾಕಿಕೊಂಡ.

ನಾಗೇಶನಿಗೆ ವೇದಿಕೆಯಿದೆಯೆಂಬುದು ದಾವೂದ್‌ಗೂ ಗೊತ್ತಿದೆ ಮತ್ತು ನಾಗೇಶನ ಮುಂದಿನ ಉದ್ದೇಶವು ಯಾವುದೆಂದೂ ತಿಳಿದಿದೆ ಮತ್ತು ಅವನ ಬೇರೆ ಬೇರೆ ರೀತಿಯ ವರಸೆಗಳ ಹಿಂದಿರುವ ಪ್ರಮುಖ ಉದ್ದೇಶಗಳನ್ನು ದಾವೂದ್ ಅರ್ಥ ಮಾಡಿಕೊಂಡಿದ್ದಾನೆ. ಜುಬೇದಾಳ ಮೇಲೆ ನಡೆದ ಅತ್ಯಾಚಾರ ಮತ್ತು ಅದರ ಹಿಂದೆ ಯಾರ‍್ಯಾರು ಇದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿದವನು ಇಬ್ರಾಹಿಂ. ದಾವೂದ್‌ನ ಹಿಂದೆ ಇರುವುದು ಇಬ್ರಾಹಿಂ ಮತ್ತು ನಾಗೇಶನ ಹಿಂದೆ ಇರುವುದು ಜೆ.ಕೆ. ಇಬ್ರಾಹಿಂ ಮತ್ತು ದಾವೂದ್ ಇಬ್ಬರೂ ಒಂದೊಂದು ಮೆಟ್ಟಿಲು ಇಟ್ಟುಕೊಂಡಿದ್ದಾರೆ. ಆದರೆ, ಇಬ್ಬರೂ ರಂಗದಲ್ಲಿಲ್ಲ. ರಂಗಕ್ಕೆ ಮೊದಲು ಮುಗಿಬಿದ್ದವನು ಬೆಲ್ಟ್ ನಾಗೇಶ. ಪತ್ರಿಕೆಯ ಗೋಷ್ಠಿಯಲ್ಲಿ ಅವನು ಮಾತಾಡಿದ್ದನ್ನು ಯಥಾವತ್ತಾಗೆ ಪ್ರಕಟಿಸಿದ ಪತ್ರಿಕಾ ವರದಿಯನ್ನು ಓದಿದ ಇಬ್ರಾಹಿಂ ತಕ್ಷಣ ಫೋನು ಮಾಡಿದ್ದು ದಾವೂದ್‌ಗೆ. ನಾಗೇಶನಿಗೂ. ಜೆ.ಕೆ.ಗೂ ಇರುವ ಸಂಬಂಧ; ನಾಗೇಶನಿಗೆ ಮತ್ತು ಜನ್ನುಗೆ ಇರುವ ಸಂಬಂಧ ಜುಬೆದಾಳ ಮೇಲೆ ನಡೆದ ಅತ್ಯಾಚಾರದಲ್ಲಿ ಇರಬಹುದಾದ ಕೈವಾಡಗಳನ್ನು ಸಂಕ್ಷಿಪ್ತವಾಗಿ ತಿಳಿಸಿದ ಇಬ್ರಾಹಿಂ ದಾವೂದ್‌ಗೆ "ತಯಾರಾಗಿ ಬಾ" ಎಂದು ಸೂಕ್ಷ್ಮವಾಗಿ ಹೇಳಿದ್ದ ಮತ್ತು ಯಾವುದೇ ರೀತಿಯ ಹೆದರಿಕೆಯಿಲ್ಲದೆ, ಜೆ.ಕೆ.ಗೊ ಫೋನಿನಲ್ಲಿ ಹೇಳಿದ; "ನನ್ನ ಎದುರು ದಾರಿಯಲ್ಲಿ ಬರಬೇಡಿ ಸಾಹೇಬರೆ, ನಿಮ್ಮ ಸುದ್ದಿಯಲ್ಲಿ ನಾನಿಲ್ಲ, ಅಡ್ಡ ಬಂದರೆ ನಾನಂತೂ ಹೊಣೆಗಾರನಲ್ಲ, ನನ್ನ ಕೈಯಲ್ಲಿರುವುದು ಬಳೆಯಲ್ಲ, ನನ್ನ ಹಣೆಯಲ್ಲಿ ಕುಂಕುಮ ಬೊಟ್ಟು ಇಲ್ಲ, ನೆನಪಿಟ್ಟುಕೊಳ್ಳಿ." ಜೆ.ಕೆ.ಯು ಕೂಡಾ ಕೂಡಲೇ ಹೇಳಿದ್ದ. "ನನಗೂ ನನ್ನದೇ ದಾರಿಯಿದೆ, ನನ್ನ ಕಾರಿಗೆ ನೀವು ಹೊಡೆಯಬೇಡಿ ಎಚ್ಚರ. ಏನೂ ಆಗಬಹುದು ಗೊತ್ತಿದೆಯೆಲ್ಲಾ?" ನಗರದ ಕಳ್ಳ ನಾಟದ ದೊರೆಗಳು ಒಬ್ಬರಿಗೊಬ್ಬರು ಸಣ್ಣ ಸಣ್ಣ ಮಾತುಗಳನ್ನು ಆಡಿದರು ಮತ್ತು ಅವರಿಗೆ ಅವರದೇ ಅನ್ನಬಹುದಾದ ಕೋಟೆಯೊಂದಿದೆ. ಆ ಕೋಟೆ ಒಂದೇ ಒಂದು ಸಣ್ಣ ಕಲ್ಲು ಕೂಡಾ ಜರುಗಿ ಬೀಳಬಾರದು. ಎಲ್ಲಿಯಾದರೂ ಕೋಟೆಯ ಒಂದು ಸಣ್ಣ ಕಲ್ಲು ಉದುರಿಬಿದ್ದರೂ ಸಾಕು. ಅಲ್ಲಿಗೆ ಕೋಟೆಯ ಹೆಬ್ಬಾಗಿಲು ತೆರೆದಂತೆ ಮತ್ತು ಈ ತನಕದ ಸಮಸ್ತ ಆಸ್ತಿಯು

ನೆಗೆದುಬಿದ್ದಂತೆ. ಹೆಜ್ಜೆ ಇಬ್ಬರೂ ಸರಿಯಾಗಿಯೇ ಇಡಬೇಕು ಮತ್ತು ಅದರಿಂದ ಅವರಿಗೆ ಅನುಕೂಲವಿದೆ. ನಾಗೇಶ ಜೆ.ಕೆ.ಯ ಲೆಕ್ಕದಲ್ಲಿಲ್ಲ. ಹಾಗೆಯೇ ದಾವೂದ್ ಇಬ್ರಾಹಿಂನ ಲೆಕ್ಕದಲ್ಲಿಲ್ಲ. ಇಬ್ಬರೂ ಅವರವರ ರೀತಿಯಲ್ಲಿ ಕಾಲಿಡುತ್ತಿದ್ದಾರೆ. ಗೆಳೆಯರನ್ನು ಮನೆಯೊಳಗೆ ಕೂಡಿ ಹಾಕಿ ಹೊರಗೆ ಬಂದ ದಾವೂದ್, "ಇಬ್ರಾಹಿಂ ಸಾಹೇಬರೆ ಬಂದಿದ್ದೀನಿ" ಅಂದ. ಆ ಕಡೆಯ ಫೋನು ಎತ್ತಿಕೊಟ್ಟ ಇಬ್ರಾಹಿಂ, "ಮಸೀದಿಯತ್ರ ಬಾ, ಅಲ್ಲಿಗೆ ನನ್ನ ಜೀಪ್ ಬರುತ್ತೆ, ಹತ್ಕೊಂಡು ಬಂದುಬಿಡು, ರಿಸೀವರ್ ಇಡು" ಎಂದ. ಇಬ್ರಾಹಿಂನ ಮಾತು ಖಡಕ್ಕಾಗಿಯೇ ಇತ್ತು. ದಾವೂದ್ ಕೂಡಲೇ ಮಸೀದಿಯ ಹತ್ತಿರ ಹೋದ. ಅಲ್ಲಿ ಅವನು ತಲುಪುವಷ್ಟರಲ್ಲಿ ಇಬ್ರಾಹಿಂ ಸಾಹೇಬರ ಜೀಪ್ ತಯಾರಾಗಿತ್ತು. ದಾವೂದ್ ತಕ್ಷಣವೇ ಅದರಲ್ಲಿ ಕುಳಿತ. ದಾವೂದ್ ಇಬ್ರಾಹಿಂ ಸಾಹೇಬರ ಜೀಪಲ್ಲಿ ಕೂತದ್ದು ಹತ್ತು ಗಂಟೆ ನಲವತ್ತು ನಿಮಿಷಕ್ಕೆ.

ಆದರೆ ಹತ್ತು ಗಂಟೆ ಇಪ್ಪತ್ತು ನಿಮಿಷಕ್ಕೆ ಸರಿಯಾಗಿಯೇ ಬೆಲ್ಟ್‌ನಾಗೇಶ ಮತ್ತು ಜೆ.ಕೆ. ಇಬ್ಬರೂ ಮಾತಿನಲ್ಲಿ ತನ್ಮಯರಾಗಿದ್ದರು ಮತ್ತು ಅದು ದಾಟಿದ ಹತ್ತು ನಿಮಿಷಕ್ಕೆ ಸರಿಯಾಗಿಯೇ ಎಂ.ಕೆ. ಅಬ್ದುಲ್ಲ ಎಸ್.ಪಿ. ಸಾಹೇಬರ ಜೊತೆ ಮಾತಾಡುತ್ತಿದ್ದ. ಒಂದೇ ಗಂಟೆಯ ಹಿಂದು ಮುಂದಿಲ್ಲಿ ನಡೆದ ಮೂರು ವಿಧದ ಮಾತುಕತೆಗಳು ಇಡಿಯ ನಗರದ ಭವಿಷ್ಯಕ್ಕೆ ಬೇರೆ ಬೇರೆ ರೀತಿಯ ಕಣಿಯನ್ನು ಹೇಳತೊಡಗಿದ್ದವು.

ಸರಿಯಾಗಿ ಗಂಟೆ ಹತ್ತು ಮತ್ತು ಅದರ ಮೇಲೆ ಇಪ್ಪತ್ತು ನಿಮಿಷ. ಈ ಸಮಯಕ್ಕೆ ಸರಿಯಾಗಿ ಜೆ.ಕೆ.ಯತ್ರ ನಾಗೇಶ ಹೇಳಿದ, "ಸಾರಿ, ಜೆ.ಕೆ.ಯವರೇ ಆ ಕಿರಣ ಮತ್ತು ಶಶಿ ಇಬ್ಬರಿಲ್ಲದಿದ್ದರೆ ನಮ್ಮ ಐಡಿಯಾ ಸರಿಯಾಗಿ ಕ್ಲಿಕ್ಕಾಗಿರುತ್ತಿತ್ತು. ಅದರೆ ನಮ್ಮ ಯೋಜನೆಯನ್ನು ಒಂದೆಡೆಯಿಂದ ಅವರು ಮುಳುಗಿಸಿದರು. ಮತ್ತೊಂದು ಕಡೆಯಿಂದ ಈ ಜನ್ನು, ಅಪ್ಪು ಎಲ್ಲಾ ಸೇರಿ ನಮ್ಮನ್ನು ಮುಳುಗಿಸಿದರು. ಇಲ್ಲದಿದ್ದರೆ ನಾವು ಇಷ್ಟು ಹೊತ್ತಿಗೆ ನಾಯಕರಾಗಿರುತ್ತಿದ್ದೆವು. ಜನ್ನುವನ್ನು ನಾನು ನಂಬಿದ್ದು ಸರಿಯಾಗಲಿಲ್ಲ. ಅದೂ ನಿಮ್ಮ ಕಾರಿನಲ್ಲಿಯೇ ಆ ಹುಡುಗಿಯನ್ನು ಎಳೆದುಕೊಂಡು ಹೋದರು. ಆಮೇಲೆ ಬಂದು ಅಣ್ಣಾ ಹೀಗಾಯಿತು ಎಂದು ಅತ್ತರೆ ನಾನಾದರೂ ಏನು ಮಾಡಲಿ? ಒಂದೆರಡು ತಿಂಗಳು ಈ ಕಡೆಗೆ ತಲೆಯಿಡಬೇಡಿ ಎಂದು ದುಡ್ಡು ಕೊಟ್ಟು ಕಳಿಸಿದ್ದೇನೆ. ಇನ್ನೇನು ಮಾಡಲಿ? ಆದರೂ ಶಶಿ ಮತ್ತು ಕಿರಣ್ ಇಬ್ಬರೂ ನಿಮ್ಮ ಮತ್ತು ನನ್ನ ಕೈವಾಡವಿದೆಯೆಂದು ರಿಪೋರ್ಟು ಬರೆದಿದ್ದಾರೆ, ಏನು ಮಾಡಲಿ?" ಜೆ.ಕೆ. ಗಹಗಹಿಸಿ ನಕ್ಕು ಹೇಳಿದ; "ಕಿರಣ್, ಶಶಿ ಅದೆಲ್ಲಾ ಸುದ್ಧಿ ಬಿಟ್ಟುಬಿಡು, ಅವರಿಂದ ಏನೂ ಆಗುವುದಿಲ್ಲ. ಅದರೆ, ಈವೊತ್ತು ಬೆಳಿಗ್ಗೆ ಇಬ್ರಾಹಿಂ ಫೋನು ಮಾಡಿದ್ದ, ದಾರಿಗೆ ಅಡ್ಡ ಬರಬೇಡ ಅಂತ ನನಗೆ ಹೆದರಿಸಿದ, ಅವನನ್ನು ವಿಚಾರಿಸಿಕೋ, ಉಳಿದದ್ದು ನಾನು ನೋಡಿಕೊಳ್ಳೇನೆ" – ಜೆ.ಕೆ.ಯ ಮಾತಿನಲ್ಲಿ

ಕನಲುವಿಕೆ ಇತ್ತು. ನಾಗೇಶ, "ನಾನು ನೋಡಿಕೊಳ್ತೇನೆ, ಅದಕ್ಕೆ ಗಾಬರಿಯಾಗುವುದು ಬೇಡ" ಎಂದವನೇ ಚಕ್ಕನೇ ಎದ್ದು ನಿಂತ. "ಬರ್ತೇನೆ" ಎಂದು ಹೊರಟ.

ಅದೇ ಹೊತ್ತಿಗೆ ಎಂ.ಕೆ. ಅಬ್ದುಲ್ಲ ಎಸ್.ಪಿ. ಸಾಹೇಬರಿಗೆ – "ಇವನನ್ನು ಮಟ್ಟ ಹಾಕದ್ದಿರೆ ನಮ್ಮ ಡಿಪಾರ್ಟ್‌ಮೆಂಟಿನ ಮರ್ಯಾದೆ ಹೋಗುತ್ತದೆ ಎಂದು ಗೊತ್ತು. ಅದರ ಜವಾಬ್ದಾರಿ ನನಗೆ ಬಿಡಿ. ಆದರೆ, ಯಾವುದೇ ರಾಜಕೀಯ ಒತ್ತಡವನ್ನು ನನ್ನ ತಲೆ ಮೇಲೆ ಹಾಕಬೇಡಿ" ಅಂದ.

"ಉಳಿದ ಜವಾಬ್ದಾರಿಯನ್ನು ನನ್ನ ಮೇಲೆ ಬಿಡಿ. ನಾಗೇಶ; ಜೆ.ಕೆ. – ಯಾರೂ ನನಗೆ ಲೆಕ್ಕವಿಲ್ಲ" ಎನ್ನುತ್ತಿದ್ದ ಅದೇ ವೇಳೆಗೆ ದಾವೂದ್ ಇಬ್ರಾಹಿಂಗೆ.

"ಇನ್ನು ನಗರವು ತಣ್ಣಗೆ ಉಳಿಯುವುದಿಲ್ಲ, ನಮ್ಮ ಕಾಲವಂತೂ ಮುಗಿಯಿತು. ಈ ಹುಡುಗರ ರಂಪಾಟಕ್ಕೆ ನಾವು ಸಮಾಧಾನ ಹೇಳುವುದಾದರೂ ಹೇಗೆ?" ಎಂದು ಕೆ.ಪಿ. ಪೂರ್ಣಯ್ಯ ಮತ್ತು ಇಮಾಮ್ ಸಾಹೇಬರು ಅರಳಿ ಕಟ್ಟೆಯ ಕೆಳಗಡೆಗೆ ಕುಳಿತು ಮಾತಾಡುತ್ತಿದ್ದರು.

*

ಮತ್ತೆ ವಿಪರೀತವಾದ ಜ್ವರ. ಬೆಳಗಿನ ಹೊತ್ತು ತಲೆಯನ್ನು ಎತ್ತಿ ಇಡಬೇಕೆಂದರೂ ಚಾರುಗೆ ಆಗುತ್ತಿಲ್ಲ. ಸಣ್ಣನೆಯ ಕೈ-ಕಾಲು ನಡುಕ, ತಲೆಯನ್ನು ಯಾರೋ ಸೂಜಿ ಮೊನೆಯಿಂದ ಚುಚ್ಚುತ್ತಿದ್ದಾರೆಂದು ಅನಿಸತೊಡಗಿದೆ. ನೆಲಕ್ಕೆ ಮೈಯೊರಗಿಸಿಕೊಂಡು ರಾತ್ರಿ ಮಲಗಿದವನಿಗೆ ಅಲ್ಲಿಯೇ ನಿದ್ದೆ, ತಲೆದಿಂಬಿಲ್ಲ, ನೆಲಕ್ಕೆ ಚಾಪೆಯನ್ನು ಹಾಸಿಕೊಂಡಿಲ್ಲ. ಮಧ್ಯರಾತ್ರಿಯಲ್ಲಿಯೇ ದಿಢೀರನೆ ಬಂದು ಮೈ ಮೇಲೆ ಆವರಿಸಿಕೊಂಡ ಜ್ವರ, ಬೆಳಗಿನ ಹೊತ್ತು ಮಲಗಿದವನು ಏಳಲಾಗದೆ ಅಲ್ಲಿಯೇ ಒರಗಿದ್ದ ದಿಕ್ಕು ದೆಸೆಯಿಲ್ಲದ ಫಕೀರನೊಬ್ಬ ಬಸ್ಟ್ಯಾಂಡಿನಲ್ಲಿ ಹತ್ತಾರು ಜನ ನಡೆದಾಡಿದ ಜಾಗದಲ್ಲಿ ಮಲಗಿದವನಂತೆ. ಕಣ್ಣನ್ನು ಸರಿಯಾಗಿ ಬಿಡಿಸಲಾಗುತ್ತಿಲ್ಲ– ಕಣ್ಣಿಗೆ ಯಾವುದೋ ಮುಚ್ಚಳ ಹಾಕಿದಂತೆ. ತುಟಿಯೊಣಗುತ್ತಿದೆ, ಅಯಾಚಿತವಾಗಿ ಚಾರು ನೆಲಕ್ಕೆ ಅಂಟಿಕೊಂಡವನ ಅವಸ್ಥೆ ನೋಡುವ ಔದಾರ್ಯವು ಮೈಥಿಲಿಗೆ ಇದ್ದಿರಲಿಲ್ಲ. ರಾತ್ರಿಯಿಡೀ ಹಂಗಿಸಿದವನು ಬೆಳಗಿನ ಒರಗಿದವನ ಮೇಲೆ ಯಾವ ರೀತಿಯ ಕರುಣೆಯನ್ನು; ಔದಾರ್ಯವನ್ನು ತೋರಬೇಕೆಂದು ಮೈಥಿಲಿಗೆ ಅನಿಸಲಿಲ್ಲ. ಹೆಚ್ಚು ಕೊಬ್ಬು ಮತ್ತು ಧಿಮಾಕು ಇದ್ದವನು ಅದು ಪೂರ್ತಿಯಾಗಿ ಇಳಿದ ಮೇಲೆ ಸರಿಯಾಗುತ್ತಾನೆ ಎಂದುಕೊಂಡವಳು ತನಗೆ ಬೇಕಾದ ಟಿಫಿನ್ ರೆಡಿ ಮಾಡಿ ಅದನ್ನೇ ತಿಂದು, ಕಾಫಿ ಕುಡಿದು ಏನನ್ನೂ ವಿಚಾರಿಸದೆ, ಆಫೀಸಲ್ಲಿ ಮಹತ್ವದ ಕೆಲಸವೊಂದು ಅವಳಿಗಾಗಿ ಕಾದು ಕುಳಿತಿದೆಯೆಂಬಂತೆ ಲೂನಾ ಏರಿ ಹೊರಟುಹೋದಳು. ಅವಳು ಲೂನಾ ಸ್ಟಾರ್ಟ್ ಮಾಡಿದ ಶಬ್ದ ಚಾರುವಿನ ಕಿವಿಗೆ ಬಂದು ಅಪ್ಪಳಿಸಿತು. ಊರು

ಭಂಗ ಹೊಂದಿದ್ದ ಕೌರವನಾದರೂ ಎದ್ದು ಕುಳಿತುಕೊಳ್ಳುತ್ತಿದ್ದನೋ ಏನೋ? ಆದರೆ, ಎದ್ದೇಳುವ ಪ್ರಯತ್ನ ಮಾಡಿದರೂ ಚಾರುಗೆ ಏಳಲು ಸಾಧ್ಯವಾಗಲೇ ಇಲ್ಲ. ಮತ್ತೆ ಮಂಪರು ಮತ್ತು ಕವಿದುಕೊಂಡ ಕತ್ತಲ ಸಾಮ್ರಾಜ್ಯ ಹೊಚ್ಚ ಹೊಸ ಬೆಳಗಿನಲ್ಲಿಯೂ ಮತ್ತೆ ಅಲ್ಲಿಯೇ ಜೊಂಪು ನಿದ್ದೆ – ಚಾರುಗೆ. ಅವನ ಇಡಿಯ ದೇಹ ಏನೇನು ಅನುಭವಿಸುತ್ತಿದೆಯೆಂದು ಆತನೇ ವಿವರಿಸಲಾರ – ಹಸಿವೆ; ಬಾಯಾರಿಕೆ; ಕೈ–ಕಾಲು ನಡುಕ; ಜ್ವರ; ತಲೆನೋವು – ಎಲ್ಲವೂ ಒಂದೇ ಬಾರಿಗೆ ಅವನ ಮೇಲೆ ಆಕ್ರಮಣ ನಡೆಸಿದ್ದವು. ಯಾವುದನ್ನು ತಡೆದುಕೊಳ್ಳುವುದು? ಕಿರು ಬೆರಳಿನ ಉಗುರಿನಷ್ಟು ಪ್ರೀತಿಯನ್ನು ತೋರಿದ್ದರೆ ಅವನಿಗೆ ಆ ಯಾತನೆಯನ್ನು ಎದುರಿಸುವ ಕೊಂಚ ಶಕ್ತಿಯಾದರೂ ಬರುತ್ತಿತ್ತೋ ಏನೊ? ಅವನ ಹಣೆಯ ಮೇಲೆ ಮೂಡಿದ್ದ ಹತ್ತಾರು ಗೆರೆಗಳಲ್ಲಿ ಯಾವ ಗೆರೆಯ ಮೇಲೆಯೂ ಒಂದು ಹನಿ ಪ್ರೀತಿಯನ್ನು ಸೂಚಿಸುವ ರೇಖೆಗಳಿರಲಿಲ್ಲ. ಮೈಥಿಲಿಯು ಹೊರಡುವಾಗಲೂ ಕಡೆಗಣ್ಣಿಂದಲೂ ಚಾರುವನ್ನು ನೋಡಿರಲಿಲ್ಲ. ಹಗಲಲ್ಲಿಯೂ ಅಪಾರವಾದ ಯಾತನೆಯನ್ನು ಅನುಭವಿಸುತ್ತಲೇ ಚಾರು ಮಲಗಿದ್ದ. ಮೈಥಿಲಿಯು ಭಾವಿಸಿಕೊಂಡ ಹಾಗೆ ಅವನಿಗೆ ಅಹಂಕಾರವಿದ್ದಿದ್ದರೆ, ಧಿಮಾಕು ಇದ್ದಿದ್ದರೆ ಅಷ್ಟು ಹೊತ್ತಿಗೆ ಅದು ಬಸವಳಿದು ಮಣ್ಣು ಸೇರಿರುತ್ತಿತ್ತು. ಆದರೆ, ಚಾರು ಕೇವಲ ಒಬ್ಬ ಮನುಷ್ಯನಾಗಿದ್ದ. ಅವನು ಮೈಥಿಲಿಯು ಮನೆಯೊಳಗೆ ಭಿಕ್ಷೆ ಬೇಡುವುದಕ್ಕೆ ಬಂದ ಒಬ್ಬ ಬೀದಿ ಬದಿಯ ಭಿಕಾರಿಯಾಗಿರಲಿಲ್ಲ. ಯಾಕೆಂದರೆ ಅದು ಅವನ ಮನೆಯಾಗಿತ್ತು. ಮೈಥಿಲಿಯು ಅಷ್ಟೊಂದು ಅಸಹನೆ ತೋರಿಸಲು ಅವನು ಕುಷ್ಠ ರೋಗಿಯೋ, ಏಡ್ಸ್ ಪೀಡಿತನೋ ಆಗಿಲಿಲ್ಲ. ಅಲ್ಲಿಯೇ ಮಂಪರು ಹಿಡಿದು ಮಲಗಿದವನಿಗೆ ಮೈ ಮೇಲೆ ಎಚ್ಚರವಿಲ್ಲ. ಬಾಗಿಲು ತೆರೆದುಕೊಂಡಿದೆ, ಚಾರು ನೆಲದ ಮೇಲೆ ಕನವರಿಸಿಕೊಂಡು ಮಲಗಿದ್ದಾನೆ, ಕನವರಿಕೆಯಲ್ಲಿಯೂ "ಅಪ್ಪಾ" ಎಂದು ಕ್ಷೀಣ ಸ್ವರದಲ್ಲಿ ಹೇಳುತ್ತಿದ್ದಾನೆ. "ನಿನ್ನನ್ನು ನಂಬಿ ಬಂದಿದ್ದಕ್ಕೆ ನೀನು ವಿಶ್ವಾಸದ್ರೋಹ ಮಾಡಿದೆ" ಎಂದು ಮಹಾಗರತಿಯಂತೆ ಕಿರುಚಾಡಿದ ಮೈಥಿಲಿಯು ಯಾವ ಹಂಗೂ ಇಲ್ದೆ ಹೊರಟು ಹೋಗಿದ್ದಳು. ಎಲ್ಲವೂ ಇದ್ದ ಚಾರು ತರಗೆಲೆಯಂತೆ ಒಣಗಿಕೊಂಡು ಕನವರಿಸುತ್ತಿದ್ದ. ಇಂಥ ಕಠಿಣವಾದ ಕಾಲ ಮತ್ತು ಅವನ ಮೈ ಮೇಲೆ ರಣಹದ್ದಿನಂತೆ ಬಂದೆರಗಿದ ಜ್ವರಕ್ಕೂ ಸಣ್ಣ ಕರುಣೆಯುಕ್ಕಿ ಬಂತು.

ತೀರಾ ಅಕಸ್ಮಿಕವೆಂಬಂತೆ – ಮನೆಯೊಳಗಡೆಗೆ ಕಾಲಿಟ್ಟವಳು ಚಾರುವಿನ ಆತ್ಮೀಯ ಸಖಿ – ರೇಖಾ ಪಿಂಟೋ. ಅವಳು ಬಂದಿದ್ದು ಚಾರುವಿನೊಂದಿಗೆ ಡೈವೋರ್ಸಿನ ವಿಷಯ ಚರ್ಚಿಸಲು. ಆದರೆ, ಮನೆಯೊಳಗೆ ಕಾಲಿಟ್ಟಾಗ ಅವಳು ನೋಡಿದ್ದು – ಸೋತು ಹದಗೆಟ್ಟು ರಣಾಂಗಣದಲ್ಲಿ ಬಿದ್ದ ಸೈನಿಕನಂತಿರುವ ಚಾರು. ಅವನಿಗೆ ಮೈ ಮೇಲೆ ಎಚ್ಚರವಿಲ್ಲ, ಏನೋ ಕನವರಿಸುತ್ತಿದ್ದಾನೆ. ಮೊದಲೇ

ಪ್ರತಿಯೊಂದಕ್ಕೂ ಗಾಬರಿಪಡುವ ಹುಡುಗಿ ರೇಖಾ ಚಾರು ಬಿದ್ದಿದ್ದು ನೋಡಿ ಮತ್ತಷ್ಟು ಗಾಬರಿಯಾದಳು. ಚಾರುವಿನ ಹತ್ತಿರ ಬಂದು ನೋಡಿದಳು. ಅರೆನಿದ್ರೆಯಲ್ಲಿಯೇ ಕನವರಿಸುತ್ತಿದ್ದಾನೆ "ಅಪ್ಪಾ, ಅಪ್ಪಾ." ಯುದ್ಧದಲ್ಲಿ ಎದುರು ಬದುರು ವೀರಾವೇಶದಿಂದ ಹೋರಾಡುವ ಸೈನಿಕರು ಕೂಡಾ ಎದುರಾಳಿ ತಮ್ಮ ಗುಂಡೇಟಿಗೆ ಬಲಿಯಾದವರ ಬಗ್ಗೆ ಸಣ್ಣನೆಯ ಮಳೆಯಂತೆ ಅಶ್ರುತರ್ಪಣವನ್ನು ನೀಡುತ್ತಾರೇನೊ? ಚಾರುವಿನ ಸ್ಥಿತಿಯನ್ನು ನೋಡಿ – ತಕ್ಷಣವೇ ಮೈಥಿಲಿಯು ರೇಖಾಳ ಮನಸ್ಸಿನಲ್ಲಿ ಸುಳಿದು ಹೋದಳು. ಕಾದ ಬಾಣಲೆಯಂತೆ ಸುಡುತ್ತಿರುವ ಚಾರುವಿನ ಈ ಸ್ಥಿತಿಯನ್ನು ನೋಡಿಯೂ ಮೈಥಿಲಿಯು ಆಫೀಸಿಗೆ ಹೋಗಿದ್ದಾಳೆ. ಗಂಡನ ಬಗ್ಗೆ ಈ ರೀತಿಯ ತಿರಸ್ಕಾರ ಆಕೆಗೆ ಮೂಡಿದ್ದಾದರೂ ಹೇಗೆ? ಚಾರುವಿನದು ಹೆಂಗರುಳು. ಮಾನವೀಯ ಅನುಕಂಪದ ಅಂತಃಕರಣದ ಮನುಷ್ಯ. ಇಂಥ ಮನುಷ್ಯನ ಈ ಸ್ಥಿತಿಯನ್ನು ನೋಡಿಯೂ ಮೈಥಿಲಿಯು ಹೋಗಿದ್ದಾಳೆ ಎಂದರೆ – ಅವಳಲ್ಲಿ ಅಂತಃಕರಣವಿಲ್ಲ, ಮಾನವೀಯ ಅನುಕಂಪಗಳಿಲ್ಲ ಅಥವಾ ಮೈಥಿಲಿಯೂ ಯೋಚಿಸಿರಬಹುದು – "ಇಂಥವನನ್ನು ಕಟ್ಟಿಕೊಂಡು ರಿಸ್ಕು ತೆಗೆದುಕೊಳ್ಳುವುದಕ್ಕಿಂತ ತನ್ನ ನೆಮ್ಮದಿಯನ್ನು ನೋಡಿದರೆ ಸಾಕು. ಚಾರು ಏನಾದರೆ ತನಗೆ ಏನಾಗಬೇಕಾಗಿದೆ? ಈ ಸ್ಥಿತಿಯಲ್ಲಿ, ಅದೂ ತನ್ನೊಡನೆ ಒಂದೇ ಮನೆಯಲ್ಲಿ ಅದೂ ಚಳಿ–ಮಳೆ–ಬೇಸಿಗೆಯಲ್ಲಿ ಆಸರೆಯೊಡ್ಡುವ ಒಂದೇ ಛಾವಣಿಯ ಕೆಳಗೆ ವಾಸಿಸುವ ಸಹಜೀವಿಯೊಬ್ಬನ ಬಗ್ಗೆ ಲಕ್ಷ್ಯ ಕೊಡದೆ, ತನ್ನ ಲಿಪ್‌ಸ್ಟಿಕ್ ಸವರಿಕೊಳ್ಳುವ ಮೈಥಿಲಿಯಂಥ ಹೆಂಗಸರ ಮನದಲ್ಲಿ ಸೈತಾನ ಮನೆ ಮಾಡಿರುತ್ತಾನೆಯೆ?" ಯೋಚಿಸುತ್ತಲೇ ರೇಖಾ ಪಿಂಟೋ ಯಾವುದೇ ರೀತಿಯ ಸಂಕೋಚಕ್ಕೂ ಒಳಗಾಗದೇ ಬೆಡ್‌ರೂಮಿನಿಂದ ಒಂದು ತಲೆದಿಂಬು ಮತ್ತು ರಗ್ ತಂದಳು. ಚಾರುವಿನ ತಲೆಯನ್ನು ಎತ್ತಿ ಅವನ ತಲೆಯ ಕೆಳಗಡೆ ತಲೆದಿಂಬು ಇಟ್ಟಳು. ನಡುಗುತ್ತಿರುವ ಅವನ ಮೈ ಮೇಲೆ ರಗ್ಗೊಂದನ್ನು ಹೊದಿಸಿದಳು. ಇಷ್ಟಾದರೂ ಚಾರುವಿಗೆ ಮೈ ಮೇಲೆ ಎಚ್ಚರಿವಿಲ್ಲ, ಕನವರಿಸುತ್ತಿದ್ದಾನೆ. ರೇಖಾಪಿಂಟೋ ಮೈ ಮೇಲೆ ಎಚ್ಚರವಿಲ್ಲದ ಮನುಷ್ಯ ಜೀವಿಯೊಬ್ಬನ ಹಣೆಯ ಮೇಲೆ ತಣ್ಣೀರಲ್ಲಿ ನೆನೆಸಿ ತಂದ ತನ್ನ ಕರ್ಚೀಫನ್ನು ಇರಿಸಿದಳು. ಅದುರುತ್ತಿರುವ ಚಾರುವಿನ ತುಟಿಗೆ ನೀರ ಹನಿಯನ್ನು ತಾಗಿಸಿದಳು. ದಿಕ್ಕೇ ತೋಚದಂತೆ ಅವನ ಪಕ್ಕದಲ್ಲಿ ರೇಖಾ ಪಿಂಟೋ ಕೂತಳು. ತನ್ನ ಪಕ್ಕದಲ್ಲಿ ಮೈಮೇಲೆ ಅರಿವಿಲ್ಲದಂತೆ ಮಲಗಿದವನು ಗಂಡಸೆಂಬುದಾಗಲೀ, ತಾನು ಹೆಂಗಸು ಎಂಬುದಾಗಲೀ ಆಗ ಆ ಕ್ಷಣಕ್ಕೆ ಅವಳ ಮಿದುಳಲ್ಲಿ ಇರಲಿಲ್ಲ. ಮನುಷ್ಯನೆಂಬ ವರ್ಗವೊಂದಕ್ಕೆ ಸೇರಿದವರು ತಮ್ಮ ಸಹಜೀವಿಗಳ ಬಗ್ಗೆ ಇಡಬಹುದಾದ ಸಹಜತೆ ಮಾತ್ರವೇ ಅವರಿಬ್ಬರ ನಡುವೆ ಹಾಜರಾಗಿತ್ತು. ಅಲ್ಲದೆ ಇದು ರೇಖಾ ಚಾರುಗೆ ಸಲ್ಲಿಸುತ್ತಿರುವ ಎರಡನೆಯ ಸೇವೆ. ಆದರೆ ರೇಖಾ ಬಂದಿದ್ದಾಗಲೀ, ಅವಳು ತನ್ನ ಹಣೆಯ ಮೇಲೆ ತಣ್ಣೀರ ಪಟ್ಟಿಯನ್ನು

ಇಟ್ಟಿದ್ದಾಗಲೀ ಚಾರುಗೆ ಗೊತ್ತೇ ಇರಲಿಲ್ಲ. ಸುಡುವ ಬೆಂಕಿಯ ಕಾವು ಹತ್ತಿರ ಬಂದವರ ಮೈಗೆ ತಗಲುವಂತೆ, ಸುಡುವ – ನಿಗಿ ನಿಗಿ ಕೆಂಡದಂತಿರುವ ಚಾರುವಿನ ಮೈಯ ಬಿಸಿಯು ರೇಖಾಳ ಮೈಗೆ ತಗಲುತ್ತಿತ್ತು. ನಿಡಿದಾದ ನಿಟ್ಟುಸಿರು ಬಿಟ್ಟಳು ರೇಖಾಪಿಂಟೋ – ಎರಡು ಮೂರು ಬಾರಿ. ಇನ್ನು ಮಾಡುವುದೇನು ಎಂದು ತಿಳಿಯದೆ ಕೊಂಚ ಹೊತ್ತು ಮಂಕಾಗಿ ಕೂತಳು. ಚಾರುವಿನ ಕನವರಿಕೆಯು ಸ್ವಲ್ಪ ಕಡಿಮೆಯಾದಂತೆ ರೇಖಾ ಪಿಂಟೋಗೆ ಅನಿಸಿತು. ಎದ್ದು ಹೊರಗಡೆ ಹೋಗಿ ಹತ್ತಿರದ ಅಂಗಡಿಯೊಂದರಿಂದ ಗ್ಲೂಕೋಸ್ ಪ್ಯಾಕೆಟನ್ನು ತೆಗೆದುಕೊಂಡು ಬಂದು, ಅದರ ನೀರನ್ನು ಚಾರುವಿನ ಬಾಯಿಗೆ ಹಿಡಿದಳು – ತೊಟ್ಟಿಕ್ಕುವಂತೆ. ಯಾಕೆಂದರೆ, ಅವನಿಗೆ ಇನ್ನೂ ಮೈ ಮೇಲೆ ಅರಿವು ಬಂದಿಲ್ಲ. ಯಾವುದೇ ರೀತಿಯ ಅಪರಾಧವನ್ನು ಮಾಡದ ಚಾರು ಮೈಥಿಲಿಯ ಕಾಮನೆಗಳಿಗೆ ಬಲಿಯಾದಂತೆ ರೇಖಾಪಿಂಟೋಗೆ ಅನಿಸಿತು. ಇದ್ದಕ್ಕಿದ್ದಂತೆ ಚಾರು "ಅಯ್ಯೋ" ಎಂದ. ಮತ್ತೊಂದು ಕ್ಷಣದಲ್ಲಿ ಹಲ್ಲನ್ನು ಕಟಕಟನೆ ಕಡಿಯತೊಡಗಿದ. ಅವನ ಮೈಯ ನಡುಕ ಮತ್ತೊಮ್ಮೆ ಹೆಚ್ಚಾಯಿತು. "ಅವಳು ಕೊಲ್ಲುತ್ತಾಳೆ – ನಾನು ಸಾಯುತ್ತಿದ್ದೇನೆ" ಎಂದು ಮತ್ತೊಂದು ಕ್ಷಣದಲ್ಲಿ ಮೆತ್ತಗೆ ಅಂದ. ಆದರೆ ಅವನ ಮುಖದಲ್ಲಿ ಜೀವ ಸಂಕಟವೊಂದು ಎದ್ದೆದ್ದು ಬರುತ್ತಿದೆಯೆಂದನ್ನಿಸಿತು. ರೇಖಾಗೆ ವಿಪರೀತ ಯಾತನೆಯು ಹೃದಯದಂಚಿನಲ್ಲಿ ಬಂದು ಹಿಂಡಿದಂತಾಯಿತು. ಮುಖವನ್ನು ಕಿವುಚಿಕೊಂಡ ಚಾರುವಿನ ಹೊಟ್ಟೆಯೂ ಖಾಲಿಯಾಗಿದೆ ರಾತ್ರಿಯೂ ಊಟ ಮಾಡಿಲ್ಲ, ಬೆಳಿಗ್ಗೆ ತಿಂಡಿ ತಿಂದಿಲ್ಲವೆಂದು ರೇಖಾಗೆ ಗೊತ್ತಿದ್ದರೆ ಅದು ಬೇರೆ ಪ್ರಶ್ನೆಯಾಗಿರುತ್ತಿತ್ತು. ಕೈ ಹಿಡಿದ ಹೆಂಡತಿಯೇ ಕಟುಕತನದಿಂದ ಚಾರುವನ್ನು ಉಪವಾಸ ಕೆಡವಿಬಿಟ್ಟು ಹೋಗಿದ್ದಾಳೆ ಎಂಬುದರ ಅರಿವು ಸಾಮಾನ್ಯವಾಗಿ ಯಾರಿಗೂ ಗೊತ್ತಿರುವುದು ಸಾಧ್ಯವಿರಲಿಲ್ಲ. ರೇಖಾಪಿಂಟೋ 'ಇನ್ನು ತಡಮಾಡುವಂತಿಲ್ಲ' ಎಂದು ಯೋಚಿಸಿದಳು. ತಕ್ಷಣವೇ ಮನೆಯೊಳಗಿನಿಂದ ಹೊರಗೆ ಬಂದ ರೇಖಾಪಿಂಟೋ ಕೂಡಲೇ ಯಾವುದೋ ಒಂದು ಆಟೋವನ್ನು ತೆಗೆದುಕೊಂಡು ಬಂದಳು. ಡ್ರೈವರ್‌ಗೆ ಹೇಳಿ ಇಬ್ಬರೂ ಚಾರುವನ್ನು ಎತ್ತಿಕೊಂಡು ಆಟೋದಲ್ಲಿ ಕೂರಿಸಿದರು ಮತ್ತು ರೇಖಾ ಪಿಂಟೋ ಮನೆಗೆ ಬೀಗ ಹಾಕಿದಳು. ಆಟೋ ಡ್ರೈವರ್‌ಗೆ "ನಿಧಾನ ಓಡಿಸಪ್ಪಾ" ಅಂದಳು. "ಅಯ್ಯೋ ಅಮ್ಮಾ, ನಂಗೂ ಗೊತ್ತಾಗುವುದಿಲ್ಲವೇ?" ಎಂದವನೇ ಆಟೋ ಸ್ಟಾರ್ಟ್ ಮಾಡಿದ. ಆದರೆ, ಚಾರು ಆಟೋದಲ್ಲಿ ಒರಗಿದವನು ಹಾಗೆಯೇ ಒರಗಿಕೊಂಡು ಕೂತಿದ್ದ. ರೇಖಾಪಿಂಟೋ ಮೆಲ್ಲನೆ ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡಳು – ಪುಟ್ಟ ಮಗುವನ್ನು ತೊಡೆಯಲ್ಲಿ ಮಲಗಿಸಿಕೊಂಡಂತೆ!

ಡಾ. ನಾಯಕರ ನರ್ಸಿಂಗ್ ಹೋಮಿಗೆ ತಲುಪುವಷ್ಟರಲ್ಲಿ ಚಾರುವಿನ ಮೈ ನಡುಕ ಹೆಚ್ಚಾಗಿತ್ತು. ಬೇರೆ ಪೇಶಂಟ್‌ಗಳನ್ನು ಬಿಟ್ಟು ಡಾ. ನಾಯಕ್ ಮತ್ತೆ ಆಸ್ಪತ್ರೆಗೆ

ಅಡ್ಮಿಟ್ ಮಾಡಿಕೊಂಡರು. ಅವರಿಗೂ ಚಾರುವಿನ ದೇಹ ಸ್ಥಿತಿಯು ಏರುಪೇರಾಗಿರುವುದು ಒಂದು ರೀತಿಯ ಆಶ್ಚರ್ಯವನ್ನೇ ತಂದಿತ್ತು: "ಯಾಕಮ್ಮ, ಮತ್ತೆ ಕುಡಿತ?" ಎಂದು ರೇಖಾ ಪಿಂಟೋಳನ್ನೇ ಕೇಳಿದರು. ಅವಳಾದರೂ ಏನು ಹೇಳಿಯಾಳು?

ರೇಖಾಪಿಂಟೋ ಹನಿ ಹನಿಯಾದ ಗ್ಲೂಕೋಸ್‌ನೀರನ್ನು ಚಾರುವಿನ ತುಟಿಯಲ್ಲಿ ಎರೆಯುತ್ತಿರುವಾಗ ಮೈಥಿಲಿಯು ಶಿಬಿಗೆ "ಗುಡ್‌ಮಾರ್ನಿಂಗ್ ಸಾರ್" ಎಂದು ಹೇಳುತ್ತಿದ್ದಳು, ಯಾವ ಭಿಡೆಯೂ ಇಲ್ಲದೆ. ಶಿಬಿ ಮುಗುಳ್ನಕ್ಕ. ಅವನ ನಗೆಯಲ್ಲಿಯೂ ಯಾವುದೋ ಒಂದು ರೀತಿಯ ಸೆಳೆತವಿದೆಯೆಂದು ಮೈಥಿಲಿಗೆ ಅನಿಸಿತು. "ಮೈಥಿಲಿಯವರೇ, ನಾನಿನ್ನೂ ಟಿಫಿನ್ ಮಾಡಿಲ್ಲ, ಹೋಗಿ ಟಿಫಿನ್ ಮಾಡ್ಕೊಂಡು ಬರ್ತೀನಿ, ಅಷ್ಟು ಒತ್ತಿಗೆ ನೀವು ಈ ಫೈಲುಗಳನ್ನು ತಯಾರು ಮಾಡಿಡಿ" ಎಂದ ಶಿಬಿ ಚೆಯರ್ ಬಿಟ್ಟು ಎದ್ದ. ಆ ದಿನವೂ ಅವರಿಬ್ಬರೇ ಆಫೀಸಿಗೆ ಬೇಗ ಬಂದವರು. ಆಫೀಸಿನಲ್ಲಿ ಅಟೆಂಡರ್ ಒಬ್ಬನ ಹೊರತು ಬೇರಾರೂ ಇಲ್ಲ. "ಟಿಫಿನ್‌ಗೆ ಯಾಕೆ ಹೋಟೇಲಿಗೆ ಹೋಗ್ತೀರಿ ಸಾರ್, ನಾನೇ ಟಿಫಿನ್ ಬಾಕ್ಸ್ ತಂದಿದ್ದೀನಿ, ಅದನ್ನೇ ತಿನ್ನಿ, ಇಡ್ಲಿ ಮತ್ತು ಚಟ್ನಿ ಮಾತ್ರವೇ ಇದೆ, ಅಗಬಹುದಲ್ಲಾ? ಮಧ್ಯಾಹ್ನ ಹೋಟೆಲಿಗೆ ಹೋಗಿ, ನನಗಂತೂ ಎರಡು ಮೂರು ಇಡ್ಲಿ ಇದ್ರೆ ಸಾಕಾಗುತ್ತೆ. ಈವತ್ತು ಇಡ್ಲಿ ಮಾಡಿದ್ದು ಹೆಚ್ಚಾಯಿತು, ಅದನ್ನು ತಂದುಬಿಟ್ಟೆ. ನನಗೂ ಅಂದಾಜಿತ್ತು ನೀವು ಆಫೀಸಿಗೆ ಬೇಗ ಬಂದಿರುತ್ತೀರಿ ಅಂತ" – ಮೈಥಿಲಿಯು ತನ್ನ ಟಿಫಿನ್ ಬಾಕ್ಸನ್ನು ವ್ಯಾನಿಟಿ ಬ್ಯಾಗಿನಿಂದ ತೆಗೆದಳು. ಶಿಬಿಯು "ಥ್ಯಾಂಕ್ಸ್ ಮೇಡಂ, ಮದುವೆಯಾಗುವ ತನಕ ಈ ರೀತಿಯ ವಾರಾನ್ನವೇ ಹೆಚ್ಚು ರುಚಿ, ಅದೂ ನೀವು ಮಾಡಿದ ಇಡ್ಲಿಯೆಂದರೆ ಚೆನ್ನಾಗಿಯೇ ಇರುತ್ತದೆ. ಏನೇ ಹೇಳಿದರೂ ಹೆಂಗಸರ ಕೈಗುಣವೇ ಬೇರೆ" ಎಂದ. ಮೈಥಿಲಿಗೆ ಎಲ್ಲಿಲ್ಲದ ಸಂತಸ ಮುಖದ ತುಂಬಾ ಹರಡಿಕೊಂಡಿತು. ಶಿಬಿಯು ಮೈಥಿಲಿಯು ಕೊಟ್ಟ ಇಡ್ಲಿ ತಿಂದು, ಕಾಫಿ ಕುಡಿಯಲೆಂದು ಇಬ್ಬರೂ ಕ್ಯಾಂಟೀನಿನ ಕಡೆಗೆ ಹೊರಟರು. ಅದೇ ವೇಳೆಗೆ ಅವಳ ಆಫೀಸಿಗೆ ಡಾ. ನಾಯಕ್ ಅವರ ನರ್ಸಿಂಗ್ ಹೋಮಿನಿಂದ ರೇಖಾ ಫೋನ್‌ಗಾಗಿ ಪ್ರಯತ್ನಿಸುತ್ತಿದ್ದಳು. ರೇಖಾ ಮೂರನೆಯ ಬಾರಿ ಪ್ರಯತ್ನಿಸಿದಾಗ ಅವಳ ಆಫೀಸಿನ ಲೈನ್ ಸಿಕ್ತು. ಫೋನು ಎತ್ತಿಕೊಂಡವನು, "ರೇಖಾ, ಮೈಥಿಲಿಯವರು ಬೇಕಿತ್ತು" ಎಂದಳು. ಅಟೆಂಡರ್, "ಅವರೂ ಶಿಬಿ ಸಾಹೇಬ್ರು ಕಾಫಿಗೆ ಹೋಗವ್ರೆ, ಇಪ್ಪತ್ತು ನಿಮಿಷ ಬಿಟ್ಟು ಫೋನು ಮಾಡ್ರವ್ವ" ಅಂದ. ಎಲ್ಲಿಂದಲೋ ಬಂದ ಸಿಟ್ಟು ಸಹನೆಯ ಮೂರ್ತಿಯಂತಿದ್ದ ರೇಖಾಳ ಮುಖದ ಬಿಂದು ಆವರಿಸಿಕೊಂಡಿತು. ಅದರಿಂದಲೇ ಅವಳ ಮುಖದ ಮೇಲೆ ಸಿಟ್ಟಿನಿಂದಲೇ ಉಂಟಾದ ಕೆಂಪು – ಉರಿಮುಖವಾಗಿ ಪರಿವರ್ತನೆಯಾಯಿತು. ಟಕ್ಕನೇ ಫೋನು ಕೆಳಗಿಟ್ಟಳು. ಒಂದು ದೊಡ್ಡ ಗಂಡಾಂತರದ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಮಲಗಿದ್ದ ಚಾರುವಿನ ಕುರಿತು ರೇಖಾ ಕೊಡಬೇಕಾಗಿದ್ದ ಮೆಸೇಜೊಂದು

ತಪ್ಪಿಹೋಯಿತು. ಅದರಿಂದ ಮೈಥಿಲಿಗೆ ಅನುಕೂಲವಾಯಿತು. ಯಾಕೆಂದರೆ, ಮೈಥಿಲಿಗೆ ಆಸ್ಪತ್ರೆಯ ಫಿನಾಯಿಲ್ ವಾಸನೆ, ರೋಗಿಯಾಗಿ ಮಲಗಿದ ಗಂಡನನ್ನು ನೋಡುವುದು ಎಂದರೆ ಸಣ್ಣದೊಂದು ಅಸಹ್ಯವಷ್ಟೇ ಅಲ್ಲ, ಅದರಿಂದ ಅವಳ ತಿರುವು ದಾರಿಯಿಂದಲೂ ವಂಚಿತಳಾಗಬೇಕಾಗುತ್ತಿತ್ತು.

ದೇವವ್ರತನ ಮತ್ತೊಂದು ಅವತಾರ ಶಿಬಿಯೊಂದಿಗೆ ಕಾಫಿ ಹೀರುತ್ತಾ ಮೈಥಿಲಿಯು, "ಒಮ್ಮೆ ಮನೆಗೆ ಬನ್ನಿ ಸಾರ್, ಒಳ್ಳೆಯ ಅಡುಗೆ ಮಾಡಿ ಹಾಕ್ತೇನೆ. ನಿಮಗೆ ಯಾವುದು ಇಷ್ಟ? ಅದನ್ನೇ ಮಾಡಿ ಹಾಕುತ್ತೇನೆ" ಎಂದಳು. ಶಿಬಿಯು ಕೂಡಾ ನಗುತ್ತಲೇ ಹೇಳಿದ, "ಖಂಡಿತಾ ಬರ್ತೇನೆ, ಆಲೂಗಡ್ಡೆ ಪಲ್ಯ ಮತ್ತು ಪೂರಿ ತಿನ್ನೋಕೆ ಬಹಳ ಇಷ್ಟ, ಹಾಗೆಯೇ ನುಗ್ಗೇಕಾಯಿ ಸಾಂಬಾರ್ ಮತ್ತು ಬೀನ್ಸ್ ಪಲ್ಯವೂ ಇಷ್ಟ. ಈ ಎರಡರಲ್ಲಿ ಯಾವುದನ್ನು ಮಾಡಿದರೂ ತಿನ್ನುತ್ತೇನೆ. ಹಾಗಂತ, ನನಗೆ ಊಟ–ತಿಂಡಿಯಲ್ಲಿ ಇದುವೇ ಆಗಬೇಕು–ಅದುವೇ ಅಗಬೇಕು ಎಂಬುದೇನೂ ಇಲ್ಲ. ಯಾವುದೇ ಆದರೂ ಹೊಟ್ಟೆ ತುಂಬಾ ತಿನ್ತೇನೆ. ಊಟ–ತಿಂಡಿಯ ವಿಚಾರದಲ್ಲಿ ತುಂಬಾ ಪಾವಿತ್ರ್ಯವನ್ನು ಕಾಪಾಡಿಕೊಂಡರೆ ಕುಗ್ಗುವುದು ನಮ್ಮ ಹೊಟ್ಟೆಯೇ ಹೊರತು ಬೇರೆಯವರ ಹೊಟ್ಟೆ ಅಲ್ಲ." ಮೈಥಿಲಿಯು, "ಅದು ನಿಜ ಸಾರ್ ನಮ್ಮನೆಯವರಿಗೆ ಹಾಗಲ್ಲ, ಪ್ರತಿಯೊಂದರಲ್ಲೂ ಅದೇ ಬೇಕು–ಇದೇ ಬೇಕು ಅನ್ನುವ ನಿಯಮ. ಪ್ರತಿಯೊಂದರಲ್ಲೂ ನಿಯಮವನ್ನು ಅವರು ಮೀರುವುದಿಲ್ಲ, ಒಂದೇ ತರ. ಕಪ್ಪು ಬಟ್ಟೆಯನ್ನಾದರೂ ವಾಶ್ ಮಾಡಿ ಬಿಳಿ ಮಾಡಬಹುದು. ಆದರೆ, ನನ್ನ ಗಂಡನನ್ನು ಮಾತ್ರ ಬಿಳಿ ಮಾಡುವುದು ಅಸಾಧ್ಯ." ಮತ್ತೊಂದು ಗಂಡನ ನಂಬಿಗೆಗೆ ದೂಷಣೆಯ ಮಾತು, ತನ್ನ ಶ್ರೇಷ್ಠತೆಯ ವ್ಯಸನದ ಮಾತು ಮೈಥಿಲಿಯ ಬಾಯಿಂದ ಹೊರಗೆ ಬಂತು. ಶಿಬಿಯು ಪರೋಕ್ಷವಾಗಿ ಮೈಥಿಲಿ ತನ್ನನ್ನೇ ಹೊಗಳುತ್ತಿದ್ದಾಳೆ ಎಂದು ಭಾವಿಸಿಕೊಂಡ.

ಇಬ್ಬರೂ ಮರಳಿ ವಾಪಾಸು ಬರುವಾಗ ಆಫೀಸಿನಲ್ಲಿ ವೆಂಕಟರಮಣ ತನ್ನ ಕುರ್ಚಿಯಲ್ಲಿ ಆಸೀನನಾಗಿದ್ದ. ವೆಂಕಟರಮಣನ ಬಾಯಿ ತುಂಬಾ ಜರ್ದಾ. ಶಿಬಿಯನ್ನು ನೋಡುತ್ತಾ, "ನಮಸ್ಕಾರ ಸಾರ್, ಕಾಫಿಗೆ ಹೋಗಿದ್ರೇನೋ?" – ಬಾಯಿ ತುಂಬಾ ಜರ್ದಾ ತುಂಬಿಟ್ಟುಕೊಂಡವನು ಪ್ರಶ್ನಿಸಿದ. ತಾಂಬೂಲದ ರಸವು ಒಸರಿತು. ಮೈಥಿಲಿಯು ಅವನು ಅದನ್ನು ಕರ್ಚೀಫಿನಲ್ಲಿ ಒರಸಿಕೊಳ್ಳುವುದನ್ನು ನೋಡಿದಳು. "ಈ ಮನುಷ್ಯನಿಗೆ ಗಲೀಜು ಅನ್ನುವುದೇ ಗೊತ್ತಿಲ್ಲವೇನೊ?" ಎಂದುಕೊಂಡಳು.

ಅದೇ ವೇಳೆಗೆ ಡಾ. ನಾಯಕ್ ಚಾರುವನ್ನು ಪರೀಕ್ಷಿಸುತ್ತಿದ್ದರು. ನಿತ್ರಾಣಗೊಂಡ ಚಾರುವಿನ ಪಲ್ಸ್ ಸರಿಯಾಗಿ ಸಿಗುತ್ತಿಲ್ಲ. ಅನುಭವಿ ಮತ್ತು ತಜ್ಞ ವೈದ್ಯ ತಕ್ಷಣವೇ ನರ್ಸೊಬ್ಬಳಿಗೆ ಕರೆದು, "ಡ್ರಿಪ್ ಹಾಕಿ ಕೂಡಲೆ" ಎಂದರು. ಕೇವಲ ದೇಹವಲ್ಲ, ಮನಸ್ಸು ಕೂಡಾ ಛಿದ್ರಗೊಂಡಿದೆಯೆಂದನ್ನಿಸಿತು ನಾಯಕರಿಗೆ. ಡ್ರಿಪ್ ಹಾಕದೇ

ಗತ್ಯಂತರವಿಲ್ಲ. ಈ ಹುಡುಗ ಕಂಗಾಲಾಗಿಬಿಟ್ಟಿದ್ದಾನೆ ಎಂದುಕೊಂಡರು. ರೇಖಾಪಿಂಟೋಳನ್ನು ನೋಡುತ್ತಾ, "ಒಂದೆರಡು ದಿನವಿರಲಿ ನೋಡೋಣ" ಅಂದರು. ರೇಖಾ, ಆಯಿತು ಎಂಬಂತೆ ತಲೆಯಲ್ಲಾಡಿಸಿದಳು. ಮತ್ತೆ ಪುನಃ ಮೈಥಿಲಿಗೆ ಫೋನು ಮಾಡಬೇಕೆಂದು ಅವಳಿಗೆ ಅನಿಸಲಿಲ್ಲ. ರೇಖಾಳ ಮನದಾಳದಲ್ಲಿ ನೂರು ಛಿದ್ರಗೊಂಡ ಕನ್ನಡಿಯ ರೂಪಗಳು. ಒಂದೆಡೆಯಿಂದ ಪ್ರಸನ್ನ ಬಂದು ಎಲ್ಲಿ ದಶಾವತಾರದ ಮೇಳವನ್ನು ಕಟ್ಟುತ್ತಾನೋ ಎಂದು ಭಯ. ಮತ್ತೊಂದು ಕಡೆಯಿಂದ ಚಾರುವಿನ ಪರಿಸ್ಥಿತಿಯು ಹದಮೀರಿ ಹೋಗಿದೆ. ಏನು ಮಾಡಲು ತೋರುತ್ತಿಲ್ಲ ಅವಳಿಗೆ. ಗಾಬರಿಗೊಂಡ ಮನಸ್ಸು – ಚಾರುವನ್ನು ಆಸ್ಪತ್ರೆಯಲ್ಲಿ ಹಾಗೆಯೇ ಬಿಟ್ಟು ಹೋಗಲು ಒಪ್ಪುತ್ತಿಲ್ಲ. ಗಾಬರಿಗೊಂಡವರ ಮೈ ಮೇಲೆ ಶೀತಲವಾದ ಕಪ್ಪೆಯೊಂದು ಕೂತಂತೆ ಆಗಿಬಿಟ್ಟಿದೆ. ಚಾರು ಉಳಿಯಲೇಬೇಕು, ಅದು ರೇಖಾ ಪಿಂಟೋಳ ಮಾನಸಿಕ ನಿರ್ಧಾರ. ಯಾಕೆ ಈ ರೀತಿಯ ಸಣ್ಣದೊಂದು ಭಾವನೆಯು ಅವನ ಬಗ್ಗೆ ಬೆಳೆದಿದೆಯೆಂದು ಅವಳು ಯೋಚಿಸಲಾರಳು. ಭಾವನೆಗಳಿಗೆ ಅಕ್ಷರಗಳಿಲ್ಲ, ಮಾತುಗಳಿಲ್ಲ. ಅದರಿಂದಾಚೆಗೆ ಏನೋ ಒಂದಿದೆ. ಚಾರುವಿನ ಮೈಯೊಳಗೆ ಇಳಿಯತೊಡಗಿದ ಗ್ಲೂಕೋಸಿನ ನೀರು ಒಂದೊಂದಾಗಿ ಇಳಿಯತೊಡಗಿದಂತೆ ಅದನ್ನೇ ನೋಡುತ್ತಾ ರೇಖಾ ಕೂತಳು.

ಅದೇ ವೇಳೆಗೆ ಪ್ರಸನ್ನ ಬಂದು ಜೆಸಿಂತಾ ಬಾಯಿಗೆ ಯದ್ವಾತದ್ವಾ ಬೈಯತೊಡಗಿದ್ದ, "ನಿನ್ನ ಮಗಳೊಬ್ಬಳು ಸೂಳೆ, ಅವಳು ಲಾಯರ್ ನೋಟೀಸ್ ಕೊಟ್ಟಿದ್ದಾಳೆ, ಡೈವೋರ್ಸ್ ಬೇಕಂತೆ ಅವಳಿಗೆ. ಅವಳಿಗೊಬ್ಬ ಮಿಂಡ ಸಿಕ್ಕಿದ್ದಾನೆ ಎಂದು ಕಾಣುತ್ತದೆ, ಸೊಕ್ಕು ಅವಳದು." ಜೆಸಿಂತಾ ಬಾಯಿ, "ಹೋಗೋ, ನಿನ್ನಂಥವರು ಏನು ಮಾಡ್ತೀರಿ ಅನ್ನುವುದು ಗೊತ್ತು, ನಡಿಯೋ ಆಚೆಗೆ" ಅಂದರು. ಆದರೆ, ಈ ಸಂಗತಿಯು ರೇಖಾಗೆ ಗೊತ್ತಿಲ್ಲ. ಅವಳು ಮತ್ತೊಮ್ಮೆ ಮೈಥಿಲಿಗೆ ತಿಳಿಸುವುದೇ ಬೇಡವೇ ಎಂಬ ಸಂದಿಗ್ಧತೆಗೆ ಗುರಿಯಾದಳು. ಬೇರೆ ರೀತಿಯಲ್ಲಾದರೂ ಮೈಥಿಲಿಗೆ ತಿಳಿಸಲೇಬೇಕು ಎಂದುಕೊಂಡು, ಆಸ್ಪತ್ರೆಯ ಕೌಂಟರ್‌ನಲ್ಲಿ ಕುಳಿತಿದ್ದ ಹುಡುಗಿಯೊಬ್ಬಳಿಗೆ ಹೇಳಿದಳು; "ದಯವಿಟ್ಟು ಚಾರು ಈ ಆಸ್ಪತ್ರೆಗೆ ಸೇರಿದ್ದಾರೆ ಅಂತ ಮೈಥಿಲಿ ಅನ್ನುವವರಿಗೆ ಮೆಸೇಜ್ ಕೊಡಿ. ಎರಡು ದಿನದಲ್ಲಿ ಡಿಸ್ಚಾರ್ಜು ಆಗಬಹುದು ಅಂತ ಹೇಳಿ." ಅದೇ ಮಾದರಿಯಲ್ಲಿ ಮೆಸೇಜು ಮೈಥಿಲಿಗೆ ಬಂದು ತಲುಪಿತು. ಅದರೆ ಅವಳು ಕ್ಯಾರೇ ಅನ್ನಲಿಲ್ಲ, ಅವಳಿಗೆ ಹಿಂದಿನ ದಿನದ ಚಾರುವಿನ ಅವತಾರ ಮನಸ್ಸಲ್ಲಿ ಹಾದುಹೋಯಿತು. ಚಾರು ಏನು ಬೇಕಾದರೂ ಮಾಡಲಿ, ಅವನ ಆರೋಗ್ಯದ ಬಗ್ಗೆ ತಾನೇಕೆ ಚಿಂತಿಸಬೇಕು ಎಂದುಕೊಂಡು ಸುಮ್ಮನಾದಳು ಮತ್ತು ಒಳಗೊಳಗೆ ಖುಶಿಪಟ್ಟಳು. "ಚಾರು ನೆಗೆದುಬಿದ್ದರೆ ಮತ್ತೊಂದು ರೀತಿಯಲ್ಲಿ ತನಗೆ ಬೇಕಾದ ಸ್ವಾತಂತ್ರ್ಯ ಸಿಗುತ್ತದೆ, ಅದನ್ನು ನೆಮ್ಮದಿಯಿಂದ ಅನುಭವಿಸಬಹುದು" –

ಕಲ್ಪನೆಯು ಬಂದಾಗ ಮೈಥಿಲಿ ತುಟಿಯಂಚಲ್ಲಿ ಕಿರುನಗೆಯೊಂದು ಬಂತು. ಕೂಡಲೇ, ಶಿಬಿಯತ್ರ ಹೋಗಿ, "ಸಾರ್, ನಾಳೆ ರಾತ್ರಿಯೂಟಕ್ಕೆ ಮನೆಗೆ ಬನ್ನಿ, ನಿಮಗೆ ಬೇಕಾದ ಅಡುಗೆ ಮಾಡಿ ಬಡಿಸ್ತೀನಿ." ಶಿಬಿಯು, 'ಓ.ಕೆ.' ಅಂದ. ಮುಂದಿನ ಪರಿಸ್ಥಿತಿಯೊಂದು ಹಾಜರಾಗಲಿದೆ ಎಂಬುದು ಗೊತ್ತಿಲ್ಲದಂತೆ! ಅದೇ ದಿನ ರಾತ್ರಿ ರೇಖಾ ಪಿಂಟೋ ಗತ್ಯಂತರವಿಲ್ಲದೆ ಚಾರುವೊಬ್ಬನನ್ನೇ ಬಿಟ್ಟು ಮನೆಗೆ ಹೋದಳು.

ಮರುದಿನ ಸಂಜೆ ಚಾರು ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಆಟೋದಲ್ಲಿಯೇ ಮನೆಗೆ ಬಂದ. ಅವನು ಮನೆಗೆ ಬಂದು ತಲುಪಿದಾಗ ರಾತ್ರಿ ಒಂಬತ್ತೂವರೆ. ನರ್ಸಿಂಗ್ ಹೋಮಿನಿಂದ ಬಿಡುಗಡೆಯಾಗಿ ಬಂದವನಿಗೆ ಮನೆಯಲ್ಲಿ ಭವ್ಯವಾದ ಸ್ವಾಗತವೇ ದೊರಕಿತು. ಅವನು ಬಂದು ಮನೆಯ ಬಾಗಿಲನ್ನು ಹೊಡೆದಾಗ – ಒಳಗಡೆಯಿಂದ ಯಾರದೋ ಮಾತು. ಮೈಥಿಲಿಯು ಬಾಗಿಲನ್ನು ತೆರೆದಳು – ಒಳಗಡೆ ಶಿಬಿಯು ಊಟ ಮಾಡುತ್ತಿದ್ದ. ಚಾರುವಿನ ಮುಖವನ್ನು ನೋಡಿದ ಕ್ಷಣವೇ ಮೈಥಿಲಿಯ ಮುಖ ಒಂದೆರಡು ಕ್ಷಣ ಕಪ್ಪಿಟ್ಟಿತು. ಶಿಬಿಯ ಮುಖವು ಕೆಂಪೇರಿತು. ಇಬ್ಬರೂ ಯಾವುದೋ ತಪ್ಪನ್ನು ಮಾಡಿದವರಂತೆ ಮುಖ ಮುಖ ನೋಡಿಕೊಂಡರು. ಅನಂತರ, ಮೈಥಿಲಿಯೇ, "ಇವರು ಶಿಬಿ, ಅವತ್ತು ನೀವು ಆಸ್ಪತ್ರೆಯಲ್ಲಿದ್ದಾಗ ಬಂದಿದ್ದರು" ಎಂದಳು. ಶಿಬಿಯು ಊಟಕ್ಕೆ ಕೂತವನು "ನಮಸ್ತೆ" ಅಂದ. ಆದರೆ ಅವನ ಮುಖದಲ್ಲಿ ಯಾವುದೋ ಒಂದು ತಪ್ಪು ಮಾಡಿದ ಭಾವವಿತ್ತು. ಚಾರು ನಮಸ್ತೆ ಅಂದವನೇ ತನ್ನ ರೂಮಿಗೆ ಹೋಗಿ, ಬ್ಯಾಗನ್ನು ಇಟ್ಟು – ಎರಡೇ ಎರಡು ನಿಮಿಷ ಸರಿಯಾಗಿ ಹಾಸುಗೆಯ ಮೇಲೊರಗಿದ. ತಾನು ಮನೆಯೊಳಗಡೆ ಬರುವುದಕ್ಕಿಂತ ಮುಂಚಿತವಾಗಿ ಅವರಿಬ್ಬರ ನಗು ಸೂರು ಹಾರಿಹೋಗುವಂತಿತ್ತು ಮತ್ತು ತಾನು ಬಂದಾಗ ಮೈಥಿಲಿಯು ಮುಖ ಕಪ್ಪು ಮಾಡಿಕೊಂಡು ಬಾಗಿಲು ತೆರೆದಳು. ಈಗ ಮಾತು ಬಂದ್ ಘೋಷಿಸಿಕೊಂಡಿದೆ, ಇಬ್ಬರೂ ಮಾತಾಡುತ್ತಿಲ್ಲ, ಮೌನವೊಂದು ಬಂದು ಅವರ ನಡುವೆ ಹಾಜರಾದಂತೆ ಭಾಸವಾಯಿತು. ಹೊರಗಡೆ ಅವರಿಬ್ಬರು ಮೌನದಲ್ಲಿರುವಾಗ ತಾನು ಕೋಣೆಯಲ್ಲಿ ಒರಗಿಕೊಳ್ಳುವುದು ಸರಿಯಲ್ಲ ಎಂದನ್ನಿಸಿ ಚಾರು ಮನೆಯ ಹಾಲ್‌ನ ಕಡೆಗೆ ಬಂದ. "ಇನ್ನೊಂದು ಸ್ವಲ್ಪ ಅನ್ನ ಹಾಕಲಾ? ನಿಮಗಿಷ್ಟವಾದ ನುಗ್ಗೆ ಸಾಂಬಾರ್ ಮಾಡಿದ್ದೀನೆ" ಅಂದಳು ಮೈಥಿಲಿ ನಗುತ್ತಲೇ, ಊಟ ಮಾಡುತ್ತಿರುವ ಶಿಬಿಗೆ. ಶಿಬಿಯು, "ಬೇಡ ಸಾಕು ಒಳ್ಳೆಯ ಸಾಂಬಾರು ಮಾಡಿದ್ದೀರಿ, ಇಷ್ಟು ಒಳ್ಳೆಯ ಊಟ ಮಾಡದೆ ಎಷ್ಟು ವರ್ಷವಾಯಿತೋ ಏನೊ?" ಎನ್ನುತ್ತಲೇ ತಟ್ಟೆಯಲ್ಲಿಯೇ ಕೈತೊಳೆದ. ಮೈಥಿಲಿಯು ಅವನು ಕೈತೊಳೆದ ತಟ್ಟೆಯನ್ನು ತೆಗೆದುಕೊಂಡು ಅಡುಗೆಯ ಮನೆಯ ಕಡೆಗೆ ಹೆಜ್ಜೆ ಹಾಕಿದಳು. ಹೊರಗಡೆ ಬಂದು ತನ್ನ ಚೆಯರ್‌ನಲ್ಲಿ ಕೂತ ಚಾರುವನ್ನು ಇಬ್ಬರೂ ಲೆಕ್ಕಕ್ಕೇ ತೆಗೆದುಕೊಂಡಂತಿಲ್ಲ. ಶಿಬಿಯ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿಕೊಂಡ

ಮೈಥಿಲಿಗೆ ಶಿಬಿಯು, "ಥ್ಯಾಂಕ್ಸ್" ಎಂದು ಹೇಳುತ್ತಾ ಕೂತ. ಮೈಥಿಲಿಯು ಬಂದು – ಶಿಬಿಯ ಎದುರುಗಡೆ ನಿಂತು "ಸುಮ್ಮನೇ ಹೊಗಳಬೇಡಿ" ಎಂದಳು. ಅವಳ ಮಾತು ತೋರಿಕೆಯದು ಮತ್ತು ಹೊಗಳಿಕೆಯು ಮೈಥಿಲಿಯ ಕಿವಿಗೆ ತುಂಬಾ ಇಂಪಾಗಿದೆ ಎಂಬುದು ಚಾರುಗೆ ಮತ್ತು ಶಿಬಿಗೆ ಗೊತ್ತಾಯಿತು. ಅವರಿಬ್ಬರೂ ನಾಟಕದ ಪಾತ್ರಗಳಂತೆ ವರ್ತಿಸುತ್ತಿದ್ದಾರಲ್ಲ ಎಂದನ್ನಿಸಿತು ಚಾರುಗೆ ಮತ್ತು ತಾನು ಮಧ್ಯೆ ಕೂತಿರುವುದುರಿಂದ ಇಬ್ಬರೂ ತುಂಬಾ ಡಿಸ್ಟರ್ಬ್ ಆದವರಂತೆ ವರ್ತಿಸುತ್ತಿದ್ದಾರಲ್ಲ ಎಂದು ಯೋಚಿಸಿದವನೆ ಮತ್ತೆ ಒಳಗಡೆ ಹೋಗಿ ಮಲಗಿಕೊಂಡ. ಅದು ಅನಾಗರಿಕವಾದ ವರ್ತನೆಯಂತೆ ಮೈಥಿಲಿಗೆ ಅನಿಸಿದರೆ, ಈ ಮನುಷ್ಯನ ಜೊತೆಯಲ್ಲಿ ಇವಳು ಹೇಗೆ ಏಗುತ್ತಾಳೆ ಎಂದು ಶಿಬಿಗೆ ಅನಿಸಿತು ಮತ್ತು ಶಿಬಿಯು ತಾನಿನ್ನು ಇರುವುದು ಸರಿಯಲ್ಲವೆಂದನ್ನಿಸಿ, "ಬರ್ತಿನಿ ಮೈಥಿಲಿಯವರೇ, ನಾಳೆ ಮರೆಯಬೇಡಿ, ಚಾರು ಮಲಗಿಬಿಟ್ಟರೇನೊ?" ಎಂದವನೇ ಹೊರಟ. ಅವನನ್ನು ಬೀಳ್ಕೊಡಲು ಮೈಥಿಲಿಯು ಬಾಗಿಲಿನ ತನಕ ಹೋದಳು. ಬಾಗಿಲಿನ ತನಕ ಹೋದವಳು ಮನೆಯ ಹೊರಗೆ ನಿಂತು ಶಿಬಿಯ ಜೊತೆಗೆ ಮಾತಾಡತೊಡಗಿದಳು. ಇತ್ತ ಹಾಸುಗೆಯ ಮೇಲೆ ಮಲಗಿದ ಚಾರುಗೆ ಅಲ್ಲಿಯೇ ನಿದ್ದೆ. ಆ ರಾತ್ರಿಯೂ ಅವನು ಉಪವಾಸ. ಅವನಿಗೆ ಆವರಿಸಿಕೊಂಡ ನಿದ್ದೆಯು ಕೂಡಾ ಚರವಾದುದು, ಸ್ಥಿರವಾದ ನಿದ್ದೆಯಲ್ಲ. ಶಿಬಿ ಮತ್ತು ಮೈಥಿಲಿಯರ ಮಾತುಕತೆಯು ಮುಗಿದು ಮೈಥಿಲಿಯು ಮನೆಯೊಳಗಡೆಗೆ ಬರುವಾಗ ಹತ್ತು ಗಂಟೆ ನಲವತ್ತು ನಿಮಿಷ. ಸುದೀರ್ಘವಾಗಿ ಮನತುಂಬಿ, ಮೈ ತುಂಬಿ ಮಾತಾಡಿದ ಮೈಥಿಲಿಯ ಮುಖದಲ್ಲಿ ಸಂತೋಷದ ಕಳೆ, ಮನೆಯೊಳಗಡೆ ಬಂದು ನೋಡುತ್ತಾಳೆ, ಪ್ರೇತ ಕಳೆಯೊಂದಿಗೆ ಚಾರು ನಿದ್ದೆ ಹೋಗಿದ್ದಾನೆ. ಆಗಲೇ ಅವಳು ದಿನಚರಿಯಲ್ಲಿ ಬರೆಯಲು ಶುರುಮಾಡಿದ್ದು; ಈವೊತ್ತು ರಾತ್ರಿ ಊಟಕ್ಕೆ ಶಿಬಿ ಬಂದಿದ್ದರು, ಮಾಡಿದ ಅಡುಗೆಯನ್ನು ಚಪ್ಪರಿಸಿಕೊಂಡು ಊಟ ಮಾಡಿದರು. ಅಡುಗೆ ಮಾಡಿ ಬಡಿಸಿದ ನನಗೆ ಸಂತೃಪ್ತಿಯಾಯಿತು. ಮಧ್ಯೆ ಚಾರು ಬಾರದೇ ಹೋಗಿದಿದ್ದರೆ ಎಷ್ಟೋ ಅನುಕೂಲವಾಗಿರುತ್ತಿತ್ತು. ಶಿಬಿಯೆಂದರೆ ಯಾಕೋ ನನಗೆ ಖುಶಿಯೆನಿಸುತ್ತಿದೆ. ಅವರಲ್ಲಿ ಜೀವಂತಿಕೆಯಿಂದೆ; ಜೀವನದ ಲವಲವಿಕೆಯಿದೆ. ಶಿಬಿಯೆದುರು ಚಾರುವನ್ನು ನಿಲ್ಲಿಸಿದರೆ – ಚಾರು ನೆಲವೊರೆಸುವ ಬಟ್ಟೆಯಂಥ ಮನುಷ್ಯ, ಸಣ್ಣ ನಗುವಿಲ್ಲ, ಸದಾ ನನ್ನ ಮೇಲೆ ಅನುಮಾನ. ಅದೂ ದೇವವ್ರತನ ಘಟನೆಯಾದ ಮೇಲಂತೂ ನನ್ನನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಾರೆ, ತಾನು ಸಾಯುತ್ತೇನೆ, ಇನ್ನು ಬದುಕಿ ಉಳಿಯುವುದಿಲ್ಲವೆಂದು ಹೆದರಿಸುತ್ತಾರೆ. ಆದರೆ, ಚಾರು ಸತ್ತರೆ ನನ್ನ ಗಂಟು ಹೋಗುವುದಿಲ್ಲ, ಒಂದು ಕಾಲಕ್ಕೆ ಅವನನ್ನು ನಂಬಿದ್ದೆ, ಪ್ರೀತಿಸಿದ್ದೆ, ಅವನಿಗಾಗಿ ರಾತ್ರಿಯಿಡೀ ಹಂಬಲಿಸಿದ್ದೆ, ಅದೂ ಮದುವೆಯಾಗುವ ಚಾರು ಬುದ್ಧಿವಂತ, ಒಳ್ಳೆಯ ಮನುಷ್ಯನೆಂದೇ ತಿಳಿದಿದ್ದೆ. ಆದರೆ, ಚಾರುವಿನ

ನಿಜವಾದ ರೂಪ ಈಗ ಅರ್ಥವಾಗುತ್ತಿದೆ. ತೆವಲು ತೀರಿಸಿಕೊಳ್ಳಲು ಬರುತ್ತಾನೆ, ಅವನು ಹತ್ತಿರ ಬಂದರೆ ಸಾಕು – ನನ್ನ ಮೈ ಮೇಲೆ ಮುಳ್ಳೆದ್ದ ಹಾಗೆ ಆಗುತ್ತದೆ. ಚಾರು ಹತ್ತಿರ ಬಂದು ತಬ್ಬಿಕೊಂಡರೆ ಒಮ್ಮೆ ತಪ್ಪಿಸಿಕೊಂಡರೆ ಸಾಕು ಎಂದೆನ್ನಿಸುತ್ತದೆ. ಅವನು ಮುತ್ತಿಕ್ಕಲು ಬಂದರೆ ಹಳಸಲು ವಾಸನೆ, ಚಾರುವಿನ ಬೆವರಿನ ಕಮಟು ವಾಸನೆಯಂತೂ ಸಹಿಸಲು ಅಸಾಧ್ಯ.

ಚಾರು ಮೊದ ಮೊದಲು ಹೀಗಿರಲಿಲ್ಲ ಅಥವಾ ಹೀಗಿರಲಿಲ್ಲವೆಂದು ನನಗೆ ಅನಿಸಿತೋ ಗೊತ್ತಿಲ್ಲ, ಚಾರುವಿಗೆ ಧೈರ್ಯವಿಲ್ಲ, ಪಲಾಯನವಾದಿ. ಅಷ್ಟು ಅಲ್ಲ, ಅವನು ಹೆಂಡತಿಯೆಂದರೆ ಅಧಿಕಾರ ಚಲಾಯಿಸಲಿರುವ ಒಬ್ಬಳು ಎಂದು ಭಾವಿಸಿಕೊಂಡಿದ್ದಾನೆ. ಅವನು ಹೇಡಿ; ಪಲಾಯನವಾದಿ ಮತ್ತು ಗಡುಸಿಲ್ಲದ ಮನುಷ್ಯನೆಂದು ನನಗೆ ಅರ್ಥವಾದ ಮೇಲೆ ಇವನೊಂದಿಗೆ ದೂರ ಇರುವುದೇ ಲೇಸು ಎಂದೆನ್ನಿಸಿದೆ. ದೇವವ್ರತನ ಜೊತೆಗೆ ಮಾತಾಡುವಾಗಲೆಲ್ಲಾ, ಚಾರುವಿನ ಬಗೆಗೆ ಅಸಹ್ಯ ಹುಟ್ಟುತ್ತಿತ್ತು. ಬದುಕಿನ ಸುಖಗಳನ್ನು ವಂಚಿಸಿಕೊಂಡು, ತನಗೆ ತಾನೇ ಖೆಡ್ಡಾ ತೋಡುವ ಚಾರುಗಿಂತ ದೇವವ್ರತನು ಹೇಳಿಕೊಟ್ಟ 'ಮಜಾ ಮಾಡಬೇಕು' ಎಂಬ ಪದವೇ ಇಷ್ಟವಾಯಿತು, ಸತ್ತರೆ ಸಾಯಲಿ ಎಂದುಕೊಂಡೇ ದೇವವ್ರತನೊಂದಿಗೆ ಸ್ನೇಹ ಬೆಳೆಸಿದೆ. ಆ ಸಮಯದಲ್ಲಿ ಅವನೇ ನನಗೆ ತಕ್ಕ ಆದರ್ಶ ಪುರುಷನಾಗಿದ್ದ. ಮೊದಲ ಬಾರಿಗೆ ಅವನ ಕೈಯ ಸ್ಪರ್ಶವಾದಾಗ ನಾನು ಸಂಪೂರ್ಣ ಕಂಪಿಸಿದ್ದೆ. ಎಲ್ಲಿ ನನ್ನನ್ನು ಸಂಪೂರ್ಣ ಸೆಳೆದುಬಿಡುತ್ತಾನೋ ಎಂದೆನ್ನಿಸಿತ್ತು. ಚಾರುವೆಂದರೆ ನರಸತ್ತ, ಜೀವಂತಿಕೆಯಲ್ಲದ ಅಳುಮುಖದ ಮನುಷ್ಯನೆಂದು ನನಗಾಗ ಅನಿಸಿತ್ತು. ಚಾರುವನ್ನು ಉದ್ದೇಶಪೂರ್ವಕ ತಿರಸ್ಕರಿಸಿದೆ. ಅವನನ್ನು ಮನುಷ್ಯನೇ ಅಲ್ಲವೆಂಬಂತೆ ನೋಡಿದೆ. ಅವನು ನೆಲದ ಮೇಲೆ ತಟ್ಟೆಯಿಟ್ಟು ಊಟ ಮಾಡುವಾಗ ನಾನು ಚಪ್ಪಲಿ ಹಾಕಿಕೊಂಡು ಓಡಾಡುತ್ತಿದ್ದೆ. ಅದರಿಂದ ನನಗೆ ಒಂಥರಾ ಖುಶಿ ಸಿಗುತ್ತಿತ್ತು. ಮೊನ್ನೆ ನಿಮ್ಮ ಮನೆಯವರು,ನೀವು ಭಿಕ್ಷುಕರು ಎಂಜಲು ತಟ್ಟೆಗಾಗಿ ಕಾಯುವವರು ಅಂದೆ. ಅಷ್ಟೊಂದು ನಿಕೃಷ್ಟವಾದ ಭಾವನೆಯು ಬೆಳೆಯಲು ಅವನೇ ಕಾರಣ. ಅವನ ಅನಾರೋಗ್ಯವೆಂಬುದು ಕೂಡಾ ಒಂದು ನಾಟಕ. ಇದಕ್ಕೆಲ್ಲಾ ನಾನು ಮಣಿಯಬೇಕೆಂದು ಅನಿಸುವುದಿಲ್ಲ. ಅಧಿಕಾರ ನನ್ನದಾಗಿರಬೇಕೇ ಹೊರತು ಚಾರುವಿನದಲ್ಲ. ಇದರಲ್ಲಿ ಜೀವ ಹೋದರೂ ಸರಿ, ಶಿಬಿಯ ಪರಿಚಯವಾದ ಮೇಲಂತೂ ನನಗೆ ಚಾರುವಿನ ಬಗ್ಗೆ ಯಾವುದೇ ಗೌರವವಿಲ್ಲ, ನಾಯಿ ಸಾಕಿ ಅದನ್ನು ಬೆಳೆಸಿದರೆ ಒಂದಿಷ್ಟು ಕೃತಜ್ಞತೆಯಿರಬಹುದು. ಚಾರುಗೆ ಆ ರೀತಿಯ ಕೃತಜ್ಞತೆಯಿಲ್ಲ. ಶಿಬಿಯದು ಬಹುಮುಖ ಆಸಕ್ತಿ. ಈ ದಿನ ಶಿಬಿಯು ಡೆಲ್ಲಿಯಿಂದ ಹತ್ತಾರು ಪುಸ್ತಕವನ್ನು ತರಿಸಿದರು, ಅದನ್ನು ತೋರಿಸಿದರು, ಯಾಕೋ ತುಂಬಾ ಖುಶಿಯಾಯಿತು. ಶಿಬಿ ನಿಜವಾಗಿಯೂ ಬುದ್ಧಿವಂತ, ತುಂಬಾ ಸ್ಮಾರ್ಟ್ ಆಗಿದ್ದಾರೆ. ಶಿಬಿಯೊಂದಿಗೆ ಚಾರು

ವರ್ತಿಸಿದ ಕ್ರಮ ಅನಾಗರಿಕವಾದುದು. ವಾಸ್ತವವಾಗಿ ಶಿಬಿಯು ಪೆಚ್ಚಾಗಿದ್ದರು. ನನಗೆ ಶಿಬಿಯ ಬಗ್ಗೆ ಕರುಣೆಯೆನಿಸಿತು. ಚಾರುವಿನ ಅಸಂಸ್ಕೃತವಾದ ನಡವಳಿಕೆಯು ಹೇಯವಾದುದು. ಇನ್ನು ನಾನೇನೂ ಚಾರುವಿನ ಗೆರೆಯೊಳಗಡೆ ಬದುಕುವುದಿಲ್ಲ. ಆ ಗೆರೆಯನ್ನು ದಾಟಿಯೇ ದಾಟುತ್ತೇನೆ. ನಾಳೆ ರಾತ್ರಿ ಡಿಪಾರ್ಟ್‌ಮೆಂಟಿನ ಕೆಲಸಕ್ಕಾಗಿ ಮಂಗಳೂರಿಗೆ ಬನ್ನಿ ಎಂದಿದ್ದಾರೆ. ಕರೆಯುವಾಗ ತುಂಬಾ ಗೋಗರೆತದ ಧ್ವನಿಯಿತ್ತು. ಶಿಬಿಯ ಕರೆಯನ್ನು ಒಪ್ಪಿಕೊಂಡಿದ್ದೇನೆ. ಅವರ ಜೊತೆ ಹೋಗಬೇಕು, ಇಷ್ಟು ಬರೆದಿಟ್ಟ ಮೈಥಿಲಿಯು ಹೊರಗಡೆ ಹಾಲಿನಲ್ಲಿರುವ ಟಿ.ವಿ.ಯ ಮೇಲೆ ಡೈರಿಯನ್ನಿಟ್ಟು, ಅಲ್ಲಿಯೇ ಇದ್ದ ಮಂಚದ ಮೇಲೆ ಒರಗಿದಳು. ಕೆಲವೇ ಕ್ಷಣಲ್ಲಿಯೇ ಸುಖವಾದ ನಿದ್ದೆ. ಆದರೆ, ಅವಳು ಮಲಗಿ ಕೊಂಚ ಹೊತ್ತಿನಲ್ಲಿಯೇ ಚಾರು ಎದ್ದು ಕುಳಿತ. ನಿದ್ದೆ ಮತ್ತೆ ಓಡಿ ಹೋಯಿತು. ಅಡುಗೆ ಮನೆಯೊಳಗೆ ಹೋಗಿ ಒಂದೆರಡು ಬ್ರೆಡ್ ಪೀಸ್ ತಿಂದು ಮಾತ್ರೆ ನುಂಗಿದ. ತನ್ನಿಂದ ದೂರವಾಗುತ್ತಿರುವ ಗುಂಡು ಮತ್ತು ಸಿಗರೇಟು ಮಾತಾಡುವ ಹಾಗಿದ್ದರೆ – ಏನು ಮಾತಾಡುತ್ತಿದ್ದವು? ಚಾರು ಹತ್ತಿರ ಸುಳಿಯದ ನಿದ್ದೆಯನ್ನು ಸತಾಯಿಸಲೆಂದೇ ಕೈಯಲ್ಲಿ ಪುಸ್ತಕ ಹಿಡಿದುಕೊಂಡ:

"ಅಲ್ಲಿ ಮರದಡಿಯಲ್ಲಿ ನಲ್ಗಾವ್ಯವೊಂದಿರಲು
ರೊಟ್ಟಿಯೊಂದಿನಿತು, ಕುಡಿಕೆಯಲಿ ಮಧುವು
ಮೇಣ್ ಮುಗುದೆ ನೀನೆನ್ನ ಬಳಿ ಕುಳಿತು ಪಾಡಲಹ
ಕಾದಾದಡೇನದುವೆ ಸಗ್ಗ ಸುಖವೆನಗೆ"

ಉಮರನ ಒಸಗೆ ಸಾಲುಗಳನ್ನು ಓದುವಾಗ ಯಾವುದು ಉಮರ್‌ಗೆ ಇತ್ತೋ ಅವು ಯಾವುದೂ ನನ್ನ ಬಳಿಯಲಿಲ್ಲ ಎಂದು ಭಾವಿಸಿಕೊಂಡ. ಆಗ ರಾತ್ರಿ ಗಂಟೆ ಹನ್ನೆರಡು. ದಾವೂದ್ ತನ್ನ ಸ್ನೇಹಿತರ ಜೊತೆಯಲ್ಲಿ ಇಬ್ರಾಹಿಂನ ಜೀಪಿನಲ್ಲಿ ಹತ್ತಿದ ಹೊತ್ತು: ದಾವೂದ್ ಹೇಳಿದ; "ಹಿಂಸೆಗೆ ಹಿಂಸೆಯೇ ಉತ್ತರ, ಇಲ್ಲದಿದ್ದರೆ ನಾವು ಬಚಾವು ಆಗುವುದಿಲ್ಲ." ನಗರದ ಯಾವುದೋ ಮೂಲೆಯಲ್ಲಿ ಮತ್ತೊಂದು ಹೆಣ ಬೀಳಲಿದೆ!

ಯಾರದೋ ಒಂದೆರಡು ಹೆಣಗಳು ನಗರದ ಬೀದಿ ನಾಯಿಗಳ ಜೊತೆಗೆ ಮಲಗಲಿವೆ ಎಂದಷ್ಟೇ ಭಾವಿಸಿಕೊಂಡಿದ್ದರು. ಅದಕ್ಕಿಂತ ಹೆಚ್ಚೇನು ಅಲ್ಲ. ಆದರೆ ರಕ್ತ-ಮಾಂಸಗಳ ನೈವೇದ್ಯವು ಇವುಗಳಿಗೆ ಸಾಕಾಗಲಿಲ್ಲ. ನಗರದ ದಶ ದಿಕ್ಕುಗಳು ಬದಲಾಗಬೇಕೆಂದು ಹಠಯೋಗಿಯಂತೆ ಹೊರಟವನು ಬೆಲ್ಟ್ ನಾಗೇಶ. ಅದಕ್ಕಾಗಿ ಯಾವುದೇ ರೀತಿಯ ಪಾರಣೆಯನ್ನು ನೀಡಲು ಸಿದ್ಧನಿದ್ದ. ನಗರದ ಪ್ರತಿಯೊಂದು ಬೀದಿಯ ಉದ್ದ-ಅಗಲಗಳನ್ನು ಅಲೆಯಲು ಸಿದ್ಧವಾದ ಹುಡುಗರ ಮಿದುಳಲ್ಲಿ ಬರಿಯ ಶಬ್ದಗಳು ತುಂಬಿಕೊಂಡಿವೆ. ಇದು ತಯಾರು ಮಾಡಲು ನಾಗೇಶ ಬಹಳ ದೊಡ್ಡ ಪ್ರಯತ್ನವನ್ನು ಮಾಡಿದ್ದಾನೆ. ಅಸಂಖ್ಯ ಹುಡುಗರು ಬೆಳಗಿನ ಹೊತ್ತು, ಇಲ್ಲವೇ

ಸಂಜೆಯ ಹೊತ್ತು ಎಲ್ಲಾದರೂ ಒಂದು ಕಡೆ ಸೇರಿಕೊಳ್ಳುತ್ತಾರೆ. ಬಲಿಷ್ಠ ನಾಡನ್ನು ಕಟ್ಟಲು ಬಲಿಷ್ಠ ಹುಡುಗರು ಬಯಲಿನ ಗರಡಿಯಲ್ಲಿ ತಯಾರಾಗಬೇಕು. ಅವರ ನರನಾಡಿಗಳಲ್ಲಿ ಹರಿಯುವುದು ತಾಯಿನಾಡಿನ ರಕ್ತವೆಂಬುದನ್ನು ಮತ್ತೆ ಮತ್ತೆ ಹೇಳಿಕೊಟ್ಟಿದ್ದಾನೆ. ಅವನ ಚಟುವಟಿಕೆಯು ಹಿನ್ನೆಡೆಯನ್ನು ಸಾಧಿಸಿದ್ದು ಜನ್ನು ಮತ್ತು ಅಪ್ಪು ಜುಬೇದಾ ಎಂಬ ಹುಡುಗಿಯ ರೇಪ್ ಪ್ರಕರಣದಲ್ಲಿ. ಅದನ್ನು ಪ್ರಚಾರ ಮಾಡಿರುವುದು ಶಶಿ ಮತ್ತು ಕಿರಣ್. ಅವರಿಬ್ಬರು ಸಮಗ್ರ ತನಿಖಾ ವರದಿಯಲ್ಲಿ ನಾಗೇಶ ಮತ್ತು ಜೆ.ಕೆ.ಯ ಹೆಸರು – ಸಣ್ಣ ಅನುಮಾನದೊಂದಿಗೆ ಪ್ರಕಟವಾಗಿತ್ತು. ಕಿರಣನ ಪತ್ರಿಕೆಯ ವರದಿಯು ಪ್ರಕಟವಾದೊಡನೆ ನಗರದಲ್ಲಿ ಆ ಪತ್ರಿಕೆ ಡಿಮಾಂಡ್ ಹೆಚ್ಚಾದುದು ನಿಜ. ವಿವಿಧ ರೀತಿಯ ಫೋಟೋಗಳು ಅದರಲ್ಲಿದ್ದವು. ಅದರಲ್ಲಿ ಜುಬೇದಾಳ ಹೆಣದ ಫೋಟೋ. ಅದು ವ್ಯಕ್ತಪಡಿಸಿದ ಅನುಮಾನಗಳೇ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ದಾಟುತ್ತಾ ಬಂತು. ವಾಸ್ತವವಾಗಿ ತನ್ನ ಪತ್ರಿಕಾ ಗೋಷ್ಠಿಯನ್ನು ಹೆಚ್ಚು ಪ್ರಚುರಪಡಿಸಿದ ಪತ್ರಿಕೆಗಳನ್ನು ಓದುತ್ತಾ ಕೂತವನಿಗೆ ಅವನ ಪಡೆಯ ಹುಡುಗರೇ ತಂದು ಪತ್ರಿಕೆಯನ್ನು ತೋರಿಸಿದರು. ಅದೇ ಪತ್ರಿಕೆಯ ಪ್ರತಿಯನ್ನು ತೆಗೆದುಕೊಂಡು ಜೆ.ಕೆ.ಯತ್ರ ಮಾತಾಡಿದ ನಾಗೇಶ ಕೂಡಲೇ ಹೊರಟು ಬಂದಿದ್ದ . ಮತ್ತೆ , ನಾಗೇಶನ ಕಣ್ಣು ಕಿರಣ್‌ನ ಪತ್ರಿಕೆಯ ಮೇಲಿತ್ತು. ತನ್ನ ಹತ್ತಿರದ ಹುಡುಗರನ್ನು ತನ್ನ ಖಾಸಗಿ ಬೈಠಕ್‌ಗೆ ಕರೆಸಿ ಕೂರಿಸಿಕೊಂಡ ಮತ್ತು ಅವರ ಹತ್ತಿರ ಹೇಳಿದ; ನಾಳೆ ರಾತ್ರಿ ಸರಿಯಾಗಿ ಎಂಟು ಗಂಟೆಯ ಮೇಲೆ ಪತ್ರಿಕೆಯ ಎಲ್ಲಾ ಏಜೆಂಟರಿಗೂ ಸರಿಯಾದ ಸೂಚನೆಯನ್ನು ಕೊಡಿ. ಇನ್ನು ಈ ನಗರದಲ್ಲಿ ಅವರ ಪತ್ರಿಕೆಯು ಒಂದೂ ಮಾರಾಟವಾಗಬಾರದು ಮತ್ತು ಹತ್ತು ಗಂಟೆಯ ಒಳಗೆ ಕನಿಷ್ಠವೆಂದರೂ ನೂರು–ನೂರಿಪ್ಪತ್ತು ಜನರು ಪತ್ರಿಕೆಯ ಕಚೇರಿಗೆ ನುಗ್ಗಿ – ಪೂರ್ತಿ ಪ್ರೆಸ್ಸನ್ನು ಧ್ವಂಸ ಮಾಡಿ. ಒಂದೇ ಒಂದು ಚೂರು ಕೂಡಾ ಕಚೇರಿಯ ಒಳಗಡೆ ಇರಬಾರದು ಮತ್ತು ಶಶಿ ಮತ್ತು ಕಿರಣ್ ಹಲ್ಲುಬಿಟ್ಟರು ಎಂದಾದರೆ ಪುಡಿಮಾಡಿ ಬನ್ನಿ, ಎಲ್ಲಿಯೂ ನನ್ನ ಹೆಸರು ಬರಬಾರದು ಮತ್ತು ಪ್ರೆಸ್ ಪುಡಿ ಮಾಡುವಾಗ ಯಾರ ಫೋಟೋವು ಮರುದಿನದ ಪತ್ರಿಕೆಯಲ್ಲಿ ಬರಬಾರದು. ಹಾಗೂ ಯಾವುದೇ ಕಾರಣದಿಂದ ಒಬ್ಬರೇ ಒಬ್ಬರು ತಮ್ಮ ಗುರುತು ಬೀಳದ ಹಾಗೆ ನೋಡಿಕೊಳ್ಳಿ. ಹೆಚ್ಚು ಜನರಿದ್ದರೆ – ಪೊಲೀಸ್ ಕೇಸ್ ನಿಲ್ಲೋಲ್ಲ. ಅದು ಕೋರ್ಟಿನಲ್ಲಿಯೂ ಉಳಿಯೋಲ್ಲ, "ಗೊತ್ತಾಯಿತು ತಾನೆ?" ನಾಗೇಶ ಹೊರಡಿಸಿದ ಆಜ್ಞೆಯಂತೆ ಹುಡುಗರು ತಯಾರಾಗಿದ್ದರು ಮತ್ತು ನಾಗೇಶ ಹೇಳಿದಂತೆ ಆ ಪತ್ರಿಕೆಯ ಎಲ್ಲಾ ಏಜೆಂಟರನ್ನು; ಮಾರುವವರನ್ನು ಸರಿಯಾಗಿ ಬೆದರಿಸಿಯೇ ನಗರದ ಎಂಟು ದಿಕ್ಕುಗಳಿಂದ ತಲಾ ನಾಲ್ಕೈದು ಜನರಂತೆ ಮಾರುತಿ ವ್ಯಾನಿನಲ್ಲಿ ಬಂದರು – ಪತ್ರಿಕೆಯ ಕಚೇರಿಯ ಕಡೆಗೆ. ಹೆಚ್ಚು ಹತ್ತು–ಹದಿನೈದು ಮಾರುತಿ ವ್ಯಾನ್; ಹತ್ತು–ಹದಿನೈದು ಬೈಕ್‌ಗಳು ಕಿರಣ್‌ನ

ಪತ್ರಿಕೆಯ ಕಚೇರಿಗಿಂತ ಕೊಂಚ ದೂರದಲ್ಲಿ ಬಂದುನಿಂತವು. ಪತ್ರಿಕೆಯ ರಂಗಕ್ಕೆ ಹೊಚ್ಚ ಹೊಸಬರಾದ ಶಶಿ ಮತ್ತು ಕಿರಣ್ – ಈ ದಾಳಿಗೆ ಹೆದರುತ್ತಾರೆ ಮತ್ತೆ ತನ್ನ ವಿರುದ್ಧ ಒಂದೇ ಒಂದು ಮಾತು ಕೂಡಾ ಪತ್ರಿಕೆಯಲ್ಲಿ ಬರುವುದಿಲ್ಲವೆಂದೇ ಭಾವಿಸಿಕೊಂಡಿದ್ದ ನಾಗೇಶ. ನಾಗೇಶನ ಪಡೆ ಮೊದಲು ಏಜೆಂಟರಿಗೆ ಬೆದರಿಕೆ ಹಾಕಿ ಹೊರಟ ತಕ್ಷಣವೇ ಕಿರಣ್‌ಗೆ ಸುದ್ದಿ ತಲುಪಿತ್ತು. ಇನ್ನು ಕೆಲವೇ ಕ್ಷಣಗಳಲ್ಲಿ ಪತ್ರಿಕಾ ಕಚೇರಿಗೆ ನುಗ್ಗುವ ಮೊದಲೇ ಎ.ಸಿ.ಪಿ. ಎಂ.ಕೆ. ಅಬ್ದುಲ್ಲ ಅವರಿಗೆ ಫೋನು ಮಾಡಿ ವಿಷಯ ತಿಳಿಸಿ, ರಕ್ಷಣೆ ಕೋರಿದರು. ಎಂ.ಕೆ. ಅಬ್ದುಲ್ಲನಿಗೆ ಸಿಕ್ಕಿದ ಸುವರ್ಣಾವಕಾಶವನ್ನು ನಾಗೇಶನೇ ಸ್ವತಃ ಕಲ್ಪಿಸಿಕೊಟ್ಟ. ಪೋಲಿಸ್ ಜೀಪ್ ಮತ್ತು ಪೋಲಿಸ್ ಪಡೆಯು ಅಲ್ಲಿಗೆ ಬರಲು ಕನಿಷ್ಠವೆಂದರೂ ಇಪ್ಪತ್ತು ನಿಮಿಷ ಬೇಕು – ಅದೇ ವೇಳೆಗೆ ನಾಗೇಶನ ಹುಡುಗರು ಕೈಯಲ್ಲಿ ಒಂದೊಂದು ಚಾಕು; ಬೈಕ್‌ನ ಚೈನ್ ಹಿಡಿದು ಪತ್ರಿಕೆಯ ಕಚೇರಿಗೆ ನುಗ್ಗಿಯಾಗಿತ್ತು. ಕಿರಣ್ ಮತ್ತು ಶಶಿ ಇಬ್ಬರೇ ಕಚೇರಿಯಲ್ಲಿದ್ದರು. ಉಳಿದ್ಯಾವ ಸಿಬ್ಬಂದಿಗಳು ಕಚೇರಿಯಲ್ಲಿ ಇಲ್ಲದ ಹಾಗೆ ನೋಡಿಕೊಂಡದ್ದೇ ಅವನ ಜಾಣ್ಮೆಗೆ ಸಾಕ್ಷಿಯಾಗಿತ್ತು. ಆದರೆ ಸಮರೋತ್ಸಾಹದಲ್ಲಿದ್ದ ಹುಡುಗರು ಅದನ್ನು ಗಮನಿಸಲಿಲ್ಲ. ಆದುದರಿಂದಲೇ ಒಳಗೆ ನುಗ್ಗಿದವರೇ "ಇಲ್ಲಿ ಕಿರಣ್ ಮತ್ತು ಶಶಿಯೆಂದರೆ ಯಾರು?" ಎಂದು ಗಡದ್ದಾಗಿ ಕೇಳಿದರು. ಕಿರಣ್ ಕಿಲಾಡಿ, ತಕ್ಷಣ ಅಂದುಬಿಟ್ಟ, "ಯಾರು ಸಂಪಾದಕರಾ? ಅವರು ಈಗ ಜಮಾತ್ ಇಸ್ಲಾಮಿಯ ಪತ್ರಿಕಾ ಗೋಷ್ಠಿಗೆ ಹೋಗಿದ್ದಾರೆ, ಅಲ್ಲಿ ಸಿಗಬಹುದು. ಶಶಿ ಊರಿಗೆ ಹೋಗಿದ್ದಾರೆ. ಅವರ ಹೆಂಡತಿಯನ್ನು ಊರಲ್ಲಿ ಬಿಟ್ಟು ಬರೋಕೆ!" ನಾಗೇಶನ ಪಡೆಯ ಹುಡುಗರು ಒದು ಕ್ಷಣ ಕಕ್ಕಾವಿಕ್ಕಿಯಾದರು. ಏನು ಮಾಡುವುದು – ಕಿರಣ್ ಮತ್ತು ಶಶಿ ಇಬ್ಬರೂ ಸಿಕ್ಕಿದ್ದರೆ ಚಚ್ಚಬಹುದಿತ್ತು ಎಂದು ಭಾವಿಸಿಕೊಂಡಿದ್ದರು. ಆ ಗುಂಪಿನಲ್ಲಿದ್ದ ಒಬ್ಬ ಕೇಳಿದ, ನೀವ್ಯಾರು? ಶಶಿಯೆಂದ – "ನಾವು ಡಿ.ಟಿ.ಪಿ. ಆಪರೇಟರುಗಳು ಅಷ್ಟೆ, ದಿನಗೂಲಿಯ ಮೇಲಿದ್ದೇವೆ, ಅಂದಹಾಗೆ ನೀವ್ಯಾರು ಸಾರ್? ಯಾಕೆ ಬಂದ್ರಿ? ಕಿರಣ್ ನಿಮಗೆ ಗೊತ್ತಾ ಸಾರ್? ಗೊತ್ತಿದ್ದರೆ ಒಂಚೂರು ಕಿರಣ್‌ಗೆ ಹೇಳಿ ಸಾರ್ –ನಮ್ಮ ಕೆಲಸ ಖಾಯಂ ಮಾಡಲಿ." ಮತ್ತೊಮ್ಮೆ ಪೆಚ್ಚಾಗುವ ಸರದಿ ನಾಗೇಶನ ಪಡೆಗೆ. ಆದರೆ, ಅತೀ ಸಮರೋತ್ಸಾಹಿಯೊಬ್ಬ, "ಇವರತ್ರ ಏನು ಮಾತು? ಎಲ್ಲಾ ಪುಡಿ ಮಾಡೋಣ" ಅಂದವನೇ ಪ್ರೆಸ್ ಕಿಟಕಿಯ ಗ್ಲಾಸನ್ನು ಒಡೆದ. ಮತ್ತೊಬ್ಬ ಕಂಪ್ಯೂಟರನ್ನು ಎತ್ತಿ ಬೀದಿಗೆ ಬಿಸಾಕಿದ. ಅದೇ ವೇಳೆಗೆ ಬಂದುದು ಎ.ಸಿ.ಪಿ.ಯ ಜೀಪ್ ಮತ್ತು ಹಿಂದುಗಡೆ ಪೋಲಿಸ್ ಪಡೆ. ಎಂ.ಕೆ. ಅಬ್ದುಲ್ಲ ಹಿಂದೆ–ಮುಂದೆ ನೋಡದೆ ಪೋಲಿಸ್ ಪಡೆಗೆ ಅಟ್ಯಾಕ್ ಮಾಡೋಕೆ ಹೇಳಿಬಿಟ್ಟ. ನಾಗೇಶನ ಪಡೆಯ ಅರ್ಧಕ್ಕರ್ಧ ಹುಡುಗರು ಪೋಲಿಸರ ಲಾಠಿಯೇಟಿಗೆ ಪಲಾಯನ ಹೇಳಿದರು, ಕೆಲವರು ಲಾಠಿಯೇಟಿಗೆ ಸಿಕ್ಕಿಹಾಕಿಕೊಂಡರು. ಪುಡಿಯಾಗಿ ಹೋದ ತನ್ನ ಪ್ರೆಸ್‌ನ

ಫೋಟೋವನ್ನು ತೆಗೆಯಲು ಶಶಿಯು ಪ್ರಯತ್ನಿಸಿದ. ನಾಗೇಶನ ಪಡೆಯ ಕೆಲವು ಹುಡುಗರನ್ನು ಪೋಲಿಸ್ ವ್ಯಾನಿಗೆ ತುಂಬಿಸಿದ ಎಂ.ಕೆ. ಅಬ್ದುಲ್ಲ, "ಕಿರಣ್" ಅಂದ. ಕಿರಣ್‌ನ ಕಣ್ಣಿನಲ್ಲಿ ಅಳುಕು ಇರಲಿಲ್ಲ. "ತನ್ನ ಪ್ರಥಮ ಶತ್ರು ಯಾರು ಎಂಬುದನ್ನು ಮೊದಲು ಗುರುತಿಸಿಕೋ, ಅನಂತರ ಹೋರಾಟ ಶುರುಮಾಡು." ಈ ಮಾತನ್ನು ಮತ್ತೊಮ್ಮೆ ನೆನಪಿಸಿಕೊಂಡ. ಶತ್ರು ಯಾರು? ಇದು ನಿಶ್ಚಯವಾಗಿದೆ. ನಾಗೇಶ; ಕಳ್ಳ ನಾಟಾದ ದೊರೆ ಜೆ.ಕೆ. – ಇವರ ದಳಗಳು ಉದುರಲು ಈ ಪ್ರೆಸ್ ಪುಡಿಯಾದ ಕಾರಣವೊಂದೇ ಸಾಕು – ಎಂದು ಕಿರಣ್ ನಿಶ್ಚಯಿಸಿದ. ಶಶಿಯು ಫೋಟೋ ತೆಗೆದವನು ತಿರುಗಿ ನೋಡಿದ – ಪುಡಿಯಾದ ಪ್ರೆಸ್‌ನ ನಡುವೆ ಕಿರಣ್ ನಿಂತಿದ್ದಾನೆ. "ಮತ್ತೊಂದು ಪ್ರೇಮ ಪತ್ರ ಬರೆಯಲು ತಯಾರಾಗಬೇಕು – ನೀನು. ನಿನ್ನ ಪ್ರೇಮದ ಹುಡುಗಿ ದೋಚಿಕೊಂಡು ಹೋದ ಹೃದಯವನ್ನು ಅವಳಿಂದ ಮರಳಿ ಪಡೆದುಕೋ. ನಿನ್ನ ಹೃದಯಾದಾಳದಿಂದ ಮತ್ತೆ ಬೇರೆ ಬೇರೆ ಪ್ರೇಮದ ಪತ್ರಗಳ ಸಾಲು ಉದ್ಭವವಾಗಬೇಕಿದೆ. ಈಗ ಮಲೆನಾಡಿನ ಹುಡುಗಿಗೆ ಪತ್ರ ಬೇಡವೋ ಕಿರಣ– ನಾಗೇಶ; ಜೆ.ಕೆ.ಯಂಥವರಿಗೆ ಪತ್ರಿಕೆಯ ಕಟು ವಾಸನೆ ಹೊಡೆಯುವ ಪ್ರೇಮ ಪತ್ರಗಳ ಸಾಲು ಸಿದ್ಧವಾಗಬೇಕು" – ಎಂದ ಶಶಿ. ಕಿರಣ್ ನಸುನಕ್ಕು, "ಮಲೆನಾಡಿನ ಹುಡುಗಿಯೂ ಇಲ್ಲ, ಬಯಲು ಸೀಮೆಯ ಹುಡುಗನೂ ಇಲ್ಲ. ನಾಳೆ ಸಂಜೆಯೊಳಗೆ ನಮ್ಮ ವಿಶೇಷ ಸಂಚಿಕೆ ತಯಾರಾಗಬೇಕು ಮತ್ತು ಜೆ.ಕೆ. ಮತ್ತು ನಾಗೇಶರ ರಾಜಕಾರಣದ ಸಮಾಧಿಗೆ ಒಂದು ಗುಲಾಬಿ ಹೂವಿನಂತೆ – ಕೆಂಪು ಕೆಂಪನೆಯ ಪತ್ರಿಕೆಯು ಸಿದ್ಧವಾಗಬೇಕು ಅಷ್ಟೆ" ಅಂದ. ಬೀದಿಯು ರಣರಂಗವಾದುದನ್ನು ಕಣ್ಣಾರೆ ಕಂಡ ಜನರು 'ಅಯ್ಯೋ ಪಾಪ' ಎಂದೆನ್ನುತ್ತಾ ಹೋದರು.

ಅವರು ಅಯ್ಯೋ ಪಾಪ ಅಂದಿದ್ದು ಪತ್ರಿಕಾ ಕಚೇರಿಯು ಪುಡಿಯಾದುದಕ್ಕೆ. ಅದೇ ವೇಳೆ ಎಂ.ಕೆ. ಅಬ್ದುಲ್ಲ ಪೋಲಿಸ್ ಸ್ಟೇಶನ್‌ನಲ್ಲಿ ಕೆಲವು ಹುಡುಗರ ಬೆನ್ನ ಮೂಳೆ ಎಷ್ಟು ಗಟ್ಟಿಯಿದೆ ಎಂದು ಪರೀಕ್ಷಿಸುತ್ತಿದ್ದ. ಅವನು ಪರೀಕ್ಷಿಸುತ್ತಿರುವ ವೇಳೆಯಲ್ಲಿಯೇ ದಾವೂದ್ ಮತ್ತು ಅವನ ಇಬ್ಬರು ಸ್ನೇಹಿತರು ಮಾರುಕಟ್ಟೆಯಲ್ಲಿಯೇ ಅವಾಂತರಕಾರಿಯಾದ ಘಟನೆಗೆ ಕೈ ಹಾಕಬೇಕೆಂದು ಸಿದ್ಧವಾಗಿದ್ದರು. ಮಾರ್ಕೇಟಿನಲ್ಲಿ ತರಕಾರಿ ಕೊಂಡುಕೊಂಡು ಹೊರಟ ದಂಪತಿಗಳಲ್ಲಿ ಗರತಿಯೊಬ್ಬಳನ್ನು ಎತ್ತಿ ಜೀಪಿಗೆ ಹಾಕಿದರು. ಮೂವರೂ ಸೇರಿ – ಹಳೆಯ ಗ್ಯಾರೇಜೊಂದಕ್ಕೆ ಆ ಹೆಂಗಸನ್ನು ಹೊತ್ತೊಯ್ದು ಬಳಸಿಕೊಂಡು – ಅವಳ ಜೀವವನ್ನು ಯಾವುದೋ ಚರಂಡಿಗೆ ಹಾಕಿದವರೇ ರಾತ್ರೀ ರಾತ್ರಿ ನಗರವನ್ನು ಬಿಟ್ಟು ಹೊರಟರು. ದಾವೂದ್ ಗ್ಯಾಂಗ್ ಮತ್ತೆ ನಗರದಲ್ಲಿ ಕಾಣಿಸಿಕೊಳ್ಳಲಿಲ್ಲ. ಮರುದಿನದ ಪತ್ರಿಕೆಯಲ್ಲಿ ಇದಕ್ಕೆ ಸಂಬಂಧಿಸಿದ ಸಣ್ಣ ಸುದ್ದಿಯೊಂದು ಪ್ರಕಟವಾಯಿತು ಅಷ್ಟೆ.

*

ಆ ದಿನ ರಾತ್ರಿ ಮಾತ್ರ ಮೈಥಿಲಿಯ ಜೀವನದ ಸಂಪೂರ್ಣವಾದ ತಿರುವು. ಚಾರು ನಿದ್ದೆ ಮಾಡಿದವನು ಬೆಳಿಗ್ಗೆ ಏಳುವಾಗಲೇ ತಡವಾಯಿತು. ಬೆಳಿಗ್ಗೆ ಎದ್ದು ಬ್ರಶ್ ಮಾಡಿ ಹೊರಗೆ ಬರುವಷ್ಟರಲ್ಲಿ ಮೈಥಿಲಿಯು ಲೂನಾ ಸ್ಟಾರ್ಟ್ ಮಾಡುವುದು ಕೇಳಿಸಿತು. ಯಾಕೆ ಅಷ್ಟು ಬೇಗನೆ ಆಫೀಸಿಗೆ ಹೊರಟುಹೋದಳು ಎಂಬುದು ತಿಳಿಯಲಿಲ್ಲ. ಚಾರು ಅವನ ಪಾಡಿಗೆ ಅಡುಗೆ ಮನೆಯಲ್ಲಿ ಹೋಗಿ ತಿಂಡಿ ಏನಿದೆ ಎಂದುನೋಡಿದ. ತಿಂಡಿಯೇನೂ ಇದ್ದ ಹಾಗೆ ಕಾಣಿಸಲಿಲ್ಲ, ಹಾಲು ಬಿಸಿ ಮಾಡಿಟ್ಟಿದ್ದಳು ಮೈಥಿಲಿ. ಚಾರು ಬ್ರೆಡ್‌ನ್ನು ಹಾಲಲ್ಲಿ ನೆನೆಸಿಕೊಂಡು ತಿಂದು – ಮತ್ತೆ ಮಾತ್ರೆಗಳನ್ನು ತಿಂದ. ಇಡಿಯ ದೇಹದ ತುಂಬಾ ಮಾತ್ರೆಗಳೇ ತುಂಬಿಕೊಂಡಿವೆ ಯೆಂದೆನ್ನಿಸಿತು. ತನ್ನ ಯಾತನೆಯು ದೇಹದ್ದೇ ಮನಸ್ಸಿನದೇ ಎಂಬುದು ತಿಳಿಯದಂತಾದ ಮುಸುಕು ಮುಚ್ಚಿಹಾಕಿಕೊಂಡು ಮತ್ತೆ ನಿದ್ದೆ ಮಾಡಿದ. ನಿದ್ದೆ ಮಾಡಿದ ಚಾರು ಮರಳಿ ಎಚ್ಚರಗೊಂಡಿದ್ದು ಸರಿ ಸುಮಾರು ಒಂದು ಗಂಟೆಯ ಮೇಲೆ. ಒಂದು ಗಂಟೆಯ ಮೇಲೆ ಎದ್ದವನು ಟಿ.ವಿ.ಯನ್ನು ನೋಡೋಣವೆಂದು ಟಿ.ವಿ.ಯ ಹತ್ತಿರ ಬಂದ. ಮತ್ತೆ ತುಂಬಿಕೊಂಡ ಮೌನದ ನಡುವೆ ಪಿಸುಗುಟ್ಟುವ ಧ್ವನಿಯಂತೆ ಯಾವುದೋ ಕಾರ್ಯಕ್ರಮಗಳು ಮೈಯೆಲ್ಲಾ ಉರಿಯಿತು. ಒಳ್ಳೆಯ ಕಾರ್ಯಕ್ರಮವೂ ಇಲ್ಲವಲ್ಲ ಎಂದು ಟಿ.ವಿ.ಯನ್ನು ಆಫ್ ಮಾಡಿದ. ಆಗಲೇ ಅವನು ಗಮನಿಸಿದ್ದು ಮೈಥಿಲಿಯ ಕೆಂಪು ಡೈರಿಯನ್ನು, ಕುತೂಹಲದಿಂದ ಅದರ ಪುಟಗಳನ್ನು ತಿರುವಿದ. ಅವನು ಮೈಥಿಲಿಯ ಡೈರಿಯನ್ನು ನೋಡಬಾರದಿತ್ತು, ನೋಡಿದರೂ ಅದನ್ನು ಓದಬಾರದಿತ್ತು, ಓದಿದರೂ ಅದನ್ನು ಮನದಲ್ಲಿ ಇಟ್ಟುಕೊಳ್ಳಬಾರದಿತ್ತು. ಸಂವೇದನಾಶೀಲನಾದ ವ್ಯಕ್ತಿಯೊಬ್ಬನ ಮರ್ಮಘಾತಕ್ಕೆ ಕಾರಣವಾದ್ದು ಮೈಥಿಲಿಯ ಅಕ್ಷರಗಳು. ಅಂದರೆ ಈ ದಿನ ರಾತ್ರಿಯೂ ಮೈಥಿಲಿ ಮನೆಯ ಕಡೆಗೆ ಸುಳಿಯುವುದಿಲ್ಲ ಮತ್ತು ಅವಳಿಗೆ ತನ್ನ ಬಗ್ಗೆ ಯಾವ ಭಾವನೆಯಿದೆಯೆಂಬುದು ಸ್ಪಷ್ಟವಾಗಿತ್ತು. ಮೃದುವಾದ ಸ್ಪಂಜಿನಂತಿರುವ ಚಾರುವಿನ ಮನಸ್ಸು ಮುದುಡಿಹೋಯಿತು. ತನ್ನ ಆರೋಗ್ಯಕ್ಕಿಂತ; ತನ್ನ ಜೊತೆ ದಾಂಪತ್ಯ ಜೀವನವನ್ನು ನಡೆಸಿದ; ಒಂದೇ ಮನೆಯೆಂಬ ಗೂಡೊಳಗೆ ಬದುಕುತ್ತಿರುವ ಹೆಂಡತಿಯು ಹೀಗೆ ಏಕಾಏಕಿ ತನ್ನ ಬಗ್ಗೆ ಬರೆದ ಹೇವರಿಕೆಯ ಮಾತುಗಳು ಮತ್ತು ಶಿಬಿಯೆಂಬ ಅನಾಮಿಕ ಗಂಡಸಿನ ಬಗ್ಗೆ ಅವಳು ಸೂಚಿಸಿದ ಕರುಣೆಯ ಮಾತುಗಳು – ಅವಳ ಮನಸ್ಸಿನ ಮುಳ್ಳುಗಳು ಯಾವ ಕಡೆಗೆ ಚಲಿಸುತ್ತಿವೆಯೆಂಬುದನ್ನು ಸೂಚಿಸುತ್ತದೆ. ಯಾವುದೇ ಒಂದು ದಾಂಪತ್ಯದ ಒಳಗುಟ್ಟುಗಳು ಕೇವಲ ಮಿಥುನ ಪಕ್ಷಿಗಳ ಸಹಯೋಗದ ತೆರನಲ್ಲ ಮತ್ತು ಅದನ್ನು ಅರ್ಥಮಾಡಿಕೊಳ್ಳದ ಗಂಡಸು ಕೇವಲ ವಿಟ ಪುರುಷನಾಗಬಲ್ಲ ಮತ್ತು ಇದನ್ನು ಅರ್ಥಮಾಡಿಕೊಳ್ಳದ ಹೆಂಗಸು ಹೂವಿನಿಂದ ಹೂವಿಗೆ – ಹಾಸುಗೆಯಿಂದ ಹಾಸುಗೆಗೆ ಬದಲಾಗುತ್ತಾಳೆ. ಮನಸ್ಸನ್ನು

ದೇಹವನ್ನು ಬೇರೆಯಾಗಿಸುವ ಪ್ರಯತ್ನ ಮಾಡುತ್ತಾಳೆ. ಹಳೆಯ ಚಪ್ಪಲಿಯ ಬದಲಿಗೆ ಹೊಸದೊಂದು ಚಪ್ಪಲಿಯನ್ನು ಕೊಂಡುಕೊಂಡಂತೆ. ಮೈಥಿಲಿಯ ದೇಹ ಮತ್ತು ಮನಸ್ಸುಗಳ ಶ್ರುತಿ ತಪ್ಪಿದೆ. ಲಯ ತಪ್ಪಿದ ನಡಿಗೆಯನ್ನು ಇಟ್ಟಿದ್ದಾಳೆ. ಮೈಥಿಲಿಯ ಮನಸ್ಸಿನಲ್ಲಿ ತಾನು ಗಂಡನನ್ನು ವಂಚಿಸುತ್ತಿದ್ದೇನೆಂಬ ಸಣ್ಣ ಹೊಂಚು ಕೂಡಾ ಇಲ್ಲವೆ? ಇಲಿಯನ್ನು ಹಿಡಿಯಲು ಯತ್ನಿಸುವ ಬೆಕ್ಕು ಕೂಡಾ ಹೊಂಚು ಹಾಕುವಾಗ ಬಾಲವನ್ನೊಮ್ಮೆ ನೆಲಕ್ಕೆ ಹೊಡೆಯುತ್ತೆ. ಮೈಥಿಲಿಯು ತಾನು ಗಂಡನನ್ನು ಮೋಸಗೊಳಿಸುತ್ತಿದ್ದೇನೆ ಎಂಬ ಸಣ್ಣ ನೈತಿಕ ಪ್ರಶ್ನೆಯೂ ಎದುರಾಗಿಲ್ಲವೆಂದಾದರೆ ಅವಳ ವ್ಯಕ್ತಿತ್ವವು ಯಾವ ಬಗೆಯದು? ಶಿಬಿಯ ಬಗ್ಗೆ ಅಪಾರವಾದ ಕರುಣೆಯನ್ನು ಅವಳು ಯಾಕೆ ವ್ಯಕ್ತಪಡಿಸಿದ್ದಾಳೆ? . ತಲೆಯೇ ಚಿಟ್ಟು ಹಿಡಿದಂತಾಯಿತು–ಚಾರುಗೆ. ಅದೇ ವೇಳೆಗೆ ಫೋನ್ ತನ್ನ ಲಯಬದ್ಧ ಅಸ್ತಿತ್ವವನ್ನು ಸಾಬೀತುಪಡಿಸಿತು. ಚಾರು "ಹಲೋ" ಎಂದ. ಆ ಕಡೆಯಿಂದ "ಯಾರು ಚಾರು ಅವರಾ?" ಎಂದು ಹೇಳಿದ್ದು ಕೇಳಿಸಿತು. ಚಾರು "ಹೌದು" ಎಂದ. "ನಾನು ವೆಂಕಟರಮಣ ಭಟ್ಟ ಸಾರ್. ನಿಮ್ಮ ಮಿಸೆಸ್ ಮೈಥಿಲಿಯವರ ಕೊಲೀಗ್, ನಿಮಗೊಂದು ವಿಷಯ ತಿಳಿಸೋಣ ಅಂತ ಫೋನ್ ಮಾಡಿದೆ ಸಾರ್. ನೀವು ಅನ್ಯಥಾ ತಿಳಿದುಕೊಳ್ಳಬಾರದು" ಎಂದು ವೆಂಕಟರಮಣ ಹೇಳಿದ. ಚಾರು ಉತ್ಸಾಹರಹಿತನಾಗಿ, "ಹೇಳಿ ಸಾರ್" ಅಂದ. "ಖಂಡಿತಾ ಬೇರೆ ಭಾವಿಸಿಕೊಳ್ಳಬಾರದು. ಯಾಕೆಂದರೆ, ನಾನೂ ಸಂಸಾರವಂದಿಗ ಬೇರೆಯವರ ಸಂಸಾರದ ವಿಷಯದಲ್ಲಿ ಅನಗತ್ಯವಾಗಿ ಮೂಗು ತೂರಿಸಿ ಸಂಸಾರ ಕೆಡಿಸುವುದು ನನ್ನ ಉದ್ದೇಶವಲ್ಲ ಸಾರ್. ಅದೂ ಕೂಡಾ, ನನಗೆ ಈಗಾಗಲೇ ತಲೆಗೂದಲು ತುಂಬಾ ಬಿಳಿಯಿಟ್ಟಿದೆ. ಅಂದರೆ ವಯಸ್ಸಾಗಿದೆ ಸಾರ್, ದಯವಿಟ್ಟು ತಪ್ಪು ತಿಳಿಯಬೇಡಿ." ವೆಂಕಟರಮಣನ ಮಾತು ಕೇಳಿದಾಗ ಚಾರುಗೆ ಮತ್ತಷ್ಟು ಕಿರಿಕಿರಿಯಾಯಿತು. "ಅದೇನು ವಿಷಯ ಹೇಳಿ ಅನಗತ್ಯವಾದ ಪೀಠಿಕೆಯನ್ನು ಹಾಕಿ ಏನು ಪ್ರಯೋಜನ" ಎಂದ. ಚಾರುವಿನ ಮಾತಿನಲ್ಲಿ ನಿಷ್ಠುರತೆಯಿತ್ತು. ಯಾವತ್ತೂ ರೇಗದೆ ಇರುವ ಚಾರು ಸ್ವಲ್ಪ ರೇಗಿಕೊಂಡೇ ಉತ್ತರಿಸಿದ; "ವಿಷಯವೇನೂ ಅಂತಂದ್ರೆ... ಅನ್ಯಥಾ ಭಾವಿಸಬೇಡಿ, ನಿಮ್ಮ ಸಂಸಾರದಲ್ಲಿ ಹುಳಿಯನ್ನು ಹಿಂಡಿ ಯಾವ ಪ್ರಯೋಜನವಿಲ್ಲ, ದಯವಿಟ್ಟು..." ವೆಂಕರಟಮಣ ಮತ್ತೆ ಅದನ್ನೇ ಹೇಳಿದಾಗ ಚಾರುಗೆ ಸಿಟ್ಟು ಬಂತು. "ಅದೇನು ಹೇಳಿ" ಎಂದ. "ಏನಿಲ್ಲಾ ಸಾರ್, ನಿಮ್ಮ ಮಿಸೆಸ್ ಮೈಥಿಲಿಯವರು ಶಿಬಿಯೊಂದಿಗೆ ಮಂಗಳೂರಿಗೆ ಹೋಗ್ತಾರಂತೆ, ನಿನ್ನೆ ಆಫೀಸಲ್ಲಿ ಅದನ್ನೆ ಮಾತಾಡುತ್ತಿದ್ದರು. ಆದರೆ, ಮೈಥಿಲಿಯವರು ಹೋಗದಿದ್ದರೂ ನಡೆಯುತ್ತೆ, ಅವರದ್ದು ಏನೇನೋ ಇದೆ ಸಾರ್, ನೀವು ಸ್ವಲ್ಪ ಕೇರ್ ತೆಗೆದುಕೊಳ್ಳುವುದು ಒಳ್ಳೆಯದು. ಶಿಬಿ ಮತ್ತು ಮೈಥಿಲಿಯರ ನಡುವೆ ಯಾವುದೋ ಬೇರೆ ಸಂಬಂಧಗಳಿವೆಯೆಂದು ನನಗನ್ನಿಸುತ್ತೆ. ಆಫೀಸಲ್ಲಿ ಅಟೆಂಡರ್ ಸಮೇತ

ಎಲ್ಲರೂ ಅವರ ಬಗ್ಗೆ ಮಾತಾಡುತ್ತಿದ್ದಾರೆ. ಸಂಸಾರವೊಂದು ಹಾಳಾಗಿ ಬೀದಿಗೆ ಬೀಳಬಾರದು ಎಂದು ಹೇಳಿದೆ. ನೀವೇ ಯೋಚಿಸಿ ಸಾರ್, ಮಂಗಳೂರಿಗೆ ಹೋಗುವ ವಿಷಯವನ್ನು ಮೈಥಿಲಿಯವರು ಹೇಳಿರಬಹುದು. ಆದರೆ, ಅವರು ಶಿಬಿಯೊಂದಿಗೆ ಹೋಗದಿರುವುದು ಹೆಚ್ಚು ಸೂಕ್ತವೆಂದು ಹೇಳಿದೆ. ಬೇಕಿದ್ದರೆ ನಾನೇ ಹೋಗ್ತೇನೆ, ನೀವೇ ಮೈಥಿಲಿಗೆ ಹೋಗಬೇಡಿ ಎಂದು ಹೇಳಿಬಿಡಿ. ನಾನು ಹೊರಗಡೆಯಿಂದ ಫೋನು ಮಾಡುತ್ತಿದ್ದೇನೆ" ಎಂದು ಹೇಳುತ್ತ ವೆಂಕಟರಮಣ ಫೋನ್ ಕೆಳಗಿಟ್ಟ.

ವೆಂಕಟರಮಣ ಅನುಭವಿ. ಹತ್ತಾರು ಕೆರೆಯ ನೀರು ಕುಡಿದ ಅಸಾಮಿಯೆಂದು ತಕ್ಷಣವೇ ಚಾರುಗೆ ಅರ್ಥವಾಯಿತು. ಗಂಡಸಿಗೆ ಹೇಳದೇ ಹೊರಡುವ ಸಿದ್ಧತೆಯನ್ನು ನಡೆಸಿದ ಹೆಂಗಸು! ಗಂಡ ಮತ್ತು ಹೆಂಡತಿಯರ ನಡುವೆ ಇರಬೇಕಾದ ಅನುಬಂಧದ ರೇಖೆಯನ್ನು ದಾಟಿದ ದಾಕ್ಷಾಯಿಣಿ ಬೆಂಕಿಗೆ ಬಿದ್ದು ಬೂದಿಯಾದಳು. ಶೂನ್ಯವಾದ ಆಕಾಶ; ಅನಂತವಾದ ಸಮುದ್ರ; ಕಣ್ಣಳತೆಗೆ ಸಿಗದಿರುವ ಭೂಮಿಯ ಸಾವಿರದ ಅವಕಾಶಗಳಿವೆ. ಅವಕಾಶಗಳು ನಮ್ಮ ಆಯ್ಕೆಯಾಗಲಿ ಎಂದು ನಿರಂತರವಾಗಿ ಅದರ ಬೆನ್ನ ಹಿಂದೆ ಹೋದವನು – ತಳಾತಳವಾದ ಪಾತಾಳವನ್ನು ಸೇರುತ್ತಾನೆ. ಇದು ಮೈಥಿಲಿಗೆ ಗೊತ್ತಿಲ್ಲ, ಅವಳಿಗಿನ್ನು ಅದನ್ನು ತಿಳಿಸಬೇಕಾದ ಯಾವ ಅಗತ್ಯವೂ ಇಲ್ಲ. ಆದರೂ, ಕೊನೆಯದೊಂದು ಅವಕಾಶ ಕೊಟ್ಟು ನೋಡೋಣವೆಂದು ಮೈಥಿಲಿಯ ಆಫೀಸಿಗೆ ಫೋನು ಮಾಡಿದ, ಫೋನಿಗೆ ಸಿಕ್ಕಿದ್ದು ಶಿಬಿ. ಧ್ವನಿಯಲ್ಲಿಯೇ ಗೊತ್ತಾಯಿತು. ಕೂಡಲೇ ಚಾರು ಹೇಳಿದ; "ಮೈಥಿಲಿಯು ಬೇಕಿತ್ತು" ಎಂದ. ಶಿಬಿಯು ಫೋನನ್ನು ಟೇಬಲ್‌ನ ಮೇಲಿಟ್ಟಿದ್ದು ಚಾರುಗೆ ತಿಳಿಯಿತು. ಮೈಥಿಲಿಯು ಫೋನು ಎತ್ತಿಕೊಂಡಳು, ಚಾರು ಒಂದೇ ಒಂದು ಮಾತು ಹೇಳಿದ; "ಮೈಥಿಲಿ, ಈವೊತ್ತು ನೀನು ಮಂಗಳೂರಿಗೆ ಹೋಗಬೇಕಿಲ್ಲ" – ಮೈಥಿಲಿಯು ಆ ಕಡೆಯಿಂದ, "ಹೋಗಿಯೇ ಹೋಗುತ್ತೇನೆ, ಕೇಳುವುದಕ್ಕೆ ನೀನ್ಯಾರು?" ಚಾರು ಮತ್ತೆ ಮಾತಾಡಲಿಲ್ಲ, ಫೋನು ಕೆಳಗಿಟ್ಟುಬಿಟ್ಟ, ತಾನು ಏನು ಹೇಳಬೇಕೆಂದುಕೊಂಡಿದ್ದೆನೋ ಅದನ್ನು ಹೇಳಿಯಾಗಿದೆ, ಉಳಿದುದು ಮೈಥಿಲಿಗೆ ಸಂಬಂಧಿಸಿದ ವಿಷಯ. ಹದಗೆಟ್ಟ ರಸ್ತೆ; ಹದಗೆಟ್ಟ ದಾಂಪತ್ಯ ಜೀವನವೆರಡೂ ಒಂದೇಯೆಂದೆನ್ನಿಸಿತು ಚಾರುಗೆ. ಹದಗೆಟ್ಟ ರಸ್ತೆಯಲ್ಲಿ ಸ್ವಲ್ಪ ಗಮನವನ್ನು ಬದಲಿಸಿದರೂ ಸಾಕು – ಸ್ಕೂಟರ್ ಉರುಳಿಬಿದ್ದು ತಲೆಗೆ ಏಟು ಬೀಳುವುದು ಖಚಿತ. ಅನುರಾಗವೇ ಇಲ್ಲದ ದಾಂಪತ್ಯಜೀವನದಲ್ಲಿಯೂ ಮೊದಲು ಕೈ ಕೊಡುವುದು ಮಿದುಳು. ಮಿದುಳಿಗೆ ರಕ್ತ ಸಂಚಾರವೇ ನಿಂತು ಹೋಗುತ್ತದೆ. ಬೆಸೆದ ಹೃದಯಗಳ ನಡುವೆ ಒಂದೆರಡು ಅಪಶ್ರುತಿಯು ಕೇಳಿಬಂದರೂ ಸಾಕು. ಒಂದು ಸಣ್ಣ ಶಾಕ್ ಹೃದಯಕ್ಕೆ ಕಾದು ಕುಳಿತಿರುತ್ತದೆ. ದಾಂಪತ್ಯವೆಂದರೆ ರಥಕ್ಕೆ ಹೂಡಿದ ಎರಡು ಗಾಲಿಗಳು. ಯಾವುದೇ ಒಂದು ಗಾಲಿಯು ಮುರಿದುಬಿದ್ದರೂ

ಸಾಕು, ಗಾಲಿಯ ಕೀಲು ಮುರಿದರೂ ಸಾಕು, ದಾಂಪತ್ಯವೆಂಬ ರಥವು ಮುಗ್ಗರಿಸಿ ಬೀಳುತ್ತದೆ. ದಾಂಪತ್ಯವೆಂದರೆ – ಅದು ಬರಿಯ ಲೈಂಗಿಕ ವಾಂಛೆಗಳ ಬಿಗಿಯನ್ನು ಸಡಿಲಗೊಳಿಸಲು ಇರುವ ಭರಣಿಯಲ್ಲ. ಸಾವಿರಾರು ರೀತಿಯ ಎಳೆಗಳನ್ನು ಸಮಚಿತ್ತದಿಂದ ಜೋಡಿಸಿದ ಹೆಣಿಗೆ. ದಶರಥನಿಗೂ ಕುದುರೆಯ ಹೃದಯವನ್ನೇ ಅರ್ಥಮಾಡಿಕೊಳ್ಳುವಂಥ ಕೈಕೇಯಿ ಜೊತೆಯಲ್ಲಿದ್ದಳು. ಯುದ್ಧಗಳನ್ನು ದಶರಥ ಗೆಲ್ಲುತ್ತಿದ್ದ ಕ್ರಮಕ್ಕೆ ಕೈಕೇಯಿ ಸಾಕ್ಷಿ. ಯಾವಾಗ ದಶರಥನ ನಿರ್ಧಾರವು ಕಹಿಯಾದುದು ಎಂದನ್ನಿಸಿತೋ ಅಂದೇ ಕೈಕೇಯಿ ಕೈಕೊಟ್ಟಳು. ಆದುದರಿಂದಲೇ ದಾಂಪತ್ಯವೆಂದರೆ ಅದು ರಹಸ್ಯವಲ್ಲ, ಅದು ವಾಚ್ಯವಲ್ಲ. ಅದರ ನಡುವೆ ಸೂಕ್ಷ್ಮಾತಿ ಸೂಕ್ಷ್ಮವಾದ ಎಳೆಗಳಿವೆ. ಒಂದೆಳೆಯು ಜಾರಿದರೂ ಸಾಕು, ಕತೆಯು ಮುಗಿಯುತ್ತದೆ. ದಾಂಪತ್ಯ ಜೀವನವೆಂದರೆ ಹೇಗಿರಬೇಕು ಎಂದು ಬಾಲ್ಯದಲ್ಲಿ ರಾಮಾಯಣದ ಕತೆಯನ್ನು ಹೇಳುವಾಗ ತಾತ ತೊಡೆಯಲ್ಲಿ ಕೂರಿಸಿಕೊಂಡಿದ್ದ. ಆಗ ಇದು ಸರಿಯಾಗಿ ಅರ್ಥವಾಗಿರಲಿಲ್ಲ. ನಿಜವಾಗಿ ಅರ್ಥವಾಗುತ್ತಿರುವುದು ಈಗ – ಅದೂ ಮೈಥಿಲಿಯ ಸಾಂಗತ್ಯದ ಜೊತೆಗೆ ತಲೆಯೇ ಕೆಟ್ಟು ಕೆರ ಹಿಡಿದಿದೆಯೆಂದೆನ್ನಿಸಿತು. ಸತ್ತರೂ ಸರಿ–ಬದುಕಿದರೂ ಸರಿ. ದಾಂಪತ್ಯದ ಕಟ್ಟಡವು ರಾಮಜನ್ಮಭೂಮಿಯ ವಿವಾದದ ಸಂದರ್ಭದಲ್ಲಿ ಮಸೀದಿಯು ಉರುಳಿಬಿದ್ದಂತೆ–ಬೀಳಲಿ. ಈಗಂತೂ ಕುಡಿಯಲೇಬೇಕು. ಅದಕ್ಕಿಂತ ಮೊದಲು ಕೆಲವು ದಿನ ರಜೆ ಹಾಕಬೇಕು. ಸಂಬಳರಹಿತ ರಜೆಯಾದರೂ ಸರಿಯೆಂದು ನಿಶ್ಚಯಿಸಿದವನೇ ಫೋನ್ ಮಾಡಿ ಆಫೀಸಿಗೆ ರಜೆಯ ಕುರಿತು ತಿಳಿಸಿದ. ವ್ಯವಸ್ಥಾಪಕ ನಿರ್ದೇಶಕ – "ನೀವು ಹೀಗೆಯೇ ಮುಂದುವರಿದರೆ ಮನೆಯಲ್ಲಿ ಉಳಿಯಬೇಕಾದೀತು" ಎಂದ. ಚಾರು ನಿಶ್ಚಿಂತೆಯಿಂದ "ಸರಿ"ಯೆಂದ ಮತ್ತು ತಜ್ಞ ವೈದ್ಯನ ಸಲಹೆಯನ್ನು ಮೀರಿ – ಎರಡು ಫುಲ್ ಬಾಟಲು ಜಿನ್ ತಂದಿಟ್ಟುಕೊಂಡ, ಕುಡಿದ–ಮಲಗಿದ. ಎಚ್ಚರವಾದಾಗ ಮತ್ತೆ ಕುಡಿದ. ಕುಡಿತ ಮತ್ತು ಸಿಗರೇಟಿನ ಮಹಾನ್ ಯಜ್ಞ ಪ್ರಾರಂಭಿಸಿದವನಿಗೆ– ಮೈಮೇಲೆ ಲೋಕವಿಡೀ ಬಂದು ಆವರಿಸಿಕೊಂಡಂತೆ ಅನಿಸಿತು. ಚಾರುವಿನ ಕುಡಿತದ ಯಜ್ಞ ರಾತ್ರಿಯ ತನಕವೂ ನಡೆಯಿತು. ರಾತ್ರಿ ಎಂಟೂವರೆಯಾದರೂ ಮೈಥಿಲಿಯು ಮನೆಗೆ ಬರಲಿಲ್ಲ. ಅವಳು ಮಂಗಳೂರಿಗೆ ಹೋಗಿದ್ದಾಳೆ. ಆ ಲೆಕ್ಕದಲ್ಲಿ ಮತ್ತೊಂದು ಪೆಗ್ ಹಾಕಿದ, ಯಜ್ಞದ ಮೇಲೆ ಯಜ್ಞ, ಕುಡಿತ–ಸಿಗರೇಟು–ಕುಡಿತ–ಸಿಗರೇಟು.!

ಮಂಗಳೂರಿಗೆ ಶಿಬಿ ಮತ್ತು ಮೈಥಿಲಿಯರು ಬಂದು ತಲುಪುವಾಗ ರಾತ್ರಿ ಒಂಬತ್ತೂವರೆ. ಮೈಥಿಲಿಯು ಚಾರುವಿನ ಫೋನಿಗೆ ಉತ್ತರ ಕೊಟ್ಟ ರೀತಿಯು ಶಿಬಿಗೆ ಅರ್ಥವಾಗಿತ್ತು ಮತ್ತು ಅದ್ಯಾಕೆ ಹಾಗೆ ಉತ್ತರ ಕೊಟ್ಟಿರಿ ಎಂದು ಸೌಜನ್ಯಕ್ಕಾಗಿಯೂ ಕೇಳಲಿಲ್ಲ, ಕೇಳುವುದು ಸ್ವಭಾವ ಅಲ್ಲವೆಂದಲ್ಲ, ಹಿಂದಿನ ದಿನ ರಾತ್ರಿ ಮೈಥಿಲಿಯ ಮನೆಗೆ ಹೋದಾಗ ಗೆಲುವಿನಲ್ಲಿ ಹೋಗಿದ್ದ. ಆದರೆ, ಚಾರು ತಾನು ಊಟ

ಮಾಡುವಾಗಲೇ ಬರುತ್ತಾನೆಂಬ ನಿರೀಕ್ಷೆಯು ಇರಲಿಲ್ಲ. ಚಾರು ಮನೆಯೊಳಗಡೆ ಬಂದಾಗಲೇ ಅವನ ಕಣ್ಣು ಕೆಂಪಾಗಿತ್ತು ಮತ್ತು ಯಾವುದೋ ತಪ್ಪಿತಸ್ಥ ತಾನೆಂಬ ಭಾವನೆಯು ತನಗೆ ಒಡಮೂಡಿದ್ದಂತೂ ನಿಜ. ಮೈಥಿಲಿಯ ಬಗ್ಗೆ ಸಹಜವಾದ ಆಕರ್ಷಣೆಯೆನ್ನುವುದಿದೆ ಎಂಬುದಂತೂ ನಿಜ. ಅದಕ್ಕಾಗಿಯೇ ಅವಳನ್ನು ಮಂಗಳೂರಿಗೆ ಬಾ ಎಂದು ಕರೆದದ್ದೂ ಸಕಾರಣದಿಂದಲೇ. ಮೈಥಿಲಿಯ ಮನೆಯ ಹೊಸ್ತಿಲಲ್ಲಿಯೇ ಧೂಳು ಅಂಟಿಕೊಂಡಿದೆ. ಗಂಡ–ಹೆಂಡಿರ ನಡುವೆ ಬಿರುಕು ಹುಟ್ಟಿದೆಯೆಂಬುದು ಅರ್ಥವಾಗದಷ್ಟು ಮುಗ್ಧನೇನಲ್ಲ ಶಿಬಿ. ಮೈಥಿಲಿಯು ಅತೃಪ್ತಿಯೊಂದರ ನರಳುವಿಕೆಯಲ್ಲಿ ಸಿಲುಕಿದ್ದಾಳೆ. ಗಂಡನ ಬಗೆಗೆ ಅತೀವವಾದ ಅಸಹ್ಯವನ್ನು ಅವಳು ವ್ಯಕ್ತಪಡಿಸಿದ್ದಾಳೆ ಎಂದಾದರೆ ಅವಳಲ್ಲಿ ದೈಹಿಕ ಲಾಲಸೆಗಳು ಎದ್ದೆದ್ದು ಕುಣಿಯತೊಡಗಿವೆ. ಶಿಬಿ ಅರಸಿಕನಲ್ಲ ಮತ್ತು ಮೈಮೇಲೆ ಬಿದ್ದ ಹೆಣ್ಣುಗಳಿಗೇನು ಬೇಕು ಎಂಬುದನ್ನು ಅರ್ಥಮಾಡಿಕೊಂಡವನು. ಮದುವೆಯಾಗದ ಹರೆಯ ತೊನೆದಾಡುವ ಹುಡುಗಿಯರು ಮದುವೆಯಾಗಿಯೂ ಹೊಸದೊಂದನ್ನು ಹಂಬಲಿಸುವ ಹೆಂಗಸರು ಅವನ ಬಾಹುಗಳಿಗೆ ಅಂಟಿಕೊಂಡಿದ್ದಾರೆ. ಅಂಟಿಕೊಂಡರೂ ಮರುದಿನ ಎದ್ದು ಬಂದ ಮೇಲೆ ಆ ಕಡೆಗೆ ತಿರುಗಿ ನೋಡಿಲ್ಲ. ದೆಹಲಿಯಲ್ಲಿ ನೋಡಿದ ಪಂಜಾಬಿ ಹುಡುಗಿಯರ ಮೈಮೇಲೆ ಬರಿಯ ಮಾಂಸಗಳಿವೆ–ಖಂಡುಗ ಗಾತ್ರದಷ್ಟು. ಆದರೆ, ಮೈಥುನದ ಲಯದಲ್ಲಿ ಸೋಲುತ್ತಾರೆ, ಬೇಗನೆ ಇಳಿದುಬಿಡುತ್ತಾರೆ. ದೇಹದ ಏರು–ತಗ್ಗು ಎಂಬುದಕ್ಕೆ ಹೆಚ್ಚು ವ್ಯತ್ಯಾಸವಿಲ್ಲದಂತಿರುತ್ತಾರೆ. ಅವರೊಂದಿಗೆ ಯಾವುದೇ ರೀತಿಯ ಆಟಗಳು ಸಾಧ್ಯವಿಲ್ಲ. ದೆಹಲಿಯಲ್ಲಿ ಪರಿಚಿತ ಪಂಜಾಬಿ – ಒಂದೇ ಏಟಿಗೆ ಒಸರಿ ಮುದ್ದೆಯಾದವಳು – "ಯೂ ನಾಟಿ" ಎಂದು ಎದ್ದು ಹೋದವಳು ಅನಂತರ ಪತ್ತಿರವೂ ಸುಳಿಯಲಿಲ್ಲ. ದೆಹಲಿಯಲ್ಲಿ ಪರಿಚಿತಳಾದ ಆಂಧ್ರದ ಗೃಹಿಣಿಯ ಸಮಸ್ಯೆಯೇ ಬೇರೆ ಇತ್ತು. ಗಂಡ ಬೆಳಿಗ್ಗೆ ಎಂಟು ಗಂಟೆಗೆ – ತೂರಾಡುತ್ತಾ ಬಿದ್ದಿರುತ್ತಿದ್ದ. ಆಕಸ್ಮಿಕ ಪರಿಚಿತಳಾದ ಆಂಧ್ರದ ಪಾರ್ವತಿ ರೆಡ್ಡಿ ಹಗಲು ಹೊತ್ತಿನಲ್ಲಿಯೇ ಕರೆದು ಶಿಬಿಯನ್ನು ಅಟಕಾಯಿಸಿದಳೆಂದರೆ – ಶಿಬಿ ಆ ದಿನ ಅವಳ ಮನೆಯಿಂದ ಹೊರಬಂದವನು ಮತ್ತೆ ತಿರುಗಿ ನೋಡಿರಲಿಲ್ಲ. ಈ ರೀತಿಯ ಹತ್ತು–ಹಲವು ಅನುಭವಗಳನ್ನು ತನ್ನದಾಗಿಸಿಕೊಂಡ ಶಿಬಿಯು ಕಚೇರಿಗೆ ಬಂದ ದಿನವೇ ಮೈಥಿಲಿಯ ದೇಹದ ಏರು–ತಗ್ಗು–ಸೊಂಟದ ತಿರುವು ಎಲ್ಲವನ್ನು ಪರಿವೀಕ್ಷಣೆ ನಡೆಸಿಯೇ ಅವಳನ್ನು ತನ್ನ ಗಾಳಕ್ಕೆ ಸಿಕ್ಕಿಸಿಕೊಂಡ! ಮತ್ತು ಆ ಗಾಳಕ್ಕೆ ಸಿಕ್ಕಿದ್ದು ತಾನು ಉದ್ದೇಶಪೂರ್ವಕವಾಗಿ ಎಂದು ಮೈಥಿಲಿಯೂ ಭಾವಿಸಿಕೊಂಡಿದ್ದಳು. ಪ್ರಯಾಣದ ಉದ್ದಕ್ಕೂ ಶಿಬಿಯೊಂದಿಗೆ ಮೈಥಿಲಿಯು ಅನೇಕ ಮಾತುಗಳನ್ನು ಆಡಿದಳು. ಆ ಮಾತುಗಳು ರಸ ಸಂಜೆಯ ಕಾರ್ಯಕ್ರಮದ ಪ್ರಸ್ತಾವನೆಯಂತಿರಲಿಲ್ಲ. ಪೀಠಿಕೆಯೂ

ಆಗಿರಲಿಲ್ಲ! ತನ್ನ ಗಂಡನ ಸ್ಥಿತಿಯ ಬಗ್ಗೆ; ತನ್ನ ಬಗ್ಗೆ ಮಾತಾಡಿದ ಮೈಥಿಲಿಯು ಬೇರೆ ಯಾವುದೇ ಗ್ರೀನ್ ಸಿಗ್ನಲ್ ಕೊಡುವ ಸೂಚನೆಯಲ್ಲಿ ಇರಲಿಲ್ಲ.

ಲಾಡ್ಜ್ ಸೇರುವ ತನಕವು ಅತಿಯಾದ ಉತ್ಸಾಹದಿಂದಲೇ ಮೈಥಿಲಿಯು ಮಾತಾಡುತ್ತಲೇ ಇದ್ದಳು. ಲಾಡ್ಜ್‌ನ ಹತ್ತಿರ ಬರುವಾಗ ಶಿಬಿಯು ಕೇಳಿದ; "ಮೈಥಿಲಿಯವರೇ, ಸಿಂಗಲ್ ರೂಂ ಎರಡು ಮಾಡೋಣವೆ? ಅಥವಾ ಒಂದೇ ಡಬಲ್ ರೂಂ?" "ನಿಮಗೆ ಯಾವುದು ಇಷ್ಟವೋ ಹಾಗೆ ಮಾಡಿ" ಎಂದಳು ಮೈಥಿಲಿ. "ಆದ್ರೆ ಒಬ್ಬೇ ರೂಮಿನಲ್ಲಿರುವುದು ಎಂದರೆ ಭಯ." ಮತ್ತೊಂದು ಮಾತನ್ನು ಸೇರಿಸಿದಳು. ಒಂದು ಪ್ರಸ್ತಾವನೆಯ ಮಾತನ್ನು ಹೇಳಿದಳು. ಮತ್ತೆ ಶಿಬಿಯು ಮತ್ತು ಮೈಥಿಲಿಯರಿಬ್ಬರೂ ಒಂದು ಡಬಲ್ ರೂಮಿನೊಳಗಡೆಗೆ ಸೇರಿಕೊಂಡರು, ರಾತ್ರಿ ಗಂಟೆ ಹತ್ತು! ಶಿಬಿಯು ಊಟಕ್ಕೆ ಆರ್ಡರ್ ಮಾಡಿದ. ಮತ್ತೆ ರೂಮಿನ ಬೋಲ್ಟ್ ಹಾಕಿದ. ಮೈಥಿಲಿಯು ಬಾತ್‌ರೂಮಿಗೆ ಹೋದಳು. "ಹತ್ತು ನಿಮಿಷ ರಿಲ್ಯಾಕ್ಸ್ ಮಾಡಿಕೊಂಡುಬಿಡಿ, ಅಷ್ಟು ಹೊತ್ತಿಗೆ ಊಟ ಬಂದುಬಿಡುತ್ತೆ" ಅಂದ ಶಿಬಿ. ಮೈಥಿಲಿಯಲ್ಲಿ ಅಷ್ಟು ಹೇಳಿ ಅವನು ಕೈ-ಕಾಲು-ಮುಖ ತೊಳೆದುಕೊಂಡುಬರಲು ಬಾತ್ ರೂಮಿನೊಳಗೆ ಹೊಕ್ಕನು. ಅದೇ ವೇಳೆಯಲ್ಲಿ ಮೈಥಿಲಿಯು ತನ್ನ ಹೊಚ್ಚ ಹೊಸ ಬಿಳಿಯ ನೈಟಿಯನ್ನು ಹಾಕಿಕೊಂಡಳು. ಬಿಳಿಯ ನೈಟಿಯೆಂದರೆ ಅಚ್ಚ ಬಿಳಿಯದು, ಎದೆಯ ಬಳಿಯಲ್ಲಿ ಸಣ್ಣನೆಯ ಕಸೂತಿ ಕೆಲಸ ನಡೆಸಿ ಚಿತ್ರಿಸಿದ ಹೊಲಿಗೆಗಳು. ಮೈಥಿಲಿಯು ಮುಖ ತಿರುಗಿಸಿ ಕನ್ನಡಿಯಲ್ಲಿ ತನ್ನ ಮುಖವನ್ನು ಮತ್ತು ಡ್ರೆಸ್ ನೋಡಿಕೊಂಡಳು. ಮೈಥಿಲಿಯ ಎತ್ತರ ನಾಲ್ಕೂವರೆ ಅಡಿ. ಸಪೂರ ಸೊಂಟ, ಅವಳು ಒಳಗಡೆ ಹಾಕಿಕೊಂಡ ಕಪ್ಪು ಬ್ರಾದ ಅಚ್ಚು ನೆಗೆದು ಕಾಣಿಸುತ್ತದೆ. ಚೂಪು ಎದೆಯನ್ನು ಕನ್ನಡಿಯು ಆಕರ್ಷಕವಾಗಿ ವ್ಯಕ್ತಪಡಿಸುತ್ತದೆ. ಅವಳು ಕನ್ನಡಿಯಲ್ಲಿ ತನ್ನ ದುಂಡಗಿನ ಮುಖವನ್ನು ನೋಡುತ್ತಿರುವ ಹೊತ್ತಿನಲ್ಲಿ ಶಿಬಿಯು ಬಾತ್‌ರೂಮಿನಿಂದ ಬಂದ. ಬಂದವನೇ "ಈ ಡ್ರೆಸ್‌ನಲ್ಲಿ ತುಂಬಾ ಚೆನ್ನಾಗಿ ಕಾಣಿಸ್ತಾ ಇದ್ದೀರಾ? ತುಂಬಾ ಮುದ್ದು ಮುದ್ದಾಗಿ ಕಾಣಿಸ್ತಾ ಇದ್ದೀರಾ?" ಅಂದ. ಇದೇ ಮಾತನ್ನು ಹಿಂದೊಮ್ಮೆ ಯಾರು ಹೇಳಿದ್ದರು – ಚಾರುವೇ–ದೇವವ್ರತನೆ? – ದೇವವ್ರತ. ಅವನ ಮಾತಿನಿಂದ ಮೈಥಿಲಿಯೆಂಬ ಗೃಹಿಣಿಗೆ ಗಲ್ಲ ಕೆಂಪೇರಿತು. ಈ ಸ್ಥಿತಿಯೇ ಹಿಂದೊಮ್ಮೆ ಉಂಟಾಗಿತ್ತು. ಮನಸ್ಸು ಮತ್ತು ದೇಹವೆನ್ನುವುದು ಬೇರೆಯಲ್ಲ. ಅದೇ ವೇಳೆಗೆ ಲಾಡ್ಜ್‌ನ ಹುಡುಗ ಊಟ ತಂದಿರಿಸಿದ, ಇಬ್ಬರೂ ಊಟ ಮಾಡಿದರು. ಊಟದ ಬಗೆಗೆ ಅಷ್ಟೊಂದು ಲಕ್ಷ್ಯವು ಇದ್ದಂತಿಲ್ಲ, ಕೈತೊಳೆದ ನಂತರ ರೂಂ ಬಾಯ್ ತಟ್ಟೆ ತೆಗೆದುಕೊಂಡು ಹೋದ. ಅದರ ನಂತರ ಶುರುವಾಗಿದ್ದು! ಆದರೆ, ಸರಿಯಾಗಿ ಹತ್ತು ಗಂಟೆ ಹತ್ತು ನಿಮಿಷ ದಾಟಿದಾಗಲೇ – ಚಾರು ಕುಡಿತದ ಮತ್ತೊಂದು ನೋಟಕ್ಕೆ ಕೈಯಿರಿಸಿದ್ದ, ಕೈ ನಡುಗಲು ಪ್ರಾರಂಭವಾಗಿತ್ತು. ಒಂದೇ ಕೈಯಲ್ಲಿ ಕುಡಿದರೆ ಎಲ್ಲಿ

ಲೋಟ ಬಿದ್ದುಹೋಗುತ್ತದೆಯೋ ಎಂಬ ಭಯದಲ್ಲಿಯೇ ಎರಡೂ ಕೈಗಳನ್ನು ಜೊತೆ ಸೇರಿಸಿಕೊಂಡು ಕೈಗಳಲ್ಲಿ ಲೋಟವನ್ನು ಹಿಡಿದುಕೊಂಡು ಮತ್ತೊಂದು ಸಿಪ್ ಕುಡಿದ. ಕುಡಿದ ಕ್ರಮವು ಮಾತ್ರ ವಿಚಿತ್ರ. ನಡುಗುತ್ತಿರುವ ಕೈಗಳಲ್ಲಿ ಚಾರು ಕುಡಿಯುವ ಕ್ರಮವನ್ನು ನೋಡಿದರೆ ಯಾರಾದರೂ ಭಯಗೊಳ್ಳುವಂತಿತ್ತು.

ಆದರೆ, ದೂರದ ಲಾಡ್ಜ್‌ನ ಡಬಲ್ ರೂಮಿನಲ್ಲಿ ಊಟ ಮಾಡಿದ ಮೈಥಿಲಿಯು ಕೈ ತೊಳೆದುಕೊಂಡ ಪರಿಯು ಹೇಗಿತ್ತೆಂದರೆ – ಚಾರು ಜೀವಂತವಿರುವಾಗಲೇ ಅವನ ಬಾಯಿಗೆ ಕೊನೆಯ ಬಾರಿಯ ಉದಕವನ್ನು ಎರೆಯುವಂತಿತ್ತು. ಶಿಬಿಯು ಕೂಡಾ ಮೈಥಿಲಿಯ ಎದುರುಗಡೆಯೇ ತನ್ನ ಡ್ರೆಸ್ ಬದಲಾಯಿಸಿದ. ಲುಂಗಿ ಮತ್ತು ಬನಿಯನ್ ಹಾಕಿಕೊಂಡ. ಇನ್ನು ಕೆಲವು ಕ್ಷಣಗಳಲ್ಲಿ ಅದೂ ಬೇಕಿರಲಿಲ್ಲ. ಮೈಥಿಲಿಯು ಕಡೆದು ಕೆತ್ತಿ ಇಟ್ಟಿರುವಂಥ ಮೈಕಟ್ಟಿನ ಶಿಬಿಯನ್ನು ನೋಡಿದ ಮೈಥಿಲಿಯು ಆಸೆಪಟ್ಟಳು. ಆ ಕ್ಷಣದಲ್ಲಿ ಕೊಠಡಿಯ ಟ್ಯೂಬ್‌ಲೈಟನ್ನು ಶಿಬಿಯು ಆರಿಸಿ ಝೀರೋ ವೋಲ್ಟ್‌ನ ಬಲ್ಬು ಉರಿಸಿದ. ಅನಂತರ ಮೈಥಿಲಿಯ ಹತ್ತಿರ ಬಂದು ಕುಳಿತುಕೊಂಡ. ಮೈಥಿಲಿಯ ಮುಖ ಕೆಂಪಾಯಿತು. "ಲೈಟ್ ಬೇಕಾ, ಬೇಡವಾ?" ಎಂದು ಶಿಬಿ ಕೇಳಿದ. "ಇರಲಿ" ಎಂದಳು ಮೈಥಿಲಿ ನಿಧಾನವಾಗಿ. ಅದೇ ವೇಳೆಗೆ ಮನೆಯಲ್ಲಿ ದಿವಾನ್ ಕಾಟಿನ ಮೇಲೆ ಒರಗಿದ ಚಾರುವಿನ ಕಡೆ ಬಾಯಿಯಿಂದ ಜೊಲ್ಲು ಸುರಿಯುತ್ತಿತ್ತು, ಮೈಯಿಡೀ ನಡುಕ!

ಬೆಳಗಿನ ಜಾವದವರೆಗೂ ಮೈಥಿಲಿಯು ಶಿಬಿಯ ನಗ್ನದೇಹ ಮತ್ತು ತನ್ನ ನಗ್ನ ದೇಹವನ್ನು ಬೆಸೆದುಕೊಂಡು ಮಲಗಿದ್ದಳು. ಆದರೆ, ಚಾರು ಭಯಾನಕವಾದ ಸ್ಥಿತಿಯೊಂದರಲ್ಲಿ ಬಿದ್ದಿದ್ದ – ಹೇಳುವವರು–ಕೇಳುವವರು ಯಾರು ಇಲ್ಲದೆ! ಅನಾಥನೊಬ್ಬನಿಗೆ ಒರಗಿದ ನೆಲವೇ ಆಶ್ರಯ. ಆಕಾಶವೇ ಹೊದಿಕೆ – ಆದರೆ ಹತ್ತುವರೆಗೆ ಅವನು ಬಿದ್ದ ಸ್ಥಿತಿಯನ್ನು ನೋಡಲು ಬಂದವನು ರೋಹಿದಾಸ.

*

ಪತ್ರಿಕೆಯ ಕಚೇರಿಯನ್ನು ಹುಡಿ ಮಾಡಿದವರು – ನಾಗೇಶನ ಗುಂಪು ಎಂಬುದು ರೋಹಿದಾಸನಿಗೆ ಗೊತ್ತಾದ ತಕ್ಷಣವೇ ರಾತ್ರೀರಾತ್ರಿ ಹೊರಟುಬಂದಿದ್ದಾನೆ ಮತ್ತು ಕಿರಣ್ ಮತ್ತು ಶಶಿಯನ್ನು ಭೇಟಿಯಾಗಿದ್ದಾನೆ. ಹಿಂಸೆಗೆ ಪ್ರತಿ ಹಿಂಸೆಯ ಪ್ರತೀಕಾರದಲ್ಲಿಯೇ ಮುಳುಗಿರುವ ಎರಡು ಕೋಮುಗಳ ನಡುವೆ ನಡೆಯುತ್ತಿರುವ ಜ್ವಾಲಾಗ್ನಿಯನ್ನು ತಣಿಸಲು ನಗರದ ಎಲ್ಲಾ ರೀತಿಯ ಜನರನ್ನು ಒಗ್ಗೂಡಿಸುವುದು ಮೊದಲ ಪ್ರಯತ್ನವೆಂದು ಭಾವಿಸಿಕೊಂಡವನು, ಒಂದೇ ರಾತ್ರಿಯಲ್ಲಿ ಪತ್ರಿಕೆಯನ್ನು ಮುದ್ರಣ ಮಾಡಿಸಿದ ಮತ್ತು ದಾವೂದ್ ಗ್ಯಾಂಗಿನವರು ನಡೆಸಿದ ಅತ್ಯಾಚಾರದ ಬಗೆಯನ್ನು ಅಷ್ಟು ನಿಷ್ಠುರವಾಗಿ ಬಯಲಿಗೆಳೆದ ಹುಮ್ಮಸ್ಸಿನಲ್ಲಿದ್ದ ಕಿರಣ್ ಮತ್ತು ಶಶಿ

ಇಲ್ಲಿಗೇ ಕುಳಿತರೆ ಪತ್ರಿಕೆಯನ್ನು ಸಂಪೂರ್ಣವಾಗಿ ಧ್ವಂಸಗೊಳಿಸುತ್ತಾರೆ ಎಂದುಕೊಂಡರು. ರೋಹಿದಾಸನಿಗೆ ಬುದ್ಧಿಜೀವಿಗಳು ಹೇಗೆ ಗೊತ್ತೋ ಅದೇ ರೀತಿಯಲ್ಲಿ ಕಾರ್ಮಿಕರ ಸಂಘಟನೆಯೂ ಅಷ್ಟೇ ಚೆನ್ನಾಗಿ ಗೊತ್ತು. ಈ ವಿಷಯದಲ್ಲಿ ಅವನಿಗಿರುವ ಸಾಮರ್ಥ್ಯ – ಯಾವ ಬಗೆಯದು ಎಂದು ತಿಳಿದಿರುವುದು ಕಿರಣ್ ಮತ್ತು ಶಶಿಗೆ. ಶಶಿಯು ರೋಹಿದಾಸನೊಂದಿಗೆ ಇದನ್ನೇ ಮಾತಾಡಿದ್ದ. ರೋಹಿದಾಸ, "ನಾನು ನಾಳೆ ಬೆಳಿಗ್ಗೆ ಸಿಗ್ತೇನೆ, ಸ್ನೇಹಿತರ ಮನೆಗೆ ಹೋಗಬೇಕು" ಎಂದು ಹೊರಟ. ಚಾರುವಿನ ಮನೆಗೆ ಹೋಗಬೇಕೆಂದುಕೊಂಡಾಗ "ಜೊತೆಯಲ್ಲಿಯೇ ಹೋಗೋಣ" ಎಂದು ಮೂವರೂ ಜೊತೆಯಲ್ಲಿಯೇ ಹೊರಟಿದ್ದರು. ಮಧ್ಯೆ ದಾರಿಯಲ್ಲಿಯೇ ಕಿರಣ್‌ನ ಮೊಬೈಲ್ ಫೋನ್ ಬೇರೆ ಮೆಸೇಜು ಕೊಟ್ಟಿತು. "ನೀವು ಮತ್ತು ಶಶಿ ಇಬ್ಬರೂ ತಕ್ಷಣ ಬನ್ನಿ ನಿಮ್ಮೊಂದಿಗೆ ಮಾತಾಡಬೇಕಿದೆ, ಬೀ ಕೇರ್‌ಫುಲ್." ಸುದ್ದಿಯನ್ನು ಕೊಟ್ಟವನು ಎಂ.ಕೆ. ಅಬ್ದುಲ್ಲ. ಅದಕ್ಕಾಗಿಯೇ ಅವರು ಮಧ್ಯೆ ದಾರಿಯೇ ತಿರುಗಿದರು. ಶಶಿಯ ಸುಜುಕಿಯನ್ನು ರೋಹಿದಾಸನಿಗೆ ಕೊಟ್ಟು, ಶಶಿಯು ಕಿರಣ್‌ನ ಹೀರೋ ಹೋಂಡ ಹತ್ತಿದ. ರೋಹಿದಾಸ ಚಾರುವಿನ ಮನೆಯೊಳಗಡೆಗೆ ಬರುವಾಗ ಚಿಂತಾಜನಕವಾಗಿ ಬಿದ್ದಿದ್ದ. ಅವನ ಹತ್ತಿರವೇ ಜಿನ್‌ನ ಬಾಟಲಿಗಳು, ಫೋನಿನ ರಿಸೀವರ್ ನೇತಾಡುತ್ತಿದೆ. ಚಾರು ಕುಡಿದದ್ದು ಖಂಡಿತ ಜಾಸ್ತಿಯಾಗಿದೆ, ಅದಕ್ಕಾಗಿಯೇ ರೋಹಿದಾಸ ಚಾರುವಿನ ಮುಖಕ್ಕೆ ತಣ್ಣೀರು ಎರಚಿದ ಮತ್ತು ಮೆಲ್ಲನೆ ಕೈಹಿಡಿದು ಕರೆದುಕೊಂಡು ಹೋಗಿ ತಣ್ಣೀರಿನ ಧಾರೆಯನ್ನು ಎರೆದ. ಒಂದು ಬಕೆಟ್ ತುಂಬಾ ತಣ್ಣೀರು ಎರಚಿದಾಗ ಚಾರು ಗೊಣಗುತ್ತಿದ್ದ. ಅವನಿಗೆ ಮೈಮೇಲೆ ಪ್ರಜ್ಞೆಯೇ ಇಲ್ಲ, ಸತತವಾಗಿ ಮೂರು– ನಾಕು ಬಕೆಟ್‌ನಲ್ಲಿ ನೀರಿನ ಧಾರೆಯನ್ನು ಎರೆದಾಗ, ಮೈಥಿಲಿಯು ಶಿಬಿಯ ಜೊತೆಯಲ್ಲಿ ಮೈಥುನದ ಧಾರೆಯಲ್ಲಿದ್ದಳು, ಸುಖದ ಚರಮ ಸ್ಥಿತಿಯಲ್ಲಿದ್ದಳು ಮತ್ತು ಸುಖಧಾರೆಯ ತುದಿಯಲ್ಲಿದ್ದ ಮೈಥಿಲಿಯು "ಶಿಬಿ, ಪ್ಲೀಸ್" ಎನ್ನುತ್ತಲೇ ಅವನ ಬೆನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು.

ಚಾರುವಿನ ಕೈಯನ್ನು ಗಟ್ಟಿ ಹಿಡಿದುಕೊಂಡು ರೋಹಿದಾಸ ಅವನ ಮೈಯೊರಸಿ ತಂದು ಮಲಗಿಸಿದ. ಚಾರುಗೆ ಯಾಕೆ ಈ ಸ್ಥಿತಿಯಾಯಿತು ಎಂಬುದು ರೋಹಿದಾಸನಿಗೂ ಗೊತ್ತಿರಲಿಲ್ಲ. ರೋಹಿದಾಸನೇ ಸ್ವತಹ ಅನ್ನವಿಟ್ಟು, ಮೇಲೆ ಬಲವಂತವಾಗಿ ಚಾರುವನ್ನು ಎಬ್ಬಿಸಿ ಅವನಿಗೆ ಉಣಬಡಿಸಿದ. ಊಟವನ್ನು ಮಾಡುವಾಗಲು ಚಾರುವಿನ ಕಣ್ಣು ಮುಚ್ಚಿ ಮುಚ್ಚಿ ಬರುತ್ತಿತ್ತು ಮತ್ತು ಕೈ–ಕಾಲು ನಡುಗುತ್ತಲೇ ಇತ್ತು. ರೋಹಿದಾಸನೇ ಅವನ ಕೈ ತೊಳೆಸಿ ಚಾರುವನ್ನು ಹಾಸಿಗೆಯ ಮೇಲೆ ಮಲಗಿಸಿದ. ಅನಂತರ ಎಲ್ಲವನ್ನು ಬೆಳಗಿನ ಹೊತ್ತು ವಿಚಾರಿಸಬಹುದು ಎಂದುಕೊಂಡ. ಚಾರುಗೆ ಮೈ ನಡುಕ ಕೊಂಚ ಕಡಿಮೆಯಾದಂತೆ ಅನಿಸಿತು, "ರೋಹಿದಾಸ" ಎಂದು ಎಚ್ಚರಿದ ಸ್ಥಿತಿಯಲ್ಲಿ ಇದ್ದುಕೊಂಡು ಕರೆದ. ಆಗಲೇ

ರೋಹಿದಾಸ ಎದ್ದು ಬಂದ. "ಏನು? ಯಾಕೆ ಹೀಗೆ? ಏನಾಯಿತು?" ಎಂದು ಕೇಳಿದ. ಚಾರು, "ಎಲ್ಲಾ ಬೆಳಿಗ್ಗೆ ಮಾತಾಡ್ತೇನೆ, ಒಂಚೂರು ನೀರು ಕೊಡು, ಮಾತ್ರೆಗಳನ್ನು ತಿಂದು ಮಲಗುತ್ತೇನೆ" ಎಂದ. ಮಾತ್ರೆ ನುಂಗಿದ ಕೆಲವೇ ಕ್ಷಣದಲ್ಲಿ ಚಾರುಗೆ ನಿದ್ದೆ. ಆದರೆ, ಮಧ್ಯೆ ಕನವರಿಕೆಗಳು, "ಅಪ್ಪಾ ನಾನಿನ್ನು ಬದುಕೋಲ್ಲ." ರೋಹಿದಾಸನಿಗೆ ಹತ್ತಾರು ಜನರನ್ನು ನೋಡಿದವನಿಗೆ ಅತ್ಯಂತ ದಯನೀಯವಾದ ಸ್ಥಿತಿಯಲ್ಲಿ ಮಲಗಿದ ಚಾರುವನ್ನು ನೋಡಿದಾಗ ಕಾರಣವು ಬೇರೆಯಿದೆಯೆಂದನ್ನಿಸಿತು. ಚಾರು ಕನವರಿಸುತ್ತಿದ್ದ, ಅವನ ಕಣ್ಣಂಚಿನಲ್ಲಿ ನೀರು ಜಿನುಗುತ್ತಿತ್ತು. ಅವನ ಮಲ್ಲಿಗೆಯಂಥ ಮನಸ್ಸನ್ನು ಮೈಥಿಲಿಯು ಪದೇ ಪದೇ ಕಾಲಲ್ಲಿ ಹೊಸಕಿಹಾಕಿದ್ದಳು. ಜೊತೆಗಿದ್ದೂ ಭರಿಸಲಾಗದ ಅಸಂಖ್ಯ ನೋವುಗಳನ್ನು ಕೊಟ್ಟಿದ್ದಳು. ಆದರೆ, ಅದೇ ವೇಳೆಗೆ ಶಿಬಿಯನ್ನು ತಬ್ಬಿಕೊಂಡ ಮೈಥಿಲಿಯನ್ನು ನೋಡಿ ಮನಸ್ಸಿನಲ್ಲಿಯೇ ಅಂದುಕೊಂಡ; "ಮೈಥಿಲಿಯ ತೃಪ್ತಿಗೊಳ್ಳದ ದಾಹ ಮತ್ತು ಅಂಟಿಕೊಂಡರೆ ಅವಳು ಕಾಡುವ ಜಿಗಣೆ, ಮಹಾನ್ ಅಪಾಯಕಾರಿ ಮತ್ತು ಅನುಭವಿ ಹೆಂಗಸು, ಗಂಡನಿಗೆ ಮೋಸ ಮಾಡಿ ನನ್ನೊಂದಿಗೆ ಬಂದವಳು – ನಾಳೆ ಯಾರಿಗೆ ತನ್ನ ಬ್ರಾದ ಹುಕ್ಕನ್ನು ಬಿಚ್ಚಲು ಹೇಳುತ್ತಾಳೆ ಎಂಬುದನ್ನು ನಂಬುವುದು ಕಷ್ಟ, ಇವಳನ್ನು ಬಳಸಿಕೊಳ್ಳಬೇಕು ಮತ್ತು ಅಷ್ಟೇ ಬೇಗ ಬಿಸಾಡಿಬಿಡಬೇಕು. ಯೂಸ್ ಅಂಡ್ ಥ್ರೋ ಅಷ್ಟೆ!" ಅಸಂಖ್ಯ ಅತೃಪ್ತಿಗಳನ್ನು ಒಂದೇ ದಿನದಲ್ಲಿ ಮುಗಿಸಬೇಕೆಂಬ ಆತುರ ಅವಳಿಗೆ.ಬೆಳಗಿನ ತನಕವೂ ಅಪರಿಮಿತವಾದ ಬೇರೆ ಬೇರೆ ಕ್ರೀಡೆಗಳಲ್ಲಿ ಮುಳುಗಬೇಕೆಂಬ ಹಂಬಲ. ಆದರೆ, ಮರುದಿನವೇ ಹೊಸ ಹೂವಿನಂತೆ, ನಿರ್ಮಲವಾದ ನೀರಿನಂತೆ ಮನಸ್ಸಿರುವ ಚಾರು ಅವಳ ಊಹೆಗೂ ಮೀರಿದ್ದನ್ನು ಮಾಡಲಿದ್ದ ಮತ್ತು ಶಿಬಿಯೂ ಮೈಥಿಲಿಯನ್ನು ಮರುದಿನದಿಂದಲೇ ಕೈ ತೊಳೆದುಕೊಂಡು ತ್ಯಾಗ ಮಾಡಲಿದ್ದ!

ಬೆಳಗು ಶಿಬಿ ಮತ್ತು ಮೈಥಿಲಿಗೆ ಹೇಗೆ ತಡವಾಗಿ ಉದಯಗೊಂಡಿತೋ ಅದೇ ರೀತಿಯಲ್ಲಿ ಚಾರುವಿಗೂ ತಡವಾಗಿಯೇ ಬೆಳಗಾಯಿತು. ತುಂಬಾ ಫ್ರೆಶ್ ಎಂದು ಅನಿಸದಿದ್ದರೂ – ಅವನ ಕಳಾಹೀನವಾದ ಮುಖವೇ ರೋಹಿದಾಸನಿಗೆ ಬೇರೆ ಕತೆಯನ್ನು ಹೇಳಿತು. ಎಲ್ಲಾ ವಿವರಿಸಿದ ಮೇಲೆ ರೋಹಿದಾಸ ಹೇಳಿದ; "ಹೆಂಡತಿಗೆ ಗಂಡನ ಹಂಗಿಲ್ಲವೆಂದಾದರೆ, ಗಂಡನಿಗೂ ಹೆಂಡತಿಯ ಹಂಗು ಇರಬೇಕಾಗಿಲ್ಲ, ಮನೆಯನ್ನು ಈವತ್ತು ಖಾಲಿ ಮಾಡಿ ಬೇರೆ ಮನೆಗೆ ಹೋಗೋಣ ಮತ್ತು ಮೈಥಿಲಿಯನ್ನು ಯಾವುದೇ ವಿಷಯಕ್ಕೂ ಅವಲಂಬಿಸದಿರಿ, ನಿಮಗೆ ಇನ್ನೂ ವಯಸ್ಸಾಗಿಲ್ಲ, ಬೇರೊಬ್ಬಳನ್ನು ಮದುವೆಯಾಗಿ, ನೀವು ಮಾಡಬೇಕಾದ ಕೆಲಸಗಳು ಸಾಕಷ್ಟಿವೆ. ನಿಮ್ಮ ಜೊತೆಯಲ್ಲಿ ಅದೇ ನಿಮ್ಮ ರೇಖಾ ಪಿಂಟೋ; ಶಶಿ; ಕಿರಣ್; ನಾನೂ– ಅಷ್ಟೇ ಅಸಂಖ್ಯ ಜನರು ನಿಮ್ಮ ಜೊತೆ ಇರುತ್ತಾರೆ. ನಿಮ್ಮ ಅವಶ್ಯಕತೆ ಬಹಳ ಇದೆ. ಮನೆಯನ್ನು ಬಿಟ್ಟುಬಿಡಿ, ಈಗಲೇ ಲಾರಿ ತರುತ್ತೇನೆ, ಸಾಮಾನು

ತುಂಬಿಸಿಬಿಡೋಣ, ಆಫೀಸಿಗೆ ಬರೆದುಬಿಡಿ, ಕೆಲಸಕ್ಕೆ ರಾಜೀನಾಮೆ ಕೊಡ್ತೇನೆ ಅಂತ. ಒಬ್ಬಳು ಮೈಥಿಲಿ ನಿಮಗೆ ಲೆಕ್ಕಕ್ಕೆ ಬರಬಾರದು." ಚಾರು "ಸರಿ"ಯೆಂದ.

ಅದೇ ವೇಳೆಗೆ ಶಿಬಿ ಮೈಥಿಲಿಗೇ ಲಾಡ್ಜ್‌ನಲ್ಲಿ ಹೇಳಿದ; "ನಿನ್ನೆ ರಾತ್ರಿಯದನ್ನು ಒಂದು ಕನಸು ಎಂದು ಭಾವಿಸಿಕೊಳ್ಳಿ, ನಾಳೆಯಿಂದ ನಾನು ಬೇರೆ–ನೀವು ಬೇರೆ. ನಾನು ಯಾವುದನ್ನೂ ಬಹಳ ಹಚ್ಚಿಕೊಳ್ಳುವುದಿಲ್ಲ" – ಮೈಥಿಲಿಯ ಕಣ್ಣಲ್ಲಿ ಧಾರಾಕಾರವಾಗಿ ಕಣ್ಣೀರು ಬಂತು. ಆದರೆ ಶಿಬಿ ತಿರುಗಿಯೂ ನೋಡಲಿಲ್ಲ. ಮೈಥಿಲಿಯ ಹೆಣ್ತನದ ಅಹಂಕಾರ ಇಳಿದಿದ್ದೇ ಆವಾಗ!

ಹಳಸಿದ ಅನ್ನ; ಹರಿದುಹೋದ ಬಟ್ಟೆ; ಹುಳಿ ಹಿಡಿದ ಹೆಂಡ ಮತ್ತೆ ಮತ್ತೆ ತಿನ್ನುವುದು; ಧರಿಸುವುದು; ಕುಡಿಯುವುದು ಶಿಬಿಯಿಂದ ಆಗದ ಕೆಲಸ. ಮತ್ತೆ ಮತ್ತೆ ಪ್ರಚೋದಿಸುವ ಹೆಣ್ಣು – ಗಂಡನನ್ನು ಅನುಮಾನದಿಂದ ಕಂಡ ಹೆಣ್ಣು – ಯಾವ ಸುಖ ಕೊಟ್ಟರೂ ಅಂತಿಮವಾಗಿ ಚಿತೆಗೇರಿಸುವವಳೇ!

ಶಶಿ, ಕಿರಣ್ ಮತ್ತು ರೋಹಿದಾಸ – ಮೂವರೂ ಸೇರಿ – ಕಿರಣ್‌ನ ಮನೆಯ ಪಕ್ಕದ ಮನೆಯೊಂದನ್ನು ಐದೇ ನಿಮಿಷದಲ್ಲಿ ಕೊಡಿಸಿಬಿಟ್ಟರು. ರೋಹಿದಾಸ ಚಾರುವನ್ನು ಬಹಳ ಹಚ್ಚಿಕೊಂಡ ಹುಡುಗ. ರೋಹಿದಾಸ; ಶಶಿ ಮತ್ತು ಕಿರಣ್ ಮೂವರು ಸೇರಿ ಚಾರುಗೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಟ್ಟರು ಮತ್ತು ಅವನ ರಾಜೀನಾಮೆ ಪತ್ರ; ಮನೆಯನ್ನು ಬಿಟ್ಟ ಪತ್ರವನ್ನು ತೆಗೆದುಕೊಂಡು ಹೋಗಿ ವ್ಯವಸ್ಥಾಪಕ ನಿರ್ದೇಶಕರಿಗೆ ಕೊಟ್ಟರು. ವ್ಯವಸ್ಥಾಪಕ ನಿರ್ದೇಶಕ ಕಕ್ಕಾವಿಕ್ಕಿಯಾದ ಮತ್ತು ಚಾರುವಿನ ರಾಜೀನಾಮೆ ಪತ್ರವನ್ನು ಒಪ್ಪಿಕೊಂಡ. ಇಷ್ಟು ಕೆಲಸವನ್ನು ಮಾಡಿದ ಹುಡುಗರು – ಚಾರುಗೆ ಪ್ರತ್ಯೇಕವಾದ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು. ಚಾರು, ಕಿರಣ್ ಮತ್ತು ಶಶಿಯ ಪತ್ರಿಕೆಯ ಮಾಗ್‌ಜಿನ್ ವಿಭಾಗವನ್ನು ನೋಡಿಕೊಳ್ಳುವ ಸಂಪಾದಕ ಹುದ್ದೆ. ಸಂಜೆಯ ಹೊತ್ತಿಗೆ ಚಾರು ನಿಡಿದಾದ ನಿಟ್ಟುಸಿರನ್ನು ಬಿಟ್ಟ. ಇನ್ನುಮುಂದೆ ಒಬ್ಬಂಟಿಯಾಗಿ ಬದುಕಬೇಕೆಂದು ನಿಶ್ಚಯಿಸಿದ ಚಾರುವಿಗೆ ಕಿವಿಯ ತಮ್ಮಟೆಯನ್ನು ಮೈಥಿಲಿಯ ಸ್ವರವೇ ಬಂದು ಕೇಳಿಸಿದಂತಾಯಿತು. "ನೀನು ಒಬ್ಬ ಗಂಡುಸಾ?" "ನೀನು ಪಲಾಯನವಾದಿ" "ನೀನು ಹೇಡಿ ನನ್ನ ಮೇಲೆ ಅಧಿಕಾರ ಚಲಾಯಿಸಲು ನಿನ್ನ ಕೈಯಲ್ಲಿ ಸಾಧ್ಯವಿಲ್ಲ ಕಣೋ?" – ಅದೇ ಕಿರುಚಾಟದ ಧ್ವನಿ. ರೋಹಿದಾಸ, ಶಶಿ, ಕಿರಣ್ ಮೂವರೂ ಬೇರೆ ಬೇರೆ ಕೆಲಸದ ಮೇಲೆ ಹೊರಟಿದ್ದರು. ಅವರೆದುರು ಭೂತಾಕಾರದ ಅನೇಕ ಪ್ರಶ್ನೆಗಳಿದ್ದವು. ಅವರು ಹೊರಟುಹೋದ ಮೇಲೆ ಚಾರು ಗುಂಡು ಹಾಕಲು ಕುಳಿತಿದ್ದ. ಅದೇ ವೇಳೆಗೆ ಶಿಬಿ ಮತ್ತು ಮೈಥಿಲಿಯರು ನಗರಕ್ಕೆ ಬಂದಿಳಿದಿದ್ದರು. ಬಂದು ಇಳಿದ ಕೂಡಲೇ, ನಾನು ನಾಳೆ ಆಫೀಸಲ್ಲಿ ಸಿಗುತ್ತೇನೆ ಎಂದು ಶಿಬಿ ಹೊರಟುಹೋದ. ಮೈಥಿಲಿಯು ಮನೆಯ ಕಡೆ ಬಂದು ನೋಡುತ್ತಾಳೆ ಮನೆಯ ಬೀಗ ಬದಲಾಗಿದೆ. ಬೀಗ ಬದಲಾದುದನ್ನು

ನೋಡಿ ಅಚ್ಚರಿಪಟ್ಟಳು. ಒಂದು ದಿಗ್ಭ್ರಮೆಗೆ ಗುರಿಯಾದಳು. ಅಕ್ಕ-ಪಕ್ಕದ ಮನೆಯನ್ನು ವಿಚಾರಿಸಿದಳು. "ಲಾರಿಯೊಂದರಲ್ಲಿ ಸಾಮಾನು ಹೇರಿ ಮಧ್ಯಾಹ್ನದ ಹೊತ್ತಿಗೆ ಚಾರು ಹೊರಟುಹೋದರು" ಎಂದರು. ಕೆಲವು ಕ್ಷಣ ಮೈಥಿಲಿಗೆ ಏನು ಮಾಡುವುದೆಂದು ತಿಳಿಯದೇ ಮಂಕಾಗಿ ಕೂತು ಅನಂತರ ಹೊರಗೆ ಬಂದು - ಶಿಬಿಗೆ ಫೋನು ಮಾಡಿದಳು, ಶಿಬಿಯು ಫೋನು ಎತ್ತಿಕೊಂಡ. ಮೈಥಿಲಿಯು ವಿಷಯ ತಿಳಿಸಿದಳು. ಮೈಥಿಲಿಯು ಪೂರ್ತಿ ವಿಷಯ ತಿಳಿಸಿದ ತಕ್ಷಣ - "ಈವೊತ್ತು ದಿನದ ರಾತ್ರಿ ನಿಮ್ಮ ಮನೆಗೆ ಬರಲಾ?" ಎಂದು. "Sorry ಮೇಡಂ, ಅಕ್ಕ-ಪಕ್ಕದ ಮನೆಯವರ ಎದುರು ನನ್ನ ಮರ್ಯಾದೆ ಹೋಗುತ್ತೆ. ಯಾವುದಾದರೂ ಲಾಡ್ಜ್‌ನಲ್ಲಿ ರೂಂ ಮಾಡಿ ಉಳಿದುಕೊಳ್ಳಿ ಉಳಿದದ್ದು ನಾಳೆ ನೋಡಿಕೊಳ್ಳೋಣ" ಎಂದ. ಮೈಥಿಲಿಯ ಕಣ್ಣಲ್ಲಿ ನೀರು, ಮಿದುಳಿಗೆ ಸರಿಯಾದ ಏಟೊಂದನ್ನು ಚಾರು ಕೊಟ್ಟನೆಂದು ಭಾವಿಸಿದವಳೇ, ಮತ್ತೆ, ರಾತ್ರಿಯ ಬಸ್ಸಿಗೆ ಊರಿಗೆ ಹೊರಟಳು.

ಮರುದಿನ ಬೆಳಗಿನ ಪತ್ರಿಕೆಯಲ್ಲಿ ಎರಡು ಸುದ್ದಿಗಳು ಸಂಕ್ಷಿಪ್ತವಾಗಿ ಪ್ರಕಟವಾಗಿದ್ದವು; "ಎಂ.ಕೆ. ಅಬ್ದುಲ್ಲ ಅವರಿಗೆ ಪ್ರಮೋಶನ್ ಸಿಕ್ಕಿ ನಗರದ ನೂತನ ಎಸ್.ಪಿ.ಯಾಗಿದ್ದಾರೆ."

"ಕೋಮು ಪ್ರಚೋದನೆಯನ್ನುಂಟುಮಾಡುತ್ತಿದ್ದ ನಾಗೇಶ ಎಂಬಾತನನ್ನು ಬಂಧಿಸಲಾಗಿದೆ. ಇವನ ಹಿಂದೆ ಇರುವವರ ಮೇಲೆ ಕ್ರಮಕೈಗೊಳ್ಳುವುದು ಎಂ.ಕೆ. ಅಬ್ದುಲ್ಲಾ ಭರವಸೆಯನ್ನು ಕೊಟ್ಟಿದ್ದಾರೆ."

ಬೆಳಗಿನ ಹೊತ್ತು ಇನ್ನೂ ನಿದ್ದೆಯಿಂದ ಏಳದೇ ಇದ್ದ ಚಾರು ಮನೆಯನ್ನು ಹುಡುಕಿಕೊಂಡು ರೇಖಾ ಪಿಂಟೋ ಬಂದಳು. ಚಾರು - ಬಾಗಿಲಿನ ಬೆಲ್ ಆದಾಗ ಬಾಗಿಲು ತೆರೆದ - ರೇಖಾ ಪಿಂಟೋ ಅವನ ಮನೆಯೊಳಗೆ ಬಂದಳು. ಹೋಗಿ ಮುಖ ತೊಳೆದುಕೊಂಡು ಬನ್ನಿ, ಟೀ ಮಾಡಿಕೊಡುತ್ತೇನೆ. ಚಾರು ಅದರಂತೆ ಮಾಡಿದ. ಟೀ ಕುಡಿದು ಕುಳಿತ. ರೇಖಾ ಪಿಂಟೋ ಬಂದು ಅವನ ಎದುರುಗಡೆ ಕುಳಿತಳು. ಚಾರುಗೆ ಮತ್ತೆ ಬವಳಿ ಬಂದಂತಾಯಿತು. ಅಲ್ಲಿಯೇ ನೆಲದ ಮೇಲೆ ಒರಗಿದ. ಅವನು ಮೂರ್ಛೆ ಹೋಗಿದ್ದಾನೆಂದು ತಿಳಿದುಕೊಂಡು - ರೇಖಾ ತಣ್ಣೀರು ಅವನ ಮುಖಕ್ಕೆ ಹಾಕಿದಳು. ಮತ್ತೆ ಚಾರುಗೆ ಎಚ್ಚರವಾಯಿತು. ರೇಖಾ ಪಿಂಟೋಳ ಮುಖವನ್ನೇ ನೋಡಿದ ಮತ್ತು ಅವಳ ತೊಡೆಯ ಮೇಲೆ ತಲೆಯಿಟ್ಟ, ಇಬ್ಬರಿಗೂ ಬೆಳಗೆಂದರೆ ಸಂಭ್ರಮ! ಮುಂದೆ-ಬೆಳಗಿನ ಸಂಭ್ರಮ ಮತ್ತು ಕನಸು.

ಅದೇ ದಿನವೇ ಶಶಿ, ಕಿರಣ್ ಮತ್ತು ರೋಹಿದಾಸ ಕೋಮು ಸೌಹಾರ್ದ ವೇದಿಕೆಯನ್ನು ಕಟ್ಟಿದರು. ಅದರ ಸಮಿತಿಯಲ್ಲಿ ಇಮಾಮ್ ಮತ್ತು ಕೆ.ಪಿ. ಪೂರ್ಣಯ್ಯನವರಿದ್ದರು.





ಚಾರು ನನಗೆ ಸಿಕ್ಕಿದ್ದು ಮೆಜೆಸ್ಟಿಕ್‌ನಲ್ಲಿ, ಒಂದು ರಾತ್ರಿ. ಒಂಬತ್ತು ಗಂಟೆಗೆ.
ತಕ್ಷಣ ಅವನ ಪರಿಚಯ ಸಿಗಲಿಲ್ಲ. ಎಲ್ಲೋ ನೋಡಿದ್ದೇನೆ ಅಂತ ಅನಿಸಿತು.
ಕೆಲವು ಕ್ಷಣ ನಾನು ಅವನೂ ದಿಟ್ಟಿಸಿ ನೋಡಿದೆವು. ಗುರುತು ಹತ್ತಿತು; ಅಪರೂಪಕ್ಕೆ ಮಳೆ ಬಂದಂತೆ ನಗಾಡಿದೆವು- ಹೊಟ್ಟೆ ಬಿರಿಯುವಷ್ಟು. ಅವನು ನನ್ನನ್ನು ಕರೆದೊಯ್ದು ಹೊಟೇಲಿನ ಅರೆಗತ್ತಲ ಕ್ಯಾಬಿನ್ನಿನಲ್ಲಿ ಗಂಟೆಗಟ್ಟಲೆ ಮಾತಾಡಿದ.
ಆದರೆ,ಅವನು ತುಂಬಾ ಚಿನ್ನನಾಗಿದ್ದ. ತುಂಬಾ ಡಿಸ್ಟರ್ಬ್ ಆಗಿದ್ದ. ತನ್ನ ಜೀವನದಲ್ಲಿ ಘಟಿಸಿದ ಸಂಗತಿಗಳನ್ನೆಲ್ಲ ನನ್ನ ಮುಂದೆ ಹರವಿ ಇಟ್ಟ. ಅವುಗಳಲ್ಲಿ ಒಂದೊಂದನ್ನೇ ತೆಗೆದುಕೊಂಡು ಮನಸ್ಸಿನಲ್ಲಿ ಇಟ್ಟುಕೊಂಡೆ.
ಅವನ ಕತೆಯನ್ನು ನಾನು ಮರೆತು ಬಿಡುವ ಸಾಧ್ಯತೆಯಿತ್ತು.
ಆದರೆ ಅದು ಹಾಂಟಿಂಗ್ ಎಕ್ಸ್ಪಿರಿಯನ್ಸ್. ಮರೆಯಲಾಗಲಿಲ್ಲ. ಅದಾದ ಕೆಲವು ವರ್ಷಗಳಲ್ಲಿ ನನಗೆ ರೋಸಿ-ಪ್ರಸನ್ನರ ಕತೆಯನ್ನು ಯಾರೋ ಹೇಳಿದರು.
ಅದನ್ನೂ ಮನಸ್ಸಿನಲ್ಲಿಯೇ ದಾಖಲಿಸಿಕೊಂಡೆ. ರೋಸಿಯ ನೋವು ಕೇವಲ ಅವಳೊಬ್ಬ ನೋವು ಎಂದು ಅನಿಸಲಿಲ್ಲ. ಯಾಕೆಂದರೆ ಅದೇ ರೀತಿಯ ಘಟನೆ ಮತ್ತೆ ಐದು ವರ್ಷ ಮೇಲೆ ಬೇರೊಬ್ಬ ಹೆಣ್ಣುಮಗಳ ಜೀವನದಲ್ಲಿಯೂ ಸಂಭವಿಸಿತ್ತು.
ಮೈಥಿಲಿಯ ಕತೆ ದೊರೆತದ್ದು ಬೇರೆ ಸಂದರ್ಭದಲ್ಲಿ.
ದೇವವ್ರತ, ಪ್ರಸನ್ನ, ನಾಗೇಶ- ಇವರೆಲ್ಲರೂ ಬೇರೆ ಬೇರೆ ಜಾಗಕ್ಕೆ ಸೇರಿದವರು.
ಸಿದ್ಧರವನು ಬಂದದ್ದು ನಾನಿರುವ ಹಳ್ಳಿಗೆ ಸುಮಾರು ಹದಿನೈದು ವರುಷಗಳ ಹಿಂದೆ.
ಇವರೆಲ್ಲರೂ ನನ್ನ ಈ ಕಾದಂಬರಿಯೊಳಗೆ ತಮ್ಮ ತಮ್ಮ ಜಾಗ ಪಡೆದುಕೊಂಡಿದ್ದಾರೆ.
ಇವರು ಹೇಳಿದ ಸಂಗತಿಗಳನ್ನು ನಾನು ನನಗೆ ಬೇಕಾದ ಹಾಗೆ ಜೋಡಿಸಿದೆ.
ಹಾಗೆಂದು ಇದು ಯಾರಿಗೂ ನೇರವಾಗಿ ಸಂಬಂಧಿಸಿದ್ದಲ್ಲ. ನೀವು ಇದನ್ನು ಒಂದು ಕಾದಂಬರಿಯಾಗಿ ಓದಿ.

ಒಡೆದ ಕನ್ನಡಿಯ ಚೂರುಗಳನ್ನು ನಿಮ್ಮ ಬೊಗಸೆಯಲ್ಲಿ ಇಡುತ್ತಿದ್ದೇನೆ.

ನಿಮ್ಮ ಪ್ರೀತಿಯ,

ಡಾ. ಕೇಶವ ಶರ್ಮ. ಕೆ.

ರೂ. 190/-

ISBN : 978-93-81876-13-8

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ
ರಾಜೇಂದ್ರ ನಗರ, ಶಿವಮೊಗ್ಗ 577 201
ಮೊ. : 94498 86390